"ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ"

(ಮಾಸ್ತಿ, ಆನಂದ, ಗೊರೂರರ ಸಣ್ಣಕತೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಮಹಾಂತೇಶ ಎಸ್.,

ಮಾರ್ಗದರ್ಶಕರು

ಡಾ. ಎಂ.ಮಲ್ಲಿಕಾರ್ಜುನ ಗೌಡ

ಸಹಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೧

“ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ”

(ಮಾಸ್ತಿ, ಆನಂದ, ಗೊರೂರರ ಸಣ್ಣಕತೆಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಮಹಾಂತೇಶ ಎಸ್.,

ಮಾರ್ಗದರ್ಶಕರು
ಡಾ. ಎಂ.ಮಲ್ಲಿಕಾರ್ಜುನ ಗೌಡ
ಸಹಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೨೧

<u>ಮಾರ್ಗದರ್ಶಕರ ದೃಢೀಕರಣ ಪತ್ರ</u>

ಮಹಾಂತೇಶ ಎಸ್., ಇವರು ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ" (ಮಾಸ್ತಿ, ಆನಂದ, ಗೊರೂರರ ಸಣ್ಣಕತೆಗಳನ್ನು ಅನುಲಕ್ಷಿಸಿ)** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಎಂ.ಮಲ್ಲಿಕಾರ್ಜುನ ಗೌಡ
ಸಹಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ: 01/03/2021
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಘೋಷಣಾ ಪತ್ರ

"ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ" (**ಮಾಸ್ತಿ, ಆನಂದ, ಗೊರೂರರ ಸಣ್ಣಕತೆಗಳನ್ನು ಅನುಲಕ್ಷಿಸಿ**) ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ** ಸಹಪ್ರಾಧ್ಯಾಪಕರಾದ **ಡಾ.ಎಂ.ಮಲ್ಲಿಕಾರ್ಜುನ ಗೌಡ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಮಹಾಂತೇಶ ಎಸ್.,
ಪಿಎಚ್.ಡಿ., ಸಂಶೋಧನ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದಿನಾಂಕ: 01-03-2021
ಸ್ಥಳ : ವಿದ್ಯಾರಣ್ಯ

Kannada University, Hampi
Akshara Central Library

Anti-Plagiarism Cell

Certificate of Plagiarism Chek Report

KANNADA NAVODAYA SANNAKATHEGALALLI PARAMPARE MATTU ADHUNIKATE

(MASTI, ANADA, GORURARA KATHEGALANNU ANULAKSHISI)

KANNADA SHORT STORIES RENAISSANCE OF HERITAGE AND MODERNITY

(REFERENCE WITH TO SHORT STORIES IN MASTI, ANANDA, GORURU)

BY

MAHANTHESHA S

Reg.No. Ko-1307 dated:03.09.2015

Research Guide

Dr.M. MALLIKARJUNA GOWDA

Kannada University, Hampi

Urkund Analysis Result

Analyzed document	:	KUH-PhD-DKL-Mahanthesha S.docx(D96303755)
Submitted	:	2.23.2021. 7:22:00 AM
Submitted by	:	Shankaragouda S G
Submitter email	:	Shankargoudas.mailbox@gmail.com
Similarity	:	**4%**
Analysis address	:	Shankargoudas.mailbox.kanuni@analysis.urkund.com

23/02/2021

Seal and authorized sign

“ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ”

(ಮಾಸ್ತಿ, ಆನಂದ, ಗೊರೂರರ ಸಣ್ಣಕತೆಗಳನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಪ್ರಾಚೀನ ಕಾಲದಿಂದಲೂ ಕತೆ ಹೇಳುವ ಮತ್ತು ಕತೆ ಕೇಳುವ ಎರಡೂ ಪದ್ಧತಿಗಳು ರೂಢಿಯಲ್ಲಿವೆ. ಎಲ್ಲಾ ಧರ್ಮಗಳಲ್ಲಿ ಕತೆಗಳನ್ನು ನೀತಿಭೋಧನೆಗಾಗಿ ಒಂದು ಪ್ರಧಾನ ಮಾಧ್ಯಮವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಬೈಬಲ್, ಖುರಾನ್, ಮಹಾಭಾರತ, ರಾಮಾಯಣ ಕೃತಿಗಳಲ್ಲಿ ಕಂಡುಬರುವ ಕಥನಶಾಸ್ತ್ರವು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಭೂಮಿಯ ಮೇಲೆ ಜೀವಸಂಕುಲಗಳು ಜನ್ಮವೆತ್ತಿದಾಗಲೇ ಅವುಗಳ ಜೊತೆಜೊತೆಯಲ್ಲಿಯೇ ಕತೆಗಳು ಹುಟ್ಟಿಬಂದವು. ಮುಖ್ಯವಾಗಿ ಕತೆಯು ಪದ್ಯ ಮತ್ತು ಗದ್ಯಗಳೆರಡರ ಸ್ವರೂಪದಲ್ಲಿರುತಿತ್ತು. ಮಾತು ಮಾತು ಕಲೆತು ಕತೆಯಾಗಿ ಬೆಳೆಯುತಿತ್ತು. ಬರವಣಿಗೆಯೇ ಇಲ್ಲದಿದ್ದ ಸಮಾಜದಲ್ಲಿ ಕತೆಗಳನ್ನು ಕೇಳಿ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದುದು ಒಂದು ಪರಿಪಾಠವಾಗಿತ್ತು.

ಸಣ್ಣಕತೆಯ ಇತಿಹಾಸವನ್ನು ಗಮನಿಸಿದರೆ ಇಂಗ್ಲೆಂಡಿನಲ್ಲಿ ಸಣ್ಣಕತೆ ಏಳು ಮತ್ತು ಎಂಟನೇ ಶತಮಾನದಿಂದ ಆರಂಭವಾಯಿತೆಂದು ಹೇಳಿದರೂ, ಸಣ್ಣಕತೆ ಅಲ್ಲಿ ಸರಿಯಾಗಿ ಕಾಲೂರಿದ್ದು ಹದಿನಾರನೆಯ ಶತಮಾನದಲ್ಲಿ. ಅಮೆರಿಕಾದಲ್ಲಿ ಸಣ್ಣಕತೆಯ ಪ್ರಕಾರ ಹದಿನೆಂಟನೇ ಶತಮಾನದಲ್ಲಿ ಹುಟ್ಟಿಕೊಂಡರೂ ಅದರ ವ್ಯಾಪ್ತಿ ವಿಸ್ತಾರಗೊಂಡಿದ್ದು ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ. ಫ್ರಾನ್ಸಿನಲ್ಲಿ ಹದಿಮೂರು ಮತ್ತು ಹದಿನಾಲ್ಕನೇ ಶತಮಾನದಲ್ಲಿ ಸಣ್ಣಕತೆಯ ಇತಿಹಾಸವನ್ನು ಗುರುತಿಸಿದರೂ, ಸ್ಪಷ್ಟವಾಗಿ ಮೂಡಿದ್ದು ಹದಿನೈದು ಮತ್ತು ಹದಿನಾರನೇ ಶತಮಾನದಲ್ಲಿ. ಫ್ರೆಂಚ್ ಮತ್ತು ರಷ್ಯಾದಲ್ಲಿ ಸಣ್ಣಕತೆಯ ಪ್ರಕಾರ ಕಾಣಿಸಿಕೊಂಡಿದ್ದು ಹತ್ತೊಂಬತ್ತನೇ ಶತಮಾನದಲ್ಲಿ. ಈ ಒನ್ನೆಲೆಯಲ್ಲಿ ಆಧುನಿಕ ಸಣ್ಣಕತೆಗೆ ಒಂದುವರೆ–ಎರಡು ಶತಮಾನಗಳಷ್ಟು ದೀರ್ಘವಾದ ಇತಿಹಾಸವಿದೆ.

ಆದರೆ ಕನ್ನಡ ಕಥಾ ಪ್ರಕಾರಕ್ಕೆ ನೂರು ವರ್ಷಗಳ ಇತಿಹಾಸವಿದೆ. ಕನ್ನಡದಲ್ಲಿ ಕಥಾಗದ್ಯ ಎಂದು ಸ್ಪಷ್ಟವಾಗಿ ಗುರುತಿಸುವುದಕ್ಕಿಂತ ಮೊದಲು ಇದ್ದದ್ದು ಕಾವ್ಯ ಕೃತಿಗಳು. ಗದ್ಯ ಪದ್ಯಗಳೆರಡನ್ನು ತನ್ನೊಡಲಲ್ಲಿ ಇಟ್ಟುಕೊಂಡ ಚಂಪೂ ಕೃತಿಗಳು. ಕಾವ್ಯಗಳಲ್ಲಿ ಚಂಪೂ ಕೃತಿಗಳು ಅಡಕವಾಗಿದ್ದ ಕಾರಣಕ್ಕೆ ಅವು ಸಾಮಾನ್ಯ ಜನರ ಮನದಲ್ಲಿ ಉಳಿದಿವೆ. ರಾಮಾಯಣ ಮತ್ತು ಮಹಾಭಾರತಗಳನ್ನು ಆಧರಿಸಿ ಕನ್ನಡದಲ್ಲಿ ರೂಪಗೊಂಡ ಅನೇಕ ಕೃತಿಗಳನ್ನು ಜನ ಮರೆಯದೆ ಇರುವುದಕ್ಕೆ ಮುಖ್ಯವಾದ ಕಾರಣ ಕಥೆಯ ಅಂಶವೇ. ಹೀಗಾಗಿ ಕತೆ ಎಂಬುದು ಒಂದು ಪ್ರಧಾನ ಅಂಶವಾಗಿಯೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆರಂಭದಿಂದಲೂ ಉಳಿದು ಬಂದಿದೆ.

ಆಧುನಿಕ ಕನ್ನಡ ಸಣ್ಣ ಕಥಾಸಾಹಿತ್ಯಕ್ಕೆ ಕನ್ನಡದ ಪ್ರಾಚೀನ ಅಭಿಜಾತ ಕಥಾಪರಂಪರೆಯ ಪ್ರೇರಣೆ ಮತ್ತು ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಇವುಗಳಿಂದ ಸೃಷ್ಟಿಯಾದದ್ದು. ಪ್ರಾಚೀನ ಹಾಗೂ ಮೌಖಿಕ ಪರಂಪರೆಯ ಕೃತಿಗಳಲ್ಲಿ ಹರಿಯುತ್ತಿದ್ದ ಕಥನದ ನಿರೂಪಣೆ ಆಧುನಿಕ ಕನ್ನಡ ಕಥಾಸಾಹಿತ್ಯಕ್ಕೆ ಒಲಿದು ಬಂದು ಹೊಸ ಸೃಷ್ಟಿಗೆ ಕಾರಣವಾಯಿತು. ನಂತರ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ ಒಂದು ಪ್ರಮುಖ ಪ್ರಕಾರವಾಗಿ ತನ್ನ ವಸ್ತು, ರೂಪ, ತಂತ್ರ, ಭಾಷೆ, ಶೈಲಿ ಸಂವೇದನೆಯಲ್ಲಿ ಹೊಸ ಬದಲಾವಣೆಯನ್ನು ತಂದುಕೊಂಡಿತು. ಬಂಗಾಳದ ಬಾಗಿಲಿನಿಂದ ಭಾರತವನ್ನು ಪ್ರವೇಶಿಸಿದ ಈ ಪ್ರಕಾರ ಕನ್ನಡದಲ್ಲೂ ಬಹುಬೇಗನೆ ಜನಪ್ರಿಯವಾಯಿತು. ಪಂಜೆಯವರು, ಕೆರೂರು ಮೊದಲಾದವರು ಮೊದಮೊದಲು ಕತೆಗಳನ್ನು ಬರೆದರೂ, ಅದು ಸ್ಪಷ್ಟ ರೂಪ ಪಡೆದಿದ್ದು ಮಾಸ್ತಿಯವರ ಕತೆಗಳಿಂದ.

ನವೋದಯ ಕಾಲಘಟ್ಟದ ಮಾಸ್ತಿ, ಆನಂದ, ಗೊರೂರರು ಅನೇಕ ಸಣ್ಣಕತೆಗಳನ್ನು ಬರೆದಿದ್ದು ಭಾಷೆ ಸರಳವಾಗಿದೆ. ಕಾಲಮಾನದ ಗುಣಧರ್ಮಕ್ಕೆ ಅನುಗುಣವಾಗಿ ವಿನೋದ ಪ್ರಸಂಗಗಳನ್ನು ರಸವತ್ತಾಗಿ ವರ್ಣಿಸುವುದು ಮತ್ತು ಅದನ್ನೇ ಕತೆಯ ಪ್ರಧಾನ ಅಂಶವಾಗಿಯೂ ಬಳಸಿಕೊಳ್ಳುವುದನ್ನು ಕಾಣಬಹುದು. ತನ್ನ ಪರಂಪರೆಯ ಸಂಪ್ರದಾಯ, ನಂಬಿಕೆ, ಮೌಲ್ಯಗಳನ್ನು ಇಟ್ಟುಕೊಂಡೇ ಹೊಸದೊಂದು ಸಂಸ್ಕೃತಿಗೆ ತೆರೆದುಕೊಂಡ ಸಮಾಜದಲ್ಲಿ ಆಗುತ್ತಿದ್ದ ಪರಿವರ್ತನೆಗಳನ್ನು ತಮ್ಮ ಕಥೆಗಳಲ್ಲಿ ದಾಖಲಿಸುತ್ತಾರೆ. ಜೊತೆಗೆ ಇಂಗ್ಲೀಷ್ ವಿದ್ಯಾಭ್ಯಾಸ ನಿಧಾನಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಜನ ಅದಕ್ಕೆ ಸ್ಪಂದಿಸಿದ ಹೊರನೋಟಗಳು ತಿಳಿಹಾಸ್ಯವನ್ನು ಚಿಮ್ಮಿಸುವ ಪರಿಯನ್ನು ಕಾಣಬಹುದು.

ಈ ಹಿನ್ನೆಲೆಯಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ತಮ್ಮ ಕತೆಗಳಲ್ಲಿ ಮೈಗೂಡಿಸಿಕೊಂಡ ಮಾಸ್ತಿ, ಆನಂದ, ಗೊರೂರರು ನವೋದಯ ಕಾಲಘಟ್ಟದ ಪ್ರಮುಖ ಕತೆಗಾರರಾಗಿದ್ದಾರೆ. ಇವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ. ಈ ಒಂದೆ ಇವರ ಸಾಹಿತ್ಯ ಕುರಿತು ಅಧ್ಯಯನ ನಡೆದಾಗ್ಯೂ ಇವರ ಕತೆಗಳನ್ನಷ್ಟೇ ಬಳಸಿಕೊಂಡು ಕತೆಗಳಲ್ಲಿ ಬರುವ ಸಂದರ್ಭ, ಸನ್ನಿವೇಶ, ಪಾತ್ರಗಳ ಮೂಲಕ ಪರಂಪರೆ ಮತ್ತು ಆಧುನಿಕತೆಯನ್ನು ಗುರುತಿಸುವುದು ಇಲ್ಲಿ ಪ್ರಧಾನವಾಗಿದೆ.

ಅಧ್ಯಯನದ ಉದ್ದೇಶಗಳು

ವಸಾಹತೀಕರಣದ ಸಂದರ್ಭದ ಭಾರತೀಯ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದಾಗಿದೆ. ಭಾರತೀಯ ಪರಂಪರೆಯು ಆಧುನಿಕ ಸಂದರ್ಭದ ಬೆಳವಣಿಗೆಗಳನ್ನು ಜೀರ್ಣಿಸಿಕೊಳ್ಳಲು ಆರಂಭಿಸಿದ್ದು ಈ ಕಾಲಘಟ್ಟದಲ್ಲೇ ಆಗಿದೆ. ಪಾಶ್ಚಾತ್ಯ ಸಂಸ್ಕೃತಿಯು ಆಧುನಿಕ ಯಂತ್ರನಾಗರಿಕತೆಯೊಂದಿಗೆ ತನ್ನ ಹೊಸ ವಿಚಾರಗಳು ಮತ್ತು ತಾತ್ವಿಕತೆಗಳ ಮೂಲಕ ಇಲ್ಲಿನ ಸಾಹಿತ್ಯವನ್ನು ಪ್ರಭಾವಿಸಿದೆ. ಅದುವರೆಗಿನ ದೇಶಿ ನೆಲೆಯ ಸಾಹಿತ್ಯಿಕ ರೂಪಗಳು ಪಾಶ್ಚಾತ್ಯ ಫಿಕ್‌ಚನ್ Fiction ಗೆ ಪೂರಕವಾಗಿ ತನ್ನ ಸಾಹಿತ್ಯಿಕ ರೂಪಗಳನ್ನು ಮಾರ್ಪಡಿಸಿಕೊಂಡಿತು. ಭಾರತೀಯತೆಯು ಅಥವಾ ಕನ್ನಡದ ದೇಶೀತನವು ಆಧುನಿಕತೆಯ ಮೆರಗನ್ನು ಪಡೆದುಕೊಂಡು ಹೊಸ ವಿಚಾರಗಳನ್ನು ಸೃಜನಶೀಲ ನೆಲೆಯಲ್ಲಿ ಅಭಿವ್ಯಕ್ತಗೊಂಡಿತು. ಹಾಗೆ ಬಂದ ಫಸಲನ್ನು ಕನ್ನಡ ಸಣ್ಣಕತೆಗಳಲ್ಲಿ ಕಾಣಬಹುದಾಗಿದೆ. ಕನ್ನಡವು ಆಧುನಿಕ ಸಂದರ್ಭಗಳಿಗೆ ತಕ್ಕ ಹಾಗೆ ತನ್ನ ಗದ್ಯವನ್ನು ಮರು ರೂಪಿಸಿಕೊಳ್ಳುವಲ್ಲಿ ಸಣ್ಣಕತೆಗಳ ರಚನಾ ಪ್ರಕ್ರಿಯೆಯು ಮಹತ್ವದ ಪಾತ್ರವನ್ನು ವಹಿಸಿದೆಯೆಂದು ಖಂಡಿತವಾಗಿ ಹೇಳಬಹುದು. ಇಂತಹ ಕಾಲಘಟ್ಟದಲ್ಲಿ ದೇಶೀನೆಲೆಯ ಕಥನಕಲೆಯು ತನ್ನ ಪರಂಪರೆಯನ್ನು ಹೇಗೆ ಆಧುನಿಕ ಸಂದರ್ಭಕ್ಕೆ ತಕ್ಕ ಹಾಗೆ ಮರುರೂಪಿಸಿತು ಎಂಬುದನ್ನು ಮಾಸ್ತಿ, ಆನಂದ ಮತ್ತು ಗೊರೂರ ಕಥನಗಳ ಮೂಲಕ ಕಂಡುಕೊಳ್ಳುವ ಉದ್ದೇಶವು ಈ ಅಧ್ಯಯನದ್ದಾಗಿದೆ.

ಕನ್ನಡದ ಹಲವು ಸಾಹಿತ್ಯಿಕ ಘಟ್ಟಗಳೆಲ್ಲದರಲ್ಲೂ ನವೋದಯವು ವಿಶಿಷ್ಟ ಅಂಶಗಳಿಂದ ಕೂಡಿದುದಾಗಿದೆ. ನವ್ಯ, ನವ್ಯೋತ್ತರ, ದಲಿತ ಸಾಹಿತ್ಯಿಕ ಚಳವಳಿಗಳಿಗಿಂತ ನವೋದಯವು ಹಲವು ಸವಾಲುಗಳನ್ನು ಎದುರಿಸಿ ಕನ್ನಡಕ್ಕೆ ಒಂದು ಮಾರ್ಗಶೈಲಿಯನ್ನು ರೂಪಿಸಿಕೊಟ್ಟಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಸಂದರ್ಭದಲ್ಲಿ ಆಗ ತಾನೆ ಪಾಶ್ಚಾತ್ಯ ಶಿಕ್ಷಣದ ಮೂಲಕ ಆಧುನಿಕತೆಗೆ ಒಡ್ಡಿಕೊಳ್ಳುತ್ತಿದ್ದ ಭಾರತ, ಆ ಮೂಲಕ ಕನ್ನಡದ ದೇಶೀ ಜಗತ್ತು ಆಧುನಿಕತೆಯನ್ನು ಮತ್ತು ಪರಂಪರೆಯನ್ನು ಹೇಗೆ ಮುಖಾಮುಖಿಯಾಗಿಸಿದೆ ಎನ್ನುವ ಸಂಗತಿಯು ಅತ್ಯಂತ ಕುತೂಹಲಕಾರಿಯಾಗಿದೆ. ಹಾಗಾಗಿ **ಕನ್ನಡ ನವೋದಯ ಸಣ್ಣಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ** ಎನ್ನುವ ಪಿಎಚ್.ಡಿ. ಅಧ್ಯಯನದ ಒಟ್ಟಾರೆ ಆಶಯ ಮತ್ತು ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಬಹುದಾಗಿದೆ.

೧. ನವೋದಯ ಕಾಲಘಟ್ಟದ ಹಲವು ದಶಕಗಳ ನಂತರವೂ ಆಧುನಿಕತೆ ಮತ್ತು ಪರಂಪರೆಯ ಕುರಿತಾದ ಚರ್ಚೆಯು ಹಿಂದೆಂದಿಗಿಂತಲೂ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಮುನ್ನೆಲೆಗೆ ಬಂದಿದ್ದು ಪರಂಪರೆ ಮತ್ತು ಆಧುನಿಕತೆಯ ನಡುವಿನ ಅಂತರ್‌ಸಂಬಂಧವನ್ನು ಮತ್ತು ಸಂಘರ್ಷವನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯವಿದೆ.

೨. ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ ಮಾಡುವಲ್ಲಿ ಕತೆಗಾರರು ವಸ್ತು ಮತ್ತು ಆಶಯವನ್ನು ಹೇಗೆ ನಿಭಾಯಿಸಿದರು ಎಂಬುದನ್ನು ವಿಶ್ಲೇಷಿಸುವುದು.

೩. ಆಧುನಿಕತೆಯಿಂದ ಸಮಾಜದಲ್ಲಿ ಉಂಟಾದ ಬದಲಾವಣೆಗಳ ಸ್ವರೂಪವನ್ನು ಅಧ್ಯಯನ ಮಾಡುವುದು.
೪. ಪರಂಪರೆಯನ್ನು ಆಧುನಿಕತೆಯ ತಾತ್ವಿಕತೆಯೊಂದಿಗೆ ನಿಕಷಕ್ಕೊಡ್ಡಿ ಅದರ ಉನ್ನತಿಯನ್ನು ಅಭಿವ್ಯಕ್ತಿಸುವುದು.
೫. ಆಧುನಿಕ ಶಿಕ್ಷಣದ ಮೂಲಕ ತಳಸಮುದಾಯಗಳು ಪಡೆದುಕೊಂಡ ಹೊಸ ಅರಿವು ಮತ್ತು ಪರಿವರ್ತನೆಯನ್ನು ಅರಿಯುವುದು.
೬. ಸ್ತ್ರೀಯನ್ನು ಕೇವಲವಾಗಿ ನೋಡುವ ಸಂದರ್ಭದಲ್ಲಿ ಸ್ತ್ರೀ ಪುರುಷರಷ್ಟೇ ಸಮರ್ಥಳು ಮತ್ತು ಸಮಾನಳು ಎಂಬ ಆಶಯವು ಹಲವು ಕತೆಗಳಿಗೆ ವಸ್ತುವಾಗಿದ್ದು ಅದನ್ನು ಕತೆಗಾರರು ನಿರ್ವಹಿಸಿದ ಬಗೆಯನ್ನು ತಿಳಿಯುವುದು.
೭. ಸಮಾಜ ಬಹಿಷ್ಕಾರ ಹಾಕಿದ್ದ ವಿವಾಹ ಪೂರ್ವ ಮತ್ತು ಪರಪುರುಷನೊಂದಿಗಿನ ಲೈಂಗಿಕ ಸಂಬಂಧಗಳನ್ನು ಕತೆಗಾರರು ನಿರೂಪಿಸಿರುವ ಬಗೆಯನ್ನು ಅಧ್ಯಯನ ಮಾಡುವುದು.
೮. ವಿಧವಾ ವಿವಾಹ ಮತ್ತು ಅಂತರ್ಜಾತಿಯ ವಿವಾಹಗಳನ್ನು ತಮ್ಮ ಕತೆಗಳ ಮೂಲಕ ನಿರೂಪಿಸುವ ಬಗೆಯನ್ನು ಅಧ್ಯಯನ ಮಾಡುವುದು.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ನವೋದಯದ ಕಾಲಘಟ್ಟದಲ್ಲಿ ಬರುವ ಮಾಸ್ತಿ, ಆನಂದ ಮತ್ತು ಗೊರೂರರ ಕತೆಗಳನ್ನು ವ್ಯಾಪ್ತಿಯನ್ನಾಗಿಸಿಕೊಂಡಿದೆ. ಕತೆಗಳಲ್ಲಿ ಬರುವ ಪರಂಪರೆಯ ಅಂಶಗಳಾದ ನಂಬಿಕೆ/ಆಚರಣೆ, ಹಳ್ಳಿ, ಪುರುಷ ಪ್ರಧಾನ ವ್ಯವಸ್ಥೆಯನ್ನು ಗುರುತಿಸುವುದು. ಅದೇ ರೀತಿ ಆಧುನಿಕತೆಯ ಅಂಶಗಳಾದ ಶಿಕ್ಷಣ, ವೈಚಾರಿಕತೆ, ಉದ್ಯೋಗ, ನಗರ ಜೀವನವನ್ನು ಗುರುತಿಸುವುದು. ಇದು ಅಧ್ಯಯನದ ವ್ಯಾಪ್ತಿಯು ಹೌದು. ಮಿತಿಯೂ ಹೌದು.

ಅಧ್ಯಯನ ವಿಧಾನ

ಪ್ರತಿಯೊಂದು ಅಧ್ಯಯನಕ್ಕೆ ವಿಧಾನ ತುಂಬಾ ಮುಖ್ಯವಾಗಿದ್ದು, ಅನೇಕ ವಿಧಾನಗಳು ಚಾಲ್ತಿಯಲ್ಲಿವೆ. ಆದರೆ ಪ್ರಸ್ತುತ ಅಧ್ಯಯನ ವಿಶ್ಲೇಷಣಾತ್ಮಕ ವಿಧಾನ, ತೌಲನಿಕ ವಿಧಾನ ಮತ್ತು ವಿಮರ್ಶಾತ್ಮಕ ವಿಧಾನವನ್ನು ಅಧ್ಯಯನಕ್ಕೆ ಬಳಸಿಕೊಂಡಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನ ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯ ಒಂದು : ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನವನ್ನು ಮತ್ತು ಸ್ವರೂಪವನ್ನು ಒಳಗೊಂಡಿದೆ.

ಅಧ್ಯಾಯ ಎರಡು : ಈವರೆಗಿನ ಅಧ್ಯಯನಗಳ ಸಮೀಕ್ಷೆ. ಇಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ಇದುವರೆಗೆ ಬಂದಿರುವ ಸಂಶೋಧನಾ ಕೃತಿಗಳನ್ನು ಮತ್ತು ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳನ್ನು ವಿವರಿಸಲಾಗಿದೆ.

ಅಧ್ಯಾಯ ಮೂರು : ಪರಿಕಲ್ಪನಾತ್ಮಕ ಚರ್ಚೆಗೆ ಮೀಸಲಾಗಿದ್ದು, ಪರಂಪರೆ ಮತ್ತು ಆಧುನಿಕತೆ ಎಂದರೇನು? ಎಂಬುದನ್ನು ವಿವರಿಸಲಾಗಿದೆ. ಜೊತೆಗೆ ವಿದ್ವಾಂಸರು ಹೇಳಿರುವ ವ್ಯಾಖ್ಯಾನಗಳನ್ನು ಪಟ್ಟಿ ಮಾಡಲಾಗಿದೆ.

ಅಧ್ಯಾಯ ನಾಲ್ಕು : ಮಾಸ್ತಿಯವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ಚರ್ಚೆ ಮಾಡಲಾಗಿದೆ. ಇಲ್ಲಿ ನಂಬಿಕೆ/ಆಚರಣೆ, ಹಳ್ಳಿ, ವೈಚಾರಿಕತೆ, ಉದ್ಯೋಗ ಮತ್ತು ಶಿಕ್ಷಣವನ್ನು ಮುಖ್ಯವಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದು : ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. ನಂಬಿಕೆ/ಆಚರಣೆ, ಪುರುಷ ಪ್ರಧಾನ ವ್ಯವಸ್ಥೆ, ಶಿಕ್ಷಣ ಮತ್ತು ಹಳ್ಳಿ. ಇಲ್ಲಿ ಕಂಡು ಬರುವ ಪ್ರಮುಖ ಅಂಶಗಳು.

ಅಧ್ಯಾಯ ಆರು : ಗೊರೂರರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ. ಇಲ್ಲಿಯೂ ಕೂಡ ನಂಬಿಕೆ/ಆಚರಣೆ, ಹಳ್ಳಿ, ವೈಚಾರಿಕತೆ, ಶಿಕ್ಷಣ ಮತ್ತು ನಗರ ಕುರಿತು ವಿವರಿಸಲಾಗಿದೆ.

ಅಧ್ಯಾಯ ಏಳು : ಮಾಸ್ತಿ, ಆನಂದ ಮತ್ತು ಗೊರೂರರ ಕತೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ವಸ್ತು, ಪಾತ್ರ, ತಂತ್ರ ಮತ್ತು ಅಭಿವ್ಯಕ್ತಿ ಕ್ರಮ ಇವುಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಎಂಟು : ಸಮಾರೋಪಕ್ಕೇ ಸೀಮಿತವಾಗಿದ್ದು ಒಟ್ಟು ಅಧ್ಯಯನದ ಫಲಿತಗಳನ್ನು ಹೇಳಲಾಗಿದೆ.

ಅಧ್ಯಾಯ ಒಂಬತ್ತು : ಅನುಬಂಧ. ಇದರಲ್ಲಿ ಪ್ರಾಥಮಿಕ ಆಕರಗಳು ಮತ್ತು ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ಅಕಾರಾದಿಯಾಗಿ ಕೊಟ್ಟಿದೆ.

ಅಧ್ಯಾಯ – ಎರಡು

ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – ಎರಡು

ಈವರೆಗಿನ ಅಧ್ಯಯನಗಳ ಸಮೀಕ್ಷೆ

೨.೧ ಪುಸ್ತಕಗಳು ಮತ್ತು ಲೇಖನಗಳು

೨.೨ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು ಮತ್ತು ಎಂ.ಫಿಲ್ ನಿಬಂಧಗಳು

೨.೧ ಪುಸ್ತಕಗಳು ಮತ್ತು ಲೇಖನಗಳು

೧. ನಟರಾಜ್ ಹುಳಿಯಾರ್ 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' :– ಈ ಕೃತಿಯಲ್ಲಿ ಲೇಖಕರು ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳನ್ನು ಕುರಿತು ತೌಲನಿಕ ಅಧ್ಯಯನ ಮಾಡಿದ್ದಾರೆ. ಆಧುನಿಕ ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯ ಚರಿತ್ರೆಯ ಐವರು ಪ್ರಾತಿನಿಧಿಕ ಲೇಖಕರನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದರೂ, ಅನೇಕ ಆಫ್ರಿಕನ್ ಹಾಗೂ ಕನ್ನಡ ಲೇಖಕರ ಕೃತಿಗಳು ಹಾಗೂ ಅವರ ನಿಲುವುಗಳ ಚರ್ಚೆ ಇಲ್ಲಿನ ವಿವಿಧ ಹಂತಗಳಲ್ಲಿ ಬಂದು ಹೋಗುತ್ತದೆ. ಆದರೂ ಈ ವಸ್ತು ಕೇಂದ್ರಿತ ಅಧ್ಯಯನದ ಚೌಕಟ್ಟಿಗಾಗಿ ಪಶ್ಚಿಮ ಆಫ್ರಿಕಾಕ್ಕೆ ಸೇರಿದ ನೈಜೀರಿಯಾದ ಲೇಖಕರಾದ ಚಿನುವ ಅಚೀಬೆ, ವೋಲೆ ಷೋಯಿಂಕ ಹಾಗೂ ಕನ್ನಡ ಲೇಖಕರಾದ ಯು. ಆರ್. ಅನಂತಮೂರ್ತಿ, ಕೆ. ಪಿ. ಪೂರ್ಣಚಂದ್ರ ತೇಜಸ್ವಿ, ಚಂದ್ರಶೇಖರ ಕಂಬಾರರ ಕೃತಿಗಳನ್ನು ಆಯ್ಕೆ ಮಾಡಿಕೊಳ್ಳಲು ಕೆಲವು ಮುಖ್ಯ ಕಾರಣಗಳನ್ನು ಈ ಕೃತಿಯಲ್ಲಿ ಹೇಳಿದ್ದಾರೆ.

ಈ ಪ್ರಾತಿನಿಧಿಕ ಲೇಖಕರ ಕಾದಂಬರಿಗಳ ಚರ್ಚೆ ಈ ಅಧ್ಯಯನದ ಕೇಂದ್ರದಲ್ಲಿದೆ. ಅಧ್ಯಯನದ ಮೊದಲ ಭಾಗದಲ್ಲಿ ಆಫ್ರಿಕನ್ ಹಾಗೂ ಭಾರತೀಯ ಸಮಾಜಗಳ ವಸಾಹತು ಸನ್ನಿವೇಶದ ವಿಶ್ಲೇಷಣೆಯಿದೆ. ಎರಡನೆಯ ಭಾಗದಲ್ಲಿ ಕಾದಂಬರಿ ಪ್ರಕಾರದ ರೂಪೀಕರಣದಲ್ಲೇ ನಡೆವ ಆಧುನಿಕತೆ ಮತ್ತು ಪರಂಪರೆಗಳ ಮುಖಾಮುಖಿಯ ಚರ್ಚೆಯಿದೆ. ಮೂರನೇಯ ಭಾಗದಲ್ಲಿ ಆಧುನಿಕತೆ ಮತ್ತು ಪರಂಪರೆಗಳ ವಸ್ತುಕೇಂದ್ರಿತ ಅಧ್ಯಯನವಿದೆ. ನಾಲ್ಕನೇಯ ಭಾಗದಲ್ಲಿ ಆಫ್ರಿಕನ್

ಹಾಗೂ ಭಾರತೀಯ ಸಮಾಜ ಮತ್ತು ಕರ್ನಾಟಕ ಸಮಾಜಗಳ ವಸಾಹತೋತ್ತರ ಸನ್ನಿವೇಶಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ಈ ಅಧ್ಯಯನದ ಕೊನೆಯ ಭಾಗದಲ್ಲಿ ಕಂಬಾರ ಹಾಗೂ ಷೋಯಿಂಕಾರ ನಾಟಕಗಳಲ್ಲಿ ದೇಶೀ ದ್ರವ್ಯಗಳ ಅನುಸಂಧಾನ ಕುರಿತ ತೌಲನಿಕ ವಿಶ್ಲೇಷಣೆಯಿದೆ. ಅಂದರೆ ಒಟ್ಟಾರೆಯಾಗಿ ಸಾಹಿತ್ಯ ಕೃತಿಗಳು ರಚನೆಯಾದ ಸನ್ನಿವೇಶ, ಕೃತಿಗಳ ರಚನೆಯ ಹಿಂದಿನ ತಾತ್ವಿಕತೆ, ತಾಂತ್ರಿಕ ಆಯಾಮ ಹಾಗೂ ಅವು ನಿರ್ವಹಿಸಿದ ವಸ್ತುಲೋಕ ಈ ಎಲ್ಲ ಮುಖಗಳ ಪರಿಶೀಲನೆಯ ಮೂಲಕ ಆಧುನಿಕತೆ ಮತ್ತು ಪರಂಪರೆ ಎಂಬ ಪರಿಕಲ್ಪನೆಗಳ ಶೋಧನೆಗೆ ಇಡಿತನ ತರಲು ಇಲ್ಲಿ ಯತ್ನಿಸಲಾಗಿದೆ. ಈ ಕೃತಿಯು ನನಗೆ ವಸಾಹತು ಸನ್ನಿವೇಶ ಅರ್ಥಮಾಡಿಕೊಳ್ಳಲು, ಆಧುನಿಕತೆ ಮತ್ತು ಪರಂಪರೆ ಪರಿಕಲ್ಪನೆಗಳು ಕೃತಿಕಾರರ ಮೇಲೆ ಬೀರಿದ ಪ್ರಭಾವ ಮತ್ತು ಪರಿಣಾಮಗಳನ್ನು ತಿಳಿಯಲು ಸಹಾಯಕವಾಗಿದೆ.

೨. ಕೋದಂಡರಾಮ ಎಸ್. ಕೆ. 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' :– ಇದು ಕೋದಂಡರಾಮ ಅವರ ಸಂಶೋಧನಾ ಕೃತಿ. ಆರಂಭದಲ್ಲಿ ಸಂಸ್ಕೃತಿಯನ್ನು ಅರ್ಥೈಸುವ ಜೊತೆಗೆ ಭಾರತೀಯ ಸಂಸ್ಕೃತಿಯಲ್ಲಿ ಜಾತಿಯ ಪರಿಣಾಮಗಳನ್ನು ವಿವರಿಸಿದ್ದಾರೆ. ಅಧ್ಯಯನದ ಅನುಕೂಲಕ್ಕಾಗಿ ಹೊಸಗನ್ನಡ ಮೊದಲನೆಯ ತಲೆಮಾರು, ಹೊಸಗನ್ನಡದ ಎರಡನೆಯ ತಲೆಮಾರು, ಹೊಸಗನ್ನಡದ ಮೂರನೆಯ ತಲೆಮಾರು, ಮಹಿಳಾ ಸಂವೇದನೆ, ಮುಸ್ಲಿಂ ಸಂವೇದನೆ. ಈ ರೀತಿಯಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಇಲ್ಲಿ ಆಯಾ ಘಟ್ಟಗಳಲ್ಲಿ ಬರುವ ಪ್ರಮುಖ ಎಂದು ಕಂಡು ಬರುವ ಧೋರಣೆಗಳನ್ನು ಗುರುತಿಸುತ್ತ ಅದಕ್ಕೆ ಒತ್ತಾಸೆಯಾಗುವ ಹಾಗೂ ಸಾಂಸ್ಕೃತಿಕವಾಗಿ ಗಮನಿಸಲೇಬೇಕೆಂದು ಅನಿಸಿದ ಕೃತಿಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಈ ಕೃತಿಯಲ್ಲಿ ಲೇಖಕರು ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ವಿಶ್ಲೇಷಿಸಿದ್ದಾರೆ. ಆಧುನಿಕತೆಯು ಪರಂಪರೆಗೆ ವಿರುದ್ಧ ದಿಕ್ಕಿನಲ್ಲಿ ಅಸ್ತಿತ್ವ ಪಡೆಯುತ್ತದೆ. ಬದುಕು ಮಾನವೀಯ ನೆಲೆಯಲ್ಲಿ ಹಸನುಗೊಳ್ಳಲಿ ಎಂಬ ಖಚಿತ ವಿಶ್ವಾಸದಲ್ಲಿ ಮನುಷ್ಯನ ಬಳಿ ಬರುತ್ತದೆ. ಆದರೆ ಅವನ್ನು ಆತ ಬಳಸುವ ಬಳಸಿಕೊಳ್ಳುವ ಸಾಧ್ಯತೆಯ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸುತ್ತದೆ. ಅದಕ್ಕೆ ವಿದ್ಯುಚ್ಛಕ್ತಿಯನ್ನು ಉದಾಹರಣೆಗಾಗಿ ಬಳಸಿಕೊಂಡಿದ್ದಾರೆ. ಆಧುನಿಕತೆಯು ಬದುಕನ್ನು ಪ್ರವೇಶಿಸುವುದು ಎರಡು ಸಾಧ್ಯತೆಗಳ ಮೂಲಕ. ಒಂದು ಶಿಕ್ಷಣ, ಇನ್ನೊಂದು ಸಾಮಾಗ್ರಿಗಳು. ಶಿಕ್ಷಣದ ಸಾಮಾಗ್ರಿಗಳು ಅಪಾಯಕಾರಿಯಾಗಲಾರವು. ಸಾಂಸ್ಕೃತಿಕ ಅರಿವು ರೂಪುಗೊಳ್ಳುವುದು ಇದರ ಮೂಲಕವೇ. ಗ್ರಾಮೀಣ ಸಂಸ್ಕೃತಿ ಅಂಚೆ ಕಛೇರಿ, ಮೋಟಾರು, ಡಾಂಬರು ರಸ್ತೆ, ಗಗನಯಾನಿಗಳು, ವಿದ್ಯುಚ್ಛಕ್ತಿ, ಸಾಧನ ಸಾಮಾಗ್ರಿಗಳು, ಹೋಟೆಲು ಮುಂತಾದ ಆಧುನಿಕತೆಯ ಪ್ರಾಥಮಿಕ ಅವಶ್ಯಕತೆಗಳ ಬಗೆಗೆ ಪ್ರೀತಿಗಿಂತ ಹೆಚ್ಚಾಗಿ ಬೆರಗಿನಿಂದ ಆತಂಕದಿಂದ ಪ್ರತಿಕ್ರಿಯಿಸಿದೆ ಎಂದು ಲೇಖಕರು ಈ ಕೃತಿಯಲ್ಲಿ ಹೇಳಿದ್ದಾರೆ. ಹಬ್ಬಹರಿದಿನಗಳು, ಶಾಸ್ತ್ರ ಪ್ರಧಾನವಾದ ಆಕರಗಳು ಮುಖ್ಯವಾಗಿ ಪರಂಪರೆಯನ್ನು ಪೋಷಿಸಿಕೊಂಡು ಬರುತ್ತಿವೆ. ಈ ಕೃತಿಯಲ್ಲಿ ಮುಖ್ಯವಾಗಿ ಆಧುನಿಕತೆ ಮತ್ತು ಪರಂಪರೆ

ಕಥೆಗಳಲ್ಲಿ ಯಾವ ರೀತಿಯಾಗಿ ಸಂಘರ್ಷಕ್ಕೆ ಒಳಪಡುತ್ತವೆ ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇದು ನನ್ನ ಕಥೆಗಳ ವಿಶ್ಲೇಷಣೆಗೂ ಕೂಡ ಸಹಕಾರಿಯಾಗಿದೆ.

೩. **ಹೊನ್ನಯ್ಯ. ಸಿ. ಬಿ. 'ಕನ್ನಡ ಸಣ್ಣಕತೆಗಳಲ್ಲಿ ದಲಿತ ಸಂಸ್ಕೃತಿ'** :– ಇದೊಂದು ಸಂಶೋಧನಾ ಕೃತಿಯಾಗಿದೆ. ಇದರ ವ್ಯಾಪ್ತಿ ನವೋದಯದ ಮಾಸ್ತಿಯವರಿಂದ ಆರಂಭವಾಗಿ ದಲಿತ ಬಂಡಾಯ ಕಥೆಗಾರರವರೆಗೆ. ಆಧುನಿಕ ಭಾರತದ ಚರಿತ್ರೆಯ ಸಂದರ್ಭದಲ್ಲಿ ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧ ಮತ್ತು ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳು ಮಹತ್ವದ ಕಾಲಘಟ್ಟಗಳಾಗಿ ಕಂಡುಬರುತ್ತವೆ. ಇವುಗಳನ್ನು ಲೇಖಕರು ಕತ್ತಲು–ಬೆಳಕಿನ ಸಂಘರ್ಷದ ನೆಲೆಗಳ ಕಾಲವೆಂದು ಗುರುತಿಸಿದ್ದಾರೆ. ಇಲ್ಲಿಯವರೆಗಿದ್ದ ರಾಜ ಪ್ರಭುತ್ವ ಮರೆಯಾಗಿ ಸಮಾಜದಲ್ಲಿ ಹಲವಾರು ಬದಲಾವಣೆಗಳಾಗಿದ್ದವು. ಆದ್ದರಿಂದ ಇದನ್ನು ಬೆಳಕಿನ ನೆಲೆ ಎನ್ನಬಹುದು. ನನಗೆ ಇಲ್ಲಿ ಮುಖ್ಯವಾಗಿ ಕಾಣಿಸುವ ಅಂಶವೆಂದರೆ, ವಸಾಹತುಶಾಹಿ ಸಂದರ್ಭವನ್ನು ಲೇಖಕರು ವಿವರಿಸುವ ಪ್ರಯತ್ನ ಮಾಡಿದ್ದಾರೆ. ನವೋದಯ ಕಾಲದ ಅನೇಕ ಕಥೆಗಾರರು ಮತ್ತು ಅವರ ಕತೆಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು, ಅದರಲ್ಲೂ ವಸಾಹತು ಸಂದರ್ಭದಲ್ಲಿ ರಚನೆಯಾದ ಕತೆಗಳನ್ನೇ ವಿಶೇಷವಾಗಿ ವಿಶ್ಲೇಷಿಸಿದ್ದಾರೆ.

೪. **ಗಿರಡ್ಡಿ ಗೋವಿಂದರಾಜ 'ಸಾಹಿತ್ಯ ಮತ್ತು ಪರಂಪರೆ'** :– ಈ ಕೃತಿಯಲ್ಲಿ ಬರುವ ಒಂದು ಲೇಖನ 'ಸಾಹಿತ್ಯ ಮತ್ತು ಪರಂಪರೆ'. ಸಾಹಿತ್ಯ ಮತ್ತು ಪರಂಪರೆಗಳ ಸಂಬಂಧವನ್ನು ಕುರಿತು ಟಿ. ಎಸ್. ಎಲಿಯಟ್ ತನ್ನ 'Tradition and the individual talent' ಎಂಬ ಪ್ರಬಂಧದಲ್ಲಿ ವಿಶದೀಕರಿಸಿದ ನಂತರ ಸಾಹಿತ್ಯವಿಮರ್ಶೆಯಲ್ಲಿ 'ಪರಂಪರೆ' ಎಂಬ ಶಬ್ದಕ್ಕೆ ವಿಶೇಷ ಮಹತ್ವ ಬಂದಿದೆ. ಎಲಿಯಟ್ ಪ್ರಕಾರ ಯಾವ ಲೇಖಕನೂ ಪ್ರತ್ಯೇಕವಾಗಿ ತಾನೊಬ್ಬನೇ ಅರ್ಥಕೊಡುವುದಿಲ್ಲ. ಅವನ ವೈಯಕ್ತಿಕ ಪ್ರತಿಭೆ, ಸ್ವಂತಿಕೆಗಳನ್ನು ಅರ್ಥಮಾಡಿಕೊಳ್ಳಲು ಅವನಿಗೂ ಅವನ ಹಿಂದಿನ ಸಾಹಿತ್ಯ ಪರಂಪರೆಗೂ ಇರುವ ಸಂಬಂಧವನ್ನು ಗಮನಿಸಬೇಕಾಗುತ್ತದೆ. ಪ್ರತಿಯೊಬ್ಬ ಮಹತ್ವದ ಲೇಖಕನೂ ತನ್ನ ಹಿಂದಿನ ಪರಂಪರೆಯಿಂದ ಅರ್ಥವತ್ತಾದುದನ್ನು ಆಯ್ದುಕೊಂಡು, ತನ್ನ ಸ್ವಂತದ ಪ್ರತಿಭೆಗೆ ಅದನ್ನು ಅಳವಡಿಸಿಕೊಂಡು ಪರಂಪರೆಯನ್ನು ಮುಂದುವರಿಸುತ್ತಾನೆ. ಈ ಅರ್ಥದಲ್ಲಿ ಒಬ್ಬ ಲೇಖಕ ಪರಂಪರೆಗೆ ಹೊಂದಿಕೊಂಡಿರುವನೆಂದರೆ ಅದನ್ನವನು ಕಣ್ಣುಮುಚ್ಚಿ ಅನುಕರಿಸುತ್ತಾನೆಂದು ಅರ್ಥವಲ್ಲ. ಎಲಿಯಟ್ 'ಪರಂಪರೆ' ಎಂಬುದನ್ನು 'ಇತಿಹಾಸ ಪ್ರಜ್ಞೆ' ಎಂಬ ಅರ್ಥದಲ್ಲಿ ಬಳಸುತ್ತಾನೆ. ಇತಿಹಾಸ ಪ್ರಜ್ಞೆ ಎಂದರೆ ಗತಕಾಲವು ಆಗಲೇ ಕಳೆದುಹೋಗಿದೆಯೆಂಬ ಅರಿವಿನ ಜೊತೆಗೇ ಅದರ ಸದ್ಯದ ಅಸ್ತಿತ್ವವನ್ನೂ ಒಪ್ಪಿಕೊಳ್ಳುವ ದೃಷ್ಟಿಕೋನ; ಅನಂತತೆಯ, ತತ್ಕಾಲೀನತೆಯ ಹಾಗೂ ಇವೆರಡರ ಒಟ್ಟು ಮೊತ್ತದ ಅರಿವು. ಈ ಅರಿವಿನಿಂದ ಒಬ್ಬ ಲೇಖಕ ಪರಂಪರೆಗೆ ಸೇರಿದವನಾಗುತ್ತಾನೆ ಎಂದು ಎಲಿಯಟ್ ಹೇಳಿದ ಮಾತುಗಳನ್ನೇ ಕೃತಿಕಾರ ಇಲ್ಲಿ ಯಥಾವತ್ತಾಗಿ ದಾಖಲಿಸಿದ್ದಾನೆ. ಅಷ್ಟೇ ಅಲ್ಲ, ಕೆಲವರು ಎಲಿಯಟ್ ನ ಪರಂಪರೆಯ ಪರಿಕಲ್ಪನೆಯ

ಬಗ್ಗೆ ಆಕ್ಷೇಪವೆತ್ತಿದ್ದೂ ಇದೆ. ಇದಕ್ಕೆ ಕೃತಿಕಾರ ಇದೇ ಲೇಖನದಲ್ಲಿ ಅಡಿ ಟಿಪ್ಪಣಿಯಲ್ಲಿ ಅದನ್ನು ವಿವರಿಸುವ ಪ್ರಯತ್ನ ಮಾಡಿದ್ದಾನೆ. ಮುಂದುವರಿದು ಕನ್ನಡದಲ್ಲಿ ನವೋದಯ ಸಾಹಿತ್ಯ ಆರಂಭವಾದಗಲೂ ಇಂಥ ಸಂದೇಹಗಳು ಬಂದಿದ್ದು, ನವ್ಯ ಕತೆ ಅನೇಕ ರೀತಿಯಲ್ಲಿ ನವೋದಯ ಕತೆಯ ಬೆಳವಣಿಗೆ ಎಂದಿದ್ದಾರೆ.

೫. **ಸುಜನಾ, 'ಪರಂಪರೆ ಮತ್ತು ಕುವೆಂಪು'** :– ಈ ಕೃತಿಯಲ್ಲಿ ಸಂಪ್ರದಾಯ, ಪರಂಪರೆ ಎಂಬ ಪದಗಳನ್ನು ಸಾಮಾನ್ಯವಾಗಿ ಪರ್ಯಾಯಾರ್ಥಕಗಳಾಗಿ ಬಳಸುವ ವಾಡಿಕೆ ಇದೆ. ಆ ಪದಗಳಿಗೆ ವಿಭಿನ್ನಾರ್ಥಕ ಶಕ್ತಿ ಇದೆಯೊ? ಇಲ್ಲವೊ? ಹೇಗಾದರೂ ಇರಲಿ, ಅಗತ್ಯ ಕಾರಣದಿಂದಲಾದರೂ ನಾವಿಲ್ಲಿ ಅವುಗಳನ್ನು ಎರಡು ಬೇರೆಯ ವಿಶಿಷ್ಟ ಅರ್ಥವುಳ್ಳ ಮಾತುಗಳೆಂದೆ ಬಗೆಯುವುದು ಲೇಸು. ಇಲ್ಲವಾದರೆ conceptನ ಗೊಂದಲವುಂಟಾಗುತ್ತದೆ. Englishನಲ್ಲಿ tradition, convention ಎಂಬ ಎರಡು ಪದಗಳಿದ್ದರೂ, ನಮ್ಮಲ್ಲಿಯಂತೆಯೇ ಒಮ್ಮೊಮ್ಮೆ ಅವರೂ ಅವುಗಳನ್ನು ಅನಿಶ್ಚಿತಾರ್ಥವುಳ್ಳ ಮಾತಾಗಿ ಬಳಸುವುದುಂಟು. ಆದರೂ ಆ ಎರಡಕ್ಕೂ ಬೇರೆಯ ಅರ್ಥವ್ಯಾಪ್ತಿಯುಂಟು convetion ಎಂಬುದಕ್ಕೆ ಒಡಂಬಡಿಕೆ, ನಡಾವಳಿ ಎಂದೂ, tradition ಎಂದರೆ ಹಿಂದಿನಿಂದ ರವಾನಿಸಲ್ಪಟ್ಟದ್ದೂ ಎಂದು ಅರ್ಥವುಂಟು. ನಮ್ಮ ಸಂಪ್ರದಾಯ ಪದಕ್ಕೆ ಸಂವಾದಿಯಾದ ಪದ ಅದು. ಪರಂಪರೆ–ಸಂಪ್ರದಾಯ ಎರಡೂ ಒಂದರ್ಥದಲ್ಲಿ ವಿರುದ್ಧಾರ್ಥಗಳು. ಮತ್ತೊಂದು ಅರ್ಥದಲ್ಲಿ ಕೊಂಚ ಸಮಾನಾರ್ಥ ಗಂಧಿಗಳು. ತನ್ನ ಪೂರ್ವದ ಎತ್ತರವನ್ನು ಕಳೆದುಕೊಳ್ಳಲಿಷ್ಟಪಡದ ಸಂಪ್ರದಾಯ ಕಾಲುವೆಯಾಗುತ್ತದೆ. ಕಾಲ ದೇಶವಶಿಯಾದ ನದಿ–ಪರಂಪರೆ ಇಳಿದಂತೆ ತೋರಿದರೂ ಬೆಳೆಯುತ್ತ ಸಾಗರವಾಗುತ್ತದೆ ಎಂದು ಪರಂಪರೆಯನ್ನು ಕುರಿತು ಈ ಮೇಲಿನ ಕೃತಿಯಲ್ಲಿ ವ್ಯಾಖ್ಯಾಸಿದ್ದಾರೆ. ಇಲ್ಲಿ ಸಂಪ್ರದಾಯ ಎಂದರೇನು? ಪರಂಪರೆ ಎಂದರೇನು? ಯಾವುದು ಪರಂಪರೆ? ಯಾವುದು ಸಂಪ್ರದಾಯ? ಎಂಬುದನ್ನು ಲೇಖಕರು ಸ್ಪಷ್ಟವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ.

೬. **ನಾಗರತ್ನ ಕುಮಾರಿ. ಬಿ. ಎಸ್. 'ಸಾಹಿತ್ಯ ವಿಮರ್ಶೆ–೨೦೦೬'** :– ಇದೊಂದು ಸಂಶೋಧನಾ ಲೇಖನಗಳ ಸಂಗ್ರಹ. ಇದರಲ್ಲಿ ಎಚ್. ಎಸ್. ರಾಘವೇಂದ್ರ ರಾವ್ ಅವರ ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆ ಪ್ರತಿಭೆ ಎಂಬ ಲೇಖನದಲ್ಲಿ ಪರಂಪರೆಯ ಕುರಿತ ವಿವರಣೆಯಿದೆ. ಪರಂಪರೆ ಎನ್ನುವುದು ಹತ್ತು ಹಲವು ಹೊಳೆಗಳ ಕೂಡು ಹರಿಯುವಿಕೆ. ಪ್ರತಿಯೊಬ್ಬ ಕವಿಯೂ ತನಗೆ ಬೇಕೆನಿಸಿದ ಹೊಳೆಯ ನೀರನ್ನು ಮೊಗೆದು ಕುಡಿಯುತ್ತಾನೆ. ಎಂದರೆ ತನ್ನ ಅಗತ್ಯಗಳಿಗೆ ಅನುಕೂಲವಾದ ಪರಂಪರೆಯನ್ನು ತಾನೇ ಕಟ್ಟಿಕೊಳ್ಳುತ್ತಾನೆ.

೭. **ರಹಮತ್ ತರೀಕೆರೆ 'ಪ್ರತಿ ಸಂಸ್ಕೃತಿ'** :–ಇದು ೧೬ ಲೇಖನಗಳನ್ನು ಒಳಗೊಂಡ ಒಂದು ವಿಮರ್ಶಾ ಸಂಕಲನವಾಗಿದೆ. ಈ ಲೇಖನಗಳಲ್ಲಿ ಒಂದು ಲೇಖನದಲ್ಲಿ ಲೇಖಕರು ಆಧುನಿಕತೆಯನ್ನು ಅನಂತಮೂರ್ತಿಯವರ ಕಾದಂಬರಿಗಳ ಮೂಲಕ ಚರ್ಚಿಸಿದ್ದಾರೆ. ಕುವೆಂಪು ಅಥವಾ ಅವರ ತಲೆಮಾರಿನ

ಎಲ್ಲ ಲೇಖಕರ ಅನುಭವವೇ ಆಧುನಿಕತೆಯ ಒತ್ತಡಕ್ಕೆ ಸಿಕ್ಕಿ ಭಾರತೀಯ ಸಮಾಜವು ಬದಲಾಗುತ್ತಿದ್ದ ಪರಿಯಾಗಿತ್ತು. ಕರ್ನಾಟಕದಲ್ಲಿರುವ ಹಳ್ಳಿಗಳೇ ಆಲನಹಳ್ಳಿ ಕಾದಂಬರಿಗಳ ವಸ್ತುವಾಗಿರುವುದರಿಂದ ಅಲ್ಲಿ ಕೂಡ ಆಧುನಿಕತೆಯ ಪ್ರಭಾವವನ್ನು ನಾವು ಕಾಣಬಹುದಾಗಿದೆ. ಕನ್ನಡದಲ್ಲಿ ಆಧುನಿಕತೆ ಎಂಬ ಶಬ್ದವನ್ನು ನಗರಕ್ಕೆ ಸಂಬಂಧಿಸಿದುದು, ಗ್ರಾಮೀಣವಲ್ಲದ್ದು, ಇತ್ತೀಚಿನದು, ವಿದ್ಯಾವಂತರ-ಶಿಷ್ಟರ ಜಗತ್ತಿನದು, ವೈಚಾರಿಕವಾದುದು, ಪ್ರಗತಿಪರವಾದುದು, ವೈಜ್ಞಾನಿಕವಾದುದು ಇತ್ಯಾದಿ ಅರ್ಥಗಳಲ್ಲಿ ಬಳಸಲಾಗುತ್ತದೆ. ಇಡೀ ಆಧುನಿಕತೆಯ ಪರಿಕಲ್ಪನೆಯೇ ವಸಾಹತೀಕರಣ, ಕೈಗಾರಿಕೀಕರಣ, ನಗರೀಕರಣಗಳ ಜತೆಯಲ್ಲಿ ನಮ್ಮ ಅನುಭವವಾಗಿರುವಂಥದ್ದಾಗಿದೆ.

ಲೇಖಕರು ಆಧುನಿಕತೆಯನ್ನು ವಿಶ್ಲೇಷಿಸಲು ಆಲನಹಳ್ಳಿಯವರ ಭುಜಂಗಯ್ಯನ ದಶಾವತಾರ, ಶಿವರಾಮ ಕಾರಂತರ ಚೋಮನದುಡಿ ಮತ್ತು ದೇವನೂರರ ಒಡಲಾಳ ಕಾದಂಬರಿಗಳನ್ನು ಬಳಸಿಕೊಂಡಿದ್ದಾರೆ. ಇವುಗಳ ಮೂಲಕ ಆಧುನಿಕತೆಯ ವಿವಿಧ ಮುಖಗಳನ್ನು ಈ ಲೇಖನದಲ್ಲಿ ಲೇಖಕರು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

೮. ಶಂಕರ ನಾರಾಯಣ. ತೀ. ನಂ.(ಪ್ರ. ಸಂ) 'ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು' :-

ಈ ಕೃತಿಯಲ್ಲಿ ಆಧುನಿಕತೆಯನ್ನು ಕುರಿತ ಎಂಟು ಲೇಖನಗಳಿವೆ. ಆಧುನಿಕತೆ ಮತ್ತು ಕನ್ನಡ ನವೋದಯ ಕಾವ್ಯ, ಆಧುನಿಕತೆ ಮತ್ತು ದಲಿತ-ಬಂಡಾಯ ಕಾವ್ಯ, ಆಧುನಿಕತೆ ಮತ್ತು ದಲಿತ-ಬಂಡಾಯ ನಾಟಕ ಈ ಮೂರು ಲೇಖನಗಳು ಭಾಗ-೧, ಆಧುನಿಕತೆ ಕನ್ನಡ ಕಾವ್ಯ ಮತ್ತು ನಾಟಕ ಶೀರ್ಷಿಕೆಯಡಿಯಲ್ಲಿ ಬರುತ್ತವೆ. ಆಶಯ ಭಾಷಣದಲ್ಲಿ ಜಿ. ಎಸ್. ಆಮೂರ ಆಧುನಿಕತೆ, ನವ್ಯತೆ ಹಾಗೂ ನವೋತ್ತರ ಎನ್ನುವ ಪರಿಭಾಷೆಯ ಪದಗಳನ್ನು ಕುರಿತು ಮಾತನಾಡುತ್ತಾರೆ. ಆಧುನಿಕತೆ ಮತ್ತು ಕನ್ನಡ ನವೋದಯ ಕಾವ್ಯ ಕುರಿತು ಚಂದ್ರಶೇಖರ ನಂಗಲಿಯವರ ಒಂದು ಲೇಖನವಿದೆ. ಈ ಲೇಖನದಲ್ಲಿ ಆಧುನಿಕತೆಯನ್ನು ವಿವರಿಸಲು ಪೂಜೆ ಎಂಬ ಪರಿಕಲ್ಪನೆಯನ್ನು ಬಳಸಿಕೊಂಡು, ಉದಾಹರಣೆಗೆ ಅಲ್ಲಮ ಪ್ರಭು ಹೇಳಿದ ವಚನವನ್ನು ವಿಶ್ಲೇಷಿಸಿದ್ದಾರೆ. ಹಾಗೇ ಬಿ.ಎಂ.ಪುಟ್ಟಯ್ಯನವರು ಆಧುನಿಕತೆಯನ್ನು ೨ ನೆಲೆಗಳಲ್ಲಿ ವಿವರಿಸಿದ್ದಾರೆ ಒಂದು ಸಾಹಿತ್ಯಿಕನೆಲೆ. ಎರಡು ಸಾಹಿತ್ಯೇತರ ನೆಲೆ. ವಿಷಯ ವಿಶ್ಲೇಷಣೆಗಾಗಿ ಹೆಚ್. ಗೋವಿಂದಯ್ಯ ಮತ್ತು ಸಿದ್ದಲಿಂಗಯ್ಯನವರ ಪದ್ಯಗಳನ್ನು ಬಳಸಿಕೊಂಡು ಆಧುನಿಕತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಆಧುನಿಕತೆ ಮತ್ತು ಕನ್ನಡ ದಲಿತ ಬಂಡಾಯ ನಾಟಕ- ಲೇಖನದಲ್ಲಿ ಕಾ.ವೆಂ.ಶ್ರೀನಿವಾಸಮೂರ್ತಿಯವರು ಆಧುನಿಕತೆಯನ್ನು ವಿವರಿಸಲು ಎರಡು ಆಯಾಮಗಳನ್ನು ಬಳಸಿಕೊಂಡಿದ್ದಾರೆ. ಒಂದು ಇತ್ಯಾತ್ಮಕ, ಎರಡು ನೇತ್ಯಾತ್ಮಕ. ಇವನ್ನು ವಿವರಿಸಲು ಉದಾಹರಣೆಗಾಗಿ-ವಿಜ್ಞಾನವನ್ನು ತೆಗೆದುಕೊಂಡಿದ್ದಾರೆ. ಇದನ್ನು ವಿವೇಕದಿಂದ ಬಳಸಿಕೊಂಡರೆ ಅಲ್ಲಿ ಪ್ರಗತಿ ಸಾಧ್ಯವಾಗುತ್ತದೆ. ಅಂತೆಯೇ ಅವಿವೇಕದಿಂದ ಬಳಸಿಕೊಂಡರೆ ಅದು ಪರಿಮಾಣು ಬಾಂಬಾಗಿ ಹಿರೋಷಿಮಾ, ನಾಗಸಾಕಿಗಳ ಮೇಲೆ ಬೀಳುತ್ತದೆ. ಹೀಗೆ ಆಧುನಿಕತೆಯನ್ನು ಅರ್ಥೈಸಲು ಅನೇಕ ಉದಾಹರಣೆಗಳನ್ನು ಈ ಲೇಖನದಲ್ಲಿ ಬಳಸಿಕೊಂಡಿದ್ದಾರೆ.

ಭಾಗ- ೨ ರಲ್ಲಿ ಕೂಡ ನಾಲ್ಕು ಲೇಖನಗಳಿದ್ದು, ಅವು ಕೂಡ ಆಧುನಿಕತೆಯನ್ನು ಕುರಿತ ವಿವರಗಳೇ ಆಗಿವೆ. ಪ್ರೊ. ಡಿ.ಎ.ಶಂಕರ್ ಆಶಯ ಭಾಷಣದಲ್ಲಿ ಆಧುನಿಕತೆಯನ್ನು ಕುರಿತು ಮಾತನಾಡುವಾಗ ಆಧುನಿಕತೆ ಎನ್ನುವ ಪರಿಕಲ್ಪನೆ ಹಾಗಿರಲಿ, ಆಧುನಿಕತೆ ಎನ್ನುವ ಮಾತೇ ನಮ್ಮ ಭಾಷಾಭಂಡಾರಕ್ಕೆ ಇತ್ತೀಚೆಗೆ ಬಂದದು, ಸೇರ್ಪಡೆಯಾದುದು. ಎಷ್ಟು ಹೊಸದು ಎಂದರೆ ಇಪ್ಪತ್ತನೆಯ ಶತಮಾನದ ಮೊದಲ ದಶಕದವರೆಗೂ ಅದು ಚಾಲ್ತಿಯಲ್ಲಿ ಇರಲಿಲ್ಲ. ೧೮೯೬ ರಲ್ಲಿ ಅಂದರೆ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಪ್ರಕಟವಾದ ಕಿಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟಿನಲ್ಲೂ ಪ್ರವೇಶ ಪಡೆದಿಲ್ಲ. ನಂತರ ಬಂದ ಮರಿಯಪ್ಪಭಟ್ಟರ ಪರಿಷ್ಕೃತ ಕಿಟಿಲ್ ನಿಘಂಟಿನಲ್ಲೂ ಇದಕ್ಕೆ ಸ್ಥಾನವಿಲ್ಲ ಎಂದು ಹೇಳುವ ಮೂಲಕ ಆಧುನಿಕತೆ ಪದದ ಬಳಕೆ ಕುರಿತು ಹೇಳಿದ್ದಾರೆ. “ಆಧುನಿಕತೆ ಕನ್ನಡ ದಲಿತ-ಬಂಡಾಯ ಸಣ್ಣಕತೆ” ಲೇಖನದಲ್ಲಿ ಸಣ್ಣರಾಮ ಆಧುನಿಕತೆಯನ್ನು ಈ ರೀತಿ ವ್ಯಾಖ್ಯಾನಿದ್ದಾರೆ. ಆಧುನಿಕತೆ ಎಂದರೆ ಈ ಕ್ಷಣದ ಪ್ರತಿಕ್ರಿಯೆ. ಈ ಕ್ಷಣದ ಪ್ರತಿಕ್ರಿಯೆಗೆ ಭೂತದ ಅನುಭವ ಮುಖ್ಯ ಭೂತದ ಅನುಭವದ ಮೇಲೆ ಬದುಕನ್ನು ಕಟ್ಟಲು ಅಲೋಚಿಸುವ, ರೂಪಿಸುವ ಸಮಗ್ರ ವಿನ್ಯಾಸ ನನ್ನ ಪಾಲಿಗೆ ಆಧುನಿಕತೆ ಎಂದು ಹೇಳಿ ಅದನ್ನು ಅರ್ಥೈಸಲು ಜನಾರ್ದನ ಎರ್ಪಕಟ್ಟೆ ಯವರ ‘ಲೆಕ್ಕ’, ಮನಜ ಅವರ ‘ಕಾಲ’ ಕಥೆಗಳನ್ನು ಬಳಸಿಕೊಂಡಿದ್ದಾರೆ.

‘ಆಧುನಿಕತೆ ಯುರೋಪ್ ಮತ್ತು ಅಮೆರಿಕಾ ಪ್ರವಾಸ ಸಾಹಿತ್ಯ’ ಈ ಲೇಖನದಲ್ಲಿ ಪ್ರೊ. ಲಕ್ಷ್ಮೀನಾರಾಯಣ ಅರೋರ ಅವರು ಆಧುನಿಕತೆ ಎಂಬ ಪದವನ್ನು ವಿಶೇಷವಾದ ಅರ್ಥದಲ್ಲಿ ಬಳಕೆ ಮಾಡಲಾಗುತ್ತದೆ ಎನ್ನುತ್ತಾರೆ. ಹೊಸದು ಎಂಬ ಸಾರ್ವತ್ರಿಕ ಅರ್ಥವುಳ್ಳ ಮಾತಿದು. ಆಧುನಿಕತೆ ಎಂಬ ಪದವನ್ನು ಈಚೆಗೆ ವಿಶಿಷ್ಟವಾದ ಪಾರಿಭಾಷಿಕ ಹಿನ್ನೆಲೆಯಲ್ಲಿ ಬಳಕೆಮಾಡಲಾಗುತ್ತದೆ. ಆದರೆ ಈಚಿನ ಅಧ್ಯಯನಗಳ ಹಿನ್ನೆಲೆಯಲ್ಲಿ ಆಧುನಿಕತೆ ಎಂಬುದು ‘ಆಧುನಿಕಕಾಲ’ ಎಂಬ ಅರ್ಥದಲ್ಲಿ ಈ ಪದದ ಬಳಕೆಯಾಗುವುದು ಇಂದು ರೂಢಿಯಲ್ಲಿದೆ ಎಂದು ವ್ಯಾಖ್ಯಾನಿಸಿದ್ದಾರೆ.

‘ಆಧುನಿಕತೆ ಜಗತ್ತಿನ ಇತರ ದೇಶಗಳ ಪ್ರವಾಸ ಸಾಹಿತ್ಯ’ ಈ ಲೇಖನದಲ್ಲಿ ಆಧುನಿಕತೆ ಕುರಿತು ಎಂ. ಆರ್ಮುಗಂ ಈ ರೀತಿ ವಿವರಿಸಿದ್ದಾರೆ. ಭಾರತೀಯ ಸಂದರ್ಭದಲ್ಲಿ ಆಧುನಿಕತೆಯನ್ನು ನಿರ್ವಚಿಸಿಕೊಳ್ಳಲು ಹಲವು ಸಾಮಾಗ್ರಿಗಳು ದೊರೆಯುತ್ತವೆ. ಮೂಲ ಚಿಂತನೆಗಳು ಮತ್ತು ಅದರ ಮೇಲೆ ನಡೆದಿರುವ ವಾಗ್ವಾದಗಳ ನೆಲೆಯಲ್ಲಿ ಇದನ್ನು ಅರ್ಥೈಸಿಕೊಳ್ಳಬಹುದು. ಭಿಕು ಪರೇಖ್ ವಸಾಹತುಶಾಹಿ ಮತ್ತು ಸಂಪ್ರದಾಯದ ಕುರಿತಾಗಿ ಬರೆದ ಕೊಲನಿಯಲಿಸಂ, ಟ್ರೆಡಿಷನ್ ಅಂಡ್ ರಿಫಾರ್ಮ್‌ನಲ್ಲಿ ಪ್ರಮುಖ ವಿಭಾಗಗಳನ್ನು ಕಲ್ಪಿಸಿಕೊಂಡಿರುತ್ತಾರೆ.

೧. ಪರಂಪರವಾದ

೨. ಆಧುನಿಕತಾವಾದ

೩. ವಿಮರ್ಶಾತ್ಮಕ ಆಧುನಿಕತಾವಾದ

೪. ವಿಮರ್ಶಾತ್ಮಕ ಪರಂಪರವಾದ

ಇವುಗಳ ನೆಲೆಯಲ್ಲಿ ಚಿಂತನೆಗಳನ್ನು ಕ್ರೋಢೀಕರಿಸಿದ್ದಾರೆ. ಇವರಲ್ಲದೆ ರಾಜರಾಮ್ ಮೋಹನರಾಯ್, ಬಿ.ಎನ್.ರಾಯ್, ಗಾಂಧೀಜಿ, ಅಂಬೇಡ್ಕರ್, ಅರವಿಂದೋ, ರವೀಂದ್ರನಾಥ್ ಠಾಗೂರ್, ವಿವೇಕಾನಂದ, ಆಶೀಶ್‌ನಂದಿ, ಸತ್ವಾಲ್ ಸಂಗನ್, ರೋಮಿಲಾ, ಥಾಪರ್, ರಣಜಿತ್ ಗುಹಾ, ಬ್ಯೂಸ್ರ್, ಕಾರ್ಲೈಲ್, ರಾಬರ್ಟ್ಸ್‌ನ್, ಎಡ್ವರ್ಡ್‌ಸೈದ್, ಡಿ.ಆರ್.ನಾಗರಾಜ್. ಮೊದಲಾದವರ ಮೂಲಕ ಆಧುನಿಕತೆಯನ್ನು ಕಟ್ಟಿಕೊಳ್ಳಬಹುದು ಎಂದು ಹೇಳಿದ್ದಾರೆ.

'ಆಧುನಿಕತೆ ಭಾರತ ಮತ್ತು ಕರ್ನಾಟಕದ ಪ್ರವಾಸ ಸಾಹಿತ್ಯ' ಬಿ.ಶಿವರಾಮಶೆಟ್ಟಿಯವರು ಈ ಲೇಖನದಲ್ಲಿ ಕೂಡ ಆಧುನಿಕತೆಯನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆಧುನಿಕತೆ ಎಂದರೇನು ಎನ್ನುವ ನಿರ್ವಚನ ಆಧುನಿಕತೆ ಅಲ್ಲದಿರುದನ್ನು ಕೂಡ ನಿರ್ವಚಿಸಿಕೊಳ್ಳುವುದರ ಜೊತೆಗೆ ಆಧುನಿಕತೆ ಅಲ್ಲದಿರುವುದನ್ನೂ ನಿರ್ವಚಿಸುತ್ತಿರುತ್ತೇವೆ. ಈ ಅರ್ಥದಲ್ಲಿ ಆಧುನಿಕತೆಯ ನಿರ್ವಚನದಲ್ಲೇ ಯಾವುದು ಆಧುನಿಕ, ಯಾವುದು ಆಧುನಿಕತೆಗೆ ವಿರೋಧವಾಗಿರುವುದು ಅನ್ನುವ ವರ್ಗೀಕರಣವನ್ನು, ವಿಭಾಗೀಕರಣವನ್ನು, ಪ್ರತ್ಯೇಕೀಕರಣವನ್ನು ಕಾಣಬಹುದು.

೯. ತೀ.ನಂ.ಶಂಕರನಾರಾಯಣ (ಪ್ರ.ಸಂ)., 'ಆಧುನಿಕತೆ ಮತ್ತು ಕನ್ನಡ ಕಾದಂಬರಿ' :–ಇದೊಂದು ಸಂಶೋಧನಾ ಲೇಖನಗಳ ಸಂಗ್ರಹ. ಈ ಸಂಗ್ರಹದಲ್ಲಿ ಏಳು ಲೇಖನಗಳಿವೆ. ಅವೆಲ್ಲವೂ ಕೂಡ ಆಧುನಿಕತೆಯ ಕುರಿತ ಲೇಖನಗಳೇ ಆಗಿವೆ. ಆಧುನಿಕತೆಯನ್ನು ಕುರಿತು ಮಾತಾಡುವಾಗ ನಾವು ಆಧುನಿಕತೆ ಮತ್ತು ನವ್ಯತೆ ತೀರಾ ಭಿನ್ನ ಅರ್ಥ ಕೊಡುವ ಪರಿಕಲ್ಪನೆಗಳಾಗಿವೆ. ಇಂಗ್ಲೀಷಿನ modernity ಎಂಬುದನ್ನು ಆಧುನಿಕತೆ ಎಂದು modernism ಎಂಬುದನ್ನು ನವ್ಯತೆ ಎಂದೂ ನಾವು ಸಾಂಸ್ಕೃತಿಕ ಸಂಕಥನದಲ್ಲಿ ಬಳಸುತ್ತಿದ್ದೇವೆ. ಇಂಗ್ಲೀಷಿನ modernity ಮತ್ತು modernism ಎಂಬ ಎರಡು ಶಬ್ದಗಳು ಒಂದೇ ಮೂಲದಿಂದ ಬಂದಿರುವುದರಿಂದ ಅವುಗಳ ಅರ್ಥಗಳಲ್ಲಿ ಸ್ವಲ್ಪ ಗೊಂದಲವಾಗಿದೆ. ಇದಕ್ಕೆ ಪೂರಕವಾಗಿ ಈ ಮುಂದಿನ ಲೇಖನಗಳನ್ನು ಗಮನಿಸಬಹುದು.

"ಆಧುನಿಕತೆ ಮತ್ತು ನವೋದಯ ಪೂರ್ವ ಕಾದಂಬರಿ"

ಈ ಲೇಖನದಲ್ಲಿ ಸತ್ಯನಾರಾಯಣ ಮಲ್ಲಿಪಟ್ಟಣ ಅವರು ಆಧುನಿಕತೆಯನ್ನು ವಿಸ್ತರಿಸಲು ಮೆಕಾಲೆ ಮತ್ತು ನಂತರದ ಇಂಗ್ಲೀಷ್ ಶಿಕ್ಷಣವನ್ನು ಕುರಿತು ವಿವರಿಸಿದ್ದಾರೆ. ಜೊತೆಗೆ ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ', ತಿರುಮಲಾಂಬಾರ 'ನಭಾ' ಕಾದಂಬರಿಗಳನ್ನು ಬಳಸಿಕೊಂಡು ಆಧುನಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

"ಆಧುನಿಕತೆ ಮತ್ತು ನವೋದಯ ಕಾದಂಬರಿ"

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯ ಒಂದು ಹೊಸ ಮಹತ್ವದ ಬೆಳವಣಿಗೆಯನ್ನು ಕಂಡಿತು. ಅದೆಂದರೆ ಕನ್ನಡಕ್ಕೆ ವಿವಿಧ ರೀತಿಯ ಗದ್ಯ ಕಥಾನಕಗಳ ಆಗಮನ. ಸಂಸ್ಕೃತ, ಇಂಗ್ಲೀಷ್, ಬಂಗಾಳಿ ಮರಾಠಿ ಭಾಷೆಗಳಿಂದ ಕನ್ನಡವು ಅನುವಾದ, ರೂಪಾಂತರ, ಅನುಕರಣೆ, ಪುನರ್ ನಿರೂಪಣೆಗಳ ಮೂಲಕ ಅನೇಕ ಬಗೆಯ ಗದ್ಯ ರಚನೆಗಳನ್ನು ಪಡೆಯಿತು. ಹಾಗೆ

ಮುಂದುವರಿದು ಆಧುನಿಕತೆಯನ್ನು ವಿವರಿಸಲು ಟಿ.ಪಿ.ಅಶೋಕರು ಗಳಗನಾಥರ 'ಮಾಧವ ಕರುಣಾವಿಲಾಸ' (೧೯೩೨), ಪಂಜೆಮಂಗೇಶರಾಯರ 'ಕೊಟಿಚೆನ್ನಯ್ಯ' (೧೯೨೪), ಕೆರೂರು ವಾಸುದೇವಾಚಾರ್ಯರ 'ಯದುಮಹಾರಾಜ', ಮಾಸ್ತಿಯವರ 'ಚಿಕವೀರ ರಾಜೇಂದ್ರ' ಮುಂತಾದ ಕೃತಿಗಳ ಜೊತೆಗೆ ಅನಂತಮೂರ್ತಿಯವರ ಕ್ಲಿಪ್ ಜಾಯಿಂಟ್, ಘಟಶ್ರಾದ್ಧ, ಸೂರ್ಯನ ಕುದುರೆ, ಅಕ್ಕಯ್ಯ ಮೊದಲಾದ ಕಥೆಗಳನ್ನು ಆಧುನಿಕತೆಯ ನೆಲೆಯಲ್ಲಿ ಅರ್ಥೈಸಲು ಸಾಧ್ಯ.

ಒಟ್ಟಾರೆಯಾಗಿ ಆಧುನಿಕತೆಯನ್ನು ಅರ್ಥೈಸಿಕೊಳ್ಳಲು ಮತ್ತು ವಿವರಿಸಲು ಈ ಮೇಲಿನ ಲೇಖನಗಳು ಮುಖ್ಯವಾಗಿವೆ. ಅಷ್ಟೇ ಅಲ್ಲ ಆಧುನಿಕತೆ ಮತ್ತು ಪ್ರಗತಿಶೀಲ ಕಾದಂಬರಿ, ಆಧುನಿಕತೆ ಮತ್ತು ನವ್ಯ ಕಾದಂಬರಿ, ಆಧುನಿಕತೆ ಮತ್ತು ಬಂಡಾಯ ಕಾದಂಬರಿ ಈ ಮೂರು ಲೇಖನಗಳು ಕೂಡ ಆಧುನಿಕತೆಗೆ ಪೂರಕವಾಗಿವೆ.

೧೦. **ಶಂಕರ ನಾರಾಯಣ ತೀ.ನಂ., 'ಆಧುನಿಕತೆ ಮತ್ತು ಕನ್ನಡ ಸಾಹಿತ್ಯ' :–** ಈ ವಿಮರ್ಶಾಕೃತಿಯಲ್ಲಿ ಆಧುನಿಕತೆಗೆ ಸಂಬಂಧಿಸಿದ ಎಂಟು ಉಪನ್ಯಾಸಗಳೂ ಕೂಡ ಲೇಖನಗಳಾಗಿ ಪ್ರಕಟವಾಗಿವೆ. ಕೃತಿಯ ಆರಂಭದಲ್ಲಿ ಆಧುನಿಕತೆಯ ಬೆಳವಣಿಗೆಯನ್ನು ಮುಖ್ಯವಾದ ಮುಖ್ಯ ಘಟಕಗಳಾಗಿ ವಿಂಗಡಿಸಿ ಅವುಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ.

- **ವೈಚಾರಿಕತೆ:–** ವಿದ್ಯಾಪುನರುಜ್ಜೀವನ ಮತ್ತು ಜ್ಞಾನಪರ್ವಗಳ ಕಾಲದಲ್ಲಿ ಮನುಷ್ಯನ ವೈಚಾರಿಕತೆಗೆ, ವೈಜ್ಞಾನಿಕ ದೃಷ್ಟಿಗೆ ಹೆಚ್ಚು ಮಹತ್ವ ದೊರೆಯಿತು. ಅಮೇರಿಕ ಮತ್ತು ಫ್ರಾನ್ಸ್‌ನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆ ಆದಂದಿನಿಂದ ಜಗತ್ತಿನ ಅನೇಕ ದೇಶಗಳು ಸ್ವಾತಂತ್ರ್ಯಗಳಿಸಿವೆ. ಪ್ರಜಾಪ್ರಭುತ್ವದ ಜೊತೆಯಲ್ಲಿಯೇ ಕಮ್ಯೂನಿಸಂ, ಫ್ಯಾಸಿಸಂ, ಸರ್ವಾಧಿಕಾರಿ ರಾಜಕೀಯ ವ್ಯವಸ್ಥೆಗಳೂ ರೂಪುಗೊಂಡವು.

- **ಕೈಗಾರೀಕರಣ:–** ಆಧುನಿಕತೆಗೆ ಒಂದು ಹೊಸ ಆಯಾಮವನ್ನು ನೀಡಿದ ಪ್ರಕ್ರಿಯೆಯೇ ಕೈಗಾರೀಕರಣ. ಗ್ರಾಮಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಜನರು ಕೈಗಾರಿಕೆಗಳಲ್ಲಿ ಕೆಲಸ ಮಾಡಲು ನಗರಕ್ಕೆ ಬೃಹತ್ ಪ್ರಮಾಣದಲ್ಲಿ ವಲಸೆ ಬಂದರು. ನಗರೀಕರಣ ಕೈಗಾರೀಕರಣದ ಒಂದು ಭಾಗವೇ ಆಯಿತು.

- **ವಸಾಹತುಶಾಹಿ:–** ಆಧುನಿಕತೆಯ ವೈಚಾರಿಕತೆಯಿಂದ ಸಮರ್ಥನೆ ಪಡೆದ ವಸಾಹತು ಶಾಹಿ ಪ್ರಕ್ರಿಯೆ ಕೈಗಾರಿಕೀಕರಣಕ್ಕೆ ಅನುಕೂಲವಾಗಿ ಒದಗಿ ಬಂದಿತು. ಕೈಗಾರಿಕೆಗಳಿಗೆ ಬೃಹತ್ ಪ್ರಮಾಣದಲ್ಲಿ ಕಚ್ಚಾವಸ್ತುಗಳು ಬೇಕಾಗಿದ್ದು, ಪಾಶ್ಚಾತ್ಯ ದೇಶಗಳು ತಮ್ಮ ವಸಾಹತುಗಳಿಂದ ಜನರನ್ನು ಹೆದರಿಸಿ, ಬೆದರಿಸಿ ಅಥವಾ ಸ್ಥಳೀಯ ಮುಖಂಡರಿಗೆ ಲಂಚಕೊಟ್ಟು ಅತ್ಯಂತ ಕಡಿಮೆ ಬೆಲೆಗೆ ಕೊಂಡರು. ಕೊಡದಿದ್ದಾಗ ಅವರನ್ನು ಕೊಂದು ತಮಗೆ ಬೇಕಾದ್ದನ್ನು ಲೂಟಿ ಮಾಡಿದ್ದರಿಂದ. ವಸಾಹತುಶಾಹಿ ದೇಶಗಳಲ್ಲಿ ಒಂದು ವರ್ಗದ ಜನ ಶ್ರೀಮಂತರಾದರು. ಕೆಳವರ್ಗದ ಅನೇಕರು ಬಡವರಾಗಿಯೇ ಉಳಿದರು. ಆದರೆ ಕೈಗಾರಿಕೀಕರಣದಿಂದ ವಸಾಹತೀಕರಣಕ್ಕೆ ಎರಡನೆಯ

ಆಯಾಮ ದೊರೆಯಿತು. ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ವಸಾಹತುಗಳಿಂದ ಪಡೆದುಕೊಂಡು, ಕೈಗಾರಿಕೆಗಳಲ್ಲಿ ಅವನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಿ ಅನೇಕ ಪಟ್ಟು ಹೆಚ್ಚಿನ ಬೆಲೆಗೆ ಆ ವಸಾಹತು ಪ್ರದೇಶಗಳ ಜನರಿಗೆ ಮಾರಿ ಅಪಾರವಾದ ಲಾಭಗಳಿಸಿಕೊಂಡರು. ಹೀಗೆ ಈ ಮೇಲಿನ ಮೂರು ಅಂಶಗಳಲ್ಲಿ ಸಂಪಾದಕರು ಆಧುನಿಕತೆಯನ್ನು ವಿವರಿಸಲು ಪೂರ್ವ ಪೀಠಿಕೆಯನ್ನು ಹಾಕಿದ್ದಾರೆ.

೧೧. **ಪ್ರಭುಶಂಕರ, 'ಸಾಹಿತ್ಯ ಮತ್ತು ಆಧುನಿಕತೆ'** :- ಇದೊಂದು ೬೦ ಪುಟ್ಟದ ಚಿಕ್ಕ ಪುಸ್ತಕ. ಇದರಲ್ಲಿ ಮೊದಲನೆಯದು ಪಶ್ಚಿಮದಲ್ಲಿ ಆಧುನಿಕತೆ, ಎರಡನೆಯದು ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಮತ್ತು ಕೊನೆಯದು ಕೆಲವು ನಿದರ್ಶನಗಳು ಹೀಗೆ ಮೂರು ಭಾಗಗಳಾಗಿ ವಿಂಗಡಿಸಿಕೊಂಡು ಲೇಖಕರು ಆಧುನಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

• **ಪಶ್ಚಿಮದಲ್ಲಿ ಆಧುನಿಕತೆ:-** ೧೯೦೦ನ್ನು ಆಧುನಿಕತೆಯ ಪ್ರವೇಶದ ವರ್ಷವನ್ನಾಗಿ ಗುರುತಿಸಿ, ಆಧುನಿಕ ಜಗತ್ತಿನ ಆಲೋಚನಾ ವಿಧಾನಗಳನ್ನೇ ಕ್ರಾಂತಿಕಾರಕವಾಗಿ ಬದಲಾಯಿಸಿದ ಕೆಲವು ಘಟನೆಗಳು ನಡೆದಿದ್ದೂ ಇದೇ ವರ್ಷದಲ್ಲಿ ಎಂದು ಖಚಿತವಾಗಿ ಹೇಳಿದ್ದಾರೆ. ಸಿಗ್ಮಂಡ್ ಫ್ರಾಯ್ಡ್‌ನ ಮಹತ್ವಪೂರ್ಣ ಕೃತಿ "ಸ್ವಪ್ನಗಳ ವ್ಯಾಖ್ಯಾನ" ಪ್ರಕಟವಾದದ್ದು ಇದೇ ವರ್ಷದಲ್ಲಿ. ಹಾಗೇ ಮುಂದುವರಿದು ನೋಡುವುದಾದರೆ ಇವೆಲ್ಲಕ್ಕಿಂತ ಮುಖ್ಯವಾದ ಘಟನೆ ಮೊದಲನೆಯ ಮಹಾಯುದ್ಧ (೧೯೧೪-೧೯೧೮). ಈ ಯುದ್ಧದಲ್ಲಿ ಇಪ್ಪತ್ತೂರು ದೇಶಗಳು ಭಾಗಿಯಾಗಿದ್ದವು. ೬೫,೦೦೦,೦೦೦ ಜನ ಹೋರಾಟದಲ್ಲಿ ಭಾಗವಹಿಸುವ ಸೈನಿಕರಾದರು. ಇವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನ ಸತ್ತರು ಎಂಬ ಇತ್ಯಾದಿ ವಿವರಗಳನ್ನು ಲೇಖಕರು ಈ ಕೃತಿಯಲ್ಲಿ ಬರೆದಿದ್ದಾರೆ.

ಕಲೆ ಸಾಹಿತ್ಯಗಳಲ್ಲಿ ಪಶ್ಚಿಮದಲ್ಲಿ "ಆಧುನಿಕತೆ" ಎನ್ನುವುದರ ಅವಧಿ ೧೮೭೦ ರಿಂದ ೧೯೭೦ ರ ವರೆಗೆ ಎಂದು ಅನೇಕ ವಿದ್ವಾಂಸರು ಸೂಚಿಸಿದ್ದಾರೆ. ಈ ಅವಧಿಯಲ್ಲಿ "ಹೊಸದು" ಎನ್ನುವುದರ ಕಡೆಗೆ ಜನರ ಒಲವು ಹರಿಯತೊಡಗಿತ್ತು ಎನ್ನುತ್ತಾರೆ.

• ಪಾಶ್ಚಾತ್ಯ ವಿಮರ್ಶಕರ ಪ್ರಕಾರ ಆಧುನಿಕತೆ ಎಂದರೆ ಆಧುನಿಕತೆ ಎಂಬುದು ಸಮಕಾಲೀನತೆ ಅಲ್ಲ, ಎಂಬುದನ್ನು ನೆನಪಿಡಬೇಕು. ಅಷ್ಟೇ ಅಲ್ಲ "ನವೀನತೆಯೂ" ಆಧುನಿಕತೆ ಅಲ್ಲ. ಕೇವಲ ಯಂತ್ರೋಪಕರಣಗಳ ಉಲ್ಲೇಖವೂ ಆಧುನಿಕತೆಯಲ್ಲ. ಇದರ ಸ್ಪಷ್ಟಿಕರಣ ಹೀಗಾಗುತ್ತದೆ. ನಮ್ಮ ಸುತ್ತ ನಡೆಯುತ್ತಿರುವ ಘಟನೆಗಳನ್ನು ರಾಜಕೀಯ ಅಥವಾ ಸಾಮಾಜಿಕ ಸ್ಥಿತಿಗತಿಗಳನ್ನು ವಸ್ತುಗಳನ್ನಾಗಿ ಮಾಡಿಕೊಂಡ ಕೂಡಲೇ ಅಂಥ ಬರವಣಿಗೆ ಆಧುನಿಕ ಆಗುವುದಿಲ್ಲ ಅದು ಸಮಕಾಲೀನ ಅಷ್ಟೇ. ಯಾವುದಾದರೂ ಇತ್ತೀಚಿನ ಫ್ಯಾಷನ್ ಅನ್ನು ವಸ್ತುವಾಗಿ ಆರಿಸಿಕೊಂಡರೊ? ಅಲ್ಲಿ ವಸ್ತು "ನವೀನ" ಅಷ್ಟೇ. ಆಧುನಿಕ ಅಲ್ಲ. ಇನ್ನು ಯಂತ್ರೋಪಕರಣಗಳ ಪಟ್ಟಿಯಾಗಲೀ, ವರ್ಣನೆಯಾಗಲೀ ಆಧುನಿಕವಾಗಲಾರದು. ಪುಷ್ಪಕ ವಿಮಾನದ ವರ್ಣನೆಯ ಬದಲು ಬೋಯಿಂಗ್ ೭೦೭ ಅಥವಾ ಏರ್ ಬಸ್ಸನ್ನು ವರ್ಣಿಸಿದರೆ ವಸ್ತು ಬದಲಾಯಿತೇ ಹೊರತು ಆಧುನಿಕ ಆಗಲಿಲ್ಲ. ಹಾಗಾದರೆ

“ಆಧುನಿಕತೆ” ಎಂದರೇನು ಎಂದು ಕೇಳಿದರೆ ಪಾಶ್ಚಾತ್ಯ ವಿಮರ್ಶಕರು ಅದು ಒಂದು “ಮನಃಸ್ಥಿತಿ” ಎನ್ನುತ್ತಾರೆ. ಹೀಗೆ ಆಧುನಿಕತೆಯನ್ನು ವಿಭಿನ್ನವಾಗಿ ಅರ್ಥೈಸಿಕೊಳ್ಳಲು ಈ ಮೇಲಿನ ಕೃತಿ ಸಹಾಯಕವಾಗಿದೆ.

• ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ – ಇಲ್ಲಿ ಆಧುನಿಕತೆಯನ್ನು ವಿವರಿಸಲು ಐದು ಲಕ್ಷಣಗಳನ್ನು ಹೇಳಿದ್ದಾರೆ.

೧. ವೈಚಾರಿಕತೆ

೨. ವೈಜ್ಞಾನಿಕತೆ

೩. ವರ್ಗವರ್ಣ ಜಾತಿಗಳ ನಾಶ

೪. ಯಾವುದೇ ವಿಧವಾದ ಮೂಢನಂಬಿಕೆಗಳಿಗೂ ಆಸ್ಪದ ಕೊಡದೇ ಇರುವುದು

೫. ಸಮಾಜದ ಎಲ್ಲ ಸ್ತರಗಳಲ್ಲೂ ಅತ್ಯುನ್ನತ ಪದವಿಯಲ್ಲಿರುವುದರಿಂದ ಹಿಡಿದು ಮೋಚಿ ಬೆಸ್ತನವರೆಗೂ ಪರಿಚಯ ಪಡೆದಿರುವುದು

ಹೀಗೆ ಕನ್ನಡದಲ್ಲಿ ಆಧುನಿಕತೆಯನ್ನು ಗುರುತಿಸಲು ಈ ಮೇಲಿನ ಐದು ಲಕ್ಷಣಗಳು ಮುಖ್ಯವಾಗಿವೆ.

• ಕೆಲವು ನಿದರ್ಶನಗಳು– ಆಧುನಿಕತೆಯನ್ನು ನಿರೂಪಿಸಲು ಲಕ್ಷಣಗಳನಷ್ಟೇ ಹೇಳಿದರೆ ಸಾಲದೂ ಎಂದು ಹೇಳಿ ಅದಕ್ಕೆ ಕೃತಿಕಾರರು ಕೆಲವು ನಿದರ್ಶನಗಳನ್ನು ಕೊಟ್ಟಿದ್ದಾರೆ.

೧. ಕವಿ ಜಿ.ಎಸ್.ಶಿವರುದ್ರಪ್ಪನವರ ಒಂದು ಕವನ “ಮುಂಬೈ ಜಾತಕ”, ದೇವನೂರು ಮಹಾದೇವರ ಒಂದು ಕಥೆ “ಡಾಂಬರು ಬಂದುದು”.

೨.೨ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು

೧. **ಕವಿತಾರಾಣಿ, 'ಡಾ.ಯು.ಆರ್.ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ'** :– ಈ ಪಿಹೆಚ್.ಡಿ ಮಹಾಪ್ರಬಂಧದ ಮೊದಲನೆಯ ಅಧ್ಯಾಯ ಪರಂಪರೆ ಮತ್ತು ಆಧುನಿಕತೆಗೆ ಮೀಸಲಾಗಿದೆ. ಇಲ್ಲಿ ಸಂಶೋಧಕರು ಪರಂಪರೆ ಮತ್ತು ಆಧುನಿಕತೆ ಎಂಬ ಪರಿಕಲ್ಪನೆಗಳು ಸದಾ ಪೂರಕವಾಗಿ ವರ್ತಿಸುವಂಥವು. ಯಾವುದೇ ಒಂದು ಸಂಸ್ಕೃತಿಯನ್ನು ಏಕಕಾಲದಲ್ಲಿ ಒಂದು ಪರಂಪರೆ ಮತ್ತು ಆಧುನಿಕತೆ ಸಂಘಟಿತವಾಗಿ ಕಟ್ಟುತ್ತಿರುತ್ತವೆ. ಸಂಸ್ಕೃತಿಯೆಂಬುದು ಕೇವಲ ಹಳೆಯದು, ಪುರಾತನ ಮೌಲ್ಯವನ್ನು ಸಾರುವಂಥದ್ದು ಎಂಬ ಅಭಿಪ್ರಾಯ ಇದೆ. ಆದರೆ ಸಂಸ್ಕೃತಿಯೆಂಬುದು ಪರಂಪರೆಯ ಬೇರುಗಳನ್ನು ತಳಹದಿಯಾಗಿಟ್ಟುಕೊಂಡು ಅಂದಾಂದಿನ ಆಧುನಿಕತೆಯ ಚಿಗುರುಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಆದ್ದರಿಂದ ಸಂಸ್ಕೃತಿಯೆಂಬುದು ಏಕಕಾಲದಲ್ಲಿ ಪರಂಪರೆಯ ಮೌಲ್ಯಗಳನ್ನು ಆಧುನಿಕತೆಯ ಚಿಂತನೆಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಸಂಸ್ಕೃತಿಯೆಂಬುದು ಪರಂಪರೆಯ ಮೌಲ್ಯಗಳನ್ನು ಆಧುನಿಕತೆಯ ಚಿಂತನೆಗಳನ್ನು ತನ್ನಲ್ಲಿ ಸಮ್ಮಿಳಿಸಿಕೊಳ್ಳುವ ಒಂದು ಪರಿಕಲ್ಪನೆಯಾಗಿದೆ ಎಂದು ಗುರುತಿಸುತ್ತಾರೆ.

೨. ಭೋಗರಾಜು. ಪಿ., **'ಶ್ರೀ ಕುವೆಂಪು ಕೃತಿಗಳಲ್ಲಿ ಪರಂಪರೆ ಮತ್ತು ಆಧುನಿಕತೆ ಒಂದು ಅಧ್ಯಯನ'** :- ಈ ಪಿಹೆಚ್.ಡಿ ಮಹಾಪ್ರಬಂಧದಲ್ಲಿ ಪರಂಪರೆ ಮತ್ತು ಆಧುನಿಕತೆಗೆ ಸಂಬಧಿಸಿದಂತೆ ಸಂಶೋಧಕರು ಅನೇಕ ವಿಚಾರಗಳನ್ನು ಇಲ್ಲಿ ಚರ್ಚಿಸಿದ್ದಾರೆ. ಅವರ ಪ್ರಕಾರ ಪರಂಪರೆ ಎಂದಾಗ ಸಂಪ್ರದಾಯ ಎನ್ನುವ ಅರ್ಥವೂ ಬರುತ್ತದೆ. ಆದರೆ ಸು.ಜ.ನಾ. ಹೇಳುವಂತೆ ಸಂಪ್ರದಾಯವನ್ನು ಸೃಜನಾತ್ಮಕವಾಗಿ, ಕಾಲ, ದೇಶದ ಆವರಣಕ್ಕೆ ಮರುಹುಟ್ಟುಗೊಳಿಸುವ ಸಾಮರ್ಥ್ಯದ ಫಲವೇ ಪರಂಪರೆ ಎನ್ನುತ್ತಾರೆ. ಅಂದರೆ ಪರಂಪರೆಗೆ ಐತಿಹಾಸಿಕ ಪ್ರಜ್ಞೆ ಮತ್ತು ಚಲನಾತ್ಮಕ ಗುಣವನ್ನು ಪಡೆದಿರುತ್ತದೆ ಎಂಬ ಅಂಶ ಸ್ಪಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಅದೇ ರೀತಿ ಆಧುನಿಕತೆ ಎಂದಾಗ ನಾವು ಪಾಶ್ಚಿಮಾತ್ಯದಿಂದಲೇ ಬಂದದ್ದು ಎನ್ನುವ ಹಾಗಿಲ್ಲ, ಏಕೆಂದರೆ ಇದುವರೆಗಿನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಪಂಪನಿಗಿಂತ ರನ್ನ ಆಧುನಿಕ, ಇವರಿಗಿಂತ ನಾಗಚಂದ್ರ, ಕುಮಾರ ವ್ಯಾಸ, ರಾಘವಾಂಕ ಆಧುನಿಕರು. ಅಂದರೆ, ಪ್ರಾಚೀನ ಸಾಹಿತ್ಯವಿದ್ಯಂತೆ, ಮಧ್ಯಕಾಲೀನ ಸಾಹಿತ್ಯವಿಲ್ಲ, ಮಧ್ಯಕಾಲೀನ ಸಾಹಿತ್ಯವಿದ್ದಂತೆ ಆಧುನಿಕ ಸಾಹಿತ್ಯವಿಲ್ಲ, ಎಲ್ಲಾ ವಿಷಯಕ್ಕೂ ಅದರದೇ ಆದ ರೂಪ, ರಸ ಗಂಧ, ಸ್ಪರ್ಶ ಇರುತ್ತದೆ. ಆದರೆ ಪಾಶ್ಚಿಮಾತ್ಯ ಶಿಕ್ಷಣದ ಅರಿವಿನೊಡನೆ ಆಧುನಿಕ ಕನ್ನಡ ಸಾಹಿತ್ಯ ಹೆಚ್ಚು ವೈಚಾರಿಕ, ವೈಜ್ಞಾನಿಕ, ಪ್ರಯೋಗ ಶೀಲತೆಯ ಮನೋಧರ್ಮವನ್ನು ರೂಢಿಸಿಕೊಂಡು ಆವಿಷ್ಕಾರ, ಸಂಶೋಧನೆ, ಪ್ರಶ್ನೆ, ಆಶ್ಚರ್ಯಗಳ ಮೂಲಕ ತಮ್ಮ ವಿಚಾರಧಾರೆಯ ನಿಕಷತೆಯ ಪ್ರಯೋಗ ಶಾಲೆಯನ್ನು ಕಾಣಬಹುದು. ಹೀಗೆ ಪರಂಪರೆ ಮತ್ತು ಆಧುನಿಕತೆಯನ್ನು ಕುರಿತು ಸಂಶೋಧಕರು ಈ ಮೇಲಿನಂತೆ ಚರ್ಚಿಸಿದ್ದಾರೆ. ಇದು ನನಗೆ ಪರಂಪರೆ ಮತ್ತು ಆಧುನಿಕತೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗಿದೆ.

೩. ಮುಕ್ತಿಯಾರ್ ಬಿ., 'ಕನ್ನಡ ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ' :- ಸಂಪ್ರದಾಯ ಕುರಿತು ಹಲವು ಚಿಂತನೆಗಳನ್ನು ಈ ಮಹಾಪ್ರಬಂಧದಲ್ಲಿ ಕಾಣಬಹುದು. ಸಂಪ್ರದಾಯ ತಲೆ ತಲಾಂತರಗಳಿಂದ ನಡೆದುಕೊಂಡು ಬಂದ ಆಚಾರ ವಿಚಾರವಾಗಿದೆ. ಇದು ತನ್ನದೇ ಆದ ವಿಶಾಲವಾದ ಚೌಕಟ್ಟನ್ನು ಹೊಂದಿದೆ. ಪೂರ್ವಕಾಲದಿಂದಲೂ ನಡೆದುಕೊಂಡು ಬಂದಂತಹ ಆಚಾರಗಳು ಸಂಪ್ರದಾಯವಾಗುತ್ತವೆ. ತೆಲುಗು ಲೇಖಕ ಕೆ. ಸಿ. ರೆಡ್ಡಿ "ಸಂಪ್ರದಾಯ ಆಧುನಿಕತೆಯ ಕೂಸು" ಎಂದು ಅಭಿಪ್ರಾಯ ಪಡುತ್ತಾರೆ. ಈ ಮಹಾಪ್ರಬಂಧದಲ್ಲಿ ಸಂಶೋಧಕರು ಸಂಪ್ರದಾಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಇಲ್ಲಿ ಸಂಪ್ರದಾಯವನ್ನು ವಿವರಿಸಲು ಬಾಲ್ಯವಿವಾಹ, ವರದಕ್ಷಿಣೆ, ಕೇಶ ಮುಂಡನ, ಸಹಗಮನ ಪದ್ಧತಿಯಂತಹ ಹಲವಾರು ಆಚರಣೆಗಳನ್ನು ಬಳಸಿಕೊಂಡಿದ್ದಾರೆ.

ಆಧುನಿಕತೆ ಸಂಪ್ರದಾಯಗಳಿಗೆ ಸೃಜನಶೀಲ ರೂಪವನ್ನು ನೀಡುತ್ತದೆ. ಯಜ್ಞಯಾಗಗಳು, ಸಂಸ್ಕಾರ, ವಿಧಿ ಆಚರಣೆಗಳು, ಬಾಲ್ಯವಿವಾಹ, ಸ್ತ್ರೀಯರ ಶಿಕ್ಷಣ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಆಚರಣೆಗಳಿಗೆ ಆಧುನಿಕತೆ ಹೊಸ ಅರ್ಥ ಕಟ್ಟಿಕೊಡುತ್ತದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸುವ ಪ್ರಯತ್ನ ಮಾಡಿದ್ದಾರೆ.

೪. ಸಂತೋಷ ಕಾಳನ್ನವರ, 'ಮಳಿಯಪ್ಪನ ಪರಂಪರೆ ಮತ್ತು ಸಂಪ್ರದಾಯ' :- ಈ ಪಿಹೆಚ್.ಡಿ ಮಹಾಪ್ರಬಂಧದ ನಾಲ್ಕನೇ ಅಧ್ಯಾಯದಲ್ಲಿ ಸಂಶೋಧಕರು ಪರಂಪರೆ ಮತ್ತು ಸಂಪ್ರದಾಯ ಎಂಬ ಪರಿಕಲ್ಪನೆಗಳನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಪರಂಪರೆ ಎಂದರೆ ಸರಳವಾದ ಅರ್ಥದಲ್ಲಿ ಅನೇಕ ಕಾಲಗಳ ನಡವಳಿಕೆಯ ಮೊತ್ತ. ಪರಂಪರೆ ಎಂಬುದು ಪೂರ್ವಿಕರಿಂದ ಬಂದಿರುವ ಅಭಿಪ್ರಾಯ, ನಂಬಿಕೆ, ಆಚಾರ, ಸಂಪ್ರದಾಯ, ರೂಢಿ, ಪದ್ಧತಿ ಮುಂತಾದವುಗಳೇ ಆಗಿವೆ. ಆರಂಭದಲ್ಲಿ ಯಾವುದೇ ವ್ಯಕ್ತಿಯ ನಂಬಿಕೆ, ಶ್ರದ್ಧೆಗಳು ಕ್ರಿಯಾತ್ಮಕವಾಗಿ ಆಚರಣೆಗಳಲ್ಲಿ ಸ್ಥಿರಗೊಂಡು ಕಾಲಕ್ರಮೇಣ ಸಾಮೂಹಿಕ ಕ್ರಿಯೆಗಳಲ್ಲಿ ಗಟ್ಟಿಗೊಂಡು ಸಂಪ್ರದಾಯವಾಗಿ ಸಾಗಿಬಂದು ಪರಂಪರೆಯನ್ನು ನಿರ್ಮಿಸಿಕೊಳ್ಳುತ್ತದೆ ಎಂದು ಹೇಳಿದ್ದಾರೆ. ಈ ಪರಿಕಲ್ಪನೆಯನ್ನು ವಿವರಿಸಿಕೊಳ್ಳಲು ಅಥವಾ ವಿಸ್ತರಿಸಲು ಜಾನಪದ ಕೈಪಿಡಿ, ಜಾನಪದ ಸಾಹಿತ್ಯ ದರ್ಶನ ಸಂಪುಟ-೦೪, ಕನ್ನಡ ಸಾಹಿತ್ಯ ಪರಿಷತ್ ನಿಘಂಟು, ಕೆಲವು ಜಾನಪದ ಸಂಪ್ರದಾಯಗಳು ಈ ಕೃತಿಗಳನ್ನು ಪರಾಮರ್ಶನಕ್ಕಾಗಿ ಬಳಸಿಕೊಂಡಿರುತ್ತಾರೆ.

ಕನ್ನಡದಲ್ಲಿ ಪರಂಪರೆ ಮತ್ತು ಸಂಪ್ರದಾಯ ಎಂಬ ಎರಡು ಪರಿಕಲ್ಪನೆಗಳು ರೂಢಿಯಲ್ಲಿವೆ. ಪರಂಪರೆ ಎನ್ನುವುದು ಕ್ರೀಯಾಶೀಲವಾದುದು, ಪರಿವರ್ತನೆ ಶೀಲವಾದುದು, ಸಂಪ್ರದಾಯ ಎನ್ನುವುದು ಜಡವಾದುದು ಎಂಬ ಅರ್ಥಗಳಲ್ಲಿ ಸಂಶೋಧಕರು ವಿವರಿಸಿದ್ದಾರೆ.

೫. ರೇಖಾ ಈ.ಜಿ., 'ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ' :- ಆಧುನಿಕತೆ ಬೆಳವಣಿಗೆಗಳು ಮತ್ತು ಕನ್ನಡ ಸಾಹಿತ್ಯ ಎಂಬ ಅಧ್ಯಾಯದಲ್ಲಿ ಆಧುನಿಕತೆಯನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಔದ್ಯೋಗಿಕರಣದಿಂದ ಸಮಾಜದ ಸ್ವರೂಪವೇ ಬದಲಾಗತೊಡಗಿತು. ನಗರಗಳ ಬೆಳವಣಿಗೆಗಳು, ಶಿಕ್ಷಣದ ಸ್ವರೂಪ, ಉದ್ಯೋಗದ ಸ್ವರೂಪ, ಆಡಳಿತದ ಸ್ವರೂಪಗಳು ಭಿನ್ನವಾಗಿ ಹೊಸ ಹೊಸ ಜೀವನ ವಿಧಾನ ಆರಂಭವಾಯಿತು ಎಂದು ಹೇಳುತ್ತಾರೆ. ಆಧುನಿಕತೆಯನ್ನು ಕುರಿತು ನಾವು ಮಾತನಾಡುವಾಗ ಆಧುನಿಕತೆ ಮತ್ತು ನವ್ಯತೆ ಎಂಬ ಪರಿಕಲ್ಪನೆಗಳು ತೀರಾ ಭಿನ್ನ ಅರ್ಥಗಳನ್ನು ಕೊಡುತ್ತವೆ ಎಂದು ವ್ಯಾಖ್ಯಾನಿದ್ದಾರೆ.

೬. ಉಮೇಶ ಜಿ., 'ನವೋದಯ ಕಥಾಸಾಹಿತ್ಯದಲ್ಲಿ ಗ್ರಾಮ ಸಮಾಜ' :- ಇದು ಸಂಶೋಧನೆ ಕೃತಿಯಾಗಿದ್ದು, ಇಲ್ಲಿ ಸಂಶೋಧಕರು ಪರಂಪರೆಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಪರಂಪರೆ ಎಂಬುದು ಯಾರೊಬ್ಬರಿಂದಲೂ ಬರೆಸಿಕೊಂಡ ಸಂವಿಧಾನವಲ್ಲ, ಕಾನೂನು ಅಲ್ಲ, ಪರಂಪರೆ ಎಂಬುದು ಆಯಾ ಪ್ರದೇಶದ ಕಾಲಮಾನದ ಭಾಷೆಯ ಸಮಷ್ಠಿ ಸಂವೇದನೆಯ ಪ್ರಜ್ಞೆ ಎಂದು ವ್ಯಾಖ್ಯಾನಿಸಿದ್ದಾರೆ.

೭. ಗುರುಸ್ವಾಮಿ, 'ನವೋದಾಯ ವಿಮರ್ಶೆ, ಪರಂಪರೆಯ ವಿಭಿನ್ನ ವಿನ್ಯಾಸಗಳು' :-ಸಂಶೋಧಕರು ಪರಂಪರೆಯನ್ನು ವಿವರಿಸುವ ಆರಂಭದಲ್ಲಿ ಅಲ್ಲಮಪ್ರಭುವಿನ ವಚನವನ್ನು ಉಲ್ಲೇಖಿಸಿದ್ದಾರೆ.

ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ
ನಿಂದ ಹೆಜ್ಜೆಯನರಿಯಬಾರದು
ಮುಂದಣ ಹೆಜ್ಜೆಯಳಿದಲ್ಲದೆ
ಒಂದು ಪಾದ ನೆಲೆಗೊಳ್ಳದು

ಈ ವಚನದ ಕೊನೆಯಲ್ಲಿರುವ ಒಂದು ಪಾದ ನೆಲೆಗೊಳ್ಳದು ಎನ್ನುವುದರ ಅರ್ಥವೇ 'ಪರಂಪರೆ ನೆಲೆಗೊಳ್ಳದು' ಎಂಬುದೇ ಆಗಿದೆ. ಸಂಸ್ಕೃತಿ ಮತ್ತು ಸಂಪ್ರದಾಯ ಎನ್ನುವ ಪರಿಭಾಷೆಗಳು ಕನ್ನಡ ಸಾಹಿತ್ಯದಲ್ಲಿ ಪರಂಪರೆ ಪರಿಕಲ್ಪನೆಗೆ ಪೂರಕವಾಗಿ ಕೆಲಸ ಮಾಡಿವೆ ಎಂದು ಸಂಶೋಧಕರು ಹೇಳುತ್ತಾರೆ.

ಮಹಾಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಪರಂಪರೆಯ ನಿರ್ವಚನ ಎಂಬ ಶೀರ್ಷಿಕೆ ಅಡಿಯಲ್ಲಿ ಪರಂಪರೆಯನ್ನು ಕುರಿತು ಸಂಶೋಧಕರು ಸುದೀರ್ಘವಾಗಿ ಚರ್ಚಿಸಿದ್ದಾರೆ. ಕನ್ನಡದಲ್ಲಿ ಪರಂಪರೆ ಅರ್ಥ, ಇಂಗ್ಲೀಷ್‌ನಲ್ಲಿ ಪರಂಪರೆಯ ಅರ್ಥ, ಟಿ.ಎಸ್.ಎಲಿಯಟ್ಟನ ಅರ್ಥದಲ್ಲಿ ಪರಂಪರೆಯನ್ನು ವಿವರಿಸುವ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲ ನವೋದಯ ವಿಮರ್ಶೆಯನ್ನು ನಿರ್ವಚಿಸಲು ಬಿ.ಎಂ.ಶ್ರೀ, ಮಾಸ್ತಿ, ಕುವೆಂಪು, ಬೇಂದ್ರೆಯವರನ್ನು ಆಯ್ಕೆ ಮಾಡಿಕೊಂಡು ಅವರ ವಿಮರ್ಶೆಯ ಹಿಂದಿನ ತಾತ್ವಿಕತೆಯನ್ನು ಕುರಿತು ಚರ್ಚಿಸಿದ್ದಾರೆ.

೮. ಮಲ್ಲಿಕಾರ್ಜುನ ಎಂ.ಸಿ., 'ಆಧುನಿಕ ಕಥನ ಸಾಹಿತ್ಯದಲ್ಲಿ ಭೂ ಹೋರಾಟದ ಪ್ರತಿನಿಧೀಕರಣ' :- ಈ ಮಹಾಪ್ರಬಂಧದಲ್ಲಿ ಸಂಶೋಧಕರು ಆಧುನಿಕತೆಯನ್ನು ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಿದ್ದಾರೆ. 'ಕೈಗಾರಿಕಾ ಕ್ರಾಂತಿಯಿಂದ ಪಾಶ್ಚಾತ್ಯ ಸಾಮಾಜಿಕ, ನಾಗರಿಕ ಬದುಕಿನಲ್ಲಿ ಉಂಟಾದ ಬದಲಾವಣೆಗಳು, ಮೂಡಿಬಂದ ಚಿಂತನೆಗಳು ಹಾಗೂ ಬದಲಾದ ಜೀವನ ಕ್ರಮಗಳನ್ನು ಸಾಮಾನ್ಯವಾಗಿ ಆಧುನಿಕತೆ' ಎಂದು ಕರೆದಿದ್ದಾರೆ. ಆಧುನಿಕತೆಯನ್ನು, ವಿಜ್ಞಾನವನ್ನು ತಂತ್ರಜ್ಞಾನ ರೂಪಿಸಿರುವುದಲ್ಲದೇ, ವಸಾಹತುಶಾಹಿನೆಲೆಯ ಮೂಲಕ ಸಾಂಪ್ರದಾಯಿಕ ಭಾರತೀಯರು ದೇವರು, ಧರ್ಮ, ಆಧ್ಯಾತ್ಮದಲ್ಲಿ ನಾವು ಶ್ರೇಷ್ಠರು ಎಂದು ವಾದಿಸಿದರೆ, ವಿಚಾರವಂತಿಕೆಯಲ್ಲಿ, ಅಭಿವೃದ್ಧಿಯಲ್ಲಿ ಪಾಶ್ಚಾತ್ಯರು ತಾವು ಶ್ರೇಷ್ಠರು ಎಂದು ಹೇಳಿದುದರ ಪರಿಣಾಮವಾಗಿ ಸಾಹಿತ್ಯ ವಲಯದಲ್ಲಿ ಅಗಾದವಾದಂತಹ ಬದಲಾವಣೆ ಮತ್ತು ಬೆಳವಣಿಗೆಗೆ ಕಾರಣವಾಯಿತು ಎಂಬುದನ್ನು ಸಂಶೋಧಕರು ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಅಧ್ಯಾಯ - ಮೂರು

ಪರಂಪರೆ ಮತ್ತು ಆಧುನಿಕತೆ: ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ – ಮೂರು

ಪರಂಪರೆ ಮತ್ತು ಆಧುನಿಕತೆ: ಪರಿಕಲ್ಪನಾತ್ಮಕ ಚರ್ಚೆ

ಪೀಠಿಕೆ:–

ಆಧುನಿಕ ಭಾರತದ ಚರಿತ್ರೆಯನ್ನು ನಾವು ಗಮನಿಸಿದಾಗ ನಮಗೆ ಮುಖ್ಯವಾಗಿ ಕಂಡು ಬರುವುದು ಹತ್ತೊಂಭತ್ತನೆಯ ಶತಮಾನದ ಕೊನೆಯ ದಶಕಗಳು ಮತ್ತು ಇಪ್ಪತ್ತನೆ ಶತಮಾನದ ಆರಂಭದ ದಶಕಗಳು. ಯಾಕೆಂದರೆ ಈ ದಶಕಗಳವರೆಗೆ ನಡೆದುಕೊಂಡು ಬಂದಿದ್ದ ಭಾರತದ ಪರಂಪರೆ ಸಾಮಾನ್ಯ ಮಾನವರನ್ನೇ ಗೌಣವಾಗಿಸಿದ್ದವು. ಇಲ್ಲಿ ರಾಜನೇ ಸರ್ವಾಧಿಕಾರಿಯಾಗಿದ್ದು, ಅವನ ಮಾತೇ ಅಂತಿಮವಾಗಿತ್ತು. ಧರ್ಮದ ಹೆಸರಿನಲ್ಲಿ ಅನೇಕ ಜನರನ್ನು ತಮ್ಮ ಒತ್ತೇ ಆಳಾಗಿಟ್ಟುಕೊಂಡು ರಾಜ್ಯಭಾರ ಮಾಡುತ್ತಿದ್ದರು. ಇದನ್ನು ನಾವು ಕತ್ತಲೆಯ ಕಾಲವೆಂದು ತಿಳಿಯಬಹುದು. ಇಂತಹ ಕತ್ತಲೆಯನ್ನು ಒದ್ದೋಡಿಸಲು, ಮನುಷ್ಯನ ಬದುಕಿಗೆ ಒಂದು ರೀತಿಯ ಅರ್ಥವನ್ನು ಕೊಡಲು ಪಾಶ್ಚಾತ್ಯ ಸಂಸ್ಕೃತಿಯಿದ ಬಂದ ಶಿಕ್ಷಣ ನಮ್ಮ ಭಾರತೀಯರ ಬದುಕನ್ನೇ ಬದಲಾಯಿಸಿತು. ಜೊತೆಗೆ ನಮ್ಮ ಆಲೋಚನೆಗಳ ದಿಕ್ಕನ್ನೇ ಬದಲಾಯಿಸಿತು. ಇಂತಹ ಸಂದರ್ಭದಲ್ಲಿ ನಮ್ಮಲ್ಲಿ ಮುಖ್ಯವಾಗಿ ಹುಟ್ಟಿಕೊಂಡ ಎರಡು ಪರಿಕಲ್ಪನೆಗಳೇ ಪರಂಪರೆ ಮತ್ತು ಆಧುನಿಕತೆ.

ಈ ಅಧ್ಯಾಯದಲ್ಲಿ ನಾನು ಮುಖ್ಯವಾಗಿ ಚರ್ಚಿಸುವ ಎರಡು ಪರಿಕಲ್ಪನೆಗಳೆಂದರೆ ಪರಂಪರೆ ಮತ್ತು ಆಧುನಿಕತೆ. ಈ ಎರಡು ಪರಿಕಲ್ಪನೆಗಳ ಬಗ್ಗೆ ಸಾಕಷ್ಟು ಚರ್ಚೆಗಳು ಸಾಹಿತ್ಯದ ಸಂದರ್ಭದಲ್ಲಿ ನಡೆದಿವೆ. ಅಂತಹ ಚರ್ಚೆಗಳನ್ನು ಬಳಸಿಕೊಂಡು ನಾನು ಇಲ್ಲಿ 'ಪರಂಪರೆ' ಮತ್ತು 'ಆಧುನಿಕತೆ'ಯನ್ನು ವಿವರಿಸುವ ಪ್ರಯತ್ನ ಮಾಡುತ್ತೇನೆ. ಪರಂಪರೆ ಮತ್ತು ಆಧುನಿಕತೆ ಎಂಬ ಎರಡು ಪರಿಕಲ್ಪನೆಗಳು ಸದಾ ಪೂರಕವಾಗಿ ವರ್ತಿಸುವಂತವು. ಯಾವುದೇ ಒಂದು ಸಂಸ್ಕೃತಿಯನ್ನು ಏಕಕಾಲದಲ್ಲಿ ಒಂದು ಪರಂಪರೆ ಮತ್ತು ಆಧುನಿಕತೆ ಸಂಘಟಿತವಾಗಿ ಕಟ್ಟುತ್ತಿರುತ್ತವೆ. ಸಂಸ್ಕೃತಿಯೆಂಬುದು ಕೇವಲ ಹಳೆಯದು, ಪುರಾತನ ಮೌಲ್ಯವನ್ನು ಸಾರುವಂಥದ್ದು ಎಂಬ ಅಭಿಪ್ರಾಯಗಳಿವೆ. ಆದರೆ ಸಂಸ್ಕೃತಿಯೆಂಬುದು ಪರಂಪರೆಯ ಬೇರುಗಳನ್ನು ತಳಹದಿಯಾಗಿಟ್ಟುಕೊಂಡು ಅಂದಂದಿನ

ಆಧುನಿಕತೆಯ ಚಿಗುರುಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಆದ್ದರಿಂದ ಸಂಸ್ಕೃತಿಯೆಂಬುದು ಏಕಕಾಲದಲ್ಲಿ ಪರಂಪರೆಯ ಮೌಲ್ಯಗಳನ್ನು ಆಧುನಿಕತೆಯ ಚಿಂತನೆಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತವೆ. ಆದ್ದರಿಂದ ಸಂಸ್ಕೃತಿಯೆಂಬುದು ಏಕಕಾಲದಲ್ಲಿ ಪರಂಪರೆಯ ಮೌಲ್ಯಗಳನ್ನು ಆಧುನಿಕತೆಯ ಚಿಂತನೆಗಳನ್ನು ತನ್ನಲ್ಲಿ ಸಮ್ಮಿಳಿಸಿಕೊಳ್ಳುವ ಒಂದು ಪರಿಕಲ್ಪನೆಯಾಗಿದೆ. ಹೀಗೆ ಕಾಲದಿಂದ ಕಾಲಕ್ಕೆ ಹೊಸತನ್ನು ಪರಿಸ್ಥಿತಿಗೆ ತಕ್ಕಂತೆ ಪ್ರಯೋಗಿಸುವ ಪರಂಪರೆಯು ಆಧುನಿಕತೆಯ ಸಮನ್ವಯ ಸೂತ್ರಗಳಲ್ಲಿ ಸ್ವೀಕರಿಸುತ್ತವೆ. ಪರಂಪರೆಯಲ್ಲಿ ಹೊಸತು ಸೇರಿಕೊಳ್ಳುವುದು ಅನಿವಾರ್ಯವಾಗಿದೆ.

ಪಾಶ್ಚಾತ್ಯರ ಆಗಮನ, ಆಳ್ವಿಕೆಯಿಂದಾಗಿ ಭಾರತದಲ್ಲಿನ ಜೀವನ ಮೌಲ್ಯಗಳು ಘರ್ಷಣೆಗೊಳಗಾಗಿ ಬದಲಾದವು. ಸಂಚಾರ, ಸಂಪರ್ಕ ಮತ್ತು ಸಂವಹನ ಮಾಧ್ಯಮಗಳು ಬಳಕೆಯಲ್ಲಿ ಬೆಳೆವಣಿಗೆಯಾಯಿತು. ಪಾಶ್ಚಾತ್ಯ ಸಂಸ್ಕೃತಿ ಸಾಹಿತ್ಯ ಹಾಗೂ ಅವರ ಆಚಾರ ವಿಚಾರಗಳು ಭಾರತೀಯರ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದವು. ಆಂಗ್ಲ ಸಾಹಿತ್ಯದ ಅಭ್ಯಾಸದಿಂದ ಅಲ್ಲಿನ ವಿಚಾರಗಳು ಭಾರತೀಯ ಶಿಕ್ಷಿತ ಸಮಾಜಕ್ಕೆ ಪರಿಚಿತವಾದವು.

೩.೧. ಪರಂಪರೆಯ ಅರ್ಥ

೩.೧.೧. ನಿಘಂಟುಗಳಲ್ಲಿ ಪರಂಪರೆಯ ಅರ್ಥ

* ರೆವರೆಂಡ್ ಎಫ್. ಕಿಟಿಲ್ ಅವರ ನಿಘಂಟಿನಲ್ಲಿ ಪರಂಪರೆ ಮತ್ತು ಸಂಪ್ರದಾಯ ಪದಗಳಿಲ್ಲ. ಇದಕ್ಕೆ ಕಾರಣ ವಿದ್ವಾಂಸರಲ್ಲಾಗಲೀ ಸಾಮಾನ್ಯ ಜನರಲ್ಲಾಗಲಿ ಪರಂಪರೆ ಎಂಬ ಶಬ್ದದ ಬಳಕೆ ಇಲ್ಲದೇ ಇರಬಹುದು.
* ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಪರಂಪರೆಗೆ ಈ ಕೆಳಗಿನ ಅರ್ಥಗಳಿವೆ.

  ಅ) ಒಂದರ ನಂತರ ಮತ್ತೊಂದು ಬರುವುದು; ಸಾಲು; ಪರಿವಿಡಿ.

  ಆ) ಅನೂಚಾನವಾಗಿ ಬಂದಿರುವುದು; ಸಂಪ್ರದಾಯ; ರೂಢಿ

  ಇ) ಹಿಂದಿನ ಸನ್ನಿವೇಶ, ಹಿನ್ನೆಲೆ

  ಈ) ಕುಲವಂಶ, ಪೀಳಿಗೆ

  ಉ) ಹಾನಿಮಾಡುವುದು, ಕೇಡನ್ನು ಮಾಡುವುದು

  ಊ) ಕೊಲ್ಲುವುದು
* ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್-ಕನ್ನಡ ನಿಘಂಟಿನಲ್ಲಿ tradition ಅಂದರೆ

  ಅ) ಪೂರ್ವಾಚಾರ; ಸಂಪ್ರದಾಯ; ರೂಢಿ; ಪದ್ಧತಿ; ಆಚಾರ; ಪರಂಪರೆ; ಪೂರ್ವಿಕರಿಂದ ಪರಂಪರೆಯಾಗಿ ಬಂದ ಅಭಿಪ್ರಾಯ, ನಂಬಿಕೆ, ಆಚಾರ-ವಿಚಾರಗಳು.

  ಆ) ಸಾಂಪ್ರದಾಯಿಕ ಸೂತ್ರ; ದೈವಿಕ ಪ್ರಾಮಾಣ್ಯವುಂಟೆಂದು ಊಹಿಸಿದ, ಆದರೆ ಲಿಖಿತ ರೂಪದಲ್ಲಿಲ್ಲದ; ತತ್ವ

  ಇ) ವಿಧಿವಿಹಿತವಾಗಿ ಒಪ್ಪಿಸಿ ಬಿಡುವುದು, ಕೊಟ್ಟು ಬಿಡುವುದು

* ಶೇಷಗಿರಿರಾವ್ ಎಲ್. ಎಸ್–ಇಂಗ್ಲೀಷ್, ಇಂಗ್ಲೀಷ್–ಕನ್ನಡ ನಿಘಂಟುನಲ್ಲಿ tradition ಎಂದರೆ

    ಅ) ಸಂಪ್ರದಾಯ; ಪರಂಪರೆ; ರೂಢಿ

    ಆ) ಪೀಳಿಗೆಯಿಂದ ಪೀಳಿಗೆಗೆ ಸಾಗಿ ಬಂದ ಪುರಾಣ; ಐತಿಹ್ಯ

    ಇ) ದೀರ್ಘಕಾಲದ ಪದ್ಧತಿ; ಆಚಾರ

* ವೆಂಕಟ ಸುಬ್ಬಯ್ಯ. ಜಿ. ಇಂಗ್ಲೀಷ್–ಕನ್ನಡ ನಿಘಂಟು tradition ಎಂದರೆ

    ಅ) ಸಂಪ್ರದಾಯ, ಪರಂಪರೆ

    ಆ) ರೂಢಿ, ಪದ್ಧತಿ, ಆಚಾರ, ನಂಬಿಕೆ, ಆಚರಣೆ

* ಮಾಧವ ಪೈ. ಎಂ. ಕನ್ನಡ ಕೊಂಕಣಿ ರತ್ನ ಕೋಶದಲ್ಲಿ 'ಪರಂಪರೆ' ಎಂದರೆ

    ಅ) ಪರಂಪರಾ

    ಆ) ಕುಳೀ, ವಂಶ

    ಇ) ಪಂಕ್ತೀ

    ಈ) ಸಂಪ್ರದಾಯ

* ತೆಲುಗಿನಲ್ಲಿ–traditional ಎಂದರೆ ಸಂಪ್ರದಾಯ, ಪರಂಪರಾಗತ ಮೈನ. ಪುರಾಣೋಕ್ತ ಮೈನ, ಪ್ರಾಚೀನೋಕ್ತ ಮೈನ ಎಂದು ಅರ್ಥೈಸಲಾಗಿದೆ.

* ಮಲಯಾಳಂನಲ್ಲಿ– traditional ಗೆ ಪುರಾತನಮಯ, ಸಂಪ್ರದಾಯಿಕಮಯ ಎಂದು ಕರೆಯಲಾಗಿದೆ.

'ಟ್ರೆಡಿಷನ್' ಎಂಬ ಇಂಗ್ಲೀಷ್ ಪದವನ್ನು ಕನ್ನಡದಲ್ಲಿ ಸಾಮಾನ್ಯವಾಗಿ ಪ್ರಾಚೀನ ಪುರಾತನ, ಸಂಪ್ರದಾಯ, ಪರಂಪರೆಯೆಂದು ಅನುವಾದಿಸಿಕೊಳ್ಳಲಾಗಿದೆ. ಆದರೆ 'ಟ್ರೆಡಿಷನ್' ಶಬ್ದಾರ್ಥ ಬೇರೆ. 'ಟ್ರೆಡಿಷನ್' ಪರಿಕಲ್ಪನೆಯಾಗಿ ಕೊಡುವ ಅರ್ಥವೇ ಬೇರೆ ಹಾಗಾಗಿ ಆಯಾ ಭಾಷಾ ಸಂಪ್ರದಾಯದಲ್ಲಿ 'ಟ್ರೆಡಿಷನ್'ಗೆ ಒಂದೇ ಅರ್ಥವಿಲ್ಲದಿರುದನ್ನು ಗಮನಿಸಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, 'ಪರಂಪರೆ' ಎಂಬ ಪರಿಕಲ್ಪನೆಗೆ ಒಂದೇ ನಿರ್ದಿಷ್ಟವಾದ ಅರ್ಥ ಇಲ್ಲ. ಪರಂಪರೆ ಎಂಬುದು ವಿಶಾಲವಾದ ಪದಗುಚ್ಚ. ಹಾಗಾಗಿ ಒಂದೇ ಅರ್ಥದಲ್ಲಿ ಪರಂಪರೆಯನ್ನು ವ್ಯಾಖ್ಯಾನಿಸಲು, ಅರ್ಥೈಸಲು ಸಾಧ್ಯವಿಲ್ಲ. ಪರಂಪರೆಯನ್ನು ಕುರಿತಂತೆ ಅನೇಕ ವಿದ್ವಾಂಸರು ತನ್ನದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳನ್ನು ಒಂದು ಕಡೆ ಸೇರಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಸಂಪ್ರದಾಯ ಮತ್ತು ಪರಂಪರೆ

ಕನ್ನಡದಲ್ಲಿ ಸಂಪ್ರದಾಯ ಮತ್ತು ಪರಂಪರೆ ಎಂಬ ಎರಡು ಪರಿಕಲ್ಪನೆಗಳು ರೂಢಿಯಲ್ಲಿವೆ. ಪರಂಪರೆ ಕ್ರಿಯಾಶೀಲವಾದುದು, ಪರಿವರ್ತನೆಶೀಲವಾದುದು. ಸಂಪ್ರದಾಯ ಎನ್ನುವುದು ಜಡವಾದುದು ಎಂಬ ಅರ್ಥಗಳಲ್ಲಿ ಬಳಕೆಯಾಗಿದೆ.

ಸಾಮಾನ್ಯವಾಗಿ ಪರಂಪರೆಯಲ್ಲಿಯೇ ಸಂಪ್ರದಾಯ ಎನ್ನುವುದು ಹುದುಗಿ ಪರಂಪರೆ ವಿಶಾಲಾರ್ಥ ಪಡೆದುಕೊಂಡಿದೆ. ಇಂಗ್ಲೀಷ್‌ನಲ್ಲಿ convention ಎಂದರೆ ಸಂಪ್ರದಾಯ, tradition ಎಂದರೆ ಪರಂಪರೆ. ಯಾವುದು ನದಿಯಂತೆ ಮುಂದುವರಿದುಕೊಂಡು ಹೋಗುವುದೋ ಅದು ಪರಂಪರೆ. ಹೀಗೆ ಮುಂದುವರೆಯುವ ಹಂತದಲ್ಲಿ ಜಡವಾಗಿ ನಿಶ್ಚಿತ ನೆಲೆಯಲ್ಲಿ ನಿಂತು ಬಿಡುತ್ತದೋ ಅದು ಸಂಪ್ರದಾಯವಾಗಿ ಪರಿಣಮಿಸುತ್ತವೆ.

ಪರಂಪರೆ ಎಂದಾಗ ಸಂಪ್ರದಾಯ ಎನ್ನುವ ಅರ್ಥವೂ ಬರುತ್ತದೆ. ಆದರೆ ಸುಜನಾ ಹೇಳುವಂತೆ "ಸಂಪ್ರದಾಯವನ್ನು ಸೃಜನಾತ್ಮಕವಾಗಿ, ಕಾಲ ದೇಶದ ಆವರಣಕ್ಕೆ ಮರುಹುಟ್ಟುಗೊಳಿಸುವ ಸಾಮರ್ಥ್ಯದ ಫಲವೇ ಪರಂಪರೆ" ಎನ್ನುತ್ತಾರೆ. ಅಂದರೆ ಪರಂಪರೆಗೆ ಐತಿಹಾಸಿಕ ಪ್ರಜ್ಞೆ ಮತ್ತು ಚಲನಾತ್ಮಕ ಗುಣವನ್ನು ಪಡೆದಿರುತ್ತದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಂಪರೆಯನ್ನು ಅಧ್ಯಯನದ ಹಿನ್ನೆಲೆಯಲ್ಲಿ ಪರಿಭಾವಿಸಿದ್ದೇನೆ.

ಸಂಪ್ರದಾಯವನ್ನು ಕೆಲವರು ಪರಂಪರೆಗೆ ವಿರುದ್ಧವಾದುದು ಎಂದು ವ್ಯಾಖ್ಯಾನಿಸಿದರೆ, ಮತ್ತೇ ಕೆಲವರು ಸಮನಾರ್ಥಕವಾದುದು ಎಂದು ಹೇಳುತ್ತಾರೆ. ಈ ಕುರಿತು ಏನೇ ಚರ್ಚೆಗಳಿದ್ದರೂ ಸಂಪ್ರದಾಯವನ್ನು ಪರಂಪರೆಯ ಒಂದು ಭಾಗವಾಗಿ ನಾನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳುತ್ತೇನೆ.

ಪರಂಪರೆ ಕುರಿತ ವ್ಯಾಖ್ಯಾನಗಳು

* ರಾಘವೇಂದ್ರರಾವ್. ಎಚ್. ಎಸ್–"ಪರಂಪರೆ ಎನ್ನುವುದು ಹತ್ತು ಹಲವು ಹೊಳೆಗಳ ಕೂಡು ಹರಿಯುವಿಕೆ. ಪ್ರತಿಯೊಬ್ಬ ಕವಿಯೂ ತನಗೆ ಬೇಕೆನಿಸಿದ ಹೊಳೆಯ ನೀರನ್ನು ಮೊಗೆದು ಕುಡಿಯುತ್ತಾನೆ. ಎಂದರೆ ತನ್ನ ಅಗತ್ಯಗಳಿಗೆ ಅನುಕೂಲವಾದ ಪರಂಪರೆಯನ್ನು ತಾನೇ ಕಟ್ಟಿಕೊಳ್ಳುತ್ತಾನೆ"[೧]

* ಗಿರಡ್ಡಿ ಗೋವಿಂದರಾಜ–"ಎಲಿಯಟ್ ಪರಂಪರೆ ಎಂಬುದುನ್ನು ಇತಿಹಾಸ ಪ್ರಜ್ಞೆ ಎಂಬ ಅರ್ಥದಲ್ಲಿ ಬಳಸುತ್ತಾನೆ. ಇತಿಹಾಸ ಪ್ರಜ್ಞೆ ಎಂದರೆ ಗತಕಾಲವು ಆಗಲೇ ಕಳೆದುಹೋಗಿದೆಯೆಂಬ ಅರಿವಿನ ಜೊತೆಗೇ ಅದರ ಸದ್ಯದ ಅಸ್ತಿತ್ವವನ್ನೂ ಒಪ್ಪಿಕೊಳ್ಳುವ ದೃಷ್ಟಿಕೋನ ಅನಂತತೆಯ ತತ್ಕಾಲೀನತೆಯ ಹಾಗೂ ಇವೆರಡರ ಒಟ್ಟು ಮೊತ್ತದ ಅರಿವು"[೨]

* ಸುಜನಾ– "ಪ್ರಾಚೀನವನ್ನು ಅರ್ವಾಚೀನದಲ್ಲಿ ಒಂದು ಪ್ರತ್ಯೇಕ 'ಮಡಿ'ನಾಡಾಗಿ ಇಡದೆ ಇರಬಿಡದೆ. ಬಳಸುವ ಅರಗಿಸಿಕೊಂಡು ಬೆಳೆಯುವ ಪ್ರತಿಭೆಯ ಪ್ರಯತ್ನದ ಫಲವೆ ಪರಂಪರೆ"[೩]

* ನಟರಾಜ್ ಹುಳಿಯಾರ್– "ಒಂದು ಸಮುದಾಯದ ಪರಂಪರೆ ರೂಪುಗೊಳ್ಳುವುದೇ ಭೂತದಿಂದ ವರ್ತಮಾನಕ್ಕೆ ಹರಿದು ಬಂದ ನಂಬಿಕೆಗಳು ಸಂಕೇತಗಳು ಪ್ರತಿಮೆಗಳು ಆಚರಣೆಗಳು ಲೋಕದರ್ಶನ ನೆನಪು ಹಾಗೂ ಸಂಸ್ಥೆಗಳ ಮೂಲಕ. ಈ ದೃಷ್ಟಿಯಿಂದ ಪರಂಪರೆಯೆಂದರೆ ಒಂದು ಸಮುದಾಯದ ಮುಂದುವರಿಕೆ"[೪]

* ರೇಮೊಂಡೊ ಪಣಿಕ್ಕರ– "ಪರಂಪರೆ ಎಂಬುದು ಒಂದು ಜನಾಂಗದ ಸ್ಮೃತಿ"[೫]

* ಒಬಿಜೇನಾ– "ಎದುರಾದವನಿಗೆ ನಮಸ್ಕರಿಸುವುದರಿಂದ ಹಿಡಿದು ಅತ್ಯಂತ ಮುಖ್ಯವಾದ ಧಾರ್ಮಿಕ ಅಭ್ಯಾಸಗಳನ್ನು ಒಳಗೊಳ್ಳುವ ಮೊತ್ತವಾಗಿ ಗ್ರಹಿಸುತ್ತಾನೆ."[೬]

* ಕೋದಂಡರಾಮ ಎನ್.ಕೆ– “ಬದುಕಿಗೆ ಬೇಕಾಗಿಯೇ ಇಲ್ಲದ ಸುಳ್ಳುಗಳನ್ನು ಅನಿವಾರ್ಯ ಸತ್ಯಗಳೆಂದು ಪರಂಪರೆಯು ಅಭಿವ್ಯಕ್ತಿಸಲು ಪ್ರಯತ್ನಿಸುತ್ತದೆ”೬

* ರೇಮಂಡ್ ವಿಲಿಯಮ್ಸ್ “ಹಿರಿಯರಿಂದ ಬಳುವಳಿಯಾಗಿ ಬಂದದ್ದು”೭

ಆಧುನಿಕತೆ ಅರ್ಥ ಮತ್ತು ಸ್ವರೂಪ

modernity ಎನ್ನುವ ಇಂಗ್ಲೀಷ್ ಶಬ್ದಕ್ಕೆ ಸಮಾನಾರ್ಥ ಪದವಾಗಿ ಆಧುನಿಕತೆಯನ್ನು ಬಳಸುತ್ತೇವೆ. 'ಆಧುನಿಕತೆ' ಎಂಬ ಪದ ಇತ್ತೀಚಿಗೆ ಹೆಚ್ಚು ಬಳಕೆಗೆ ಬಂದಿದ್ದು, ಒಂದೆರಡು ಶತಮಾನಗಳಿಂದ ವ್ಯವಸ್ಥಿತವಾಗಿ ಮೂಡಿ ಬಂದಿದೆ. ಅಂದರೆ ಆಧುನಿಕತೆ ಎಂಬುದು ಇರಲೇ ಇಲ್ಲ ಎಂದು ಅರ್ಥವಲ್ಲ. ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಹಾಗೂ ಸಮಾಜದಿಂದ ಸಮಾಜಕ್ಕೆ ತಕ್ಕಂತೆ ವೈಚಾರಿಕತೆಗೆ ಒಳಗಾಗಿರುವುದನ್ನು ಕಾಣಬಹುದು.

ಭಾರತೀಯ ಸಮಾಜಗಳಲ್ಲಿ ಆಧುನಿಕತೆ ಎಂಬ ಕಲ್ಪನೆ ಹೆಚ್ಚು ಬಳಕೆಗೆ ಬಂದಿದ್ದು ಅನ್ಯರ ಪ್ರವೇಶ ಹಾಗೂ ಅನ್ಯ ಸಂಸ್ಕೃತಿಯ ಮೂಲಕವೇ. ಧರ್ಮ ಹಾಗೂ ಆಧ್ಯಾತ್ಮಗಳಿಗೆ ಪರ್ಯಾಯವಾದ ಜ್ಞಾನವಾಗಿ ವಿಜ್ಞಾನ ಸ್ಥಾಪಿತಗೊಳ್ಳತೊಡಗಿದ್ದು, ಈ ವಿಜ್ಞಾನವೇ ಕೇಂದ್ರರಂಗಕ್ಕೆ ಬಂದ ನಂತರ ಸ್ಥಾಪಿತಗೊಂಡ ನೋಟ ಕ್ರಮವೇ ಈ ಆಧುನಿಕತೆ. ಇದು ೨೦ ನೇ ಶತಮಾನದ ದಿಕ್ಕನೇ ಬದಲಾಯಿಸಿತು.

ಆಧುನಿಕತೆ ಎಂದಾಗ ನಾವು ಪಾಶ್ಚಿಮಾತ್ಯದಿಂದಲೇ ಬಂದಿದ್ದು ಎನ್ನುವ ಹಾಗಿಲ್ಲ. ಏಕೆಂದರೆ ಇದುವರೆಗಿನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಪಂಪನಿಗಿಂತ ರನ್ನ ಆಧುನಿಕ, ಇವರಿಗಿಂತ ನಾಗಚಂದ್ರ, ಕುಮಾರವ್ಯಾಸ, ರಾಘವಾಂಕ ಆಧುನಿಕರು. ಅಂದರೆ ಪ್ರಾಚೀನ ಸಾಹಿತ್ಯವಿದ್ದಂತೆ, ಮಧ್ಯಕಾಲೀನ ಸಾಹಿತ್ಯವಿಲ್ಲ, ಮಧ್ಯಕಾಲೀನ ಸಾಹಿತ್ಯವಿದಂತೆ ಆಧುನಿಕ ಸಾಹಿತ್ಯವಿಲ್ಲ. ಹೀಗೆ ಪ್ರತಿಯೊಂದುಕ್ಕೂ ತನ್ನದೇ ಆದ ವೈಶಿಷ್ಯ ಇದೆ. ಆದರೆ ಆಧುನಿಕ ಶಿಕ್ಷಣ ಮತ್ತು ವೈಚಾರಿಕತೆಯ ಮೂಲಕ ಹೆಚ್ಚು ಪ್ರಯೋಗಕ್ಕೆ ಒಳಪಟ್ಟಿದೆ. ಪಾಶ್ಚಾತ್ಯರ ಶಿಕ್ಷಣದಿಂದ ಹೊಸ ಬಗೆಯ ಆಚಾರ–ವಿಚಾರಗಳು, ಹೊಸ ಜೀವನ ವಿಧಾನಗಳು, ನವೀನ ರೀತಿಯ ಆಹಾರ ಪದ್ಧತಿ, ಉಡುಪುಗಳು ಇತ್ಯಾದಿಗಳಲ್ಲಿ ಬದಲಾವಣೆಗಳಾದವು.

ಭಾರತೀಯ ಸಮಾಜದಲ್ಲಿರುವ ಆಚಾರ–ವಿಚಾರಗಳು ಕುಟುಂಬ ವ್ಯವಸ್ಥೆ, ಜಾತಿ ಪದ್ಧತಿ, ಸಮಾಜ, ಇಡೀ ಸಂಸ್ಕೃತಿಯೇ ಋಷಿಮುನಿಗಳು ಕಾಡಿನಲ್ಲಿ ವಾಸಮಾಡುವುದರಿಂದ ಹಿಡಿದು ಇಂದಿನ ನಗರ ಜೀವನದವರೆಗೆ ಬದಲಾಗುತ್ತಾ ಬಂದಿದೆ. ಹೀಗೆ ಬದಲಾದ ಕಾಲಮಾನದ ಅಗತ್ಯಗಳಿಗೆ ಅನುಗುಣವಾಗಿ ರೂಪುಗೊಂಡ ಜೀವನ ಕ್ರಮವೇ ಆಧುನಿಕತೆ ಆಗಿದೆ.

ಆಧುನಿಕತೆಯನ್ನು ವಿವರಿಸುವಾವಾಗ ಅನೇಕ ಪ್ರಶ್ನೆಗಳು ನಮ್ಮ ಎದುರು ನಿಲ್ಲುತ್ತವೆ. ಯಾವುದು ಆಧುನಿಕತೆ? ಆಧುನಿಕತೆ ಎಂದರೇನು? ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ. ಅಷ್ಟೇ ಅಲ್ಲ, ಅದೊಂದು ವಿಶಾಲವಾದ ಪರಿಕಲ್ಪನೆ. ಪರಂಪರೆಯನ್ನು ಹೇಗೆ ನಿರ್ದಿಷ್ಟವಾಗಿ ಗುರುತಿಸಲು

ಸಾಧ್ಯವಿಲ್ಲವೋ, ಅದೇ ರೀತಿ ಆಧುನಿಕತೆಯೂ ಕೂಡ ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಾಗದಿರುವಂತದ್ದು.

ಆಧುನಿಕತೆಯನ್ನು ಪರಂಪರೆಯಂತೆ ಎಲ್ಲಿ ಹುಟ್ಟಿಕೊಂಡಿತು, ಹೇಗೆ ಹುಟ್ಟಿತು ಎಂಬುವುದಾಗಿ ಸರಳವಾಗಿ ಹೇಳಲು ಪ್ರಯತ್ನಿಸಬಹುದೇ ವಿನಃ ಇಲ್ಲೇ ಹುಟ್ಟಿತು, ಹೀಗೆ ಹುಟ್ಟಿತು ಎಂದು ಹೇಳಲು ಸಾಧ್ಯವಾಗದ ಕೆಲಸ. ಆದರೆ ಕಳೆದ ಎರಡು ಶತಮಾನಗಳಿಂದ ಈ ಎರಡು ಪರಿಕಲ್ಪನೆಗಳು ಹೆಚ್ಚು ಚರ್ಚೆಗೆ ಒಳಗಾಗುವಂತವು. ಆಧುನಿಕತೆಯನ್ನು ಕುರಿತು ಕೆಲವು ವಿದ್ವಾಂಸರ ವ್ಯಾಖ್ಯಾನಗಳನ್ನು ಈ ಕೆಳಗೆ ನೀಡಲಾಗಿದೆ.

ಆಧುನಿಕತೆ ಕುರಿತು ವ್ಯಾಖ್ಯಾನಗಳು

* ಮ್ಯಾಕ್ಸ್‌ವೆಬರ್:- "ಆಧುನಿಕತೆ ಎಂದರೆ ಒಂದು ಶಾಪವಿದ್ದಂತೆ, ಅದರಿಂದ ಮುಕ್ತವಾಗಲು ಸಾಧ್ಯವಿಲ್ಲ"[೯]

* ಚಂದ್ರಶೇಖರ ನಂಗಲಿ:- "ಆಧುನಿಕತೆಯೆಂಬುದು ಪ್ರತಿಭೆಯಿಂದ ಸಿದ್ಧಿಯಾಗುವ ಮನೋಭೌತಿಕ ಪ್ರಕ್ರಿಯೆ"[೧೦]

* ಪುಟ್ಟಯ್ಯ. ಬಿ.ಎಂ:- ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಯ ಶೋಷಕ ಮಾರುಕಟ್ಟೆಯ ವಿಸ್ತರಣೆಯನ್ನು, ಒತ್ತಾಯ ಪೂರ್ವಕವಾದ ಅದರ ಲಾಭ ಕೋರತನದ ಹೇರಿಕೆಯನ್ನು ಸ್ಥೂಲವಾಗಿ ಆಧುನಿಕತೆ ಎನ್ನಲಾಗಿದೆ"[೧೧]

* ಶ್ರೀನಿವಾಸಮೂರ್ತಿ ಕಾ.ವೆಂ :- "ಆಧುನಿಕತೆ ಎಂಬುದು ಸಾಪೇಕ್ಷವಾದುದು. ಇದು ಮೂರ್ತ, ಅಮೂರ್ತ ಎರಡೂ ಸ್ವರೂಪಗಳಲ್ಲಿ ಕಾಣವಂತದ್ದು. ಇದು ಜೀವನದ ಎಲ್ಲ ಕ್ಷೇತ್ರಗಳನ್ನು ಎಲ್ಲ ಕಾಲಗಳನ್ನು ಒಳಗೊಳ್ಳುವಂಥದ್ದು. ಇದಕ್ಕೆ ಇತ್ಯಾತ್ಮಕವಾದ ಮತ್ತು ನೇತ್ಯಾತ್ಮಕವಾದ ಎರಡೂ ಆಯಾಮಗಳಿವೆ"[೧೨]

* ಸಣ್ಣರಾಮ:- "ಆಧುನಿಕತೆ ಎಂಬುದು ಇಡಿಯಾಗಿ ಹಿಡಿಗೆ ಸಿಗದಿರುವುದೇ ಆಗಿದೆ"[೧೩]

* ರಹಮತ್ ತರೀಕೆರೆ:- "ಕನ್ನಡದಲ್ಲಿ 'ಆಧುನಿಕತೆ' ಎಂಬ ಶಬ್ಧವನ್ನು ನಗರಕ್ಕೆ ಸಂಬಂಧಿಸಿದುದು, ಗ್ರಾಮೀಣವಲ್ಲದ್ದು, ಇತ್ತೀಚಿನದು, ವಿದ್ಯಾವಂತರ-ಶಿಷ್ಟರ ಜಗತ್ತಿನದು, ವೈಚಾರಿಕವಾದುದು, ಪ್ರಗತಿಪರವಾದುದು, ವೈಜ್ಞಾನಿಕವಾದುದು ಇತ್ಯಾದಿ ಅರ್ಥಗಳಲ್ಲಿ ಬಳಸಲಾಗುತ್ತದೆ"[೧೪]

ಆಧುನಿಕತೆ ಮತ್ತು ಪರಂಪರೆ

ಪ್ರಸ್ತುತ ಅಧ್ಯಯನದ ಹಿನ್ನೆಲೆಯಲ್ಲಿ ಆಧುನಿಕತೆಯೆಂದರೆ ನಮ್ಮ ಸಮಕಾಲೀನ ಕನ್ನಡ ಲೇಖಕರು ತಮ್ಮ ಕೃತಿಗಳಲ್ಲಿ ಹೇಗೆ ಗ್ರಹಿಸಿದ್ದಾರೆಂಬುದರ ಜೊತೆಗೆ ಈ ಅಂಶವನ್ನು ಇಲ್ಲಿ ಪರಿಕಲ್ಪನಾತ್ಮಕ ನೆಲೆಯಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಸಂಶೋಧಕನಾಗಿ ನಾನು ಆಧುನಿಕತೆಯನ್ನು ಗ್ರಹಿಸಿಕೊಂಡ ಬಗೆಯನ್ನು ಇಲ್ಲಿ ವಿಶ್ಲೇಷಿಸಬಯಸುತ್ತೇನೆ. ಮೊದಲಿಗೆ ಆಧುನಿಕತೆಯೆಂಬುದನ್ನು ನಾವು ಹೇಗೆ ಗ್ರಹಿಸಬೇಕೆನ್ನುವುದೇ ಒಂದು ಸಮಸ್ಯಾತ್ಮಕ ಸಂಗತಿಯಾಗಿದೆ. ಅಂತೆಯೇ ಅಧ್ಯಯನದ

ವಿಧಾನವಾಗಿ ಇದನ್ನು ಸಮಸ್ಯೀಕರಣಕ್ಕೆ ಒಳಪಡಿಸುವುದರ ಮೂಲಕ ಆಧುನಿಕತೆ ಎನ್ನುವ ಪರಿಕಲ್ಪನೆಯನ್ನು ವಿಸ್ತರಿಸಲು ಸಾಧ್ಯವಾಗಬಹುದು.

ಯಾವುದು ಪಶ್ಚಿಮದಿಂದ ಬಂದಿದೆಯೋ ಅದು ಆಧುನಿಕವೆಂಬ ಗ್ರಹಿಕೆಯು ಸಾಮಾನ್ಯವಾಗಿದೆ. ಆದರೆ ಅಲ್ಲೂ ಸಹ ಆಧುನಿಕತೆಯನ್ನು ಹೊರತಾಗಿಸಿ ಪಾರಂಪರಿಕ ನಂಬಿಕೆಗಳನ್ನು ಮುಖ್ಯವಾಗಿಸಿಕೊಂಡ, ಧಾರ್ಮಿಕ ನಂಬಿಕೆಗಳನ್ನು ಹೊಂದಿದ ಸಮುದಾಯಗಳನ್ನು ಕಾಣಬಹುದಾಗಿದೆ. ಕ್ರಿಶ್ಚಿಯನ್ ಧಾರ್ಮಿಕ ನಂಬಿಕೆಯ ಹೊರತಾಗಿಯೂ ಧರ್ಮವನ್ನು ಆಧುನಿಕ ನೆಲೆಯಲ್ಲಿ ವಿಸ್ತರಿಸಿಕೊಂಡ ಪ್ರಯತ್ನವಾಗಿಯೇ **ಕ್ರಿಶ್ಚಿಯನ್ ಸೈನ್ಸ್** ಎಂಬ ಪರಿಕಲ್ಪನೆಯನ್ನೂ ನಾವಿಲ್ಲಿ ಕಾಣಬಹುದಾಗಿದೆ. ಇದೂ ಸಹ ಧರ್ಮವು ಕೇವಲ ಕುರುಡಾದುದಲ್ಲ. ಅದರ ಹಿಂದೆ ವೈಜ್ಞಾನಿಕವೆನ್ನಬಹುದಾದ ನೆಲೆಗಟ್ಟನ್ನೂ ಕಾಣಲು ಸಾಧ್ಯವೆಂಬ ನಂಬಿಕೆಯು ಇಂತಲ್ಲಿ ಕಂಡುಬರುತ್ತದೆ. ವಿಜ್ಞಾನವೆಂಬುದು ಮೌಢ್ಯವನ್ನು ಮೀರಿದ, ಕಾರ್ಯ ಕಾರಣ ಸಂಬಂಧಗಳನ್ನು ತಾರ್ಕಿಕವಾಗಿ ವಿಸ್ತರಿಸಿಕೊಳ್ಳಬಹುದಾದ ಒಂದು ಶಿಸ್ತು ಎಂದು ಪರಿಗಣಿಸಬಹುದಾದಲ್ಲಿ ನಾವಿಂದು ಧರ್ಮ, ಮೌಢ್ಯ, ಪಾರಂಪರಿಕ ನಂಬಿಕೆಗಳನ್ನೂ ಒಂದು **ರೂಢ್** ಆದ ವಿಜ್ಞಾನವೆಂಬುದಾಗಿ ವಿವರಿಸಿಕೊಳ್ಳಬಹುದು. ಧರ್ಮ ಮತ್ತು ಧರ್ಮದ ನಂಬಿಕೆಗಳು ಸಹ ಒಂದು ಕಾಲದಲ್ಲಿ ತನ್ನ ಸುತ್ತಣ ಜಗತ್ತನ್ನು ತಕ್ಕ ಮಟ್ಟಿಗೆ ತಾರ್ಕಿಕ, ಕಾರ್ಯ, ಕಾರಣ ಸಂಬಂಧಗಳೊಂದಿಗೆ ಅರ್ಥೈಸುವ ಒರಟಾದ ಪ್ರಯತ್ನವೆಂದೇ ಹೇಳಬಹುದು. ಇಂತಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಬೇರ್ಪಡಿಸುವ ಮತ್ತು ಪರಸ್ಪರ ಇರುವ ಸಾವಯ ಸಂಬಂಧವನ್ನು ಅರಿಯಲು ಪ್ರಯತ್ನಿಸಬಹುದಾಗಿದೆ. ಅಂತಹ ಒಂದು ಪ್ರಯತ್ನವು ಇಲ್ಲಿ ರೂಪಿಸಿಕೊಳ್ಳುವ ಅಧ್ಯಯನದ ಪೂರ್ವಕಲ್ಪನೆಗೆ ಇದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಕನ್ನಡದ ಸಂದರ್ಭದಲ್ಲಿ ನಾವು ಯಾವುದನ್ನು ಆಧುನಿಕತೆ ಎಂದು ಕರೆಯುತ್ತೇವೆಯೋ ಅದನ್ನು ಸ್ಥೂಲವಾಗಿಯಾದರೂ ಇಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಆಧುನಿಕತೆಯೆಂದರೆ ಯಾವುದು ಪಾಶ್ಚಾತ್ಯವಾದದ್ದೋ ಇಲ್ಲವೇ ಆಧುನಿಕ ಯಂತ್ರನಾಗರಿಕತೆಯ ಜೀವನ ವಿಧಾನವೋ ಎಂಬುದನ್ನು ಇಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಪಾಶ್ಚಾತ್ಯ ಆಲೋಚನಾ ಕ್ರಮವನ್ನು ಆಧುನಿಕತೆಯೆಂದು ಕರೆಯಬಹುದೋ ಅಥವಾ ಔದ್ಯೋಗಿಕರಣದ ನಂತರದ ಯಂತ್ರನಾಗರಿಕತೆಯ ಬದುಕಿನ ವಿಧಾನವನ್ನು ಆಧುನಿಕತೆಯೆಂದು ಕರೆಯಬಹುದೋ ಎಂಬುದರ ಕುರಿತು ಗೊಂದಲವಿದೆ. ನವೋದಯದ ಬಹುತೇಕ ಲೇಖಕರು ಗಾಂಧೀ ಪ್ರಣೀತ ಚಿಂತನೆಯಲ್ಲಿ ನಂಬಿಕೆಯುಳ್ಳವರಾಗಿದ್ದರು. ಹಾಗೆಯೇ ಭಾರತೀಯ ಪರಂಪರೆಯ ಕುರಿತಾಗಿ ಧನಾತ್ಮಕ ಒಲವುಳ್ಳವರಾಗಿದ್ದರು. ಏಕಕಾಲಕ್ಕೆ ವೇದ, ಉಪನಿಷತ್ತುಗಳ ಆಧ್ಯಾತ್ಮಿಕತೆಯನ್ನು, ಆಧುನಿಕ ವೈಜ್ಞಾನಿಕ ವಿಚಾರಧಾರೆಯನ್ನು ಬೆಸೆದು ಧರ್ಮ, ಆಧ್ಯಾತ್ಮ ವೈಜ್ಞಾನಿಕವಾಗಬೇಕೆಂದು ಪ್ರತಿಪಾದಿಸಿದ ಕುವೆಂಪು ಅಂಥವರು ನಮ್ಮ ಪರಂಪರೆಯನ್ನು ಪುನರ್ವಿಮರ್ಶಿಸುತ್ತಲೇ ಅದರ ಉತ್ತಮಿಕೆಯನ್ನು ಮತ್ತು ಆಧನಿಕ ಚಿಂತನೆಯ ಒಳಿತನ್ನು ಸಂಯೋಜಿಸಿ ಪ್ರತಿಪಾದಿಸಿದ ಚಿಂತನಧಾರೆಯು ಎಲ್ಲ ಕಾಲಕ್ಕೂ ಪ್ರಸ್ತುತವೆನಿಸುವಂತಿದೆ.

ಹಾಗೆಯೇ ಕನ್ನಡದ ಸಂದರ್ಭದಲ್ಲಿ ಬಂದ ನವ್ಯ ಸಾಹಿತ್ಯಿಕ ಚಳವಳಿಯು ಹೇಗೆ ಪರಂಪರೆಯೊಂದರ ಜೊತೆಗೆ ಕರುಳು ಬಳ್ಳಿಯ ಸಂಬಂಧವನ್ನು ಕಡಿದುಕೊಂಡಾಗ ಏರ್ಪಡುವ ಅನಾಥ ಪ್ರಜ್ಞೆಯಂತಹ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಪಡಿಸಿದೆಯೆಂಬುದನ್ನು ನಾವು ಗಮನಿಸಬಹುದು. ಹಾಗೆ ನೋಡಿದರೆ ಆಧುನಿಕತೆಯನ್ನು ಮತ್ತು ಪರಂಪರೆಯನ್ನು ಸಮನ್ವಯಿಸಿ ಆರೋಗ್ಯಕರ ನಿಲುವನ್ನು ಪ್ರಕಟಪಡಿಸಿದ ನವ್ಯರಿಗಿಂತ ನವೋದಯದ ಲೇಖಕರೇ ಇಂದು ಹೆಚ್ಚು ಪ್ರಸ್ತುತವೆನಿಸುತ್ತಾರೆ. ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಗೊರೂರು, ಮಾಸ್ತಿ, ಆನಂದರು ಸಹ ನವೋದಯದ ಪರಂಪರೆಗೆ ಸೇರಿದವರೆಂಬುದನ್ನು ಗಮನಿಸಬಹುದಾಗಿದೆ.

ನನ್ನ ಅಧ್ಯಯನದ ಸಂದರ್ಭದಲ್ಲಿ ನಾನು ಆಧುನಿಕತೆಯೆಂಬುದನ್ನು ಹೀಗೆ ಅರ್ಥೈಸಿಕೊಂಡಿರುತ್ತೇನೆ. ಯಾವುದು ಯಂತ್ರನಾಗರಿಕತೆಯ ಮೂಲಕ ಬಂದಿದೆಯೋ ಅಂತಹ ಜೀವನ ವಿಧಾನವು ಕಲಿಸಿಕೊಟ್ಟ ಆಲೋಚನಾ ಕ್ರಮವನ್ನು ಸ್ಥೂಲವಾಗಿ ಆಧುನಿಕತೆಯೆಂಬುದಾಗಿ ನಾನು ವಿವರಿಸಿಕೊಂಡಿರುತ್ತೇನೆ. ಹಾಗಂತ ಕುರುಡಾಗಿ ಯಂತ್ರ ನಾಗರಿಕತೆಯೊಂದರ ಆಲೋಚನಾ ಕ್ರಮವನ್ನೇ ಶ್ರೇಷ್ಠವೆಂದು ಒಪ್ಪಿಕೊಳ್ಳಲಾಗಿಲ್ಲ. ಕಾರ್ಯ ಕಾರಣ ಸಂಬಂಧಗಳೊಂದಿಗೆ ತಾರ್ಕಿಕ ಉತ್ತರಗಳನ್ನು ನಿರೀಕ್ಷಿಸುವ ವೈಜ್ಞಾನಿಕ ಆಲೋಚನಾ ಕ್ರಮವು ಒಂದೆಡೆಯಾದರೆ, ಪಾರಂಪರಿಕ ತಿಳಿವಳಿಕೆಯ ಮೂಲಕ ದೇಶೀ ನೆಲೆಯ ಜ್ಞಾನದ ಮೂಲ ಪ್ರತಿಪಾದಿಸುವ ಜೀವನ ವಿಧಾನವೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತದೆ.

ಇದನ್ನು ಇಲ್ಲಿ ಈ ಶತಮಾನದ ಮಹಾನ್ ಚೇತನಗಳಾದ ಗಾಂಧೀ ಮತ್ತು ಜಪಾನಿನ ಸಹಜ ಕೃಷಿಕ ಪುಕುವೋಕಾ ಪ್ರತಿಪಾದಿಸುವ ತತ್ವಗಳೊಂದಿಗೆ ವಿಶ್ಲೇಷಿಸಬಹುದಾಗಿದೆ. ಇವರು ಪ್ರತಿಪಾದಿಸುವ ಮೌಲ್ಯಗಳು ಆಧುನಿಕವಾದುವೇ ಆಗಿವೆ. ಗಾಂಧೀಜಿ ಯಂತ್ರನಾಗರಿಕತೆಯನ್ನೇ ನಿರಾಕರಿಸುವ ಎಕ್ಸ್ಟ್ರೀಮ್ ಆದ ನೆಲೆಗೆ ತಲುಪಿದರೆ, ಪುಕುವೋಕಾ ಸಹಜ ಕೃಷಿಯ ತಾತ್ವಿಕತೆಯನ್ನು ಮತ್ತದರ ನೆಲೆಯನ್ನು ಅತ್ಯಾಧುನಿಕವೆಂಬುದಾಗಿ ವ್ಯಾಖ್ಯಾನಿಸುತ್ತಾರೆ. ಇಂದು ಗ್ಲೋಬಲ್ ವಾರ್ಮಿಂಗ್‌ನಂತಹ ಪರಿಸರದ ಸಮಸ್ಯೆಯನ್ನು ಗಾಂಧೀಜಿಯವರ ತಾತ್ವಿಕ ನೆಲೆಗಟ್ಟಿನಲ್ಲಿ ಸಮರ್ಪಕವಾಗಿ ಚರ್ಚಿಸಬಹುದಾಗಿದೆ. ಗಾಂಧೀಜಿಯವರು ಆಧುನಿಕ ನಾಗರಿಕತೆಯ ವಿಪತ್ಕಾರೀ ಪರಿಣಾಮಗಳನ್ನು ಮೊದಲೇ ಊಹಿಸಿದ್ದರು. ಈ ನೆಲೆಯು ನನ್ನ ಅಧ್ಯಯನಕ್ಕೆ ತಾತ್ವಿಕತೆಯ ನೆಲೆಗಟ್ಟನ್ನು ಒದಗಿಸಿಕೊಡಬಲ್ಲುದಾಗಿದೆ. ಗೊರೂರ ಜೀವನ ದೃಷ್ಟಿ ಮತ್ತು ಅವರ ಸೃಜನಶೀಲ ತಾತ್ವಿಕತೆಯು ಹಳ್ಳಿಯ ಸಹಜ ಬದುಕಿನ ಪಾರಂಪರಿಕ ನಂಬಿಕೆಗಳನ್ನು ಆಧುನಿಕತೆಯೊಂದಿಗೆ ಬೆಸೆಯುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಿದೆ. ಆಧುನಿಕತೆಯ ವಿಕೃತಿಯನ್ನು ಮೀರುವ ಆರೋಗ್ಯಕಾರಿ ನಿಲುವನ್ನು ನಾವಿಲ್ಲಿ ಕಾಣಬಹುದಾಗಿದೆ.

ಹಾಗೆಯೇ ಆನಂದರು ಕೂಡ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿಯಾಗಿಸಿದ ಕನ್ನಡದ ಲೇಖಕರಲ್ಲಿ ವಿಶಿಷ್ಟ ಬಗೆಯವರಾಗಿದ್ದಾರೆ. ಅವರು ನಾನು ಕೊಂದ ಹುಡುಗಿ ಕತೆಯಲ್ಲಿ

ನಿರೂಪಿಸುವ ಪರಂಪರೆಯ ನಂಬಿಕೆಗಳು ಮತ್ತು ನಿರೂಪಕರ ಆಧುನಿಕ ಮೌಲ್ಯಗಳು ಮುಖಾಮುಖಿಯಾಗುವ ಬಗೆ ಪರಿಣಾಮಕಾರಿಯಾಗಿದೆ. ಆಧುನಿಕವೆನ್ನುವ ಜೀವನ ಮೌಲ್ಯಗಳು ಹೇಗೆ ಪರಂಪರೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಫಲವಾಗುತ್ತವೆ ಎಂಬುದನ್ನು ಈ ಕತೆ ಸೊಗಸಾಗಿ ಚಿತ್ರಿಸುತ್ತದೆ. ಪರಂಪರೆಯನ್ನು ಅರಿಯಲಾಗದ ವ್ಯಕ್ತಿ ತನ್ನ ಆಧುನಿಕ ಚಿಂತನೆಗಳು ನಂಬಿಕೆಗಳ ಮೂಲಕ ವಿಷಾದಕಾರಿ ಸಂಘಟನೆಯೊಂದಕ್ಕೆ ಸಾಕ್ಷಿಯಾಗುವ ಪರಿಯನ್ನು ನಾವಿಲ್ಲಿ ಕಾಣಬಹುದಾಗಿದೆ. ಇದು ಪರಂಪರೆಯನ್ನು ಅರ್ಥೈಸಿಕೊಳ್ಳಲಾಗದ ಕತೆಯ ನಿರೂಪಕರು ಎಸಗಬಹುದಾದ ದುರಂತವೆಂದು ನಾವಿಲ್ಲಿ ವಿವರಿಸಿಕೊಳ್ಳಬಹುದಾದಲ್ಲಿ ಇದನ್ನು ಮತ್ತಷ್ಟೂ ವಿಸ್ತರಿಸಿಕೊಳ್ಳುವ ಸಾಧ್ಯತೆಯಿದೆ. ಆಧುನಿಕರಾದ ನಾವಿಂದು ಅದೆಷ್ಟೋ ಬುಡಕಟ್ಟುಗಳನ್ನು, ಅವರ ಜೀವನ ವಿಧಾನಗಳನ್ನು, ಅವರ ಪರಂಪರೆಯ ಜ್ಞಾನವನ್ನು ನಾಶಗೊಳಿಸಿದ್ದೇವೆ. ಜಲಮೂಲ, ನದಿಮೂಲ, ಅರಣ್ಯ, ಪರಿಸರ ಎಲ್ಲವನ್ನೂ ವಿನಾಶದ ಅಂಚಿಗೆ ಕೊಂಡೊಯ್ದಿದ್ದೇವೆ. ಪರಂಪರೆಯನ್ನು ಆಧುನಿಕತೆಯೊಂದಿಗೆ ಸಾವಯವಾಗಿ ಬೆಸೆಯದಿದ್ದಲ್ಲಿ ಇಂತಹ ವಿಷಾದಂತ ಸಂಘಟನೆಗಳ ಸರಮಾಲೆಯೇ ನಡೆಯುತ್ತಿದೆಯೆಂಬುದಕ್ಕೆ ವರ್ತಮಾನದ ಆಧುನಿಕ ಜಗತ್ತಿನ ಈ ಮೇಲೆ ಉದಹರಿಸಿದ ಸಂಘಟನೆಗಳೇ ಸಾಕ್ಷಿಯಾಗಿವೆ. ಆನಂದರು ತಮ್ಮ ಸಣ್ಣದೊಂದು ಕತೆಯಲ್ಲಿ ವಿವರಿಸುವ ಪರಂಪರೆ ಮತ್ತು ಆಧುನಿಕತೆಯ ನಡುವಿನ ಬಿರುಕು ಸಾಂಕೇತಿಕವಾಗಿ ಇಡೀ ಮನುಕುಲದ ಎಲ್ಲ ರಂಗಗಳಿಗೂ ಅನ್ವಯವಾಗುತ್ತದೆಯೆಂಬುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಹಾಗೆಯೇ ಮತ್ತೊಂದು ವೈರುಧ್ಯವನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಯಾವುದು ಯಂತ್ರ ನಾಗರಿಕತೆಯ ಮೂಲಕ ಬಂದಿದೆಯೋ ಅಂತಹ ಯಂತ್ರಗಳನ್ನು ಮಾನವ ಸಮಾಜ ಬಳಸಿಕೊಂಡಾಗ್ಯೂ ಅದರ ಹಿಂದಿನ ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗದಿರುವುದನ್ನು ಗಮನಿಸಬಹುದು. ನಿದರ್ಶನಕ್ಕೆ ಇಂದಿನ ಆಧುನಿಕ ಮಾರಣಾಯುಧಗಳನ್ನು ಹಿಡಿದು ರಕ್ತಪಾತ, ಹಿಂಸೆ, ವಿಚ್ಛಿದ್ರಕಾರಕ ಸಂಘಟನೆಗಳಲ್ಲಿ ತೊಡಗಿರುವ ಭಯೋತ್ಪಾದಕರು, ಉಗ್ರಗಾಮಿಗಳು ತಾವು ಬಳಸುವ ಆ ಅಸ್ತ್ರಗಳು ರೂಪುಗೊಂಡ ಹಿಂದಿನ ವೈಜ್ಞಾನಿಕತೆಯ ತಾತ್ವಿಕತೆಯನ್ನು ಅರಿಯದೇ ಹೋಗಿರುವುದು ದರುಂತವೇ ಸರಿ. ಅಂದರೆ ಆ ಶಸ್ತ್ರಾಸ್ತ್ರಗಳು, ಯಂತ್ರಗಳ ಆವಿಷ್ಕರಣೆಯ ಹಿಂದಿನ ವೈಜ್ಞಾನಿಕತೆಯ ತತ್ವವು ಮನುಷ್ಯ ಸಮಾನತೆಯನ್ನು ಪ್ರತಿಪಾದಿಸುವಂತಹುದು. ಹಾಗೆಯೇ ಆಧುನಿಕ ಮನುಷ್ಯ ಹೋಮೋಸೆಫಿಯನ್‌ನ ಸಂತತಿಯೆಂಬ ಸತ್ಯವೇ ನಮ್ಮ ಸಂಸ್ಕೃತಿಗಳು, ಧರ್ಮಗಳು, ಜಾತಿಗಳ ನಂಬಿಕೆಗಳು ಎಂತಹ ಹುಸಿ ನೆಲೆಗಟ್ಟಿನ ಮೇಲೆ ನಿಂತಿವೆಯೆಂಬ ಸಂಗತಿಯನ್ನು ಬಟಾಬಯಲು ಗೊಳಿಸುವಂತಹದ್ದು.

ಅಡಿಟಿಪ್ಪಣಿಗಳು

೧. ನಾಗರತ್ನ ಕುಮಾರಿ. ಬಿ.ಎಸ್ (ಸಂ) ಸಾಹಿತ್ಯ ವಿಮರ್ಶೆ–೨೦೦೬–ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು–೨೦೦೮–ಪುಟ–೮೫

೨. ಗಿರಡ್ಡಿ ಗೋವಿಂದರಾಜ– ಸಾಹಿತ್ಯ ಮತ್ತು ಪರಂಪರೆ– ಹೇಮಂತ ಸಾಹಿತ್ಯ ಬೆಂಗಳೂರು–೨೦೧೧–ಪುಟ–೩೦

೨. ಸುಜನಾ– ಪರಂಪರೆ ಮತ್ತು ಕುವೆಂಪು–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು–೨೦೧೧–ಪುಟ–೦೨

೩. ನಟರಾಜ್ ಹುಳಿಯಾರ್– ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ–ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೪–ಪುಟ–೧೨೯

೪. ಅದೇ ಪುಟ–೧೨೯

೫. ಅದೇ ಪುಟ–೧೩೦

೬. ಅದೇ ಪುಟ–೧೨೯

೭. ಅದೇ ಪುಟ–೧೨೯

೮. ಕೋದಂಡರಾಮ ಎನ್.ಕೆ– ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ– ರೂಪ ಪ್ರಕಾಶನ ಮೈಸೂರು– ೨೦೦೮–ಪುಟ–೪೧

೯. ಶಂಕರನಾರಾಯಣ (ಪ್ರ. ಸಂ)–ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ–೨೦೧೦, ಪುಟ–೧೮

೧೦. ಅದೇ ಪುಟ–೨೫

೧೧. ಅದೇ ಪುಟ–೪೦

೧೨. ಅದೇ ಪುಟ–೫೧

೧೩. ಅದೇ ಪುಟ–೭೩

೧೪. ರಹಮತ್ ತರೀಕೆರೆ– ಪ್ರತಿಸಂಸ್ಕೃತಿ, ಅಭಿನವ ಪ್ರಕಾಶನ ಬೆಂಗಳೂರು–೨೦೧೩, ಪುಟ–೪೩

ಅಧ್ಯಾಯ – ನಾಲ್ಕು

ಮಾಸ್ತಿಯವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಅಧ್ಯಾಯ - ನಾಲ್ಕು

ಮಾಸ್ತಿಯವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಪೀಠಿಕೆ

ಕನ್ನಡ ಸಣ್ಣ ಕತೆಯ ಇತಿಹಾಸದಲ್ಲಿ ಮೊದಲನೆಯದಲ್ಲದಿದ್ದರೂ ಅತಿ ದೊಡ್ಡ ಹೆಸರು ಶ್ರೀನಿವಾಸರದು. ಅವರ ಮೊದಲ ಕತೆ ೧೯೧೦ರಲ್ಲಿ ಪ್ರಕಟವಾಯಿತು. ಹಾಗೂ ೧೯೮೪ರ ವರೆಗೆ ಹದಿನೈದು ಕಥಾಸಂಕಲನಗಳು ಪ್ರಕಟಗೊಂಡವು. ಇವುಗಳಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಕತೆಗಳು ಅಲ್ಲದೇ, ಮಹಾವ್ಯಕ್ತಿಗಳನ್ನು ಕುರಿತ ಕೆಲವು ಕತೆಗಳು ಇವೆ. ಹೇಮಕೂಟದಿಂದ ಬಂದ ಮೇಲೆ, ಗೌತಮಿ ಹೇಳಿದ ಕತೆ, ಮಂತ್ರೋದಯ ಮೊದಲಾದವು ಪೌರಾಣಿಕ ಕತೆಗಳಾದರೆ, ಮೊಸರಿನ ಮಂಗಮ್ಮ, ವೆಂಕಟಿಗನ ಹೆಂಡತಿ, ಚಂದ್ರವದನಾ, ಆಚಾರವಂತ ಅಯ್ಯಂಗಾರ್ರು, ಚಟ್ಟೇಕಾರನ ತಾಯಿ ಮೊದಲಾದ ಕತೆಗಳು ಸಾಮಾಜಿಕ ವಸ್ತುವುಳ್ಳವು. ಬಾದಶಹನ ನ್ಯಾಯ, ಪಂಡಿತನ ಮರಣಶಾಸನ, ಆಚಾರ್ಯರ ಪತ್ನಿ ಮೊದಲಾದ ಕತೆಗಳು ಐತಿಹಾಸಿಕ ಪ್ರಸಂಗ ಸೃಷ್ಟಿಸುವಂಥವು. ಕೆಲವು ಮಹಾಚೇತನರ ಕುರಿತು ಬರೆದ ಕವಿಯ ಬಾಳ ಕೊನೆಯ ದಿನ, ನರ್ತಕಿಯ ಪರಾಭವ, ಮುಪ್ಪಿನ ಚಪಲ ಇತ್ಯಾದಿ. ಒಟ್ಟು ಮಾಸ್ತಿಯವರಿಂದ ರಚಿತವಾದ ಸಣ್ಣಕತೆಗಳು ನೂರು.

"ಮಾಸ್ತಿಯವರ ಕತೆಗಳೆಂದರೆ ಹೊಸದೊಂದು ಜಗತ್ತಿಗೆ ಕಾಲಿಟ್ಟ ಹಾಗೆ. ಸೃಷ್ಟಿಯ ಜಗತ್ತಿನ ವೈವಿಧ್ಯ, ವೈಚಿತ್ರ್ಯ, ಶ್ರೀಮಂತಿಕೆ ಬೆರಗುಗಳನ್ನು ಮರೆಯುವ ಜಗತ್ತನ್ನು, ಜಗತ್ತಿನ ಶ್ರೇಷ್ಠ ಸಾಹಿತಿಗಳು ಮಾತ್ರ ಸೃಷ್ಟಿಸಬಲ್ಲರು. ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಶಿವರಾಮ ಕಾರಂತ, ಕುವೆಂಪು ಇಂಥ ದೈತ್ಯ ಪ್ರತಿಭೆಗಳು ಮಾತ್ರ ಇಂಥ ಪುನರ್ ಸೃಷ್ಟಿಯನ್ನು ಸಾಧಿಸಬಲ್ಲರು. ಈ ಪಂಕ್ತಿಯಲ್ಲಿ ನಿಲ್ಲುತ್ತಾರೆ ಮಾಸ್ತಿ" ಎಂದು ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಮಾಸ್ತಿಯವರ ಸಣ್ಣಕತೆಗಳನ್ನು ಕುರಿತು ಹೇಳಿದ್ದಾರೆ. ಅಂದರೆ ಮಾಸ್ತಿಯವರ ಕತೆಗಳಲ್ಲಿ ಋಷಿಗಳು, ರಾಜರು, ರಾಣಿಯರು ಮತ್ತು ಅರಿಸ್ಟಾಟಲ್‌ನಂತಹ ಪ್ರತಿಭಾವಂತರು ಇದ್ದಾರೆ. ಅಷ್ಟೇ ಅಲ್ಲ ಹೆಮ್ಮೆಯಿಂದ ಬೀಗುವ ಸಂನ್ಯಾಸಿ, ಬಡವೆಂಕಟಿಗ, ವೆಂಕಟಶಾಮಿ, ಶಕುಂತಳೆ, ಬೀದಿಯಲ್ಲಿ ಹೋಗುವ ನಾರಿ, ಯುವಕ

ರಂಗಪ್ಪ, ಓದದ ಹುಡುಗಿಯಾಗಿಯೂ ಅವನಿಗೆ ಸಂತೋಷ ಕೊಡುವ ಚೈತನ್ಯಮಯಿ ರತ್ನ ಹೀಗೆ ಅನೇಕ ಪಾತ್ರಗಳು ಮಾಸ್ತಿಯವರ ಕತೆಯ ವಸ್ತುವಾಗಿ ಕಂಡು ಬರುತ್ತವೆ.

ಮಾಸ್ತಿಯವರ ಕತೆಗಳ ವಸ್ತುಗಳಲ್ಲಿ ವೈವಿಧ್ಯವಿದೆ. ಆದರೆ ಪ್ರಸ್ತುತ ಈ ಅಧ್ಯಾಯದಲ್ಲಿ ಕೆಲವು ಅಂಶಗಳನ್ನಷ್ಟೇ ಮುಖ್ಯವಾಗಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

೪.೧. ನಂಬಿಕೆ/ಆಚರಣೆ

೪.೨. ಹಳ್ಳಿ

೪.೩. ವೈಚಾರಿಕತೆ

೪.೪. ಉದ್ಯೋಗ

೪.೫. ಶಿಕ್ಷಣ

ಈ ಅಂಶಗಳನ್ನ ಮುಖ್ಯವಾಗಿಟ್ಟುಕೊಂಡು ಮಾಸ್ತಿಯವರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೪.೧. ನಂಬಿಕೆ ಅಥವಾ ಆಚರಣೆ

ಪರಂಪರೆ ಎಂದರೆ ಮುಖ್ಯವಾಗಿ ಕಂಡು ಬರುವ ಅಂಶ ನಂಬಿಕೆ ಅಥವಾ ಆಚರಣೆ. ಮಾಸ್ತಿಯವರ ಬಹುತೇಕ ಕತೆಗಳ ವಸ್ತು ನಂಬಿಕೆ ಅಥವಾ ಆಚರಣೆಯಾಗಿದೆ. 'ರಂಗನ ಮದುವೆ' ಕತೆಯಲ್ಲಿ ಬರುವ ಕರಣೀಕರೇ ಮೊದಲು ಧೈರ್ಯಮಾಡಿ ಮಗನನ್ನು ಬೆಂಗಳೂರಿಗೆ ಇಂಗ್ಲಿಷ್ ಶಿಕ್ಷಣ ಕಲಿಯಲು ಕಳುಹಿಸಿದ್ದರು. ಬೆಂಗಳೂರಿನಿಂದ ಹಳ್ಳಿಗೆ ಬಂದ ರಂಗನನ್ನು ನೋಡಲು ಹಳ್ಳಿಯವರು ಜನಮರುಳೋ, ಜಾತ್ರೆ ಮರುಳೋ? ಎಂಬಂತೆ ರಂಗನ ಮನೆಯ ಪಡಸಾಲೆ ತುಂಬಿ ತುಳುಕುತ್ತಿತ್ತು. ರಂಗನಿಗೆ ಮೊದಲಿನ ಹಾಗೆಯೇ ಕೈ ಕಾಲು ಕಣ್ಣು ಮೂಗುಗಳೆಲ್ಲ ಇದ್ದುದರಿಂದ ಹುಡುಗನ ಬಾಯಲ್ಲಿ ಕಲ್ಲು ಸಕ್ಕರೆ ಕರಗುವಂತೆ ಆ ದೊಂಬಿಯ ಗುಂಪು ಕರಗಿಹೋಯಿತು. ಅಲ್ಲಿಗೆ ಬಂದಿದ್ದ ಜನರ ಉದ್ದೇಶ ರಂಗ ಇಂಗ್ಲೀಷ್ ಶಿಕ್ಷಣ ಪಡೆಯಲು ಬೆಂಗಳೂರಿಗೆ ಹೋಗಿದ್ದರಿಂದ, ಅವನಲ್ಲಿ ಆಗಿರುವ ಬದಲಾವಣೆಗಳನ್ನು ನೋಡಲು. ಆದರೆ ಮುದುಕಮ್ಮನವರು ರಂಗನ ಹತ್ತಿರ ನಿಂತಿದ್ದು, ಅವನ ಎದೆಯ ಮೇಲೆ ಕೈಯಾಡಿಸಿ ದೃಷ್ಟಿಸಿ ನೋಡಿ "ಜನಿವಾರ ಇನ್ನು ಇದೆ ಜಾತಿ ಕೆಡಿಸಿಲ್ಲ" ಎಂದು ಹೊರಟು ಹೋದರು. ರಂಗ ನಕ್ಕ.

ಇಲ್ಲಿ ನಾನು ಗಮನಿಸಿದ ಅಂಶವೆಂದರೆ ರಂಗ ಇಂಗ್ಲಿಷ್ ಶಿಕ್ಷಣವನ್ನು ಪಡೆದು, ಇಂಗ್ಲೀಷ್ ಭಾಷೆಯನ್ನು ಮಾತಾಡುವುದು, ಅಲ್ಲಿದ್ದ ಜನರಿಗೆ ಅರ್ಥವಾಗದೆ ಹೋಗುತ್ತದೆ. ಇದಕ್ಕೆ ಉದಾಹರಣೆಯನ್ನು ಕತೆಗಾರರು ಕತೆಯಲ್ಲೆ ಕೆಲವು ಸನ್ನಿವೇಶಗಳನ್ನು ನಿರೂಪಿಸಿದ್ದಾರೆ. "ರಾಮರಾಯರ ಮನೆಯಲ್ಲಿ ಒಂದು ಸೌದೆಯ ಹೊರೆಯನ್ನು ಕೊಂಡರು ಅವರ ಮಗ ದುಡ್ಡು ಕೊಡುವುದಕ್ಕೆ ಬಂದು ನಿನಗೆ ಎಷ್ಟು ಕೊಡಬೇಕು? ಎಂದು ಸೌದೆಯವಳನ್ನು ಕೇಳಿದನು. ಅದಕ್ಕೆ ಅವಳು ಸ್ವಾಮಿ ನಾಲ್ಕು ದುಡ್ಡು ಕೊಡಬೇಕು ಎಂದಳು. ಅದಕ್ಕೆ ರಾಮರಾಯರ ಮಗ ಈಗ ಛೇಂಜು ಇಲ್ಲ ಹೋಗು, ನಾಳೆ ಬಾ ಎಂದು ಒಳಗೆ ಹೊರಟು ಹೋದನು ಅವಳಿಗೆ ಪಾಪ ಅರ್ಥವಾಗಲಿಲ್ಲ ಅವಳು ಗೊಣಗುಟ್ಟುತ್ತಾ ಹೊರಟು ಹೋದಳು".[೧] ರಂಗ ಇಂಗ್ಲೀಷ್ ಶಿಕ್ಷಣ ಪಡೆದವನಾಗಿದ್ದರಿಂದ

ಅವನು ಇಂಗ್ಲೀಷ್‌ನಲ್ಲೆ ಉತ್ತರವನ್ನು ಕೊಡುತ್ತಾನೆ. ಆದರೆ ಸೌದೆ ತಂದವಳು ಹಳ್ಳಿಯ ಅನಕ್ಷರಸ್ಥ ಹೆಣ್ಣಾಗಿದ್ದರಿಂದ ಅವಳಿಗೆ ರಂಗನ ಮಾತು ಅರ್ಥವಾಗುವುದಿಲ್ಲ. ಮಾಸ್ತಿಯವರಿಗೆ ಆಧುನಿಕತೆಯ ಬಗ್ಗೆ ಅಷ್ಟಾಗಿ ಒಲವಿಲ್ಲದೆ ಇರುವುದರಿಂದ ಬಹುತೇಕ ಪಾತ್ರಗಳನ್ನು ಪರಂಪರೆಯಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಆದರೆ ಮಾಸ್ತಿಯವರ ಪ್ರಭಾವದಲ್ಲಿಯೇ ಕತೆಗಳನ್ನು ಬರೆದ ಆನಂದರು ತಮ್ಮ ಕತೆಗಳಲ್ಲಿ ಇಂಗ್ಲೀಷ್ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ.

ರಂಗ ಬೆಂಗಳೂರಿಗೆ ಹೋಗಿ ಇಂಗ್ಲೀಷ್ ಶಿಕ್ಷಣವನ್ನು ಪಡೆದಿದ್ದರೂ ಅವನಲ್ಲಿ ಕೆಲವು ಆಚರಣೆಗಳೂ ಆಗಿಯೇ ಉಳಿದಿದ್ದವು. ಕತೆಯಲ್ಲಿ ಬರುವ ನಿರೂಪಕನಿಗೆ ಅವನ ನಡತೆಯಿಂದ ಅದು ಖಚಿತವಾಗುತ್ತದೆ. "ಈಗಿನ ಹುಡುಗರಂತೆ, ತಲೆಯನ್ನು ಮೇಲಕ್ಕೆ ಎತ್ತಿ ಸೂರ್ಯನನ್ನು ನೋಡುತ್ತ, ಸೊಂಟದ ಹತ್ತಿರ ಕೀಲೇ ಇಲ್ಲದಂತೆ ಕೋಲಿನಂತೆ ನಿಂತುಕೊಂಡು, ಕೈಯನ್ನೋ ಬೆತ್ತವನ್ನೋ ಅಲ್ಲಾಡಿಸುವಂತಲ್ಲ: ಸುಮ್ಮನೆ ಕೈ ಜೋಡಿಸುವ ನಮಸ್ಕಾರವೂ ಅಲ್ಲ: ನೆಲಕ್ಕೆ ಬಗ್ಗಿ ಕಾಲುಗಳನ್ನು ಮುಟ್ಟಿ ಮಾಡಿದ".[೨] ರಂಗನಿಗೆ ಹಿರಿಯರ ಬಗ್ಗೆ ಗೌರವವಿರುವುದನ್ನು ನಾವು ಇಲ್ಲಿ ಕಾಣಬಹುದು. ಇದನ್ನೇ ನಟರಾಜ್ ಹುಳಿಯಾರ್ ಪರಂಪರೆಯ ವ್ಯಾಖ್ಯಾನಗಳನ್ನು ವಿವರಿಸುವಾಗ ಬಳಸಿಕೊಂಡಿದ್ದಾರೆ. ಆಫ್ರಿಕನ್ ಸಂಸ್ಕೃತಿ ವಿಮರ್ಶಕ ಒಬಿಚೀನಾ ಪರಂಪರೆಯ ಪರಿಕಲ್ಪನೆಯನ್ನು ಎಲಿಯಟ್ಟನ ಅರ್ಥದಲ್ಲಿ, ಎದುರಾದವನಿಗೆ ನಮಸ್ಕರಿಸುವುದರಿಂದ ಹಿಡಿದು, ಅತ್ಯಂತ ಮುಖ್ಯವಾದ ಧಾರ್ಮಿಕ ಅಭ್ಯಾಸಗಳನ್ನೂ ಒಳಗೊಳ್ಳುವ ಮೊತ್ತವಾಗಿ ಗ್ರಹಿಸುತ್ತಾನೆ. ಇಂಗ್ಲೀಷ್‌ನ ಟ್ರೆಡಿಷನ್ ಎಂಬ ಪದಕ್ಕೆ ಮೂಲತಃ ಹಿರೀಕರಿಂದ ಬಳುವಳಿಯಾಗಿ ಬಂದದ್ದು ಎಂಬ ಅರ್ಥವಿರುವುದನ್ನು ಗುರುತಿಸುವ ರೇಮಂಡ್ ವಿಲಿಯಮ್ಸ್ ಆಧುನೀಕರಣದ ಘಟ್ಟ ಟ್ರೆಡಿಷನ್ ಹಾಗೂ ಟ್ರೆಡಿಷನಲಿಸಂ ಎಂಬ ಪರಿಕಲ್ಪನೆಗಳನ್ನು ಎಲ್ಲ ಹೊಸತಿನ ವಿರೋಧಿಯಾಗಿ, ನಕಾರಾತ್ಮಕವಾಗಿ ಕಾಣುವುದನ್ನು ಕುರಿತು ಹೇಳುತ್ತಾನೆ".[೩]

ಮಾಸ್ತಿ ಎಷ್ಟು ಪರಂಪರಾವಾದಿ ಎಂಬುದಕ್ಕೆ 'ರಂಗನ ಮದುವೆ' ಕತೆಯೇ ಕನ್ನಡಿ ಹಿಡಿದಂತಿದೆ. ರಂಗ ಇಂಗ್ಲಿಷ್ ಶಿಕ್ಷಣವನ್ನು ಪಡೆಯುವ ಮೂಲಕ ಆಧುನಿಕತೆಗೆ ಮುಖಾಮಾಡಿದರೆ, ಅವನ ಮದುವೆ ವಿಚಾರದಲ್ಲಿ ಪರಂಪರೆಯನ್ನು ಒಪ್ಪಿಕೊಳ್ಳುವಂತೆ ಕತೆಗಾರ ನಿರೂಪಿಸಿದ್ದಾನೆ. ಅದಕ್ಕೆ ಜೋತಿಷ್ಯವನ್ನು ಸೃಷ್ಟಿಸುತ್ತಾನೆ. ಶಾಸ್ತ್ರ ಹೇಳಲು ಎರಡು ಕಾಗದ, ಕೆಲವು ಕವಡೆ, ಒಂದು ಓಲೆ ಪುಸ್ತಕ ಇದನ್ನೆಲ್ಲ ತೆಗೆದು, ಅನಾದಿಯಾದ ಶಾಸ್ತ್ರವಯ್ಯಾ ಇದು, ಇದಕ್ಕೆ ಒಂದು ಕಥೆಯೂ ಇದೆ ಎಂದು ಕತೆಯನ್ನು ಹೇಳಿದ. ಆರಂಭದಲ್ಲಿ ತನಗಿಂತ ತುಂಬಾ ಚಿಕ್ಕವಯಸ್ಸಿನ ಹುಡುಗಿಯನ್ನು ಮದುವೆ ಆಗಲು ಒಪ್ಪಿಕೊಳ್ಳದ ರಂಗನ ಆಧುನಿಕ ಮನಸ್ಥಿತಿಯನ್ನು, ಸೌಂದರ್ಯ ಎಂಬ ತಂತ್ರದಿಂದ ಅದೇ ಹುಡುಗಿಯನ್ನು ಮದುವೆಯಾಗಲು ರಂಗನನ್ನು ಒಪ್ಪಿಸುವ ಜಾಣ್ಮೆಯೂ ಕೂಡ ಮಾಸ್ತಿಯವರು ಪರಂಪರಾವಾದಿಗಳು ಎಂಬುದಕ್ಕೆ ಸಾಕ್ಷಿಯಾಗಿದೆ.

'ವೆಂಕಟರಾಯಸ ಪಿಶಾಚ' ಕತೆಯಲ್ಲಿ ಬರುವ ವೆಂಕಟರಾಯ ಓದುವುದಕ್ಕಾಗಿ ಬೆಂಗಳೂರಿಗೆ ಹೋಗಿದ್ದ. ತನ್ನ ತಾಯಿಯ ಸ್ವಲ್ಪ ದೂರದ ಸಂಬಂಧಿಯಾದ ಕೃಷ್ಣರಾಯರ ಮನೆಯಲ್ಲಿ

ಇರಬೇಕಾಯಿತು. ಅಂತಹ ಸಂದರ್ಭದಲ್ಲಿ ನಡೆದ ಒಂದು ಘಟನೆಯೇ ವೆಂಕಟರಾಯನ ಪಿಶಾಚ ಕತೆಯ ವಸ್ತು. ವೈದಿಕರಲ್ಲಿ ಜನಿವಾರವನ್ನು ಹಾಕುವ ಒಂದು ಪರಂಪರೆ ಇದೆ. ಅದರಂತೆ ಈ ಕತೆಯಲ್ಲಿ ಬರುವ ಎಲ್ಲಾ ಹುಡುಗರಿಗೆ ಜನಿವಾರ ಹಾಕಿಕೊಂಡರೆ ಪಿಶಾಚದ ಭಯ ಇರುವುದಿಲ್ಲ ಎಂದು ತಂದೆಯವರು ತಮ್ಮ ಮಕ್ಕಳಿಗೆ ಅದರಲ್ಲಿ ಬ್ರಹ್ಮಗಂಟಿದೆ, ನೋಡು; ರುದ್ರಗಂಟಿದೆ ನೋಡು; ಅದನ್ನು ತೋರಿಸಿದರೆ ಪಿಶಾಚ ಓಡುತ್ತದೆ ಎಂದು ಮಕ್ಕಳಿಗೆ ಹೇಳಿ ಜನಿವಾರವನ್ನು ಹಾಕಿರುತ್ತಾರೆ. ಶಿಕ್ಷಣಕ್ಕಾಗಿ ನಗರಕ್ಕೆ ಹೋಗುತ್ತಿದ್ದ ತಮ್ಮ ಮಕ್ಕಳು ಎಲ್ಲಿ ಆಧುನಿಕತೆಗೆ ಒಳಗಾಗಿ ಪರಂಪರೆಯನ್ನು ಮರೆಯುವರು ಎಂಬ ಉದ್ದೇಶದಿಂದ ಮಕ್ಕಳಿಗೆ ಪಿಶಾಚ ಇದೆ ಎಂದು ಬಲವಂತವಾಗಿ ನಂಬಿಸುವರು. ಇದರಿಂದ ಹುಡುಗರಿಗೆ ಏನಾಗುತಿತ್ತೆಂದರೆ, ಪಿಶಾಚ ಬರುವುದು ಎನ್ನುವುದು ನಿಜವಾದ ಮಾತು ಎಂತ ತೋರುತ್ತದೆ. ಅದು ಬಂದಾಗ ಜನಿವಾರ ತೋರಿಸಿದರೆ ಅದು ಓಡುವುದೋ ಇಲ್ಲವೋ ಅದು ಬೇರೆ ಮಾತು ಬರುವುದುಂಟು ಎಂದಾಯಿತು. ಅಂದರೆ "ಬದುಕಿಗೆ ಬೇಕಾಗಿಯೇ ಇಲ್ಲದ ಸುಳ್ಳುಗಳನ್ನು ಅನಿವಾರ್ಯ ಸತ್ಯಗಳೆಂದು ಪರಂಪರೆಯು ಅಭಿವ್ಯಕ್ತಿಸಲು ಪ್ರಯತ್ನಿಸುತ್ತದೆ" ಎಂದು ಕೋದಂಡರಾಮ ಪರಂಪರೆಯನ್ನು ವ್ಯಾಖ್ಯಾನಿಸಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ವೆಂಕಟರಾಯನಿಗೆ ಹದಿನಾಲ್ಕು ಹದಿನೈದು ವರುಷ ವಯಸ್ಸಿದ್ದಾಗ ಅವನಿಗೆ ಹುಡುಗಿಯನ್ನು ಕೊಡಲು ಹುಡುಗಿಯ ತಂದೆ ಶ್ರೀನಿವಾಸರಾಯರು, ಅವರ ಸಹಾಯಕ್ಕೆ ಕೃಷ್ಣಪ್ಪ ಇಬ್ಬರೂ ಬೆಂಗಳೂರಿನಲ್ಲಿರುವ ಕೃಷ್ಣರಾಯರ ಮನೆಗೆ ಹೋಗುತ್ತಾರೆ. ಕೃಷ್ಣರಾಯರ ಮನೆಯ ಸಾಲಿನಲ್ಲಿ ನಾಲ್ಕನೆಯ ಮನೆಗೆ ಪಿಶಾಚದ ಮನೆ ಎಂತ ಹೆಸರು ಬಂದಿತ್ತು. ಆ ಮನೆಯಲ್ಲಿ ಒಂದು ಕಾಲದಲ್ಲಿ ಒಬ್ಬ ವ್ಯಾಪಾರಿ ಮತ್ತು ಅವನ ಹೆಂಡತಿ ವಾಸವಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಒಂದು ದಿನ ವ್ಯಾಪಾರಿ ಸಾಯಂಕಾಲ ಅಂಗಡಿಯಿಂದ ಮನೆಗೆ ಬಂದನು. ಬರುವುದರೊಳಗೆ ತನ್ನ ಹೆಂಡತಿ ಯಾರೋ ಪರಪುರುಷನ ಜೊತೆ ಮಾತನಾಡುತ್ತಿದ್ದಳಂತೆ. ಏನೋ ಸ್ವಲ್ಪ ಗಲಾಟೆ ಆಯಿತು. ಆ ದಿನ ರಾತ್ರಿ ಗಂಡನೇ ಏನಾದರೂ ಮಾಡಿದನೇ ಅಥವಾ ಅವಳೇ ಅವಮಾನವನ್ನು ಸಹಿಸಲಾರದೆಯೋ ಪ್ರಾಣವನ್ನು ಕಳೆದುಕೊಂಡಿದ್ದಳು. ನಂತರ ಸ್ವಲ್ಪದಿನದ ಮೇಲೆ ಅವನ ಗಂಡನು ಹೆಂಡತಿಯಂತೆ ನೇಣು ಹಾಕಿಕೊಂಡು ಸತ್ತನು. ಹೆಂಡತಿ ನೇಣು ಹಾಕಿಕೊಂಡಾಗ ಗಂಡನನ್ನು ಕೋರ್ಟಿಗೆ ಎಳೆದರು. ಆದರೆ ಗಂಡ ಸತ್ತಾಗ ಯಾರೋ ಬಂದರು, ಹೆಣವನ್ನು ತೆಗೆದರು, ಸುಟ್ಟರು, ಅಲ್ಲಿಗೆ ಅದು ಆಗಿಹೋಯಿತು.

ಆದರೆ ಗಂಡ ಮತ್ತು ಹೆಂಡತಿ ಸತ್ತ ಆ ಮನೆಗೆ ಕೆಟ್ಟ ಹೆಸರು. "ಪುಣ್ಯಸ್ಥಳಗಳ ಸ್ಥಳಪುರಾಣಗಳಿಗಿಂತಲೂ ಶೀಘ್ರವಾಗಿಯೂ ವಿಸ್ತಾರವಾಗಿಯೂ ಕತೆ ಬೆಳೆಯಿತು. ವ್ಯಾಪಾರಿ ತನ್ನ ಹೆಂಡತಿಯನ್ನು ನೇಣುಹಾಕಿ ಕೊಂದನೆಂತಲೂ, ಅವನು ಒಂದಿರುಗಿ ಆ ಮನೆಗೆ ಬಂದ ದಿನ ಅವನ ಹೆಂಡತಿಯ ಪಿಶಾಚಿ ಅಲ್ಲಿ ಬಂದು ಅವನನ್ನು ಪ್ರತಿಯಾಗಿ ನೇಣಿಗೆ ಹಾಕಿತೆಂದೂ, ಈಗಲೂ ಪ್ರತಿದಿನವೂ ರಾತ್ರಿಯ ವೇಳೆ ಅ ಮನೆಯಲ್ಲಿ ಆ ಎರಡೂ ಪಿಶಾಚಿಗಳೂ ನೇಣುಹಾಕುವ

ಆಟವನ್ನು ಆಡುತ್ತವೆ ಎಂದೂ ಅಲ್ಲೆಲ್ಲಾ ಬೊಬ್ಬೆ ಎಬ್ಬಿಸಿದರು."[೫] ಇದು ವೆಂಕಟರಾಯನ ಮನಸ್ಸಿನಲ್ಲಿ ಪದೇ ಪದೇ ಮರುಕಳಿಸುತ್ತದೆ. ಅಂತಹ ಸಂದರ್ಭದಲ್ಲಿ ಅವನಲ್ಲಿಗೆ ಬಂದ ಅವನ ಮಾವ ಮತ್ತು ಮಾವನ ಸ್ನೇಹಿತನಿಗೆ ವೆಂಕಟರಾಯನ ಮೇಲೆ ಸಂಶಯ ಬರುತ್ತವೆ. ಆದರೆ ಕತೆಗಾರ ಜಾಣ್ಮೆಯಿಂದ ಅ ಸಂಶಯವನ್ನು ಕಿತ್ತುಹಾಕಲು ಪರಂಪರೆಯ ಸಹಾಯವನ್ನು ಪಡೆಯುತ್ತಾನೆ. "ಸಾಯಂಕಾಲ ಸಹಸ್ರನಾಮ ಹೇಳುವುದನ್ನು ಮರೆತ, ಇದರಿಂದ ಹೀಗಾಗಿರಬಹುದು" ಎಂದು ಹೇಳಿ ಅದರಿಂದ ಜಾರಿಕೊಳ್ಳುತ್ತಾನೆ. ಮಾಸ್ತಿಯವರ ಕತೆಗಳ ವಿಶೇಷತೆಯೇ ಹೀಗೆ. ಯಾವುದನ್ನೇ ಆಗಲಿ ತಾನೊಬ್ಬನೇ ತಿರ್ಮಾನಮಾಡದೇ ಅದನ್ನು ಓದುಗರಿಗೆ ಇಲ್ಲವೆ ಕತೆಗಳಲ್ಲಿ ಬರುವ ಪಾತ್ರಗಳ ಮೇಲೆ ಹಾಕಿ ತನ್ನದು ಏನೂ ಇಲ್ಲ ಎನ್ನುವಂತಹ ತಟಸ್ಥ ನೀತಿಯನ್ನು ಅನುಸರಿಸುತ್ತಾನೆ.

'ಒಂದು ಹಳೆಯ ಕತೆ'ಯ ವಸ್ತು ಕೇಂದ್ರಿಕರಿಸಿರುವುದು "ಯಾವ ವೃದ್ಧನನ್ನೇ ಆಗಲಿ, ಯಾವ ಜ್ಞಾನಿಯನ್ನೇ ಆಗಲಿ, ಯಾವ ಸನ್ಯಾಸಿಯನ್ನೇ ಆಗಲಿ, ಸ್ತ್ರೀ ರೂಪವು ನಿಜವಾಗಿಯೂ ಸೆಳೆಯಬಲ್ಲದು" ಎಂಬ ವ್ಯಾಸರ ವ್ಯಾಖ್ಯೆಯ ಮೇಲೆ. ಇದಕ್ಕೆ ವಿರುದ್ಧವಾಗಿ ನಲವತ್ತೈದು ವರುಷದ ಸನ್ಯಾಸಿ ಅದನ್ನು "ಯಾವ ವೃದ್ಧನನ್ನೇ ಆಗಲಿ ಯಾವ ಜ್ಞಾನಿಯನ್ನೇ ಆಗಲಿ ಸ್ತ್ರೀರೂಪವು ಸೆಳೆಯಬಲ್ಲದು; ಸನ್ಯಾಸಿಯನ್ನು ಸೆಲೆಯಲಾರದು ಎಂದು ವ್ಯಾಸನ ವ್ಯಾಖ್ಯವನ್ನು ತನ್ನ ಶಿಷ್ಯನಿಂದ ತಿದ್ದಿಸುತ್ತಾನೆ. ಕತೆಯು ಕೂಡ ಇದಕ್ಕೆ ಪೂರಕವಾಗಿ ಘಟನೆಗಳನ್ನು ಸೃಷ್ಠಿಸುತ್ತಾ ಮುಂದೆ ಸಾಗುತ್ತದೆ. ಈ ಹಿಂದೆ ಸನ್ಯಾಸಿಯು ಅನೇಕ ಸ್ತ್ರೀಯರನ್ನು ನೋಡಿರುವನು "ಮೊದಲು ತನ್ನ ತಾಯಿ. ಆ ಗಾಂಭೀರ್ಯವೋ, ಆ ಸೌಂದರ್ಯವೂ ತಾನು ಈಗ ದಿನವೂ ಕುಳಿತು ಪೂಜೆ ಮಾಡುವ ಶಾರದಾಂಬೆಯ ವಿಗ್ರಹದಲ್ಲಿ ಆ ಗಾಂಭೀರ್ಯವೂ ಆ ಸೌಂದರ್ಯವೂ ಕಾಣುತ್ತಿದ್ದವು. ಆಕೆ ಬಹಳ ಸುಂದರಿಯಾಗಿದ್ದಳು. ತನ್ನ ಅಕ್ಕತಂಗಿಯರು ಚೆಲುವೆಯಾದ ಹುಡುಗಿಯರು; ಚೆಲುವೆಯರಾದ ಹೆಂಗಸರು. ನಾಲ್ಕು ಜನವೂ ಮಕ್ಕಳು ಮರಿಗಳನ್ನು ಹೆತ್ತು ತೀರಿಹೋಗಿದ್ದರು. ತಾನು ಅವರ ಸೌಂದರ್ಯವನ್ನು ನೋಡಿದ್ದನು. ಈತನು ಇನ್ನೂ ಚಿಕ್ಕವನಾಗಿದ್ದಾಗ ಒಂದು ಸಲ ಮೆರವಣಿಗೆಯಲ್ಲಿ ಉತ್ಸಾಹಿಗಳಿಂದ ಶಿಷ್ಯರು ಕೆಲವು ವೇಶ್ಯೆಯರನ್ನು ಕರೆಸಿ ಈತನ ಪಾಲಕಿಯ ಮುಂದೆ ನಡೆಸಿದರು. ವೇಶ್ಯೆಯರು ಎಲ್ಲರನ್ನೂ ನೋಡುವಂತೆ ಸ್ವಾಮಿಯನ್ನು ನೋಡಿದರು; ಹಾವಭಾವ ವಿಲಾಸಗಳನ್ನು ತೋರಿಸಿದರು. ಆದರೆ ಸ್ವಾಮಿ ಅವರ ಆಟಗಳನ್ನು ಗಮನಿಸಲಿಲ್ಲ. ವೇಶ್ಯೆಯರು ಸ್ವಾಮಿಯನ್ನು ನೋಡಿ ಆಶ್ಚರ್ಯಪಟ್ಟು ಇತರರ ಕಡೆ ಮನಸ್ಸನ್ನು ತಿರುಗಿಸಿದರು."[೬] ಅಷ್ಟೇ ಅಲ್ಲ ಇನ್ನೂ ಹಲವು ಸಲ, ಹಲವಾರು ಹೆಂಗಸರನ್ನು ಸನ್ಯಾಸಿ ನೋಡಿದ್ದ. ಆದರೆ ಅವನ ಮನಸ್ಸಿನಲ್ಲಿ ಯಾವುದೇ ರೀತಿಯ ಪರಿಣಾಮವನ್ನು ಬೀರಿರುವುದಿಲ್ಲ. ಹಾಗಾಗಿ ಸನ್ಯಾಸಿಯು ವ್ಯಾಸನ ಮಾತನ್ನು ಸ್ವಲ್ಪ ಬದಲಾಯಿಸುತ್ತಾನೆ.

ಕತೆಯ ಕೊನೆಯಲ್ಲಿ ಅದೇ ಸನ್ಯಾಸಿಯು ವ್ಯಾಸನ ವ್ಯಾಖ್ಯೆಯನ್ನು ಪುನಃ ತಿದ್ದಿ, ಮೊದಲಿನಂತೆ ಸರಿ ಮಾಡುತ್ತಾನೆ. ಸನ್ಯಾಸಿ ಏನೆಲ್ಲ ಪ್ರಯತ್ನ ಪಟ್ಟರೂ ಕೊನೆಗೆ ಅದು ನಡೆಯುವುದೇ ಬೇರೆ. ಇಲ್ಲಿ ಸನ್ಯಾಸಿಯನ್ನು ಒಪ್ಪಿಕೊಳ್ಳುವಂತೆ ಒಂದು ಹೆಣ್ಣನ್ನು ಕತೆಗಾರ ತಾನೇ ಸೃಷ್ಟಿಸಿದಂತೆ ಭಾಸವಾಗುತ್ತದೆ.

ಆದರೆ ಅದನ್ನು ಕತೆಗಾರ ನೇರವಾಗಿ ಹೇಳದೇ ಒಂದು ಪಾತ್ರವಾಗಿ ಸೃಷ್ಟಿಸಿ, ಪಾತ್ರದ ಮೂಲಕ ಕತೆಯನ್ನು ಮುಂದುವರಿಸುತ್ತಾನೆ. ಸನ್ಯಾಸಿಯನ್ನೇ ವಿಲವಿಲ ಒತ್ತಾಡುವಂತೆ ಹೆಣ್ಣನ್ನು ಸೃಷ್ಟಿಸುತ್ತಾನೆ. ಇಲ್ಲಿಯವರೆಗೂ ಹೆಣ್ಣಿಗೆ ಸೋಲದೇ ಇದ್ದ ಸನ್ಯಾಸಿ ಒಂದೇ ಹೆಣ್ಣಿನ ಸೌಂದರ್ಯಕ್ಕೆ ಸೋಲುವಂತೆ ಮಾಡುತ್ತಾನೆ. ಧ್ಯಾನ ಮಾಡುವಾಗ ಅವನ ಮುಂದೆ ಶಾರದಾಂಬೆಯೇ ಕಾಣುವ ಸನ್ಯಾಸಿಗೆ ಹೆಣ್ಣಿನ ಮುಖ ಕಾಣುವಂತೆ ಮಾಡುತ್ತಾನೆ. ಇದು ಮಾಸ್ತಿಯವರ ಕತೆಗಳಲ್ಲಿ ಕಂಡುಬರುವ ತಂತ್ರಗಳಲ್ಲಿ ಒಂದಾಗಿ ಓದುಗರಿಗೆ ಕಾಣುತ್ತದೆ.

ಮಾಸ್ತಿಯವರ ಕತೆಗಳಲ್ಲಿ ನ್ಯಾಯ ತಿರ್ಮಾನ ಮಾಡುವ ವಿಷಯಗಳು ಕೂಡ ವಸ್ತುವಾಗಿ ಸ್ಥಾನ ಪಡೆದುಕೊಂಡಿವೆ. 'ಬಾದಷಹನ ನ್ಯಾಯ' ಅದಕ್ಕೆ ಹೊರತಾಗಿಲ್ಲ. ಬಾದಷಹನೂ ಮುಸ್ಲಿಂ ಧರ್ಮಕ್ಕೆ ಸೇರಿದವನಾಗಿದ್ದು, ನ್ಯಾಯ ತೀರ್ಮಾನದಲ್ಲಿ ಯಾವುದೇ ರೀತಿಯ ಪಕ್ಷಪಾತವಿಲ್ಲದೇ ತೀರ್ಪನ್ನು ಕೊಡುತ್ತಿದ್ದನು. ಹಾಗಾಗಿ ರಾಜನ ನ್ಯಾಯ ತೀರ್ಮಾನವೆಂದರೆ ಜನ ಗುಂಪು ಗುಂಪಾಗಿ ಸೇರುತ್ತಿದ್ದರು. ಒಮ್ಮೆ ಉಸಾಫ್ ಖಾನನಿಗೂ ಯೋಹಾನ್ ಮಾತಿಯನಿಗೂ ಬಂದಿದ್ದ ಜಗಳದಲ್ಲಿ ನ್ಯಾಯರ್ ತೀರ್ಪು ಆಗಬೇಕಾಗಿದೆ. ಒಬ್ಬ ಮುಸಲ್ಮಾನ ಮತ್ತೊಬ್ಬ ಕ್ರೈಸ್ತ. ಆದರೂ ಇವರು ಒಬ್ಬರಿಗೊಬ್ಬರು ಬಹಳ ವಿಶ್ವಾಸವಾಗಿದ್ದು ಬಹುಕಾಲ ಜೊತೆಯಾಗಿ ವ್ಯಾಪಾರ ಮಾಡುತ್ತಿದ್ದರು. ಇಂತಹ ಸಮಯದಲ್ಲಿ ಹಣ ಕೊಡುವುದು, ತೆಗೆದು ಕೊಳ್ಳುವುದು ಅದನ್ನು ಪ್ರಸ್ತಕದಲ್ಲಿ ಲೆಕ್ಕ ಬರೆದಿಡುವುದು ಹೀಗೆ ಬಹಳ ನಂಬುಗೆಯಿಂದ ನಡೆದುಕೊಳ್ಳುತ್ತಿದ್ದರು. ಕೊನೆಗೆ ಒಂದು ದಿನ ಉಸಾಫನು ಯಾವುದೋ ಒಂದು ಕಾರಣದಿಂದ ಜಗಳವಾಡಿ, ಇನ್ನು ನನಗೆ ನಿನಗೆ ಏನು ಸಂಬಂಧವೂ ಅವಶ್ಯಕವಿಲ್ಲ ಎಂದು ಹೇಳಿ ದೂರವಾದನು.

ಮಾತಿಯನಿಗೆ ಉಸಾಫನು ದುಡ್ಡು ಕೊಡಬೇಕಾಗಿದೆ ಎಂದು ಬಂದಾಗ ಇದಕ್ಕೆ ಉಸಾಫನು ಒಪ್ಪಲಿಲ್ಲ. ಲಕ್ಷಾಂತರ ರೂಪಾಯಿಗಳ ಮಾತಾದ್ದರಿಂದ ಬಾದಷನಲ್ಲೇ ಹೋಗಿ ಫಿರ್ಯಾದು ಮಾಡಿದರು. ಇದನ್ನು ರಾಜ ಬಾದಷಹ ಮಂತ್ರಿಯಾದ ಫಸಿಲನಿಗೆ ವಹಿಸಿದನು. ಕೆಲವು ದಿನಗಳ ನಂತರ ತೀರ್ಪು ಬಂದಿತ್ತು. ಆ ತೀರ್ಪಿನ ಪ್ರಕಾರ ಮಾತಿಯಾನೆ ಉಸಾಫನಿಗೆ ದುಡ್ಡುಕೊಡಬೇಕಾಗಿ ಬರುತ್ತದೆ. ಇದನ್ನು ಮಾತಿಯಾ ಒಪ್ಪುವುದಿಲ್ಲ. ಆದರೆ ನ್ಯಾಯವನ್ನು ಪಾಲಿಸಲೇಬೇಕಾದ್ದರಿಂದ ಸುಮ್ಮನಾದನು. ತೀರ್ಪು ಉಸಾಫ್‌ಖಾನನ ಪರವಾಗಿ ಬಂದಿದ್ದರಿಂದ ರಾಜ ಅವನಿಗೆ ತನ್ನ ಆಸ್ಥಾನದಲ್ಲಿ ಭಕ್ಷಿ ಕೆಲಸವನ್ನು ಕೊಡುತ್ತಾನೆ. ಅದನ್ನು ಸರಿಯಾಗಿ ನಿಭಾಯಿಸಿದ್ದರಿಂದ ಅವನನ್ನು ಮುಸಾಹೇಬನ್ನಾಗಿ ಮಾಡುತ್ತಾನೆ. ಆ ಸಂದರ್ಭದಲ್ಲಿ ಫಿರಾಜ್ ಕಂಬಳಿಯನ್ನು ರಾಜ ಸುಟ್ಟಿರುತ್ತಾನೆ. ಆದರೆ ಅದನ್ನು ನೋಡಿದ ಉಸಾಫನು ರಾಜನಿಗೆ ಗೊತ್ತಿಲ್ಲದೇ ಹುಕ್ಕಾದಿಂದ ಕೆಂಡ ಬಿದ್ದು ಕಂಬಳಿಯ ಅಂಚಿನಲ್ಲಿ ನೆಯ್ದಿದ್ದ ನವಿಲಿನ ರೆಕ್ಕೆಯನ್ನು ರಾಜನಿಗೆ ಗೊತ್ತಿಲ್ಲದೇ ಕಂಬಳಿಯನ್ನು ಸರಿಮಾಡಿಸಿರುತ್ತಾನೆ.

ಬಾದಷಹ ಕಳ್ಳನನ್ನು ಕಂಡು ಹಿಡಿಯಲು ಉಸಾಫನಿಗೆ ತನ್ನ ಆಸ್ಥಾನದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ. ಇದರಿಂದ ಮಾತಿಯಾ ಮತ್ತು ಉಸಾಫನ ನ್ಯಾಯಾ ತೀರ್ಮಾನದಲ್ಲಿ ಕಳ್ಳತನ ಮಾಡಿದ್ದು ಉಸಾಫನೇ ಎಂದು ತಿಳಿಯುತ್ತದೆ. ಈ ತೀರ್ಪು ಎಲ್ಲರನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಅಷ್ಟೇ ಯಾಕೆ, ರಾಜನ ಮಂತ್ರಿಯಾದ ಫಸೀಲನೂ ಹೊರತಾಗಿಲ್ಲ. ಅಂದರೆ ಅಲ್ಲಿಯವರಿಗೆ

ನ್ಯಾಯಾ ತೀರ್ಮಾನ ಮಾಡಿದ ಫಸೀಲ ತಾನೇ ಶ್ರೇಷ್ಠ ಎಂಬ ಅಹಂಕಾರದಿಂದ ಕೂಡಿರುತ್ತಾನೆ. ಆದರೆ ರಾಜನಾದ ಬಾದಷಹನ ತೀರ್ಪನ್ನು ನೋಡಿ ಬೆಚ್ಚಿಬೀಳುತ್ತಾನೆ. "ನಾನು ಈಗಲೂ ಕೂಡ ಈ ತೀರ್ಪು ಮನುಷ್ಯ ಮಾತ್ರನಿಂದ ಸಾಧ್ಯವಲ್ಲವೆಂದೇ ಹೇಳುವೆನು".[೬] ಫಸೀಲನ ಪ್ರಕಾರ ರಾಜನ ತೀರ್ಪು ಅವನಿಂದ ಹೇಳಲ್ಪಟ್ಟಿರದೇ ಅದು ದೇವರು ಹೇಳಿಸಿದ ಸತ್ಯ ಎಂಬುದಾಗಿದೆ. ಅಲ್ಲಿಯವರೆಗೆ ನಡೆದಿದ್ದ ತೀರ್ಮಾನಗಳು ಯಾವುದೇ ರೀತಿಯಲ್ಲಿ ನೋಡಿದರೂ ನ್ಯಾಯ ಸಮ್ಮತವಾಗಿದ್ದವು. ಅದಕ್ಕೆ ಕಾರಣ ದಾಖಲೆ ಇರುತ್ತಿತ್ತು. ಆದರೆ ರಾಜನು ಹೇಳಿದ ನ್ಯಾಯ ಸಮ್ಮತವೇ ಆದರೂ ಅದಕ್ಕೆ ದಾಖಲೆಗಳು ಒದಗಿಸುವ ವಿಧಾನ ತುಂಬಾ ಭಿನ್ನವಾಗಿದೆ.

ಬಾದಷಹನ ನ್ಯಾಯ ಕತೆಯ ಮುಂದುವರಿಂದ ಭಾಗವೇ 'ಬಾದಷಹನ ದಂಡನೆ' ಕತೆಯ ವಸ್ತು. ಬಾದಷಹನ ನ್ಯಾಯ ತೀರ್ಪು ಊರಿನ ಎಲ್ಲಾರಿಗೂ ಒಪ್ಪಿತವಾದ ತೀರ್ಪು; ಏಕೆಂದರೆ ಬಾದಷಹ ಯಾವುದೇ ಜಾತಿ, ಧರ್ಮ, ಶ್ರೇಷ್ಠ, ಕನಿಷ್ಠ ಎನ್ನದೇ ತೀರ್ಪನ್ನು ನೀಡುತ್ತಿದ್ದನು. ರಾಜನ ಉದ್ದೇಶ ತನ್ನ ಸಾಮ್ರಾಜ್ಯದಲ್ಲಿ ಯಾರಿಗೂ ಅನ್ಯಾಯವಾಗಬಾರದು ಎಂಬುದಾಗಿತ್ತು. ಜನರ ಯೋಗಕ್ಷೇಮವೇ ರಾಜನ ಮುಖ್ಯ ಧ್ಯೇಯೋದ್ದೇಶವಾಗಿತ್ತು. ಹಾಗಾಗಿ ರಾಜನಾದ ಬಾದಷಹ ಯಾವುದೇ ರೀತಿಯ ಸಮಸ್ಯೆಗಳಿಗೆ ಅಸ್ಪಾದ ಮಾಡಿಕೊಡದೇ ರಾಜ್ಯವನ್ನು ಆಳುತ್ತಿದ್ದನು. ಇಂತಹ ಸಂದರ್ಭದಲ್ಲಿ ಬಾದಷಹನ ಎದುರಿನಲ್ಲಿ ಒಂದು ಘಟನೆ ನಡೆಯುತ್ತಿರುತ್ತದೆ. ಅದು ಮಾತಿಯಾ ಮತ್ತು ವಜೀರನಿಗೆ ಮಾತ್ರ ಗೊತ್ತಿರುತ್ತದೇ, ವಿನಃ ಬಾದಷಹನಿಗೆ ಗೊತ್ತಾಗುಗುವುದಿಲ್ಲ. ಇದನ್ನು ಹೇಳಲು ಯಾರು ಮುಂದಾಗದೇ ಇರುವಾಗ ಮಾತಿಯಾ ಬಾದಷಹನಿಗೆ ವಿಷಯವನ್ನು ತಿಳಿಸುತ್ತಾನೆ.

ಬಾದಷಹನ ಮಗನಾದ ಷಹಜಾದರು ಮನನೂನಬಾಗಿಗೆ ಬಂದು ಹೋಗುವುದು. ಅಲ್ಲಿದ್ದ ಒಂದು ಹುಡುಗಿಯ ಜೊತೆ ಸಂಬಂಧ ಬೆಳೆಸಿದ್ದನೆಂದು ಹೇಳುತ್ತಾನೆ. ಈ ಸಂಬಂಧದಿಂದ ಹುಡುಗಿಯ ಮದುವೆ ಖಾಯಂ ಆಗಿ ನಿಂತುಹೋಗಿರುತ್ತದೆ. ಹುಡುಗಿಯ ಮನೆಯವರು ಬಡವರಾಗಿದ್ದರಿಂದ ಅವರ ಸ್ಥಾನ ಮಾನಗಳಿಗೆ ವರಸಿಗುವುದೇ ಕಷ್ಟವಾಯಿತು. ಇದಕ್ಕೆ ಕಾರಣ ಷಾಹಜಾದರು ಎಂದು ಬಾದಷಹನಿಗೆ ಮಾತಿಯಾ ಹೇಳುತ್ತಾನೆ. ಇದನ್ನು ಕೇಳಿದ ಬಾದಷಹನು ಸ್ವಲ್ಪನೂ ವಿಚಲಿತನಾಗದೇ ತನ್ನ ಮಗನ ತಲೆಯನ್ನು ಕಡಿಯಲು ಸಿದ್ಧನಾಗುತ್ತಾನೆ. ಇದನ್ನು ನೋಡಿದ ವಜೀರ ಮತ್ತು ಮಾತಿಯಾನಿಗೂ ಆಶ್ಚರ್ಯವೂ, ಖೇದವೂ ಒಂದಕ್ಕಿಂತ ಒಂದು ಹೆಚ್ಚಾಗಿದ್ದುವು. ಆದರೆ ಬಾದಷಹ ಕಡಿದ ತಲೆ ತನ್ನ ಮಗನ ತಲೆಯಾಗಿರದೇ ಆಬೂ ಸಯ್ಯದ್‌ನ ತಲೆಯಾಗಿರುತ್ತದೆ. ಇದರಿಂದ ಬಾದಷಹನ ಕಣ್ಣಲ್ಲಿ ನೀರು ಬಂತು. ಮೊಣಕಾಲೂರಿ ದೇವರಿಗೆ ನಮಸ್ಕಾರ ಮಾಡಿ, ಯುವಕನು ತನ್ನ ಮಗನಲ್ಲದುದಕ್ಕೆ ವಂದನೆಗಳನ್ನು ಅರ್ಪಿಸುತ್ತಾನೆ. ಅಂದರೆ ಬಾದಷಹನ ನ್ಯಾಯ ತೀರ್ಮಾನ ಪರಂಪರೆಯಿಂದ ಕೂಡಿದ್ದು, ಯಾರೇ ತಪ್ಪು ಮಾಡಿದರೂ ಅಂತವರನ್ನು ಶಿಕ್ಷಿಸುವುದು ರಾಜನ ಆಚರಣೆ/ನಂಬಿಕೆಯಾಗಿತ್ತು. ಇಲ್ಲಿ ರಾಜ ಎಂದರೆ ಎಲ್ಲರಿಗೂ ಸಂಬಂಧಿಸಿದವನು ಎಂಬ ಅರ್ಥವನ್ನು ಕೊಡುವಾಗ ತಂದೆ-ಮಗ, ಕುಟುಂಬ, ಜಾತಿಗಳು ಮುಖ್ಯವಾಗುವುದಿಲ್ಲ ಕರ್ತವ್ಯಮಾತ್ರ ಮುಖ್ಯವಾಗುತ್ತದೆ.

‘ಕೃಷ್ಣಮೂರ್ತಿಯ ಹೆಂಡತಿ’ ಕತೆ ಎಲ್ಲರ ಮನಕಲಕುವಂತ ವಸ್ತುವನ್ನು ಒಳಗೊಂಡಿದೆ. ಮಾಸ್ತಿಯವರ ಕತೆಗಳಲ್ಲಿ ಬಾಲ್ಯವಿವಾಹಗಳು ಒಂದು ವಸ್ತುವಾಗಿ ಬಳಕೆಯಾಗದಿದ್ದರೂ, ಬಾಲವಿಧವೆಯರು ಎದುರಿಸುವ ಸಮಸ್ಯೆಗಳು ನಮಗೆ ಕಂಡು ಬರುತ್ತವೆ. ಪರಂಪರೆಯ ಆರಾಧಕರಾದ ಮಾಸ್ತಿಯವರು ಎಲ್ಲಿ ಪರಂಪರೆಗೆ ದಕ್ಕೆ ಬರುತ್ತದೆಯೋ ಅಲ್ಲಿ ಅ ಪಾತ್ರವನ್ನು ಸಾಯಿಸುವ ತಂತ್ರವನ್ನು ಬಳಸಿದ್ದಾರೆ. ‘ವೆಂಕಟಶಾಮಿಯ ಪ್ರಣಯ’ ಕತೆಯಲ್ಲಿ ದೊಂಬರ ಹುಡುಗಿಯನ್ನು ಪ್ರೀತಿಸಿದ ವೆಂಕಟಶಾಮಿಗೆ ಸಾವೇ ಅಂತಿಮವಾಗಿದೆ. ಇದರ ಉದ್ದೇಶ ಪರಂಪರೆಯನ್ನು ಕಳೆದುಕೊಳ್ಳಲು ಇಷ್ಟಪಡದ ಮಾಸ್ತಿಯವರು ಪರಂಪರೆಯಲ್ಲಿಯೇ ಕತೆಯನ್ನು ಮುಕ್ತಾಯಗೊಳಿಸುತ್ತಾರೆ. ಕೃಷ್ಣಮೂರ್ತಿಯ ಹೆಂಡತಿ ಕತೆಯಲ್ಲಿ, ಕೃಷ್ಣಮೂರ್ತಿ ಹೆಚ್ಚಿನ ಶಿಕ್ಷಣಕ್ಕಾಗಿ ನಗರ ಸೇರುತ್ತಾನೆ. ರಜಾ ಇದ್ದ ದಿನಗಳಲ್ಲಿ ಬಂದು ನಾಲ್ಕುದಿನ ಹೆಂಡತಿಯ ಜೊತೆಗಿದ್ದು ಹೋಗುತ್ತಾನೆ. ಗಂಡ ಹೆಂಡತಿಯರ ನಡುವೆ ಕಾಗದ ಬರುವುದು, ಕಾಗದ ಹೋಗುವುದು ಸಾಮಾನ್ಯ. ಹಾಗಾಗಿ ಕೃಷ್ಣಮೂರ್ತಿ ಮತ್ತು ಲಕ್ಷ್ಮೀಯು ಸುಖದಿಂದ ಸಂತೋಷವಾಗಿ ಜೀವನ ಸಾಗಿಸುತ್ತಿದ್ದರು.

ಹೀಗೆ ಸಂತೋಷದಿಂದ ಕಾಲ ನೂಕುತ್ತಿರುವಾಗ ಕೃಷ್ಣಮೂರ್ತಿಯಿಂದ ಬರುವ ಕಾಗದಗಳು ಸಂಪೂರ್ಣವಾಗಿ ನಿಂತು ಹೋದವು. ಇದರಿಂದ ಲಕ್ಷ್ಮೀ ಮತ್ತು ಅವಳ ತಾಯಿಗೆ ಸಿಡಿಲು ಬಡಿದಂತಾಗಿ ಅನೇಕ ರೀತಿಯಲ್ಲಿ ಚಿಂತೆ ಮಾಡಲು ಆರಂಭಿಸಿದರು. ಕೃಷ್ಣಮೂರ್ತಿಗೆ ಕಾಯಿಲೆ ಬಂದ ವಿಷಯ ಲಕ್ಷ್ಮೀಯ ತಾಯಿಗೆ ತಿಳಿಯುತ್ತದೆ. ಆದರೆ ಅದನ್ನು ಹೇಳುವುದು ಹೇಗೆ ಎಂದು ಸುಮ್ಮನಿರುತ್ತಾಳೆ. ಲಕ್ಷ್ಮೀಯ ಸ್ವಭಾವವನ್ನು ಕುರಿತು ಅವಳ ತಾಯಿ ಈ ರೀತಿ ಹೇಳುತ್ತಾಳೆ. “ಅಪ್ಪಾ, ಅದು ಅವಳು ಆಗಾತ್ಯ. ಹುಡುಗಿ ಹಠವಾದಿ. ಎಲ್ಲೋ ಓದಿದಳಂತೆ, ಕುಂಕುಮ ಗಂಡನಿಗೆ ತನ್ನಲ್ಲಿರುವ ಪ್ರೀತಿಗೆ ಗುರುತು ಎಂತ. ಗಂಡ ಕಾಗದ ಬರೆಯಲಿಲ್ಲವಲ್ಲ! ಯಾವಾಗಲೂ ಕಾಗದ ನಿಲ್ಲಿಸದೆ ಇದ್ದವರು ಈಗ ಏಕೆ ನಿಲ್ಲಿಸಿದರು. ಅವರಿಗೆ ನನ್ನಲ್ಲಿ ಏನೋ ಬೇಜಾರಿರಬೇಕು ನಾನು ಏಕೆ ಕುಂಕುಮ ಹಚ್ಚಿಕೊಳ್ಳಲಿ ಎಂದು ಹಠಹಿಡಿದಳು. ಅವಳು ಹಚ್ಚಿಕೊಳ್ಳುವುದಿಲ್ಲವೆಂದಾಗ ಹಚ್ಚಿಕೊ ಎಂದು ಹೇಳುವುದಕ್ಕೆ ನನಗೆ ಬಾಯಿ ಬರಲಿಲ್ಲ ಸುಮ್ಮನಿದ್ದೆ. ಈ ಹೊತ್ತು ನೋಡಿ, ಏನು ತೋರಿತೊ ತಾನೇ ಹಚ್ಚಿಕೊಂಡಳು. ಹೆರಳು ಹಾಕಿಕೊಂಡಳು. ನಾನು ಸುಮ್ಮನಿದ್ದೆ. ಹೀಗೆ ಕೊಂಚದಿನ ಸುಮ್ಮನಿದ್ದರೆ ಸಮಾಧಾನಕ್ಕೆ ಬರುತ್ತಾಳೆ. ಆ ಮೇಲೆ ಹೇಳಬಹುದು”.[೮] ತಾಯಿಗೆ ಗೊತ್ತಿದ್ದ ವಿಷಯವನ್ನು ಲಕ್ಷ್ಮೀಗೆ ಹೇಳಲು ಹೆದರುತ್ತಾಳೆ. ಹೀಗಾಗಲೇ ತಂದೆಯನ್ನು ಕಳೆದು ಕೊಂಡ ಲಕ್ಷ್ಮೀಗೆ ತನ್ನ ಗಂಡನು ಇಲ್ಲ ಎಂದು ಹೇಳಿದರೆ, ಅವಳು ಜೀವಕ್ಕೆ ಏನಾದರೂ ಅಪಾಯಮಾಡಿಕೊಳ್ಳಲು ಸಿದ್ದಳು ಎನ್ನುವುದು ಅವಳ ತಾಯಿಗೆ ಗೊತ್ತಿದೆ. ಹಾಗಾಗಿ ಗಂಡನ ವಿಷಯವನ್ನು ತನ್ನ ಮಗಳಿಗೆ ಹೇಳುವುದು ಹೇಗೆ ಎಂಬ ಚಿಂತೆಯಲ್ಲಿ ಒತ್ತಾಡುತ್ತಿರುತ್ತಾಳೆ.

ಇಂತಹ ಸಮಯದಲ್ಲಿ ನಿರೂಪಕ (ಶಾಸ್ತ್ರಿಗಳು) ಅದೇ ಅಗ್ರಹಾರಕ್ಕೆ ಬರುತ್ತಾನೆ. ಅವಳಿದ್ದ ಪಕ್ಕದ ಮನೆಯಲ್ಲಿ ಮನೆಯನ್ನು ಬಾಡಿಗೆಗೆ ಪಡೆಯುತ್ತಾನೆ. ಇದರಿಂದ ರಾಮಸ್ವಾಮಯ್ಯನವರ ಹೆಂಡತಿಗೆ ಹೋದ ಜೀವ ಬಂದಂತಾಗುತ್ತದೆ. ತನ್ನ ಅಳಿಯನಿಗೆ ಕಾಯಿಲೆ ಬಂದು ಸಾವನ್ನಪ್ಪಿದ

ವಿಷಯವನ್ನು ಶಾಸ್ತ್ರಿಗಳ ಬಳಿ ಹೇಳುವಾಗ, ಲಕ್ಷ್ಮೀ ಅದನ್ನು ಕೇಳಿಸಿಕೊಂಡು ಬಾವಿಗೆ ಬಿದ್ದು ಮರಣಹೊಂದುತ್ತಾಳೆ. ಹೆಣ್ಣು ಯಾವಾಗಲೂ ಗುಲಾಮಳು ಎನ್ನುವ ಅಂಶ ಇಲ್ಲಿ ಗಮನಿಸಬಹುದು. ಮನು ಹೇಳಿದಂತೆ ಹೆಣ್ಣು ಹುಟ್ಟಿದಾಗ ತಂದೆಯ ಆಶ್ರಯದಲ್ಲಿ, ನಂತರ ಗಂಡನ ಆಶ್ರಯದಲ್ಲಿ ಬೆಳೆಯುತ್ತಾಳೆ. ಆದರೆ ಇಲ್ಲಿ ಲಕ್ಷ್ಮೀಗೆ ತಂದೆ ಇಲ್ಲ, ಗಂಡ ಇಲ್ಲ ಮಕ್ಕಳೂ ಇಲ್ಲ. ಅವಳಿಗೆ ಮುಂದೆ ಏನುಮಾಡಬೇಕೆಂದು ತಿಳಿಯದಿದ್ದಾಗ ಸಾವೇ ಅವಳ ಪಾಲಿಗೆ ಅಂತಿಮವಾಗುತ್ತದೆ.

'ಮಸುಮತ್ತಿ' ಕತೆ ಕೊಟ್ರ್ನೇಸಾಹೇಬನ ಡಯರಿಯ ಇನ್ನೊಂದು ಭಾಗ. ಇದರಲ್ಲಿ ಹಿಂದೂಗಳಲ್ಲಿ ಇರುವ ಒಂದು ಸುಂದರ ಕತೆಯ ನಿರೂಪಣೆ ಇದೆ. "ಈ ಸೀಮೆ ನಮಗೆ ಲಂಕೆಯ ರೀತಿಯಾಗಿದೆ. ನಾವು ರಾಮನಂತೆ ಇಲ್ಲ. ಎಲ್ಲವನ್ನೂ ತೊರೆದು ನನ್ನನ್ನು ಹಿಂಬಾಲಿಸಿ ಬಾ ಎಂದು ಧನ ಹೇಳಿತೋ ಎಂಬಂತೆ ಕೇಳಿದ ಪೂರ್ವದೇಶದ ಆಹ್ವಾನ ಪಾಶ್ಚಾತ್ಯರಿಗೆ ಸೋಕಿ ನಮ್ಮ ಜನ ಇಲ್ಲಿಗೆ ಬರುವುದಕ್ಕೆ ಪ್ರಾರಂಭಿಸಿದಾಗಿನಿಂದ ಈ ಸೀಮೆಯ ಧನ ಕೊಂಚಕೊಂಚವಾಗಿ ನಮ್ಮ ಸೀಮೆಯನ್ನು ಸೇರುತ್ತಲಿದೆ. ನಾವು ಅಂದವಾದ ಯಾವುದನ್ನು ಕಂಡರೂ ಹೊತ್ತುಕೊಂಡು ಹೋಗಬೇಕೆನ್ನುತ್ತೇವೆ. ಷಾಹಜಹಾನನ ಸಿಂಹಾಸನ ನಾದರಷನೊಂದಿಗೆ ಪರ್ಷಿಯಾಕ್ಕೆ ಹೋಯಿತು. ನಾದರಷಹನು ಹೋದವನು ಪುನಃ ಬರಲಿಲ್ಲ. ನಾವು ಇಲ್ಲಿಯೇ ನೆಲಸಿನಿಂತ ನೂರಾರು ನಾದರಷಹರಂತೆ ಒಬ್ಬೊಬ್ಬರು ಒಂದೊಂದನ್ನು ಮೆಲ್ಲಗೆ ಒಂದೊಂದಾಗಿ ಸಾಗಿಸುತ್ತಿದ್ದೇವೆ. ರಾಜ್ಯದಲ್ಲಿ ಹಿಂದೆ ಇದ್ದ ಪ್ರಸಿದ್ಧವಾದ ಒಳ್ಳೆಯವಾದ ಶ್ರೇಷ್ಠವಾದ ವಸ್ತುಗಳು ಹೋಗುತ್ತಾ ಇವೆ. ಸೀಮೆ ಬರಿಯ ಸೀಮೆಯಾಗುತ್ತಾ ಇದೆ."[5] ಈ ಕತೆಯಲ್ಲಿ ಹಿಂದೂಗಳ ಶ್ರೇಷ್ಠತೆಯನ್ನು ಮಾಸ್ತಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಪಾಶ್ಚಾತ್ಯ ದೇಶದ ಜನರು ಮತ್ತು ಪೂರ್ವದೇಶದ ಜನರ ಮನೋಭಾವವನ್ನು ಮುಖಾ-ಮುಖಿ ಮಾಡಿದ್ದಾರೆ. ಇದರೊಂದಿಗೆ ಪಾಶ್ಚಾತ್ಯರು ಹೇಗೆ ನಮ್ಮ ದೇಶವನ್ನು ಆಕ್ರಮಿಸಿದರು ಎಂಬುದು ಸ್ಪಷ್ಟವಾಗುತ್ತದೆ.

'ಕಾಮನ ಹಬ್ಬದ ಒಂದು ಕತೆ'ಯಲ್ಲಿ ಹೇಗೆ ನಂಬಿಕೆ ಅಥವಾ ಆಚರಣೆ ಸೇರಿಕೊಂಡಿದೆ ಎಂಬುದನ್ನು ವಿವರಿಸುವುದು ಇಲ್ಲಿಯ ಉದ್ದೇಶ. ಹಳ್ಳಿಯಲ್ಲಿ ಹಬ್ಬವೆಂದರೆ ಒಂದು ರೀತಿಯ ಖುಷಿ ಮನೆ ಮಾಡಿರುತ್ತದೆ. ಎಲ್ಲಾರ ಮನೆಗಳು ಸುಣ್ಣ ಬಣ್ಣಗಳಿಂದ ಕೂಡಿರುತ್ತವೆ. ಹಬ್ಬವೆಂದರೆ ಎಲ್ಲಾರಲ್ಲೂ ಒಂದು ರೀತಿಯ ಸಂಭ್ರಮ ಸಡಗರ ಇರುತ್ತದೆ. ಅದರಲ್ಲಿ 'ಕಾಮನ ಹಬ್ಬ' ಎಂದರೆ ಹುಡುಗರಿಗೆ ಹೆಚ್ಚು ವಿಶೇಷ. "ನಮ್ಮ ವಿಜೃಂಭಣೆ ಯಾವುದರಲ್ಲಿ ಎಂದರೆ ಎಲ್ಲರ ಮನೆಯ ಮುಂದೆಯೂ ತಪ್ಪದೆ ಬಾಯಿ ಬಡಿದುಕೊಳ್ಳುವುದು. ಎಲ್ಲರಿಂದಲೂ ಸೌದೆ ವಸೂಲು ಮಾಡಿಕೊಂಡು ಬರುವುದು. ಹಳೆ ಪರಕೆ. ಮೊರ. ಮಕ್ಕರಿ. ಚಾಪೆ. ಎಲ್ಲವನ್ನು ಸೇರಿಸಿ ಎರಡಾಳೆತ್ತರ ರಾಶಿ ಒಟ್ಟುವುದು. ರಾತ್ರಿ ಚೆನ್ನಾಗಿ ಬಾಯಿ ಬಡಿದುಕೊಂಡು ಅದಕ್ಕೆ ಬೆಂಕಿ ಹಚ್ಚುವುದು."[6] ಇದು ಪರಂಪರೆಯ ಒಂದು ಭಾಗ. ನಂಬಿಕೆ ಅಥವಾ ಆಚರಣೆ ಇದ್ದಕ್ಕಿದ್ದಂತೆ ಹುಟ್ಟಿಕೊಂಡವಲ್ಲ ಅವುಗಳಿಗೆ ದೀರ್ಘವಾದ ಇತಿಹಾಸವಿದೆ.

ಕತೆಗಾರರೇ ಒಂದು ಕಡೆ ಕತೆಯಲ್ಲಿ ಕಾಮನ ಹಬ್ಬದ ಕುರಿತು ಜನರಲ್ಲಿರುವ ಕುರುಡು ನಂಬಿಕೆಯನ್ನು ಗುರುತಿಸುತ್ತಾರೆ. "ನಮ್ಮ ಕಡೆಯ ಜನಕ್ಕೆ ಒಂದು ಕುರುಡು ನಂಬಿಕೆ. ಬೂದೀ ಕಲೆಸುವ ದಿನ ವಿಧವೆ ಯಾರಾದರೂ ಬಂದು ತಲೆ ಮೇಲೆ ಬೂದೀ ಸುರಿಸಿಕೊಂಡು ಹುಡುಗರು ತನ್ನ ಸುತ್ತ ಬಾಯಿ ಬಡಿದುಕೊಳ್ಳುವುದಕ್ಕೆ ಸಮ್ಮತಿಸಿದರೆ ಅಂಥಾ ಆಕೆಗೆ ಮುಂದಿನ ಜನ್ಮದಲ್ಲಿ ಹೋದ ಗಂಡನೊಂದಿಗೆ ಸಂಸಾರ ಸುಖ ಲಭಿಸುವುದಂತೆ; ಆ ಜನ್ಮದಲ್ಲಿ ಸುಮಂಗಲಿಯ ಸಾವಂತೆ."[೧೧] ಎಂಬ ನಂಬಿಕೆ ಕಾಮನ ಹಬ್ಬದ ಜೊತೆಗೆ ಸೇರಿಕೊಂಡಿತು. ಆದರೆ ಅದನ್ನು ನಂಬಿ ಯಾವ ವಿಧವೆಯೂ ಆತರ ಮಾಡಿಕೊಂಡಿರಲಿಲ್ಲ. ಆದರೆ ಸಾವಿತ್ರಿ ತನ್ನ ಗಂಡನನ್ನು ಕಳೆದುಕೊಂಡಿದ್ದರಿಂದ ಈ ಆಚರಣೆಗೆ ಮುಂದಾಗುತ್ತಾಳೆ. ಎಷ್ಟು ಭಕ್ತಿಯಿಂದ ಆಚರಣೆಯನ್ನು ನೇರವೇರಿಸುತ್ತಿದ್ದಳು ಎಂಬುದಕ್ಕೆ ಅವಳ ಮಾತನ್ನು ಗಮನಿಸಬಹುದು. "ಅಪ್ಪಾ ಒಳ್ಳೇ ಮಾತನಾಡು ಎಂದರೆ ಹಾಗೆ ಎನ್ನಬೇಕು. ಕೆಟ್ಟದ್ದು ಮಾಡುವುದಕ್ಕೂ ಕಾರ್ಪಣ್ಯವೇ?" ಎನ್ನುತ್ತಾಳೆ. ಹುಡುಗರು ಸಾವಿತ್ರಿಯ ಮೈಮೇಲೆ ಬೂದಿ ಹಾಕಿ ಬಾಯಿ ಬಡಿದುಕೊಳ್ಳಲು ನಿರಾಕರಿಸಿದಾಗ, ಅಪ್ಪಾ ಸತ್ತ ಹೆಣಕ್ಕಿಂತ ಬದುಕಿದ ಹೆಣಕ್ಕೆ ಈ ಮರ್ಯಾದೆ ಹೆಚ್ಚಾಗಿ ಮಾಡಬೇಕು, ನಾನು ಬದುಕಿದ ಹೆಣ; ಜೀವ ಶವಾ ಅಪ್ಪಾ ಎನ್ನುವಳು. ಹೀಗೆ ಸಾವಿತ್ರಿ ತನ್ನ ವ್ರತವನ್ನು ಚಾಚು ತಪ್ಪದೇ ಪಾಲಿಸುತ್ತಾಳೆ. ಹಾಗಾಗಿ ಕಾಮನ ಹಬ್ಬಕ್ಕೆ ಒಂದು ರೀತಿಯ ಗೌರವ ಉಂಟಾಗಿತ್ತು. ಸಾವಿತ್ರಿಯನ್ನು ಮಾವನ ಮಗನಾದ ಶ್ರೀನಿವಾಸ ಶಾಸ್ತ್ರಿಗಳಿಗೆ ಮದುವೆಮಾಡಿಕೊಟ್ಟಿದ್ದರು. ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡಿದ್ದರಿಂದ ಶಿನಿಗೆ ಓದು ಬರಹ ಕಡಿಮೆ, ಮಾಡುವುದಕ್ಕೆ ಕೆಲಸವಿಲ್ಲ. ಸ್ವಲ್ಪ ತುಂಟ ಸ್ವಭಾವದ ಹುಡುಗನಾಗಿದ್ದ. ಹೀಗಿರುವಾಗ ಶಿವಗಂಗೆಯ ಸ್ವಾಮಿಗಳು ದೇಶಾಟನಕ್ಕಾಗಿ ಹೊರಟು ಹೊಳೇನರಸೀಪುರಕ್ಕೆ ಬಂದಿದ್ದರು. ಆಗ ನರಸಿಂಹಶಾಸ್ತ್ರಿಗಳೂ ಅವರ ಸಂಸಾರವೂ ಒಂದು ದಿನ ಅಲ್ಲಿಗೆ ಹೋದರು. ಶೀನಿ ಹೋಗಿ ಮಠದ ಗುಂಪಿನಲ್ಲಿ ಸೇರಿಕೊಂಡ. ಅವರ ಶುಶ್ರೂಷೆ ಮಾಡಿದ. ಮೂರು ದಿನದ ಮೇಲೆ ಗುರುಗಳು ಮುಂದಕ್ಕೆ ಹೋದಾಗ ಅವರೊಂದಿಗೆ ಹೋದ. ತಂದೆ–ತಾಯಿಗಳು ಎಷ್ಟು ದೂರಹೋಗುತ್ತೀಯಪ್ಪಾ ಎಂದು ಕೇಳಿದಾಗ ಏಳೆಂಟು ದಿನ ಸ್ವಾಮಿಗಳ ಜೊತೆಯಲ್ಲಿದ್ದು ಬರುತ್ತೇನೆಂದು ಹೇಳಿ, ನಾಲ್ಕು ವರ್ಷವಾದರೂ ಮನೆಗೆ ಬರುವುದಿಲ್ಲ.

ಮನೆಯಲ್ಲಿ ಅತ್ತೆ ಸೊಸೆಯಂದಿರಿಗೆ ಸರಿಹೋಗದೆ ಭಾಗವಾಗುವ ಮಾತು ಬಂದಿತು. ಅದರಂತೆ ಭಾಗಮಾಡುವಾಗ ಶೀನಿ ಸತ್ತನಂತೆ ಸುಳ್ಳುಸುದ್ದಿ ಹರಡಿ ಭಾಗಮಾಡಿಕೊಂಡರು. ಸಾವಿತ್ರಮ್ಮ ಅತ್ತೆಯೊಂದಿಗೆ ತನಗೆ ತಂದೆ ತಾಯಿಗಳಿಂದ ಬಂದಿದ್ದ ಮನೆಯಲ್ಲಿ ನಿಂತರು. ಶೀನೀ ಕಲಿಕತ್ತೆಯ ಬಳಿ ತೀರಿಹೋದನೆಂದು ಮನೆಯ ಹಿರಿಯಣ್ಣ ತಾಯಿಗೆ ಹೇಳಿಕಳುಹಿಸಿದರು. ಇದನ್ನು ತಿಳಿದ ಸಾವಿತ್ರಿ ವಿಧವೆಯ ವೇಷವನ್ನು ಅಂಗೀಕರಿಸಿದಳು. ಮನೆಯಲ್ಲಿ ಎಲ್ಲಾರು ಹೇಳಿದರೂ ಕೇಳದೇ, ಊರಿನ ಜನರ ಮಾತನ್ನು ಕೇಳದೇ, ಮುಂದಿನ ಜನ್ಮದಲ್ಲಿಯಾದರೂ ಸೇವೆ ಮಾಡುವುದಕ್ಕೆ ಅವಕಾಶ ಸಿಗಲಿ ಎಂದು ದೇವರಲ್ಲಿ ಬೇಡಿ ತನಗೆ ತಿಳಿದ ವ್ರತಗಳನ್ನೇಲ್ಲಾ ಮಾಡುವುದಕ್ಕೆ ಮೊದಲು ಮಾಡಿದಳು. ಅವಳು ಮಾಡುತ್ತಿದ್ದ ವ್ರತಗಳಲ್ಲಿ ಕಾಮನಹಬ್ಬದ ವ್ರತ ಬೇಡ ಎಂದು

ಅತ್ತೆ ಹೇಳಿದಾಗ "ನನಗೆ ಅವಮಾನ, ನನ್ನನ್ನು ಕಂಡರೆ ನಗುತ್ತಾರೆ, ನಾನು, ನಾನು ಎಂತ ಮಾಡದೆ ಬಿಟ್ಟರೆ ಪತಿಭಕ್ತಿ ಏನು ತೋರಿಸಿದ ಹಾಗಾಯಿತು? ಅವರು ಇದ್ದಿದ್ದರೆ ಹೊಡೆದರೆ ಬೇಡಾ ಎಂದಿತ್ತೆ? ಬೈದರೆ ಬೇಡಾ ಎಂದಿತ್ತೆ? ಅದಕ್ಕೆಲ್ಲಾ ಅವಮಾನ ಎನ್ನುತ್ತಿದ್ದೆನೆ? ಯಾರು ನಕ್ಕರೆ ನನಗೇನು?"[೧೨] ಎಂದು ಹೇಳುತ್ತಾಳೆ. ಯಾರ ಮಾತನ್ನು ಕೇಳದೆ ತನ್ನ ವ್ರತವನ್ನು ನಡೆಸುತ್ತಾಳೆ.

ಹೀಗೆ ಕಾಮನ ಹಬ್ಬದ ಕತೆಯಲ್ಲಿ ನಂಬಿಕೆ ಅಥವಾ ಆಚರಣೆಗೆ ಸಂಬಂಧಪಟ್ಟಂತೆ ಅನೇಕ ವಸ್ತು ವಿಷಯಗಳಿವೆ. "ಮನೆ ಮನೆಗೂ ಹೋಗಿ ಮನೆಯ ಮುಂದೆ ಬಾಯಿ ಬಡಿದುಕೊಂಡು ಸೌದೆಯ ಭಿಕ್ಷೆ ಕೇಳುವುದು ವಾಡಿಕೆ. ಈ ಹಬ್ಬದ ದಿನ ಮನೆಯ ಮುಂದೆ ಬಾಯಿ ಬಡಿದು ಕೊಂಡರೆ ವರ್ಷವೂ ನಗುತ್ತ ಇರಬಹುದು ಎಂದು ನಮ್ಮ ಜನರಲ್ಲಿ ನಂಬಿಕೆ ಇದೆ" ಎಂದು ನಿರೂಪಕ ಕತೆಯಲ್ಲಿ ಹೇಳಿದ್ದಾನೆ.

ಪ್ರತಿವರ್ಷದಂತೆ ಸಾವಿತ್ರಮ್ಮ ವ್ರತವನ್ನು ಮಾಡುತ್ತಿದ್ದು, ಒಂಭತ್ತು ಅಥವಾ ಹತ್ತು ವರ್ಷ ಆಗಿರಬಹುದು. ಆಗ ವ್ರತ ಮಾಡುವಾಗ ಗಂಡ ಶೀನಿ ಬರುತ್ತಾನೆ. ವ್ರತಕ್ಕೆ ಕಾರಣ ತಿಳಿದ ಶೀನಿ ಸಾವಿತ್ರಮ್ಮನ ಕಡೆಗೆ ನೋಡುತ್ತಾನೆ. ಇಲ್ಲಿಗೆ ಸಾವಿತ್ರಮ್ಮನ ವ್ರತ ನಿಲ್ಲುತ್ತದೆ. ಶ್ರೀನಿವಾಸ ಶಾಸ್ತ್ರಿ ಊರಿನಲ್ಲಿ ಒಬ್ಬ ಸಂಸಾರಿಯಾಗಿ ನಿಂತನು. ಅವನಿಗೆ ಇಬ್ಬರು ಗಂಡು ಮಕ್ಕಳಾಗುತ್ತಾರೆ. ಸಾವಿತ್ರಮ್ಮ ದೃಢವ್ರತದಿಂದ ಯಾವ ಫಲವನ್ನು ಮುಂದಿನ ಜನ್ಮಕ್ಕೆಂದು ಬೇಡಿದಳೋ ಅದನ್ನು ಈ ಜನ್ಮದಲ್ಲಿಯೇ ಪಡೆದಳು. ಹೀಗೆ ಆ ಊರಿನಲ್ಲಿ ಯಾವುದು ಶುಭ ಕಾರ್ಯಗಳಲ್ಲಿ ಸಾವಿತ್ರಿಗೆ ಮೊದಲು ಅರಿಸಿನ ಕುಂಕುಮ ಕೊಡುವಂತಾಗುತ್ತದೆ.

'ಇನ್ನೊಂದು ಹಳೆಯ ಕತೆ'ಯಲ್ಲಿ ನಂಬಿಕೆ, ದೇವರು, ಆಚರಣೆಯ ವಸ್ತುವನ್ನೊಳಗೊಂಡ ಕತೆ. ಈ ಕತೆಯಲ್ಲಿ ಬರುವ ಪರಾಶರ ಭಟ್ಟ ಕಾಂಚೀಪುರದಿಂದ ಶ್ರೀರಂಗಕ್ಕೆ ಬಂದರು. ಶ್ರೀರಂಗಕ್ಕೆ ಬಂದಾಗ ಜನಿಸಿದ ಮಗುವೇ ಭಟ್ಟರು. ಇವನ ತಂದೆಯವರು ಆಚಾರ್ಯರ ಸೇವೆಯಲ್ಲಿದ್ದರಿಂದ, ಮನೆಯಲ್ಲಿ ದೇವರ ಸೇವೆಯನ್ನು ನಡೆಸುವುದು, ಭಾಗವತ ಸೇವೆಯನ್ನು ಮಾಡುವುದು, ಮಗನನ್ನು ಸಾಕುವುದು ಭಟ್ಟರ ತಾಯ ಮೇಲೆ ಬೀಳುತ್ತದೆ. ತನ್ನ ಮಗ ತಂದೆಗೆ ಸಮಾನಾಗಿ ಬೆಳೀಬೇಕು ಎಂಬ ಆಸೆಯಲ್ಲಿ ಮಗನಿಗೆ ಶಿಕ್ಷಣ, ದೇವರು, ಸಂಸಾರ ಕುರಿತಂತೆ ದಿನಾಲು ಒಂದೊಂದು ವಿಷಯವನ್ನು ಹೇಳುತ್ತಿದ್ದಳು. ಅದರಲ್ಲಿ ದೇವರನ್ನು ನಂಬಬೇಕು ಎಂಬ ಮಾತು ಹೇಳುತ್ತಲೇ ಇರುವರು. ಹೀಗಾಗಿ ಭಟ್ಟರ ಎಲ್ಲಾವನ್ನು ಚೆನ್ನಾಗಿ ಕಲಿತುಕೊಂಡನು. ಅವನು ಗುರುಗಳಿಗೆ ತಕ್ಕನಾದ ಶಿಷ್ಯನಾಗಿ ಬೆಳೆಯುತ್ತಿರುವನು.

ಭಟ್ಟರಿಗೆ ಇಪ್ಪತ್ತಾನಾಲ್ಕು ವಯಸ್ಸಿದ್ದಾಗ ಅವರಿಗೆ ದೇವಾಲಯದ ಭಾಗವತ ಗೋಷ್ಠಿಯಲ್ಲಿ ಗಣ್ಯವಾದ ಸ್ಥಾನ ದೊರಕಿತ್ತು. ಇದರಂತೆ ಅನೇಕ ಕೆಲಸಗಳು ಭಟ್ಟರಿಗೆ ಇರುವಾಗ ಅಡಿಗೆಯ ಸಹಾಯಕನಾಗಿ ಬ್ರಾಹ್ಮಣ ಇದ್ದ. ಭಟ್ಟರಿಗೆ ಹೊರಗಡೆಯ ಕೆಲಸಗಳು, ಪೂಜೆ ಇತ್ಯಾದಿಗಳು ಹೆಚ್ಚಾದ ಸಂದರ್ಭದಲ್ಲಿ ಬ್ರಾಹ್ಮಣನೇ ಪೂಜೆಯನ್ನು ಮಾಡುತ್ತಿದ್ದನು. ಹೀಗೆಯೇ ಸ್ವಲ್ಪ ದಿನಗಳು

ಕಳೆದಾಗ ಬ್ರಾಹ್ಮಣ ಮತ್ತು ಭಟ್ಟರ ನಡುವೆ ಸ್ವಲ್ಪ ಅಸಮಾಧಾನ ಮನೆಮಾಡುತ್ತದೆ. ಇವರಿಬ್ಬರೂ ಪೂಜೆಯನ್ನು ಮಾಡುತ್ತಾರೆ. ಆದರೆ ಪೂಜೆಯನ್ನು ಮಾಡುವ ವಿಧಾನ ಮತ್ತು ಸಮಯದಲ್ಲಿ ವ್ಯತ್ಯಾಸಗಳಾಗುತ್ತವೆ.

ಭಟ್ಟರು– ಪೂಜೆ ಇಷ್ಟು ಬೇಗ ಮುಗಿಯಿತೇ

ಬ್ರಾಹ್ಮಣ–ಇದೇನು ಇವರು ಪೂಜೆ ಮಾಡಿದರೆ ಅರ್ಧಗಳಿಗೆಯಲ್ಲಿ ಮುಗಿಸುತ್ತಾರೆ. ನನ್ನ ಪೂಜೆ ಎರಡು ಗಳಿಗೆ ಹೊತ್ತಾದರೂ ಇಷ್ಟು ಬೇಗ ಮುಗಿಯಿತೇ ಎನ್ನುತ್ತಾರೆ."[೧೩] ಈ ವಿಚಾರವಾಗಿ ಬ್ರಾಹ್ಮಣ ಅನೇಕ ಸಲ ಯೋಚಿಸುತ್ತಾನೆ. ಕೊನೆಗೆ ಅದನ್ನು ತಡೆಯಲಾಗದೇ ಭಟ್ಟರ ಅಮ್ಮನಿಗೆ ಹೇಳುತ್ತಾನೆ. ಯಜಮಾನಿ 'ಅವನಿಗೆ ಇನ್ನೂ ಚಿಕ್ಕವಯಸ್ಸು; ಒಂದೆರಡು ಮಾತು ಹೆಚ್ಚು ಕಡಿಮೆಯಾದರೂ ನೀನು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು' ಎಂದು ಸಮಾಧಾನ ಹೇಳಿದಳು.

ಆದರೆ ಕತೆಯ ಕೊನೆಗೆ ಬ್ರಾಹ್ಮಣ ಮತ್ತು ಭಟ್ಟರಿಗೆ ಪೂಜೆಯ ವಿಷಯದಲ್ಲಿ ಇದ್ದ ಅನುಮಾನವನ್ನು ಕತೆಗಾರ ನಿರೂಪಿಸುತ್ತಾನೆ. ಒಂದು ದಿನ ಯಜಮಾನಿ ತನ್ನ ಮಗ ಭಟ್ಟರು ಮತ್ತು ಸೇವಕ ಬ್ರಾಹ್ಮಣನಿಗೆ ಊಟವನ್ನು ಬಡಿಸುತ್ತಿರುವಾಗ ತುಪ್ಪದ ಬದಲಾಗಿ, ಬೇವಿನ ಎಣ್ಣೆವನ್ನು ಬಡಿಸುತ್ತಾಳೆ. ಭಟ್ಟರು ಅದರ ರುಚಿಯನ್ನು ಗಮನಿಸದೇ ನಾಲ್ಕು ತುತ್ತು ಊಟ ಮಾಡುತ್ತಾರೆ. ಬ್ರಾಹ್ಮಣನಿಗೆ ಒಂದು ತುತ್ತನ್ನು ಸಹ ತಿನ್ನಲು ಸಾಧ್ಯವಾಗದಿದ್ದಾಗ, ಯಜಮಾನಿಗೆ ತಾವು ಬಡಿಸಿದ್ದು ಬೇವಿನ ಎಣ್ಣೆನಾ! ಇಲ್ಲ ತುಪ್ಪನಾ ಎಂದು ಹೇಳಿದಾಗ ಬಡಿಸಿದ್ದು ಬೇವಿನ ಎಣ್ಣೆಯಾಗಿರುತ್ತದೆ. ಇದು ಬ್ರಾಹ್ಮಣನಿಗೆ ಅಶ್ಚರ್ಯವಾಗುತ್ತದೆ. ಇದೇ ರೀತಿ ಬ್ರಾಹ್ಮಣನಿಗೆ ಭಟ್ಟರ ಪೂಜೆಗೂ ತಾನು ಮಾಡಿದ ಪೂಜೆಗೂ ವ್ಯತ್ಯಾಸ ತಿಳಿಯುತ್ತದೆ. "ಅವನು ಪೂಜೆ ಮಾಡುವುದು ದೇವರ ಜಗಲಿಯ ಮೇಲೆ ಮಾತ್ರವಲ್ಲ ಎಲೆಯ ಮುಂದೆ ಕುಳಿತಾಗ, ಸ್ನಾನಕ್ಕೆ ಮೊದಲು, ದೊನ್ನೆ ಹಚ್ಚುವಾಗ, ಬೀದಿಯಲ್ಲಿ ಹೋಗುವಾಗ ಇನ್ನು ಯಾವ ಕೆಲಸವನ್ನೇ ಆಗಲಿ ಮಾಡುವಾಗ, ಯಾವಾಗಲೂ ಅವನು ದೇವರ ಧ್ಯಾನವನ್ನು ಮಾಡುತ್ತಲೇ ಇರುವನು"[೧೪] ಎಂದು ಯಜಮಾನಿ ಹೇಳುತ್ತಾಳೆ.

ಇಲ್ಲಿ ಪೂಜೆ ಎಂಬುದು ಪರಂಪರೆಯ ಭಾಗವಾಗಿ ಕಂಡು ಬರುತ್ತದೆ. ಹಾಗಾಗಿ ಇಲ್ಲಿ ಸಮಯಕ್ಕಿಂತ ಮನಸ್ಸು ಮುಖ್ಯ ಎಂಬುದು ತಿಳಿಯುತ್ತದೆ. ಭಟ್ಟರ ಪೂಜೆ ಮಾಡುವ ವಿಧಾನ ಹಿಂದಿನಿಂದಲೂ ಬಂದಿದ್ದಾಗಿದ್ದು, ಅದು ಅವನ ಜೀವನದ ಭಾಗವಾಗಿರುತ್ತದೆ ಮತ್ತು ಅದಕ್ಕೆ ಇಷ್ಟೇ ಸಮಯ ಎಂಬುದು ನಿಯಮವಿಲ್ಲ. ಆದರೆ ಬ್ರಾಹ್ಮಣನಿಗೆ ಅದೊಂದು ಕೆಲಸವಾಗಿ, ಅನಿವಾರ್ಯವಾಗಿ ಪೂಜೆ ಕಂಡುಬರುತ್ತದೆ.

'ನಿಜಗಲ್ಲಿನ ರಾಣಿ' ಕತೆಯ ವಸ್ತು ನಮ್ಮ ಸೀಮೆಯನ್ನಾಳಿದ ಪಾಳೆಯಪಟ್ಟುಗಳಲ್ಲಿ ಒಂದು. ಇದರಲ್ಲಿ ಪ್ರಸಿದ್ಧ ನಾಯಕ ರಾಮರಸನಾಯಕ. ಇವನಿಗೆ ಇಬ್ಬರು ಹೆಂಡತಿಯರು. ಲಕುಮವ್ವೆ ಮತ್ತು ಗಿರಿಜವ್ವೆ. ಲಕುಮವ್ವೆ ಮೊದಲನೆಯ ಹೆಂಡತಿಯಾಗಿದ್ದು, ಮದುವೆ ಆಗಿ ಹತ್ತು ವರ್ಷಗಳಾದರೂ ಮಕ್ಕಳಾಗಲಿಲ್ಲ. ಇದು ರಾಜನ ಚಿಂತೆಗೆ ಕಾರಣವಾಗಿತ್ತು. ಇದನ್ನು ಮನಗಂಡ ಲಕುಮವ್ವೆ ತನ್ನ ನೆಂಟರಲ್ಲಿ ಒಬ್ಬಳಾದ ಗಿರಿಜವ್ವೆಯನ್ನು ಅರಮನೆಗೆ ತಂದು ರಾಮರಸನನ್ನು

ಮದುವೆಯಾಗಲು ಹೇಳಿದಳು. ಇದನ್ನು ನಾಯಕ ಬೇಡವೆಂದನು. "ನಾನು ಹತ್ತು ವರ್ಷ ನಿಮ್ಮ ಸೇವೆಯನ್ನು ಮಾಡಿದ್ದೇನೆ, ನೀವು ನನ್ನನು ಗಿಳಿಯಂತೆ ಪೋಷಿಸಿದಿರಿ. ಆದರೆ ನನ್ನಿಂದ ವಂಶ ಬೆಳೆಯಲಿಲ್ಲ. ನನಗೆ ಪ್ರಾಪ್ತಿಯಿಲ್ಲ. ನನಗೆ ಫಲ ಇಲ್ಲದಿದ್ದರೆ, ಕುಲ ಏತಕ್ಕೆ ಅಳಿಯಬೇಕು? ಅವಳನ್ನು ಮದುವೆಯಾಗಿ, ಅವಳಿಗೊಂದು ಮಗುವಾದರೆ ಮನೆ ಉಳಿಯುತ್ತದೆ"[೧೫] ಎಂದಳು. ಅಂದರೆ ವಂಶವನ್ನು ಉದ್ಧಾರಮಾಡುಬೇಕು, ಇಲ್ಲಿ ಮನೆತನ ಉಳಿಯಬೇಕು ಎಂದರೆ ಗಂಡು ಮಗು ಬೇಕು ಎನ್ನುವುದು ಲಕುಮವ್ವೆಯ ವಾದವಾಗಿದೆ. ಅಂದರೆ ವಂಶ ಮುಂದುವರಿಯಲು ಗಂಡು ಮಗು ಬೇಕು ಎನ್ನುವುದು ಪರಂಪರೆಯ ಅಂಶವಾಗಿದೆ. ಇದು 'ನಿಜಗಲ್ಲಿನ ರಾಣಿ' ಕತೆಯಲ್ಲಿ ಅಷ್ಟೇ ಅಲ್ಲ, ನಮ್ಮ ಚರಿತ್ರೆಯನ್ನು ನೋಡಿದಾಗ ತುಂಬಾ ರಾಜರು ಮಕ್ಕಳಾಗದಿದ್ದಾಗ ಎರಡನೇ ಮದುವೆಯನ್ನು ಆಗುತ್ತಾರೆ. ಆದರೆ ನಮಗೆ ಇಲ್ಲಿ ಮುಖ್ಯವಾಗುವುದು ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಇರುವಾಗ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಯಾರು ಇಷ್ಟ ಪಡದೇ ಇರುವಾಗ, ಯಾವುದೇ ಒತ್ತಡ ಲಕುಮವ್ವೆಯ ಮೇಲೆ ಇಲ್ಲದಿದ್ದರೂ ಕೂಡ ಯಾಕೆ ಲಕುಮವ್ವ ರಾಜನಿಗೆ ಎರಡನೇ ಮದುವೆ ಮಾಡಿಸುತ್ತಾಳೆ. ಅವಳ ಮೇಲೆ ಪ್ರಭಾವ ಬೀರಿದ್ದು ಏನು? ಎಂದಾಗ ಅದು ಒಂದು ರೀತಿಯ ಪರಂಪರೆಯ ಭಾಗವೇ ಆಗಿದೆ.

ಮಾಸ್ತಿಯವರ ಬಹು ಚರ್ಚಿತ ಕತೆಗಳಲ್ಲಿ 'ವೆಂಕಟಶಾಮಿಯ ಪ್ರಣಯ' ಕತೆಯೂ ಒಂದು. ಇಲ್ಲಿ ಕತೆಯ ವಸ್ತು, ಒಂದೇ ಆದರೂ, ಅದನ್ನು ಅಭಿವ್ಯಕ್ತಿಸುವ ವಿಧಾನಗಳು ಬೇರೆ. ಇದು ಹಳ್ಳಿಯಲ್ಲಿಯೇ ನಡೆಯುವ ಒಂದು ಕತೆ. ಈ ಕತೆಯಲ್ಲಿ ಆಧುನಿಕತೆ ಮತ್ತು ಪರಂಪರೆಯ ಹಲವು ಅಂಶಗಳು ನಿರೂಪಿತವಾಗಿವೆ. ಕತೆಯಲ್ಲಿ ಬರುವ ಕಥಾನಾಯಕ ವೆಂಕಟಶಾಮಿಗೆ ಓದು ಬರಹ ಕಲಿಸಬೇಕೆಂದು ಅವನ ತಂದೆ ನರಸನ ಆಸೆ. ಆದರೆ ಆ ಹುಡುಗ ಎರಡನೇ ಪುಸ್ತಕ ಒದುವಷ್ಟರಲ್ಲಿ ಓದನ್ನೇ ಮುಗಿಸಿದ. ಅವನ ತಂದೆ ಹಡಪವನ್ನು ತಗಲಹಾಕಿಕೊಂಡಿದ್ದು, ಅವನ ಮಗನಿಗೂ ಅದೇ ವೃತ್ತಿಯಲ್ಲಿ ಆಸಕ್ತಿ ಇರುವುದು ಕಂಡು ಬಂದಿರುವುದರಿಂದ, ಹೇಗೋ ಜೀವನ ಸಾಗಿಸುವನೆಂಬ ನಂಬಿಕೆ ಮೇಲೆ ವೆಂಕಟಶಾಮಿಯ ಇಷ್ಟದಂತೆ ಬಿಟ್ಟಿದ್ದನು.

ಹೀಗಿರುವಾಗ ಆ ಊರಿಗೆ ದೊಂಬರ ಗುಂಪೊಂದು ಬಂದಿತು. ದೊಂಬರ ಆಟ ಹಳ್ಳಿಯಲ್ಲಿ ಚೆನ್ನಾಗಿ ನಡೆಯಿತು. ಅದನ್ನು ಒಬ್ಬೊಬ್ಬರು ಒಂದು ರೀತಿಯಲ್ಲಿ ವರ್ಣಿಸುತ್ತಾರೆ. ಆದರೆ ಎಲ್ಲಾರೂ ವರ್ಣಿಸಿದ್ದು, ದೊಂಬರ ಹುಡುಗಿಯ ಆಟವನ್ನು. "ಮೈಗೆ ಒತ್ತಿಕೊಂಡಿರುವಂತೆ ಸೀರೆಯನ್ನು ಬಿಗಿಯಾಗಿ ಉಟ್ಟು, ಬಿಗುಯಾದ ಕುಪ್ಪಸವನ್ನು ತೊಟ್ಟು, ನಡುವಿಗೆ ಬಲವಾದ ಪಟ್ಟಿಯೊಂದನ್ನು ಕಟ್ಟಿ ಹುಡುಗಿ ಗಡೆಯನ್ನು ಸುತ್ತಿ ಬರಬೇಕಾದರೆ ತೆಂಗಿನ ಮರವನ್ನೇರುವ ಅಳಿಲಂತೆ ಕಂಡಳು. ಸರ್ರನೆ ಏರಿ ಗಡೆಯ ತಲೆಯನ್ನು ಮುಟ್ಟಿ ಅದರ ಮೊನೆಗೆ ನಡುವನ್ನು ಇರಿಸಿ, ಬೆನ್ನ ಮೇಲೆ ಕೆಲವು ಸಾಮು, ಹೊಟ್ಟೆಯ ಮೇಲೆ ಕೆಲವು ಸಾಮು ಮಾಡಿ ತೋರಿಸಿ ಕೊನೆಗೆ ಚಕ್ರವನ್ನು ಸುತ್ತಿದಳು."[೧೬] ಇದು ದೊಂಬರ ಆಟವನ್ನು ನೋಡಿದ ಎಲ್ಲರ ಬಾಯಲ್ಲಿ ಹರಿದಾಡಿದ ವಿಷಯವಾಗಿತ್ತು. ಆಟ ಮುಗಿದ ಮೇಲೆ ದೊಂಬರ ಗುಂಪೊಂದು ಪಕ್ಕದ ಹಳ್ಳಿಗೆ ಹೋಗಿತ್ತು. ಅಲ್ಲಿಗೂ ಕೂಡ

ವೆಂಕಟಶಾಮಿ ಹೋಗುತ್ತಾನೆ. ಇದು ಊರಿನ ಎಲ್ಲಾ ಜನರಿಗೂ ಗೊತ್ತಾಗುತ್ತದೆ. ದೊಂಬರ ಹುಡುಗಿ ಮತ್ತು ವೆಂಕಟಶಾಮಿ ಒಬ್ಬರಿಗೊಬ್ಬರು ಪ್ರೀತಿಸುವ ವಿಷಯ ಇಡೀ ಹಳ್ಳಿಗೆ ಪ್ರಚಾರವಾಗುತ್ತದೆ. ಇದರಿಂದ ಹುಡುಗ, ಹುಡುಗಿಯ ಕುಟುಂಬದಲ್ಲಿ ಭಯ ಮತ್ತು ಆತಂಕ ಮನೆಮಾಡುತ್ತದೆ. ಹುಡುಗನ ತಂದೆಯ ಭಯಕ್ಕೆ ಕಾರಣ ತಾನು ಇಷ್ಟು ವರ್ಷ ಮಾಡಿಕೊಂಡು ಬಂದ ವೃತ್ತಿ ಬೇರೆಯವರ ಪಾಲಾಗುತ್ತದೆ. ಗ್ರಾಮಕ್ಕೆ ಬೇರೆ ನಾಯಿಂದ ಬರುತ್ತಾನೆ. ತನ್ನ ಇನಾಮತಿಯನ್ನು ಕಿತ್ತುಕೊಳ್ಳುತ್ತಾನೆ. ಇನಾಮು ಹಿಡಿದಿರುವ ಮರ್ಯಾದೆ, ಗ್ರಾಮದ ನೌಕರ ಎನ್ನುವ ಹೆಮ್ಮೆ ಇದೆಲ್ಲಾ ದೊಡ್ಡದು ಎಂಬುದು ನರಸನ ಆತಂಕಕ್ಕೆ ಕಾರಣ. ಅದೇ ರೀತಿ ದೊಂಬರ ಯಜಮಾನ ಕೂಡ ಚಿಂತನೆಗೆ ಒಳಗಾಗುತ್ತಾನೆ. "ಹೌದು ಮಾಸೋಮಿ, ಊರ ಗೌಡಗೋಳು ನೀವು ಯಿಶಾರಿಸಿ ಸರಿಪಡಿಸದೀರ ಇದ್ದರೆ ನಮ್ಮಂತವರ ಗತಿಯೇನು. ನಾವು ಕಾಗೆ ತಿಂಬೋರು, ಇವರು ಕೋಳಿ ತಿಂಬೋರು. ಈ ಹೈದ ಬಂದು ನಮ್ಮ ಸಂಬಂಧ ಬೇಡೋದುಂಟೆ? ಇವ ಬಂದು ನಮ್ಮ ಹುಡುಗೀನ ಹಾರಿಸಿಕೊಂಡು ಹೋದರೆ ನಮ್ಮ ಜೀವನ ಹೆಂಗಾಗೋದು? ನಾನು ಮುದುಕನಾದೆ. ನನ್ನ ಹೆಂಡರು ಗಡೆ ಹತ್ತೊಂಗಿಲ್ಲ. ಹೈಕಳು ಬೇರೆ ಇನ್ನಾ ಸಣ್ಣೋರು ಗಡೇ ಮುರಿದು ಒಲೇ ಹಚ್ಚೀ ಅದರಾಗೆ ನಾವು ಏನು ಆಡೋದು?"[೧೭] ಇದು ಹುಡುಗ-ಹುಡುಗಿ ತಂದೆಯವರ ಚಿಂತೆ ಮತ್ತು ಇದರಿಂದಾಗುವ ಸಮಸ್ಯೆಗಳೇನು ಎಂಬುದನ್ನು ಹೇಳಿದ್ದಾರೆ. ಅದೇ ರೀತಿ ಹಳ್ಳಿ ಎಂದಾಗ ಗೌಡ ಇರುವುದು ಸಾಮಾನ್ಯ. ಈ ವಿಷಯ ಗೌಡನನ್ನೂ ಕೂಡ ಒಂದು ರೀತಿಯ ಚಿಂತೆಗೆ ಎಡೆಮಾಡುತ್ತದೆ. "ಎಲ್ಲಿ ಊರಿನ ಹೆಸರು ಕೆಟ್ಟಿತು ತನ್ನ ಊರಿನ ನಾಯಿಂದನ ಮಗನನ್ನ ಯಾರೋ ದೊಂಬರು ಹುಡುಗಿ ಹಾರಿಸಿಕೊಂಡು ಹೋದಳು ಎಂದರೆ, ಬೇಟೆಗಾರನ ನಾಯನ್ನು ನರಿ ಎತ್ತಿಕೊಂಡು ಹೋದ ಹಾಗೆ, ಗೌಡನ ಗೌಡಿಕೆಯ ಮರ್ಯಾದೆಗೆ ಕಡಿಮೆ."[೧೮] ಹಾಗಾಗಿ ಊರಿನ ಗೌಡ, ಇನ್ನೂ ಕೆಲವರು ದೊಡ್ಡವರು ಸೇರಿ ಪಂಚಾಯಿತಿ ಮಾಡುತ್ತಾರೆ. ಆದರೆ ಇದು ಯಾವುದಕ್ಕೂ ಸೊಪ್ಪು ಹಚ್ಚದೇ ವೆಂಕಟಶಾಮಿ ಮತ್ತು ದೊಂಬರ ಹುಡುಗಿ ಹೆಚ್ಚು ಹೆಚ್ಚು ಜೊತೆಯಾಗಿದ್ದು, ಬುಡುಮೇಕಾಯಿ, ಕಾರೆ ಹಣ್ಣು, ಮಿರುಪೇಹಣ್ಣು ಏನು ಸಿಕ್ಕಿದರೆ ಅದನ್ನು ತಿನ್ನುವುದಕ್ಕೆ ಮುಂದಾದರು. ಹುಡುಗಿಗಾಗಿ ಹುಡುಗ ಕಾಗೆಗಳನ್ನು ಹೊಡೆಯುವುದಕ್ಕೂ ಸಿದ್ಧನಾದನು. ಹೀಗಿರುವಾಗ ವೆಂಕಟಶಾಮಿ ಮನೆಯಲ್ಲಿ ತಂದೆ-ತಾಯಿಗಳು ತುಂಬಾ ಯೋಚನೆಗೆ ಒಳಗಾಗುತ್ತಾರೆ. ಪ್ರತಿ ದಿನ ಅವನದೇ ಚಿಂತೆಯಲ್ಲಿ ಕಾಲ ಕಳೆಯುತ್ತಾರೆ. ಆದರೆ ವೆಂಕಟಶಾಮಿ ಬೆಂಗಳೂರಿಗೆ ಹೋಗಲು ಸಿದ್ಧನಾಗಿದ್ದು, ಅದನ್ನು ತಂದೆ-ತಾಯಿಯ ಬಳಿ ಹೇಳುತ್ತಾನೆ. ಅದಕ್ಕೆ ಅವರು ಒಪ್ಪದಿದ್ದಾಗ ಇನ್ನು ಚರ್ಚೆ ಕೊನೆಗಾಣದೆ ಎದ್ದು ಬೀದಿಗೆ ನಡೆದನು.

ಇದಾದ ಕೆಲವು ದಿನದ ಮೇಲೆ ಒಂದು ರಾತ್ರಿ ಎಲ್ಲಾರೂ ಮಲಗಿರುವಾಗ ವೆಂಕಟಶಾಮಿ ಮನೆಗೆ ಬರುತ್ತಾನೆ. ಅವನ ತಂದೆ-ತಾಯಿಗಳು ಬಾಗಿಲು ತೆಗೆಯದಿದ್ದಾಗ, ಅವನು ಎಲ್ಲಿಗೋ ಹೋದನು ಯಾರಿಗೂ ತಿಳಿಯಲಿಲ್ಲ. ಮೂರು-ನಾಲ್ಕು ದಿನದ ಮೇಲೆ ಮನೆಗೆ ಬಂದ ವೆಂಕಟಶಾಮಿಗೆ ದೊಡ್ಡ ಕಾಯಿಲೆ ಬಂದು ಮಲಗಿದನು. ಅವನು ಜ್ವರದಿಂದ ಮೇಲಕ್ಕೆ ಏಳಲಿಲ್ಲ. ವೆಂಕಟಶಾಮಿ

ಸುಂದರವಾದ ಹುಡುಗ, ದೊಡ್ಡ ಮುಖ, ಕಪ್ಪು ಮೀಸೆ, ಕಪ್ಪು ಕಣ್ಣಿನ ಗುಡ್ಡೆ. ಹೀಗೆ ಅವನು ನಕ್ಕರೆ ಮೋಡ ಮಿಂಚಿದಂತೆ ಕಾಣುವುದು. ಗಟ್ಟಿಮುಟ್ಟಾದ ದೇಹ, ಅವನಿಗೆ ಬಂದ ಜ್ವರ ವಿಷಯಶೀತ ಜ್ವರವಾಗಿದ್ದು ಹಳ್ಳಿಯ ಔಷಧಿಗಳನ್ನು ಕೊಟ್ಟರು. ಕೊಟ್ಟ ಹದಿನೈದು ದಿವಸದಲ್ಲಿ ವೆಂಕಟಶಾಮಿ ತೀರಿ ಹೋದ. ಜ್ವರದಲ್ಲಿ ಅವನ ಕನವರಿಕೆಯೆಲ್ಲ ಆ ದೊಂಬರ ಹುಡುಗಿಯ ಜೊತೆಗೆ ಓಡಾಡುತ್ತಿದ್ದಂತೆ ಇತ್ತು. ಮಲಗಿ ಎಚ್ಚರವಾದಾಗಲೆಲ್ಲ ಅವಳನ್ನು ಕರೆಯಿಸಿ ಎಂದು ಹೇಳಿದನು. "ಕೈ ಹಿಡಿದ ಹೆಂಡತಿಯಾದರೆ ಇಂಥ ಸಂದರ್ಭದಲ್ಲಿ ಕರೆಕಳುಹಿಸುವುದೂ ಅಯ್ಯೋಪಾಪ ಎನ್ನುವುದು ನ್ಯಾಯವೆಂದು ಕಾಣುತ್ತದೆ. ಹುಡುಗನನ್ನು ತಪ್ಪುದಾರಿಗೆ ಎಳೆದು ಅವನೊಡನೆ ಪೋಲಿ ತಿರುಗಿದ ದೊಂಬರ ಹುಡುಗಿಯನ್ನು ಜ್ವರದ ಹಾಸಿಗೆಯ ಬಳಿಗೆ ಕರೆದು ಕುಳ್ಳಿರಿಸುತಾರೆಯೇ?"[೧೯] ಎಂದು ಅವನ ತಂದೆ ಹೇಳುತ್ತಾನೆ. ದೊಂಬರ ಹುಡುಗಿಯನ್ನು ನೋಡದೆ ವೆಂಕಟಶಾಮಿ ಕಣ್ಣು ಮುಚ್ಚುತ್ತಾನೆ. ಕಣ್ಣು ಮುಚ್ಚುವಾಗ ತನ್ನ ಹೆಣವನ್ನು ಹೊಲ್ದಪಕ್ಕದ ಹುಲ್ಲು ಇದೆಯಲ್ಲಾ ಅಲ್ಲಿ ಜಾಗ ಮಾಡುಬೇಕು. ಯಾಕೆಂದರೆ ಮೂರು ರಾತ್ರಿ ಅಲ್ಲಿ ಮಲಗಿದ್ವಿ ಎಂದು ಹೇಳುತ್ತಾನೆ. ಅವನ ಮಾತಿನಂತೆ ನರಸ ಹೆಣವನ್ನು ಚೌಕದಲ್ಲಿ ಹೂತರು. ಅಲ್ಲಿ ಮರಗಳನ್ನು ನೆಡೆಸಿದರು.

ಇಲ್ಲಿ ಮುಖ್ಯವಾಗಿ ನಾವು ಗಮನಿಸಬಹುದಾದ ಅಂಶಗಳು ಒಂದನೆಯದು ವೆಂಕಟಶಾಮಿ ದೊಂಬರ ಹುಡುಗಿಯನ್ನು ಪ್ರೀತಿಸಿದ್ದು, ಜಾತಿಗೆ ಅವಮಾನ ಅದು ಪರಂಪರೆಗೆ ವಿರುದ್ಧವಾಗಿದೆ. ನರಸನ ಹಡಪದ ವೃತ್ತಿ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದು, ಎಲ್ಲಿ ತನ್ನ ವೃತ್ತಿಯನ್ನು ಕಳೆದುಕೊಳ್ಳುವೆನು ಮತ್ತು ಆ ಹಳ್ಳಿಯಲ್ಲಿ ತನಗಿದ್ದ ಸ್ಥಾನಮಾನಗಳಿಗೆ ತಕ್ಕೆಯಾಗುವುದೆಂದು ಮಗನ ವಾದಕ್ಕೆ ವಿರುದ್ಧವಾದನು. ದೊಂಬರ ಯಜಮಾನ ತನ್ನ ಮಗಳು ವೆಂಕಟಶಾಮಿಯನ್ನು ಮದುವೆಯಾದರೆ ಎಲ್ಲಿ ತನ್ನ ಹೊಟ್ಟೆಗೆ ಹಿಟ್ಟು ಸಂಪಾದಿಸುವುದು ಹೇಗೆ ಎಂಬ ಆತಂಕ, ಊರ ಗೌಡನಿಗೆ ಎಲ್ಲಿ ತನ್ನ ಗೌಡಿಕೆಗೆ ಕೆಟ್ಟ ಹೆಸರು ಬಂದಿತು ಎಂಬ ಅಧಿಕಾರದ ಮೋಹ. ಇವೆಲ್ಲ ಹಳ್ಳಿಯಲ್ಲಿರುವವರ ಮಾತುಗಳು.

ಇಲ್ಲಿ ವೆಂಕಟಶಾಮಿ ಬೆಂಗಳೂರಿಗೆ ಹೋಗುತ್ತಾನೆ. ಅಲ್ಲಿ ಒಳ್ಳೆ ಹಣ ಸಂಪಾದಿಸಬಹುದು ಎಂದು ಹೇಳಿದಾಗ, ಬೆಂಗಳೂರಿಗೆ ಹೋಗುವ ಅಂದರೆ ಹಳ್ಳಿಯನ್ನು ಬಿಟ್ಟು ನಗರಕ್ಕೆ ಹೋಗುವಂತೆ ಅವನನ್ನು ಪ್ರೇರೆಪಿಸಿದ್ದು ಆಧುನಿಕತೆ, ಆದರೆ ಮಾಸ್ತಿಯವರು ಎಲ್ಲಿ ಪರಂಪರೆಗೆ ದಕ್ಕೆ ಬರುತ್ತದೆ ಎಂದು ಯೋಚಿಸಿ ವೆಂಕಟಶಾಮಿಯ ಸಾವೇ ಇದಕ್ಕೆ ಪರಿಹಾರ ಎಂದು ಆ ಪಾತ್ರವನ್ನು ಸಾಯಿಸುತ್ತಾನೆ. ಅಂದರೆ ಪರಂಪರೆಗೆ ವಿರುದ್ಧವಾಗಿ ಆಧುನಿಕತೆ ಎಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸುತ್ತದೆಯೋ ಅಲ್ಲಿ ಮಾಸ್ತಿಯವರು ಪರಂಪರೆಯನ್ನೇ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇಂತಹ ಪರಂಪರೆ ಮತ್ತು ಆಧುನಿಕತೆಗಳು ಮುಖಾಮುಖಿಯಾಗುವ ಸಂದರ್ಭದಲ್ಲಿ, ಆಧುನಿಕತೆಗೆ ಜಯ ಸಿಗುತ್ತದೆಯೋ ಅಲ್ಲಿ ಆ ಪಾತ್ರಗಳು ಸಾಯುವ ಮೂಲಕ ಪರಂಪರೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಮಾಸ್ತಿಯವರ ಅನೇಕ ಕತೆಗಳಲ್ಲಿ ಕಂಡುಬರುತ್ತವೆ.

'ಜೋಗ್ಯೋರ ಅಂಜಪ್ಪನ ಕೋಳಿಕತೆ'ಯಲ್ಲಿ ಪರಂಪರೆ ಮತ್ತು ಆಧುನಿಕತೆಗೆ ಸಂಬಂಧಿಸಿದ ಅನೇಕ ವಿಚಾರಗಳು ಕತೆಯಲ್ಲಿ ಸೇರಿಕೊಂಡಿವೆ. ಜೋಗ್ಯೋರ ಅಂಜಪ್ಪ ಮಾಡುವ ಜೋಗ್ಯೋರ ವೃತಿ ಪರಂಪರೆಯಿಂದ ಬಂದಿದ್ದು, ಅದರ ಶ್ರೇಷ್ಠತೆ ಮತ್ತು ಅದರಿಂದ ಎದುರಾದ ಸಮಸ್ಯೆಗಳನ್ನು ಕತೆ ಒಂದೊಂದಾಗಿ ಓದುಗರ ಮುಂದಿಡುತ್ತದೆ. ಶತಾಯುಷಿಯಾದ ಅಂಜಪ್ಪ ಭಿಕ್ಷೆಯನ್ನು ಮಾಡುವ ಕಾಯಕ ಮಾಡುತ್ತಾ ಬಂದಿದ್ದಾನೆ. ಅದು ಅವನಿಗಿರುವ ನಂಬಿಕೆಯಾಗಿದೆ. ಅವನು ಭಿಕ್ಷೆಗಾಗಿ ಅನೇಕ ಹಳ್ಳಿಗಳನ್ನು ಸುತ್ತಿದ್ದಾನೆ. ಅಂತಹ ಹಳ್ಳಿಗಳಲ್ಲಿ ಕಾಳಾಪುರ ಒಂದು. ಕಾಳಾಪುರದಲ್ಲಿ ಅಂಜಪ್ಪನಿಗೆ ಎದುರಾದ ಸಮಸ್ಯೆಯೇ 'ಜೋಗ್ಯೋರ ಅಂಜಪ್ಪನ ಕೋಳೀಕತೆ'ಯ ವಸ್ತು.

ರಂಗಪ್ಪನಿಗೆ ತಾಲೂಕಿನಲ್ಲಿ ಬೆಂಚು ಮ್ಯಾಜಿಸ್ಟ್ರೇಟ್ ಕೆಲಸ ಸಿಕ್ಕಿರುತ್ತದೆ. ಇದು ಹಳ್ಳಿಯಲ್ಲಿನ ಪ್ರತಿಯೊಬ್ಬರಿಗೂ ಖುಷಿಯ ವಿಚಾರವಾಗಿದೆ. ಇದರ ಸಲುವಾಗಿ ಅಂಜಪ್ಪ ರಂಗಪ್ಪನನ್ನು ಕಾಣಲು ಮನೆಗೆ ಬಂದಿರುತ್ತಾನೆ. ಅಂಜಪ್ಪನು ಬಂದ ಉದ್ದೇಶ ನ್ಯಾಯ ತೀರ್ಮಾನ ಮಾಡುವಾಗ ತುಂಬಾ ಸೂಕ್ಷ್ಮ ಮತ್ತು ಎಚ್ಚರದಿಂದಿರಬೇಕು ಎಂದು ಹೇಳಲು. ಇದು ಯಾಕೆ ಅಂಜಪ್ಪ ರಂಗಪ್ಪನಿಗೆ ಹೇಳಿದ ಎಂಬುದೇ ಇಡೀ ಕತೆಯ ವಸ್ತು. ಇದು ನಡೆದಿದ್ದು ಸುಮಾರು ನಲವತ್ತು ವರ್ಷಗಳ ಹಿಂದೆ. ಆಗ ಅಂಜಪ್ಪನಿಗೆ ಮಧ್ಯದ ವಯಸ್ಸು. ತನ್ನ ವೃತ್ತಿಯ ಬಗ್ಗೆ ಅಂಜಪ್ಪನಿಗೆ ಅಪಾರ ಗೌರವ ಮತ್ತು ನಂಬಿಕೆ ಇದೆ. "ಜೋಗಿ ಅಂದ್ರೆ ಏನು ಸುಮ್ಮನೆ ಆಯಿತ?. ಇಪ್ಪತ್ತು ವರ್ಷ ಅಪ್ಪನ ಜೊತೆಗೋ ಮಾವನ ಜೊತೆಗೋ ಕಿಂದ್ರಿ ಹೊತ್ತುಕೊಂಡು ತಿರುಗಿ, ಹಾಡೋ ಪದಾನ ಜೊತೆಗೆ ಹಾಡ್ತಾ ಕಸುಬು ಕಲಿಯೋದು ಅಂದ್ರೆ ಬಿಟ್ಟೀಯಾಯ್ತೇನಪ್ಪ?. ಯಾವ ಹೈದಾ ಬೇಕಾದ್ರೂ ನೇಗಿಲ ಹಿಂದೆ ನಿಂತುಕೊಂಡು ಎತ್ತಿನ ಬಾಲಾ ತಿರುವಿ ಚೋ ಚೋ ಎನ್ನಬಹುದು. ಪದಾ ಕಲಿಯೋದ್ಕೆ ನಾಲ್ಗೆ ಬೇಡಾ? ಬುದ್ದಿ ಬೇಡಾ? ಎಂ ಅಂದ್ರೆ ಬಂದು ಬಿಡ್ತದೆಯಾ ಲಕ್ಷ್ಮೀ ಅಂತಾ ಅನ್ನೋದಕ್ಕೆ ಎಲ್ಲಾರಿಗೂ ಬರ್ತಾದೆಯಾ? ಅನ್ನುವಂತ ಕೇಳು ಕ್ಷ್ಮೀ ಕ್ಷ್ಮೀ ಅಂತ ಸೀನುತ್ತಾರೆ. ದ್ರೌಪದಿದೇವಿ ಅನ್ನೊಕೆ ಬಾಯಿ ತಿರುಗೋದು ಸುಲಬಾಯ್ತಾ? ನಾನು ಕಸಬು ಕಲ್ತೇ ಅನ್ವೇಕಾದ್ರೆ ನನಗೆ ಇಪ್ಪತ್ತೈದು ವರ್ಷ ಆಗಿತ್ತು. ಆ ಮೇಲೆ ನಮ್ಮಪ್ಪ, ಈಗ ಪರವಾ ಇಲ್ಲ, ನೀನೊಬ್ಬನೇ ಹೋಗಬಹುದು ಅಂತ ಬಿಟ್ಟ. ಜೋಗಿಯಾಗಬೇಕಾದರೆ ಈಗ ನಾವು ಬಿ.ಎ.ಡಿಗ್ರಿ ಪಡೆಯಬೇಕಾದರೇ ಹೇಗೋ ಹಾಗೆ ಕಷ್ಟ."[೨೦] ಒಂದು ವೃತ್ತಿ, ಕಸುಬು ಕಲಿಯಬೇಕಾದರೆ ಅದು ಅಷ್ಟು ಸುಲಭ ಅಲ್ಲ ಎಂದು ಅಂಜಪ್ಪ ಹೇಳುತ್ತಾನೆ. ಇದು ಪರಂಪರೆಯಿಂದ ಬಳುವಳಿಯಾಗಿ ಬಂದಿದ್ದು, ಯಾವುದೇ ಕೆಲಸಕ್ಕೂ ಕಡಿಮೆ ಇಲ್ಲ ಎನ್ನುವುದು ಅಂಜಪ್ಪನ ನಂಬಿಕೆ ಮತ್ತು ಆಚರಣೆಯಾಗಿದೆ.

ಅಂಜಪ್ಪ ಸುಮಾರು ಅರವತ್ತು ಎಪ್ಪತ್ತು ಗ್ರಾಮಗಳಲ್ಲಿ ಓಡಾಡುತ್ತಿದ್ದನು. ಅವನ ವೇಷಭೂಷಣ ಸಂಪ್ರದಾಯದ ಪ್ರಕಾರ ಇರುತಿತ್ತು. ಅವನ ಮುಖದಲ್ಲಿ ಕುಂಕುಮ, ವಿಭೂತಿ, ಅರಿಸಿನ ಮೂರು ಬೆರೆತಿರುವವು. ಕಣ್ಣಿಗೆ ಕಾಡಿಗೆ. ಮುಖಕ್ಕೆ ಒಂದು ಅಲಂಕಾರವಿರುವ ಹಾಗೆ ಆ ಬಟ್ಟೆಯೂ ಒಂದು ರೀತಿಯಾಗಿರುತಿತ್ತು. ರುಮಾಲು ಮೂರು ಬಣ್ಣಕ್ಕೆ ಕಡಿಮೆ ಇಲ್ಲದೆ ಬಣ್ಣಗಳ ಚಿಂದಿಗಳಿಂದ ಮಾಡಿದ್ದಾಗಿರಬೇಕು. ಹೀಗೆ ಅಂಜಪ್ಪ ರೆಡಿಯಾಗಿ ಹಳ್ಳಿಗಳಿಗೆ ಹೋದರೆ, ಅಂಜಪ್ಪನನ್ನು ಮೆಚ್ಚದೇ

ಇರುವ ಹೆಣ್ಣುಗಳಿಲ್ಲ. ಈ ರೀತಿ ಭಿಕ್ಷೆಗಾಗಿ ಕಾಳಾಪುರಕ್ಕೆ ಹೋಗಿರುವಾಗ ಊರಿನ ಗೌಡನ ಹೆಂಡತಿ ಅಂಜಪ್ಪನಿಗೆ ಒಂದು ಕೋಳಿಯನ್ನು ಕೊಟ್ಟು ಅದನ್ನು ಯಾರಿಗೂ ಹೇಳಬೇಡ ಎಂದು ಹೇಳಿದಳು. ಅಂಜಪ್ಪನು ಅದನ್ನು ಹಾಗೆಯೇ ಮನಸ್ಸಿನಲ್ಲಿಟ್ಟುಕೊಂಡಿದ್ದ, ಆದರೆ ಕಾರಣಾಂತರದಿಂದ ಅಂಜಪ್ಪ ಕೋಳಿಯ ಕಳ್ಳನಾಗುತ್ತಾನೆ. ಕೋಳಿಯನ್ನು ಅಂಜಪ್ಪ ಕದ್ದಿಲದಿದ್ದರೂ ಸಂದರ್ಭ ಅವನನ್ನು ಕಳ್ಳನಾಗಿಸುತ್ತದೆ, ಈ ದೂರು ಕೋರ್ಟಿಗೆ ಹೋಗಿ ಅಂಜಪ್ಪನ ಪರ ಸಾಕ್ಷಿಯನ್ನು ಕೋರ್ಟ್ ಕೇಳಿದಾಗ ಅಂಜಪ್ಪ ನಿಸ್ಸಾಯಕನಾಗುತ್ತಾನೆ. ಕೊನೆಗೆ ಎಪ್ಪತ್ತು ರೂಪಾಯಿ ಜುಲ್ಮಾನೆ ತೆತ್ತು ಪೆಚ್ಚು ಮುಖ ಹಾಕಿಕೊಂಡು ಊರಿಗೆ ಬಂದನು. ಇದನ್ನು ಹೇಳಲು ಅಂಜಪ್ಪ ರಂಗಪ್ಪನ ಮನೆಗೆ ಬಂದಿದ್ದು.

ಇಲ್ಲಿ ನಮಗೆ ಮುಖ್ಯವಾದುದು ಅಂಜಪ್ಪ ಪರಂಪರೆಯ ಭಾಗವಾಗಿ ಕಂಡರೆ, ಕೋರ್ಟ್ ಆಧುನಿಕತೆಯ ಭಾಗವಾಗುತ್ತದೆ. ಅಂಜಪ್ಪನ ಪರಂಪರೆಯಲ್ಲಿ ಬರುವ ನ್ಯಾಯ ತೀರ್ಮಾನವೇ ಬೇರೆಯ ರೀತಿಯದಾಗಿದ್ದು, ಅದಕ್ಕೆ ಆಧುನಿಕತೆಯ ಕೋರ್ಟ್‌ನಲ್ಲಿ ಅವಕಾಶವಿಲ್ಲ, ಇದಕ್ಕೆ ಸಾಕ್ಷಿಗಳೇ ಮುಖ್ಯ. ಹೀಗಾಗಿ ಅಂಜಪ್ಪ ತಾನು ಮಾಡದೇ ಇದ್ದ ಕಳ್ಳತನ ಮಾಡಿದ್ದನೆಂದು ಕೋರ್ಟ್ ಹೇಳುತ್ತದೆ. ಆದರೆ ಅದು ನಡೆದಿದ್ದೇ ಬೇರೆ. ತೀರ್ಪು ಆಗಿದ್ದೇ ಬೇರೆ. ಇಲ್ಲಿ ಆಧುನಿಕತೆಯೇ ಜಯವನ್ನು ಗಳಿಸುತ್ತದೆ. ಪರಂಪರೆ ಸೋಲನ್ನು ಕಾಣುತ್ತದೆ.

ಮಾಸ್ತಿಯವರ ಬಹುಚರ್ಚಿತ ಕತೆಗಳಲ್ಲಿ 'ಕಲ್ಮಾಡಿಯ ಕೋಣ' ಕತೆಯೂ ಒಂದು. ಮಾರಿಹಬ್ಬದ ಆಚರಣೆಯೇ ಈ ಕತೆಯ ವಸ್ತು. ಕಲ್ಮಾಡಿಯಲ್ಲಿರುವ ಊರಿನ ಮಾರಿಕಾದೇವಿ ಸುತ್ತಲಿನ ಹಳ್ಳಿಗಳಲ್ಲಿ ಇರುವುದಕ್ಕಿಂತ ಭಿನ್ನ. ಕಲ್ಮಾಡಿ ಎಂದರೆ ಕಲ್ಲುಮಾರಿ ಎನ್ನುವುದು, ಕಲ್ಲುಮಾಡಿ, ಕಲ್ಮಾಡಿ ಆಯಿತು ಎಂದು ಹೇಳುತ್ತಾರೆ. ಹಳ್ಳಿಯಲ್ಲಿರುವ ಜನ ಅಥವಾ ದಲಿತರಿಗೆ ಮಾರಿ ಹಬ್ಬವೆಂದರೆ ಎಲ್ಲಿಲ್ಲದ ಸಡಗರ-ಸಂಭ್ರಮ. ಮನೆಗಳೆಲ್ಲವೂ ಸುಣ್ಣ ಬಣ್ಣಗಳಿಂದ ಕೂಡಿದ್ದು, ಬಂಧು ಬಳಗದವರು, ನೆಂಟರಿಷ್ಟರೆಲ್ಲರೂ ಕೂಡಿ ಮಾರಿಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ.

ಕಲ್ಮಾಡಿಯಲ್ಲಿ ಆಚರಿಸುವ ಮಾರಿಯ ಹಬ್ಬಕ್ಕೆ ವಿಶೇಷ ಮತ್ತು ವಿಜೃಂಭಣೆ ಹೆಚ್ಚು. "ನಮ್ಮ ಊರುಗಳಲ್ಲಿ ಗ್ರಾಮದೇವತೆ ಒಂದು ಕೋಳಿಯಿಂದಲೋ ಒಂದು ಕುರಿಯಿಂದಲೋ, ಒಂದು ಆಡಿನಿಂದಲೋ ತೃಪ್ತಳಾಗುತ್ತಾಳೆ. ಕಲ್ಮಾಡಿಯಲ್ಲಿ ಜನರಿಗೆ ಜ್ಞಾಪಕವಿರುವ ಕಾಲದಿಂದಲೂ ಮಾರಿಗೆ ವರ್ಷಕ್ಕೆ ಒಂದು ಬಲಿತ ಕೋಣ ಹೊರತಾಗಿ ಇನ್ನು ಯಾವುದೂ ಸಾಕಾಗುವುದಿಲ್ಲ. ಬಲಿಯಾಗುವ ಜೀವ ಊರ ಪಾಪದ ಮೊತ್ತ, ಅದು ಜನದ ಪ್ರತಿನಿಧಿ. ದೊಡ್ಡ ಊರಿನಲ್ಲಿ ದೊಡ್ಡ ಜೀವ ಬಲಿ. ಊರು ದೊಡ್ಡದಾಗಿರುವುದರಿಂದ ಗ್ರಾಮಸ್ಥರು ಒಂದು ಕೋಣವನ್ನು ಊಹಿಸಬಹುದು. ಆದರೆ ಇದರ ಜೊತೆಗೆ ಉಳಿದ ಊರುಗಳ ಮಾರಿಯಂತೆ ಕಲ್ಮಾಡಿಯ ಮಾರಿ ಹೆಚ್ಚು ಪ್ರತ್ಯಕ್ಷ ಎಂದರೆ ಕಠಿಣ ಎಂಬ ಒಂದು ನಂಬಿಕೆಯೂ ಇದೆ."[೨೧] ಹಾಗಾಗಿ ಕಲ್ಮಾಡಿಯ ಮಾರಿಗೆ ಒಂದು ಬಲಿತ ಕೋಣವನ್ನೇ ಬಲಿ ಕೊಡುವ ಆಚರಣೆ ಅಥವಾ ನಂಬಿಕೆ ಇದೆ. ಬೇರೆ ಹಳ್ಳಿಗಳಲ್ಲಿರುವ ಮಾರಿಗೆ ಕುರಿ, ಆಡು, ಕೋಳಿ ಸಾಕಾಗದೇ ಕೋಣವೇ ಬೇಕಾಗಿದೆ. ಅದು ಕೋಣವಾದರೆ ಮೂರು ವರ್ಷ

ಬಲಿತ ಕೋಣವೇ ಆಗಿರಬೇಕು. ಹಾಗಾಗಿ ಇದನ್ನು ಕಲ್ಮಾಡಿಯಲ್ಲಿರುವ ಜನರು ಚಾಚುತಪ್ಪದೇ ಈ ಆಚರಣೆಯನ್ನು ಮಾಡಿಕೊಂಡು ಬಂದಿರುತ್ತಾರೆ.

ಕಲ್ಮಾಡಿಯ ಮಾರಿ ಆಚರಣೆಯಲ್ಲಿ ವಿಶೇಷವಾಗಿರುವಂತೆ ರೂಪದಲ್ಲೂ ವಿಶೇಷ. ಅಂದರೆ ಮಾರಿದೇವತೆಯ ಮೂರ್ತಿಯನ್ನು ನೋಡಿದಾಗ ಭಯ ಆಗುವುದು ಸಾಮಾನ್ಯ. ಆದರೆ ಕಲ್ಮಾಡಿಯ ಮಾರಿ ಹೆಚ್ಚು ಭಯಂಕರವಾಗಿದೆ. ಮೃತ್ಯುವೇ ಕಲ್ಲಿನಲ್ಲಿ ಮಾರಿಯಾಗಿ ಮೂಡಿದೆ ಎಂಬಂತೆ ಕಾಣುತ್ತದೆ. ಹೀಗಿರುವಾಗ ಯಾವ ಊರು ತಾನೆ ಭಯ ಪಡದೇ ಇರಲು ಸಾಧ್ಯ. ಅದನ್ನು ತಿಳಿದ ಮನುಷ್ಯ ಯಾವುದೋ ಕಾಲದಲ್ಲಿ ತನ್ನ ಉಳಿಯ ಮೊನೆಯಿಂದ ಕಲ್ಲಿನಲ್ಲಿ ರೂಪು ಪಡೆಯಿತು. ಇದು ಎಲ್ಲರಲ್ಲೂ ಒಂದು ರೀತಿಯ ಭೀತಿಯನ್ನುಂಟು ಮಾಡಿದೆ.

ಕಲ್ಮಾಡಿಯಲ್ಲಿ ಮಾರಿಯ ಹಬ್ಬದ ಆಚರಣೆಗೆ ಒಂದು ವಿಶೇಷವಾದ ಪದ್ಧತಿಯನ್ನು ಮಾಡಿಕೊಂಡಿರುತ್ತಾರೆ. ಇದಕ್ಕೆ ಕಾರಣ ಮಾರಿಗೆ ಬೇಕಾಗಿರುವುದು ಮೂರು ವರ್ಷದ ಬಲಿತ ಕೋಣಗಳು. "ಕಲ್ಮಾಡಿಯ ಮಾರಿಗೆ ಮೂರು ಕೋಣಗಳು ಇರುವಂತೆ ಆ ಕೋಣಗಳನ್ನು ಕೊಲ್ಲುವುದಕ್ಕೆ ಮೂರು ಜನ ತೊಟಿಗಳು ಇದ್ದಾರೆ. ಒಂದು ಕೋಣವನ್ನು ಬಲಿ ಮಾಡಿದ ಮೇಲೆ ಇನ್ನು ಮೂರು ವರ್ಷಕ್ಕೆ ಬಲಿ ಆಗುವ ಕೋಣಕ್ಕಾಗಿ ಊರಿನಲ್ಲಿರುವ ಕರುಗಳಲ್ಲಿ ಸ್ವಲ್ಪ ಮಟ್ಟಿಗೆ ತುಂಬಿಕೊಂಡಿರುವ ಒಂದನ್ನು ಗೊತ್ತು ಮಾಡುವುದು ವಾಡಿಕೆ. ಆ ಕರು ಯಾರಿಗೆ ಸೇರಿದೆಯೋ ಅವರಿಗೆ ಅದಕ್ಕಾಗಿ ಮಾರಿಯ ಆಸ್ತಿಯಿಂದ ಆಗಲೇ ಐಗಳರಾಗಿ ಕೊಟ್ಟುಬಿಡುವುದು. ಕರು ತನ್ನ ಮನೆಯಲ್ಲಿದ್ದುಕೊಂಡು ಚೆನ್ನಾಗಿ ಮೇಯ್ದುಕೊಂಡು ತುಂಬಿ ಬಲಿಯಾಗುವ ಕಾಲಕ್ಕೆ ಅದರ ಧಣಿಗೆ ಇನ್ನು ಐದು ಕೊಳಗ ರಾಗಿ. ಈ ಮಧ್ಯೆ ಮೀಸಲಾದ ಕರು ತೀರಿಕೊಂಡರೆ ಬೇರೊಂದು ಕರುವನ್ನು ಏರ್ಪಡಿಸುವುದು. ಅದು ಬಲಿಯಾಗಬೇಕಾದ ವರ್ಷದಲ್ಲಿ ತೀರಿ ಕೊಂಡರೆ ಮುಂದಿನ ವರ್ಷದ ಕೋಣವು ಅದೇ ವರ್ಷವೇ ತೀರಿಕೊಳ್ಳುವಂತೆ ಅದಕ್ಕೆ 'ಪ್ರಮೋಷನ್' ಕೊಡುವುದು, ಇದು ಪದ್ಧತಿ."[೨೨] ಹೀಗಿರುವಾಗ ಮುನಿಯನ ಕೋಣವನ್ನು ಮುನಿಯನೇ ಕಡಿಯಬೇಕಾದ ಸಂದರ್ಭ ಬಂದಾಗ ಮುನಿಯನು ಅದರಿಂದ ತಾನು ತಪ್ಪಿಸಿಕೊಳ್ಳಬೇಕು, ಇಲ್ಲವೇ ತನ್ನ ಕೋಣವನ್ನು ಮುಂದಿನ ವರ್ಷ ಬಲಿಕೊಡಬೇಕು ಎಂಬ ವಾದವನ್ನು ಮುಂದಿಡುತ್ತಾನೆ. ಆದರೆ ಊರಿನ ಗೌಡ ಮತ್ತು ಜೋಯಿಸರು ಇದನ್ನು ಒಪ್ಪುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಮಾರಿ ಅದನ್ನು ಒಪ್ಪುವುದಿಲ್ಲ. ಆ ರೀತಿ ಮಾಡುವುದರಿಂದ ಊರಿಗೆ ಅಶುಭ ಎಂದು ಹೇಳುತ್ತಾರೆ.

ಮುನಿಯ ಏನೇ ಪ್ರಯತ್ನ ಪಟ್ಟರು ಅವನ ಕೋಣವನ್ನು ಅವನೇ ಬಲಿಕೊಡುವ ಸಂದರ್ಭ ಬರುತ್ತದೆ. ಮಾರಿಯ ಸನ್ನಿಧಿಯಲ್ಲಿ ಇಟ್ಟಿದ್ದ ಕಡುಗತ್ತಿ ಅವನ ಕೈಗೆ ಬಂದಾಗ ಕಣ್ಣಲ್ಲಿ ನೀರು ಚಿಮ್ಮಬೇಕು, ಅಷ್ಟರಲ್ಲೇ ಅದು ಪಾಪವಾಗುತ್ತದೆಂದು ಭಯದಿಂದ ತಡೆದುಕೊಳ್ಳುತ್ತಾನೆ. ಕೈ ಸ್ವಲ್ಪ ನಡಗುತ್ತದೆ. ತಮಟೆಯ ಶಬ್ಧ ಜಾಸ್ತಿಯಾಯಿತು. ಸೇರಿದ್ದ ಜನರೆಲ್ಲ 'ಹಲಲೋ ಕುಲಲೋ' ಎಂದು ದನಿಯೆತ್ತಿ, ಮೂರನೇ ಸಲ ಕೂಗಿದಾಗ, ಮುನಿಯನು ಎತ್ತಿದ ಕತ್ತಿ ಕೋಣನ ಕುತ್ತಿಗೆಗೆ ಬೀಳಬೇಕು ಎನ್ನುವಷ್ಟರಲ್ಲಿ ಯಾವ ಗ್ರಹಚಾರದಿಂದಲೋ ಏನೋ ಕೋಣ ತನ್ನ ಪಕ್ಕದಲ್ಲಿದ್ದ

ಯಜಮಾನನ ಕಡೆಗೆ ಮುಖ ಮಾಡುವಂತೆ ಕುತ್ತಿಗೆಯನ್ನು ತಿರುಗಿಸುತ್ತದೆ. ಆಗ ಮುನಿಯನು ಸ್ವಲ್ಪ ನಡುಗಿ, ಆ ಮೇಲೆ ಕರ್ತವ್ಯದ ದೃಷ್ಟಿಯಿಂದ ಕೋಣವನ್ನು ಕಡಿಯುತ್ತಾನೆ. ಆದರೆ ಅವನ ಕೈಯಲ್ಲಿ ಬಲ ಸಕಾಗದೇ ಕತ್ತಿ ಒಳಗೆ ಹೋಗದೇ ಪಕ್ಕಕ್ಕೆ ಹೋಗುತ್ತದೆ. ಪೆಟ್ಟು ಬಿದ್ದ ಕೋಣ ಸಾಯಬೇಕಿತ್ತು. ಆದರೆ ಸಾಯಲಿಲ್ಲ. ಬದಲಾಗಿ ಜನರಿಂದ ತಪ್ಪಿಸಿಕೊಂಡು ಹೋಗಿ ಊರಿಂದ ದೂರದಲ್ಲಿರುವ ಮಂಚಿಗೆಯ ಮೇಲೆ ತ್ರಾಣವಿಲ್ಲದೇ ಬಿದ್ದಿರುತ್ತದೆ. ಊರಿನವರೆಲ್ಲ ಎರಡು ದಿನ ಹುಡುಕಿ ನಂತರ ಅಲ್ಲಿಯೇ ಕೋಣವನ್ನು ಸಂಪ್ರದಾಯಗಳೊಂದಿಗೆ ಬಲಿ ಕೊಡುತ್ತಾರೆ. ಎಂದೂ ಇಲ್ಲದ ಈ ಅನರ್ಥ ಪರಂಪರೆ ಈ ಸಲ ಯಾಕೆ ಈತರ ಆಯಿತು ಎಂದು ಯೋಚಿಸಿ, ಅದಕ್ಕೆ ಶಾಂತಿ ಮಾಡಬೇಕು ಎಂದು ಚರ್ಚೆ ನಡೆಯುತ್ತದೆ. ಇದಕ್ಕೆ ಮುನಿಯನೇ ಕಾರಣ. ಅವನು ಬೇಡ ಎಂದ ಕೋಣವನ್ನು ತಾಯಿಗೆ ಬಲಿ ಪಡೆಯಲು ಇಷ್ಟ ಇಲ್ಲ ಎಂದೂ, ಕೋಣ ತಪ್ಪಿಸಿಕೊಳ್ಳಲು ಅವಳ ಇಚ್ಛೆಯೇ ಕಾರಣವೆಂದೂ ತೀರ್ಮಾನವಾಗುತ್ತದೆ. ಹೀಗಿರುವಾಗ ಊರಿನಲ್ಲಿರುವ ಭಯ ಭಕ್ತಿಗಳು ತಾಯಿಗೆ ಇಷ್ಟವಾಗಿ ಇನ್ನೊಂದು ಗುಡಿಯನ್ನು ಕಟ್ಟಸಿಕೊಳ್ಳಬೇಕೆಂದು, ಊರಿನಲ್ಲಿ ನಡೆಯುವಂತೆ ಕಾಡಿನಲ್ಲೂ ಜಾತ್ರೆ ಮಾಡಬೇಕೆಂದು, ಅದಕ್ಕಾಗಿಯೇ ಕೋಣ ತಪ್ಪಿಸಿಕೊಂಡು ಕಾಡಿನಲ್ಲಿ ಸತ್ತಿತೆಂದು ಎಲ್ಲಾರು ಒಪ್ಪಿಕೊಂಡರು. ಇದರಂತೆ ವರ್ಷಕ್ಕೆ ಒಂದು ಕೋಣ ಬಲಿಯಾಗುವುದರ ಬದಲು, ಎರಡು ಕೋಣಗಳು ಬಲಿಯಾಗುವಂತೆ ಮಾಡುತ್ತಾರೆ. ಕಾಡಮ್ಮ, ಊರಮ್ಮ ಎಂಬ ಹೆಸರಿನಲ್ಲಿ ಪೂಜೆ ಮಾಡುತ್ತಾರೆ. ಇದಕ್ಕೆಲ್ಲ ಜೋಯಿಸರು ಸಹಾಯ ಮಾಡಿದರು.

ಮಾರಿಹಬ್ಬವನ್ನು ಆಚರಿಸುವವರು ದಲಿತರು ಮತ್ತು ಅನಕ್ಷರಸ್ಥರೆ. ಇದು ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತದೆ. ಅವರಿಗೆ ಯಾವುದು ಸರಿ ಯಾವುದು ತಪ್ಪು ಎನ್ನುವ ಆಲೋಚನೆ ಬಂದಿಲ್ಲದಾಗ ಇಂತಹ ಅನೇಕ ತೊಂದರೆಗಳು ಸಂಭವಿಸುತ್ತವೆ. ಇದಕ್ಕೆ ಕಾರಣ ನಾವೇ ಎಂದು ಕೊಂಡು ಕೇವಲ ಮೇಲ್ವರ್ಗದವರೇ ನಿಜ ಹೇಳುವವರೆಂಬ ನಂಬಿಕೆಗೆ ಒಳಗಾಗುತ್ತಾರೆ. ಆ ನಂಬಿಕೆಯೇ ಅವರನ್ನು ಕಟ್ಟಿಹಾಕುತ್ತದೆ.

ವೈದಿಕ ಪರಂಪರೆಯ ಇಂತಹ ಅನೇಕ ಅಂಶಗಳು ಮಾಸ್ತಿಯವರ ಕತೆಗಳಲ್ಲಿ ಕಾಣ ಸಿಗುತ್ತವೆ. ಜನರು ಎಲ್ಲಿ ಆಧುನಿಕತೆಗೆ ಒಳಗಾದರೆ ಇಂತಹ ವ್ಯವಸ್ಥೆ ಬದಲಾಗುತ್ತದೆ ಎಂಬ ಆತಂಕವು ಈ ಕತೆಯಲ್ಲಿದೆ. ಮೇಲ್ವರ್ಗದವರು ಹೇಗೆಲ್ಲ ಕೆಳ ಜಾತಿಯವರನ್ನು ಶೋಷಣೆ ಮಾಡುತ್ತಿದ್ದರು ಎಂಬುದಕ್ಕೆ ಕಲ್ಮಾಡಿಯ ಕೋಣ ಕತೆ ಕನ್ನಡಿ ಹಿಡಿದಂತಿದೆ.

‘ಉಗ್ರಪ್ಪನ ಉಗಾದಿ’ ಈ ಕತೆಯೂ ಕೂಡ ಪರಂಪರೆಯನ್ನೇ ಮುಖ್ಯವಾಗಿಟ್ಟುಕೊಂಡು ರಚನೆಯಾಗಿದೆ. ಇದಕ್ಕೆ ಕೆಲವು ಪುರಾವೆಗಳನ್ನು ಕತೆ ಒದಗಿಸುತ್ತದೆ. ಶತಶತಮಾನಗಳಿಂದ ರೂಢಿಯಲ್ಲಿರುವ ಶೋಷಣೆಯನ್ನು ಮುಂದುವರಿಸುವ ಆಶಯವನ್ನು ಹೊಂದಿದೆ. ಇಲ್ಲಿ ಬರುವ ಗೌಡ ಮತ್ತು ಜೋಯಿಸರು ಹಳ್ಳಿಯಲ್ಲಿ ಕಂಡು ಬರುವ ಎರಡು ಮುಖ್ಯ ಪಾತ್ರಗಳು ಮತ್ತು ಈ ಪಾತ್ರಗಳದ್ದೇ ಅಂತಿಮ ತೀರ್ಮಾನವಾಗಿರುತ್ತದೆ. ಕತೆಯಲ್ಲಿ ಗೌಡನ ಸ್ಥಾನಮಾನಗಳೇನು? ಜೋಯಿಸರ ಸ್ಥಾನಮಾನಗಳೇನು? ಎಂಬುದರ ಕುರಿತು ವಿವರಗಳಿವೆ.

ಉಗ್ರಪ್ಪ ಮದರಂಗಿಯ ಗೌಡ. ಊರಿನಲ್ಲಿರುವ ಯಾರಿಗೂ ಸಮಸ್ಯೆ ಬಾರದ ಹಾಗೇ ನೋಡಿಕೊಳ್ಳುವುದು ಗೌಡನ ಮುಖ್ಯ ಕರ್ತವ್ಯ. ಅಷ್ಟೇ ಅಲ್ಲ ಯಾರಿಗೂ ಅನ್ಯಾಯವಾಗುವಂತಿಲ್ಲ. ಜೊತೆಗೆ ಗೌಡನ ಪಾತ್ರವಿರದೇ, ಅಥವಾ ಗೌಡನ ಗಮನಕ್ಕೆ ಬಾರದೇ ಮದರಂಗಿಯಲ್ಲಿ ಏನೂ ನಡೆಯುವಂತಿಲ್ಲ. ಊರ ಸಂತೋಷವೇ ನನ್ನ ಸಂತೋಷ ಎಂಬುದು ಗೌಡನ ನಂಬಿಕೆ. "ಉಗಾದಿ ಎಂದರೆ ಊರಿಗೆಲ್ಲ ಹಬ್ಬ. ಮದರಂಗಿಯ ಗೌಡನಿಗೆ ಬರೀ ಆಯಾಸ. ಮನೆಯ ತಾಯಿ ಕಷ್ಟಪಟ್ಟು ಅಡಿಗೆ ಮಾಡಿ ಎಲ್ಲರಿಗೂ ಬಡಿಸಿ. ತಾನು ಆಯಾಸವನ್ನು ಮಾತ್ರ ಉಣುವಂತೆ ಮದರಂಗಿಯಲ್ಲಿ ಉಗ್ರಪ್ಪನ ಬಾಳು."[೨೩] ಇದರಿಂದ ಗೌಡನ ವ್ಯಕ್ತಿತ್ವ ತಿಳಿಯುತ್ತದೆ. ಹಳ್ಳಿಯಲ್ಲಿ ಏನಾದರೂ ಸಮಸ್ಯೆ ಬಂದರೆ ಅದನ್ನು ಬಗೆಹರಿಸಬೇಕು ಇಲ್ಲದಿದ್ದರೆ ಪಕ್ಕದ ಹಳ್ಳಿಯಲ್ಲಿ ಗೊತ್ತಾಗಿ ತನ್ನ ಘನತೆಗೆ ದಕ್ಕೆ ಬರುವುದೆಂದು, ಮದರಂಗಿ ಬೇರೆ ಊರಿಗಿಂತ ಕಡಿಮೆ ಇಲ್ಲ ಎಂಬ ಗುಂಗಿನಲ್ಲಿ ಮದರಂಗಿಯ ಗೌಡ ಜೀವನ ನಡೆಸುತ್ತಾನೆ.

ಒಂದು ದಿನ ಮದರಂಗಿಗೆ ಚಿರತೆ ಬಂದಿದ್ದು ದನ ಕಾಯುವ ರಂಗ ಹೋಗಿ ಅದರ ಮೇಲೆ ಬಿದ್ದು ದೊಣ್ಣೆಯಿಂದ ಹೊಡೆದನೆಂದು ಚಿರತೆ ಸತ್ತಿತೆಂದು ಸುದ್ದಿಯಾಯಿತು. ಇದನ್ನು ತಿಳಿದ ಗೌಡ ರಂಗನನ್ನು ಹೊಗಳಿದ. ನಂತರ ರಂಗನಿಗೆ ಮತ್ತು ಚಿರತೆಗೆ ಅಲಂಕಾರ ಮಾಡಿ ಮೆರವಣಿಗೆ ಮಾಡಿದರು, ಉಗಾದಿ ಹಬ್ಬಕ್ಕೆ ಬಲಿ ಕೊಡುವುದು ಮತ್ತು ಬಲಿಯಾದ ಪ್ರಾಣಿಯನ್ನು ಮೆರವಣಿಗೆ ಮಾಡುವುದು ಪರಂಪರೆಯಿಂದ ಬಂದಿದೆ. ಮುಖ್ಯವಾಗಿ ಉಗಾದಿ ಹಬ್ಬದ ಆಚರಣೆ ವಿಶೇಷವನ್ನು ಇಲ್ಲಿ ವರ್ಣಿಸಲಾಗಿದೆ. ಉಗಾದಿ ಹಬ್ಬವೆಂದರೆ ಮನೆಯಲ್ಲಿ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದು, ಗುಡಿಗಳಿಗೆ ಹೋಗಿ ಪೂಜೆ ಮಾಡಿಸುವುದು, ಬೇವು ಬೆಲ್ಲ ತಿನ್ನುವುದು ಇದು ಸಾಮಾನ್ಯ. ಆದರೆ ಕತೆಯಲ್ಲಿ "ಪಂಚಾಗ ಶ್ರವಣ ಆದಷ್ಟು ಹೊತ್ತು, ಸಂಕ್ರಾತಿ ಪುರುಷನ ವರ್ಣನೆ, ಮಳೆ ಬೆಳೆ ಹೇಗೆ ಎಂದು ವಿಚಾರ, ಒಬ್ಬೊಬ್ಬ ರೈತನು ತನ್ನ ಕಂದಾಯವನ್ನು ಕೇಳುವುದು, ಇಷ್ಟು ಆಗುವ ಹೊತ್ತಿಗೆ ಮಕ್ಕಳೆಲ್ಲ, ಚಾವಡಿಯಲ್ಲಿಯೇ ಮಲಗಿ ನಿದ್ರಿಸುತ್ತಿದ್ದರು. ವಯಸ್ಸಾದವರು ಆಕಳಿಸುತ್ತಿದ್ದರು. ಗೌಡನು ಇನ್ನು ಹೋಗಿ ಮಲಗಬೇಕು ಎಂದು ಎಲ್ಲರೊಡನೆ ಎದ್ದು ಮನೆಗೆ ಹೊರಟನು."[೨೪] ಇಲ್ಲಿ ಯಾರನ್ನು ಗೌಡ ಬಿಡದೇ ಪೂಜೆಯನ್ನು ಮಾಡುವಂತಿರಲಿಲ್ಲ. ಬಿಟ್ಟು ಪೂಜೆಯನ್ನು ಮಾಡಿದರೆ 'ನಮ್ಮ ಗೌಡ ನಡೆಸುವ ಉತ್ಸವಕ್ಕೆ ಬರೊದೆ ಬೇಡ ಅನ್ನೋ ಪರದೇಶಿಯೆ ನಾನು' ಎಂದು ರಾದ್ಧಾಂತವಾಗುವುದು.

ಮಾಸ್ತಿಯವರು ಮುಖ್ಯವಾಗಿ ಕತೆಗಳನ್ನು ರಚಿಸುವ ಉದ್ದೇಶ ತನಗೆ ನೀಡಿದ ಜೀವನದ ಅನುಭವವನ್ನು ಇತರರಿಗೆ ತಿಳಿಸುವುದು. ಯಾವುದು ಸರಿ ಯಾವುದು ತಪ್ಪು ಎಂಬ ತಿರ್ಮಾನವನ್ನು ಅಂತಿಮಗೊಳಿಸದೆ ಅದನ್ನು ಓದುಗರಿಗೆ ಬಿಡುತ್ತಾರೆ. ಹಾಗಾಗಿ ಇಲ್ಲಿ ಕೆಳವರ್ಗದವರು ಆಚರಿಸುವ ಹಬ್ಬಗಳನ್ನೂ, ಮೇಲ್ವರ್ಗದವರು ಆಚರಿಸುವ ಹಬ್ಬಗಳನ್ನೂ ಕುರಿತು ಕತೆಗಳನ್ನು ಬರೆದಿದ್ದಾರೆ. ಇದೇ ಮಾಸ್ತಿಯವರ ಜನಪ್ರಿಯತೆಗೆ ಕಾರಣವಾಗಿದೆ.

ಮಾಸ್ತಿಯವರ ಬಹು ಚರ್ಚಿತ ಕಥೆಗಳಲ್ಲಿ 'ವೆಂಕಟಿಗನ ಹೆಂಡತಿ' ಕತೆಯೂ ಒಂದು. ಈ ಕತೆಯಲ್ಲಿ ಬರುವ ಕಥಾ ನಾಯಕ ವೆಂಕಟಿಗನ ಸುತ್ತ ಹೆಣೆದ ಕತೆ ಇದಾಗಿದೆ. ವೆಂಕಟಿಗ ಕೆಳವರ್ಗದಲ್ಲಿ ಜನಿಸಿದ್ದರಿಂದ ಅವನ ಕಸಬು ಸೌದೆಯನ್ನು ತರುವುದಾಗಿತ್ತು. ಇವನು ಚಿಕ್ಕವನಿದ್ದಾಗಲೇ ಇವನ ಮದುವೆ ಮಾವನ ಮಗಳಾದ 'ರಂಗಿ' ಎಂಬ ಹುಡುಗಿಯ ಜೊತೆಗೆಂದು ಹಿರಿಯರು ಗೊತ್ತು ಮಾಡಿದರು. ರಂಗಿ ನೋಡಲು ಸುಂದರವಾಗಿದ್ದಳು. ಹುಡುಗ ಹುಡುಗಿ ಜೊತೆ ಜೊತೆಯಲ್ಲಿ ಎಷ್ಟೋ ಕಾಲ ಬೆಟ್ಟಕ್ಕೆ ಸಾಮಾನುಗಳನ್ನು ಹೊತ್ತು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು.

ಮದುವೆಯಾದ ಹೊಸದರಲ್ಲಿ ವೆಂಕಟಿಗ ಮತ್ತು ರಂಗಿ ಸುಖವಾಗಿ ಜೀವನ ನಡೆಸುತ್ತಿದ್ದರು. ಹೀಗಿರುವಾಗ ಊರಿನ ಶ್ರೀಮಂತನಾದ 'ರೆಡ್ಡಿ' ರಂಗಿಗೆ ಹಣ, ಒಡವೆಯ ಆಸೆ ತೋರಿಸಿ ಅವಳನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಎಷ್ಟೋದಿನ ರಂಗಿಯನ್ನು ಅವನ ಮನೆಯಲ್ಲಿಯೇ ನಿಲ್ಲುವಂತೆ ನೋಡಿಕೊಳ್ಳುತ್ತಾನೆ. ಈ ಸುದ್ದಿ ಊರಲೆಲ್ಲಾ ಹರಡಿ ವೆಂಕಟಿಗ ತನ್ನ ಹೆಂಡತಿಯನ್ನು ಕರೆತರಲು ರೆಡ್ಡಿಯ ಮನೆಗೆ ಹೋಗಿ ರಂಗಿಯನ್ನು ಮನೆಗೆ ಬರುವಂತೆ ಅಂಗಲಾಚುತ್ತಾನೆ. ಆದರೆ ರಂಗಿ ರೆಡ್ಡಿಯನ್ನು ಬಿಟ್ಟು ಬರಳು ಒಪ್ಪುವುದಿಲ್ಲ. ಇಡೀ ಹಳ್ಳಿಯೇ ವೆಂಕಟಿಗನಿಗೆ ಹೆಂಡತಿಯನ್ನು ಬಿಟ್ಟು ಬಿಡು, ಇಲ್ಲವಾದರೆ ಅವಳನ್ನು ಹೊಡೆದು ತಂದು ಹಾಳು ಎಂಬ ಸಲಹೆಯನ್ನು ಕೊಡುತ್ತಾರೆ. ಆದರೆ ಜನ ಹೇಳಿದಂತೆ ಮಾಡಲು ವೆಂಕಟಿಗ ತಯಾರಿರಲಿಲ್ಲ. "ನನಗೆ ಇದು ಯಾವುದೂ ಒಪ್ಪಿಗೆಯಾಗಲಿಲ್ಲ ನಾಯನ. ನನ್ನ ಹೆಂಡತಿ ವಿಷಯಕ್ಕೆ ನಾನು ಹೇಗೆ ನಡೆದುಕೊಳ್ಳಬೇಕು ಎನ್ನುವುದು ಒಂದೇ ನನಗೆ ಯೋಚನೆ. ಜನ ನನ್ನನ್ನು ಏನು ಹೇಳುತ್ತಾರೆ, ಜನ ಅವಳ ತೌರನ್ನು ಏನು ಹೇಳುತ್ತಾರೆ, ಸಾಹುಕಾರನಿಗೆ ಏನಾಗುತ್ತದೆ, ಇದೆಲ್ಲ ಅವಾಂತರದ ಮಾತು. ನಾನು ಕೈಹಿಡಿದ ಹುಡುಗಿ ಮನಚೆದರಿ ಬೇರೆಕಡೆ ಹೋದಳು. ನಾನೇನು ಮಾಡಬೇಕು? ಬೈಯಲಾ? ಹೊಡೆಯಲಾ? ಬಲವಂತ ಮಾಡಲಾ? ಬಿಟ್ಟುಬಿಟ್ಟೆ ಎನ್ನಲಾ? ಏನು ಮಾಡಲಿ? ನನ್ನ ಸ್ವಭಾವಕ್ಕೆ ನಾನು ಏನು ಮಾಡುತ್ತಿದ್ದೆನೋ ಅದೇ ಸಾಧ್ಯ. ಕೈ ಹಿಡಿದ ಹೆಣ್ಣು ಕೈಬಿಟ್ಟಳು. ನನಗೆ ಬೇಸರವಾಯ್ತು, ಕೋಪ ಬರಲಿಲ್ಲ. ಇನ್ನೊಬ್ಬ ಹೆಂಗಸು ಬೇಕೆನ್ನಿಸಲಿಲ್ಲ. ಇಲ್ಲದಿದ್ದರೆ ಇನ್ನೊಂದು ದಿನ, ಈ ಜನ್ಮಕ್ಕಲ್ಲದೆ ಇದ್ದರೆ ಇನ್ನೊಂದು ಜನ್ಮಕ್ಕಾದರೂ ನಾನು ಅವಳಿಗೆ ದಿಕ್ಕಾಗಿರಬೇಕು ಎಂದೇ ನನ್ನ ತಿಳಿವಳಿಕೆ. ಆದ್ದರಿಂದ ನಾನು ಯಾವ ಮಾತಿಗೂ ಕಿವಿಗೊಡಲಿಲ್ಲ. ಮಾರನೆಯ ದಿನ ಎದ್ದು ಇತ್ತ ಹೊರಟು ಬಂದು ಬಿಟ್ಟೆ. ಇಲ್ಲಿ ಹೊಟ್ಟೆ ಹೊರೆಯುತ್ತಿದ್ದೇನೆ. ನಾಲ್ಕು ಕಾಸು ಉಳಿಯುತ್ತದೆ; ಅದನ್ನು ತಾಯಿಗೆ ಕಳುಹಿಸುತ್ತಾ ಇದ್ದೇನೆ. ಇಲ್ಲಿ ಪಾಳೆಯದಲ್ಲಿ ನಮ್ಮ ಕಡೆಯಿಂದ ಬಂದಿರುವ ಜನ ಇದ್ದಾರೆ. ಅವರಲ್ಲಿ ಒಬ್ಬರಿಗೆ ನಾಲ್ಕು ಕಾಸು ಕೊಟ್ಟು ಹಾಕಿದ್ದನ್ನು ತಿಂದುಕೊಂಡು ಕಾಲ ನೂಕುತ್ತಿದ್ದೇನೆ."[೨೫] ಇದನ್ನು ನಿರೂಪಕನಿಗೆ ವೆಂಕಟಿಗ ಹೇಳುತ್ತಾನೆ. ಅಂದರೆ ತನ್ನ ಹೆಂಡತಿ ತನ್ನನ್ನು ಬಿಟ್ಟು ಬೇರೆಯವರ ಜೊತೆ ಹೋದರು. ತನ್ನ ಹೆಂಡತಿಯ ಬಗ್ಗೆ ಕೋಪಗೊಳ್ಳದೇ, ಯಾವಾಗಾದರೂ ಬರಲಿ ನಾನು ಅವಳನ್ನು ಸ್ವೀಕರಿಸುತ್ತೇನೆ ಎಂಬ ಮನೋಭಾವ ಪರಂಪರೆಯಿಂದ ಬಂದಿದೆ.

೪.೨. ಹಳ್ಳಿ

ರಂಗನ ಮದುವೆ ಮಾಸ್ತಿಯವರ ಮೊದಲ ಸಣ್ಣಕತೆ. ಇಲ್ಲಿ ಬರುವ ಪಾತ್ರಗಳು ಮುಖ್ಯವಾಗಿ ಮೂರೇ ಮೂರು ಮಾತ್ರ. ಆದರೆ ಕತೆಯಲ್ಲಿ ಸೇರಿ ಕೊಂಡಿರುವ ವಸ್ತು ವಿಷಯಗಳು ಅನೇಕ. ಮಾಸ್ತಿಯವರು ಹೆಚ್ಚು ಪರಂಪರವಾದಿಯೆಂದು ಹಲವು ವಿದ್ವಾಂಸರು ಹೇಳಿರುವುದುಂಟು. ಅದಕ್ಕೆ 'ರಂಗನ ಮದುವೆ' ಕತೆಯೂ ಹೊರತಾಗಿಲ್ಲ. ಪ್ರಸ್ತುತ ಕತೆಯಲ್ಲಿ ಹಳ್ಳಿಗೆ ಸಂಬಂಧಿಸಿದ ಅನೇಕ ವಿವರಗಳು ಸಿಗುತ್ತವೆ. ಮಾಸ್ತಿಯವರು ನಗರಕ್ಕಿಂತ ಹಳ್ಳಿಗೆ ಹೆಚ್ಚು ಮಹತ್ವಕೊಟ್ಟಿರುವುದು ಅವರ ಅನೇಕ ಕತೆಗಳಲ್ಲಿ ಉಲ್ಲೇಖಗಳು ನಮಗೆ ಸಿಗುತ್ತವೆ. 'ರಂಗನ ಮದುವೆ' ಕತೆಯಲ್ಲಿ ಬರುವ 'ಹೊಸಹಳ್ಳಿ' ಎಂಬ ಊರಿನ ಕುರಿತು ಕತೆಗಾರರು ಕೆಲವು ಮಾತುಗಳನ್ನು ಹೇಳಿದ್ದಾರೆ. ಭೂವಿವರಣೆಗಳಲ್ಲಿ ಹೊಸಹಳ್ಳಿ ಎಂಬ ಹೆಸರು ಇಲ್ಲದೇ ಇರುವುದು ಮತ್ತು ಆ ವಿವರಣೆಗಳನ್ನು ಬರೆಯುವುವವರು ಇಂಗ್ಲೆಂಡ್ ದೇಶದಲ್ಲಿದ್ದ ಇಂಗ್ಲೀಷ್‌ನವರಾಗಿರುವುದರಿಂದ ಹೊಸಹಳ್ಳಿಯ ಹೆಸರನ್ನೇ ಮರೆತ್ತಿರುವರು. ಇದಕ್ಕೆ ಕಾರಣ. "ವಸಾಹತುಶಾಹಿ ಅನುಭವಗಳ ಮೂಲಕ ಒದಗಿದ ದಿಗ್ಭ್ರಮೆಯಲ್ಲಿ ನಾಡಿನ ಪ್ರಜ್ಞೆ ನಂಬಿಕೆ ಮತ್ತು ಆಚರಣೆಗಳ ನಡುವಣ ಸಹಬಾಳ್ವೆಗೆ ತೀವ್ರ ಆಘಾತವನ್ನು ಅರಗಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದರಿಂದ ಬಿಡುಗಡೆ ಪಡೆಯಲು ಹಲವು ಮಾದರಿಗಳನ್ನು ಹುಡುಕಲಾಯಿತು. ಮಾಸ್ತಿಯವರ ಸಾಹಿತ್ಯ ಅಂತಹ ಮಾದರಿ ಮಂಡಿಸುತ್ತದೆ"[೨೬] ಎಂದು ವಿಮರ್ಶಕ ಕೆ.ವಿ.ನಾರಾಯಣ ಬೇರು, ಕಂಡ, ಚಿಗುರು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಮಾಸ್ತಿಯವರ ಕತೆಗಳಲ್ಲಿ ಹಳ್ಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಕಂಡುಬರುತ್ತದೆ. ನಗರಕ್ಕಿಂತ ಹಳ್ಳಿ ಹೇಗೆ ಉಪಯುಕ್ತವಾಗಿದೆ ಎಂದು ಮಾಸ್ತಿಯವರು 'ರಂಗನ ಮದುವೆ' ಕತೆಯಲ್ಲಿ ಅದನ್ನು ನಿರೂಪಿಸಿದ್ದಾರೆ. "ಹಳ್ಳಿಯ (ಹೊಸಹಳ್ಳಿ) ತೋಪಿನಲ್ಲಿ ಕೆಲವು ಮಾವಿನಮರ ಇವೆ. ಅವುಗಳಲ್ಲಿ ಬಿಡುವ ಒಂದು ಮಾವಿನ ಕಾಯಿ ತಿನ್ನಿ. ತಿನ್ನುವುದು ಬೇಡ; ಸುಮ್ಮನೆ ಕಡಿಯಿರಿ; ಹುಳಿ ಬ್ರಹ್ಮರಂಧ್ರಕೇರುವುದು. ನಾನೊಂದು ಸಲ ಆ ಕಾಯನ್ನು ತಂದೆನು. ಚಟ್ಟಣಿ ಮಾಡಿದ್ದರು. ಎಲ್ಲರೂ ತಿಂದೆವು. ಸಾಲಾಗಿ ಎಲ್ಲರಿಗೂ ಕೆಮ್ಮು ಬರಬೇಕೆ? ಔಷಧಿಯನ್ನು ಕೇಳಲು ವೈದ್ಯರ ಬಳಿಗೆ ಹೋಗಿದ್ದೆ. ಆಗ ಅವರು ಈ ಮಾತನ್ನು ಹೇಳಿದರು. ಈ ಮಾವಿನ ಕಾಯಿ ಹೇಗೆ ಶ್ರೇಷ್ಠವೋ, ನಮ್ಮ ಊರಿನ ಹತ್ತಿರವಿರುವುದೆಲ್ಲಾ ಹಾಗೆಯೇ ಶ್ರೇಷ್ಠ ನಮ್ಮೂರಿನ ಕೊಳದಲ್ಲಿರುವ ನೀರು ಎಷ್ಟೋ ಚೆನ್ನಾಗಿದೆ. ಅದರ ಮಧ್ಯೆ ತಾವರೆಯ ಬಳ್ಳಿ ಬೆಳೆದುಕೊಂಡಿದೆ. ನೋಡುವುದಕ್ಕೆ ಪುಷ್ಪಗಳು ಬಹು ರಮ್ಯವಾಗಿವೆ. ಊಟಕ್ಕೆ ಎಲೆ ಇಲ್ಲದಿದ್ದರೆ, ಮಧ್ಯಾಹ್ನದ ವೇಳೆ ಸ್ನಾನಕ್ಕೆ ಹೋದಾಗ ಎರಡೆಲೆ ತಂದರಾಯಿತು ಎಲೆಯನ್ನು ಹಚ್ಚುವ ಕಷ್ಟವೇ ಇಲ್ಲ! ಏನೇನೋ ಹೇಳುವೆನೆನ್ನುವಿರಿ. ನಮ್ಮೂರಿನ ಮಾತನ್ನೆತ್ತಿದರೇನೇ ಹಾಗೆ ಹೋಗಲಿ; ಇನ್ನು ಸಾಕು."[೨೭]

ಮಾಸ್ತಿಯವರ ಮನಸ್ಸು ಹಳ್ಳಿಯನ್ನು ಹೇಗೆ ಆಕರ್ಷಿಸಿತ್ತು. ನಗರಕ್ಕಿಂತ ಹಳ್ಳಿ ಏಕೆ ಶ್ರೇಷ್ಠ ಎಂಬ ಅಂಶಗಳು ಈ ಮೇಲಿನ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ.

‘ವೆಂಕಟಶಾಮಿಯ ಪ್ರಣಯ’ ಕತೆ ಮಾಸ್ತಿಯವರ ಜನಪ್ರಿಯ ಕತೆಗಳಲ್ಲಿ ಒಂದು. ಇಡೀ ಕತೆ ಹಳ್ಳಿಯಲ್ಲಿಯೇ ಆರಂಭವಾಗಿ, ಹಳ್ಳಿಯಲ್ಲಿಯೇ ಮುಕ್ತಾಯವಾಗುತ್ತದೆ. ಮಾಸ್ತಿಯವರ ಕತೆಗಳಲ್ಲಿ ಹಳ್ಳಿಯೇ ಕತೆಗಳ ರಚನೆಗೆ ಪ್ರೇರಣೆ. ಈ ಕತೆಯಲ್ಲಿ ಬರುವ ಹಳ್ಳಿ ತುಂಬಾ ಸುಂದರವಾಗಿದೆಯೆಂದು ಕತೆಗಾರ ಕತೆಯ ಆರಂಭದಲ್ಲಿಯೇ ಅದನ್ನು ಹೇಳುತ್ತಾನೆ. ವೆಂಕಟಿಗ ನರಸನ ಮಗ. ಇವರು ಮಾಡುತ್ತಿರುವ ವೃತ್ತಿ ಕ್ಷೌರ. ಇದರಿಂದ ನಾಯಿಂದನಾದ ನರಸನಿಗೆ ಊರಿನಲ್ಲಿ ಒಂದು ರೀತಿಯ ಗೌರವ ಇರುತ್ತದೆ. ತನ್ನ ಮಗ ಓದಿನಲ್ಲಿ ಆಸಕ್ತಿ ತೋರಿಸಲಿಲ್ಲ. ಅವನ ಇಷ್ಟದಂತೆ ಬಿಡುತ್ತಾನೆ. ಮುಂದೆ ಒಂದು ದಿನ ದೊಂಬರ ಹುಡುಗಿಯನ್ನು ಪ್ರೀತಿಸುತ್ತಾನೆ. ಇದನ್ನು ಹಳ್ಳಿಯಲ್ಲಿ ಯಾರು ಒಪ್ಪಿಕೊಳ್ಳುವುದಿಲ್ಲ ಹಾಗಾಗಿ ಜ್ವರ ಬಂದು ಸಾಯಿಸುತ್ತಾನೆ.

ಹಳ್ಳಿಯೆಂದರೆ ಅಲ್ಲಿ ಮುಖ್ಯವಾಗಿ ಜಾತಿ ಮತ್ತು ಕೆಲಸಗಳು ನಿರ್ದಿಷ್ಟವಾಗಿ ಮೀಸಲಾಗಿರುತ್ತವೆ. ಯಾವ ಜಾತಿಯವರು ಏನು ಕೆಲಸ ಮಾಡಬೇಕೆಂದು ಸಮಾಜ ಹಿಂದೆ ತೀರ್ಮಾನಿಸಿರುತ್ತದೋ, ಆ ಸಮುದಾಯದವರು ಅಥವಾ ಆ ಜಾತಿಯವರು ಅದೇ ಕೆಲಸವನ್ನು ಮಾಡಬೇಕಾಗುತ್ತದೆ. ಅದು ಲಾಭ ಇರಬಹುದು. ಇಲ್ಲ ನಷ್ಟವೇ ಇರಬಹುದು. ಇಂತಹ ಸಮಯದಲ್ಲಿ ನರಸ ತನ್ನ ಊರಿನಲ್ಲಿ ತನ್ನ ಕ್ಷೌರಿಕದ ವೃತ್ತಿಯನ್ನು ಮಾಡುತ್ತಿರುತ್ತಾನೆ. ಹೀಗಿರುವಾಗ ತನ್ನ ಹೆಂಡತಿಯ ಮೂಲಕ ತನ್ನ ಮಗ ದೊಂಬರ ಹುಡುಗಿಯನ್ನು ಪ್ರೀತಿಸುತ್ತಿರುವುದು ಗೊತ್ತಾಗುತ್ತದೆ. ಆದರೂ ಅದನ್ನು ಯೋಚಿಸದೇ ಶಾಂತವಾಗಿರುತ್ತಾನೆ. ಅಂತ ಸಮಯದಲ್ಲಿ ವೆಂಕಟಶಾಮಿ ತಾನು ಬೆಂಗಳೂರಿಗೆ ಹೋಗುತ್ತೇನೆ ಎಂದಾಗ ನರಸನಿಗೆ ಸಿಡಿಲು ಬಡಿದಂತಾಗುತ್ತದೆ. ಯಾಕೆಂದರೆ ತನ್ನ ಮಗ ಏನಾದರೂ ದೊಂಬರ ಹುಡುಗಿಯ ಸಹವಾಸ ಬೆಳಸಿ ಬೆಂಗಳೂರಿಗೆ ಹೋದರೆ, ಹಳ್ಳಿಯಲ್ಲಿ ಉಳಿಯುವ ಸಂದರ್ಭ ಕಾಣಲಿಲ್ಲ. ತನ್ನ ಬದಲಾಗಿ ಊರಿಗೆ ಬೇರೆ ನಾಯಿಂದ ಬಂದರೆ ತನ್ನ ಆದಾಯವನ್ನು ಕಿತ್ತುಕೊಳ್ಳುತ್ತಾನೆ. ಆದಾಯ ಏನು ಅಷ್ಟು ದೊಡ್ಡ ಪ್ರಮಾಣದಲ್ಲಿ ಇರಲಿಲ್ಲ, ಆದರೆ ಅದಕ್ಕೆ ಇರುವ ಮರ್ಯಾದೆ, ಗ್ರಾಮದ ನೌಕರ ಎನ್ನುವ ಹೆಮ್ಮೆ ಇದೆಲ್ಲಾ ದೊಡ್ಡದು ಎಂದು ಆಗಿಂದಾಗೆ ಗೌಡನ ಬಳಿ ಹೋಗಿ ಹೇಳುತ್ತಾನೆ. ಆಗ ಹಳ್ಳಿಯಲ್ಲಿ ಪಂಚಾಯಿತಿ ಸೇರಿಸುತ್ತಾನೆ. ದೊಂಬರ ಗುಂಪಿನ ಯಜಮಾನನಿಗೆ ಮತ್ತು ನರಸನಿಗೆ ತಮ್ಮ ಮಕ್ಕಳನ್ನು ಪ್ರೀತಿಮಾಡದಂತೆ ತಡೆಯಲು ಹೇಳುತ್ತಾರೆ. ಆದರೆ ಅದು ಯಶಸ್ವಿಯಾಗುವುದಿಲ್ಲ.

ಓೀಗೆ ಹಳ್ಳಿಯಲ್ಲಿ ಏನಾದರೂ ಸಮಸ್ಯೆ ಬಂದರೆ ಅದಕ್ಕೆ ಸಂಬಂಧಪಟ್ಟವನು ಊರಿನ ಗೌಡ. ಗೌಡನ ಗಮನಕ್ಕೆ ಬರದೇ ಯಾವುದೇ ಕೆಲಸಗಳು ನಡೆಯುವಂತಿಲ್ಲ. ಎಲ್ಲಿ ಗೌಡ ತನ್ನ ಹೆಸರಿಗೆ ಕಳಂಕ ಬರುತ್ತದೆ, ಊರಿಗೆ ಕೆಟ್ಟ ಹೆಸರು ಬರುತ್ತದೆ ಎಂಬ ವಿಷಯವೇ ಅವನನ್ನು ಪದೇ ಪದೇ ಭಾದಿಸುತ್ತವೆ. ಇಲ್ಲಿ ಗೌಡನು ತನ್ನ ಆರೋಗ್ಯದಷ್ಟೇ ಊರಿನ ಆಗು-ಹೋಗುಗಳನ್ನು ನೋಡಿಕೊಳ್ಳುತ್ತಾನೆ. ತನ್ನ ಮನೆಯಲ್ಲಿ ಹೇಗೆ ಕುಟುಂಬ ನೆಮ್ಮದಿಯಿಂದ ಇರಬೇಕೋ ಅದೇ ರೀತಿ ಊರು ನೆಮ್ಮದಿಯಿಂದ ಮುನ್ನಡೆಯಬೇಕು ಎಂಬುದು ಅವನ ಮಹದಾಸೆಯಾಗಿರುತ್ತದೆ.

'ಚೆನ್ನಮ್ಮ' ಕತೆ ಹಳ್ಳಿಯ ಚಿತ್ರಣದೊಂದಿಗೆ ಆರಂಭವಾಗುತ್ತದೆ. ಇಲ್ಲಿ ಬರುವ ಮುಖ್ಯ ಪಾತ್ರಗಳು ಚೆನ್ನಮ್ಮ ಮತ್ತು ಅವಳ ಗಂಡ ರಾಮಪ್ಪ. ರಾಮಪ್ಪ ಉದ್ಯೋಗಕ್ಕಾಗಿ ನಗರವನ್ನು ಸೇರಿಕೊಂಡಿರುತ್ತಾನೆ. ಹಾಗಾಗಿ ಅವನು ಮದುವೆಯಾದ ಹುಡುಗಿಯೂ ಕೂಡ ನಗರಕ್ಕೆ ಹೋಗುವುದು ಅನಿವಾರ್ಯವಾಗುತ್ತದೆ. ಹಳ್ಳಿಯಲ್ಲಿರುವ ಜನರಿಗೆ ನಗರಕ್ಕೆ ಹೋಗುವುದು ಎಂದರೆ ಒಂದು ರೀತಿಯ ಭಯ ಅವರಲ್ಲಿ ಮನೆ ಮಾಡಿರುತ್ತದೆ. ಹಳ್ಳಿ ಎಂದರೆ ಅಲ್ಲಿ ದೇವಸ್ಥಾನಗಳು ಇರುವುದು ಸಾಮಾನ್ಯ. ಅದರಲ್ಲಿ ಹನುಮಂತರಾಯನ ದೇವಸ್ಥಾನ ಬಹು ಹಳ್ಳಿಗಳಲ್ಲಿ ಇದ್ದೇ ಇರುತ್ತದೆ. ಈ ಕತೆಯಲ್ಲಿಯೂ ಕೂಡ ಚೆನ್ನಮ್ಮ ನಗರಕ್ಕೆ ಗಂಡನ ಜೊತೆಗೆ ಹೋಗುವಾಗ "ದಾರೀಲಿ ಹನುಮಂತರಾಯನಿಗೆ ಕಾಯಿ ಒಡೆದು ಕೈಮೊಕ್ಕಿ ಹೋಗಿ" ಎಂದು ಲಕ್ಷ್ಮಮ್ಮ ಬೆಂಗಳೂರಿಗೆ ಹೊರಟ ನವವಧುವರರಿಗೆ ಹೇಳುತ್ತಾಳೆ.

ಬೆಂಗಳೂರಿಗೆ ಬಂದಾಗ ರಾಮಪ್ಪ ಚೆನ್ನಮ್ಮನನ್ನು ಗಿರಣಿಯಲ್ಲಿ ಕೆಲಸಮಾಡುವಂತೆ ಹೇಳಿದಾಗ "ತಾನು ಭೂಮಿ ಉಳ್ಳ ಗಂಡನ ಹೆಂಡತಿ. ಬೆಂಗಳೂರಿನಲ್ಲಿ ಕೂಲಿ ಮಾಡಿ ಹಣಗಳಿಸಬೇಕೆ? ಹಳ್ಳಿಯಲ್ಲಿ ಕೂಲಿ ಮಾಡುವ ಜನ ಉಂಟು; ತಾನು ಅವರಲ್ಲಿ ಸೇರಿದವಳಲ್ಲ. ತಾನು ಕೂಲಿ ಕೊಡುವವಳು; ಅವರು ಗತಿ ಇಲ್ಲದ ಜನ, ತಾವು ಪುಣ್ಯವಂತರು, ಪುಣ್ಯವಂತರಲ್ಲ, ಎಷ್ಟೋ ಅಷ್ಟು ಗತಿ ಇರುವ ಜನ. ಊರಿನಲ್ಲಿ ಕೂಲಿ ಕೊಡುವವಳು ಪಟ್ಟಣಕ್ಕೆ ಬಂದು ಅದಕ್ಕಿಂತ ಹೆಚ್ಚಿನ ದೊಡ್ಡಸ್ತಿಕೆಯನ್ನು ಗಳಿಸುವುದಕ್ಕೆ ಪ್ರತಿಯಾಗಿ ಕೂಲಿ ಮಾಡುವ ಹೆಂಗಸಾದರೆ ಬಾಳು ತಲೆಕೆಳಗಾದಂತೆಯೆ!"[೨೮] ಎಂದು ಚಿಂತೆಗೆ ಒಳಗಾಗುತ್ತಾಳೆ. ಹಳ್ಳಿಗೆ ವಾಪಸ್ಸು ಹೋದರೆ ಜನ ಏನಂದರೂ, ನಗರಕ್ಕೆ ಹೋಗಿ ಬಾಳುತೀವಂತ ಹೇಳಿ, ಈಗ ಹಳ್ಳಿಗೆ ಹೋಗುವುದೆ! ಇಲ್ಲ ನಾನು ಗಿರಣಿಯ ಕೆಲಸಕ್ಕೆ ಹೋಗಬೇಕೆಂದು ತೀರ್ಮಾನಿಸುತ್ತಾಳೆ. ಅದರಂತೆ ಕೆಲವು ತಿಂಗಳು ಗಿರಣಿಯ ಕೆಲಸಕ್ಕೆ ಹೋಗುತ್ತಾಳೆ. ಅಲ್ಲಿರುವ ಮೇಸ್ತ್ರಿ ಇವಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳವನ್ನು ಕೊಡಲು ಆರಂಭಿಸಿದಾಗ ಗಿರಣಿಯ ಕೆಲಸವನ್ನು ಬಿಡುತ್ತಾಳೆ.

ಅಷ್ಟೊತ್ತಿಗಾಗಲೇ ಅವಳ ಗಂಡ ರಾಮಪ್ಪ ತುಂಬಾ ಸಾಲವನ್ನು ಮಾಡಿರುತ್ತಾನೆ. ಅದನ್ನು ತೀರಿಸಲಾಗದೇ ಒಂದು ದಿನ ಮರಣ ಹೊಂದುತ್ತಾನೆ. ಅವನ ಹೆಣವನ್ನು ಸಹ ನೋಡಳು ಚೆನ್ನಮ್ಮ ಹೋಗುವುದಿಲ್ಲ. ಅದಕ್ಕೆ ತಾಯಿ ನಿನ್ನ ಗಂಡನ ಮೇಲೆ ಕೋಪವೇ ಎಂದು ಕೇಳಿದಾಗ "ಕೋಪಾ ಅಲ್ಲವ್ವ, ಕೋಪಾ ಅಲ್ಲ. ಯಾರನ ಹೋಗಿ ನೋಡೋದು ಅಂತ ಜೀವಕ್ಕೆ ಬೇಜಾರ. ಮೊಕ ಅದೆ; ಮನುಷಾ ಬೇರೆ. ಅವೊತ್ತ ಹೋದ ನಿನ್ನಳಿಯ ನನಗಿದೆಲ್ಲ ಆಗಿಬಿಟ್ಟಿತ್ತು. ಈ ತಾಳಿ ಒಂದಿಟ್ಟುಕೊಂಡು ಊರಿಗೆ ಹೋಗೋಣ ಅಂತಿದ್ದಿ ಗಂಡನ ಬಿಟ್ಟು ತಾಳೀನೇನ್ ತಂದಿ ಅಂದ ಹನುಮಂತರಾಯ. ತಗೋವ್ವ ಇದನ್ನೂ ಅದೇನಾರ ಮಾಡಿಬಿಡು"[೨೯] ಎಂದು ತಾಳಿಯನ್ನು ಕಿತ್ತು ತಾಯಿಗೆ ಕೊಡುತ್ತಾಳೆ ಚೆನ್ನಮ್ಮ ಹಳ್ಳಿಯವಳಾಗಿದ್ದು, ಅವಳು ಬೆಂಗಳೂರಿಗೆ ಬರುವಾಗ ಕೂಡ ಊರಿನಲ್ಲಿರುವ ಹನುಮಂತರಾಯನಿಗೆ ಕಾಯಿ ಒಡೆದು ನಮಸ್ಕಾರ ಮಾಡಿ ಹೋಗಿರುತ್ತಾಳೆ. ಅನಕ್ಷರಸ್ಥಳಾಗಿದ್ದ ಚೆನ್ನಮ್ಮ ತನ್ನ ಗಂಡನನ್ನು ತುಂಬಾ ಪರಿಪರಿಯಾಗಿ ಬೇಡಿಕೊಂಡರೂ, ಅವನು

ಅದನ್ನು ಕಿವಿ ಮೇಲೆಯೇ ಹಾಕಿಕೊಳ್ಳದಿದ್ದಾಗ ಚೆನ್ನಮ್ಮನ ಮನಸ್ಸಿನಲ್ಲಿ ಕೊನೆಗೆ ಹಳ್ಳಿಯೇ ಶ್ರೇಷ್ಠ ಎಂಬ ಭಾವನೆ ಮೂಡಿ ಹಳ್ಳಿಗೆ ಹೋಗಲು ಸಿದ್ಧಳಾಗುತ್ತಾಳೆ.

'ಉಗ್ರಪ್ಪನ ಉಗಾದಿ' ಕತೆ ಊರಿನ ಗೌಡನ ಪಾತ್ರವನ್ನು ಕುರಿತು ರಚಿಸಿದ ಕತೆಯಾಗಿದೆ. ಈ ಕತೆಯಲ್ಲಿ ಗೌಡನ ಅಧಿಕಾರ, ಸ್ಥಾನಮಾನ ಮತ್ತು ಗೌಡನ ಕೆಲಸಗಳೇನು ಎಂಬುದನ್ನು ಕತೆಗಾರ ಇಲ್ಲಿ ಹೇಳಿದ್ದಾನೆ. ಅಂದು ಊರಿನಲ್ಲಿ ಉಗಾದಿ ಹಬ್ಬ ಇರುವುದರಿಂದ ಹಳ್ಳಿಯಲ್ಲಿ ಸಂಭ್ರಮವೋ ಸಂಭ್ರಮ, ಇನ್ನೂ ಗೌಡನ ಮನೆ ಎಂದರೆ ಹೇಳಬೇಕೆ? ಇಂತಹ ದಿನ ಗೌಡನನ್ನು ಕುರಿತು ಕತೆಗಾರ ಈ ರೀತಿ ಹೇಳಿದ್ದಾರೆ. "ಉಗಾದಿ ಎಂದರೆ ಊರಿಗೆಲ್ಲಾ ಹಬ್ಬ ಮದರಂಗಿಯ ಗೌಡನಿಗೆ ಬರೀ ಆಯಾಸ. ಮನೆಯ ತಾಯಿ ಕಷ್ಟ ಪಟ್ಟು ಅಡಿಗೆ ಮಾಡಿ ಎಲ್ಲರಿಗೂ ಬಡಿಸಿ, ತಾನು ಆಯಾಸವನ್ನು ಮಾತ್ರ ಉಣುವಂತೆ ಮದರಂಗಿಯಲ್ಲಿ ಉಗ್ರಪ್ಪನ ಬಾಳು"[೨೦] ಗೌಡನಿಗೆ ಪ್ರತಿದಿನದಂತೆ ಹಬ್ಬದ ದಿನ ಕೂಡ ಅವನಿಗೆ ವಿಶ್ರಾಂತಿ ಸಿಗುವುದಿಲ್ಲ. ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಗೌಡನಿಗೆ ಇದ್ದೇ ಇರುತ್ತವೆ. ಊರಿಗೆ ಗೌಡನೇ ಶ್ರೇಷ್ಠ ಆಗಿದ್ದು, ಗೌಡ ಇಲ್ಲದಿದ್ದರೆ ಯಾವ ಕೆಲಸವೂ ನಡೆಯುವುದಿಲ್ಲ.

ಮದರಂಗಿಯಲ್ಲಿ ಯಾರು ಅಕ್ಷರವನ್ನು ಕಲಿಯುವ ಪ್ರಯತ್ನ ಮಾಡಲಿಲ್ಲ. ಹಾಗಾಗಿ ಅವರಲ್ಲಿ ಕೆಲವೊಂದು ನಂಬಿಕೆಗಳಿರುತ್ತವೆ. ಯಾವ ಸುಳ್ಳು ಮಾತು ಬಂದರೂ ಅದನ್ನು ಒಪ್ಪಿಕೊಂಡು ಅದೇ ನಿಜವೆಂದು ಭಾವಿಸುವ ಮನೋಭಾವದವರು. ಇಲ್ಲಿ ಕೃಷಿಯ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದು, ಅವುಗಳ ನೀರನ್ನು ನೋಡಿಕೊಳ್ಳಲು ಒಬ್ಬ ನೀರಗಂಟಿಯನ್ನು ನೇಮಿಸಿರುತ್ತಾರೆ. ಅವನೇ ಕೆರೆಯಲ್ಲಿರುವ ನೀರನ್ನು ಗದ್ದೆಗಳಿಗೆ ಸರಿಯಾದ ಸಮಯಕ್ಕೆ ಒದಗಿಸುತ್ತಾನೆ. ನಗರಗಳಲ್ಲಿರುವ ಜನರ ಸಮಸ್ಯೆ ಒಂದು ಬಗೆಯಾದರೆ, ಹಳ್ಳಿಯಲ್ಲಿರುವ ಜನರ ಸಮಸ್ಯೆ ಮತ್ತೊಂದು ಬಗೆಯದು. ಹಳ್ಳಿಯಲ್ಲಿ ಜನರು ಬಿಡುವಿನ ಸಮಯದಲ್ಲಿ ಭೇಟಿಯಾಡುತ್ತಾರೆ. ನಗರದ ಜನ ಇಸ್ಪೀಟ್, ಸಿನಿಮಾ ಇತ್ಯಾದಿಗಳಲ್ಲಿ ಕಾಲಕಳೆಯುತ್ತಾರೆ.

ಹಳ್ಳಿಯಲ್ಲಿ ಜನರಿಗೆ ಗಲಾಟೆಯಾದರೆ ಅದನ್ನು ಹಳ್ಳಿಯ ಪಂಚಾಯಿತಿಯಲ್ಲಿಯೇ ಅದರ ತೀರ್ಮಾನವಾಗುತ್ತದೆ. ಇದಕ್ಕೆಲ್ಲಾ ಗೌಡನೆ ಸರ್ವಾಧಿಕಾರಿ. ಒಮ್ಮೆ ನೀರನ್ನು ಗದ್ದೆಗೆ ಹರಿಸುವಾಗ ಚಿನ್ನಪ್ಪ ಮತ್ತು ರಾಮಪ್ಪನಿಗೆ ನೀರಿನ ಸಲುವಾಗಿ ಗಲಾಟೆಯಾಗುತ್ತದೆ. ಆಗ ಅದನ್ನು ಊರಿನ ಪಂಚಾಯಿತಿಯಲ್ಲಿಯೇ ಗೌಡನ ನಾಯಕತ್ವದಲ್ಲಿ ಬಗೆಹರಿಯುತ್ತದೆ. ಹೀಗೆ ಗೌಡ ಅನೇಕ ಸಮಸ್ಯೆಗಳನ್ನು ಊರಿನಲ್ಲಿ ಬಗೆಹರಿಸುವುದರಿಂದ ಹಳ್ಳಿಯ ಜನರಿಗೆ ಗೌಡನ ಮೇಲೆ ಪ್ರೀತಿ ಮತ್ತು ವಿಶ್ವಾಸ ಹೆಚ್ಚಾಗಿರುತ್ತದೆ.

ಗೌಡ ಊರಿನಲ್ಲಿ ಯಾವುದೇ ಹಬ್ಬವನ್ನು ಮಾಡಿದರೂ ಯಾರನ್ನು ಬಿಡುವಂತಿರಲಿಲ್ಲ. ಒಂದು ವೇಳೆ ಬಿಟ್ಟರೆ, "ನಮ್ಮ ಗೌಡ ನಡೆಸುವ ಉತ್ಸವಕ್ಕೆ ಬರೋದು ಬೇಡ ಅನ್ನೋ ಪರದೇಶಿಯೆ ನಾನು". ಎಂದು ರಾದ್ಧಾಂತವಾಗುವುದು. ಒಂದಲ್ಲ ಒಂದು ಕಾರಣದಿಂದ ಹಬ್ಬದ ದಿನಗಳಲ್ಲಿ ಪೂಜೆ, ಮಂಗಳಾರತಿ ಮುಗಿಸಿ ಮನೆಗಳಿಗೆ ಹೊರಡುವ ವೇಳೆಗೆ ಮಧ್ಯರಾತ್ರಿ ಆಗುತ್ತದೆ.

ಹೀಗೆ ಹಳ್ಳಿಗಳಲ್ಲಿ ಆಚರಿಸುವ ಜಾತ್ರೆ, ಉತ್ಸವಗಳಲ್ಲಿ ಸಂಭ್ರಮ ಸಡಗರ ನಗರಗಳಿಗಿಂತ ಹೆಚ್ಚು ಎಂಬುದನ್ನು ಮಾಸ್ತಿಯವರ ಕತೆಗಳಲ್ಲಿ ಕಾಣಬಹುದು.

'ದುರದೃಷ್ಟದ ಹೆಣ್ಣು' ಈ ಕತೆಯ ಶೀರ್ಷಿಕೆಯೇ ನಮಗೆ ಕತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಈ ಕತೆಯಲ್ಲಿ ಬರುವ ಕಥಾ ನಾಯಕಿಗೆ ಆಧುನಿಕತೆಯ ಪರಿಚಯವಿಲ್ಲದೇ ದುರದೃಷ್ಟದ ಹೆಣ್ಣಾಗಿ ನಮಗೆ ಕಥೆಯಲ್ಲಿ ಕಂಡು ಬರುತ್ತಾಳೆ. ಇಲ್ಲಿ ಕಥಾನಾಯಕಿಗೆ ಯಾವುದೇ ನಿರ್ದಿಷ್ಟ ಹೆಸರು ಇಲ್ಲ, ಹಾಗಾಗಿ ನಿರೂಪಕ 'ಹುಡುಗಿ' ಎಂಬ ಪದವನ್ನು ಬಳಸುತ್ತಾನೆ. ಇವಳಿಗೆ ಚಹಾದ ರುಚಿ ಮತ್ತು ಅದನ್ನು ತಯಾರಿಸುವ ವಿಧಾನ ಕೂಡ ಗೊತ್ತಿರಲಿಲ್ಲ. ಒಮ್ಮೆ ಗಂಡನೊಂದಿಗೆ ಬೆಂಗಳೂರಿಗೆ ಹೋದಾಗ ಗಂಡನ ಜೊತೆಯಲ್ಲಿ ಚಹಾ ಕುಡಿದಿದ್ದರಿಂದ ಚಹಾವನ್ನು ತಯಾರಿಸುವುದು ಗೊತ್ತಾಗುತ್ತದೆ. ಇವಳನ್ನು ಮದುವೆಯಾದ ಗಂಡ ಇವಳೊಂದಿಗೆ ಸಂಸಾರ ಮಾಡದೇ ಹೆಂಡತಿಯನ್ನು ವ್ಯಾಪಾರದ ಸರಕಾಗಿ ಬಳಸಿಕೊಳ್ಳುವ ಸಂಚನ್ನು ರೂಪಿಸುತ್ತಾನೆ. ನಗರದ ಬಗ್ಗೆ ಏನೂ ಗೊತ್ತಿಲ್ಲದ ಹುಡುಗಿಯನ್ನು ಯಾರು ಪರಿಚಯವಿಲ್ಲದ ಕಡೆ ಕರೆದುಕೊಂಡು ಬಂದು, ತನ್ನ ಹೆಂಡತಿಯ ದೇಹದ ವ್ಯಾಪಾರವನ್ನು ಆರಂಭಿಸುತ್ತಾನೆ.

ಗಂಡ ಒಮ್ಮೆ ಕೆಲಸಕ್ಕೆಂದು ಹೋಗಿರುತ್ತಾನೆ. ಬರುವಾಗ ಜೊತೆಯಲ್ಲಿ ಇನ್ನೊಬ್ಬ ಗಂಡಸನ್ನು ಕರೆದು ತಂದು ಹೆಂಡತಿ ಜೊತೆಗೆ ಇರುವಂತೆ ಹೇಳಿ ಪೇಟೆಗೆ ಹೋಗುತ್ತಾನೆ. ಏನು ಗೊತ್ತಿಲ್ಲದ ಹುಡುಗಿಯನ್ನು ಮನೆಗೆ ಬಂದ ಗಂಡಸು ತನ್ನ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಹೇಳುತ್ತಾನೆ. ಆಗ ಆ ಹುಡುಗಿ, ಅವನ ಮಾತನ್ನು ಕೇಳುವುದಿಲ್ಲ. "ಎಲೆ ಹಸುಮಗುವೆ, ನನ್ನ ಕರೆತಂದು ಇಲ್ಲಿ ಕೂರಿಸಿ, ನಿನ್ನಿಂದ ಚಹಾ ಕೊಡಿಸಿ, ನೋಡಿಕೋತಾರೆ ಭಯಪಡಬೇಡ ಎಂತ ಹೇಳಿ ನಮ್ಮಿಬ್ಬರನ್ನು ಬಿಟ್ಟು ಹೊರಕ್ಕೆ ಹೋಗಿದ್ದಾನೆ ನಿನ್ನ ಗಂಡ. ಯಾಕಿರಬಹುದು ಅವನು ಹೀಗೆ ಮಾಡಿರೋದು? ನಿನಗೆ ತೋಚೋದಿಲ್ಲವೆ? ಅಂಥ ಹಸುಮಗುವೆ ನೀನು? ಬಾಯಲ್ಲಿ ಬೆರಳಿಟ್ಟರೆ ಕಚ್ಚೋದನ್ನ ಕಾಣದೆ?"[೩೧] ಎಂದು ಹುಡುಗಿಯನ್ನು ಬಯ್ಯುತ್ತಾನೆ. ಹೌದು ಅದು ನಿಜ ಯಾಕೆಂದರೆ ಆ ಹುಡುಗಿ ಮೂಲತಃ ಹಳ್ಳಿಯವಳಾಗಿದ್ದು, ಹಳ್ಳಿಯಲ್ಲಿ ಇಂತಹ ಅನೈತಿಕ ಸಂಬಂಧಗಳಿಗೆ ಅವಕಾಶ ಇಲ್ಲ. ಇದು ನಗರಗಳಲ್ಲಿ ಅದು ಆಧುನಿಕತೆಯ ಪರಿಣಾಮವಾಗಿ ಬಂದಿದ್ದು. ಆ ಹುಡುಗಿ ಅನಕ್ಷರಸ್ಥಳು ಆಗಿರುವುದರಿಂದ ಅವಳಿಗೆ ಗೊತ್ತಿರುವುದು ಇಷ್ಟೇ; ತಾನು ತನ್ನ ಗಂಡನಿಗೆ ಮಾತ್ರ ಸೀಮಿತ ಎಂದು ಭಾವಿಸಿರುತ್ತಾಳೆ.

ಕತೆಯ ಕೊನೆಯಲ್ಲಿ ತನ್ನ ಗಂಡನ ಉದ್ದೇಶವನ್ನು ತಿಳಿದು ಅವಳು ತುಂಬಾ ಚಿಂತೆಗೆ ಒಳಗಾಗುತ್ತಾಳೆ. ಕೊನೆಗೆ ಅದುವೇ ಅನಿವಾರ್ಯ ಎಂದು ಗೊತ್ತಾದಾಗ, ಒಬ್ಬ ಪ್ರಾಯದ ಹುಡುಗನ ಜೊತೆ ಮದುವೆಯಾಗುವ ಆಸೆಯನ್ನು ವ್ಯಕ್ತಪಡಿಸುತ್ತಾಳೆ. ಇವಳ ನೋವನ್ನು ಅರ್ಥಮಾಡಿಕೊಂಡ ಹುಡುಗ ಅವಳನ್ನು ಮದುವೆಯಾಗಲು ಒಪ್ಪುತ್ತಾನೆ. ಹೀಗೆ ಮಾಸ್ತಿಯವರು ಹೆಣ್ಣನ್ನು ಚಿತ್ರಿಸುವಾಗ ತುಂಬಾ ಸೂಕ್ಷ್ಮವಾಗಿ ಅವಳನ್ನು ಚಿತ್ರಿಸಿದ್ದಾರೆ. ಹೆಣ್ಣಿಗೆ ಬದುಕು ಮುಖ್ಯವಾದಾಗ ಅವಳು ಮಾಡಿದ್ದೇ ಸರಿ ಎಂದು ನಿರೂಪಿಸಿದ್ದಾರೆ. ಅವಶ್ಯಕತೆ ಇಲ್ಲದೇ ಇದ್ದ ಕಡೆ ಅವಳನ್ನು ಖಳನಾಯಕಿಯಾಗಿ

ಚಿತ್ರಿಸಿದ್ದಾರೆ. ಉದಾಹರಣೆಗೆ 'ವೆಂಕಟಿಗನ ಹೆಂಡತಿ', ಇಲ್ಲಿ ವೆಂಕಟಿಗನ ಹೆಂಡತಿ ಮದುವೆಯಾಗಿ, ಬೇರೊಬ್ಬನ ಜೊತೆ ಹೋದಾಗ ತಾಳುವ ನಿಲುವ, ದುರದೃಷ್ಟದ ಹೆಣ್ಣು ಕತೆಯಲ್ಲಿ ಗಂಡನನ್ನು ಬಿಟ್ಟು ಇನ್ನೊಬ್ಬನನ್ನು ಮದುವೆಯಾಗಲು ಸಿದ್ಧಳಾದ ಹೆಣ್ಣನ್ನು ನೋಡುವ ಬಗೆ ಬೇರೆ ಬೇರೆಯಾಗಿದೆ. ಅದೇ ರೀತಿ ಪಕ್ಷಿಜಾತಿಯಲ್ಲಿ ಬರುವ ಒಂದು ಹೆಣ್ಣುಪಾತ್ರವೂ ಈ ಕತೆಗಳ ಗುಂಪಿಗೆ ಸೇರಿದೆ.

೪.೩. ವೈಚಾರಿಕತೆ

ಮಾಸ್ತಿಯವರು ವೈಚಾರಿಕತೆಯನ್ನು ತಮ್ಮ ಕತೆಗಳಲ್ಲಿ ವಸ್ತುವಾಗಿ ಸ್ವೀಕರಿಸಿದ ಕೆಲವು ಕತೆಗಳಿವೆ. 'ರಂಗನ ಮದುವೆ' ಕತೆಯಲ್ಲಿ ಬರುವ ಕಥಾನಾಯಕ 'ರಂಗ' ಬೆಂಗಳೂರಿಗೆ ಇಂಗ್ಲೀಷ್ ಶಿಕ್ಷಣವನ್ನು ಪಡೆಯಲು ಹೋಗಿದ್ದು, ಹೊಸಹಳ್ಳಿಯಲ್ಲಿ ಕರಣೀಕರೇ ಮೊದಲು ಧೈರ್ಯಮಾಡಿ ತನ್ನ ಮಗನನ್ನು ನಗರಕ್ಕೆ ಕಳುಹಿಸಿದ್ದ. ಕತೆಗಾರ ಇಡೀ ಕತೆಯನ್ನು ಪರಂಪರೆಯಿಂದ ಆರಂಭಮಾಡಿ ಪರಂಪರೆಯಲ್ಲಿಯೇ ಕತೆಯ ಮುಕ್ತಾಯ ಮಾಡುತ್ತಾನೆ. ಅಂದರೆ ಆಧುನಿಕತೆಯ ಅಂಶಗಳು ಇಲ್ಲವೆಂದಲ್ಲ; ಪ್ರಮಾಣ ಕಡಿಮೆ ಇದೆ.

ರಂಗ ಆಧುನಿಕ ಶಿಕ್ಷಣ ಪಡೆದಿದ್ದರು ಪರಂಪರೆಯ ಅಂಶಗಳು ಅವನಲ್ಲಿ ಇನ್ನೂ ಹಾಗೇ ಇರುವುದನ್ನು ಗಮನಿಸಿದ ನಿರೂಪಕ ರಂಗನ ಬಳಿ ಮದುವೆಯ ವಿಚಾರವನ್ನು ಪ್ರಸ್ತಾಪಪಡಿಸುತ್ತಾನೆ. ಆಗ ಈ ಮುಂದಿನಂತೆ ತನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾನೆ. "ನಾನು ಈಗ ಮದುವೆ ಮಾಡಿಕೊಳ್ಳುವುದಿಲ್ಲ, ನನಗೆ ಸರಿಯಾದ ಹುಡುಗಿ ಸಿಕ್ಕಬೇಕು. ನಮ್ಮ ಸಾಹೇಬರು ಒಬ್ಬರು ಇದ್ದಾರೆ. ಅವರು ಮದುವೆ ಮಾಡಿಕೊಂಡುದು ಆರು ತಿಂಗಳ ಹಿಂದೆ. ಅವರಿಗೆ ಸುಮಾರು ಮೂವತ್ತು ವರ್ಷ. ಅವರ ಹೆಂಡತಿಗೆ ಇಪ್ಪತ್ತೈದು ವರ್ಷವಂತೆ ಅವರು ಪ್ರೇಮವಾಗಿ ಮಾತನಾಡಿಕೊಳ್ಳಬಲ್ಲರು. ನಾನು ಒಬ್ಬ ಸಣ್ಣ ಹುಡುಗಿಯನ್ನು ಮದುವೆ ಮಾಡಿಕೊಂಡನೆನ್ನಿ ಏನಾದರೂ ಪ್ರೇಮದ ಮಾತನ್ನಾಡಿದರೆ, ಅವಳು ಬೈದನೆಂದೇ ತಿಳಿದುಕೊಳ್ಳಬಹುದು. ಬೆಂಗಳೂರಿನ ಒಂದು ನಾಟಕ ಸಂಘದವರು 'ಶಾಕುಂತಲ ನಾಟಕವನ್ನಾಡಿದರು. ಶಕುಂತಲೆ ಈಗ ಮದುವೆಯಾಗುವ ಹುಡುಗಿಯರ ಹಾಗೆ ಚಿಕ್ಕವಳಾಗಿ ಇದ್ದರೆ, ದುಷ್ಯಂತನು ಪ್ರೀತಿಸುವುದೆಲ್ಲಿ? ಕಾಳಿದಾಸನ ನಾಟಕದ ಅಭಿರುಚಿಯೆಲ್ಲಿ? ಮದುವೆಯಾದರೆ ವಯಸ್ಸಾದ ಹುಡುಗಿಯನ್ನೇ ಮಾಡಿಕೊಳ್ಳಬೇಕು; ಇಲ್ಲದಿದ್ದರೆ ಸುಮ್ಮನೆ ಇರಬೇಕು. ಅದಕ್ಕಾಗಿಯೇ ನಾನು ಬೇಗ ಮಾಡಿಕೊಳ್ಳುವುದಿಲ್ಲವೆಂದುದು. ನಾವೇ ಮೆಚ್ಚಿ ಮದುವೆ ಮಾಡಿಕೊಳ್ಳುವಂತಿರಬೇಕು. ಈಗ ನಾವು ಹಾಗೆ ಮಾಡಕೂಡದು. ಅಥವಾ ಮಾಡಿದೆವು. ಪಾಪ : ಒಂದು ಕೆನ್ನೆ ಹಾಲು, ಒಂದು ಕೆನ್ನೆ ನೀರು ಆಗಿ, ಬೆರಲು ಕಡಿಯಲು ಸಹಾ ಬಾರದ ಹುಡುಗಿಯರನ್ನು ತಂದು ಇದುರಿಗೆ ನಿಲ್ಲಿಸಿದರೆ, ಮೆಚ್ಚುವುದು ಹೇಗೆ? ಒಂದು ಬೇವಿನ ಕಾಯಿ, ಒಂದು ಹಾಗಲ ಕಾಯಿ ಅಲ್ಲವೆ?"[೨] ಎಂದು ರಂಗ ನಿರೂಪಕನಿಗೆ ಹೇಳುತ್ತಾನೆ.

ಮಾಸ್ತಿ ಆಧುನಿಕತೆಯನ್ನು ಅಷ್ಟಾಗಿ ಒಪ್ಪಿಕೊಳ್ಳದಿದ್ದರೂ ಅದು ಅನಿವಾರ್ಯ ಎನ್ನುವ ಅಂಶ ನಮಗೆ 'ರಂಗನ ಮದುವೆ' ಕತೆಯಲ್ಲಿ ಪರಿಚಯಿಸುತ್ತಾರೆ. ಇದರ ಉದ್ದೇಶ ಪರಂಪರೆಯನ್ನು ಕಳೆದುಕೊಳ್ಳಲು ಇಷ್ಟಪಡದೆ, ಜೀವನ ಯಶಸ್ವಿಯತ್ತ ಸಾಗುವುದೇ ಆಗಿದೆ.

'ಬೀದಿಯಲ್ಲಿ ಹೋಗುವ ನಾರಿ' ಕತೆಯಲ್ಲಿ ಮಾಸ್ತಿಯವರ ವಿಭಿನ್ನ ಲಕ್ಷಣಗಳನ್ನು ಕಾಣಬಹುದು. ಈ ಕತೆಯ ಆರಂಭ ಆಧುನಿಕತೆಯಿಂದ ಬಂದ ರೈಲ್ವೆ ಸ್ಟೇಷನ್‌ನಿಂದ ಪ್ರಾರಂಭವಾಗಿ ಮನೆಗೆ ಬರುವವರೆಗೂ ಒಂದು ರೀತಿಯ ಅನುಭವವನ್ನುಂಟು ಮಾಡಿದರೆ, ಮನೆಗೆ ಬಂದ ಮೇಲೆ ಒಂದು ರೀತಿಯ ಅನುಭವವನ್ನು ಈ ಕತೆ ಪರಿಚಯಿಸುತ್ತದೆ. ಹೆಣ್ಣು ಗಂಡಿಗೆ ಕೊಡುವ ಆಹ್ವಾನದ ತೀರಾ ಭಿನ್ನಭಿನ್ನ ಸನ್ನಿವೇಶಗಳನ್ನು ಕತೆಯಲ್ಲಿ ನೋಡಬಹುದು. ಇಲ್ಲಿ ಕತೆ ಒಂದೇಯಾದರೂ ಕತೆಯಲ್ಲಿ ಬರುವ ಪಾತ್ರ ಮತ್ತು ಸನ್ನಿವೇಶಗಳು ಹಲವು. “ಒಂದರಲ್ಲಿ ವೇಶ್ಯೆ ಮಧ್ಯಮವರ್ಗದ ಮುಗ್ಧ ನಾಯಕನಿಗೆ ತನ್ನ ಮತ್ತು ತನ್ನ ಮಗಳ ಸೇವೆಯನ್ನು ಸ್ವೀಕರಿಸುವಂತೆ ಬೇಡಿ, ಅದು ಅವನಿಗೆ ಒಪ್ಪಿಗೆಯಾಗದಿದ್ದಾಗ ಅವನ ಕಾಲು ಮುಟ್ಟಲು ಹೋಗುತ್ತಾಳೆ. ಅವನು ಕಾಲು ಹಿಂದಕ್ಕೆ ತೆಗೆದುಕೊಂಡಾಗ ತಾನು ಅಪವಿತ್ರಳೆಂಬ ಭಾವನೆ ಅವಳನ್ನು ಆವರಿಸುತ್ತದೆ. ಆ ಬಗೆಯ ಭಾವನೆ ತನ್ನಲಿಲ್ಲವೆಂದು ತೋರಿಸಲು ಅಣ್ಣ ತಂಗಿಗೆ ಕೊಡುವಂತೆ ಅವನು ಅವಳ ಹಣೆಗೆ ಒಂದು ಮುತ್ತು ಕೊಡುತ್ತಾನೆ. ಅವನ ಮಾನವೀಯ ಅನುಕಂಪದಿಂದ ಪುಳಕಿತಳಾದ ವೇಶ್ಯೆ, ಒಂದು ಕ್ಷಣಕಾಲ ಅವನ ಕಾಲ ಧೂಳಿನಿಂದ ತನ್ನ ಪಾಪಿ ದೇಹ ಪುನೀತವಾಗಲಿ ಎಂದು ಪರಿತಪಿಸುತ್ತಾ ಅವನ ಪುನರಾಗಮನವನ್ನು ಪ್ರತೀಕ್ಷಿಸುತ್ತಾಳೆ. ಆದರೆ ಇನ್ನಾವನೋ ಬಂದಾಗ ಅವನೆದುರು ತನ್ನನ್ನು ತಂಗಿಯಂತೆ ಕಂಡವನನ್ನು 'ಅವನೊಬ್ಬ ಹುಚ್ಚ' ಎಂದು ನಿರ್ದೇಶಿಸಿ ಆ ಇನ್ನೊಬ್ಬನ ಶುಶ್ರೂಷೆಗೆ ಸಿದ್ಧಳಾಗುತ್ತಾಳೆ.”[೩೩] ಇಲ್ಲಿ ಕಂಡುಬರುವುದು ಮಾಸ್ತಿಯವರು ಎಷ್ಟೇ ಸಂಪ್ರದಾಯಸ್ಥರು, ಪರಂಪರೆವಾದಿಗಳೆಂದರೂ, ಕೆಲವೊಮ್ಮೆ ಅದನ್ನು ಮೀರಿದುಂಟು. ಮಾಸ್ತಿಯವರ ಕತೆಗಳಲ್ಲಿ ಸಂಘರ್ಷ ಅಷ್ಟಾಗಿ ಇಲ್ಲ ಎನ್ನುವುದಕ್ಕೆ ಏಕಮುಖಿ ಎನ್ನಬಹುದಾದ ಕೆಲವೇ ಕೆಲವು ಕತೆಗಳನ್ನು ಬಿಟ್ಟರೆ, ಮಿಕ್ಕೆಲ್ಲ ಕತೆಗಳಲ್ಲಿಯೂ ಭಿನ್ನಭಿನ್ನ ದೃಷ್ಟಿಗಳ, ಜೀವನ ಶೈಲಿಗಳ ಘರ್ಷಣೆ ಕತೆಗಳ ನಾಟಕೀಯತೆಗೆ ಪುಟಕೊಡುತ್ತದೆ.

'ಇಲ್ಲಿಯ ತೀರ್ಪು' ಕತೆಯ ವಸ್ತು ನಿರೂಪಕನ ತಾತಂದಿರು ಕೋರ್ಟ್ ಸಾಹೇಬರ ಬಳಿ ಶಿರಸ್ತೆಯ ಕೆಲಸದಲ್ಲಿದ್ದರು. ಕೋರ್ಟ್ನೇ ಸಾಹೇಬನ ಡಯರಿಯ ಒಂದು ದಿನದ ತರ್ಜುಮೆ ಕತೆಯ ವಸ್ತು ಈ ಕತೆಯಲ್ಲಿ ಬರುವ ಇಬ್ಬರು ಅಪರಾಧಿಗಳು ಹಿಂದುಗಳಾಗಿದ್ದು ಒಡ್ಡರ ಜಾತಿಗೆ ಸೇರಿದವರಾಗಿದ್ದಾರೆ. ಇವರ ವಿರುದ್ಧ ಕೇಸಿನಲ್ಲಿ ಫಿರ್ಯಾದಿ ಆರ್ಥರ್ ಹೆನ್ರೀ ಸಾಹೇಬರದ್ದು. ಬೋಯಿಗಳಿಬ್ಬರೂ ಚಂದ್ರಪುರ ಡಿವಿಜನ್ನಿನ ಗೂಂಬಿ ತಾಲೂಕಿನ ರಾಮಪುರದ ನಿವಾಸಿಗಳು. ತಿಮ್ಮಾಬೋಯಿ ಮತ್ತು ರಾಮಬೋಯಿಗಳು ಧರ್ಮವು ಬಹಳ ಅನುಕೂಲಕ್ಕೆ ಕಾರಣವಾಗದಂತಿದ್ದರೆ ಧರ್ಮವನ್ನು ಅನುಸರಿಸಿಯೇ ನಡೆಯುವವರು. ಆದರೆ ಇತರ ಜಾತಿಯವರಿಗೆ ಮೋಸ ಮಾಡುವವರು. ತೊಂದರೆ ಕೊಡುವವರು ಮಾತು ಕೊಟ್ಟು ತಪ್ಪುವರು; ತಮ್ಮಲ್ಲಿ ಸರಿಯಾಗಿ ನಡೆದುಕೊಳ್ಳುವರು. ಇವರಿಗೆ ಊರಿನಲ್ಲಿರುವ ರಾಮದೇವರ ಬಗ್ಗೆ ಅತಿಯಾದ ನಂಬಿಕೆ ಇತ್ತು.

ಈ ಕತೆಯಲ್ಲಿ ಬರುವ ಆರ್ಥರ್ ಹೆನ್ರಿ ಕ್ರೈಸ್ತಧರ್ಮದವನಾಗಿದ್ದು, ಅದು ಹಿಂದುಧರ್ಮಕ್ಕಿಂತ ಶ್ರೇಷ್ಠ ಎಂಬ ಮನೋಭಾವ ಹೊಂದಿದ್ದನು. ಹಾಗಾಗಿ “ನಾವು ಸಂಸ್ಕೃತರು, ನಮ್ಮದೇ ನಾಗರಿಕತೆ.

ನಾವು ರಾಮಬೋಯಿಯ ತಿಳಿವನ್ನು ನೋಡಿ ಇದು ಮಾನವನನ್ನು ಉದ್ಧಾರ ಮಾಡಬಲ್ಲ ತಿಳಿವಲ್ಲ, ಇವನನ್ನು ನಮ್ಮಂತೆಯೇ ಮಾಡಬೇಕು ಎನ್ನುವೆವು. ಆರ್ಥರ್ ಹೆನ್ರಿ ಸಾಹೇಬರ ಮತವು ಇದೇ. ಇವರು ರಾಮಬೋಯಿಯನ್ನು ಮತ್ತು ಅವನಂತಹ ಒರಟು ಜನರನ್ನೂ ಅವರ ಈ ತೆರದ ಅಜ್ಞಾನದಿಂದ ಉಳಿಸಿ ಅವರಿಗೆ ಸುಜ್ಞಾನವನ್ನು ಕೊಡಲಿಕ್ಕಾಗಿ ಇಂಗ್ಲೆಂಡಿನಿಂದ ಇಲ್ಲಿಗೆ ಬಂದಿದ್ದಾರೆ. ಬಹಳ ಮಟ್ಟಿಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ"[೩೪] ಎಂದು, ಅವನ ಧರ್ಮ ಮತ್ತು ಅವರ ಅಧಿಕಾರಿಗಳ ಬಗ್ಗೆ ಗೌರವವನ್ನು ಉಳಿಸಿಕೊಂಡಿದ್ದಾನೆ. ತಿಮ್ಮಾಬೋಯಿ ಮತ್ತು ರಾಮಾಬೋಯಿಗಳಿಬ್ಬರು ಅನಕ್ಷರಸ್ಥರು. ಹಾಗಾಗಿ ಅವರನ್ನು ಏನಾದರೂ ಮಾಡಿ ಹಿಂದು ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಸೆಳೆಯಬೇಕೆಂದು ಹೆನ್ರಿಯ ಪ್ರಮುಖ ನಿಲುವಾಗಿತ್ತು. ಆ ಉದ್ದೇಶಕ್ಕಾಗಿ ಇಬ್ಬರು ಬೋಯಿಗಳ ವಿರುದ್ಧ ದೂರನ್ನು ದಾಖಲಿಸಿರುತ್ತಾನೆ. ಹೆನ್ರಿ ಸಾಹೇಬರು ರಾಮಬೋಯಿ ಮತ್ತು ತಿಮ್ಮಾಬೋಯಿಗಳನ್ನು ಬಹಳ ದಿನದಿಂದ ಬಲ್ಲರು. ರಾಮಪುರದಲ್ಲಿ ನಡೆಯುವ ಉಪನ್ಯಾಸದಲ್ಲಿ ಭಾಗವಹಿಸುವರು. ರಾಮದೇವರೇ ಹೆಚ್ಚು ಎಂದು ಒಂದೆರಡು ಸಲ ಗಲಾಟೆ ಮಾಡಿದ್ದರು. ಆದರೆ ಕೆಲವು ದಿನಗಳ ನಂತರ ರಾಮದೇವರ ಮೇಲೆ ನಂಬಿಕೆ ಇಲ್ಲವೆಂದು ದೇವಸ್ಥಾನಕ್ಕೆ ಹೋಗುವುದನ್ನು ನಿಲ್ಲಿಸಿದರು. ಇದನ್ನು ನೋಡಿದ ಹೆನ್ರಿ ಸಾಹೇಬರು ಇವರಿಬ್ಬರೂ ಕೊಂಚ ದಿನದಲ್ಲಿಯೇ ಕ್ರಿಸ್ತಮತಕ್ಕೆ ಸೇರಿಸಿಕೊಳ್ಳಲು ಸಾಧ್ಯವಾದೀತೆಂದು ತಿಳಿದುಕೊಂಡು ಬಹಳ ಸಂತೋಷದಲ್ಲಿದ್ದರು.

ಹೀಗೆಯೇ ಕತೆಯು ಮುಂದುವರಿಯುತ್ತಿರಬೇಕಾದರೆ ನ್ಯಾಯ ತೀರ್ಮಾನ ಮಾಡುವ ಸಂದರ್ಭ ಬರುತ್ತದೆ. ಇಲ್ಲಿ ನ್ಯಾಯ ತೀರ್ಮಾನಕ್ಕಿಂತ ಮುಖ್ಯವಾದುದು ಕ್ರೈಸ್ತ ಧರ್ಮಕ್ಕೆ ಜನರನ್ನು ಮತಾಂತರ ಮಾಡುವುದು. ರಾಮಬೋಯ್ಯಿ ಮತ್ತು ತಿಮ್ಮಬೋಯಿಯ ಪರವಾಗಿ ಯಾರಾದರೂ ವಕೀಲರಿದ್ದರೆ ಸಾಕ್ಷಿ ಹೇಳಬಹುದು ಎಂದಾಗ 'ಅದ್ಯಾಕೆ ಸ್ವಾಮಿ, ನಾವು ತಪ್ಪು ಮಾಡಿದ್ದಾಗಿ ಹೋಯಿತು. ಅದನ್ನು ಒಪ್ಪಿಕೊಂಡಿದ್ದಾಯಿತು. ನಾವು ತಪ್ಪು ಮಾತು ಆಡಿ ತಪ್ಪಿಸಿಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಆಗ ನೀವು ದೇವರನ್ನು ತಿರಸ್ಕರಿಸಲು ಕಾರಣ ಏನು? ಎಂದು ಕೇಳಿದಾಗ "ಏನೋ ಬಿಟ್ಟೆವು. ಈ ಸಾಹೇಬರು ನಿಮ್ಮ ದೇವರಿಗೆ ದೀಪ ಹಚ್ಚದಿದ್ದರೆ, ಕತ್ತಲಲ್ಲಿರುತ್ತಾನೆ. ಗುಡಿಯ ಕಸ ಗುಡಿಸದಿದ್ದರೆ ಅವನು ಕಸ ಗುಡಿಸಿಕೊಳ್ಳಲಾರ ಎಂದರು. ನಮ್ಮ ದೊಡ್ಡವರು, ಬೇಡ, ಹಾಗೆಲ್ಲಾ ಬಿಡಬಾರದು ಎಂದರು. ನಾವು ಬಲವಂತ ಮಾಡಿ ಗುಡಿ ಮುಚ್ಚಿ ಬೀಗ ಹಾಕಿಬಿಟ್ಟೆವು. ಹತ್ತು ದಿನದ ಮೇಲೆ ಹೋಗಿ ನೋಡಿದರೆ ಸಾಹೇಬರು ಹೇಳಿದಂತೆಯೇ ಆಗಿತ್ತು. ದೇವರ ಮೇಲೆ ಒಂದಿಷ್ಟು ಮಣ್ಣು ಹೆಂಟೆ ಕಳಚಿ ಬಿದ್ದಿತ್ತು, ದೇವರು ಅದನ್ನು ಕೂಡ ತೆಗೆದುಹಾಕಿರಲಿಲ್ಲ. ಗುಡಿಯಿಂದ ಒಂದು ಪಾತ್ರೆಯನ್ನು ಕದ್ದೆವು, ಏನು ಆಗಲಿಲ್ಲ. ಅದರ ಮೇಲೆ ಈ ದೇವರಲ್ಲಿ ಸತ್ಯಸಾಲದು ಅಂತ ಎಂದು ಕೊಂಡೆವು"[೩೫] ಎಂದು ತಮಗೆ ಪರಂಪರೆಯಿಂದ ಬಂದ ದೇವರ ಮೇಲೆ ನಂಬಿಕೆ ಇಲ್ಲದುದ್ದು ಗೊತ್ತಾಗುತ್ತದೆ. ಅದೇ ರೀತಿ ಯಾಕೆ ಕ್ರಿಸ್ತರ ಗುಡಿಗೆ ಇಳಿಯಬಿದ್ದಿರಿ ಎಂದು ಹೆನ್ರಿ ಹೇಳಿದಾಗ ರಾಮಾಬೋಯಿಯ ಉತ್ತರ ಹೀಗಿದೆ. "ಇವರ ಗುಡಿಯಲ್ಲಿ ದೇವರೇ ಇಲ್ಲ ಸ್ವಾಮಿ ದೇವರಿದ್ದೂ ಅಲ್ಲಿ ಹೀಗಾದರೆ ದೇವರಿಲ್ಲದ ಜಾಗದಲ್ಲಿ ಏನು ಹೆದರಿಕೆ ಎಂತ

ನಾನೂ ಇವನೂ ಆ ಭಾನುವಾರ ಇಳಿಯಬಿದ್ದು ಇವರ ಗುಡಿಯಲ್ಲಿ ಸಾಮಾನು ತೆಗೆದುಕೊಂಡೆವು." ಹೀಗೆ ದೇವರ ಮೇಲೆ ನಂಬಿಕೆ ಇಲ್ಲದ್ದನ್ನು ಇಬ್ಬರು ಬೋಯಿಗಳು ಒಪ್ಪಿಕೊಂಡರು. ಇದರಿಂದ ಪರಂಪರೆಯನ್ನು ಮುರಿಯುವ ಮೂಲಕ ಆಧುನಿಕತೆಗೆ ಮುಖಾ ಮಾಡಿರುವುದನ್ನು ಇಲ್ಲಿಯ ತೀರ್ಪು ಕತೆಯಲ್ಲಿ ಕತೆಗಾರ ಚಿತ್ರಿಸಿದ್ದಾರೆ.

ವೆಂಕಟಶಾಮಿಯ ಪ್ರಣಯ ಈ ಕತೆಯು ಮಾಸ್ತಿಯವರ ಬಹುಚರ್ಚಿತ ಕತೆಗಳಲ್ಲಿ ಒಂದು. ಇಲ್ಲಿ ಪರಂಪರೆ ಮತ್ತು ಆಧುನಿಕತೆಗೆ ಮುಖಾಮುಖಿಯಾಗುವ ಅನೇಕ ಸನ್ನಿವೇಶಗಳಿವೆ. ಪರಂಪರೆಯಿಂದ ಬಂದ ಕುಲಕಸುಬುಗಳು ಒಂದು ಕಡೆಯಾದರೆ, ಆಧುನಿಕತೆಯಿಂದ ಬಂದ ಉದ್ಯೋಗಗಳು ಒಂದು ಕಡೆಯಾಗಿವೆ. ಈ ಕತೆಯಲ್ಲಿ ಬರುವ ವೆಂಕಟಶಾಮಿಯ ತಂದೆ ನರಸನ ವೃತ್ತಿ ಕ್ಷೌರ ಮಾಡುವುದಾಗಿತ್ತು. ತನ್ನ ಮಗನಿಗೆ ಓದು ಬರಹ ಕಲಿಸಬೇಕು ಎಂಬ ಮಹಾದಾಸೆಯನ್ನು ಇಟ್ಟುಕೊಂಡಿದ್ದ. ಆದರೆ ವೆಂಕಟಶಾಮಿಗೆ ಓದಿನಲ್ಲಿ ಮನಸ್ಸಿಲ್ಲ. ತಂದೆಯು ಮಾಡುತ್ತಿದ್ದ ಕಸಬನ್ನು ಮಾಡುವುದರಲ್ಲಿ ಆಸಕ್ತಿ. ಕ್ಷೌರವನ್ನು ಮಾಡುವುದರಲ್ಲಿ ಅವನ ಕೈ ನಯವಾಗಿತ್ತು. ಹಾಗಾಗಿ ಮಗ ಹೇಗಾದರೂ ಜೀವನ ಸಂಪಾದಿಸಿಕೊಳ್ಳುತ್ತಾನೆ ಎಂಬ ಧೈರ್ಯದಿಂದ ತಂದೆ ಅವನನ್ನು ಅವನ ಇಷ್ಟದಂತೆ ಬಿಟ್ಟಿದ್ದನು.

ಹೀಗಿರುವಾಗ ಹಳ್ಳಿಗೆ ದೊಂಬರ ಗುಂಪು ಬಂದಿತು. ಅದರಲ್ಲಿ ಒಂದು ಹುಡುಗಿ ಇದ್ದು, ಅವಳಿಗೂ ಮತ್ತು ನರಸನ ಮಗ ವೆಂಕಟಶಾಮಿಗೆ ಪ್ರೀತಿಯಾಗುತ್ತದೆ. ಇದು ಹಳ್ಳಿಗೆಲ್ಲಾ ಗೊತ್ತಾಗಿ ಪಂಚಾಯಿತಿ ಎಲ್ಲಾ ಮಾಡಿದರು. ಆ ವಯಸ್ಸಿನ ಹುಡುಗರು ಮಾತ್ರ ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ಅಂದರೆ ವೆಂಕಟಶಾಮಿ ಪರಂಪರೆಯನ್ನು ಮುರಿಯುವ ಪ್ರಯತ್ನ ಮಾಡುತ್ತಾನೆ. ತಂದೆ ತಾಯಿ ಏನು ಹೇಳಿದರೂ ಅವರ ಮಾತನ್ನು ಕೇಳದೇ ದೊಂಬರ ಹುಡುಗಿಯ ಸುತ್ತಾ ತಿರುಗಲು ಆರಂಭಿಸುತ್ತಾನೆ. ವೆಂಕಟಶಾಮಿ ಮತ್ತು ದೊಂಬರ ಹುಡುಗಿಯನ್ನು ಜೊತೆಯಲ್ಲಿ ನೋಡಿದ ಜನ "ನೋಡಿದಾ ಹುಡುಗೀನ ಒಲಿಸಿಕೊಳ್ಳೋಕೆ ನಾಯಿಂದ ಕಾಗೆ ಹೊಡೆಯೋಕೆ ಹೊರಟಿದ್ದಾನೆ" ಎಂಬ ಮಾತು ಊರೆಲ್ಲ ಪ್ರಸಿದ್ಧಿಯಾಗುತ್ತದೆ.

ಇಲ್ಲಿ ನಾಯಿಂದ ಜಾತಿಗೆ ಸೇರಿದ ವೆಂಕಟಶಾಮಿ ತನ್ನ ಕುಲವೃತ್ತಿಯನ್ನು ಬಿಟ್ಟು, ಪುರಾತನದಿಂದ ಬಂದಿದ್ದ ಹಳ್ಳಿಯನ್ನು ಬಿಟ್ಟು ದೊಂಬರ ಹುಡುಗಿಗಾಗಿ ಅವನು ತನ್ನ ಜಾತಿಯನ್ನೇ ಬಿಡುತ್ತಾನೆ. ಅಷ್ಟೇ ಅಲ್ಲ ಅವನು ಮದುವೆಯಾಗಿ ಹಳ್ಳಿಯಲ್ಲಿ ವಾಸಮಾಡಲು ಸಾಧ್ಯವಾಗದೇ ಇರುವುದರಿಂದ ಬೆಂಗಳೂರಿಗೆ ಹೋಗುವ ತೀರ್ಮಾನ ಮಾಡುತ್ತಾನೆ. ಅಂದರೆ ಎಲ್ಲಿ ಪರಂಪರೆಗೆ ಸೋಲಾಗುತ್ತದೋ, ಅಲ್ಲಿ ಆ ಪಾತ್ರವನ್ನು ಸಾಯಿಸುವ ಮೂಲಕ ಪರಂಪರೆಯೇ ಶ್ರೇಷ್ಠ ಎಂಬ ಅಂಶವನ್ನು ಇಲ್ಲಿ ಗಮನಿಸಬಹುದು. ಮಾಸ್ತಿಯವರು ಪರಂಪರೆಗೆ ಹೆಚ್ಚು ಒತ್ತು ಕೊಡುವುದರಿಂದ ಅಲ್ಲಿ ಆಧುನಿಕತೆ ಸೋಲುತ್ತದೆ. ಆದರೆ ಬದುಕು ಮುಖ್ಯ ಎಂದಾಗ ಮಾತ್ರ ಮಾಸ್ತಿ ಆಧುನಿಕತೆಯ ಪರವಾಗಿ ನಿಲ್ಲುತ್ತಾರೆ.

ವೆಂಕಟಿಗ ಹೆಂಡತಿ ಈ ಕತೆ ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ ಮಾಡಿಸುತ್ತದೆ. ಈ ಕತೆಯಲ್ಲಿ ಎರಡು ಮುಖ್ಯ ಪುರುಷ ಪಾತ್ರಗಳಿದ್ದು, ವೆಂಕಟಿಗ ಪರಂಪರೆಯ ಭಾಗವಾದರೆ,

ಪುಣ್ಯವಂತ ರೆಡ್ಡಿ ಆಧುನಿಕತೆಯ ಭಾಗವಾಗಿ ಕಂಡು ಬರುತ್ತಾರೆ. ಇಲ್ಲಿ ನಾನು ಮುಖ್ಯವಾಗಿ ಹೇಗೆ ರೆಡ್ಡಿಯಲ್ಲಿ ವೈಚಾರಿಕತೆ ಮನೋಭಾವ ಇದೆ ಎಂಬುದನ್ನು ಈ ಕತೆಯಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

ರೆಡ್ಡಿ ಊರಿನಲ್ಲಿ ಶ್ರೀಮಂತನಾಗಿದ್ದ ಅವನಲ್ಲಿ ಒಡವೆ ವಸ್ತ್ರಗಳು ಹೆಚ್ಚಾಗಿದ್ದು ಅವುಗಳ ಆಸೆಯನ್ನು ವೆಂಕಟಿಗನ ಹೆಂಡತಿಗೆ ತೋರಿಸಿ ಅವಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುತ್ತಾನೆ. ಇದರಿಂದ ವೆಂಕಟಿಗ ತನ್ನ ಹೆಂಡತಿಯನ್ನು ಬಿಟ್ಟು ಬೆಂಗಳೂರಿಗೆ ಹೋಗುತ್ತಾನೆ. ತನ್ನ ನೋವನ್ನು ಯಾರಿಗೂ ಹೇಳದೇ ಒಬ್ಬನೇ ಅನುಭವಿಸುತ್ತಾನೆ. ಒಮ್ಮೆ ಹೋಗಿ ತನ್ನ ಹೆಂಡತಿಯನ್ನು ವಾಪಸ್ಸು ಬರುವಂತೆ ಪರಿಪರಿಯಾಗಿ ಬೇಡುತ್ತಾನೆ. ಅವಳು ಬರಲು ಒಪ್ಪುವುದಿಲ್ಲ. ತನ್ನ ಅತ್ತೆ ಅವಳನ್ನು ಹಿಡಿದು ಎಳೆದು ತಾ ಎಂದಾಗ ಕೂಡ ಅವನ ಮನಸ್ಸು ಅದನ್ನು ಒಪ್ಪುವುದಿಲ್ಲ. ಕೊನೆಗೆ ತನ್ನ ಹೆಂಡತಿಗೆ ನಿನಗೆ ಯಾವಾಗ ಬೇಕು ಅನಿಸಿದರೆ, ಆಗ ನನ್ನ ಹತ್ತಿರ ಬಾ; ಅಲ್ಲಿಯವರೆಗೂ ನಾನು ಕಾಯುತ್ತೇನೆಂದು ಹೇಳಿ ಹೊರಟು ಹೋಗುತ್ತಾನೆ.

ಮನೆ ಬಿಟ್ಟು ಬೆಂಗಳೂರಿಗೆ ಹೋದ ವೆಂಕಟಿಗ, ಸೌದೆಯನ್ನು ಮಾರಿ ಜೀವನ ಸಾಗಿಸುತ್ತಾನೆ. ಹೀಗಿರುವಾಗ ಒಂದು ದಿನ ರೆಡ್ಡಿ ತಾನು ಮದುವೆಯಾಗಿದ್ದ ಹೆಂಡತಿಯನ್ನು ಬಿಟ್ಟು, ವೆಂಕಟಿಗನ ಹೆಂಡತಿಯನ್ನು ಮನೆಗೆ ಕರೆತರುತ್ತಾನೆ. ಸ್ವಲ್ಪ ದಿನದ ನಂತರ ಅವಳನ್ನು ಬಿಟ್ಟು ಇನ್ಯಾವಳೋ ಒಬ್ಬ ಹೆಂಗಸನ್ನು ಹೊತ್ತುಕೊಂಡು ಬರುತ್ತಾನೆ. ಮುಂಚೆ ಮದುವೆಯಾಗಿದ್ದ ಹೆಂಡತಿಯರು ರೆಡ್ಡಿಯನ್ನು ಬಿಟ್ಟು ಹೊರಟು ಹೋಗುತ್ತೇವೆಂದು ಹೇಳುತ್ತಾರೆ. ಆಗ ವೆಂಕಟಿಗನ ಹೆಂಡತಿ ಇದರಿಂದ ಬೇಸರವಾಗಿ ನಾನು ನಿನ್ನ ಜೊತೆ ಇರೋದಿಲ್ಲ ಎಂದು ಹೇಳಿದಾಗ, ರೆಡ್ಡಿ "ನೀನೇನು ತಾಲಿ ಕಟ್ಟಿಸಿಕೊಂಡ ಹೆಂಗಸು ಎಂತ ತಿಳುಕೊಂಡೆಯಾ? ಬಿಸಿ ಹಿಟ್ಟು ಸಿಕ್ಕುತ್ತೆ ಅಂತ ಬಾಯಿ ತೆರೆದು ಬಂದ ನಾಯಿ, ನಿನಗೆಷ್ಟೆ ಅಹಂಕಾರ"[೩೭] ಇತ್ಯಾದಿಯಾಗಿ ಅವಳನ್ನು ಬಯ್ಯುತ್ತಾನೆ. ಇದರಿಂದ ಕೋಪಗೊಂಡ ವೆಂಕಟಿಗನ ಹೆಂಡತಿ ರೆಡ್ಡಿ ಮುಂಚೆ ಕೊಟ್ಟಿದ್ದ ವಸ್ತ್ರ, ಒಡವೆಗಳನ್ನು ಅಲ್ಲಿಯೇ ಬಿಟ್ಟು, ಅವನ ಹೆಂಡತಿಯರ ಕಾಲಿಗೆ ಬಿದ್ದು ವೆಂಕಟಿಗನ ಮನೆಗೆ ಬರುತ್ತಾಳೆ. ಅಂದರೆ ಇಲ್ಲಿ ರೆಡ್ಡಿ ತನಗೆ ಇಷ್ಟ ಬಂದಂತೆ ಹೆಣ್ಣುಗಳನ್ನು ಬಳಸಿಕೊಳ್ಳುವ, ಬದಲಾಯಿಸುವ ಗುಣ ಇದೆ ಅಲ್ಲ ಅದು ಆಧುನಿಕತೆಯಿಂದ ಬಂದಿದ್ದು. ಮಾಸ್ತಿಯವರ ವೆಂಕಟಿಗನ ಹೆಂಡತಿ ಕತೆಯಲ್ಲಿ ವೆಂಕಟಿಗನ ಪಾತ್ರವನ್ನು ಓದಿದ ಪ್ರತಿಯೊಬ್ಬರಲ್ಲೂ ಅವನ ಮೇಲೆ ಕರುಣೆ ಹುಟ್ಟಿಸುವಂತಿದ್ದರೆ, ರೆಡ್ಡಿಯ ಪಾತ್ರವನ್ನು ಓದಿದ ಪ್ರತಿಯೊಬ್ಬರಲ್ಲಿ ಅವನ ಮೇಲೆ ತಿರಸ್ಕಾರ ಮನೋಭಾವ ಉಂಟಾಗುವಂತೆ ಮಾಡುತ್ತವೆ. ಕಾರಣ, ತನ್ನನ್ನು ಬಿಟ್ಟು ಹೋದ ಹೆಂಡತಿ ಮಗುವನ್ನು ಕರೆದುಕೊಂಡು ಬಂದಾಗ ಆ ಮಗ ತನ್ನದೆಂದು ಸಹ ಯೋಚಿಸದೇ, ಅವಳ ಮನಸ್ಸನ್ನು ನೋಯಿಸದೇ ತನ್ನ ಹೆಂಡತಿ ಮತ್ತು ಮಗುವನ್ನು ಸ್ವೀಕರಿಸುತ್ತಾನೆ. ಆದರೆ ಪುಣ್ಯವಂತ ರೆಡ್ಡಿ ತಾನು ಮದುವೆಯಾಗಿದ್ದ ಹೆಂಡತಿಯರಿದ್ದರೂ, ವೆಂಕಟಿಗನ ಹೆಂಡತಿಯನ್ನು ಮೋಹಿಸಿ ಅವನ ಸಂಸಾರವನ್ನು ಒಡೆಯುವ ಕೆಲಸ ಮಾಡುತ್ತಾನೆ. ಅಷ್ಟೇ ಅಲ್ಲದೆ ಇನ್ಯಾವಳೋ ಬೇರೊಬ್ಬಳನ್ನು ಹೊತ್ತುಕೊಂಡು ಬರುತ್ತಾನೆ. ಹೀಗೆ ರೆಡ್ಡಿ ಪಾತ್ರ ತುಂಬಾ ಭಿನ್ನವಾಗಿದೆ.

'ಚಿಕ್ಕವ್ವ' ಕತೆ ಮಾಸ್ತಿಯವರ ಕತೆಗಳಲ್ಲಿಯೇ ಭಿನ್ನವಾದ ಕತೆಯಾಗಿದೆ. ಬಹುತೇಕ ಕತೆಗಳಲ್ಲಿ ಗಂಡ ಹೆಂಡತಿಯರ ಸಂಬಂಧದ ಕುರಿತು ಕತೆಗಳು ರಚನೆಯಾಗಿದ್ದರೆ, ಈ ಕತೆಯಲ್ಲಿ ಗಂಡ–ಹೆಂಡತಿಯರಷ್ಟೇ ಪ್ರಬಲವಾದ ಪಾತ್ರವಾಗಿ ಮಗನ ಪಾತ್ರದ ಸೃಷ್ಟಿ ಇದೆ. ಶ್ರೀರಾಮ್ ಅವರ ತಂದೆ ಮದುವೆಯಾಗುವಾಗ ನಲವತ್ತು ವರ್ಷ ವಯಸ್ಸಿನವರು. ಅವರಿಗೆ ಒಂದು ರೀತಿಯಲ್ಲಿ ಪತ್ನಿ ಘಾತಕ ಜಾತಕವಾಗಿದ್ದಿತು. ಮೊದಲನೇ ಹೆಂಡತಿ ಎರಡು ವರ್ಷ ಸಂಸಾರ ಮಾಡಿ ತೀರಿಹೋದರು. ಎರಡನೇ ಹೆಂಡತಿ ಮೂರು ಮಕ್ಕಳನ್ನು ಹೆತ್ತರು. ಹದಿನೈದು ವರ್ಷ ಸಂಸಾರ ಮಾಡಿ ಏನೋ ಜ್ವರ ಬಂದು ತೀರಿಕೊಂಡರು. ಶ್ರೀರಾಮ್ ತಂದೆ ಬೇಗನೇ ಇನೇ ಮದುವೆಯಾಗಬೇಕೆಂದು ಯೋಚಿಸಲಿಲ್ಲ. ತನ್ನ ಹಿರಿಯ ಮಗನಿಗೆ ಮದುವೆ ಮಾಡಿದರೆ, ಆ ಸೊಸೆ ಮನೆಯನ್ನು ನೋಡಿಕೊಳ್ಳುತ್ತಾಳೆಂದು ಸುಮ್ಮನಿರುತ್ತಾನೆ. ಆದರೆ ಅವರ ತಾಯಿಯ ಒತ್ತಾಸೆಯಿಂದ ಮತ್ತು ತಾಯಿಗೆ ವಯಸ್ಸಾಗಿ ಸಂಸಾರವನ್ನು ನಿಭಾಯಿಸಲು ಸಾಧ್ಯವಾಗದೇ ತನ್ನ ಮಗ ಮದುವೆ ಮಾಡಿಕೊಳ್ಳಲು ಹಠ ಹಿಡಿಯುತ್ತಾಳೆ.

ಇದು ಕತೆಯ ಒಂದು ಭಾಗವಾದರೆ, ಕಥೆಯ ಎರಡನೇ ಭಾಗದಲ್ಲಿ ಶ್ರೀರಾಮ್ ಅವರ ಅಣ್ಣನಿಗೆ (ಇನೇ ಹೆಂಡತಿಯ ಮಗ) ಮದುವೆ ಮಾಡುತ್ತಾರೆ. ಮದುವೆಯಾದ ಹುಡುಗಿ ಎಳೆಯ ಮಗುವಾದರೂ, ಎಲ್ಲವನ್ನು ಬಲ್ಲಾಕೆ ಮನೆಗೆ ಯಜಮಾನಿಯಾಗುತ್ತಾಳೆ. ಅಣ್ಣಾನ ಹೆಂಡತಿ ಕೂಡ ಏನೋ ರೋಗಬಂದು, ಒಂದು ನಾಲ್ಕು ತಿಂಗಳು ಸವೆದು ಕಣ್ಮುಚ್ಚಿಕೊಂಡಳು. ತಂದೆಯಂತೆ ಮಗನ ಜಾತಕ ಕೂಡ ಪತ್ನೀ ಮಾರಕವಾದಾಗುತ್ತದೆ. ಕೊನೆಗೆ ಅಜ್ಜಿಯ ಒತ್ತಡಕ್ಕೆ ಮಣಿದು ಶ್ರೀರಾಮ್ ಅವರ ತಂದೆ ಮೂರನೇ ಮದುವೆಯಾಗುತ್ತಾನೆ. ಆಗ ಶ್ರೀರಾಮ್‌ಗೆ ನಾಲ್ಕುವರ್ಷ ವಯಸ್ಸಾಗಿರುತ್ತದೆ. ಮದುವೆಯಾಗಿ ಮನೆಗೆ ಬಂದಾಗ 'ಅವ್ವಾ' ಎಂದು ಹತ್ತಿರ ಹೋಗುತ್ತಾನೆ. "ಅವ್ವ ಅಲ್ಲ ಚಿಕ್ಕವ್ವ ಅನ್ನು" ಎಂದು ಅವನನ್ನು ಎತ್ತಿಕೊಳ್ಳುತ್ತಾಳೆ. ಹೀಗೆ ಶ್ರೀರಾಮ್ ಅವರ ಮನೆಯಲ್ಲಿ ಚಿಕ್ಕವ್ವ ಸಾಂಸಾರಿಕ ಜೀವನಕ್ಕೆ ಪಾದಾರ್ಪಣೆ ಮಾಡುತ್ತಾಳೆ.

ಶ್ರೀರಾಮ್ ಅವರ ಅಣ್ಣ ಮದುವೆ ಆಗಿದ್ದು, ಹೆಂಡತಿಯನ್ನು ಕಳೆದುಕೊಂಡಿರುತ್ತಾನೆ. ತನ್ನ ತಂದೆ ವಯಸ್ಸಾದ ಮುದುಕನಾಗಿರುವುದರಿಂದ ಅವನ ಗಮನ ಚಿಕ್ಕವ್ವನ ಮೇಲೆ ಬೀಳುತ್ತದೆ. ಚಿಕ್ಕವ್ವನಿಗೆ ಅಕ್ಷರಜ್ಞಾನ ಇದ್ದು ವೈಚಾರಿಕವಾಗಿ ಯೋಚಿಸುವ ಮನೋಭಾವದವಳು. ಮದುವೆಯಾಗಿ ತುಂಬಾ ದಿನಗಳು ಆದರೂ ತನ್ನ ಗಂಡನಿಂದ ದೈಹಿಕವಾಗಿ ದೂರ ಇರುತ್ತಾಳೆ. ಕಾರಣ ಗಂಡನಿಗೆ ತಂದೆಯಷ್ಟು ವಯಸ್ಸಾಗಿತ್ತು. ಜೊತೆಗೆ ಅವಳನ್ನು ಮದುವೆಯಾಗುವಾಗ ಮಗುವಿಗೆ ತಾಯಿಯಾಗಿರಲು ನನಗೆ ಹೆಂಡತಿ ಬೇಕು ಎಂಬ ಷರತ್ತಿನ ಮೇಲೆ ಮದುವೆಯಾಗಿರುತ್ತಾಳೆ.

ಈ ಕತೆಯಲ್ಲಿ ವೈಚಾರಿಕತೆ ಚಿಕ್ಕವ್ವ ಮತ್ತು ಶ್ರೀರಾಮನ ಅಣ್ಣನ ಎರಡು ಪಾತ್ರಗಳಲ್ಲಿ ಗುರುತಿಸಬಹುದು.

* ಚಿಕ್ಕವ್ವನಿಗೆ ಅನಿವಾರ್ಯವಾಗಿ ತನಗೆ ಇಷ್ಟ ಇಲ್ಲದವರೊಡನೆ ಮದುವೆಯಾಗುತ್ತದೆ. ಅವಳಿಗೆ ಮದುವೆ ಬೇಡ ಎಂದು ಹೇಳುವ ಸ್ವಾತಂತ್ರ್ಯ ಇರಲಿಲ್ಲ. ಏಕೆಂದರೆ ಪುರುಷಪ್ರಧಾನ

ವ್ಯವಸ್ಥೆಯಲ್ಲಿ ಗಂಡಿನಂತೆ ನಡೆಯಬೇಕು ಎಂಬ ವಾದ ಅವಳನ್ನು ಕಟ್ಟಿಹಾಕುತ್ತದೆ. ಆದರೆ ಮದುವೆಯಾದ ಗಂಡನೊಂದಿಗೆ ಸಂಸಾರ ಮಾಡುವಾಗ ಅವಳು ಅದನ್ನು ವಿರೋಧ ಮಾಡುತ್ತಾಳೆ. ಚಿಕ್ಕವ್ವನಿಗೆ ವಯಸ್ಸು ಹದಿನಾರು ವರ್ಷ ತುಂಬಿರುತ್ತದೆ. ತಾನು ಇನ್ನೂ ದೈಹಿಕವಾಗಿ ಪಕ್ವ ಆಗಿಲ್ಲ ಎಂಬ ಭಾವನೆ ಅವಳಲ್ಲಿ ಇರುತ್ತದೆ. "ಹಸುಮಗು ಅಲ್ಲದೆ ನನಗೇನು ದಿನ ಹೋಗಿರೋದು? ನಾನು ಪುಣ್ಯ ಮಾಡಿದ್ದರೆ ನಿಮ್ಮ ಮಗಳಾಗಿ ಹುಟ್ಟುತಾ ಇದ್ದೆ. ನಿಮ್ಮ ಮನೆಯಲ್ಲಿ ಮಗ ಇದ್ದಾನಲ್ಲ ಅವನ ತಂಗಿಯಾಗಿ ಇರ್ತಾ ಇದ್ದೆ. ಬೇರೆ ಮನೆ ಮಗು, ಕೈ ಹಿಡಿದು ಬಂದೆ. ತಿಳಿಯದವಳು ಅಂತ ಸಹಿಸಿಕೊಳ್ಳಿ"[೩೮] ಇಂತಹ ಅನೇಕ ಸಂದರ್ಭಗಳನ್ನು ಚಿಕ್ಕವ್ವ ಎದುರಿಸುತ್ತಾಳೆ. ಕೊನೆಗೆ ಎಲ್ಲಿ ತನ್ನ ಪ್ರಯತ್ನಕ್ಕೆ ಪ್ರತಿಫಲ ಸಿಗುವುದಿಲ್ಲ. ನನ್ನ ಹೋರಾಟ ವ್ಯರ್ಥ ಎಂದಾಗ ಅವಳು ಆಧುನಿಕ ನಿಲುವು ಪರಂಪರೆಯೊಂದಿಗೆ ಹೋರಾಟ ಮಾಡುವಾಗ ಆಧುನಿಕತೆ ಸೋಲುತ್ತದೆ. ಪರಂಪರೆ ಮೇಲುಗೈ ಸಾಧಿಸುತ್ತದೆ. ಮಾಸ್ತಿಯವರ ಕತೆಗಳಲ್ಲಿ ಇಂತ ಪಾತ್ರಗಳು ಅನೇಕ ಇವೆ. 'ವೆಂಕಟಶಾಮಿ ಪ್ರಣಯ' ಕತೆಯಲ್ಲೂ ಕೂಡ ಎಲ್ಲಿ ಪರಂಪರೆಗೆ ದಕ್ಕೆ ಉಂಟಾಗುತ್ತದೆ ಎಂದಾಗ ವೆಂಕಟಶಾಮಿಗೆ ಜ್ವರ ಬಂದು ಸಾಯುತ್ತಾನೆ. ಹೀಗೆ ಮಾಸ್ತಿಯವರ ಪಾತ್ರಗಳು ಪರಂಪರೆಗೆ ಪೂರಕವಾಗಿ ಸಹಕರಿಸುತ್ತವೆ. ಆಧುನಿಕತೆಯ ಪಾತ್ರಗಳು ಎಷ್ಟೇ ಪ್ರಯತ್ನ ಪಟ್ಟರೂ ಅವು ಪರಂಪರೆಯ ಪಾತ್ರಗಳ ಮುಂದೆ ವಿಫಲವಾಗುತ್ತವೆ.

* ಶ್ರೀರಾಮ್ ಅವರ ಅಣ್ಣಾ ಕೂಡ ವೈಚಾರಿಕ ಮನೋಭಾವನೆಯನ್ನು ಹೊಂದಿರುತ್ತಾನೆ. ತನ್ನ ತಂದೆ ಮದುವೆಯಾದ ಹುಡುಗಿ ತುಂಬಾ ಕಡಿಮೆ ವಯಸ್ಸಿನವಳಾಗಿದ್ದು, ಅವಳು ತಂದೆಗೆ ದೈಹಿಕವಾಗಿ ಸಹಕರಿಸದಿದ್ದಾಗ, ಅವಳನ್ನು ದೈಹಿಕವಾಗಿ ಕೂಡಲು ಪ್ರಯತ್ನಿಸುತ್ತಾನೆ. ಇವನಿಗೆ ತನ್ನ ಆಸೆ ಹಿಡೇರಿಸಿಕೊಳ್ಳುವುದೇ ಮುಖ್ಯ ಹೊರತು ಸಂಬಂಧ ಅಲ್ಲ. ಹಾಗಾಗಿ ತನ್ನ ಚಿಕ್ಕವ್ವನಿಗೆ ತುಂಬಾ ಕಿರುಕುಳ ಕೊಡಲು ಆರಂಭಿಸುತ್ತಾನೆ. ಎಷ್ಟೇ ಪ್ರಯತ್ನ ಪಟ್ಟರೂ ಅವಳು ಒಪ್ಪದಿದ್ದಾಗ "ಇದು ಯಾತರದಿದು ನಡೀರಿ ನಡೀರಿ! ಅಜ್ಜಿ ಹೇಳೋ ಮಾತನ್ನು ನೀನು ಕೇಳಿಲ್ಲವೇ? ಮುನಿಯನ ಹೆಂಡತಿ ಈರನ ಜೊತೆಗೆ ಹೊರಟು ಹೋದಳು ಅಂದರೆ ಈರನ ಹೆಂಡತೀನ ಮುನಿಯ ಮದುವೆ ಆಗಿದ್ದ, ಅವಳು ಗಂಡನ ಹತ್ತಿರಕ್ಕೆ ಓಡಿ ಹೋದಳು, ಯಾರೋ ಹೋಗಿ ಇನ್ನೊಬ್ಬನ ಹೆಂಡತೀನ ಮದುವೆಯಾದರೆ ಅವಳು ಹೊರಟು ಹೋಗದೆ ಏನು ಮಾಡುತ್ತಾಳೆ ಅಂತ ನಾನೇನು ಈ ಹೊತ್ತೇ ಅನ್ನಲಿಲ್ಲ ಊ್ಞ ಅನ್ನು ಅಷ್ಟೆ. ಬಲವಂತ ಇಲ್ಲ"[೩೯] ಎಂದು ಶ್ರೀರಾಮ್‌ನ ಅಣ್ಣ ಚಿಕ್ಕವ್ವನಿಗೆ ಒಪ್ಪಿಗೆ ಸೂಚಿಸುವಂತೆ ಹೇಳುತ್ತಾನೆ.

ಇಲ್ಲಿ ಚಿಕ್ಕವ್ವನ ವೈಚಾರಿಕತೆ ಮತ್ತು ಶ್ರೀರಾಮ್‌ನ ವೈಚಾರಿಕತೆ ಭಿನ್ನವಾಗಿದೆ. ಇಬ್ಬರ ನಿಲುವು ಒಂದೇ ಆದರೆ ಅದನ್ನು ಪಡೆಯುವ ಮತ್ತು ತಿರಸ್ಕರಿಸುವ ಮಾರ್ಗಗಳು ಬೇರೆ ಬೇರೆಯಾಗಿವೆ.

'ನಾಯಿಬಾಳು' ಕತೆಯ ಶೀರ್ಷಿಕೆಯೇ ಕತೆಯನ್ನು ಅರ್ಥೈಸಿಕೊಳ್ಳಲು ಸಹಾಯ ಮಡುತ್ತದೆ. ಅಂದರೆ ನಾಯಿಗೆ ಯಾವುದೇ ರೀತಿಯ ಕಟ್ಟುಪಾಡುಗಳಿಲ್ಲದೇ ತನಗೆ ಇಷ್ಟಬಂದಂತೆ ಬದುಕುತ್ತದೆ. ಇಲ್ಲಿ ನಾಯಿ ಅಂದರೆ ನಮ್ಮಲ್ಲಿ ಕೆಲವು ಆಲೋಚನೆ ಮೂಡುವುದು ಅನಿವಾರ್ಯ. ಆದರೆ ಇಲ್ಲಿ

ನಾಯಿಗೆ ಸಾಂಸಾರಿಕವಾಗಿ ಒಂದೇ ಗಂಡಿನೊಡನೆ ಬದುಕುವಂತೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ತನಗೆ ಇಷ್ಟ ಬಂದ ಗಂಡು ನಾಯಿಯೊಂದಿಗೆ ಬದುಕುತ್ತದೆ. ಕತೆಯಲ್ಲೂ ಕೂಡ ಕೆಲವು ಪಾತ್ರಗಳು ಯಾವುದೇ ನಿಯಮಗಳಿಲ್ಲದೇ ಬದುಕು ಮುಖ್ಯ ಎನ್ನುವ ದೃಷ್ಟಿಕೋನದಲ್ಲಿ ಬೇರೆ ಬೇರೆ ಗಂಡಿನೊಡನೆ ಮದುವೆಯಾಗುವ ಸನ್ನಿವೇಶಗಳಿವೆ.

ಜನ್ನಪ್ಪ ಮತ್ತು ಸುಬ್ಬಮ್ಮನಿಗೆ ಮನು ಒಬ್ಬಳೇ ಮಗಳು. ಅವಳನ್ನು ಚಾಮೂಗೆ ಕೊಟ್ಟು ಮದುವೆ ಮಾಡುತ್ತಾರೆ. ಮದುವೆ ಆದ ಮೂರು ವರ್ಷಕ್ಕೆ ಸುಬ್ಬಮ್ಮ ತೀರಿಕೊಂಡಳು. ಆಗ ಅವರ ಮಗಳು ಮನು ಮತ್ತು ಅಳಿಯ ಚಾಮು ಜನ್ನಪ್ಪನ ಮನೆಗೆ ಬಂದು ಅವನ ಹಾರೈಕೆಗಾಗಿ ನಿಲ್ಲುತ್ತಾರೆ. ಚಾಮೂಗೆ ಅಜೀರ್ಣ ಸಮಸ್ಯೆಯಾಗಿ ಎರಡು ವರ್ಷದಲ್ಲಿ ತೀರಿಕೊಂಡ. ಮನು ಒಂಟಿಯಾದಳು. ಕತೆಯಲ್ಲಿ ಬರುವ ನಿರೂಪಕ ಗಂಡಾಗಿದ್ದು ಲೀಲೂನ ಮದುವೆಯಾಗುತ್ತಾನೆ. ಚೀನೂ ಸರೂನ ಮದುವೆಯಾದ. ಮನೂನೇ ಗೆಳತಿಯರನ್ನು ಒಪ್ಪಿಸಿ ಮದುವೆ ಮಾಡಿಸಿರುತ್ತಾಳೆ. ಸರೂನ ಮದುವೆಯಾಗಿ ಮೂರು ವರ್ಷಕ್ಕೆ ಮೊದಲ ಹೆರಿಗೆಯಲ್ಲಿ ತೀರಿಕೊಂಡಳು. ಚೀನು ಒಂಟಿಯಾದ. ಹೀಗೆ ಮೂರು ಜೋಡಿ ಗೆಳೆಯ ಗೆಳತಿಯರು ಮದುವೆಯಾದರೆ, ಅದರಲ್ಲಿ ಒಂದು ಜೋಡಿಗೆ ಗಂಡ ಸತ್ತರೆ, ಮತ್ತೊಂದು ಜೋಡಿಗೆ ಹೆಂಡತಿ ಸಾಯುತ್ತಾಳೆ. ಉಳಿದ ಒಂದು ಜೋಡಿ, ಒಂಟಿಯಾದ ಗಂಡು-ಹೆಣ್ಣನ್ನು ಪುನಃ ವಿವಾಹ ಮಾಡಲು ಪ್ರಯತ್ನಿಸುವುದೇ ಈ ಕತೆಯ ಮುಖ್ಯ ಅಂಶ.

ಹೀಗೆ ಕತೆಯ ಮುಖ್ಯ ಅಂಶವನ್ನು ಸಾಧಿಸಲು ನಿರೂಪಕ ಮತ್ತು ಲೀಲು ತುಂಬಾ ಪ್ರಯತ್ನ ಮಾಡುತ್ತಾರೆ. "ಮೂರು ಜೊತೆ ನಾವು ಸಂತೋಷವಾಗಿ ಬಾಳೋಣ ಅಂತ ಮಾಡಿದರೆ ಇಲ್ಲಿ ಚೀನು, ಇಲ್ಲಿ ಮನು ಒಂಟಿ ಒಂಟಿ ನಿಂತರು ನಾಲ್ಕು ತಿಂಗಳು ಬಿಟ್ಟು ನಾನು ಲೀಲೂಗೆ ಹೇಳಿದೆ. ನಾವೇನು ಹಳೆ ತರದ ಮನುಷ್ಯರಲ್ಲ; ಮನೂ ಚೀನೂನ ಮದುವೆ ಆಗಲಿ ನೀನು ಅವಳಿಗೆ ಹೇಳು, ಅಂತ ಚೀನೂಗೆ ನಾನೇ ಹೇಳಿದೆ. ಚೀನು "ಆಗಲಿ ಅಣ್ಣ" ಅಂದ ಮನು "ಸ್ವಲ್ಪ ತಡಿ", ಅಂದಳಂತೆ "ಒಲ್ಲೆ" ಎನ್ನಲಿಲ್ಲ ಜನ್ನಪ್ಪನಿಗೆ ಹೇಳಿದರೆ ಅವರು ಮಗಳನ್ನು ಕೇಳಿ, ಸ್ವಲ್ಪ ತಡೆಯೋಣಲ್ಲ ಎಂದರು. ಅದಕ್ಕೇನು ಎಂತ ನಾನು ಆಗ ಸುಮ್ಮನಾದೆ"[೬೦] ಎಂದು ನಿರೂಪಕ ಕತೆಯ ಉದ್ದೇಶವನ್ನು ಬಿಚ್ಚಿಡುತ್ತಾನೆ. ವರ್ಷ ಬಿಟ್ಟು ಜನ್ನಪ್ಪನು ಕಣ್ಣು ಮುಚ್ಚಿಕೊಂಡರು. ಆಗ ಮನು ಒಬ್ಬಳೇ ಅವಳನ್ನು ನೋಡಿಕೊಳ್ಳಲು ಅವಳ ನಾಯಿ ಮಾತ್ರ. ನಾಯಿಯ ಹೆಸರು ಭೈರು. ಇದರ ಕಣ್ಣು ಚಿಮುವಿನ ಕಣ್ಣಿನಂತಿರುತ್ತವೆ.

ನಿರೂಪಕ ಮತ್ತು ಲೀಲೂ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿದ್ದು, ಅದನ್ನು ಚೀನು ಮತ್ತು ಮನುಗೆ ಎರಡನೇ ಮದುವೆ ಮಾಡಿಸಬೇಕೆಂದು ಪ್ರಯತ್ನಿಸುತ್ತಾರೆ. ಚೀನು ಇದನ್ನು ಒಪ್ಪಿಕೊಳ್ಳುತ್ತಾನೆ. ಆದರೆ ಮನು ಅದನ್ನು ಮುಂದೆ ಮುಂದೆ ಹಾಕುತ್ತಾಳೆ. ಇಲ್ಲಿ ನಿರೂಪಕ ಮತ್ತು ಲೀಲೂನ ಪ್ರಯತ್ನ ವ್ಯರ್ಥವಾಗುತ್ತದೆ. ಮನು ಒಂಟಿಯಾಗಿಯೇ ತನ್ನ ನಾಯಿ ಭೈರುವಿನ ಜೊತೆಗೆ ಕಾಲ ಕಳೆಯುತ್ತಾಳೆ.

'ಎಮ್ಮೆ ಕಳವು' ಕತೆಯಲ್ಲಿ ಮುಖ್ಯವಾಗಿ ಎರಡು ಕುಟುಂಬಗಳಿವೆ. ಒಂದು ಕುಟುಂಬದಲ್ಲಿ ತಂದೆ, ಮಗ, ಮಗಳು ಮೂರು ಜನರಿದ್ದಾರೆ. ಇವರಿಗೆ ಹತ್ತಿರದಲ್ಲಿ ಇನ್ನೊಂದು ಕುಟುಂಬ ಇದೆ. ಆ ಕುಟುಂಬದಲ್ಲಿ ಒಬ್ಬ ಪ್ರಾಯದ ಮನುಷ್ಯ, ಅವನಿಗೆ ಹೆಂಡತಿ ಮಕ್ಕಳಿದ್ದಾರೆ. ಎರಡು ಕುಟುಂಬಗಳಿಗೂ ಎಮ್ಮೆ, ಹಸು, ನೆಲ ಇದ್ದು ವ್ಯವಸಾಯ ಮಾಡುತ್ತಿದ್ದರು. ಹುಡುಗಿಯ ಅಣ್ಣ ಆರಂಭದಲ್ಲಿ ಮನೆಯಲ್ಲಿ ಬಾಕಿ ಇರುವ ಕೆಲಸವನ್ನು ಮಾಡಿ ಮುಗಿಸುತ್ತಿದ್ದ. ಆದರೆ ಇವರಿದ್ದ ಹಳ್ಳಿ ಬೆಂಗಳೂರಿಗೆ ತೀರ ಹತ್ತಿರವಾಗಿದ್ದರಿಂದ ಇಸ್ಪೀಟಾಟ, ಜೂಜು, ಒಬ್ಬ ಹೆಂಗಸಿನ ಚಟ ಇತ್ಯಾದಿಗಳಿಗೆ ಬಲಿಯಾಗಿ ಮನೆಯ ಜವಾಬ್ದಾರಿಯನ್ನೇ ಮರೆತಿದ್ದನು. ಹಣವನ್ನು ಪೋಲು ಮಾಡಲು ಆರಂಭಿಸಿದ. ಇದನ್ನು ಅರಿತ ಅವಳ ತಂಗಿಗೆ ಅಣ್ಣನ ಮೇಲೆ ಕೋಪಾ ಬರಲು ಆರಂಭವಾಯಿತು.

ಮನೆಯಲ್ಲಿ ವಯಸ್ಸಾದ ತಂದೆಯ ಹಾರೈಕೆ, ಹಾಲು ಮಾರುವುದು, ಹಣ ವಸೂಲಿ ಮಾಡುವುದು ಎಲ್ಲಾ ಕೆಲಸಗಳು ಹುಡುಗಿಯ ಮೇಲೆ ಬಿದಿದ್ದರಿಂದ ಹುಡುಗಿಗೆ ಒಬ್ಬ ಗಂಡಸಿನ ಸಹಾಯ ಬೇಕಾಯಿತು. ಪಕ್ಕದಲ್ಲಿದ್ದ ಪ್ರಾಯದ ಮನುಷ್ಯ ತನ್ನ ದನಗಳಿಗೆ ಹುಲ್ಲು ತರುತ್ತಿದ್ದ. ಆಗಾಗಿ ಈ ಹುಡುಗಿಯೂ ಕೂಡ ಆ ಮನುಷ್ಯನಿಗೆ ಬೇಕಾದಾಗ, ಹುಲ್ಲನ್ನು ತರುವಂತೆ ಹೇಳುತ್ತಿದ್ದಳು. ಹೀಗೆ ಆ ಹುಡುಗನಿಗೂ ಮತ್ತು ಮನುಷ್ಯನಿಗೂ ಪರಿಚಯವಾಗಿ, ಒಮ್ಮೆ ಹುಡುಗಿಯನ್ನು ಸ್ನೇಹ ಮಾಡಿಕೊಳ್ಳುವಂತೆ ಕೇಳಿದ್ದ. ಆಗ ಆ ಹುಡುಗಿ ತನ್ನ ತಂದೆ ಮತ್ತು ಅಣ್ಣನನ್ನು ನೆನಪಿಸಿ ವಿಷಯವನ್ನು ಮರೆತು ಬಿಡುತ್ತಾಳೆ. ಆದರೆ ಆ ಮನುಷ್ಯ ಮಾತ್ರ ತನ್ನ ಪ್ರಯತ್ನವನ್ನು ಬಿಡಲಿಲ್ಲ. ಈ ಮಧ್ಯೆ ಹುಡುಗಿಯ ಅಣ್ಣನ ದಾರಿ ಮತಷ್ಟು ಕೆಟ್ಟಿತು. ಮನೆಯಲ್ಲಿ ಕೂಡಿಸಿ ಇಟ್ಟಿದ್ದ ಹಣ ಕಡಿಮೆಯಾಗುತ್ತಾ ಬರುತ್ತದೆ. ಈ ವಿಷಯವಾಗಿ ತಂಗಿ ಮತ್ತು ಅಣ್ಣನಿಗೆ ವಾದ ವಿವಾದವಾಗುತ್ತದೆ. ಅಣ್ಣ, ತಂಗಿಯನ್ನು ಕೂಡಿದ್ದ ಮನುಷ್ಯನ ಮೇಲೆ ದೂರನ್ನು ಕೊಡುತ್ತಾನೆ. ಇದರ ವಿಚಾರಣೆಗೆ ಹುಡುಗಿಯನ್ನು, ಅವಳ ತಂದೆ, ಅಣ್ಣ, ಆ ಊರಿನ ದೊಡ್ಡ ಮನುಷ್ಯ ವಿಚಾರಿಸಿದಾಗ "ಏನು ಸ್ವಾಮಿ ಈ ನನ್ನ ಅಣ್ಣ ಹತ್ತು ಜನದ ಎದುರಿಗೆ ನನ್ನ, ನೀನು ಇವನೊಂದಿಗೆ ಬಾಳಿದ್ದೀಯಲ್ಲಾ ಅಂತ ಹೇಳುತಾನಲ್ಲಾ, ಕೇಳಲಿ, ನಾ ಹೇಳತೀನಿ, ನೀನು ನನ್ನ ಅಣ್ಣ. ನಮ್ಮಮ್ಮ ನಿನ್ನ ಮೊದಲು ಹೆತ್ತಳು. ಆ ಮೇಲೆ ನನ್ನ ಹೆತ್ತಳು. ಈ ತಂಗೀ ಹೆಸರು ಕೆಡಿಸೋಕೆ ಒಬ್ಬ ಅಣ್ಣ ಇರಲಿ ಅಂತ ನಿನ್ನ ಹೆತ್ತಳಾ? ನಿನಗೆ ಪ್ರಾಯ ಬಂತು. ನೀನು ಗಂಡು, ನೀನು ಹೆಣ್ಣು ಹುಡುಕ್ಕೊಂಡು ಹೋದಿ. ನನಗೂ ಪ್ರಾಯ ಬಂತು. ನಾನು ಹೆಣ್ಣು. ಬೀದೀಲಿ ಹೋಗೋ ಹಂಗಿಲ್ಲ. ಇರೋ ಕಡೆ ಇರಬೇಕು. ಒಬ್ಬರು ಬಂದು ಅಕ್ಕರೆ ಮಾತಾಡಿದರು. ಬಾಳುವ ಅಂದರು. ಮದುವೆ ಆಗೋಣೇ ಅಂದೆ. ಆಗೋಣ, ಸದ್ಯಕ್ಕೆ ಜೊತೆಗೆ ಇರು ಅಂದರು. ಇದ್ದೆ ಬಹಳ ದೊಡ್ಡ ತಪ್ಪಾಯಿತಾ? ಗಂಡು ಮಾತ್ರ ತನಗೆ ಬೇಕಾದ ಆಟ ಆಡಬಹುದು, ಹೆಣ್ಣು ಮದುವೆ ಆಗತ್ತೀನಿ ಅಂದವರೊಂದಿಗೆ ಸದರವಾಗಿರಬಾರದಾ? ಇದ್ದೆ, ಏನಾಯಿತು"[೪೧] ಎಂದು ತನ್ನ ಅಣ್ಣನಿಗೆ ಉತ್ತರ ಕೊಡುತ್ತಾಳೆ. ಇಲ್ಲಿ ನಮಗೆ ಮುಖ್ಯವಾಗುವುದು ಪುರುಷಪ್ರಧಾನ ವ್ಯವಸ್ಥೆಯಲ್ಲಿ ತನ್ನದೇ ಶ್ರೇಷ್ಠ ಎಂದು ಹೇಳುವ

ಪುರುಷರಿಗೆ, ಒಂದು ಹೆಣ್ಣು ಕೊಡುವ ಉತ್ತರ ಇದೆ ಅಲ್ಲ, ಅದು ತುಂಬಾ ಮುಖ್ಯವಾಗಿದೆ. ಇಲ್ಲಿ ವೈಚಾರಿಕತೆ ಅಂದರೆ ಪ್ರಶ್ನಿಸುವ ತಾಕತ್ತು ಇದೆಯಲ್ಲ, ಅದು ಹೆಣ್ಣಾಗಿ, ತನ್ನ ಒಡಹುಟ್ಟಿದ ಅಣ್ಣನಿಗೆ ಪ್ರಶ್ನೆ ಮಾಡುವ ಅಥವಾ ತಾನು ಮಾಡಿದ್ದೇ ಸರಿ ಎಂದು ಹೇಳುವ ಧೈರ್ಯ ನಿಜವಾಗಲೂ ಮೆಚ್ಚುವಂತದ್ದು. ಮಾಸ್ತಿಯವರ ಕತೆಗಳಲ್ಲಿ ಇಂತಹ ಪಾತ್ರಗಳು ಬೆರಳೆಣಿಕೆಯಷ್ಟಿವೆ.

೪.೪. ಉದ್ಯೋಗ

ಉದ್ಯೋಗ ಆಧುನಿಕತೆಯ ಫಲವಾಗಿ ಬಳಕೆಗೆ ಬಂದಿದೆ. ಮಾಸ್ತಿಯವರು ಕೂಡ ಒಬ್ಬ ಸರ್ಕಾರಿ ನೌಕರನಾಗಿ ಕೆಲಸಮಾಡಿದ್ದ ಅನುಭವದಲ್ಲಿ 'ಉದ್ಯೋಗದ' ಪರಿಕಲ್ಪನೆಯನ್ನು ಕತೆಗಳಲ್ಲಿ ಅಲಲ್ಲಿ ಬಳಸುವುದನ್ನು ಕಾಣಬಹುದು. 'ರಂಗಸಾಮಿಯ ಅವಿವೇಕ' ಕತೆಯಲ್ಲಿ ಬರುವ ನರಸಿಂಹಮೂರ್ತಿ ಆಫೀಸಿಗೆ ಹೋಗುತ್ತಾನೆ. ಆದರೆ ರಂಗಸಾಮಿ ಶಿಕ್ಷಣ ಪಡೆದಿದ್ದು, ಇಂದಿರಾ ಮತ್ತು ಅವಳ ಗಂಡ ನರಸಿಂಹಮೂರ್ತಿಯವರ ಸಂಬಂಧದ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಳ್ಳುತ್ತಾನೆ. ಇಂದಿರಾಗೆ ನರಸಿಂಹಮೂರ್ತಿಗಿಂತ ನಾನೇ ಸರಿಯದ ಗಂಡನೆಂದು ಬೀಗುತ್ತಾನೆ. ಆದರೆ ಕೊನೆಗೆ ಇಂದಿರಾದೇವಿಯು ಪತಿಯ ಬಗ್ಗೆ ಹೊಂದಿದ ದೃಢನಿರ್ಧಾರದಿಂದ ಇಷ್ಟು ದಿನ ಸೀತಾ ತನಗೆ ತಕ್ಕ ಹೆಂಡತಿ ಅಲ್ಲ ಎಂದು ಯೋಚಿಸುತ್ತಿದ್ದವನು, ಸೀತೆಗೆ ನಾನೇ ಸರಿಯಾದ ಗಂಡನಲ್ಲ ಎಂದು ಹೇಳುತ್ತಾನೆ. ಶಿಕ್ಷಣದ ಆಧಾರದ ಮೇಲೆ ಪಡೆದ ಉದ್ಯೋಗದಲ್ಲಿ ಒಂಟಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಗಂಡ ಕೆಲಸಕ್ಕೆ ಹೋದಾಗ ಮನೆಯಲ್ಲಿರುವ ಹೆಂಡತಿಗೆ ಎದುರಾದ ಸಮಸ್ಯೆಗಳ ಮೇಲೆ 'ರಂಗಸಾಮಿಯ ಅವಿವೇಕ' ಕತೆ ಬೆಳಕು ಚೆಲ್ಲುತ್ತದೆ.

'ನಮ್ಮ ಮೇಷ್ಟರು' ಕತೆಯಲ್ಲಿ ಬರುವ ವೆಂಕಟರಾಮಯ್ಯನವರು ಶಾಲೆಯ ಶಿಕ್ಷಕರಾಗಿ ಕೆಲಸವನ್ನು ಆರಂಭಿಸಿರುತ್ತಾರೆ. ಇವರಿಗೆ ಮದುವೆಯಾಗಿರುತ್ತದೆ. ಬರುವ ಸಂಬಂಳ ಕಡಿಮೆ ಆಗಿದ್ದರಿಂದ ಮನೆಯಲ್ಲಿ ಉಪ್ಪಿಗೂ ಸಹ ಪರದಾಡುವ ಬಡತನವಿರುತ್ತದೆ. ಒಂದು ದಿನ ವೆಂಕಟರಾಮಯ್ಯನವರ ಹೆಂಡತಿ ಅಡುಗೆ ಮಾಡಲು ಉಪ್ಪಿಲ್ಲ ಎಂದು ಕೇಳಿದಾಗ, ಅದನ್ನು ಮರೆತು ಶಾಲೆಗೆ ತಡವಾಯಿತೆಂದು ಹೇಳಿ ಅವಸರ ಅವಸರದಲ್ಲಿ ಶಾಲೆಗೆ ಬರುತ್ತಾರೆ. ಇದರಿಂದ ಕೋಪಗೊಂಡ ಮೇಷ್ಟರ ಹೆಂಡತಿ ಶಾಲೆಗೂ ಬರುತ್ತಾಳೆ. ಆಗ ಮೇಷ್ಟರಿಗೆ ಏನು ಮಾಡುವುದೆಂದು ಗೊತ್ತಾಗದಿದ್ದಾಗ ಹೆಂಡತಿಗೆ ಪಕ್ಕದ ಮನೆಯಲ್ಲಿ ಸ್ವಲ್ಪ ಕೇಳಿ ತಂದಿದ್ದರೇ ಆಗುತ್ತಿತ್ತು. ಈಗ ಇಲ್ಲಿಗೆ ಯಾರಾದರೂ ಬಂದರೆ ನನ್ನ ಮಾನ ಹೋಗುತ್ತದೆ ಎಂದರು ಅದಕ್ಕೆ ಪ್ರತಿಯಾಗಿ ಮೇಷ್ಟರ ಹೆಂಡತಿ "ಯಾರಾದರು ಬಂದರೆ ನಿಮ್ಮ ಮಾನ ಹೋಗುವುದು ಹಾಗಿರಲಿ ಯಾರೂ ಬಾರದೆಯೇ ದಿನವೂ ನನ್ನ ಮಾನ ಹೋಗುತ್ತ ಇದೆ. ಎಲ್ಲರ ಮನೆಯಲ್ಲೂ ನಿನ್ನೆ ಅಕ್ಕಿ, ಇಂದು ಬೇಳೆ, ನಾಳೆ ಉಪ್ಪು, ಸುಮ್ಮನೆ ಸಾಲ ಕೇಳಿ ತಂದು ತಂದು ಸಾಕಾಯಿತು. ಇನ್ನು ಹೋಗಿ ನಾನು ಯಾರನ್ನೂ ಕೇಳುವುದಿಲ್ಲ. ದುಡ್ಡಿದ್ದರೆ ತನ್ನಿ, ತರುತ್ತೇನೆ ಎನ್ನಿ, ಸ್ಕೂಲಿಗೆ ಹೊತ್ತಾಯಿತೆಂದು ಹೇಳಿ ಹೊರಟು ಹೋಗಬೇಡಿ. ದುಡ್ಡಿಲ್ಲದಿದ್ದರೆ ಇಲ್ಲವೆನ್ನಿ, ಉಪ್ಪಿಲ್ಲದೆಯೇ ತಿನ್ನೋಣ ಎಂದು ಹೇಳಿದರು."[೨೭] ಇದು ಮೇಷ್ಟರಿಗೆ ಮನೆಯಲ್ಲಿರುವ ಹಣದ ಸಮಸ್ಯೆಯಿಂದ ಹೆಂಡತಿ ಶಾಲೆಗೆ ಬರುತ್ತಾಳೆ.

ದುರದೃಷ್ಟವಶಾತ್ ಎಂಬಂತೆ ಮೇಷ್ಟರ ಹೆಂಡತಿ ಶಾಲೆಗೆ ಬಂದ ದಿನವೇ ಇನ್ಸ್‌ಪೆಕ್ಟರು ಶಾಲೆಗೆ ಬರುತ್ತಾರೆ. ಮೇಷ್ಟರು ಅಲ್ಲಿಯೂ ಸಹ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಶಾಲೆಯಲ್ಲಿರುವ ಹೆಂಡತಿ ಯಾರೆಂದು ಕೇಳಿದರೆ? ಏನೆಂದು ಹೇಳುವುದು. ಮಕ್ಕಳನ್ನು ಏನಾದರೂ ಪ್ರಶ್ನೆ ಕೇಳಿದಾಗ ಸರಿಯಾದ ಉತ್ತರ ಹೇಳುವರೋ ಇಲ್ಲವೋ ಎಂದು ಮೇಷ್ಟರ ಮನಸ್ಸು ಸಮಸ್ಯೆಗಳಿಗೆ ಸಿಲುಕುತ್ತದೆ. ಇದರಲ್ಲಿ ಯಾವುದಾದರೂ ಹೆಚ್ಚು ಕಡಿಮೆಯಾದರೆ ಎಲ್ಲಿ ಉದ್ಯೋಗ ಕಳೆದುಕೊಳ್ಳುವೆನು ಅಥವಾ ಬರುವ ಸಂಬಳದಲ್ಲಿ ಕಡಿಮೆ ಮಾಡಿದರೆ ಏನು ಮಾಡುವುದೆಂದು ಯೋಚಿಸುತ್ತಿರುತ್ತಾನೆ. ಈ ಯೋಚನೆಯಲ್ಲಿ ಮಗ್ನನಾಗಿರುವಾಗ ಅಲ್ಲಿಗೆ ಬಂದ ಇನ್ಸ್‌ಪೆಕ್ಟರು ರುಮಾಲು ಹಾಕಿಕೊಳ್ಳಿರಯ್ಯಾ ಎಂದನು. ಮೊದಲೇ ಗಾಬರಿಯಾಗಿದ್ದ ಮೇಷ್ಟ್ರು ಅದನ್ನು ಹಿಂದುಮುಂದಾಗಿ ಇಟ್ಟುಕೊಂಡರು. ಭಯದಿಂದ ಮುಖವೆಲ್ಲ ಬೆವತು ಹೋಗಿತ್ತು. ರುಮಾಲು ಹಿಂದು ಮುಂದಾದ್ದನ್ನು ನೋಡಿ ಇನ್ಸ್‌ಪೆಕ್ಟರು ರುಮಾಲನ್ನು ಸರಿಯಾಗಿ ಇಟ್ಟುಕೊಳ್ಳಿರಯ್ಯಾ ಎಂದರು.

ಹೀಗೆ ಪರಂಪರೆಯಿಂದ ಬಂದ ಕೃಷಿಯನ್ನು ಬಿಟ್ಟು ಆಧುನಿಕತೆಯಿಂದ ಬಂದ ಉದ್ಯೋಗವನ್ನು ನಿಭಾಯಿಸಬೇಕಾದರೆ ಏನೆಲ್ಲಾ ಸಮಸ್ಯೆಗಳು ಸರ್ಕಾರಿ ನೌಕರರು ಎದುರಿಸಬೇಕಾಗುತ್ತದೆ ಎಂಬುದನ್ನು ಮಾಸ್ತಿಯವರು ಈ ಕತೆಯಲ್ಲಿ ನಿರೂಪಿಸಿದ್ದಾರೆ.

'ಕೃಷ್ಣಮೂರ್ತಿಯ ಹೆಂಡತಿ' ಕತೆಯಲ್ಲಿ ಉದ್ಯೋಗದ ಕೆಲವು ಅಂಶಗಳನ್ನು ಮಾಸ್ತಿಯವರು ಪರಿಚಯಿಸುತ್ತಾರೆ. ಶಾಸ್ತ್ರಿಗಳು ಹಳ್ಳಿಯಿಂದ ನಗರಕ್ಕೆ ವರ್ಗವಾಗಿ ಬಂದಿರುತ್ತಾರೆ. ನಗರದಲ್ಲಿ ಮನೆಯನ್ನು ಹುಡುಕುವುದೇ ಒಂದು ಕೆಲಸವಾಗಿ ಹೋಗುತ್ತದೆ. ಹಳ್ಳಿಯಲ್ಲಿರುವ ಮನೆಗಳಂತೆ ವಿಶಾಲವಾದ ಮನೆಗಳು ಸಿಗುವುದು ಕಷ್ಟ ಎನಿಸುತ್ತದೆ. ಹೀಗೆ ಇಲ್ಲಿ ಹುಡುಕಿ ಅಲ್ಲಿ ತಡಕಿ ಕೊನೆಗೆ ಅಗ್ರಹಾರದಲ್ಲಿ ಒಂದು ಮನೆಯನ್ನು ಸಂಪಾದಿಸುತ್ತಾನೆ. ಅಗ್ರಹಾರಗಳು ಹಳ್ಳಿಯಲ್ಲಿರುವಂತೆ ಇಲ್ಲ. ಪಟ್ಟಣದ ಅಗ್ರಹಾರವಾದ್ದರಿಂದ ಎರಡು ಸಾಲು ಮನೆಗಳು, ಒಂದೊಂದು ಸಾಲಿಗೆ ಆರು ಮನೆಗಳಷ್ಟೇ ಇರುತ್ತವೆ. ಅದರಲ್ಲಿ ಬಲಗಡೆಯ ಸಾಲಿನಲ್ಲಿರುವ ಒಂದು ಮನೆಯನ್ನು ಕೃಷ್ಣಮೂರ್ತಿ ಬಾಡಿಗೆಗೆ ಪಡೆಯುತ್ತಾನೆ.

ಬಾಡಿಗೆ ಮನೆ ಪಡೆಯುವುದು ಒಂದು ರೀತಿಯ ಕಷ್ಟವಾದರೆ, ಮನೆಗೆ ಬಂದಾಗ ಒಂದು ರೀತಿಯ ಸಮಸ್ಯೆಯಾಗುತ್ತದೆ. ಮನೆಗೆ ಬಂದ ಆರಂಭದಲ್ಲಿ ಸಂಗೀತದಿಂದ ಮನಸ್ಸಿಗೆ ತುಂಬಾ ತೊಂದರೆಯಾಗುತ್ತದೆ. ಅದಕ್ಕೆ ಕಾರಣವನ್ನು ತಿಳಿಯಲು ಪ್ರಯತ್ನಿಸಿದಾಗ ಮತ್ತೊಂದು ರೀತಿಯ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಶಾಸ್ತ್ರಿಗಳ ಮನೆ ಇರುವ ಅಗ್ರಹಾರದಲ್ಲಿ ಒಬ್ಬ ವಯಸ್ಸಾದ ಹೆಣ್ಣು, ಒಂದು ಹುಡುಗಿಯನ್ನು ನೋಡಿದನು. ಆ ಹುಡುಗಿಯ ಮುಖದಲ್ಲಿ ಕುಂಕುಮವಿರಲಿಲ್ಲ ಇದು ಶಾಸ್ತ್ರಿಗಳಿಗೆ ಇನ್ನೊಂದು ರೀತಿಯ ಸಮಸ್ಯೆಯನ್ನು ತರುತ್ತದೆ.

ವೆಂಕಟರಾಮಯ್ಯನವರು ಆಫೀಸಿಗೆ ಹೋಗಿ ಬರುವುದು ಸಾಮಾನ್ಯ. ಒಂದು ದಿನ ಆಫೀಸಿನಿಂದ ಮನೆಗೆ ಬಂದೊಡನೆ ಯಾರೋ ತನ್ನ ಮನೆಗೆ ಬಂದರೆಂದು ತಿಳಿದು ಅವರ ಬಳಿ ಮಾತನಾಡಲು

ತೊಡಗುತ್ತಾನೆ. ಅಲ್ಲಿಗೆ ಬಂದ ವಯಸ್ಸಾದ ಹೆಂಗಸೊಬ್ಬಳು ತನಗೆ ಗಂಡ ತೀರಿಹೋದನೆಂದು ತನ್ನ ಮಗಳ ಗಂಡನಿಗೆ ಕಾಯಿಲೆ ಬಂದು ಸತ್ತನೆಂದು ಹೇಳುತ್ತಾಳೆ. ನನಗೆ ಯಾರೂ ದಿಕ್ಕಿಲ್ಲದ ಕಾರಣ ತನ್ನ ಮಗಳೇ ಎಲ್ಲಾವು ಆಗಿರುವಾಗ. ಮಗಳು ಕೂಡ ಒಂದು ದಿನ ಬಾವಿಗೆ ಬಿದ್ದು ಸಾಯುತ್ತಾಳೆ. ಇದು ವರ್ಗವಾಗಿ ಬಂದ ಶಾಸ್ತ್ರಿಗಳಿಗೆ ತುಂಬಾ ವೇದನೆಯನ್ನು ಉಂಟು ಮಾಡುತ್ತದೆ. "ಬಲವಾಗಿ ಬೀಳುತ್ತಿದ್ದ ಹಿಮವನ್ನು ಚೆದುರಿಸುತ್ತಾ ಈ ಕಡೆ ಮುಳುಗಿದ ಚಂದ್ರನೇ ಈ ಕಡೆ ಹೊಸ ತೇಜಸ್ಸಿನೊಡನೆ ಎದ್ದನೆಂಬಂತೆ ಸೂರ್ಯನು ಉದಯಿಸುತ್ತಿದ್ದನು. ಕಣ್ಣೀರ ಹನಿಯಂತೆ, ಸಣ್ಣ ಮುತ್ತಿನಂತೆ, ಹುಲ್ಲಿನ ಕೊನೆಯಲ್ಲಿ ಹಿಮಜಲ ಒಟ್ಟುಗೂಡಿ ನಿಂತಿತ್ತು. ಅಮಲವಾಗಿ ಕೋಮಲವಾಗಿ ಅಚ್ಚವಾಗಿ ನಿಂತು, ಅಬಲವಾದರೂ ಹೃದಯವನ್ನು ಸ್ಥಿರವಾಗಿ ಒಟ್ಟುಗೂಡಿಸಿಕೊಂಡು, ಬೆಳಕನ್ನು ಕಂಡೊಡನೆ ತನ್ನನ್ನು ನೀಗಿಕೊಳ್ಳಲು ಕಾದಿದ್ದ ಆ ಒಂದೊಂದು ಹನಿಯೂ ನನ್ನ ಕಣ್ಣಿಗೆ ಆ ಬಾಲತಂತುವಿನ ಆತ್ಮದ ಪ್ರತಿ ಬಿಂಬದಂತೆ ಕಂಡಿತು"[೪೩] ಎಂದು ಶಾಸ್ತ್ರಿಗಳು ತನಗೆ ಉಂಟಾದ ನೋವಿನ ತೀವ್ರತೆಯನ್ನು ಹೇಳಿದ್ದಾನೆ. ಪರಂಪರೆಯಿಂದ ಬಂದ ವೃತ್ತಿಗಳನ್ನು ಮಾಡಲು ಊರನ್ನು ಬಿಟ್ಟು ಊರಿಗೆ ಹೋಗುವ ಅವಶ್ಯಕತೆಯೇ ಇಲ್ಲ. ಆದರೆ ಆಧುನಿಕ ವೃತ್ತಿಗಳನ್ನು ಮಾಡಬೇಕಾದರೆ ಹಳ್ಳಿಯನ್ನು ಬಿಟ್ಟು ನಗರಕ್ಕೆ ಹೋಗುವುದು. ಅನಿವಾರ್ಯ ಎನ್ನುವುದು ಸರ್ವಸಮ್ಮತವಾದುದಾಗಿದೆ. ಹೀಗೆ ನಗರಕ್ಕೆ ಹೋದಂತಹ ಸಂದರ್ಭದಲ್ಲಿ ಎದುರಿಸುವ ಮತ್ತು ಎದುರಾಗುವ ಸಮಸ್ಯೆಗಳನ್ನು ಕತೆಗಾರ ಕತೆಗಳಲ್ಲಿ ನಿರೂಪಿಸುವ ಪ್ರಯತ್ನ ಮಾಡಿದ್ದಾನೆ.

'ಮಲೆನಾಡಿನ ಒಂದು ಪಿಶಾಚ' ಕತೆಯು ಒಂದು ಹಳ್ಳಿಯಲ್ಲಿರುವ ಪಿಶಾಚದ ಸುತ್ತ ಹೆಣೆದ ಕತೆಯಾಗಿದೆ. ಕೊಯಮತ್ತೂರಿನ ನರಸಿಂಹನ್ ಪೋಸ್ಟುಮೇಸ್ಟರು ಆಗಿ ಹಳ್ಳಿಗೆ ಬಂದಾಗ ನಡೆದ ಘಟನೆಗಳೇ ಈ ಕತೆಯ ವಸ್ತು. ನರಸಿಂಹನ ಹೆಂಡತಿ ಪುಟ್ಟಲಕ್ಷ್ಮೀ ಗರ್ಭಿಣಿಯಾಗಿದ್ದು ಅವಳನ್ನು ಹಳ್ಳಿಗೆ ಕರೆದುಕೊಂಡುಬರಲು ಹಳ್ಳಿಯ ಕುರಿತು ಹಳ್ಳಿಗರೊಂದಿಗೆ ನರಸಿಂಹ ಚರ್ಚಿಸುತ್ತಾನೆ. ಆಗ ಹಳ್ಳಿಯವನೊಬ್ಬ ಬಹಳ ಹೊತ್ತು ಯೋಚಿಸಿ "ಸ್ವಾಮಿ ಊರಲ್ಲಿ ಒಂದು ಬಾಣಂತಿ ಪಿಶಾಚ ಇದೆ. ಯಾವ ಕಾಲದಲ್ಲಿ ಯಾವ ಕಾರಣದಿಂದ ಆ ಬಾಣಂತಿ ಜೀವ ಬಿಟ್ಟಳೋ ನನಗೆ ತಿಳಿಯದು. ನಮ್ಮೂರಲ್ಲಿ ಯಾವ ಹೆರಿಗೆಯಾಗಬೇಕಾದರೂ ಜನ ಸುಮ್ಮನೆ ಹೆದರುತ್ತಾರೆ. ಹೆರಿಗೆಯಾದ ಕ್ಷಣದಲ್ಲಿ ಹೊಲೆ ಕಳೆಯುವವರಿಗೆ ಒಂದು ಕ್ಷಣ ಮಾತ್ರ ಮನೆಯವರು ಅಜಾತ್ರಗೆಯಿಂದ ಇದ್ದರೆ ಆ ಪಿಶಾಚ ಹೊಲೆಯ ಮನೆಗೆ ನುಸುಳಿ ಬಿಡುತ್ತದೆ. ಮಗುವನ್ನು ಕೊಂದು ತಾಯನ್ನು ಮಾಯ ಮಾಡುತ್ತೆ. ತಾನು ಆ ಹೆಂಗಸಿನಂತೆ ಹೊಲೆಮನೆಯಲ್ಲಿ ಮಲಗುತ್ತದೆ. ಒಂದು ತಿಂಗಳೋ, ಎರಡು ತಿಂಗಳೋ ಆ ಗಂಡನೊಂದಿಗೆ ಸಂಸಾರ ಮಾಡುತ್ತಾ ಇದ್ದು ಎಂದೋ ಒಂದು ದಿನ ಹೊರಗೆ ಹೋದದ್ದು ಮರಳಿ ಬರುವುದಿಲ್ಲ. ಈ ಕಾರಣದಿಂದ ಅನೇಕರು ತಮ್ಮ ಹೆಂಗಸರನ್ನು ಈ ಊರಿನಲ್ಲಿ ಹೆರಿಗೆಗೆ ನಿಲ್ಲಿಸಿಕೊಳ್ಳುವುದಿಲ್ಲ. ಇದಕ್ಕಾಗಿಯೇ ನಿಮಗೆ ನಾನು ಆ ಎಚ್ಚರಿಕೆಯ ಮಾತನ್ನು ಹೇಳಿದ್ದು. ಇಲ್ಲಿಯ ಹೆಣ್ಣು ಮಕ್ಕಳನ್ನೇ ಬೇರೆ ಕಡೆಗೆ ನಾವು ಕಳುಹಿಸುತ್ತಿರುವಾಗ ನೀವು ಎಲ್ಲಿಯೋ ಸುಖವಾಗಿರುವ ಹೆಂಡತಿಯನ್ನು ಇಲ್ಲಿಗೆ ಕರೆತರೋಣವೇಕೆ. ಆಕೆ ಇಲ್ಲಿ ಹೆರೋಣವೇಕೆ.

ಏನಾದರೂ ಹೆಚ್ಚು ಕಡಿಮೆಯಾಗಿ ನಿಮಗೆ ದುಃಖ ಬರೋಣವೇಕೆ? ಏನೋ ನಾನು ಮುದುಕ, ನೀವು ಚಿಕ್ಕ ವಯಸ್ಸಿನವರು, ಸುಖವಾಗಿರಲಿ ಎಂಬಾಸೆಯಿಂದ ಇದನ್ನು ಹೇಳಿದೆ, ಕ್ಷಮಿಸಬೇಕು"'' ಎಂದನು. ಇದನ್ನು ಕೇಳಿದ ನರಸಿಂಹನಿಗೆ ಎದೆ ಒಡೆದಂತೆ ಆಯಿತು. ಅವನು ಸ್ವಲ್ಪ ಮಟ್ಟಿಗೆ ಓದಿಕೊಂಡಿದ್ದು, ಇಂತಹವುಗಳನ್ನು ಅಷ್ಟಾಗಿ ನಂಬುವವನಲ್ಲ. ಆದರೆ ಸಮಯ ಮತ್ತು ಪರಿಸ್ಥಿತಿ ಅವನನ್ನು ತುಂಬಾ ಯೋಚನೆಗೆ ಒಳಮಾಡುತ್ತವೆ.

ಪುಟ್ಟಲಕ್ಷ್ಮೀಗೆ ತಂದೆ-ತಾಯಿ ಇಲ್ಲದ ಕಾರಣ ನರಸಿಂಹನು ಇದ್ದಲ್ಲಿಗೆ ತನ್ನ ಹೆಂಡತಿಯನ್ನು ಕರೆದುಕೊಂಡು ಬಂದನು. ಹೆರಿಗೆಯಾಯಿತು. ಮೂರನೆಯ ದಿನವೇ ಮಗು ತೀರಿಹೋಗಿತ್ತು. ಪುಟ್ಟಲಕ್ಷ್ಮಿ ತಾನು ಹೆತ್ತ ಮಗು ಹೀಗಾಯಿತೆ ಎಂದು ಬಹಳ ಗೋಳಾಡಿದಳು. ನರಸಿಂಹನ ಮನಸ್ಸಿನಲ್ಲಿ ಯಾವುದೋ ಭೀತಿ ಮೂಡಿತು. ಅವನು ತನ್ನ ಹೆಂಡತಿಯ ನಡೆನುಡಿಯನ್ನು ನೋಡುವುದಕ್ಕೆ ಮೊದಲು ಮಾಡಿದನು. ಅನೇಕ ಸಲ ತನ್ನ ಹೆಂಡತಿ ಮಲಗಿದ್ದಾಗ ಅವಳು ನಿದ್ದೆ ಮಾಡುತ್ತಿದ್ದಾಳೋ ಇಲ್ಲೋ ಎಂದು ಪರೀಕ್ಷೆ ಮಾಡುತ್ತಾನೆ. ಇದರಿಂದ ಹೆಂಡತಿಗೆ ತನ್ನ ಗಂಡ ಅನುಮಾನದಿಂದ ನೋಡುತ್ತಿರುವುದು ತಿಳಿದುಬರುತ್ತದೆ. ಕೊನೆಗೆ ತನ್ನ ಹೆಂಡತಿ ನಿದ್ರೆಯಲ್ಲಿ ಎಲ್ಲಿಗೂ ಹೋಗದಿರುವುದು ನರಸಿಂಹನಿಗೆ ಖಚಿತವಾಯಿತು. ಪಿಶಾಚದ ಕಥೆಯೇ ಅನ್ಯಾಯದ ಕಥೆಯೆಂದು ತೋರಿಬಂತು.

ಮಾಸ್ತಿಯವರು ವೃತ್ತಿಯಲ್ಲಿ ಒಬ್ಬ ಸರ್ಕಾರಿ ನೌಕರರಾಗಿದ್ದು, ನಾಡಿನಾದ್ಯಂತ ಸುತ್ತಾಡಿದ ಅನುಭವಗಳೇ ಕಥೆಗಳಾಗಿ ಮೂಡಿ ಬಂದಿವೆ. ಆಧುನಿಕತೆಯಿಂದ ಬಂದ ಉದ್ಯೋಗ ಹೇಗೆ ಮನುಷ್ಯನನ್ನು ಆಕ್ರಮಿಸಿಕೊಳ್ಳುತ್ತದೆ ಮತ್ತು ಅದನ್ನು ಹೇಗೆ ನಿಭಾಯಿಸಬೇಕೆಂದು ತಿಳಿಯುವಲ್ಲಿ ಮಾಸ್ತಿಯವರ ಕಥೆ 'ಮಲೆನಾಡಿನ ಪಿಶಾಚ' ಉತ್ತಮ ನಿದರ್ಶನವಾಗಿದೆ.

ಮಾಸ್ತಿಯವರು ಅನೇಕ ಕಥೆಗಳಲ್ಲಿ ತನ್ನ ಪರಿಚಯ ಇದ್ದವರು ಹೇಳಿದ ಕತೆಯನ್ನು ನಾನು ನಿಮಗೆ ಹೇಳುತ್ತೇನೆ ಎಂದು ಕಥೆ ಹೇಳಲು ಪ್ರಾರಂಭಿಸುತ್ತಾರೆ. ಮಲೆನಾಡಿನ ಪಿಶಾಚ ಕಥೆ ಕೂಡ ಆ ಗುಂಪಿನ ಕಥೆಗಳಲ್ಲಿ ಒಂದು. ಮಾಸ್ತಿಯವರು ಮಧುಗಿರಿಯಿಂದ ಬೆಂಗಳೂರಿಗೆ ಬಂದ ಮೇಲೆ ಒಂದು ಬಾರಿ ಅವರ ಹಿರಿಯ ಮಿತ್ರರಾದ ಶ್ರೀ ನವರತ್ನ ರಾಮರಾಯರೊಂದಿಗೆ ಬೇಸರ ಕಳೆಯಲು ಪ್ರವಾಸ ಹೋಗಿರುತ್ತಾರೆ. ಆಗ ಅವರ ಮಿತ್ರ ರೇಷ್ಮೆ ಇಲಾಖೆಯ ಮುಖ್ಯಾಧಿಕಾರಿ. ಪ್ರವಾಸದ ಒಂದು ದಿನ ನೆಲ್ಲಿಗೆರೆಯಲ್ಲಿ ಉಳಿದುಕೊಳ್ಳುತ್ತಾರೆ. ರಾತ್ರಿ ಊಟ ಮಾಡಿ ಮಲಗಿರುವಾಗ ರಾಮರಾಯರು ಯಾವುದೋ ಮಾತಿಗೆ ಒಂದು ಕಥೆ ಹೇಳಲು ಆರಂಭಿಸುತ್ತಾರೆ. ಅವರು ಹೇಳಿದ ಸಂಗತಿಯನ್ನು ಮಾಸ್ತಿಯವರು ಒಬ್ಬ ಪೋಸ್ಟ್‌ಮಾಸ್ಟರ್ ಜೀವನದಲ್ಲಿ ನಡೆದದ್ದು ಎಂದು ಕಲ್ಪಿಸಿ "ಮಲೆನಾಡಿನ ಒಂದು ಪಿಶಾಚ" ಕಥೆಯನ್ನು ಬರೆದೆನು ಎಂದು ಅವರ "ಸಾಹಿತ್ಯ ಪ್ರೇರಣೆ" ಕೃತಿಯಲ್ಲಿ ದಾಖಲಿಸಿದ್ದಾರೆ.

"ಜ್ಯೋಗ್ಯೋರ ಅಂಜಪ್ಪನ ಕೋಳೀಕತೆ" ಮಾಸ್ತಿಯವರ ಅತ್ಯುತ್ತಮ ಕತೆಯಾಗಿದೆ. ಇದು ಅನೇಕ ಕಾರಣಗಳಿಗಾಗಿ ಜನಪ್ರಿಯತೆ ಗಳಿಸಿದೆ. ಅಂಜಪ್ಪನು ಜ್ಯೋಗ್ಯೋರು ವೃತ್ತಿಗೆ ಸೇರಿದವನಾಗಿದ್ದು

ಅವನ ವೃತ್ತಿ ಮತ್ತು ಅನುಭವವನ್ನು ಕತೆಯಲ್ಲಿ ಕತೆಗಾರ ಚಿತ್ರಿಸಿದ್ದಾರೆ. ರಂಗಪ್ಪ ಈ ಕತೆಯ ಮುಖ್ಯ ಪಾತ್ರದಾರಿ. ತಾಲೂಕಿನಲ್ಲಿ ಬೆಂಚು ಮ್ಯಾಜಿಸ್ಟ್ರೇಟು ಆಗಿ ಕೆಲಸಕ್ಕೆ ಸೇರಿದ ಸಂದರ್ಭವನ್ನು ಕತೆಯು ಮುಖ್ಯವಾಗುವಂತೆ ಮಾಡುತ್ತದೆ. ಅಂಜಪ್ಪ ಒಂದು ಸಲ ಕೋಳಿಯ ಕಳ್ಳನೆಂದು ಕೋರ್ಟಿಗೆ ದಂಡ ಕಟ್ಟಿ ಬಂದಿದ್ದ. ಕೋಳಿಯನ್ನು ಅಂಜಪ್ಪ ಕದ್ದಿರಲಿಲ್ಲ ಆದರೆ ಶಿಕ್ಷೆಯನ್ನು ಮಾತ್ರ ಅನುಭವಿಸಿದ. ಕಾರಣ ಅವನಿಗೆ ಸಾಕ್ಷಿ ಹೇಳಲು ಯಾರು ಇರಲಿಲ್ಲ. ಇದನ್ನು ಹೊಸದಾಗಿ ಬೆಂಚುಮ್ಯಾಜಿಸ್ಟ್ರೇಟ್ ಆಗಿದ್ದ ರಂಗಪ್ಪನಿಗೆ ಹೇಳುತ್ತಾನೆ. ಸರ್ಕಾರಿ ಕೆಲಸವನ್ನು ಮಾಡುವಾಗ ಮೈ ತುಂಬಾ ಕಣ್ಣೀರಬೇಕು. ಜೊತೆಗೆ ಅನುಭವ ಕೂಡ ಮುಖ್ಯವಾಗಿ ಬೇಕು. "ಹೇಳೋ ಅಷ್ಟಕ್ಕೆ ನ್ಯಾಯ ಮಾಡೋದಾದ್ರೆ ನಿಮ್ಮಂಥ ಬುದ್ಧಿವಂತ್ರು ಯಾಕೆ ಬೇಕು? ಸತ್ಯಾವು ಏನು ಎಂತ ತಿಳಿಕೊಳ್ಳೋದು ಮೇಸ್ಟ್ರೀಟ್ಟ ಕೆಲ್ಸ"[೪೫] ಇದು ನ್ಯಾಯತೀರ್ಮಾನಕ್ಕೆ ಮುಖ್ಯವಾದುದು. ಇದನ್ನು ತಿಳಿಯಬೇಕಾದುದು ತುಂಬಾ ಮುಖ್ಯ ಎಂದು ಹೇಳುತ್ತಾನೆ.

'ಚೆನ್ನಮ್ಮ' ಕತೆ ಅನೇಕ ಕಾರಣಕ್ಕಾಗಿ ಮುಖ್ಯವಾದ ಕತೆಯಾಗಿ ಓದುಗರ ಮೆಚ್ಚುಗೆ ಪಡೆದಿದೆ. ಇಲ್ಲಿ ಪರಂಪರೆ ಮತ್ತು ಆಧುನಿಕತೆಗೆ ಸಂಬಂಧಿಸಿದ ಅನೇಕ ಅಂಶಗಳು ಸೇರಿಕೊಂಡಿವೆ. ನವೋದಯದ ಬಹುತೇಕ ಕತೆಗಾರರಲ್ಲಿ ಹಳ್ಳಿಯಿಂದ ನಗರಕ್ಕೆ ಉದ್ಯೋಗಕ್ಕಾಗಿ ಹೋಗುವ ಹುಡುಗರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ಅಂತಹ ಹುಡುಗರಲ್ಲಿ ರಾಮಪ್ಪ ಒಬ್ಬನು. ನಗರ ಎಂದರೆ ಅದೊಂದು ರೀತಿಯ ಭಯ ಮತ್ತು ಉತ್ಸಾಹವನ್ನು ಹಳ್ಳಿಗರಲ್ಲಿ ಮನೆ ಮಾಡಿರುತ್ತದೆ. ರಾಮಪ್ಪನಿಗೆ ತಂದೆ ತಾಯಿ ಬಂಧು-ಬಳಗ ಯಾರು ಇರುವುದಿಲ್ಲ. ಹಾಗಾಗಿ ಉದ್ಯೋಗಕ್ಕಾಗಿ ಬೆಂಗಳೂರಿಗೆ ಹೋಗಿರುತ್ತಾನೆ. ಗಿರಣಿಯಲ್ಲಿ ಕೆಲಸ ಸಿಕ್ಕಿದ ನಂತರ ಒಂದೆರಡು ಸಲ ಮಾತ್ರ ಹಳ್ಳಿಗೆ ಬಂದುಹೋಗಿರುತ್ತಾನೆ. ಮದುವೆಯಾದ ನಂತರ ಹೆಂಡತಿಯೊಂದಿಗೆ ಬೆಂಗಳೂರಿನಲ್ಲಿ ವಾಸಮಾಡಲು ನಿರ್ಧರಿಸುತ್ತಾನೆ. ಇವನ ಹೆಂಡತಿ ಚೆನ್ನಮ್ಮ ಮತ್ತು ಅತ್ತೆ ಮಾದವ್ವನಿಗೆ ನಗರದ ಜೀವನ ಇಷ್ಟ ಇರುವುದಿಲ್ಲ. ಆದರೆ ಅಳಿಯನೊಂದಿಗೆ ಮಗಳು ಇರಬೇಕು ಎಂಬ ಮಾತಿನಂತೆ ಚೆನ್ನಮ್ಮನಿಗೆ ಒಂದು ಮಗುವಾದಾಗ ತನ್ನ ಮಗಳನ್ನು ಅಳಿಯನೊಂದಿಗೆ ಬೆಂಗಳೂರಿಗೆ ಕಳುಹಿಸುತ್ತಾಳೆ.

ಚೆನ್ನಮ್ಮ ಬೆಂಗಳೂರಿಗೆ ಮೊದಲ ಸಲ ಹೋಗಿದ್ದರಿಂದ ಅವಳಲ್ಲಿ ಅನೇಕ ಪ್ರಶ್ನೆಗಳು ಮೂಡುತ್ತವೆ. ಆದರೆ ಗಂಡ ಜೊತೆಗೆ ಇರುವುದರಿಂದ ಅವುಗಳ ಕಡೆ ಗಮನ ಹರಿಸುವುದಿಲ್ಲ. ಸ್ವಲ್ಪ ದಿನಗಳ ನಂತರ ರಾಮಪ್ಪ ತನ್ನ ಹೆಂಡತಿಯ ಬಳಿ ಇಬ್ಬರು ಕೆಲಸಕ್ಕೆ ಹೋದರೆ ಹೆಚ್ಚು ಹೆಚ್ಚು ಹಣ ಬರುತ್ತದೆ ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಹೆಂಡತಿ "ಏನು ಉಟ್ಟರೂ ಯಾತರದು ಕೊಟ್ಟರೂ ಕೂಲಿ ಅನ್ನೋದು ಕೂಲೀನೆ. ನಮ್ಮ ಹೊಲದ ಮೇಲೆ ನಾವು ಬಿಸಿಲಲ್ಲಿ ದುಡಿದರೂ ತಪ್ಪಲ್ಲ. ಹೆರವರ ಮನೇಲಿ ನೆರಳಲ್ಲಿ ಕುಳಿತು ರಾಗಿ ಬೀಸಿಕೊಟ್ಟು ಕಾಸು ತಗೋಬಾರದು. ಊರಾಗಿನ ಹೊಲಾನ ಯಾರ ಕೈಗೊಕೊಟ್ಟು ಬೆಂಗಳೂರಿಗೆ ಹೋಗಿ ಚೆನ್ನಮ್ಮ ಕೂಲಿ ಮಾಡಿದಳು ಅಂದರೆ ಹೆತ್ತ ಮನೇಗೆ ಮರ್ಯಾದೇನಾ? ಹೊಕ್ಕ ಮನೇಗೆ ಮಾರ್ಯಾದೇನಾ?"[೪೬] ಎಂದು ನಗರದಲ್ಲಿ ಕೊಡುವ ಕೂಲಿ ಮತ್ತು ಹಳ್ಳಿಯಲ್ಲಿ ಕೊಡುವ ಕೂಲಿ ಒಂದೇ ಒಂದು ಚೆನ್ನಮ್ಮನವಾದ. ಹಳ್ಳಿಯಲ್ಲಿ ಬೆಳೆದ ಚೆನ್ನಮ್ಮ ತಮ್ಮ ಮನೆಯಲ್ಲಿ ಕೆಲಸಮಾಡಿದವರಿಗೆ ಕೂಲಿ ಕೊಡುತ್ತಿದ್ದಳು. ಆದರೆ

ಇಲ್ಲಿ ಕೂಲಿ ಮಾಡುವುದು ಎಂದರೆ ಅದು ಅವಮಾನ ಎಂದು ಭಾವಿಸುತ್ತಾಳೆ. ಅವಳ ಪ್ರಕಾರ ತಮ್ಮ ಮನೆ ಕೆಲಸ ಅಥವಾ ಹೊಲದಲ್ಲಿ ಕೆಲಸ ಮಾಡುವುದು ಬಿಟ್ಟು, ಬೇರೆಯವರ ಕೆಲಸ ಮಡುವುದು ಎಂದರೆ ಅದು ಕೂಲಿಯಾಗುತ್ತದೆ ಎಂಬ ಭಾವನೆ ಚೆನ್ನಮ್ಮನದು. ಆದರೆ ರಾಮಪ್ಪನ ವಾದ ಬೇರೆಯಾಗಿದೆ. ಅವನು ಹೇಳುವುದು "ಏ ಹೇ ಏನು ಕೂಲಿ ಅಂದರೆ ಹೊಲದ ಕೂಲಿ ಅಂತ ತಿಳಿದಾ? ಗಿರಣಿ ಕೂಲಿ, ಬಿಸಿಲಾಗೆ ನಿಲ್ಲೋದಿಲ್ಲ; ಬಟ್ಟೆ ಮಾಸೋದಿಲ್ಲ, ಅಲ್ಲಿ ನಾಲ್ಕು ಗಂಡಾಳಿಗೆ ಕೊಡೋ ಕೂಲಿ ಇಲ್ಲಿ ಒಂದು ಹೆಣ್ಣಾಳಿಗೆ ಕೊಡತ್ತಾರೆ. ಇಲ್ಲಿ ಕೂಲಿ ಮಾಡೋ ಹೆಣ್ಮಕ್ಕಳು ಉಡೋ ಬಟ್ಟೇನ ಹಳ್ಳಿಲಿ ಹತ್ತೆಕೆರೆ ಹೊಲದ ಯಜಮಾನತಿ ಉಡೋದಿಲ್ಲ. ಕೂಲಿ ಎಂದರೆ ಏನಾಯ್ತು?"[೪೭] ಎಂದು ತನ್ನ ಮಡದಿಯಲ್ಲಿರುವ ಭಾವನೆಯನ್ನು ಅಳಿಸಲು ರಾಮಪ್ಪ ಈ ಮಾತನ್ನು ಹೇಳುತ್ತಾನೆ.

ಹೀಗೆ ಹಳ್ಳಿ ಮತ್ತು ನಗರಕ್ಕಿರುವ ಸಂಬಂಧಗಳು ಮತ್ತು ವ್ಯತ್ಯಾಸಗಳನ್ನು ಈ ಕತೆಯಲ್ಲಿ ಮಾಸ್ತಿಯವರು ವಸ್ತುವಾಗಿ ಬಳಸಿದ್ದಾರೆ. ಇಲ್ಲಿ ರಾಮಪ್ಪ ಆಧುನಿಕತೆಯ ಭಾಗವಾದರೆ ಚೆನ್ನಮ್ಮ ಪರಂಪರೆಯ ಭಾಗವಾಗಿ ಕಂಡು ಬರುತ್ತಾಳೆ. ಇಡೀ ಈ ಕತೆಯು ಪರಂಪರೆಯಿಂದ ಆರಂಭವಾಗಿ ಪರಂಪರೆಯಲ್ಲಿಯೇ ಮುಗಿಯುತ್ತದೆ. ಆಧುನಿಕತೆಯು ಹೇಗೆ ಹಳ್ಳಿಯ ಜನರನ್ನು ಆಕರ್ಷಿಸಿತು ಮತ್ತು ಭಯವನ್ನುಂಟು ಮಾಡಿತ್ತು ಎಂಬುದನ್ನು ಕತೆಗಾರ ಸ್ಪಷ್ಟವಾಗಿ ಸರಳವಾಗಿ ಹೇಳಿದ್ದಾರೆ.

ಕತೆಯ ಕೊನೆಗೆ ಚೆನ್ನಮ್ಮ ಗಂಡನ ಮಾತಿನಂತೆ ಗಿರಣಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತಾಳೆ. ಅಷ್ಟೋತ್ತಿಗಾಗಲೆ ತನ್ನ ಗಂಡ ರಾಮಪ್ಪ ಹೆಚ್ಚು ಕುಡಿಯುವುದನ್ನು ಕಲಿತಿದ್ದ. ಒಂದು ಪರಂಗಿ ಹೆಂಗಸಿನ ಸಹವಾಸ ಮಾಡಿ ದುಡ್ಡೆಲ್ಲ ಹಾಳು ಮಾಡುತ್ತಿದ್ದ. ಮನೆಗೆ ಸರಿಯಾದ ಸಮಯಕ್ಕೆ ಬರುತಿರಲಿಲ್ಲ. ಒಂದೊಂದು ದಿನ ಮನೆಯನ್ನೇ ಮರೆತು ಎಲ್ಲೋ ಒಂದು ಕಡೆ ಮಲಗಿ ಬೆಳಗಿನ ಜಾವಕ್ಕೆ ಸೇರುತ್ತಿದ್ದನು. ಚೆನ್ನಮ್ಮನಿಗೆ ಗಿರಣಿಯ ಮಾಲೀಕ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ಕೊಡಲು ಆರಂಭಿಸಿದ. ಗಂಡನ ಸಾಲ ದಿನದಿಂದ ದಿನಕ್ಕೆ ಹೆಚ್ಚಾಯಿತು. ಚೆನ್ನಮ್ಮನ ಎಲ್ಲಿ ತನ್ನ ಶೀಲಕ್ಕೆ ಅವಮಾನವಾಗುತ್ತದೆ ಎಂದು ಹೆದರಿ ಗಿರಣಿಯ ಕೆಲಸ ಬಿಟ್ಟಳು. ದಿನದಿಂದ ದಿನಕ್ಕೆ ರಾಮಪ್ಪ ಮತ್ತು ಚೆನ್ನಮ್ಮನ ಸಂಸಾರದಲ್ಲಿ ಬಿರುಕು ಬಿಡಲು ಆರಂಭಿಸಿತು. ಚೆನ್ನಮ್ಮನಿಗೆ ನಗರದಲ್ಲಿ ಯಾರಾ ಪರಿಚಯ ಇರಲಿಲ್ಲ. ಕೊನೆಗೆ ಹಳ್ಳಿಗೆ ಬರಲು ರೆಡಿಯಾಗುತ್ತಾಳೆ. ಅವಳ ಗಂಡ ಸಾವನಪ್ಪುತ್ತಾನೆ. ಗಂಡನ ಮುಖವನ್ನು ಸಹ ನೋಡಲು ಚೆನ್ನಮ್ಮ ಹೋಗುವುದಿಲ್ಲ. ತನ್ನ ತಾಯಿ ಪರಿಪರಿಯಾಗಿ ಕೇಳಿಕೊಂಡರೂ "ಕೋಪಾ ಅಲ್ಲವ್ವ, ಕೋಪಾ ಅಲ್ಲ ಯಾರನ ಹೋಗಿ ನೋಡೋದು ಅಂತ ಜೀವಕ್ಕೆ ಬೇಜಾರ. ಮೊಕ ಅದೆ; ಮನಷಾ ಬೇರೆ ಅವೊತ್ತ ಹೋದ ನಿನ್ನಳಿಯ ನನಗಿದೆಲ್ಲ ಆಗಿಬಿಟ್ಟಿತ್ತು. ಈ ತಾಳಿ ಒಂದಿಟ್ಟುಕೊಂಡು ಊರಿಗೆ ಹೋಗೋಣ ಅಂತಿದ್ದಿ ಗಂಡನ ಬಿಟ್ಟು ತಾಳೀನೆನ್ ತಂದಿ ಅಂದ ಹನುಮಂತರಾಯ. ತಗೋವ್ವ. ಇದನೂ ಅದೇನಾರ ಮಾಡಿಬಿಡು"[೪೮] ಎಂದು ತನ್ನ ಗಂಡನಿಂದ ಅನುಭವಿಸಿದ ವೇದನೆಯನ್ನು ತಾಯಿಗೆ ಹೇಳುತ್ತಾಳೆ.

ಇಲ್ಲಿ ಮುಖ್ಯವಾಗಿ ಕಂಡುಬರುವುದು ಆಧುನಿಕತೆಯಿಂದ ನಗರಗಳಲ್ಲಿ ಹೇಗೆ ಶೋಷಣೆ ನಡೆಯುತ್ತದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ಜೊತೆಗೆ ನಗರಕ್ಕಿಂತ ಹಳ್ಳಿಯೇ ಶ್ರೇಷ್ಠ ಎಂಬ ನಿಲುವು ಸ್ಪಷ್ಟವಾಗಿದೆ.

'ದುರದೃಷ್ಟದ ಹೆಣ್ಣು' ಈ ಕತೆಯಲ್ಲಿ ಕೂಡ ಉದ್ಯೋಗಕ್ಕಾಗಿ ಬೆಂಗಳೂರಿಗೆ ಹೋಗುವುದು. ಅಲ್ಲಿ ಅನುಭವಿಸುವ ಸಮಸ್ಯೆಯನ್ನೇ ವಸ್ತುವಾಗಿ ಒಳಗೊಂಡಿದೆ. ಕತೆಯಲ್ಲಿ ಬರುವ ಕಥಾನಾಯಕ ಮದುವೆಯಾಗಿ ಬೆಂಗಳೂರಿಗೆ ಹೋಗಬೇಕೆಂದುಕೊಂಡಿರುತ್ತಾನೆ. ಆಗ ಊರಿನಲ್ಲಿ ಐದು ಜನ ಹೆಣ್ಣು ಮಕ್ಕಳಿರುವ ತಂದೆಯನ್ನು ಕೇಳಿದಾಗ, ಹುಡುಗಿಯ ತಂದೆ ಪ್ರೀತಿಯಿಂದ ಒಪ್ಪಿಕೊಂಡು ಮದುವೆ ಮಾಡುತ್ತಾನೆ. ಮದುವೆಯಾದ ನಂತರ ಅಳಿಯ ಮತ್ತು ಮಗಳನ್ನು ಬೆಂಗಳೂರಿಗೆ ಕಳುಹಿಸುತ್ತಾನೆ. ಬೆಂಗಳೂರಿಗೆ ಬಂದ ಅಳಿಯ ಮಾರ್ಕೆಟ್ ಬಳಿ ನಗರದ ಒಂದು ಭಾಗದಲ್ಲಿ ಒಂದು ಬೀದಿಯಲ್ಲಿ ವಿಚಾರಿಸಿ ಒಂದು ಮನೆಯನ್ನು ತೆಗೆದುಕೊಂಡ. ಅದು ಮೂರು ಕೋಣೆಗಳಿಂದ ಕೂಡಿದ ಮನೆ. ಅಲ್ಲಿ ತರುಣಿ ಬಲ್ಲವಳೇನಲ್ಲ; ಆದರೆ ಗಂಡಹೆಂಡಿರ ಸಂಬಂಧ ಏನೆಂದು ಬಲ್ಲಳು.

ಮದುವೆಯಾಗಿದ್ದ ನವಜೋಡಿಗಳು ಬೆಂಗಳೂರಿಗೆ ಬಂದು ಮೂರು ದಿನಗಳಾದರೂ ತರುಣ ಹುಡುಗಿಯೊಡನೆ ಸಂಬಂಧವನ್ನು ಬೆಳೆಸಲಿಲ್ಲ. ಒಬ್ಬರಿಗೊಬ್ಬರು ಹೊಸಬರು ಎಂಬ ಕಾರಣದಿಂದ ಹುಡುಗಿ ಕೆಲವು ದಿನಗಳನ್ನು ಕಳೆಯುತ್ತಾಳೆ. ಒಂದು ದಿನ ತರುಣ ನನಗೆ ಕೆಲಸ ಸಿಕ್ಕಿದೆ ದಿನಕ್ಕೆ ಮೂರು ನಾಲ್ಕು ರೂಪಾಯಿ ಅಷ್ಟು ಕೂಲಿ ದೊರೆಯುತ್ತದೆ ಎಂದು ಹೇಳಿದ. ವಾರ ಕಳೆದ ನಂತರ ಗಂಡ ಕೆಲಸದಿಂದ ಮನೆಗೆ ಬರುವಾಗ ಒಬ್ಬ ಗಂಡಸನ್ನ ಮನೆಗೆ ಕರೆದು ತರುತ್ತಾನೆ. ಅವನಿಗೆ ಚಹ ಮಾಡುವಂತೆ ಹೆಂಡತಿಗೆ ಹೇಳಿ ಚಹ ಕುಡಿದ ನಂತರ, ಗಂಡಸನ್ನ ಮನೆಯಲ್ಲಿ ಬಿಟ್ಟು, ತರುಣ ಪೇಟೆಗೆ ಹೋಗಿಬರುತ್ತೇನೆಂದು ಹೇಳಿ ಹೊರಟು ಹೋದನು. ಹೋಗುವಾಗ ಮನೆಯ ಬಾಗಿಲನ್ನು ಮುಚ್ಚಿಕೊಂಡು ಹೋಗಿರುತ್ತಾನೆ. ಮನೆಗೆ ಬಂದ ಗಂಡಸು ತರುಣಿಗೆ ಹೂವಿನ ಪೊಟ್ಟಣ, ಸೀರೆಯನ್ನು ಕೊಡುತ್ತಾನೆ. ಅವಳನ್ನು ತನಗೆ ಸಹಕರಿಸುವಂತೆ ಕೇಳುತ್ತಾನೆ. ತರುಣಿ ಇದನ್ನು ಒಪ್ಪದಿದ್ದಾಗ ಬಂದವನು ಮನೆಬಿಟ್ಟು ಹೊರಗೆ ಹೋಗುತ್ತಾನೆ. ಇದರಿಂದ ತರುಣಿಯಲ್ಲಿ ಭಯ ಮತ್ತು ಆತಂಕ ಮನೆ ಮಾಡುತ್ತವೆ. ಮನೆಗೆ ಬಂದ ಗಂಡನನ್ನು ವಿಚಾರಿಸಿದಾಗ "ಅಯ್ಯೋ ಹುಚ್ಚಿ, ನನ್ನ ಗಂಡ ಅಂದು ನೀನು ಪಡೋ ಸುಖ ಏನು? ನನಗೆ ಬಹಳ ಅಂದರೆ ದಿನಕ್ಕೆ ಮೂರು ನಾಲ್ಕು ರೂಪಾಯಿ ಕೂಲಿಸಿಗುತ್ತೆ. ಈ ಮನುಷ್ಯ ಇಲ್ಲಿಗೆ ಬರೋ ಮುನ್ನ ಹತ್ತು ರೂಪಾಯಿ ಕೊಟ್ಟ. ಇಕೋ ರೂಪಾಯಿ, ಇದು ನಿನ್ನದು ನೀನೇ ಇಟ್ಟುಕೊ, ನೀನು ಉಂಡು ಉಟ್ಟು ರಾಣಿಯಂತೆ ಬಾಳು. ನನ್ನನ್ನು ನೋಡಿಕೊ ನಾನೊಬ್ಬ ಕೂಲಿ; ನೀನು ನನ್ನ ಹೆಂಡ್ತಿ ನನ್ನ ಬಾಳುವೆ ಏನು ಬಾಳುವೆ? ಇದು ಬಾಳುವೆ. ಕೈ ತುಂಬ ಹಣ ಸುಖವಾಗಿರಬಹುದು"[೪೯] ಎಂದು ಹೇಳುತ್ತಾನೆ. ಇದರಿಂದ ಹೆಂಡತಿಗೆ ತನ್ನ ಗಂಡ ತನನ್ನು ಏಕೆ ಮದುವೆ ಆಗಿದ್ದಾನೆ ಎಂಬುದು ತಿಳಿಯುತ್ತದೆ. ರಾತ್ರಿಯೆಲ್ಲ ಅನೇಕ ಸಲ ಯೋಚಿಸಿದಾಗ ಹಳ್ಳಿಗೆ ಹೋಗುವ ತೀರ್ಮಾನ ಮಾಡುತ್ತಾಳೆ.

ಆದರೆ ಈಗ ವಾಪಸ್ಸು ಹಳ್ಳಿಗೆ ಹೋದರೆ ಜನ ನಗುತ್ತಾರೆ. ತಾಯಿ ಮನೆಯಲ್ಲಿಯೇ ಉಳಿದರೆ ತಂದೆ-ತಾಯಿಗೆ ಕೆಟ್ಟ ಹೆಸರು. ಹಾಗಾಗಿ ಇದು ಸರಿಯಲ್ಲ ಏನಾದರೂ ಆಗಲಿ ಸಹಿಸಿಕೊಂಡು ಗಂಡನ ಜೊತೆಗೆ ಬಾಳಬೇಕು ಎಂದು ತೀರ್ಮಾನಿಸುತ್ತಾಳೆ. ಗಂಡನಿಗೆ ಕೆಲವು ಷರತ್ತುಗಳನ್ನು ಹೇಳಿ ತನ್ನ ದೇಹದ ವ್ಯಾಪಾರವನ್ನು ಆರಂಭಿಸುತ್ತಾಳೆ. ಹೀಗೆ ತನ್ನ ಜೀವನವನ್ನು ನಡೆಸುತ್ತಿರುವಾಗ ಸ್ವಲ್ಪ ಕಿರಿಯ, ರೂಪವಂತನಾದ ಗಂಡಸನ್ನು ತನ್ನ ಗಂಡ ಕರೆತರುತ್ತಾನೆ. ಆ ತರುಣನನ್ನು ಒಪ್ಪಿಕೊಳ್ಳುತ್ತಾಳೆ, ತನ್ನ ಗೋಳನ್ನು ತೋಡಿಕೊಂಡಳು, ತನಗೆ ಮದುವೆ ಆಗಿಲ್ಲ ಎಂದರೆ ನನನ್ನು ಮದುವೆಯಾಗು ಎನ್ನುತ್ತಾಳೆ. ಅದಕ್ಕೆ ಆ ತರುಣ ನಿನ್ನ ಗಂಡ ಇದಾನಲ್ಲ ಎಂದಾಗ ತರುಣಿ "ಅವನು ಗಂಡ ಆದರೆ ನಿನ್ನನ್ನು ನನ್ನ ಹತ್ತಿರ ಬಿಡುತ್ತಿದ್ದನೆ? ಬೇರೆ ಹತ್ತು ಜನವನ್ನ ನನ್ನ ಬಳಿಗೆ ಕರೆತರುತ್ತಿದ್ದನೆ? ಮದುವೆ ಆದ, ದಿಟ; ಆಗಿ ಏನು? ಅವನು ಗಂಡ ಅಲ್ಲ. ಬಯಸಿದವರಿಗೆ ನನ್ನ ಕೊಟ್ಟು, ಕಾಸು ಗಳಿಸುತಾ ಇದ್ದಾನೆ. ನೀನು ಮನಸ್ಸು ಮಾಡಿದರೆ ನಾನು ಬದುಕಿಕೊಳ್ಳುತ್ತೇನೆ. ನೀನು ನನಗೆ ಬೇಕು. ನಾನು ನಿನಗೆ ಬೇಕೇ?"[೫೦] ಎಂದಾಗ ಆ ತರುಣ ಆ ಹೆಂಗಸನ್ನ ಮದುವೆಯಾಗಲು ಒಪ್ಪಿಕೊಳ್ಳುತ್ತಾನೆ. ಇದನ್ನು ಆ ಹೆಂಗಸಿನ ಗಂಡ ಒಪ್ಪುವುದಿಲ್ಲ. ಆದರೆ ಆಕಸ್ಮಾತಾಗಿ ಹುಡುಗಿಯ ಗಂಡ ಸಾಯುತ್ತಾನೆ. ಸತ್ತ ಹೆಣವನ್ನು ಆ ತರುಣ ಬನ್ನೇರುಘಟ್ಟ ರಸ್ತೆಯಲ್ಲಿ ಹಾಕಿರುತ್ತಾನೆ. ಇದು ಗೊತ್ತಾಗಿ ಆ ತರುಣನನ್ನು ಕೋರ್ಟ್‌ಗೆ ವಿಚಾರಣೆಗೆ ಒಳಪಡಿಸುತ್ತಾರೆ. ಹೀಗೆ ಈ ಕತೆಯಲ್ಲಿ ಉದ್ಯೋಗದ ಕುರಿತು ಕತೆಗಾರ ಚಿತ್ರಿಸಿದ್ದಾರೆ. ಹಳ್ಳಿಯಿಂದ ನಗರಕ್ಕೆ ಹೋದ ಹಳ್ಳಿಯ ಜನ ಹೇಗೆ ಸಮಸ್ಯೆಗೆ ಒಳಗಾಗುತ್ತಾರೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಮಾಸ್ತಿಯವರು ಕತೆಯನ್ನು ಎಣೆದಿದ್ದಾರೆ.

೪.೫. ಶಿಕ್ಷಣ

'ರಂಗನ ಮದುವೆ' ಮಾಸ್ತಿಯವರ ಮೊದಲ ಸಣ್ಣಕತೆ. ಇದರಲ್ಲಿ ಶಿಕ್ಷಣ ಕುರಿತ ವಿವರಗಳಿವೆ. ರಂಗ ಶಿಕ್ಷಣ ಪಡೆದು ಬಂದಿದ್ದರಿಂದ ಅವನಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ಕಾಣಬಹುದು. ಬೆಂಗಳೂರಿನಿಂದ ರಂಗ ಹಳ್ಳಿಗೆ ಬಂದಾಗ ಇಡೀ ಹಳ್ಳಿಗೆ ಹಳ್ಳಿಯೇ ರಂಗನನ್ನು ನೋಡಲು ತುದಿಗಾಲ ಮೇಲೆ ನಿಂತಿರುತ್ತದೆ. ಶಿಕ್ಷಣವೇ ಅಪರೂಪವಾಗಿದ್ದ ಸಂದರ್ಭದಲ್ಲಿ, ಅದನ್ನು ವಸ್ತುವಾಗಿ ಬಳಸಿಕೊಂಡವರು ಮಾಸ್ತಿಯವರು.

ರಂಗ ಇಂಗ್ಲೀಷ್ ಶಿಕ್ಷಣವನ್ನು ಪಡೆದಿದ್ದರಿಂದ ಅವನು ಆಲೋಚಿಸುವ ವಿಧಾನವೇ ಬೇರೆಯಾಗಿದೆ. ಮಾಸ್ತಿಯವರು ಆಧುನಿಕತೆಯನ್ನು ಪರಿಚಯಿಸುವಾಗ ಆತಂಕದಿಂದ ಅದನ್ನು ನೋಡುತ್ತಾರೆ. ಕಾರಣ ಪರಂಪರೆಯಿಂದ ಸಾಗಿಬಂದ ಜೀವನ ವಿಧಾನ, ಆಚರಣೆ, ನಂಬಿಕೆ ಇತ್ಯಾದಿಗಳು ಎಲ್ಲಿ ಆಧುನಿಕತೆಗೆ ಒಳಗಾಗಿ ನಾಶವಾಗುತ್ತವೆ ಎಂಬ ಭಯದಿಂದ ಆಧುನಿಕತೆ ಮಾಸ್ತಿಯವರ ಕತೆಗಳಲ್ಲಿ ವಸ್ತುವಾಗಿ ಕಂಡುಬರುತ್ತದೆ.

'ರಂಗಪ್ಪನ ಕೋರ್ಟ್‌ಷಿಪ್' ಕತೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ವಿವರಗಳು ಸಿಗುತ್ತವೆ. ಕನ್ನಡ ಭಾಷೆ ಮತ್ತು ಇಂಗ್ಲೀಷ್ ಭಾಷೆಯನ್ನು ಹೋಲಿಕೆ ಮಾಡುತ್ತಾರೆ. ಇಂಗ್ಲೀಷ್‌ನಲ್ಲಿ "ಸಿಕ್‌ಸ್ಪೀನ್"

ಆದರೆ ಕನ್ನಡದಲ್ಲಿ ಅದು ಹದಿನಾರು ಆಗುತ್ತದೆ ಎಂದಾಗ ಇಂಗ್ಲೀಷ್‌ಗೂ ಕನ್ನಡಕ್ಕೂ ವ್ಯತ್ಯಾಸವೇನು? ಎಂಬ ಪ್ರಶ್ನೆಯನ್ನು ಕತೆಗಾರ ಕತೆಯಲ್ಲಿ ಹೇಳಿದ್ದಾನೆ. ಹಾಗೆಯೇ ಕನ್ನಡದಲ್ಲಿ ಗಂಡ ಹೆಂಡತಿಯರು ಇಂಗ್ಲೀಷ್‌ನವರಲ್ಲೂ ಗಂಡ ಹೆಂಡತಿಯರೇ ಎಂದಾಗ ಕನ್ನಡ ಭಾಷೆ ಇಂಗ್ಲೀಷ್‌ಗಿಂತ ಕಡಿಮೆ ಹೇಗೆ? ಎಂಬ ಅಂಶವನ್ನು ಮಾಸ್ತಿಯವರು ಗುರುತಿಸುತ್ತಾರೆ.

ಭೂತವನ್ನು ಮತ್ತು ವರ್ತಮಾನವನ್ನು ಮಾಸ್ತಿಯವರು ಮುಖಾಮುಖಿ ಮಾಡುವ ಅನೇಕ ಸನ್ನಿವೇಶಗಳು ಅವರ ಕತೆಗಳಲ್ಲಿವೆ. "ನಮ್ಮ ಕಾಲದಲ್ಲಿ ಕಾಗದಗಳು ಇರಲಿಲ್ಲ. ಗಂಡನು ಹೆಂಡತಿಗೆ ಕಾಗದ ಬರೆಯುತ್ತಿರಲಿಲ್ಲ. ಹೆಂಡತಿ ಗಂಡನಿಗೆ ಕಾಗದ ಬರೆಯುತ್ತಿರಲಿಲ್ಲ. ಒಂದು ಮನೆಯಲ್ಲಿದ್ದರೂ ಕೂಡ ಎಲ್ಲಿಯಾದರೂ ಎದುರಿಗೆ ಬಂದರೆ, ದೊಡ್ಡವರಿಗೆ ಹೆದರಿ ಕಣ್ಣು ಮುಚ್ಚಿಕೊಂಡಿರಬೇಕಾಗಿತ್ತು. ಇಲ್ಲದಿದ್ದರೆ ಮೂಕ ಜೀವಿಗಳಂತೆ ದೂರ ದೂರದಿಂದ ಒಬ್ಬರನ್ನೊಬ್ಬರು ನೋಡಬಹುದಾಗಿತ್ತು. ಇಷ್ಟರ ಮಟ್ಟಿಗಿರುವಾಗ ನಾಗರೀಕತೆ, ಕಾಗದ ಬರೆಯುವುದು ಹೇಗೆ? ಈಗ ಅದೆಲ್ಲಾ ಬಂದಿದೆ. ಪೋಸ್ಟಾಫೀಸು ಒಂದಿದೆಯಲ್ಲ. ನಮ್ಮವರ ಕಾಸನ್ನು ಕಿತ್ತುಕೊಳ್ಳುವುದಕ್ಕೆ ಕಾಗದ ಬರೆದದ್ದೂ ಬರೆದದ್ದೆ; ಉಪ್ಪಿಲ್ಲ, ಕಾರವಿಲ್ಲ, ಬೇಸರವಾಗುವ ಹಾಗೆ ಕಾಗದ ಬರೆಯುವುದು. ಪೋಸ್ಟಾಫೀಸಿಗೆ ಲಾಭ"[೫೧] ಅಂದರೆ ಪೋಸ್ಟಾಫೀಸ್ ಆಧುನಿಕತೆಯಿಂದ ಬಂದಿದೆ. ಹಿಂದಿನ ಕಾಲದಲ್ಲಿ ಪೋಸ್ಟಾಫೀಸ್ ಇರಲ್ಲಿಲ್ಲ. ಗಂಡ ಹೆಂಡತಿಯರ ನಡುವೆ ಕಾಗದ ಬರೆಯುವ ಸಂದರ್ಭಗಳು ಇರಲಿಲ್ಲ. ಆದರೂ ಕೂಡ ಗಂಡ ಹೆಂಡತಿಯರು ಸುಖ, ನೆಮ್ಮದಿಯಿಂದ ಇರುತ್ತಿದ್ದರು. ಆದರೆ ಈಗ ಕಾಗದ ಬರೆಯುವಲ್ಲಿ ರಂಗ ಮತ್ತು ರತ್ನಮ್ಮನ ಮನಸ್ಥಿತಿಯನ್ನು ನಾವು ಈ ಕತೆಯಲ್ಲಿ ಕಾಣಬಹುದು. ಕಾಗದ ಬರೆಯುವ ಸನ್ನಿವೇಶಗಳೇ 'ರಂಗಪ್ಪನ ಕೋರ್ಟ್‌ಷಿಪ್' ಕತೆಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿವೆ.

'ರಂಗಸಾಮಿಯ ಅವಿವೇಕ' ಕತೆಯಲ್ಲಿ ರಂಗಸಾಮಿ ಶಿಕ್ಷಣವನ್ನು ಪಡೆಯಲು ಕಾಲೇಜಿಗೆ ಹೋಗುವ ಹುಡುಗನಾಗಿ ಕಂಡುಬರುತ್ತಾನೆ. ಅವನಿಗೆ ಆಧುನಿಕತೆಯ ಆಯಾಮ ಇರುವುದರಿಂದ ಮುಖಕ್ಷೌರ ಮಾಡಿಸಿಕೊಳ್ಳುತ್ತಿದ್ದನು. ತಲೆಯ ಕೂದಲನ್ನು ಮೊಟಕಾಗಿ ಕತ್ತರಿಸಿ ಪರಂಗಿಯವರಂತೆ ಬೈತಲೆ ಬಿಡಿಸಿ ಆ ಕಡೆ ಈ ಕಡೆ ತಿರುಗಿಸಿರುವನು. ರಂಗಸಾಮಿಗೆ ಸೀತೆ ಎನ್ನುವ ಹುಡುಗಿಯೊಂದಿಗೆ ಮದುವೆಯಾಗುತ್ತದೆ. ಸೀತೆ ವಯಸ್ಸಿನಲ್ಲಿ ರಂಗಸಾಮಿಗಿಂತ ತುಂಬಾ ಚಿಕ್ಕವಳಾಗಿದ್ದರಿಂದ ಅವನ ಮನಸ್ಸು 'ಸೀತೆ ತನಗೆ ಸರಿಯಾದ ಹೆಂಡತಿ ಅಲ್ಲ' ಎಂದು ಪದೇ ಪದೇ ಹೇಳುತ್ತಿರುತ್ತದೆ. ಇಂತಹ ಸಮಯದಲ್ಲಿ ಅವನಿಗೆ ಇಂದಿರಾದೇವಿಯ ನೆನಪಾಗುತ್ತದೆ. "ಇಂದಿರಾದೇವಿ ಸೀತೆಗಿಂತ ಎರಡು ಮೂರು ವರುಷ ದೊಡ್ಡವಳು. ಎತ್ತರವಾದ ಹೆಂಗಸು; ಸೀತೆಯ ದೇಹಕ್ಕಿಂತಲೂ ತುಂಬಿದ ದೇಹ ನಡೆನುಡಿಯಲ್ಲಿ ಚೆನ್ನಾಗಿ ಅರಿತ ಹೆಂಗಸು ಎಂಬಂತೆ ತೋರುತ್ತಿದ್ದಳು. ಕಣ್ಣುಗಳು ದೊಡ್ಡವಾಗಿರುವುವು. ಕೋಪಿಸಿಕೊಂಡರೆ ಮತ್ತಷ್ಟು ದೊಡ್ಡವಾಗುವುದು."[೫೨] ಒಟ್ಟಾರೆಯಾಗಿ ಇಂದಿರಾದೇವಿ ಸುಂದರವಾಗಿದ್ದಳು. ಇದು ರಂಗಸಾಮಿಯಲ್ಲಿ ಹುಚ್ಚು ಹೆಚ್ಚಾಗುವಂತೆ ಮಾಡಿತು. ನರಸಿಂಹಮೂರ್ತಿಗಿಂತ ನಾನೇ ಇಂದಿರಾ ದೇವಿಗೆ ತಕ್ಕ ಗಂಡ ಎಂದು ಹಲವು ಬಾರಿ

ಯೋಚಿಸಿರುತ್ತಾನೆ. ಅಜ್ಞನಂತಿರುವ ನರಸಿಂಹ ಮೂರ್ತಿಗೆ ಇಂದಿರಾದೇವಿಯಂತೆ ಹೆಂಡತಿ ಸಿಗಬಾರದಾಗಿತ್ತೆಂದುಕೊಳ್ಳುತ್ತಾನೆ.

ಹೀಗೆ ದಿನದಿಂದ ದಿನಕ್ಕೆ ಇಂದಿರಾದೇವಿಗೆ ರಂಗಸಾಮಿ ದಾಸನಾಗುತ್ತಾನೆ. ಅವಳನ್ನು ಕುರಿತು ತನ್ನ ಹೆಂಡತಿಯ ಬಳಿ ಗುಣಗಾನ ಮಾಡುತ್ತಾನೆ. ನರಸಿಂಹಮೂರ್ತಿಯವರನ್ನು ಮಾತಾಡಿಸುವ ನೆಪದಲ್ಲಿ ಇಂದಿರಾದೇವಿಯನ್ನು ನೋಡಲು ಮನೆಗೆ ಹೋಗುತ್ತಾನೆ. ಸೀತೆ ಊರಿಗೆ ಹೋಗಿದ್ದ ಸಂದರ್ಭದಲ್ಲಿ, ಇಂದಿರಾದೇವಿಯನ್ನು ಕೂಡಲು ಅವನ ಮನಸ್ಸು ತವಕಿಸುತ್ತದೆ. ಅಂದರೆ ರಂಗಸಾಮಿಯ ಪ್ರಕಾರ ತಾನು ಆಧುನಿಕನಾಗಿದ್ದು, ಓದುಬಲ್ಲವನಾಗಿದ್ದು, ನೋಡಲು ಸುಂದರವಾಗಿರುವುದರಿಂದ ಎಲ್ಲಾರು ನನ್ನನ್ನು ಒಪ್ಪಿಕೊಳ್ಳುತ್ತಾರೆಂಬ ಭಾವನೆ ಬುಡಮೇಲಾಗುತ್ತದೆ. ಶಿಕ್ಷಣ ಪಡೆದ ತಕ್ಷಣ ಎಲ್ಲಾವೂ ಸಾಧ್ಯ ಎಂಬ ಮಾತಿಗೆ ಮಾಸ್ತಿಯವರು ಪರಂಪರೆಯಲ್ಲಿ ಅದಕ್ಕೆ ಉತ್ತರವನ್ನು ಕೊಡುವ ಕೆಲಸ ಮಾಡುತ್ತಾರೆ. ಇಂದಿರಾದೇವಿಗೆ ಪರಂಪರೆಯ ಆಯಾಮ ಇರುವುದರಿಂದ ಅವಳು ತನ್ನ ಪತಿಯೇ ಸರ್ವಸ್ವ ಎಂದು ನಂಬಿ ಅದಕ್ಕೆ ಬದ್ಧಳಾಗಿರುತ್ತಾಳೆ. ಇಲ್ಲಿ ಆಧುನಿಕವಾದ ಶಿಕ್ಷಣ ಪರಂಪರೆಯ ಶ್ರೇಷ್ಠತೆಗೆ ತಲೆಬಾಗುವುದನ್ನು 'ರಂಗಸಾಮಿಯ ಅವಿವೇಕ' ಕತೆಯಲ್ಲಿ ನೋಡಬಹುದು.

'ನಮ್ಮ ಮೇಷ್ಟರು' ಕತೆಯಲ್ಲಿ ಅತಿಯಾದ ಹಾಸ್ಯ ಪ್ರಸಂಗಳಿವೆ. ಜೊತೆಗೆ ಅಷ್ಟೇ ಮುಖ್ಯವಾದ ಸಮಸ್ಯೆಗಳು ಮನೆ ಮಾಡಿರುವುದನ್ನು ಕತೆಗಾರರು ತುಂಬಾ ಸುಂದರ ಮತ್ತು ಸರಳವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಭಾರತಕ್ಕೆ ಇಂಗ್ಲೀಷ್ ಶಿಕ್ಷಣ ಕಾಲಿಡುವ ಸಂದರ್ಭವನ್ನು ಈ ಕತೆಯಲ್ಲಿ ವಸ್ತುವಾಗಿ ಬಳಸಿಕೊಂಡಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ಯಾವ ಯಾವ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂಬುದಕ್ಕೆ ಈ ಕತೆ ಉತ್ತಮ ನಿದರ್ಶನವಾಗಿದೆ. ಒಂದು ಕಡೆ ಕುಟುಂಬ, ಮತ್ತೊಂದು ಕಡೆ ಶಾಲೆ. ಇದರ ಜೊತೆಗೆ ವಿದ್ಯಾರ್ಥಿಗಳನ್ನು ನಿಭಾಯಿಸುವ ಕ್ರಮ. ಒಂದು ಕಡೆಯಾದರೆ, ಶಾಲೆಯ ವೀಕ್ಷಣೆಗೆ ಬರುವ ಇನ್ಸ್‌ಪೆಕ್ಟರ್‌ನನ್ನು ಒಪ್ಪಿಸುವಂತೆ ಶಿಕ್ಷಕರು ತಯಾರಿಯಾಗಿರಬೇಕು. ಇದರಲ್ಲಿ ಯಾವುದಾದರೂ ಒಂದು ಹೆಚ್ಚು ಕಡಿಮೆಯಾದರೆ ನೌಕರಿಯೇ ಕಳೆದುಕೊಳ್ಳಬೇಕಾಗುತ್ತದೆಂಬ ಭಯ. ಹೀಗೆ ಆಧುನಿಕತೆಯ ಭಾಗವಾಗಿ ಬಂದ ಶಿಕ್ಷಣ ಹೇಗೆಲ್ಲ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ ಎಂಬುದನ್ನು 'ನಮ್ಮ ಮೇಷ್ಟರು' ಕತೆ ವಿವರಿಸುತ್ತದೆ.

ಶಿಕ್ಷಣದಿಂದ ಹೇಗೆ ಪರಂಪರೆಯನ್ನು ಮುರಿಯಲು ಸಾಧ್ಯ ಎಂಬುದಕ್ಕೆ ಮಾಸ್ತಿಯವರು ನಮ್ಮ ಮೇಷ್ಟರು ಕತೆಯಲ್ಲಿ ಒಂದು ನಿದರ್ಶನವನ್ನು ಹೇಳುತ್ತಾರೆ. "ಒಂದು ಸಲ ಬೀದಿಯಲ್ಲಿ ಕೆಲವು ಮಕ್ಕಳು ಆಡುತ್ತಿರುವ ಕಡೆಗೆ ನಾಗರಹಾವು ಬರುತ್ತಿರುವುದನ್ನು ಕಂಡು ಅವರು, ನಾಗರಹಾವನ್ನು ಕೊಲ್ಲಕೂಡದೆಂಬ ಶಾಸ್ತ್ರವನ್ನು ತಿಳಿದಿದ್ದರೂ, ಅದನ್ನು ಒಂದು ಕಡೆ ಇಟ್ಟು, ಅದು ತನ್ನ ಮೇಲೆ ಬಿದ್ದರೆ ಸಾವೇ ನಿಜವೆಂದು ತಿಳಿದಿದ್ದರೂ ಆ ಭಯವನ್ನು ಒಂದು ಕಡೆ ಇಟ್ಟು ಹಾವನ್ನು ನೋಡಿ ಬಡಿದು ಕೊಂದರು. ಜನವೆಲ್ಲಾ ಸುತ್ತಲೂ ಸೇರಿ ಹಾರುವನ ಧೈರ್ಯವನ್ನು ಹೊಗಳುತ್ತಿರುವಾಗ

ಮೇಷ್ಟರು ನಸ್ಯದ ಬುರುಡೆಯನ್ನು ತೆಗೆದು ಒಂದು ದೊಡ್ಡ ಚಿಟಿಕೆ ನಸ್ಯವನ್ನು ಆ ಹಾವಿನ ತಲೆಯ ಮೇಲೆ ಹಾಕಿದರು."[೫೩] ಇಲ್ಲಿ ಬರುವ ಮೇಷ್ಟರು ಬ್ರಾಹ್ಮಣನಾಗಿದ್ದು, ಪರಂಪರೆಯನ್ನು ಚಾಚು ತಪ್ಪದೇ ಪಾಲಿಸುತ್ತಿರುತ್ತಾನೆ. ಆದರೆ ಜೀವನ ಮುಖ್ಯ ಆದಾಗ ಶಿಕ್ಷಣ ಅದನ್ನು ಕೊಡುತ್ತದೆ.

'ನಳನಿಯ ತಂದೆ' ಕತೆಯಲ್ಲಿ ಬರುವ ರಾಮನಾಥ ಅಯ್ಯರ್ ಮಧುರೆಯಲ್ಲಿ ತಕ್ಕಷ್ಟು ಆದಾಯವುಳ್ಳ ಒಬ್ಬ ಲಾಯರು. ಅವರ ಮಗಳೇ ಲಕ್ಷ್ಮೀ. ಲಕ್ಷ್ಮೀಗೆ ಹನ್ನೇರಡು ವರ್ಷ ಇದ್ದಾಗಲೇ ವಿಶ್ವನಾಥನಿಗೆ ಕೊಟ್ಟು ಮದುವೆ ಮಾಡುತ್ತಾರೆ. ವಿಶ್ವನಾಥ ಪರೀಕ್ಷೆಯಲ್ಲಿ ಫೇಲಾಗಿದ್ದು, ಬಿ.ಎ.ಪ್ಯಾಸು ಮಾಡದೆ ಮನೆಗೆ ಬರುವುದಿಲ್ಲ, ಪ್ರಸ್ತಮಾಡಿಕೊಳ್ಳುವುದಿಲ್ಲ ಎಂದನು. ಇದರಿಂದ ಲಕ್ಷ್ಮೀ ಮತ್ತು ಅವಳ ತಂದೆಗೆ ತುಂಬಾ ದುಃಖವಾಗುತ್ತದೆ. ಲಕ್ಷ್ಮೀಯ ಗೆಳತಿಯರಿಗೆಲ್ಲಾ ಮದುವೆಯಾಗಿದ್ದು ಅವರಿಗೆಲ್ಲಾ ಒಂದೊಂದು ಮಗುವಾಗಿರುತ್ತದೆ. ಇದರಿಂದ ಗಂಡನ ಬಗ್ಗೆ ಲಕ್ಷ್ಮೀಗೆ ಒಂದು ರೀತಿಯ ತಿರಸ್ಕಾರ ಮನೋಭಾವ ಉಂಟಾಗುತ್ತದೆ. ವಿಶ್ವನಾಥ ಇನ್ನೆರಡು ಸಲ ಪರೀಕ್ಷೆಗೆ ಹೋದನು; ಮತ್ತೆ ಫೇಲಾದನು; ಕೊನೆಗೆ ಓದುವುದನ್ನು ಬಿಟ್ಟು ಮಾವನ ಮಾತಿಗೆ ಒಪ್ಪಿ ಅವರ ಮನೆಯಲ್ಲಿ ನಿಂತನು.

ವಿಶ್ವನಾಥ ಮನೆಗೆ ಬಂದ ಸ್ವಲ್ಪ ದಿನದಲ್ಲಿ ಲಕ್ಷ್ಮೀ ತಾಯಿ ಮಾತಿಗೆ ಬೆಲೆಕೊಟ್ಟು ಗಂಡನಿಗೆ ತಲೆ ಬಾಗಿದಳು. ಮಾರನೆಯ ವರ್ಷ ಗರ್ಭಿಣಿಯಾಗಿ ಒಂದು ಹೆಣ್ಣು ಮಗುವನ್ನು ಹೆತ್ತಳು. ಅದೇ ವರ್ಷದಲ್ಲಿ ತಂದೆ ಡಯಬೀಟೀಸ್ ವ್ಯಾಧಿಯಿಂದ ತೀರಿಕೊಂಡನು. ತಂದೆಯ ಆಸ್ತಿಗೆ ಲಕ್ಷ್ಮೀ ಅಧಿಕಾರಿಣಿಯಾದಳು, ಅದನ್ನು ವಿಶ್ವನಾಥ ಸಿಕ್ಕಿದಂತೆ ಪೋಲು ಮಾಡಿದನು. ಇದರಿಂದ ವಿಶ್ವನಾಥ ಮತ್ತು ಲಕ್ಷ್ಮೀ ಸಂಸಾರದಲ್ಲಿ ಒಂದು ರೀತಿಯ ಇಷ್ಟವಿಲ್ಲದ ಜೀವನ ಮಾಡಲು ಆರಂಭಿಸಿದರು. ಒಂದು ಸಲ ಇವಳ ಒಡವೆಯ ಪೆಟ್ಟಿಗೆಯನ್ನು ಯಾರೋ ಒಡೆದರು. ಇವಳ ಗಂಡನೇ ಪೆಟ್ಟಿಗೆಯನ್ನು ಕದ್ದು, ಇವನೇ ಪೋಲಿಸರಿಗೆ ದೂರು ಕೊಟ್ಟನು. ತಾನು ಕದ್ದ ಒಡವೆಯನ್ನು ವಿಶ್ವನಾಥ ಒಬ್ಬ ವೇಶ್ಯೆಗೆ ಕೊಟ್ಟನೆಂದು ಲಕ್ಷ್ಮೀಗೆ ತಿಳಿಯಿತು. ಇದನ್ನು ಗಂಡನಿಗೆ ಕೇಳಿದಾಗ ಅವಳ ಕೆನ್ನೆಗೆ ಬಾರಿಸುತ್ತಾನೆ. ಇದರಿಂದ ಕೋಪ ಬಂದರೂ ಲಕ್ಷ್ಮೀ ಅದನ್ನು ತಡೆದುಕೊಳ್ಳುತ್ತಾಳೆ. ಗಂಡನಿಂದ ದೂರವಿರುವ ಆಲೋಚನೆಯನ್ನು ಮಾಡುತ್ತಾಳೆ.

"ಲಕ್ಷ್ಮಮ್ಮ ಆ ಮೊದಲು ಲೋವರ್ ಸೆಕೆಂಡರಿ ಪರೀಕೆ ಪಾಸು ಮಾಡಿದ್ದಳು. ಪೋರ್ತ್‌ಫಾರಂ ಓದನ್ನು ಮುಗಿಸಿದ್ದಳು. ಆ ಸಲ ಮುಂದಿನ ತರಗತಿಗೆ ಸೇರಿ ಮಾರನೆಯ ವರ್ಷ ಮೆಟ್ರಿಕ್ಯೂಲೇಷನ್ ಪ್ಯಾಸು ಮಾಡಿದಳು. ತಂದೆಗೆ ಪರಿಚಿತರಾಗಿದ್ದ ಒಬ್ಬ ವಿದ್ಯಾಭ್ಯಾಸದ ಅಧಿಕಾರಿಗಳ ಸಹಾಯದಿಂದ ಕುಂಭಕೋಣದಲ್ಲಿ ತಿಂಗಳಿಗೆ ಐವತ್ತು ರೂಪಾಯಿನ ಉಪಾಧ್ಯಾಯಿನಿಯ ಕೆಲಸವನ್ನು ಸಂಪಾದಿಸಿದಳು. ಊರನ್ನು ಮರೆತು ಪರ ಊರಿನಲ್ಲಿ ಹೋಗಿ ನಿಂತಳು. ವಿಶ್ವನಾಥ ತನ್ನ ಹೆಂಡತಿಯನ್ನು ಅನೇಕ ವಿಧದಲ್ಲಿ ಕಾಡಿಸುತ್ತೇನೆ.

* ಗೋಪಾಲಯ್ಯರ ಹೆಸರಿನಲ್ಲಿ ಒಂದು ಪತ್ರ ಬರೆಯುತ್ತಾನೆ. ಪತ್ರದಲ್ಲಿ ತನಗೆ ತುಂಬಾ ತುರ್ತಾಗಿದೆ ನೇರವಾಗಿ ಆಸ್ಪತ್ರೆಗೆ ಬರುವಂತೆ ಇತ್ತು. ಇದನ್ನು ನೋಡಿದ ಲಕ್ಷ್ಮೀ ಮಧುರೆಗೆ ಆಸ್ಪತ್ರೆಗೆ ಮಗುವಿನೊಂದಿಗೆ ಬಂದರೆ ಅಲ್ಲಿ ಗಂಡನಿರಲಿಲ್ಲ.

* ಎರಡನೇ ಕಾಗದದಲ್ಲಿ "ಗಂಡನನ್ನು ಬಿಟ್ಟು ಬಾಳುವೆನೆಂದ ಧೀರೆ ಒಂದು ತಂತಿ ಬಂದ ಮಾತ್ರಕ್ಕೆ ಅವನಿರುವ ಕಡಿಗೆ ಓಡಿದೆಯಲ್ಲ! ಅವನಿಗೆ ಸಂಸಾರ ಏಕೆ ಮಾಡಲಾರೆ?" ಎಂಬ ಮಾತು ಇದ್ದವು.

* "ಗಂಡನನ್ನು ಬಿಟ್ಟಿರುವ ಶ್ರೀಮತಿ.... ವರು ತನ್ನನ್ನು ಮದುವೆಯಾಗಲು ಇಷ್ಟವಿರುವ ಯಾವನೊಡನೆಯೂ ಕೂಡುವುದಕ್ಕೆ ಸಿದ್ಧವಾಗಿದ್ದಾರೆ. ತಾವು ಅಗತ್ಯ ಒಂದು ಆಶೀರ್ವಾದ ಮಾಡಬೇಕು ಎಂದು ಅರಿಶಿನ ಹಚ್ಚಿದ ಒಂದು ಲಗ್ನಪತ್ರ ಕಾಗದದಲ್ಲಿ ಬಂದಿತು.

* ಆ ಮೇಲೆ ಗೌರಿಹಬ್ಬಕ್ಕೆ ಒಂದು ಅಂಚೆ ಪಾರ್ಸಲ್ ಬಂದಿತ್ತು. ಅದನ್ನು ತೆರೆದು ನೋಡಿದರೆ ಅದರಲ್ಲಿ ವಿಧವೆಯರು ಉಡುವ ಒಂದು ಸೀರೆ! ಅದರಲ್ಲಿ ಒಂದು ಕಾಗದ ನೀನು ಬಯಸುವ ಸ್ಥಿತಿ ನಿನಗೆ ಬೇಗನೆ ಬರಲೆಂದು ಆಶೀರ್ವಾದ ಮಾಡಿ ಇದನ್ನು ಕಳುಹಿಸಿದೆ"[೫೪] ಹೀಗೆ ವಿಶ್ವನಾಥ ಶಿಕ್ಷಣ ಪಡೆದಿದ್ದರಿಂದ ಅದರ ಉಪಯೋಗ ಪಡೆದು ಈ ರೀತಿಯ ಕಿರುಕುಳವನ್ನು ತನ್ನ ಹೆಂಡತಿಗೆ ಕೊಡುತ್ತಾನೆ. ಇದರಿಂದ ನೊಂದ ಲಕ್ಷ್ಮೀ ಮತ್ತು ತನ್ನ ಮಗಳು ನಳಿನಿ ಮದರಾಸಿಗೆ ಹೊರಟು ಹೋಗುತ್ತಾರೆ. ಅಲ್ಲಿ ಜಾರ್ಜ್‌ಟೌನಿನ ಒಂದು ಹೆಣ್ಣು ಮಕ್ಕಳ ಶಾಲೆಯಲ್ಲಿ ಉಪಾಧ್ಯಾಯಿನಿಯ ಕೆಲಸವನ್ನು ಸಂಪಾದಿಸಿಕೊಂಡು, ಸ್ವಲ್ಪ ದಿನಕ್ಕೊಮ್ಮೆ ಬೀದಿಯಿಂದ ಬೀದಿಗೆ ಮನೆಯನ್ನು ವರ್ಗಾವಣೆ ಮಾಡುತ್ತಾಳೆ.

ತಾನು ಅನುಭವಿಸಿದ ಕಷ್ಟ ತನ್ನ ಮಗಳು ಅನುಭವಿಸಬಾರದು ಎಂಬ ಕಾರಣಕ್ಕಾಗಿ ತನ್ನ ಮಗಳನ್ನು ಚೆನ್ನಾಗಿ ಓದಿಸಿ, ತಾನು ಕೆಲಸ ಮಾಡುತ್ತಿದ್ದ ಇನ್ಸ್‌ಪೆಕ್ಟರ್ ಮಗನಾದ ರಾಮಸ್ವಾಮಿಗೆ ಕೊಟ್ಟು ಮದುವೆ ಮಾಡುವ ಯೋಚನೆ ಮಾಡುತ್ತಾರೆ. ರಾಮಸ್ವಾಮಿ ಎಂ.ಎ. ಪರೀಕ್ಷೆ ಪಾಸು ಮಾಡಿ ಕ್ರಿಶ್ಚಿಯನ್ ಕಾಲೇಜಿನಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದನು. ಹಾಗಾಗಿ ಇವರಿಬ್ಬರಿಗೂ ಆದಷ್ಟು ಬೇಗ ಮದುವೆ ಮಾಡುತ್ತಾಳೆ.

ಈ ಕತೆಯಲ್ಲಿ ಬರುವ ಬಹುಪಾಲು ಪಾತ್ರಗಳು ಶಿಕ್ಷಣ ಪಡೆದ ಪಾತ್ರಗಳೇ ಆಗಿವೆ. ಆದರೆ ಶಿಕ್ಷಣವನ್ನು ಉಪಯೋಗಿಸಿಕೊಳ್ಳುವ ದಾರಿಗಳು ಬೇರೆ ಬೇರೆ. ಲಕ್ಷ್ಮೀಯ ತಂದೆಯವರಾದ ರಾಮನಾಥ ಅಯ್ಯರ್ ಲಾಯರ್ ಆಗಿದ್ದು ಶಿಕ್ಷಣದ ಮಹತ್ವಗೊತ್ತಿರುವುದರಿಂದ ತನ್ನ ಮಗಳನ್ನು ಓದಿಸಿ, ಓದಿದವನಿಗೇ ಕೊಟ್ಟು ಮದುವೆ ಮಾಡುತ್ತಾನೆ. ರಾಮಸ್ವಾಮಿ ನಗರದಲ್ಲಿದ್ದು ಶಿಕ್ಷಣವನ್ನು ಪಡೆಯುವ ಜೊತೆಗೆ ಬೇರೆ ಬೇರೆ ದುಶ್ಚಟಗಳಿಗೆ ಬಲಿಯಾಗುತ್ತಾನೆ. ಅಷ್ಟೇ ಅಲ್ಲ ತನ್ನ ಮಾವನ ಮನೆಯಿಂದ ಬಂದ ದುಡ್ಡನ್ನು ದುಂದುವೆಚ್ಚಗಳಿಗೆ ಬಳಸುತ್ತಾನೆ. ಹೆಂಡತಿಗೆ ಅನೇಕ ತೊಂದರೆಗಳನ್ನು ಕೊಡುತ್ತಾನೆ. ಕಾರಣ ಆ ವೇಳೆಗಾಗಲೇ ಲಕ್ಷ್ಮಿಯ ತಂದೆ ಮರಣ ಹೊಂದಿರುತ್ತಾರೆ. ಇದರಿಂದ ಬುದ್ಧಿವಂತಳಾದ ಲಕ್ಷ್ಮೀ ತನ್ನ ಮಗಳಾದ ನಳಿನಿಯನ್ನು ಮದುವೆಯಾಗುವ ಹುಡುಗನಿಗೆ ತನ್ನ ಮಾವನನ್ನೇ ಪರಿಚಯಿಸುವುದಿಲ್ಲ. ತನ್ನ ಮಗಳಿಗೂ ನನ್ನ ತಂದೆ ಯಾರು ಎಂಬುದು ಗೊತ್ತಾಗದಂತೆ ಮದುವೆಯನ್ನು ಮಾಡುತ್ತಾಳೆ. ಇದು ಆಧುನಿಕತೆಯಿಂದ ಬಂದ ಬಳುವಳಿಯಾಗಿದೆ. ಶಿಕ್ಷಣದಿಂದ ಉಪಯೋಗಗಳು ಉಂಟು ದುರುಪಯೋಗಗಳೂ ಉಂಟು ನಾವು ಅದನ್ನು ಹೇಗೆ ಬಳಸಿಕೊಳ್ಳುತ್ತೇವೋ ಅದರ ಮೇಲೆ ನಿಂತಿರುತ್ತದೆ. "ಆಧುನಿಕತೆಯು ಬದುಕನ್ನು ಪ್ರವೇಶಿಸುವುದು ಎರಡು ಸಾಧ್ಯತೆಗಳ ಮೂಲಕ ಒಂದು ಶಿಕ್ಷಣ,

ಇನ್ನೊಂದು ಸಾಮಾಗ್ರಿಗಳು ಶಿಕ್ಷಣದ ಸಾಧ್ಯತೆಗಳು ಅಪಾಯಕಾರಿಯಾಗಲಾರವು. ಸಾಂಸ್ಕೃತಿಕ ಅರಿವು ರೂಪುಗೊಳ್ಳುವುದು ಇದರ ಮೂಲಕವೇ. ಸಂಸ್ಕೃತಿಯ ಆಶಯಗಳನ್ನು ಬದುಕು ಹೇಗೆ ಖಚಿತಪಡಿಸಿಕೊಳ್ಳುತ್ತದೆ ಎಂಬುದರ ಬಗೆಗೆ ವ್ಯಕ್ತಿಯ ಮೇಲೆ ಶಿಕ್ಷಣವು ಮಾಡಿರುವ ಪ್ರಭಾವವು ಗಣನೆಗೆ ಬರುತ್ತದೆ. ಆದರೆ ಬದುಕುತ್ತಿರುವ ಆವರಣವು ಪರಂಪರಾಗತ ಮೌಲ್ಯಗಳ ಅಡಿಯಲ್ಲಿ ಹೊರಬರುವುದಕ್ಕಿಂತ ಒಪ್ಪಿಕೊಳ್ಳುವುದು ಮತ್ತು ವಿಘಟನೆಯು ಪ್ರಧಾನವಾಗಿಬಿಟ್ಟಾಗ ಎತ್ತಲೂ ಖಚಿತತೆಯನ್ನು ಪಡೆದುಕೊಳ್ಳಲಾರದ ಗೊಂದಲದಲ್ಲಿ ನಿಂತು ಬಿಡುವುದು ಸಂಧಿಕಾಲದ ಸಂದರ್ಭದಲ್ಲಿ ಅನಿವಾರ್ಯ ಅನಿಸಿಬಿಟ್ಟಿದೆ”[೫೫] ಎಂದು ಕೋದಂಡರಾಮರವರು ಹೇಳುತ್ತಾರೆ.

ಅಡಿಟಿಪ್ಪಣಿಗಳು

೧. ಮಾಸ್ತಿ ಸಮಗ್ರ ಸಣ್ಣ ಕತೆಗಳು ಭಾಗ-೧, ಪುಟ-೦೨

೨. ಅದೇ, ಪುಟ-೦೩

೩. ನಟರಾಜ್ ಹುಳಿಯಾರ್, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಪರಂಪರೆ ಮತ್ತು ಆಧುನಿಕತೆ, ಪುಟ-೧೩೦

೪. ಕೋದಂಡರಾಮ ಎನ್.ಕೆ., ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪುಟ-೪೧

೫. ಮಾಸ್ತಿ, ಸಮಗ್ರ ಸಣ್ಣ ಕತೆಗಳು ಭಾಗ-೦೧, ಪುಟ-೩೫

೬. ಅದೇ, ಪುಟ-೪೬

೭. ಅದೇ, ಪುಟ-೭೦

೮. ಅದೇ, ಪುಟ-೧೫೮

೯. ಅದೇ, ಪುಟ-೧೬೭

೧೦. ಅದೇ, ಪುಟ-೧೮೧

೧೧. ಅದೇ, ಪುಟ-೧೮೨

೧೨. ಅದೇ, ಪುಟ-೧೮೩

೧೩. ಅದೇ, ಪುಟ-೧೯೪

೧೪. ಅದೇ, ಪುಟ-೧೯೭

೧೫. ಅದೇ, ಪುಟ-೨೦೧

೧೬. ಅದೇ, ಪುಟ-೨೫೦

೧೭. ಅದೇ, ಪುಟ-೨೫೪

೧೮. ಅದೇ, ಪುಟ-೨೫೧

೧೯. ಅದೇ, ಪುಟ-೨೫೭

೨೦. ಅದೇ, ಪುಟ-೩೭೪

೨೧. ಅದೇ, ಪುಟ-೩೫೦

೨೨. ಅದೇ, ಪುಟ-೩೫೧

೨೩. ಅದೇ, ಪುಟ-೩೮೮

೨೪. ಅದೇ, ಪುಟ-೩೯೯

೨೫. ಮಾಸ್ತಿ, ಸಮಗ್ರ ಸಣ್ಣ ಕತೆಗಳು, ಭಾಗ-೦೩, ಪುಟ-೩೬

೨೬. ನಾರಾಯಣ ಕೆ.ವಿ., ಬೇರು, ಕಾಂಡ, ಚಿಗುರು, ಪುಟ-೩೬೫

೨೭. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೦೧. ಪುಟ-೦೨

೨೮. ಅದೇ. ಪುಟ-೨೫೭

೨೯. ಅದೇ. ಪುಟ-೨೮೩

೩೦. ಅದೇ, ಪುಟ-೩೮೮

೩೧. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೩, ಪುಟ-೯೫

೩೨. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೦೧, ಪುಟ-೦೪

೩೩. ಮಾವಿನ ಕೆರೆ ರಂಗನಾಥ(ಸಂ), ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ ಸಂಪುಟ-೦೧, ಪುಟ-೨೮೯

೩೪. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೦೧, ಪುಟ-೧೨೩

೩೫. ಅದೇ, ಪುಟ-೧೨೮

೩೬. ಅದೇ, ಪುಟ-೧೨೮

೩೭. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೨, ಪುಟ-೩೮

೩೮. ಅದೇ, ಪುಟ-೨೯೧

೩೯. ಅದೇ, ಪುಟ-೨೯೭

೪೦. ಅದೇ, ಪುಟ-೩೧೯

೪೧. ಮಾಸ್ತಿ, ಸಣ್ಣ ಕತೆಗಳು ಸಮಗ್ರ, ಭಾಗ-೩, ಪುಟ-೧೫೫

೪೨. ಮಾಸ್ತಿ, ಸಣ್ಣ ಕತೆಗಳು ಸಮಗ್ರ, ಭಾಗ-೧, ಪುಟ-೮೬

೪೩. ಅದೇ, ಪುಟ-೧೬೫

೪೪. ಅದೇ, ಪುಟ-೨೬೩

೪೫. ಅದೇ, ಪುಟ-೨೮೧

೪೬. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೨, ಪುಟ-೨೫೮

೪೭. ಅದೇ, ಪುಟ-೨

೪೮. ಅದೇ, ಪುಟ-೨೮೩

೪೯. ಮಾಸ್ತಿ, ಸಣ್ಣ ಕತೆಗಳು ಸಮಗ್ರ, ಭಾಗ-೩, ಪುಟ-೯೬

೫೦. ಅದೇ, ಪುಟ-೧೦೦

೫೧. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೧, ಪುಟ-೨೫

೫೨. ಮಾಸ್ತಿ, ಸಣ್ಣ ಕತೆಗಳು ಸಮಗ್ರ, ಭಾಗ-೧, ಪುಟ-೭೨

೫೩. ಅದೇ, ಪುಟ-೮೮

೫೪. ಮಾಸ್ತಿ, ಸಣ್ಣ ಕತೆಗಳು ಸಮಗ್ರ ಭಾಗ-೨, ಪುಟ-೨೯

೫೫. ಕೋದಂಡರಾಮ ಎನ್.ಕೆ., ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಪುಟ-೪೧

ಅಧ್ಯಾಯ – ಐದು

ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಅಧ್ಯಾಯ – ಐದು

ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಪೀಠಿಕೆ

ನವೋದಯ ಕಾಲದ ಪ್ರಮುಖ ಕತೆಗಾರರಲ್ಲಿ ಆನಂದರು ಒಬ್ಬರು. "ಕನ್ನಡ ಸಣ್ಣಕಥೆಗಾರರಲ್ಲಿ ಶ್ರೀನಿವಾಸರನ್ನು ಬಿಟ್ಟರೆ ಎರಡನೆಯವರೇ ಶ್ರೀ ಆನಂದರೆಂದು ನನ್ನ ಭಾವನೆ" ಎಂದು ತ.ಸು.ಶಾಮರಾಯರು ಬೇವು ಬೆಲ್ಲದ ಪೀಠಿಕೆಯಲ್ಲಿ ಬರೆದರು. ಮಾಸ್ತಿಯವರ ಪ್ರಭಾವದಲ್ಲಿಯೇ ಆನಂದರು ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಭವತಿ ಭಿಕ್ಷಾಂ ದೇಹಿಯ ಮುನ್ನುಡಿಯಲ್ಲಿ ಇದರ ಸ್ಪಷ್ಟ ಉಲ್ಲೇಖವಿದೆ. "ನನಗೆ ಸಣ್ಣಕತೆಗಳನ್ನು ಬರೆಯಬೇಕೆಂಬ ಆಸೆ ಹುಟ್ಟಿದುದು ಶ್ರೀನಿವಾಸರ ಕತೆಗಳನ್ನು ಓದಿದ ಮೇಲೆ. ಅವರ ಕತೆಗಳು ನನ್ನ ಮನಸ್ಸಿನಲ್ಲಿ ಎಂದಿಗೂ ಅಳಿಸಿ ಹೋಗದಂತಹ ಪರಿಣಾಮವನ್ನುಂಟು ಮಾಡಿದವು. ನನ್ನ ಕತೆಗಳಲ್ಲಿ ಅಲ್ಲಲ್ಲಿ ಅವರ ಶೈಲಿಯು ಕಂಡು ಬಂದರೆ ಅದು ಅವರ ಕತೆಗಳನ್ನು ಮೇಲಿಂದ ಮೇಲೆ ಓದಿದುದರ ಫಲವೆಂದು ತಿಳಿಯಬೇಕು" ಎಂದು ಹೇಳಿದ್ದಾರೆ. ಮಾಸ್ತಿಯವರಂತೆ ಆನಂದರೂ ಆಧುನಿಕರಾಗಿದ್ದರೂ ಅವರ ಮನೋಧರ್ಮ ಬೇರೆಯಾಗಿದ್ದುದರಿಂದ ಸಣ್ಣಕತೆಯಲ್ಲಿ ಅವರು ಹಿಡಿದ ದಾರಿಯು ಬೇರೆಯಾಯಿತು. "ಆನಂದರ ಮನೋಧರ್ಮ ನೂರಕ್ಕೆ ನೂರರಷ್ಟು ರೊಮ್ಯಾಂಟಿಕ್ ಮಾದರಿಯದು" ಎಂದು ಡಿ ರಘುನಾಥರಾಯರು ಹೇಳಿದ್ದಾರೆ. ಆದರೆ ಈ ಮಾತು ನೂರಕ್ಕೆ ನೂರರಷ್ಟು ಸತ್ಯವಲ್ಲ. ಯಾಕೆಂದರೆ ನಾನು ಕೊಂದ ಹುಡುಗಿ, ಮಾಟಗಾತಿ ಇಂಥ ಕತೆಗಳು ತೋರಿಸುವಂತೆ ರೊಮ್ಯಾಂಟಿಕ್ ಪ್ರವೃತಿಗಳ ಒತ್ತಡಕ್ಕೆ ಒಳಗಾಗಿಯೂ ಅವುಗಳ ಅಪಾಯಗಳನ್ನು ಕುರಿತು ಅವರಲ್ಲಿ ಎಚ್ಚರವಿದ್ದಿತು. ಇದೂ ಅಲ್ಲದೇ ಭವತಿ ಭಿಕ್ಷಾಂದೇಹಿ, ಬೇವು ಬೇಲ್ಲ ಮತ್ತು ಕೊನೇ ಎಂಟಾಣಿ ವಾಸ್ತವ ಮಾರ್ಗದ ಕತೆಗಳನ್ನು ಅವರು ಬರೆದದ್ದುಂಟು. ರಚನೆಯ ದೃಷ್ಟಿಯಿಂದ ಆನಂದರ ಕತೆಗಳು ಮಾಸ್ತಿಯವರ ಕತೆಗಳಿಗಿಂತ ಭಿನ್ನವಾದವು. ಮಾಟಗಾತಿಗೆ ಬರೆದ ಮುನ್ನುಡಿಯಲ್ಲಿ ಮಾಸ್ತಿಯವರೇ ಈ ಸತ್ಯವನ್ನು ಗುರುತಿಸಿದರು. ಕಥನದಲ್ಲಿ ಹೇಳುವ ಮತ್ತು ಕಟ್ಟುವ ಈ ಎರಡು ಪದ್ಧತಿಗಳಿವೆಯೆಂದು ಹೇಳುತ್ತ, ಮಾಸ್ತಿಯವರು

ಆನಂದರ ಕತೆಗಳು ಕಟ್ಟುವ ಪದ್ದತಿಗೆ ಸೇರಿದವುಗಳು ಎಂದು ಅಭಿಪ್ರಾಯಪಟ್ಟರು. ಈ ಪದ್ದತಿಯಲ್ಲಿ "ಸಹಜತೆ ಹಾಗೂ ಸರಳತೆಗೆ ಪ್ರತಿಯಾಗಿ ನಾಗರಿಕತೆಯ ಫಲವಾದ ಒಂದು ತರದ ಬಿತ್ತರ ಒಂದು ರೀತಿಯ ಭಿನ್ನಾಣ ಕಾಣುತ್ತದೆ" ಆನಂದರ ಕತೆಗಳಲ್ಲಿ ಘಟನೆಗಳಿಗಿಂತ ಭಾವನೆಗಳಿಗೆ, ಕಥನಕ್ಕಿಂತ ವರ್ಣನೆಗೆ ಹೆಚ್ಚಿನ ಪ್ರಾಶಸ್ತ್ಯದೊರಕಿತು. ಬದುಕಿನ ಬಗ್ಗೆ ಹೊಸ ತಿಳಿವನ್ನು ಹುಟ್ಟಿಸುವುದು ಮಾಸ್ತಿಯವರ ಉದ್ದೇಶವಾಗಿದ್ದರೆ, ರಸಸೃಷ್ಟಿ ಮುಖ್ಯವಾಗಿ ಹಾಸ್ಯ ಹಾಗೂ ಶೃಂಗಾರಗಳ ರಸಸೃಷ್ಟಿ ಆನಂದರ ಗುರಿಯಾಗಿದ್ದಿತು. ಹೆಂಡತಿಯ ಕಾಗದ, ಪದ್ಮಪಾಕ, ಚಂದ್ರಗ್ರಹಣ, ರಾಧೆಯ ಕ್ಷಮೆ ಇಂಥ ಕತೆಗಳಲ್ಲಿ ಆನಂದರ ವೈಶಿಷ್ಟ್ಯವನ್ನು ಗುರುತಿಸಬಹುದು.

ಆನಂದರ ಕೆಲವು ಕಥೆಗಳು (೧೯೩೦) ,ಭವತಿ ಭಿಕ್ಷಾಂ ದೇಹಿ ಮತ್ತು ಇತರ ಕಥೆಗಳು(೧೯೩೦). ಮಾಟಗಾತಿ ಮತ್ತು ಇತರ ಕಥೆಗಳು (೧೯೩೪), ಚಂದ್ರಗ್ರಹಣ ಮತ್ತು ಇತರೆ ಕಥೆಗಳು'(೧೯೩೯), ಸ್ವಪ್ನ ಜೀವಿ ಮತ್ತು ಇತರೆ ಕಥೆಗಳು (೧೯೪೫), ಜೋಯಿಸರ ಚೌಡಿ(೧೯೪೫), ಬಿಲ್ವಸಂಕಲ(೧೯೫೫) ಈ ಏಳು ಸಂಗ್ರಹಗಳನ್ನಲ್ಲದೆ ಬೇವು ಬೆಲ್ಲ(೧೯೫೧) ಹಾಗೂ ಅಶ್ರುಬಾಷ್ಪ (೧೯೫೪)ಗಳೆಂಬ ಆಯ್ದ ಕಥೆಗಳ ಸಂಕಲನಗಳನ್ನು ಪ್ರಕಟಿಸಿದರು. ಹಂ.ಪ.ನಾಗರಾಜಯ್ಯ ಸಂಪಾದಿಸಿದ ಆನಂದರ ಆಯ್ದ ಕತೆಗಳು (೧೯೮೫) ಸಂಕಲನದಲ್ಲಿ ಹನ್ನೊಂದು ಕತೆಗಳಿವೆ. ಒಟ್ಟಾರೆಯಾಗಿ ಆನಂದರು ೩೨ ಕತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ೨೦ ಸ್ವತಂತ್ರ ಕತೆಗಳು, ೧೨ ಪಾಶ್ಚಾತ್ಯ ಲೇಖಕರ ಪ್ರಭಾವ ಮತ್ತು ರೂಪಾಂತರದ ಕತೆಗಳು.

ಪ್ರಸ್ತುತ ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ವಿವರಿಸುವ ಮೊದಲು ಪರಂಪರೆ ಮತ್ತು ಆಧುನಿಕತೆ ಎಂದರೇನು? ಎಂಬುದನ್ನು ಅರ್ಥೈಸಲು ಪ್ರಯತ್ನಿಸಲಾಗಿದೆ. ಈಗಾಗಲೇ ಅಧ್ಯಾಯ ಮೂರರಲ್ಲಿ ಪರಂಪರೆ ಮತ್ತು ಆಧುನಿಕತೆ ಕುರಿತ ಪರಿಕಲ್ಪನಾತ್ಮಕ ಚರ್ಚೆ, ಪರಂಪರೆ ಮತ್ತು ಆಧುನಿಕತೆ ವ್ಯಾಖ್ಯಾನಗಳನ್ನು ವಿವರಿಸಲಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯದಲ್ಲಿ ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ಪರಂಪರೆ ಎಂದರೆ ನಿರ್ದಿಷ್ಟವಾಗಿ ವ್ಯಾಖ್ಯಾನಿಸುವುದು ಕಷ್ಟ. ಅದನ್ನು ವಿಶಾಲಾರ್ಥದಲ್ಲಿ ಪರಿಭಾವಿಸುವಂಥ ಪದಗುಚ್ಛ. ಆದರೆ ಅಧ್ಯಯನದ ದೃಷ್ಟಿಯಿಂದ ಒಂದು ವಿವರಣೆಗೆ ಬರಬೇಕಾಗುತ್ತದೆ. ಪರಂಪರೆ ಎಂದರೆ ನಮ್ಮ ಹಿಂದಿನ ಪೀಳಿಗೆಯನ್ನು ಕಣ್ಣುಮುಚ್ಚಿಕೊಂಡು ಮಕ್ಕಿಕಾಮಕ್ಕಿಯಂತೆ ಅನುಸರಿಸುವುದಲ್ಲ. ಗತಕಾಲವೂ ಕಳೆದುಹೋದದ್ದು ಎನ್ನುವ ಅರಿವಿನೊಡನೆ ಅದರಲ್ಲಿ ಇಂದಿಗೂ ಜೀವಂತವಾಗಿರುವುದನ್ನು ಗುರುತಿಸುವುದು. ಒಂದು ಸಮುದಾಯದ ಪರಂಪರೆ ರೂಪುಗೊಳ್ಳುವುದೇ ಭೂತದಿಂದ ವರ್ತಮಾನಕ್ಕೆ ಹರಿದು ಬಂದ ನಂಬಿಕೆಗಳು, ಸಂಕೇತಗಳು, ಪ್ರತಿಮೆಗಳು, ಆಚರಣೆಗಳ ಮೂಲಕ. ಈ ದೃಷ್ಟಿಯಿಂದ ಪರಂಪರೆಯೆಂದರೆ ಒಂದು ಸಮುದಾಯದ ಭೂತದ ಮುಂದುವರಿಕೆ. ರೇಮಾಂಡ್ ಪಣಿಕ್ಕರರ ಪ್ರಕಾರ ಪರಂಪರೆ ಎಂಬುದು ಒಂದು ಜನಾಂಗದ ಸ್ಮೃತಿ.

ಆಧುನಿಕತೆ ಎಂದರೆ ನಾವು ಪಾಶ್ಚಿಮಾತ್ಯದಿಂದಲೇ ಬಂದದ್ದು ಎನ್ನುವ ಹಾಗಿಲ್ಲ. ಏಕೆಂದರೆ ಇದುವರೆಗಿನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಪಂಪನಿಗಿಂತ ರನ್ನ ಆಧುನಿಕ ಇವರಿಗಿಂತ

ನಾಗಚಂದ್ರ, ಕುಮಾರವ್ಯಾಸರು ಆಧುನಿಕರು. ಅಂದರೆ ಪ್ರಾಚೀನ ಸಾಹಿತ್ಯವಿದ್ದಂತೆ ಮಧ್ಯಕಾಲೀನ ಸಾಹಿತ್ಯವಿಲ್ಲ, ಮಧ್ಯಕಾಲೀನ ಸಾಹಿತ್ಯವಿದ್ದಂತೆ ಆಧುನಿಕ ಸಾಹಿತ್ಯವಿಲ್ಲ. ಎಲ್ಲಾ ವಿಷಯಕ್ಕೂ ಅದರದೇ ಆದ ರೂಪ, ರಸ, ಗಂಧಸ್ಪರ್ಶ ಇರುತ್ತದೆ. ಆದರೆ ಪಾಶ್ಚ್ಯಾತ್ಯ ಶಿಕ್ಷಣದ ಅರಿವಿನೊಡನೆ ಆಧುನಿಕ ಕನ್ನಡ ಸಾಹಿತ್ಯ ಹೆಚ್ಚು ವೈಚಾರಿಕ, ವೈಜ್ಞಾನಿಕ, ಪ್ರಯೋಗಶೀಲತೆಯ ಮನೋಧರ್ಮವನ್ನು ರೂಢಿಸಿಕೊಂಡು ಅವಿಷ್ಕಾರ, ಸಂಶೋಧನೆ, ಪ್ರಶ್ನೆ, ಆಶ್ಚರ್ಯಗಳ ಮೂಲಕ ತಮ್ಮ ವಿಚಾರಧಾರೆಯ ಪ್ರಯೋಗ ಶಾಲೆಯನ್ನು ಕಾಣಬಹುದು. ಹೀಗೆ ಈ ಕೆಳಗಿನ ಅಂಶಗಳನ್ನು ಮುಖ್ಯವಾಗಿಟ್ಟು ಆನಂದರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೫.೧. ನಂಬಿಕೆ/ಆಚರಣೆ

೫.೨. ಪುರುಷ ಪ್ರಧಾನ ವ್ಯವಸ್ಥೆ

೫.೩. ಹಳ್ಳಿ

೫.೪. ಶಿಕ್ಷಣ

೫.೧. ಶಿಕ್ಷಣ

ಮಾಟಗಾತಿಯ ನಾಯಕ ಒಬ್ಬ ಚಿತ್ರಗಾರ. ತಾನು ಸೃಷ್ಟಿಸಿದ ಹೆಣ್ಣಿನಿಂದಲೆ ಮೋಹಿತನಾಗಿ ಆತ ವಿಚಿತ್ರ ಆನುಭವಕ್ಕೆ ಒಳಗಾಗಿದ್ದಾನೆ. ಇದೊಂದು ಹುಚ್ಚು ಎಂದು ಅವನಿಗೆ ಗೊತ್ತಿದೆ. ಆದರೆ ಅದರಿಂದ ಬಿಡಿಸಿಕೊಳ್ಳುವ ಶಕ್ತಿ ಅವನಲ್ಲಿಲ್ಲ. ತನ್ನ ಅನುಭವವನ್ನು ಯಾರಲ್ಲಾದರು ಹೇಳಿಕೊಳ್ಳಬೇಕು ಎನ್ನುವ ಬಲವಾದ ಇಚ್ಛೆ ಅವನಿಗಿದೆ. ಆದರೆ ಅವರ ಪ್ರತಿಕ್ರಿಯೆ ಹೇಗಾಗಬಹುದು ಎನ್ನುವುದರ ಬಗ್ಗೆ ಅವನಲ್ಲಿ ಸಂಶಯಗಳಿವೆ. ಕತೆಯಲ್ಲಿ ಈ ಸಂದಿಗ್ಧಗಳಿರುವುದರಿಂದಲೇ ಅದಕ್ಕೆ ಆಧುನಿಕತೆ ಬಂದಿದೆ.

"ಅವಳ ಮುಖವನ್ನು ಏನೆಂದು ವರ್ಣಿಸಲಿ? ನೀವು ಒಂದು ಮಾತಿನಲ್ಲಿ ಗ್ರಹಿಸಬಲ್ಲವರಾದರೆ ಹೇಳುತ್ತೇನೆ ಕೇಳಿ, ಅವಳು ಸುಂದರಿ. ಎಂತಹ ಸುಂದರಿ? ಎಂದರೆ ಮಾತ್ರ ಹೇಳಲಾರೆ. ಸೌಂದರ್ಯದಲ್ಲಿ ಬೇದವುಂಟು ಇನಿಯಳ ಸೌಂದರ್ಯವೆ? ವೇಶ್ಯೆಯ ಬೆಡಗೆ? ನಾನು ಹೀಗೆ ಸರಿ ಎಂದು ಹೇಳಲಾರೆ. ರವೀಂದ್ರ ಕವಿಯು ಊರ್ವಶಿಯನ್ನು ವರ್ಣಿಸುತ್ತಾ 'ಎಲಾ ಊರ್ವಶಿಯೇ, ಮಾತೆಯಲ್ಲ, ಮಗಳಲ್ಲ, ಮಡದಿಯಲ್ಲ ನೀನು! ಅಮರ ಲೋಕದ ಆತ್ಮವನ್ನು ಸೂರೆಗೊಳ್ಳುವ ಸ್ತ್ರೀ ನೀನು" ಎಂದು ಹೇಳಿದ್ದಾನೆ. ನಾನು ಅವಳನ್ನು ಊರ್ವಶಿಗೆ ಹೋಳಿಸಲಾರೆ. ಏಕೆಂದರೆ ಆ ಸ್ವರ್ಗವಾಸಿಯನ್ನು ನಾನು ಇನ್ನೂ ನೋಡಿಲ್ಲ–ನೋಡುವ ಸಂಭವವೂ ಇಲ್ಲ ! ಒಂದು ವೇಳೆ ನೋಡಿದರು ಆಗ ನಿಮಗೆ ಹೇಳಲಾರೆ. ಕಾರಣವೆನೆಂದರೆ ಆಗ ನಾನಗೂ ನಿಮಗೂ ವ್ಯವಹಾರ ನಿಂತು ಹೋಗಿರುತ್ತದೆ ! ಹಾಗಾದರೆ ಅವಳನ್ನು ಇನ್ನು ಹೇಗೆ ವರ್ಣಿಸಲಿ. ಅವಳ ಮುಖ ಚಂದ್ರ ಬಿಂಬಕ್ಕೆ ಸಮಾನಾಗಿಲ್ಲ. ಕಣ್ಣಿನ ಸೊಬಗು ಕಮಲದಿಂದ ಕದ್ದದ್ದಲ್ಲ. ಅವಳ ನಾಸಿಕಕ್ಕೂ ಸಂಪಿಗೆಯ ಹೂವಿಗೂ ಪರಿಚಯವೇ ಇಲ್ಲ. ಅವಳ ತುಟಿಗಳ ಅಂದ ತೊಂಡೆ ಹಣ್ಣಿನಿಂದ ಬಂದ ಬಳುವಳಿಯೂ

ಅಲ್ಲ. ಮತ್ತೆ ಇನ್ನು ಹೇಗೆ? ನೋಡಿ ಸಾವಿರ ವರ್ಣನೆಗಳು ಒಂದು ಸಲದ ನೋಟಕ್ಕೆ ಸರಿ ತೂಗಲಾರವು. ನೀವು ಮಾವಿನ ಹಣ್ಣನ್ನು ತಿಂದ್ದಿಲ್ಲವೆ? ಅದರ ರುಚಿಯೇನು? ....ಎಂದರೆ 'ಸಿಹಿ' ಎನ್ನುವಿರಿ ಅದರೆ ಎಂತಹ ಸಿಹಿ? ಸಕ್ಕರೆಯ ಸಿಹಿಯೆ? ಕಬ್ಬಿನ ಸಿಹಿಯೆ? ಕಿತ್ತಲೆಯ ರುಚಿಯೆ? ಸೇಬಿನ ಸವಿಯೆ . ಯಾವುದು? ಎಲ್ಲಾವು ಮಧುರ ಅದರೆ ಬೇರೆ ಬೇರೆ ಮಾಧುರ್ಯ. ಮಾವಿನ ಹಣ್ಣನ್ನು ಕಾಣದವನಿಗೆ ಸೇಬಿನ ಹಣ್ಣನ್ನು ಕೊಟ್ಟು ಮಾವಿನ ಹಣ್ಣಿನ ಪರಿಚಯವನ್ನು ಮಾಡಲಾಗುವುದೆ? ಅದು ನನ್ನ ಕೈಯಲ್ಲಂತೂ ಆಗದ ಕೆಲಸ. ಅವಳನ್ನು ವರ್ಣಿಸುವುದರಲ್ಲಿ ನನಗಿರುವ ಕಷ್ಟವನ್ನು ನೀವು ಗ್ರಹಿಸಬಲ್ಲವರಾದರೆ ಆಕೆಯ ಸೌಂದರ್ಯವನ್ನು ಗ್ರಹಿಸಬಲ್ಲಿರಿ."

ಆನಂದರ ಕತೆ ಎರಡು ಸ್ತರಗಳಲ್ಲಿ ನಮ್ಮನ್ನು ತಟ್ಟುತ್ತದೆ. ಮಾಟಗಾತಿ ಕಲಾವಿದನ ಸೌಂದರ್ಯಾನುರಾಧನೆಯ ಫಲವಾಗಿದ್ದು ಅವನು ತನ್ನನ್ನು ಸಂಪೂರ್ಣವಾಗಿ ಅವಳಿಗೆ ಒಪ್ಪಿಕೊಂಡಿದ್ದಾನೆ. ಕತೆಯ ಕೊನೆಯಲ್ಲಿ ಕೂಡ ಹುಚ್ಚು ತನ್ನನ್ನು ಬಿಟ್ಟಿಲ್ಲ ಎಂದು ಅವನು ಹೇಳುವುದು ಅವನು ಒಳಗಾದ ಮೋಹದ ಪ್ರಭಾವನ್ನು ಸೂಚಿಸುತ್ತದೆ. ಆದರೆ ಈ ಕಲಾವಿದನ ಸಮಸ್ಯೆಯೆಂದರೆ ಅವನು ಕತೆ ಹಾಗೂ ಜೀವನ ಇವೆರಡರಲ್ಲಿ ಕಟ್ಟುನಿಟ್ಟಾಗಿ ಯಾವುದನ್ನು ಆಯ್ದುಕೊಳ್ಳುವ ಸ್ಥಿತಿಯಲ್ಲಿ ಇಲ್ಲಾ. ಮಾಟಗಾತಿಯಲ್ಲಿ ತನಗಿರುವ ಮೋಹ ತನ್ನನ್ನು ನೆಚ್ಚಿದ ಹೆಂಡತಿಗೆ ದ್ರೋಹಯೆನ್ನುವ ಭಾವನೆಯು ಅವನ್ನಲ್ಲಿದೆ. ಈ ಕಲಾವಿದನ – ನಾಯಕನಿಗೆ ವೀವೇಕಿಯಾದ ಓದುಗ ತನ್ನ ಕಥೆಯನ್ನು ನಂಬಲಾರ, ನಂಬಿದರೂ ತನ್ನ ಮಾನಸಿಕ ವ್ಯಭಿಚಾರದ ಬಗ್ಗೆ ಅವನಲ್ಲಿ ನೈತಿಕ ವಿರೋಧ ಹುಟ್ಟಬಹುದು ಎಂದೆನಿಸಿದೆ. ಇದು ಕತೆಯಲ್ಲಿ ಇನ್ನೊಂದು ಸ್ತರ ಹುಟ್ಟಿಕೊಳ್ಳುವುದಕ್ಕೆ ಕಾರಣವಾಗುತ್ತದೆ. ಈ ಸ್ತರದಲ್ಲಿ ಹಾಸ್ಯ ಮತ್ತು ವ್ಯಂಗ್ಯಗಳಿಗೆ ಅವಕಾಶವಿದೆ ಮತ್ತು ಅದು ಕತೆಯ ರಮ್ಯಸ್ತರವನ್ನು ನಿಯಂತ್ರಿಸಿ ಟೀಕೆಗೆ ಒಳಪಡಿಸುತ್ತದೆ.

ಮಾಸ್ತಿಯವರ ಪ್ರಭಾವದಲ್ಲಿಯೆ ಆನಂದರು ತಮ್ಮ ಕತೆಗಾರಿಕೆಯನ್ನು ಕಂಡುಕೊಂಡರು. 'ನಾ ಕೊಂದ ಹುಡುಗಿ'ಯಂತ ಅವರ ಪ್ರಸಿದ್ದ ಕತೆಗಳು ಮಾಸ್ತಿ ಸಂಪ್ರಾದಾಯದಲ್ಲಿಯೆ ಇವೆ. ಆದರೆ ಪ್ರಕೃತಿ ಧರ್ಮವೇ ಭಿನ್ನಾವಾದ್ದರಿಂದ ಅವರು ಬೇರೆ ಹಾದಿ ಹಿಡಿದರು. ಆನಂದರ ಮಾಟಗಾತಿ ಸಂಗ್ರಹಕ್ಕೆ ಬರೆದ ಮುನ್ನುಡಿಯಲ್ಲಿ ಮಾಸ್ತಿಯವರೇ ಈ ಅಂತರವನ್ನು ಗುರಿತಿಸಿದ್ದಾರೆ. ಮಾಸ್ತಿಯವರ ಕತೆ ಮೌಖಿಕ ಪರಂಪರೆಯತ್ತ ಹೊರಳಿದರೆ, ಆನಂದರು ರಮ್ಯತೆಯತ್ತ ಆಕರ್ಷಿತರಾದರು. ಮಾಟಗಾತಿಯ ವಸ್ತುವಿನಲ್ಲಿ ಇದು ಎದ್ದು ಕಾಣುತ್ತದೆ.

ಆನಂದರ ಬಹುಪಾಲು ಕತೆಗಳು ಒಂದು ಕೌಟುಂಬಿಕ ಚೌಕಟ್ಟಿನಲ್ಲಿ ಘಟಿಸುವಂತವು. ಅವರಲ್ಲು ಗಂಡ,ಹೆಂಡತಿ ಒಂದು ಮಗು ಇಷ್ಟೆ ವಿಸ್ತಾರವುಳ್ಳ ಕುಟುಂಬವಿರುತ್ತದೆ ಇಲ್ಲವೇ ಮಧ್ಯಮ ವರ್ಗದ ನೆಮ್ಮದಿ , ಪರಸ್ಪರ ಸೌಹಾರ್ದ, ರಸಿಕತೆಯುಳ್ಳ ದಂಪತಿಗಳ ಸಂಸಾರವಾಗಿರಬಹುದು. ಅಲ್ಲಿ ಸರಸ ಸಲ್ಲಾಪ, ಪ್ರಣಯ ಚೇಷ್ಟೆಗಳೆ ಪ್ರಧಾನ. ಕೌಟುಂಬಿಕ ಅವರಣದಿಂದ ಹೊರಗೊಳಿದ ಕಥನಗಳು ವಿವಾಹ ಪೂರ್ವ ಪ್ರೇಮ ಮತ್ತು ಪ್ರಣಯಗಳನ್ನು ಕುರಿತಾವುಗಳಾಗಿರುತ್ತವೆ. ಇಷ್ಟಾದರು

ಗೃಹಸ್ಥನ ಧಾರ್ಮಿಕ ಹಕ್ಕಿನ ಆಚೆಯ ಪ್ರಣಯ, ಪ್ರೇಮ ಪ್ರಕರಣವಾಗಲಿ, ಕೈ ಹಿಡಿದ ಹೆಂಡತಿಯ ಬಗ್ಗೆ ಸಂಪೂರ್ಣ ನಿಷ್ಠೆಯನ್ನು ತೋರದ ಗಂಡನಾಗಲಿ ಇಂಥ ಕಥೆ ಬರುವುದಿಲ್ಲ. ಹೆಂಡತಿಯೂ ಇದಕ್ಕೆ ಅಪವಾದವಲ್ಲ. ಅಂಥದೇನಾದರೂ ಇದ್ದರೆ ಅದು ಒಂದು ಭ್ರಮಕ, ಇಲ್ಲವೆ ಉನ್ಮಾದದ ಸ್ಥಿತಿಯದಾಗಿರುತ್ತದೆ. ಈ ಎಲ್ಲಾ ಕಥೆಗಳಲ್ಲಿ ಬರುವ ಪುರುಷ ಪಾತ್ರಗಳು ಸಾಮಾನ್ಯವಾಗಿ ಕತೆಗಾರನೋ ಚಿತ್ರಕಾರನೋ , ನಟನೋ ಆಗಿರುತ್ತಾನೆ. ಒಟ್ಟಾರೆ ಸರಸ ದಾಂಪತ್ಯ, ಪ್ರೇಮಸಲ್ಲಾಪ ಸಂಬಂಧಿ ಚೇಷ್ಟೆಗಳು ಆನಂದರ ಕಥೆಗಳಲ್ಲಿ ಹೆಚ್ಚು. ಅಂಥ ಸಂಗತಿಗಳನ್ನು ಕಲೆಯಾಗಿಸುವ ಜಾಣ ರಸಿಕ ಪ್ರತಿಭೆ ಆನಂದರಿಗೆ ದಕ್ಕಿದೆ. ಆದರೆ ಆನಂದರ ಆಸಕ್ತಿ ತೀರಾ ಪರಿಮಿತ ಪ್ರಪಂಚಕ್ಕೆ ಸೇರಿದ್ದು . ಮಾಸ್ತಿಯವರ ಸಾಂಸ್ಕೃತಿಕ ಕಾಳಜಿ ಧಾರ್ಮಿಕ ಧೋರಣೆ ಇವರಲ್ಲಿ ಕಂಡುಬರುವುದಿಲ್ಲ. ಬದುಕನ್ನು ಕುರಿತಂತೆ ಇನ್ನಾವುದೇ ಗಂಭೀರ ಕಾಳಜಿ ಇವರ ಕಥೆಗಳಲ್ಲಿ ಕಾಣಿಸಿಕೊಳ್ಳದಿರುವುದರಿಂದ ಅನುಭವಕ್ಕೆ ಅಂತರ್ಮುಖತೆಯ ಆಯಾಮ ಸೇರಿಕೊಳ್ಳದಿರುವುದರಿಂದ ಇವರ ಕಥೆಗಳು ರಸಿಕತೆಯ ಭಾವುಕತೆಯಿಂದ ಬಿಗುತ್ತದೆ ಎಂಬ ಅಭಿಪ್ರಾಯ ಸಮಂಜಸವೆನಿಸುತ್ತದೆ.

ಆನಂದರ ಕಥೆಗಳು ಒಳಗೊಂಡಿರುವ ಕಥಾವಸ್ತು, ಅದರ ನಿರ್ವಹಣೆ, ಶೈಲಿ ಈ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಹೇಳಬಹುದು. ಮಾಸ್ತಿಯವರ ಪರಂಪರೆಯಲ್ಲಿಯೇ ಮುಂದುವರಿದು ಕತೆಗಳನ್ನು ರಚಿಸಿದ ಆನಂದರು ಕೆಲವು ಕತೆಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಅವುಗಳಲ್ಲಿ ಸಮಾಜಿಕ ಸಮಸ್ಯೆಗಳಿಗಿಂತ ಕೌಟುಂಬಿಕ ವಿದ್ಯಮಾನಗಳನುಳ್ಳ ಕತೆಗಳೇ ಹೆಚ್ಚಿವೆ. ಇದು ತೀರಾ ಸೀಮಿತವೆನ್ನಬಹುದಾದ ವಸ್ತುವಿನ ಆಯ್ಕೆ ಎನಿಸಿದರೂ ನಾನು ಕೊಂದ ಹುಡುಗಿ, ಮಾಟಗಾತಿಯಂತ ಕಥೆಗಳಲ್ಲಿನ ಪ್ರಯೋಗಶೀಲತೆಯನ್ನು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಉಲ್ಲೇಖಿಸಬೇಕಾಗುತ್ತದೆ. ಮಧ್ಯಮವರ್ಗದ ಸಾಂಸಾರಿಕ ಚಿತ್ರಣ, ದಾಂಪತ್ಯ, ಬದುಕಿನ ರಸಿಕತೆ, ಸ್ನೇಹ, ಹಾಸ್ಯದ ಸೊಗಸು, ಕಲಾ ಪ್ರಜ್ಞೆ ಇವುಗಳನ್ನು ಒಳಗೊಂಡ ಆನಂದ ಕಥೆಗಳು "ಕಾವ್ಯದಲ್ಲಿ ನರಸಿಂಹ ಸ್ವಾಮಿಯವರ ಕವಿತೆಗಳು(ಮೈಸೂರು ಮಲ್ಲಿಗೆ) ಹೊಂದಿದ ಸ್ಥಾನವನ್ನು ಕಥಾ ಸಾಹಿತ್ಯದಲ್ಲಿ ಪಡೆದುಕೊಂಡಿವೆ" ಎನ್ನುವ ಮಾತು ಒಪ್ಪುವಂಥದ್ದಾಗಿದೆ.

I. ನಂಬಿಕೆ/ಆಚರಣೆ

ಆನಂದರು ಚಂದ್ರ ಗ್ರಹಣ ಕತೆಯಲ್ಲಿ ಮುಖ್ಯವಾಗಿ ಎರಡು ಕುಟುಂಬಗಳನ್ನು ವಸ್ತುವಾಗಿಟ್ಟುಕೊಂಡು ಕತೆಯನ್ನು ಹೆಣೆದಿದ್ದಾರೆ. ಹುಣ್ಣಿಮೆಯ ಬೆಳದಿಂಗಳನ್ನು ಕುರಿತು ಕತೆ ಆರಂಭವಾಗಿದೆ. ಚಿನ್ನ ಮತ್ತು ಕತೆಯ ನಿರೂಪಕನದು ಒಂದು ಕುಟುಂಬವಾದರೆ, ಚಿನ್ನಳ ಗೆಳತಿ ಲೀಲಾವತಿ ಮತ್ತು ಅವಳ ಗಂಡನದು ಒಂದು ಕುಟುಂಬ. ಚಿನ್ನಿಗೆ ನಾಲ್ಕು ವರ್ಷದ ಬಾಲು ಎಂಬ ಗಂಡು ಮಗು ಇದೆ. ಈ ಕತೆಯಲ್ಲಿ ಬರುವ ಎರಡು ಪುರುಷ ಪಾತ್ರಗಳು ಉದ್ಯೋಗಕ್ಕೆ ಹೊರಗಡೆ ಹೋದರೆ, ಸ್ತ್ರೀ ಪಾತ್ರಗಳು ಮನೆಯಲ್ಲಿ ಕೆಲಸ ಮಾಡುವುದು ಬಿಡುವಿದ್ದಾಗಲೆಲ್ಲ ಎರಡು ಕುಟುಂಬಗಳ ವಿಚಾರಗಳನ್ನು ಮಾತಾಡುತ್ತಿದ್ದರು. ಆ ಮನೆಯಿಂದ ಈ ಮನೆಗೆ, ಈ

ಮನೆಯಿಂದ ಆ ಮನೆಗೆ ಪ್ರತಿದಿನ ಏನಾದರೂ ಒಂದು ಪಾರ್ಸಲ್ ಹೋಗುತ್ತಿರುತ್ತದೆ. ಇದರಿಂದಾಗಿ ಲೀಲೂ ಮತ್ತು ಚಿನ್ನು ಒಡಹುಟ್ಟಿದ ಅಕ್ಕ ತಂಗಿಯರಂತೆ ತುಂಬಾ ಅನ್ಯೋನ್ಯವಾಗಿರುತ್ತಾರೆ.

ಒಂದು ದಿನ ಲೀಲೂ ಮತ್ತು ಚಿನ್ನು ಮಾತಾಡುವಾಗ ಲೀಲೂನ ಗಂಡನಿಗೆ ಕಾಯಿಲೆ ಬಂದಿರುವ ವಿಚಾರಗೊತ್ತಾಗುತ್ತದೆ. ಆ ದಿನ ರಾತ್ರಿ ಲೀಲೂನ ಮನೆಯಲ್ಲಿ ಲೀಲೂನ ದನಿಯಲ್ಲಿ ಅಳುವ ಶಬ್ದ ಕೇಳಿಬರುತ್ತದೆ. ಆ ಶಬ್ದ ಕೇಳಿಬರುತ್ತಿದಂತೆ ಚಿನ್ನು ಮತ್ತು ಅವಳ ಗಂಡ ತುಂಬಾ ಚಿಂತೆಗೆ ಒಳಗಾಗುತ್ತಾರೆ. ಎಷ್ಟು ಕೇಳಿದರೂ ಅಷ್ಟು ಜೋರಾಗುತ್ತಿತ್ತು ಆ ಅಳುವಿನ ಶಬ್ದ. ಈ ಪರಿಸ್ಥಿತಿಯಲ್ಲಿ ಗಂಡ ಹೆಂಡತಿ ಮಾತಾಡುವಾಗ ಚಿನ್ನುನ ಗಂಡ ಅನೇಕ ಪ್ರಶ್ನೆಗಳನ್ನ ತನ್ನ ಹೆಂಡತಿಗೆ ಕೇಳುತ್ತಾನೆ. ತನ್ನ ಗೆಳತಿಯಾದ ಲೀಲೂನ ಸಹಾಯಕ್ಕೆ ಯಾರಾರೂ ಮನೆಯಲ್ಲಿ ಇದ್ದಾರೆ ಎಂದು ಕೇಳುತ್ತಾನೆ. ಆಗ ಚಿನ್ನು "ಮನೆಯಲ್ಲಿ ಅವಳ ತಾಯಿ ಇದ್ದಾರೆ, ಮೈದುನ ಇದ್ದಾರೆ, ಒಬ್ಬ ಜವಾನ, ಒಬ್ಬ ಒಕ್ಕಲಗಿತ್ತಿ ಯಾವಾಗಲೂ ಇರುತ್ತಾರೆ. ಡಾಕ್ಟರ್ ದಿನಕ್ಕೆ ಮೂರು ನಾಲ್ಕು ಸಲ ಬಂದು ನೋಡಿಕೊಂಡು ಹೋಗುತ್ತಿದ್ದಾರಂತೆ. ನೆನ್ನೆಯಿಂದ ಒಬ್ಬ ನರ್ಸ್‌ನ ಗೊತ್ತು ಮಾಡಿದ್ದಾರಂತೆ... ಆದರೆ...

....ಏನು ಚಿನ್ನಾ?

ಮುಖ್ಯವಾಗಿ ದೇವರ ಕರುಣೆ ಬೇಕೂ ಅಂದ್ರೇ

ಆಹಾ ಅದು ನಿಜ ಚಿನ್ನಾ, ದೇವರ ಕರುಣೆ ಒಂದಿಲ್ಲದಿದ್ದರೆ ನಮ್ಮ ಆಟ ಮುಗೀತು!"[9] ಆದರೆ ಇಲ್ಲಿ ಕಣ್ಣಿಗೆ ಕಾಣಿಸುವವರಿಗಿಂತ ಕಣ್ಣಿಗೆ ಕಾಣದೇ ಇವರು ದೇವರು ಮುಖ್ಯವಾಗುತ್ತಾನೆ. ಇದು ಪರಂಪರೆಯಿಂದ ಬಂದಿದೆ. ಎಲ್ಲಾದಕ್ಕೂ ದೇವರೇ ಕಾರಣ ಎಂದು ನಂಬಿದ್ದ ನಮ್ಮ ಪೂರ್ವಜರು, ಬಂದ ಕಾಯಿಲೆ ಕೂಡ ವಾಸಿಯಾಗಬೇಕಾದರೆ ಅದಕ್ಕೆ ದೇವರ ಕರುಣೆ ಬೇಕು ಎಂದು ಹೇಳುವ ಮೂಲಕ ನಂಬಿಕೆಗೆ/ ಆಚರಣೆಗೆ ಮಹತ್ವ ಕೊಟ್ಟ ವಿಚಾರ ಈ ಕತೆಯಲ್ಲಿ ನಮಗೆ ಕಾಣುತ್ತದೆ.

ಚಿನ್ನ ಮತ್ತು ಲೀಲೂ ತುಂಬಾ ಪ್ರೀತಿಯಿಂದ ತಮ್ಮ ತಮ್ಮ ಮನೆಯ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಹೀಗೆ ಆಪ್ತರಾದ ಈ ಗೆಳತಿಯರು ಪ್ರತಿಯೊಂದು ವಿಚಾರ ಮುಚ್ಚುಮರೆ ಇಲ್ಲದೇ ಮಾತಾಡುವುದರಿಂದ ಇವರಲ್ಲಿ ಯಾವುದೇ ರೀತಿಯಾ ಅನುಮಾನಗಳು, ಅಪನಂಬಿಕೆಗಳಿಗೆ ಅವಕಾಶ ಇರಲಿಲ್ಲ. ಹೀಗಿರುವಾಗ ಲೀಲೂ ಗಂಡನಿಗೆ ಕಾಯಿಲೆ ಬಂದಾಗ ಚಿನ್ನಳು ಎಷ್ಟೆಲ್ಲಾ ಪ್ರಯತ್ನ ಪಡುತ್ತಾಳೆ. ದೇವರಿಗೆ ಮುಡುಪು ಕಟ್ಟುತ್ತಾಳೆ, "ಮಹಾದೇವಾ, ಜಗಜ್ಯೋತಿ! ಲೀಲಾಳ ಮನೆ ದೀಪ ಉಳಿಸು! ನಿನಗೆ ಲಕ್ಷದೀಪಾರಾಧನೆ ಮಾಡಿಸುತ್ತೇನೆಂದು ಹರಕೆ ಮಾಡಿಕೊಂಡು ಎರಡು ರೂಪಾಯಿನ ದೇವರ ಡಬ್ಬಿಲಿ ಹಾಕುತ್ತಾಳೆ." ಅವಳ ಮನಸ್ಸೇ ಲೀಲೂನ ಕುಟುಂಬದ ಕಡೆಗೆ ಯೋಚಿಸುತ್ತಿರುತ್ತದೆ. ತನ್ನ ಗಂಡನ ಜೊತೆಗೆ ಲೀಲೂನ ಕುಟುಂಬದ ಚರ್ಚೆಯೇ ಮುಖ್ಯವಾಗುತ್ತದೆ.

ಲೀಲೂನ ಅಳುವ ಧ್ವನಿ, ಅವಳ ರೋದನ ಹೆಚ್ಚುತ್ತಾ ಆಕಾಶವನ್ನೇ ತುಂಬುವಂತೆ ಇರುತ್ತದೆ. ಇದನ್ನು ಕೇಳಿದೊಡನೆ ಚಿನ್ನಳು "ಅಯ್ಯೋ ಕೇಳೀ! ಏನೋ ಆಗಿಹೋಯ್ತೂ ಅಂದ್ರೇ!! ಲೀಲೂ! ಲೀಲೂ ಧ್ವನಿ!!... ಅಯ್ಯೋ! ರಾಮ! ರಾಮ!!... ಕಡೆಗೂ ತಂದಿಟ್ಟೆಯಾ ವಿಧಿಯೇ!! ಆಯ್ತು!... ಆಯ್ತೂ!! ಇನ್ನೇನು! ಭಗವಂತಾ! ನನ್ನ ಕೂಗು ಕೇಳಿಸಲಿಲ್ಲವೇ?... ನಿನಗೆ ಲಕ್ಷ ದೀಪ ಬೇಡವಾಯ್ತೇ ...ನಮ್ಮಪ್ಪಾ!!"[3] ಹೀಗೆ ಗಂಡನೊಂದಿಗೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಜನರ ಮಾತಿನ ಗಲಾಟೆಯನ್ನು ಕೇಳಿ, ಚಿನ್ನು ಮತ್ತು ಅವಳ ಗಂಡು ತುಂಬಾ ಭಯಬೀತರಾದರೂ, ಜೀವವೇ ಹೋದಂತೆ ಆಯಿತು. ಗಂಡ ಮತ್ತು ಹೆಂಡತಿಯ ವಿಲಿವಿಲಿ ಒದ್ದಾಟ ಕತೆಯ ಓದುಗರನ್ನು ಮೂಕರನ್ನಾಗಿಸುತ್ತದೆ. ಏನು ಮಾಡಬೇಕು ಎಂಬುದು ಗೊತ್ತಾಗದೇ ಪರದಾಡುತ್ತಾರೆ. ಕೊನೆಗೆ ಅಂತಿಮವಾಗಿ ದೇವರ ಮೊರೆ ಹೋಗುತ್ತಾರೆ. ಅನೇಕ ರೀತಿಯ ಮುಡುಪು, ಪ್ರಾರ್ಥನೆಗಳನ್ನು ಮಾಡುತ್ತಾರೆ. ಇಲ್ಲಿ ಗಮನಿಸುವ ಪ್ರಮುಖ ಅಂಶವೆಂದರೆ ಮನುಷ್ಯನಿಗೆ ಏನೇ ಆದರೂ ಅದಕ್ಕೆ ಕಾರಣ ಕರ್ತ ದೇವರು ಎಂಬುದು ಅಂತಿಮ ಉತ್ತರವಾಗುತ್ತದೆ. ಕತೆಗಾರ ಇಲ್ಲಿ ಪರಂಪರೆಯನ್ನು ಕಳೆದುಕೊಳ್ಳಲು ಇಷ್ಟಪಡದೇ, ಆಧುನಿಕತೆಯ ಜೊತೆಗೆ ಮುಖಾಮುಖಿ ಮಾಡುವಾಗ ಪರಂಪರೆ ಅನಿವಾರ್ಯ ಎಂಬುದನ್ನು ಇಲ್ಲಿ ಗುರುತಿಸುತ್ತಾರೆ.

ಮಾಸ್ತಿಯವರ ಪ್ರಭಾವದಲ್ಲಿಯೇ ಕತೆಗಳನ್ನ ಬರೆದ ಆನಂದರು ಅನೇಕ ಕತೆಗಳಲ್ಲಿ ಮಾಸ್ತಿಯವರಂತೆ ಪರಂಪರೆಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಜೊತೆಗೆ ಆಧುನಿಕತೆ ಎಷ್ಟೇ ಮುಖ್ಯವಾದರೂ, ಅದರ ಮಹತ್ವವನ್ನು ಗೌಣವಾಗಿಸುವ ಮೂಲಕ ಪರಂಪರೆಯನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದ್ದಾರೆ. ಈ ಕತೆಯಲ್ಲಿ ಕೂಡ ಲೀಲೂನ ಗಂಡ ವಿದ್ಯಾವಂತನಾದರೂ, ತನ್ನ ಹೆಂಡತಿಯ ಅಂಥ ಆಚರಣೆಗಳನ್ನು ತಡೆಯಲು ಪ್ರಯತ್ನ ಮಾಡುವುದಿಲ್ಲ. ಬದಲಾಗಿ ಅವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ.

ಆನಂದರ ಕತೆಗಳು ಬಹುತೇಕ ಒಂದು ಕುಟುಂಬದೊಳಗೆ ನಡೆಯುವಂತಹ ವಸ್ತುವನ್ನೊಳಗೊಂಡಿವೆ. ಅಲ್ಲಿ ಗಂಡ–ಹೆಂಡತಿ ಮಗು ಇಲ್ಲವೇ ತಂದೆ ತಾಯಿ, ಕೆಲವೇ ಪಾತ್ರಗಳ ಮೂಲಕ ಇಡೀ ಕತೆಯನ್ನು ನಿರೂಪಿಸುತ್ತಾರೆ. 'ಚೊಚ್ಚಲ ಸಂಭ್ರಮ' ಕತೆ ಅಂತಹ ಸಾಲಿಗೆ ಸೇರಿದ ಕತೆಗಳಲ್ಲಿ ಒಂದು. ರಾಜಣ್ಣ ಮತ್ತು ಅವಳ ಹೆಂಡತಿ ಗಂಗಮ್ಮ. ಇವರಿಬ್ಬರ ತಾಯಂದಿರಾದ ಪುಟ್ಟಮ್ಮ ಮತ್ತು ಸುಬ್ಬಮ್ಮ ಈ ನಾಲ್ಕು ಪಾತ್ರಗಳ ಮೂಲಕ ಕತೆಯನ್ನು ನಿರೂಪಕ ನಿರೂಪಿಸಿದ್ದಾರೆ. ರಾಜಣ್ಣ ಉದ್ಯೋಗದಲ್ಲಿದ್ದು, ಅವನ ಹೆಂಡತಿ ಗಂಗಮ್ಮಳ ಚೊಚ್ಚಲ ಹೆರಿಗೆಯ ಸುತ್ತ ಕತೆ ಹೆಣೆದಿದೆ. ಹೆಣ್ಣು ಗರ್ಭಿಣಿಯಾಗಿದ್ದಾಗಿನಿಂದ ಹೆರಿಗೆಯಾಗುವವರೆಗೆ ಏನೆಲ್ಲಾ ಕನಸುಗಳು ಕಾಣುತ್ತಾಳೆ ಎಂಬುದನ್ನು ಈ ಕತೆ ತುಂಬಾ ಚೆನ್ನಾಗಿ ವಿವರಿಸುತ್ತದೆ. ಜೊತೆಗೆ ಗಂಡು ಹೆಣ್ಣಿನ ನಡುವೆ ಯಾವತರ ತಮಾಷೆಗಳು ನಡೆಯುತ್ತವೆ ಎನ್ನುವುದನ್ನು ಈ ಕತೆ ನಿರೂಪಿಸಿದೆ. ರಾಜಣ್ಣ ಮತ್ತು ಗಂಗಮ್ಮ ಮಾಡುವ ತಮಾಷೆಗಳಲ್ಲಿ ತಮಗೆ ಮುಂದೆ ಆಗುವ ಮಗುವಿನ ನಾಮಕರಣದ

ವಿಷಯವೂ ಒಂದಾಗಿದೆ. ಹೆಂಡತಿ ತನ್ನ ಮಗುವಿಗೆ ಯಾವ ಹೆಸರಿಡೋಣ ಎಂದು ಕೇಳಿದಾಗ "ನಾನು ಹೇಳೋದನ್ನ ಸ್ವಲ್ಪ ಕೇಳು ಗಂಗಾ ಹೆಸರಿಗೇನು ಬರ! ನಮ್ಮ ಶಾಸ್ತ್ರದ ಪ್ರಕಾರ ಮೂವತ್ತು ಕೋಟಿ ದೇವತೆಗಳಿದ್ದಾರೆ! ಅವರ ಪೈಕಿ ಯಾರಾದರೂ ಒಬ್ಬರ ಹೆಸರನ್ನು"[3] ಎಂದು ಹೇಳುತ್ತಾನೆ. ಅಂದರೆ ಇಲ್ಲಿ ರಾಜಣ್ಣ ಓದಿದ್ದು, ಸರ್ಕಾರಿ ನೌಕರಿಯಲ್ಲಿದ್ದರೂ ತನ್ನ ಹೆಂಡತಿ ಮಗುವಿನ ಹೆಸರು ಕೇಳಿದಾಗ ಶಾಸ್ತ್ರ ನೋಡಬೇಕು ಎಂದು ಹೇಳುವ ಮಾತು ಪರಂಪರೆಯ ಭಾಗವಾಗಿ ಬಂದಿದೆ. ಅಂದರೆ ನಮ್ಮ ಪರಂಪರೆಯಲ್ಲಿ ಮಗು ಜನಿಸಿದಾಗ ನಕ್ಷತ್ರ, ರಾಶಿ, ಗೋತ್ರ ಇತ್ಯಾದಿಗಳನ್ನು ಬರೆದಿಡುತ್ತಾರೆ. ಅವುಗಳ ಆಧಾರದ ಮೇಲೆ ಮಗುವಿಗೆ ಹೆಸರು ನಿರ್ಧಾರವಾಗುತ್ತದೆ. ಒಂದು ವೇಳೆ ಶಾಸ್ತ್ರದ ಪ್ರಕಾರ ಹೆಸರು ನಾಮಕರಣ ಮಾಡದಿದ್ದರೆ ಮಗುವಿಗೆ ದೋಷಬರುತ್ತದೆ ಎಂಬ ನಿಯಮ ಇದೆ. ಅದಕ್ಕಾಗಿ ಈ ಕತೆಯ ನಾಯಕ ರಾಜಣ್ಣ ತನ್ನ ಹೆಂಡತಿ ಕೇಳಿದಾಗ ಈ ರೀತಿಯ ಉತ್ತರವನ್ನು ಹೇಳುತ್ತಾನೆ.

ಆನಂದರು ಕತೆಗಳಲ್ಲಿ ಆಧುನಿಕತೆಯಿಂದ ಬಂದ ಶಿಕ್ಷಣವನ್ನು ಕುರಿತು ಕಥಾ ರಚನೆಯನ್ನು ಮಾಡಿದ್ದಾರೆ. ಆದರೆ ಅವರ ಬಹುತೇಕ ಕತೆಗಳಲ್ಲಿ ಪರಂಪರೆಯಿಂದ ಬಂದ ನಂಬಿಕೆ/ಆಚರಣೆಯ ಮುಂದೆ ಆಧುನಿಕತೆಯಿಂದ ಬಂದ ಶಿಕ್ಷಣ ಸೋಲುತ್ತದೆ. ಅಂದರೆ ಶಿಕ್ಷಣ ಎಷ್ಟೇ ಪ್ರಬಲ ಅಸ್ತ್ರವಾಗಿದ್ದರೂ ಎಷ್ಟೇ ಸಾಮರ್ಥ್ಯ ಹೊಂದಿದ್ದರೂ ಅದು ಪರಂಪರೆಗಿಂತ ದೊಡ್ಡದಲ್ಲ ಎಂಬ ಮಾತನ್ನು ಈ ಕತೆಯ ಮೂಲಕ ಗ್ರಹಿಸಬಹುದು.

'ಜೋಯಿಸರ ಚೌಡಿ' ಕತೆಯು ಆನಂದರ ಮುಖ್ಯ ಕತೆಗಳಲ್ಲಿ ಒಂದಾಗಿದೆ. ಕತೆಯಲ್ಲಿ ಕಡಿಮೆ ಪಾತ್ರಗಳಿದ್ದರೂ, ದೀರ್ಘವಾದ ಸಂಭಾಷಣೆಗಳಿಂದ ಕೂಡಿದೆ. ಮಲ್ಲಿಗೆಹಳ್ಳಿ ಈ ಕತೆಯ ಕೇಂದ್ರ ಬಿಂದು. ಕೃಷ್ಣ ಜೋಯಿಸರೇ ಈ ಕತೆಯ ಮುಖ್ಯ ಪಾತ್ರದಾರಿ. ಜೋಯಿಸರು ಪರಂಪರೆಯಿಂದ ಬಂದ ಕಸಬು ಮಾಡುವ ಜೊತೆಗೆ ಭೂತ ಪಿಶಾಚಿಗಳನ್ನು ಬಿಡಿಸುವ ಮಂತ್ರ ವಿದ್ಯೆ ಕಲಿತಿದ್ದರು. ಅದು ಕೆಲ ದಿನಗಳಲ್ಲಿಯೇ ಇಡೀ ಸುತ್ತಮುತ್ತ ಇರುವ ಇಪ್ಪತ್ತು ಹಳ್ಳಿಗಳಿಗೆ ವ್ಯಾಪಿಸಿತು. ಎಲ್ಲಿ, ಯಾರಿಗೆ ಭೂತಪಿಶಾಚಿಗಳು ಹಿಡಿದಿರುತ್ತವೆಯೋ ಅಲ್ಲಿಗೆ ಹೋಗಿ, ಅವುಗಳನ್ನು ಬಿಡಿಸಿ, ಆ ಭೂತಪಿಶಾಚಿಗಳನ್ನು ಮಂತ್ರಿಸಿದ ತೆಂಗಿನ ಕಾಯಿಗಳಲ್ಲಿ ಸೆರೆಹಿಡಿದುಕೊಂಡು ಬಂದು ಮಲ್ಲಿಗೆಹಳ್ಳಿಯ ಕೆರೆ ಏರಿ ಮೇಲಿನ ವಯಸ್ಸಾದ ಹುಣಿಸೇಮರದಲ್ಲಿ ದಿಗ್ಬಂದನ ಮಾಡುವುದಾಗಿತ್ತು. ಬಂದ ಸಮಸ್ಯೆಗಳಿಗೆ ಅನುಗುಣವಾಗಿ ಸಂಭಾವನೆ ದೊರಕುತಿತ್ತು. ಮುದಿ ಹುಣಸೆಮರದಲ್ಲಿರುವ ಎಲೆಗಳಿಗಿಂತ ಜೋಯಿಸರು ಕಟ್ಟಿಹಾಕಿದ ಭೂತಪಿಶಾಚಿಗಳೇ ಹೆಚ್ಚಾಗಿದ್ದವು. ಹೀಗಾಗಿ ಜೋಯಿಸರ ಹೆಸರು ಪಿಶಾಚಿ ಜೋಯಿಸರೆಂದೇ ಪ್ರಸಿದ್ಧಿಯಾಯಿತು. ಅವರು ಗಳಿಸಿದ್ದ ಐದು ಸಾವಿರ ರೂಪಾಯಿಗಳಲ್ಲಿ ನಾಲ್ಕು ಸಾವಿರ ರೂಪಾಯಿಗಳಷ್ಟು ಭೂತಪಿಶಾಚಿಗಳಿಂದ ಸಂಪಾದಿಸಿದ ಹಣವಾಗಿತ್ತು.

ಹಣ ಮಾಡುವ ಭರದಲ್ಲಿ ತನ್ನನ್ನೇ ತಾನು ಮರೆತಿದ್ದ ಜೋಯಿಸರು ಭೂತಪಿಶಾಚಿಗಳನ್ನು ಬಿಡಿಸುವಲ್ಲಿ ಯಶಸ್ವಿಯಾದರೂ. ಧನಪಿಶಾಚಿಗೆ ತನ್ನಲ್ಲಿ ಜಾಗ ಕೊಡುತ್ತಾನೆ. ಹಣದ ರುಚಿಕಂಡ

ಜೋಯಿಸರಿಗೆ ನೀರಿನ ದಾಹದಂತೆ ಪದೇ ಪದೇ ಹಣದ ದಾಹವಿರುತ್ತದೆ. ದಿನದಿಂದ ದಿನಕ್ಕೆ ಧನದ ಹಸಿವು ಜಾಸ್ತಿಯಾಗುತ್ತದೆ. ಭೂತ ಪಿಶಾಚಿಗಳಿಂದ ಬರುತ್ತಿದ್ದ ಸಣ್ಣ ಸಣ್ಣ ತುತ್ತುಗಳಿಗೆ ತೃಪ್ತಿಯಾಗದೇ, ದೊಡ್ಡ ದೊಡ್ಡ ಕೊಪ್ಪರಿಗೆ ಹಣಕ್ಕೆ ಕಟ್ಟು ಬೀಳುತ್ತಾನೆ. ಭೂಮಿಯಲ್ಲಿರುವ ಹಣ ಬರೀ ಕಣ್ಣಿಗೆ ಕಾಣಿಸುವುದಿಲ್ಲ. ಅದನ್ನು ಅಂಜನ ಹಾಕಿಕೊಂಡು ನೋಡಬೇಕು. ಅದು ಜೋಯಿಸರಿಗೆ ಬಾರದ ವಿದ್ಯೆ. ಹೇಗಾದರೂ ಮಾಡಿ ಅಂಜನ ವಿದ್ಯೆ ಕಲಿಯಬೇಕೆಂದು, ಮನೆಯಲ್ಲಿ ಹೆಂಡತಿ ಎಲ್ಲಾ ಅನುಕೂಲ ಮಾಡಿಕೊಟ್ಟು, ಎರಡು ತಿಂಗಳಲ್ಲಿ ವಾಪಸು ಬರುವುದಾಗಿ ಹೇಳಿ, ಒಳ್ಳೆ ಶುಭದಿನದಂದು ಮನೆಯಿಂದ ಹೊರಡುತ್ತಾನೆ. ಹೀಗೆ ಹೊರಟ ಜೋಯಿಸರು ಎರಡು ತಿಂಗಳು ಮುಗಿದು, ಆರು ತಿಂಗಳು ಕಳೆದರೂ ಮಲ್ಲಿಗೆಹಳ್ಳಿಗೆ ಬರುವುದಿಲ್ಲ. ಕೊನೆಗೆ ಆರನೆಯ ತಿಂಗಳಲ್ಲಿ ಮಲೆಯಾಳದ ಯಾವುದೋ ಒಂದು ಊರಿನಿಂದ ಜೋಯಿಸರ ಹೆಂಡತಿಗೆ ಒಂದು ಕಾಗದ ಬರುತ್ತದೆ. ಅದರಲ್ಲಿ ನಾವು ಕ್ಷೇಮವಾಗಿರುವುದಾಗಿಯೂ, ಹದಿನೈದು ದಿನಗಳಲ್ಲಿ ಹಳ್ಳಿಗೆ ಬರುವುದಾಗಿಯೂ ಬರೆದಿರುತ್ತದೆ.

ಮನೆ ಬಿಟ್ಟು ಜೋಯಿಸರು ಮಲೆಯಾಳಕೆ ನೇರವಾಗಿ ಹೋಗಿ, ಒಂದು ತಿಂಗಳೊಳಗೆ, ಒಬ್ಬ ಪ್ರಸಿದ್ಧ ಮಾಂತ್ರಿಕನ ಸ್ನೇಹವನ್ನು ಬೆಳೆಸಿ, ತನ್ನಲ್ಲಿದ್ದ ಐದುನೂರು ರೂಪಾಯಿಗಳಲ್ಲಿ ಮೂರು ನೂರು ಹಣ ಖರ್ಚು ಮಾಡಿ ಅಂಜನ ತಯಾರಿಸುವ ವಿಧಾನ, ಅದರ ಪ್ರಯೋಗ ಅದಕ್ಕೆ ಸಂಬಂಧಿಸಿದ ಮಂತ್ರಗಳನ್ನು ಕಲಿಯುತ್ತಾನೆ. ಅಲ್ಲಿಯೇ ಅದನ್ನು ಪರೀಕ್ಷೆಗೆ ಒಳಪಡಿಸಿ ಯಶಸ್ವಿಯಾದ ನಂತರ ಹಳ್ಳಿಗೆ ಬರುತ್ತಾನೆ. ಮಲ್ಲಿಗೆ ಹಳ್ಳಿಯಿಂದ ಹೊನ್ನವಳ್ಳಿಗೆ ಎಂಟು ಮೈಲಿ ದೂರ ಇರುತ್ತದೆ. ಯಾವುದೇ ವಾಹನಗಳ ಓಡಾಟವಿಲ್ಲದೆ ರಸ್ತೆಯೇ ಇರುವುದಿಲ್ಲ. ಜನರು ಓಡಾಡಿದ ಕಡೆ ಮಾತ್ರ ಜಾಡು ಬಿದ್ದು ಎರಡು ಹಳ್ಳಿಗಳಿಗೆ ಅದೇ ರಸ್ತೆಯಾಗಿರುತ್ತದೆ. ಅಲ್ಲೇ ಪಕ್ಕದಲ್ಲೇ ಪಾಳೇಗಾರನ ತೋಪು ಇದ್ದು ಅದನ್ನು ಹಿಂದೆ ಒಬ್ಬ ಪ್ರಬಲನಾದ ಪಾಳೇಯಗಾರನು ಆಳುತ್ತಿದ್ದನಂತೆ. ಆ ತೋಪಿನಲ್ಲಿ ಸಣ್ಣ ಸಣ್ಣ ದಿಬ್ಬಗಳು ನೂರಾರು ಕಾಣುತ್ತವೆ. ಅಲ್ಲೇ ಊರು ಇತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ಕಾಣುತ್ತವೆ. ಇದು ಕೃಷ್ಣಜೋಯಿಸರಿಗೆ ಬಹುದಿನಗಳಿಂದ ಮನಸ್ಸಿನಲ್ಲೇ ಇದ್ದು, ಈಚೆಗೆ ಧನಪಿಶಾಚಗ್ರಸ್ಥರಾದ ಮೇಲೆ, ತೋಪಿನ ಬಳಿಯ ಪಾಳುಪ್ರದೇಶದಲ್ಲಿ ಬಹಳ ದ್ರವ್ಯ ಭೂಗತವಾಗಿರಲೇಬೇಕೆಂದು ನಿರ್ಧಾರಕ್ಕೆ ಬಂದನು. ಇದನ್ನು ಹೇಗಾದರೂ ಮಾಡಿ ಪಡೆಯಬೇಕೆಂಬ ಆಸೆಯಿಂದ ಊರಿಗೆ ಬಂದಾಗ ತೀರ್ಮಾನ ಮಾಡುತ್ತಾನೆ.

ಧನಪಿಶಾಚಿಗ್ರಸ್ಥಾನಾದ ಕೃಷ್ಣ ಜೋಯಿಸರು ಹಳ್ಳಿಯಲ್ಲಿರುವ ಹತ್ತು ಹನ್ನೆರಡು ವರ್ಷಗಳ ಒಬ್ಬ ತಬ್ಬಲಿ ದನಕಾಯುವ ಹುಡುಗನನ್ನು ಹಿಡಿದನು. ಅವನಿಗೆ ತಿಂಡಿ, ದುಡ್ಡು ಕೊಟ್ಟು, ಅವನಿಂದ ಆಣೆ ಪ್ರಮಾಣ ಮಾಡಿಸಿಕೊಂಡು ಒಂದು ದಿನ ರಾತ್ರಿ ಅವನ ಮೇಲೆ ಅಂಜನ ಪ್ರಯೋಗ ಮಾಡಿ, ಪಾಳು ಬಿದಿದ್ದ ತೋಪಿನಲ್ಲಿ ಧನ ಇರುವ ಜಾಗವನ್ನು ತಿಳಿದುಕೊಳ್ಳುತ್ತಾನೆ. ಅಲ್ಲಿ ದೊಡ್ಡ ದೊಡ್ಡ ದಿಣ್ಣೆಗಳಿದ್ದು ತನ್ನಿಂದ ನೆಲ ಅಗಿಯುವುದು ಸಾಧ್ಯವಿಲ್ಲೆಂದು, ಮಲ್ಲಿಗೆಹಳ್ಳಿಯಲ್ಲಿರುವ

ಒಬ್ಬ ಒಡ್ಡರ ಹನುಮಬೋಯಿಯನ್ನು ಗೊತ್ತುಮಾಡಿಕೊಂಡನು. ಅವನು ನಡುಪ್ರಾಯದ ಭೀಮಾಕಾರನಾದ ಆಳು. ಒಂದು ದಿನ ಜೋಯಿಸ ಅವನೊಂದಿಗೆ ಗುಟ್ಟಾಗಿ ಎಲ್ಲವನ್ನು ತಿಳಿಸಿ, ಅವನಿಗೂ ಸ್ವಲ್ಪ ಕೊಡುವುದಾಗಿ ಮಾತುಕೊಟ್ಟನು. ಇದಕ್ಕಾಗಿಯೇ ಕಾಯುತ್ತಿದ್ದ ಜೋಯಿಸನಿಗೆ ಆ ವರ್ಷ ನಲವತ್ತಾರನೆಯ ವರ್ಷದಲ್ಲಿ ಧನಲಾಭ ಸೂಚನೆಯಿತ್ತು. ಅದಕ್ಕಾಗಿ ತುಂಬಾ ಕಾಯುತ್ತಿದ್ದನು. ಆ ಸಮಯ ಬಂದಿದ್ದೇ ತಡ, ಧನಲಕ್ಷ್ಮಿಯನ್ನು ವಶಪಡಿಸಿಕೊಳ್ಳಲು ಅಮವಾಸ್ಯೆಯ ಮಧ್ಯರಾತ್ರಿ ಒಳ್ಳೇ ಮೂಹೂರ್ತವನ್ನು ಗೊತ್ತುಮಾಡಿದ್ದನು.

ಅಮವಾಸ್ಯೆ ಬಂದ ದಿನ ಜೋಯಿಸರು ಇಡೀ ದಿನ ಬಾಯಲ್ಲಿ ಮಂತ್ರವನ್ನೇ ಜಪಿಸುತ್ತಾರೆ. ಸಾಯಂಕಾಲ ಆದಂತೆಲ್ಲ ಪೂಜಾ ಸಾಮಾಗ್ರಿಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ರಾತ್ರಿ ಹತ್ತು ಗಂಟೆ ಹೊತ್ತಿಗೆ ಹನುಮಬೋಯಿ ಬಂದು ತೋಪಿನಲ್ಲಿ ಗುದ್ದಲಿ, ಪಿಕಾಸಿ, ಬುಟ್ಟಿಗಳು ಎಲ್ಲವನ್ನು ತಂದು ಕಾಯುತ್ತಿರುತ್ತಾನೆ. ಇವನು ತೋಪಿಗೆ ಬಂದ ಸ್ವಲ್ಪ ಸಮಯದ ನಂತರ ಜೋಯಿಸರು ಬರುತ್ತಾರೆ. ಅಷ್ಟೊತ್ತಿಗಾಗಲೇ ಹಳ್ಳಿಯಲ್ಲಿರುವ ಜನ ದೀಪಗಳನ್ನು ಆರಿಸಿ ನಿದ್ರೆಗೆ ಜಾರಿರುತ್ತಾರೆ. ಊರು, ತುಂಬಾ ಶಾಂತವಾಗಿತ್ತು. ಅಮವಾಸ್ಯೆಯಾಗಿದ್ದರಿಂದ ಕತ್ತಲು ಹೆಚ್ಚಾಗಿರುತ್ತದೆ. ಇಂತಹ ಸಮಯದಲ್ಲಿ ಹನುಮಬೋಯಿ ಮತ್ತು ಜೋಯಿಸರು ಪಾಳೇಗಾರನ ತೋಪಿಗೆ ಬರುತ್ತಾರೆ. ಅಷ್ಟೊತ್ತಿಗಾಗಲೇ ಜೋಯಿಸರ ಮೈ ತುಂಬಾ ಧನಪಿಶಾಚಿ ತುಂಬಿಕೊಂಡಿರುತ್ತದೆ. ಅಂಜನ ಹಾಕಿದ ಪ್ರಕಾರ ತಾವು ಅಗಿಯಬೇಕಿದ್ದ ಜಾಗವನ್ನು ಗುರುತುಮಾಡಿಕೊಳ್ಳುತ್ತಾರೆ.

"ಆ ಮೇಲೆ, ಆ ದಿಣ್ಣೆಗೆ ಪೂಜೆ ಮಾಡಿರು. ಮಂತ್ರೋಚ್ಚಾರಣೆ ಅವಿಚ್ಛಿನವಾಗಿ ನಡೆಯುತ್ತಿತ್ತು. ದಿಣ್ಣೆಗೆ ಪೂಜೆ ಮಾಡಿದ ಮೇಲೆ ಅಗೆಯುವ ಸಾಮಾಗ್ರಿಗಳನ್ನೆಲ್ಲಾ ದಿಣ್ಣೆಯ ಮೇಲೆ ಇರಿಸಿ, ಅದಕ್ಕೂ ಪೂಜೆ ಮಾಡಿದರು. ಆ ಮೇಲೆ ಇಬ್ಬರೂ ದಿಣ್ಣೆಗೆ ಮೂರು ಸುತ್ತು ಹಾಕಿ ಸಾಷ್ಟಾಂಗ ನಮಸ್ಕಾರ ಮಾಡಿದರು. ಎದ್ದು ಮೈ ಕೈ ಕೊಡವಿಕೊಳ್ಳುತ್ತಾ ಬೋಯಿಗೆ ಅಗೆಯುವಂತೆ ಹೇಳಿದರು." ಈ ಆಚರಣೆಗೆ ತುಂಬಾ ವರ್ಷಗಳ ಇತಿಹಾಸ ಇದೆ. ಯಾಕೆಂದರೆ ಧನಪಿಶಾಚಿ ಎಂದರೆ ಅದೊಂದು ರೀತಿಯ ಭಯವನ್ನು ಹುಟ್ಟಿಸುತ್ತದೆ. ಹೀಗಿರುವಾಗ ಅದನ್ನು ಪಡೆಯಬೇಕಾದರೆ ತುಂಬಾ ಪೂಜೆಗಳನ್ನು ಮಾಡಿದರೆ ಅದು ಸಿಗಬಹುದೆಂಬ ನಂಬಿಕೆ ಇದೆ. ಹೀಗೆ ಮಾಡುವಾಗ ಏನಾದರೂ ಹೆಚ್ಚು ಕಡಿಮೆಯಾದರೆ ಜೀವಕ್ಕೆ ಅಪಾಯ ಎಂಬ ಮುನ್ಸೂಚನೆಯಿಂದ ಜೋಯಿಸರು ಇಷ್ಟೆಲ್ಲಾ ಪೂಜೆಯನ್ನು ಮಾಡುತ್ತಾರೆ.

ಪೂಜೆ ಮುಗಿದಿದ್ದೇ ತಡ ಹನುಮಬೋಯಿ ನೆಲವನ್ನು ಅಗಿಯಲು ಆರಂಭಿಸಿದ. ಬೋಯಿ ನೆಲವನ್ನು ಅಗಿಯುವಾಗ, ಜೋಯಿಸ ಅವನ ಸಹಾಯಕ್ಕಿದ್ದು ಮಣ್ಣನ್ನು ಪಕ್ಕಕ್ಕೆ ಹಾಕುತ್ತಿದ್ದರು. ತುಂಬಾ ಕುತೂಹಲದಿಂದ ಇಬ್ಬರು ನೆಲವನ್ನು ಬೇಗ ಬೇಗ ಅಗೆಯುತ್ತಾರೆ. ಪಿಕಾಸಿ ತುದಿ ಹಣದ ಕೊಪ್ಪರಿಗೆಗೆ ತಾಗಿದ ಸದ್ದು ಈಗ ಕೇಳಿಸಬಹುದು! ಇನ್ನೊಂದು ನಿಮಿಷಕ್ಕೆ ಕೇಳಿಸಬಹುದೆಂದು ಆಸೆ ಕ್ಷಣ ಕ್ಷಣಕ್ಕೂ ಹೆಚ್ಚುತ್ತದೆ. ಬೆಳಗಿನ ಜಾವ ಎರಡೂವರೆ ಮೂರುಗಂಟೆ ಸಮಯದವರೆಗೂ

ನೆಲವನ್ನು ಅಗೆಯುತ್ತಾರೆ. ತಾವು ಗುಂಡಿ ತೋಡಿದ್ದ ಸ್ಥಳದಲ್ಲಿ ಇಪ್ಪತ್ತು ಹೆಣಗಳನ್ನು ಮುಚ್ಚಬಹುದಿತ್ತು. ಅಷ್ಟು ದೊಡ್ಡ ಗುಂಡಿಯನ್ನು ತೋಡುತ್ತಾರೆ. ಆದರೆ ಧನದ ಕೊಪ್ಪರಿಗೆ ಮಾತ್ರ ಎಲ್ಲಿಯೂ ಕಾಣಿಸುವುದಿಲ್ಲ. ಇತ್ತ ಜೋಯಿಸರ ಎದೆಯಲ್ಲಿ ನಡುಕ ಶುರುವಾಗುತ್ತದೆ. ಎಲ್ಲಿ ಹನುಮಬೋಯಿ ತನ್ನನ್ನು ಈ ಕುಣಿಗೆ ನೂಕುತ್ತಾನೆಂದು ಚಿಂತೆಗೆ ಒಳಗಾಗಿರುತ್ತಾನೆ. ಇಂತಹ ಸಮಯದಲ್ಲಿ ಪಿಕಾಸಿ ಏನೋ ಗಟ್ಟಿಯಾದ ವಸ್ತುವಿಗೆ ತಾಗಿ ಠಣ್ ಎಂಬ ಸದ್ದಾಗುತ್ತದೆ. ಇದನ್ನು ಕೇಳಿದ ಬೋಯಿ ನಿಧಿ, ನಿಧಿ ಎಂದರೆ ಜೋಯಿಸರು ಮೈ ಪುಳಕಿತವಾಗುತ್ತದೆ. ಇದರಿಂದ ಬೋಯಿಯ ರಟ್ಟೆಗಳಿಗೆ ಹೊಸ ಶಕ್ತಿ ಬಂದಂತಾಗಿ ಹತ್ತೇ ನಿಮಿಷದಲ್ಲಿ ಅಗೆದು ಮಣ್ಣನೆಲ್ಲಾ ತೆಗೆದು ಹಾಕಿ ನೋಡಿದ ನುಣುಪಾಗಿತ್ತು. ದಪ್ಪಗೆ, ದುಂಡಗೆ ಇದ್ದು ಒಂದು ಕಲ್ಲು ಅದು ರುಬ್ಬುವ ಕಲ್ಲಿನ ಆಕಾರದಲ್ಲಿತ್ತು. ಇದನ್ನು ನೋಡಿದ ಬೋಯಿಗೆ ರೇಗಿತ್ತು. ಇದೇನಾ ಈ ಜೋಯಿಸ ತೋರಿಸಿದ್ದು, ಬೇರೆ ಯಾರಾದ್ರೂ ಮೇಸ್ತ್ರಿ ಕೈ ಕೆಳಗೆ ಇಷ್ಟೊಂದು ಕೆಲಸ ಮಾಡಿದ್ರೆ ಒಂದು ರೂಪಾಯಿ ಗಿಟ್ಟುತ್ತಿತ್ತು ಎಂದು ಮನಸ್ಸಿನಲ್ಲಿ ತನ್ನ ನೋವು ಮತ್ತು ನಿರಾಶೆ ಸೇರಿ ಅವನ ಮೈ ಬೆಂಕಿಯಾಯಿತು. ಇದನ್ನು ನೋಡಿದ ಜೋಯಿಸರಿಗೆ ತುಂಬಾ ಭಯವಾಗುತ್ತದೆ. ಅನೇಕ ಯೋಚನೆ ತಲೆಯಲ್ಲಿ ಬರುತ್ತವೆ. ಏನು ಮಾಡಬೇಕೆಂದು ಗೊತ್ತಾಗದೇ ವಿಲವಿಲ ಒದ್ದಾಡುತ್ತಾನೆ. ಕೊನೆಗೆ ಇದ್ದಕ್ಕಿದ್ದಂತೆ ಒಂದು ಯೋಚನೆ ಹೊಳೆಯುತ್ತದೆ. ಎಷ್ಟಾದರೂ ಬ್ರಾಹ್ಮಣ ಬುದ್ಧಿ! ಪ್ರಳಯಾಂತಕ ಬುದ್ಧಿ!! ಇನ್ನೇನು ಬೋಯಿ ಕಲ್ಲನ್ನು ಎತ್ತಿ ಎಸೆಯಬೇಕು ಎನ್ನುವಷ್ಟರಲ್ಲಿ “ಬೋಯೀ, ಬೋಯೀ ದೇವೀಕಣೋ ಅವಳೂ! ದೇವೀ ಶ್ರೀ ಚೌಡಾಂಬೇ ಕಣೋ! ಏನು, ಬರೀ ಕಲ್ಲೂಂತ ತಿಳಿದು ಬಿಟ್ಟೆಯಾ?... ನಿನ್ನ ಮನೆ ಹಾಳಾದೀತು!... ಜೋಕೆ!!”[೫] ಎಂದು ಹನುಮಾಬೋಯಿಯ ಮೇಲೆ ಭಕ್ತಿಯ ಬಲಿಯನ್ನು ಎಸೆಯುತ್ತಾನೆ. ಅನಕ್ಷರಸ್ಥನಾಗಿದ್ದ ಬೋಯಿ, ಇಷ್ಟು ಕೇಳಿದ್ದೇ ತಡ, ಅವನ ಮೇಲಿನ ಕೋಪವೆಲ್ಲ ಮಾಯವಾಗಿ ಬಿಡುತ್ತದೆ. ಎತ್ತಿದ ಕಲ್ಲನ್ನು ನಿಧಾನವಾಗಿ ಕೆಳಗಿಟ್ಟು ಸುಮ್ಮನಾಗುತ್ತಾನೆ. ಇದೇ ಕಾಯುತ್ತಿದ್ದ ಜೋಯಿಸ ‘ಚೌಡಾಂಬೆ’ ಎಂಬ ಹೆಸರು ನಾಮಕರಣ ಮಾಡಿ ಅದಕ್ಕೆ ಅರಿಶಿನ–ಕುಂಕುಮ ಹಾಕಿ, ಬಾಯಲ್ಲಿ ಪಿಟಿಪಿಟಿ ಎನ್ನುತ ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡುತ್ತಾನೆ. ಬ್ರಾಹ್ಮಣನೇ ಈ ರೀತಿ ಕಲ್ಲನ್ನು ದೇವರೆಂದು ತಿಳಿದು ಪೂಜಿಸಿದರೆ, ಇನ್ನೂ ಅನಕ್ಷರಸ್ಥನಾಗಿದ್ದ ಒಡ್ಡನ ಪಾಡೇನೂ? ಅವನು ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡುತ್ತಾನೆ. ಹೀಗೆ ಕೋಪ ನಿರಾಶೆಗಳು ಮಾಯವಾಗಿವೆ. ಭಯ–ಭಕ್ತಿಗಳು ಹೆಚ್ಚಾಗುತ್ತವೆ.

ಇಷ್ಟಕ್ಕೆ ಸುಮ್ಮನಾಗದ ಜೋಯಿಸರು ಹನುಮಬೋಯಿಗೆ ಇಲ್ಲಸಲ್ಲದನ್ನು ಹೇಳಿ ಅವನ ಮನಸ್ಸಿನಲ್ಲಿ ಭಕ್ತಿಯನ್ನು ತುಂಬಲು ಪ್ರಯತ್ನಿಸುತ್ತಾನೆ. “ಬೋಯಿ, ಇದು ಸಾಮಾನ್ಯ ಅಂತ ಮಾತ್ರ ತಿಳೀಬೇಡ!.... ಕೊಪ್ಪರಿಗೆ ಹಣಕ್ಕಿಂತ ದೊಡ್ಡ ನಿಧೀ ಕಣೋ... ಈ ಚೌಡಾಂಬೇ! ನಿನ್ನ ಕೈಗೆ ಸಿಕ್ಕಿದ್ದಾಳೆ. ನಿನಗೆ ಒಲಿದ ಕುಲದೇವತೇಂತ ತಿಳಿದುಕೋ! ಎಲ್ಲಾ ಭೂತಪಿಶಾಚಿಗಳಿಗೂ ಈ ದೇವಿ ಮೇಸ್ತ್ರಿ ಇದ್ದ ಹಾಗೆ... ಇವಳು ಒಲಿದಳೂಂದ್ರೆ, ನೀನು ಮುಟ್ಟಿದ್ದು ಚಿನ್ನ! ಅಗೆದದ್ದು ಚಿನ್ನ!!

ರೇಗಿದಳೂಂದ್ರೆ, ಆಯ್ತು ನಿನ್ನ ಗತಿ! ನಿನ್ನ ಮಠದ ಗತಿ!!... ಬಿಡಬೇಡ ಈ ದೇವಿನ, ತೆಗೆದು ಕೋ... ನಮ್ಮ ಹಳ್ಳಿ ಕಾಯ್ದು ಕಾಪಾಡೋಕೆ ಒಂದು ಚೌಡಿ ಇರಲಿಲ್ಲ. ಇವಳನ್ನು ಒಯ್ದು ನಮ್ಮೂರ ಕೆರೆ ಏರಿ ಮೇಲಿನ ಹುಣಿಸೇ ಮರದಡೀಲಿ ಪ್ರತಿಷ್ಠೆ ಮಾಡೋಣ, ನಿನಗೆ ಮಂಗಳವಾಗುತ್ತೆ" ಎಂದು ದೇವಿಯ ಮಹಿಮೆಯನ್ನು ಹೇಳಿ ಹೇಳಿ ಒಡ್ಡನಲ್ಲಿ ಭಕ್ತಿ ಉಂಟಾಗುವಂತೆ ಮಾಡುತ್ತಾನೆ. ಅದು ಹಿಂದೆ ಜನ ವಾಸಮಾಡುವ ಪ್ರದೇಶವಾಗಿದ್ದು, ಅಲ್ಲಿನ ಜನ ಬಳಸುತ್ತಿದ್ದ ಕಾರದ ಗುಂಡು ಎಂಬುದು ಇಬ್ಬರಿಗೂ ಗೊತ್ತಿದೆ. ಆದರೆ ಅವರಿಬ್ಬರೂ ಅದನ್ನು ಹೇಳಲು ಸಿದ್ಧರಿಲ್ಲ. ಇಲ್ಲಿ ಜೋಯಿಸ ಏನಾದರೂ ನಿಜ ಹೇಳಿದರೆ, ತನಗೆ ಒಡ್ಡ ಹನುಮಬೋಯಿ ಏನು ಮಾಡುತ್ತಾನೆಂಬ ಭಯವಿದೆ. ಬೋಯಿಗೆ ಇದು ಕಲ್ಲು ಎಂದು ತಿರಸ್ಕರಿಸಿದರೆ ಮುಂದೆ ನನಗೆ ಏನಾಗುತ್ತದೆ ಎಂಬ ಭಯವಿದೆ. ಅಂದರೆ ನಮ್ಮ ಪರಂಪರೆ ಹೀಗೆ ನಮ್ಮನ್ನು ಕಟ್ಟಿಹಾಕಿದೆ ಎಂಬುದನ್ನು ಇಲ್ಲಿ ನಾವು ಗಮನಿಸಬಹುದು. ಇದನ್ನೇ ಕೋದಂಡರಾಮ ಎನ್.ಕೆ.ಯವರು 'ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' ಕೃತಿಯಲ್ಲಿ ಪರಂಪರೆ ಕುರಿತು ಈ ಮುಂದಿನಂತೆ ಹೇಳುತ್ತಾರೆ. "ಬದುಕಿಗೆ ಬೇಕಾಗಿಯೇ ಇಲ್ಲದ ಸುಳ್ಳುಗಳನ್ನು, ಅನಿವಾರ್ಯ ಸತ್ಯಗಳೆಂದು ಪರಂಪರೆಯು ಅಭಿವ್ಯಕ್ತಿಸಲು ಪ್ರಯತ್ನಿಸುತ್ತದೆ" ಎಂದು ಹೇಳಿದ್ದಾರೆ. ಪರಂಪರೆಗೆ ಅಂತಹ ಶಕ್ತಿ ಇದೆ ಎಂದು ನಿರೂಪಿಸಲು ಆನಂದರು ಈ ರೀತಿಯ ವಸ್ತುವನ್ನು ಬಳಸಿಕೊಂಡಿದ್ದಾರೆ. ಇದಕ್ಕೆ ಮಾಸ್ತಿಯವರು ಪ್ರೇರಣೆಯಾಗಿರಬಹುದು ಎಂಬುದು ಈ ಕತೆಯಲ್ಲಿ ತಿಳಿದು ಬರುತ್ತದೆ.

ಮೇಲ್ವರ್ಗಗಳು ಕೆಳವರ್ಗದವರನ್ನು ಹೇಗೆಲ್ಲಾ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ 'ಜೋಯಿಸರ ಚೌಡಿ' ಕತೆ ಉತ್ತಮ ನಿದರ್ಶನ. ಕಾರ ರುಬ್ಬುವ ಗುಂಡನ್ನು ಕಂಡು 'ಚೌಡಂಬೆ' ಎಂಬ ನಾಮಕರಣದೊಂದಿಗೆ ಮಲ್ಲಿಗೆಹಳ್ಳಿಯಲ್ಲಿ ಪ್ರತಿಷ್ಠಾಪನೆ ಮಾಡುವ ಜೋಯಿಸರು ಅದರಿಂದ ಹಣ ಸಂಪಾದನೆಯನ್ನು ಮಾಡುವ ದಾರಿ ಹುಡುಕಿಕೊಳ್ಳುತ್ತಾರೆ. ವರ್ಷಕ್ಕೆ ಕನಿಷ್ಠ ಮೂರು ಸಾವಿರ ರೂಪಾಯಿಗಳನ್ನು ವರಮಾನವಾಗಿ ಬರುವಂತೆ ಲೆಕ್ಕಚಾರ ಹಾಕುತ್ತಾನೆ. ಇದಕ್ಕೆ ತಂತ್ರವನ್ನು ಜೋಯಿಸರೇ ರೂಪಿಸಿ, ಹಳ್ಳಿಯ ಯಜಮಾನರ ಮೇಲೆ ತೋರಿಸುತ್ತಾನೆ. "ನನ್ಮಾತು ಕೇಳು; ನೀವಿಪ್ಪತ್ತು ಹಳ್ಳಿ ಪಟೇಲ್ರು ಏನು ತೀರ್ಮಾನ ಮಾಡ್ತಿರೋ ಅದು ನನಗೂ ಸಮ್ಮತ. ದೇವಿ ನನ್ನ ಕನಸಿನಲ್ಲಿ ಒಂದಲ್ಲ ಹತ್ತು ಸಲ ಕಾಣಿಸಿಕೊಂಡಳು; ಅಪ್ಪಣೆ ಮಾಡಿದಳು; ಹೋದೆ; ತಂದೆ; ಇಗೋ ನಿಮಗೆ ಒಪ್ಪಿಸಿದೆ. ಚೌಡಮ್ಮನ ಪ್ರತಿಷ್ಠೆಯೂ ಆಯಿತು. ನನ್ನ ಕೆಲಸ ಅಲ್ಲಿಗೆ ಮುಗಿಯಿತು. ಇನ್ನು ಆಕೆಯ ಪೂಜೆ-ಪುನಸ್ಕಾರ ಜಾತ್ರೆ-ಜಯಭೇರಿ ಎಲ್ಲಾ ನಿಮ್ಮಂತ ಹಳ್ಳಿ ಯಜಮಾನರಿಗೆ ಸೇರಿದ್ದು. ದೇವಿಗೆ ಸಲ್ಲೋ ಕಾಣಿಕೆಯ ವಸೂಲಿ-ವೆಚ್ಚ ಎಲ್ಲಾ ನಿಮ್ಮ ಧರ್ಮಕರ್ಮದ ಮೇಲೆ ನಡೀಬೇಕೂಂತ ಅಷ್ಟು ಕೇಳಿಕೋತೀನಿ. ಅಷ್ಟೇ ಈ ವಿಚಾರದಲ್ಲಿ ನೀವು ಇಪ್ಪತ್ತು ಪಟೇಲರೂ ಸೇರಿ ದೇವಿ ಮೇಲೆ ಭಾರ ಹಾಕಿ. ಒಂದು ತಿರ್ಮಾನಕ್ಕೆ ಬನ್ನಿ; ಅದರ ಮೇಲೆ. ನನ್ನ ಮಾತೊಂದೆ ಅಲ್ಲ ವಿಚಾರ ಮಾತೂ ಇಲ್ಲ"[1] ಎಂದು ಜೋಯಿಸ ಮರುಳೀಗೌಡನ ಬಳಿ ಹೇಳುತ್ತಾನೆ. ಇಲ್ಲಿ

ಯಜಮಾನ, ಗೌಡ, ಪಟೇಲ ಎಂಬ ಹೆಸರಿನವರು ಒಂದು ಹಳ್ಳಿಯ ಕೇಂದ್ರವ್ಯಕ್ತಿಯಾಗಿರುತ್ತಾರೆ. ಹಳ್ಳಿಯ ಜನ ಇವರಿಗೆ ಗೌರವ ಕೊಡುತ್ತಾರೆ. ಇವರ ಮಾತನ್ನು ಯಾವ ಜನ ಕೂಡ ಮೀರುವುದಿಲ್ಲ ಎಂ ಬ ನಂಬಿಕೆಯ ಮೇಲೆ ಜೋಯಿಸ ಯಜಮಾನ ಮತ್ತು ಪಟೇಲರ ಹೆಸರನ್ನು ಮುಂದು ಮಾಡುತ್ತಾನೆ. ಇಲ್ಲಿ ಜೋಯಿಸನ ಉದ್ದೇಶ ಹಣವನ್ನು ಸಂಗ್ರಹಿಸುವುದೇ ಮುಖ್ಯ ಹೊರತು, ಜನರ ಸಮಸ್ಯೆಗಳು ಮುಖ್ಯವಾಗುವುದಿಲ್ಲ. ಜಾತ್ರೆ–ಉತ್ಸವ ಮಾಡಲು ಯಜಮಾನರಿಗೆ ಜೋಯಿಸ ಹೇಳುವ ಉದ್ದೇಶ ಅದರಿಂದ ಹಣಸಿಗುತ್ತದೆ ಎಂಬುದೇ ಆಗಿದೆ. ಅದನ್ನು ಅವನು ನೇರವಾಗಿ ಹೇಳದೇ ಈ ರೀತಿಯಲ್ಲಿ ಹೇಳಿಸುತ್ತಾನೆ.

ಹೀಗೆ ಜೋಯಿಸರ ಚೌಡಿ ಕತೆಯಲ್ಲಿ ಬರುವ ಕೃಷ್ಣ ಜೋಯಿಸರು ಹಳ್ಳಿಯ ಜನರ ಮೌಢ್ಯವನ್ನು ತಿಳಿದು ಅನೇಕ ಬಗೆಯಲ್ಲಿ ಜನರಿಂದ ದುಡ್ಡು ಕೀಳುವ ಮಾರ್ಗಗಳನ್ನು ರೂಪಿಸುತ್ತದೆ. ದುಡ್ಡೇ ಅವನ ಜೀವನದ ಬಹುಮುಖ್ಯವಾದ ಬೇಡಿಕೆಯಾಗಿರುತ್ತದೆ. ಹಾಗಾಗಿ ಅದನ್ನು ಹಿಡೇರಿಸಿಕೊಳ್ಳಲು ಹಳ್ಳಿಯ ಯಜಮಾನರನ್ನು ಬಳಸಿಕೊಳ್ಳುತ್ತಾನೆ. ಕಾರಣ ತನ್ನ ಮನದಾಸೆಯನ್ನು ಜನರಿಗೆ ನೇರವಾಗಿ ಹೇಳದೇ ಪರೋಕ್ಷವಾಗಿ ಅವನ ಮಾತುಗಳನ್ನು ಈ ಕತೆಯಲ್ಲಿ ಹೇಳಿರುವ ಬಗೆಯನ್ನು ಕತೆಗಾರ ನಿರೂಪಿಸಿದ್ದಾರೆ.

ಆನಂದರು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದ್ದು 'ನಾನು ಕೊಂದ ಹುಡುಗಿ' ಕತೆಯಿಂದ ಕತೆಯಲ್ಲಿ ಬರುವ ನಿರೂಪಕ ಶಿಕ್ಷಣವನ್ನು ಪಡೆದಿದ್ದು, ಪಟ್ಟಣ ವಾಸಿಯಾಗಿದ್ದು, ಬೇಸಿಗೆಯ ರಜದಲ್ಲಿ ಮೈಸೂರಿನ ಸುತ್ತಮುತ್ತಲಿರುವ ಹೆಸರುಗೊಂಡ ಶಿಲಾಶಿಲ್ಪಗಳ ವೈಖರಿಯನೆಲ್ಲಾ ಸೆರೆಹಿಡಿಯಬೇಕೆಂಬ ಹುಚ್ಚು ತನದಿಂದ ಪ್ರವಾಸ ಕೈಗೊಳ್ಳುತ್ತಾನೆ. ಆ ಸಂದರ್ಭದಲ್ಲಿ ಒಂದು ಹಳ್ಳಿಯಲ್ಲಿ ನಡೆದ ಘಟನೆಯೇ 'ನಾನು ಕೊಂದ ಹುಡುಗಿ' ಕತೆಯ ವಸ್ತು. ಹಳ್ಳಿಯ ಹೆಸರು ನಾಗವಳ್ಳಿ. ನಿರೂಪಕ ಆ ಹಳ್ಳಿಗೆ ಬರುವ ವೇಳೆಗಾಗಲೇ ತನ್ನ ಸಂಚಾರದ ಮುಕ್ಕಾಲು ಪಾಲು ಮುಗಿದಿದ್ದು, ನೂರರಿಂದ ನೂರೈವತ್ತು ಚಿತ್ರಗಳನ್ನು ಸಂಗ್ರಹಿಸಿರುತ್ತಾನೆ. ತೆಗೆದ ಚಿತ್ರಗಳೆಲ್ಲವೂ ಸ್ವಂತದ್ದು. ಒಂದು ದಿನ ರಾತ್ರಿ ಕರಿಯಪ್ಪನವರ ಮನೆಯಲ್ಲಿ ನಿರೂಪಕ ಉಳಿಯುತ್ತಾನೆ. ಆ ಮನೆ ಹಳ್ಳಿಗೆ ದೊಡ್ಡ ಮನೆಯಾಗಿದ್ದು, 'ಅತಿಥಿ ದೇವೋಭವ' ಎನ್ನುವಂತೆ ಅತಿಥಿ ಸತ್ಕಾರವಾಗುತ್ತದೆ. ಮನೆಯ ತುಂಬಾ ಜನ; ಆಳು ಕಾಳುಗಳು–ದನಕರುಗಳು ಯಾವುದರಲ್ಲೂ ಕೊರತೆಯಿಲ್ಲ. ಬಂದ ದಿನ ಸ್ವಲ್ಪ ಆಯಾಸವಾಗಿದ್ದು, ನಿರೂಪಕ ಬೇಗ ಮಲಗಿಕೊಳ್ಳುತ್ತಾನೆ.

ಬೆಳಿಗ್ಗೆ ಎಚ್ಚರವಾದಾಗ ಆರೂವರೆ ಏಳುಗಂಟೆ ಇರುವಾಗಲೇ ಕರಿಯಪ್ಪನವರೇ ಒಂದು ಲೋಟ ಹಾಲನ್ನು ತರುತ್ತಾರೆ. ಅಭ್ಯಾಸವಿಲ್ಲದಿದ್ದರೂ ನಿರೂಪಕರು ಅವರ ಮನಸ್ಸಿಗೆ ಬೇಜಾರಾಗಬಾರದೆಂದು ಹಾಲನ್ನು ಕುಡಿಯುತ್ತಾರೆ. ನಂತರ ಸ್ನಾನ ಊಟದ ನಂತರ ಸಂಚಾರಕ್ಕೆ ಹೊರಡುತ್ತಾನೆ. ಹೀಗೆ ದಿನಗಳನ್ನು ಕಳೆಯುತ್ತಿರಬೇಕಾದರೆ ಚೆನ್ನಮ್ಮ ಎಂಬ ಹುಡುಗಿಯನ್ನು ನಿರೂಪಕ ನೋಡುತ್ತಾನೆ. ಆ ಹುಡುಗಿಯ ಬಗ್ಗೆ ಕರಿಯಪ್ಪನವರ ಆಳಾದ ಕರಿಯನ ಬಳಿ

ವಿವರಣೆಯನ್ನು ತಿಳಿಯುತ್ತಾನೆ. ಹುಡುಗಿ ತುಂಬಾ ಚೆನ್ನಾಗಿದ್ದು, ಯಾರು ಬಂದರೂ ಅವರನ್ನು ಸೆಳೆಯ ಬಲ್ಲವಳಾಗಿದ್ದಾಳೆ. ಇದಕ್ಕೆ ನಿರೂಪಕನು ಹೊರತಾಗಿಲ್ಲ. ಚೆನ್ನಮ್ಮ ಮತ್ತು ನಗರದ ನಿರೂಪಕನಿಗೆ ನಿಧಾನವಾಗಿ ಪರಿಚಯವಾಗುತ್ತದೆ. ಕೆಲವೊಂದು ವಿವರಗಳನ್ನು ಚೆನ್ನಮ್ಮ ನಿರೂಪಕನಿಗೆ ತಿಳಿಸಿಕೊಡುತ್ತಾಳೆ. ಹಲವು ಸಂದರ್ಭಗಳಲ್ಲಿ ಚೆನ್ನಿ ನಿರೂಪಕನ ಮನಸ್ಸನ್ನು ಆಕರ್ಷಿಸುತ್ತಾಳೆ. ಅವಳ ಮಾತು, ನಡತೆ, ಸರಳತೆ, ವಿನಯತೆ, ಮುಗ್ಧತೆ ಇತ್ಯಾದಿಗಳು.

ಒಂದು ದಿನ ನಿರೂಪಕ ರಾತ್ರಿ ಊಟ ಮಾಡಿ ಕೋಣೆಯಲ್ಲಿ ಮಲಗಿರುತ್ತಾನೆ. ಆಗ ಬಾಗಿಲು ಸದ್ದಾಗುತ್ತದೆ. ಯಾರೆಂದು ನೋಡಿದಾಗ ಬಂದವಳು ಚೆನ್ನಿಯೆಂದು ತಿಳಿದು ಭಯಪಡುತ್ತಾರೆ. ಮನಸ್ಸು ಗೊಂದಲಕ್ಕೀಡಾಗುತ್ತದೆ. ಚೆನ್ನಿ ಬಂದವಳೇ ತನ್ನ ಮನಸ್ಸನ್ನು ನಿಯಂತ್ರಣಕ್ಕೆ ತಂದುಕೊಂಡು ಚೆನ್ನಿಯ ಜೊತೆ ನಿಧಾನವಾಗಿ ಮಾತಾಡಲು ಆರಂಭಿಸುತ್ತಾರೆ. ಆಗ ಚೆನ್ನಿಯನ್ನು ದೇವರಿಗೆ ಬಿಟ್ಟಿದ್ದಾರೆಂದು ತಿಳಿಯುತ್ತದೆ. ಇದನ್ನು ತಿಳಿದ ನಿರೂಪಕ ಪತಿವ್ರತ ಧರ್ಮದ ಮೇಲೆ ಒಂದು ಉಪನ್ಯಾಸ ಕೊಡುತ್ತಾನೆ. ಅವಳನ್ನು ಹಾಸಿಗೆ ಮೇಲೆ ಕುಳ್ಳಿರಿಸಿ ಅವಳಿಗೆ ಒಂದು ಮುತ್ತನ್ನು ಕೊಡುತ್ತಾನೆ. ಚೆನ್ನಿ ಮಾಡುತ್ತಿರುವುದು ಸರಿಯಲ್ಲ ಎಂದು ಅದನ್ನು ವಿವರಿಸಿ, ಅವಳಿಗೆ ಅರ್ಥಮಾಡಿಸುತ್ತಾನೆ. ಅವಳನ್ನು ಕೋಣೆಯಿಂದ ಹೊರಗೆ ಕಳುಹಿಸುತ್ತಾನೆ. ಯಾಕೆ ಈತರ ಎಂದು ಯೋಚಿಸುತ್ತಾ ಹಾಸಿಗೆಯ ಮೇಲೆ ಕುಳಿತು, ಎರಡು ಕೈಗಳಿಂದಲೂ ತಲೆಯನ್ನು ಹಿಡಿದುಕೊಂಡು ಯೋಚಿಸುತ್ತಿದ್ದಾಗ "ಆ ದಿನ ರಾತ್ರಿ ನನ್ನನ್ನು ಪಾಪದ ಬಲೆಯಿಂದ ತಪ್ಪಿಸಿ ರಕ್ಷಿಸಿದವಳು ನನ್ನ ಲಕ್ಷ್ಮಿ. ಅವಳ ಪ್ರೇಮವೆಂಬ ಕೋಟೆ ನನ್ನನ್ನು ಸಂಪೂರ್ಣವಾಗಿ ಆವರಿಸಿತ್ತು. ನಾನೂ ಅವಳು ಒಂದಾದ ದಿನದಿಂದ ಇದುವರೆಗೂ ನಾನು ಅವಳಲ್ಲಿ ಕಾಣದ್ದನ್ನು ಇನ್ನೆಲ್ಲಿಯೂ ಕಾಣಲಾರೆ ಅನ್ನುವ ಹಾಗೆ ಮಾಡಿಬಿಟ್ಟಿದ್ದಳು. ರೂಪಕ್ಕಾಗಲೀ, ಗುಣಕ್ಕಾಗಲಿ, ಪ್ರೇಮಕ್ಕಾಗಲಿ ನಾನು ಅವಳಲ್ಲಿ ಇಟ್ಟ ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಬೇಕಾಗಿರಲಿಲ್ಲ. ಲಕ್ಷ್ಮೀ ನನ್ನ ಪಾಲಿಗೆ ಇಲ್ಲದೆ ಇದ್ದು, ನಾನು ಆ ರಾತ್ರಿ ಇದ್ದ ಸನ್ನಿವೇಶದಲ್ಲಿ, ಅರಕ್ಷಿತನಾದ ನನ್ನ ಮನಸ್ಸು, ಆ ಹಳ್ಳಿಯ ಯುವತಿಯಲ್ಲಿ ಪ್ರವರ್ತಿಸಿದ್ದಿದ್ದರೆ ಅದರಲ್ಲಿ ಆಶ್ಚರ್ಯವಿರುತ್ತಿರಲಿಲ್ಲವೆಂದು ನನಗೆ ಈಗಲೂ ಭೋದೆಯಾಗುತ್ತದೆ"[5] ಎಂದು ತನ್ನ ಹೆಂಡತಿಯನ್ನು ನೆನಪಿಸುಕೊಳ್ಳುತ್ತಾನೆ. ಅಂದರೆ ನಿರೂಪಕನಿಗೆ ಈಗಾಗಲೇ ಮದುವೆಯಾಗಿದ್ದು, ಯಾವುದಕ್ಕೂ ಕೊರತೆಯಾಗಿರಲಿಲ್ಲ. ಹಾಗಾಗಿ ಬೇರೊಂದು ಹೆಣ್ಣಿನ ಅವಶ್ಯಕತೆ ಇಲ್ಲ ಎಂದು ಹೇಳುತ್ತಾನೆ. ಜೊತೆಗೆ ಭಾರತೀಯ ಪರಂಪರೆಯಲ್ಲಿ ಒಬ್ಬ ಗಂಡಿಗೆ ಒಂದೇ ಮದುವೆ ಎಂಬ ನಿಯಮವೂ ಇಲ್ಲಿ ಚೆನ್ನಿಯ ಸಂಬಂಧವನ್ನು ತಡೆದಿರಬಹುದು. ಇದು ಭಾರತೀಯ ಪರಂಪರೆಯ ಒಂದು ಭಾಗವಾಗಿ ಈ ಕತೆಯಲ್ಲಿ ಮೂಡಿರಬಹುದು.

ಈ ಮೇಲಿನದು ಒಂದು ರೀತಿಯ ಪರಂಪರೆಯ ಭಾಗವಾದರೆ ಚೆನ್ನಿಯನ್ನು ಬಸ್ವಿ ಬಿಡುವ ಪದ್ಧತಿ ಪರಂಪರೆಯ ಮತ್ತೊಂದು ಭಾಗವಾಗಿದೆ. ಚೆನ್ನಿಗೆ ಎಂಟು ವರ್ಷ ವಯಸ್ಸಿರುವಾಗ ಕಾಯಿಲೆ ಬಂದಿರುತ್ತದೆ. ಬಂದ ಕಾಯಿಲೆ ವಾಸಿಯಾದರೆ ಮಗಳನ್ನು ಬಸ್ವಿ ಬಿಡುತ್ತೇವೆಂದು ಅವಳ

ತಂದೆ-ತಾಯಿಗಳು ಮರಡೀ ದೇವರಿಗೆ ಹರಕೆ ಮಾಡಿಕೊಂಡಾಗ ಕಾಯಿಲೆ ವಾಸಿಯಾಗುತ್ತದೆ. ಹಾಗಾಗಿ ಚೆನ್ನಿಯನ್ನು ಕೊಟ್ಟ ಮಾತಿನಂತೆ ದೇವರಿಗೆ ಬಿಡುತ್ತಾರೆ. ಇವೆಲ್ಲವುಗಳನ್ನು ಕುರಿತು ನಿರೂಪಕ ಯೋಚಿಸಿದಾಗ ಇದಕ್ಕೆ ಕಾರಣ ಜನರಲ್ಲಿನ ಮೌಢ್ಯ ಕಾರಣ ಎಂದು ಗೊತ್ತಾಗುತ್ತದೆ. ಏನು ಅರಿಯದ ಹಳ್ಳಿಯ ಮುಗ್ಧ ಯುವತಿಯನ್ನು ಕಂಡು ಅವನ ಮನಸ್ಸು ಕರಗುತ್ತದೆ. ತಂದೆ-ತಾಯಿಗಳೇ ತನ್ನ ಮಗಳನ್ನು ಈ ರೀತಿ ಬಲಿಕೊಡುವುದನ್ನು ಕಂಡು ಆಶ್ಚರ್ಯವಾಗುತ್ತದೆ. "ಮದುವೆಯಾದ ಹೆಂಗಸಿನಲ್ಲಿ ಯಾವ ಕೃತ್ಯವನ್ನು ಅವಳು ಕೆಟ್ಟದು ಎಂದು ಹೇಳುವಳೋ ಆ ಕೃತ್ಯವನ್ನು ತನ್ನ ಜೀವನದ ಧರ್ಮ ಎಂದು ಅನುಸರಿಸುತ್ತಾಳೆ! ಇದಕ್ಕೆ ಅವಳ ತಂದೆತಾಯಿಗಳೂ ಸಹಾಯ! ಪಾಪ! ಅವರಾದರೂ ಏನು ಮಾಡಿಯಾರು? ಅವರು ಜಾತಿಯ ವಾಡಿಕೆಗೆ ಬಲಿ ಬಿದ್ದಿದ್ದಾರೆ."[5] ಹೆಣ್ಣು ಯಾವುದನ್ನು ತಿರಸ್ಕರಿಸುತ್ತಾಳೊ, ಅದನ್ನು ಕತೆಯಲ್ಲಿ ವಸ್ತುವಾಗಿ ಬಳಸಿಕೊಂಡಿದ್ದಾರೆ. ಭಾರತೀಯ ಪರಂಪರೆಯಲ್ಲಿ 'ಪುರುಷಪ್ರಧಾನ ವ್ಯವಸ್ಥೆ'ಯನ್ನು ಇಲ್ಲಿ ಗುರುತಿಸಬಹುದಾಗಿದೆ. ಅಂದರೆ ಹೆಣ್ಣು ಪುರುಷನ ಅಧೀನ ಮತ್ತು ಅದು ಭೋಗದ ವಸ್ತು ಮಾತ್ರ ಎನ್ನುವಂತಹ ಅಂಶಗಳು ಈ ಕತೆಗೆ ಪೂರಕವಾಗಿರಬಹುದು.

೫.೨. ಪುರುಷ ಪ್ರಧಾನ ವ್ಯವಸ್ಥೆ

ಆನಂದರ ಕೆಲವು ಕತೆಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಗುರುತಿಸಬಹುದು. ಅಂತಹ ಕತೆಗಳಲ್ಲಿ 'ಸರಸಿಯ ಗೊಂಬೆ' ಕತೆಯೂ ಒಂದು. ಸರಸಿ ಶ್ಯಾನುಭೋಗ ವೆಂಕಟರಾಮಯ್ಯನವರ ಮಗಳು. ಸರಸಿಯ ಮನೆಗೂ ನಿರೂಪಕರ ಮನೆಗೂ ಹತ್ತಿರವಿದ್ದು, ಎಳೆಯ ಮಗುವಿದ್ದಾಗಿನಿಂದಲೂ ಅವಳನ್ನು ನೋಡಿರುತ್ತಾನೆ. ನಿರೂಪಕನಿಗೆ ಬೇಸರವಾದಾಗಲೆಲ್ಲಾ ಅಥವಾ ಅವಳ ಜೊತೆಗೆ ಆಡುವುದಕ್ಕೆ ಇನ್ನ್ಯಾರೂ ಸಿಕ್ಕದೆ ಇದ್ದಾಗಲೆಲ್ಲಾ, ಅವರಿಬ್ಬರೂ ಒಟ್ಟಿಗೆ ಕಾಲ ಕಳೆಯುತ್ತಿರುತ್ತಾರೆ. ಆರು ವರ್ಷದ ಹುಡುಗಿಯಾಗಿದ್ದರೂ ಬಲು ಮಾತಿನ ಗಿಣಿ. ಅವಳ ಬಳಿ ಯಾರಾದರೂ ಗಂಡು ಹುಡುಗರು ಎದುರಿಗೆ ಬಂದು ಬಿಟ್ಟರೆ, ಹೊಸದಾಗಿ ಮದುವೆಯಾದ ಹುಡುಗಿಯ ಹಾಗೆ ಓಡಿಬಿಡುತ್ತಿದ್ದಳು. ಆದರೆ ನಿರೂಪಕನ ಜೊತೆಗೆ ಮಾತ್ರ ಕಿವಿಯಲ್ಲಿ ಕಿರ್ರನೆ ಊದಿಬಿಡುವಳು, ಜಕ್ಕಟಗುಳ್ಳೆ ಇಟ್ಟು ಬಿಡುವಳು ಹೀಗೆ ಏನಾದರೂ ಒಂದು ತಮಾಷೆ ಮಾಡುತ್ತಾ ಇರುತ್ತಿದ್ದಳು.

ಒಂದು ದಿನ ಸರಸಿಯ ಏಳನೆಯ ಹುಟ್ಟು ಹಬ್ಬಕ್ಕೆ ನಿರೂಪಕ ಹೋಗಿರುತ್ತಾನೆ. ಅವಳಿಗೆ ಬಹುಮಾನವಾಗಿ 'ಅರಗಿನ ಗೊಂಬೆ'ಯನ್ನು ಕೊಡುತ್ತಾನೆ. ಸರಸಿಗೆ ಅವಳ ಹುಟ್ಟಿದ ಹಬ್ಬದ ದಿನ ಬಹಳ ಸಡಗರ ಅವಳಿಗೆ ಹಿಂದಿನ ರಾತ್ರಿ ನಿದ್ದೆಯೇ ಬಂದಿರಲಾರದು. ಹುಟ್ಟು ಹಬ್ಬದ ಆಚರಣೆ ಮುಗಿದು ಎಲ್ಲಾರೂ ಊಟ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೆ. "ನನ್ನ ಹತ್ತಿರ ಕುಳಿತುಕೊಳ್ಳಬೇಕೆಂದು ಸರಸಿಯ ಇಷ್ಟ. ಹೆಂಗಸರ ಮಧ್ಯೆ ಕುಳಿತುಕೊಳ್ಳಲಿ ಎಂದು ಅವಳ ತಾಯಿ ಹೇಳಿದರು. ನೀನು ಈ ದಿನ ಹೆಂಗಸರ ಮಧ್ಯೆ ಕುಳಿತುಕೋಬೇಕಮ್ಮ ಎಂದು ನಾನೂ ಹೇಳಿದೆ. ಅವಳು ಕೇಳಳು. ಕೊನೆಗೆ ನೀನೂ ಅಲ್ಲೇ ಬಾ ಎಂದಳು. ನನಗೆ ವಿಪರೀತ ನಗು ಬಂತು! ಸರಿ ಚೆನ್ನಾಯ್ತು!

ನಾನೇನು ನಿನ್ನ ಹಾಗೆ ಹೆಂಗಸೆ? ಎಂದೆ ಕೊನೆಯಲ್ಲಿ ಅವಳು ಹೆಂಗಸರ ಮಧ್ಯೆ ಕುಳಿತುಕೊಳ್ಳಬೇಕೆಂದು ನಾನು ಅವಳಿಗೆ ಕಾಣುವ ಹಾಗೆ ಗಂಡಸರ ಮಧ್ಯೆ ಕುಳಿತುಕೊಳ್ಳಬೇಕೆಂದು ತೀರ್ಮಾನವಾಗಿ ಚರ್ಚೆ ಮುಗಿಯಿತು."[೧೦] ಇಲ್ಲಿ ಸರಸಿಗೆ ಕೇವಲ ಏಳೇ ವರ್ಷ ವಯಸ್ಸಾಗಿದ್ದು, ಅವಳ ಮನಸ್ಸಿನಲ್ಲಿ ಹೆಣ್ಣು ಗಂಡು ಎಂಬ ಭಾವನೆಯೇ ಇರುವುದಿಲ್ಲ. ಆದರೆ ಹಿರಿಯರು ಅದನ್ನು ಬಲವಂತವಾಗಿ ಅವಳ ಮೇಲೆ ಒತ್ತಡ ತರುತ್ತಾರೆ. ಇಲ್ಲಿ "ನಾನು" ಎಂದು ಬಳಕೆಯಾಗುವ ಪದ ನಿರೂಪಕನ ಪಾತ್ರವಾಗಿದೆ. ಹೇಗೆ ನಮ್ಮ ಪರಂಪರೆಯಲ್ಲಿ ಲಿಂಗ ಅಸಮಾನತೆ ಇತ್ತು ಎಂಬುದನ್ನು ಈ ಮೇಲಿನ ಸಾಲುಗಳಿಂದ ತಿಳಿಯಬಹುದು.

ಲಿಂಗ ಅಸಮಾನತೆಯನ್ನು ಕುರಿತ ಮತ್ತೊಂದು ಕತೆ 'ಚೊಚ್ಚಲ ಸಂಭ್ರಮ' ಕತೆಯಲ್ಲಿ ಗಂಡ-ಹೆಂಡತಿ ಮತ್ತು ಅವರ ತಾಯಂದಿರಷ್ಟೇ ಪಾತ್ರಗಳಾಗಿ ಕತೆಯನ್ನು ವಿವರಿಸುತ್ತವೆ. ಈ ಕತೆಯಲ್ಲಿ ಬರುವ ಕಥಾನಾಯಕ ರಾಜಣ್ಣ ಸರ್ಕಾರಿ ಉದ್ಯೋಗವನ್ನು ಮಾಡುತ್ತಿರುತ್ತಾನೆ. ಅವನ ಹೆಂಡತಿ ಗಂಗಮ್ಮ ಹಳ್ಳಿಯಿಂದ ಬಂದಿದ್ದು ಚೊಚ್ಚಲ ಗರ್ಭಿಣಿಯಾಗಿ ಕಾಣುವ ಹಗಲುಗನಸು ಈ ಕತೆಯ ವಸ್ತುವಾಗಿದೆ.

ಗಂಗಮ್ಮನಿಗೆ ತನ್ನ ಮಕ್ಕಳು ಯಾವುದೇ ರೀತಿಯ ಸಮಸ್ಯೆ ಎದುರಿಸಬಾರದು ಎಂಬ ಕಾರಣದಿಂದ ಗಂಡನಿಗೆ ಹೇಳಿ ಮಗುವಿಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ಹೆರಿಗೆಗೆ ಮುಂಚೆಯೇ ಪಟ್ಟಿಮಾಡಿಕೊಡುತ್ತಾಳೆ. ಅದರಲ್ಲಿ ಎರಡು ಲಡಿ ನೀಲಿ, ಮೂರು ಲಡಿ ಕೆಂಪು, ಒಂದು ಲಡಿ ಕಪ್ಪು, ಒಂದು ಲಡಿ ಹಳದಿ, ಸ್ಲೇಟು ಕಲರ್ದು, ಆನಂದಾ ಕಲರ್ದು ಎರಡೆರಡು ಲಡಿ, ಹಸುರೊಂದು ಲಡಿ, ಬಿಳುಪು ಮೂರು ಲಡಿ, ಉಲ್ಲಾ ದಾರವನ್ನು ತರುವಂತೆ ಹೇಳುತ್ತಾಳೆ. ಆ ಪಟ್ಟಿಯನ್ನು ನೋಡಿದ ಅವಳ ಗಂಡ ಹಾಸ್ಯವನ್ನು ಮಾಡುತ್ತಾನೆ. ಇಷ್ಟು ಉಲ್ಲಾದಾರ ಯಾಕೆ? ಇಷ್ಟು ತಂದರೆ ಮನೆಯವರಿಗೆಲ್ಲಾ ರಗ್ಗ ನೇಯಬಹುದಲ್ಲ ಎಂದು ಹೆಂಡತಿಗೆ ಹಾಸ್ಯ ಮಾಡಿದಾಗ "ನಿಮ್ಗೇನು ಬಿಡಿ! ಯಾವಾಗ್ಲಲೂ ಹಾಸ್ಯ! ಹೆಂಗಸರ ಆಸೆ-ಹಂಬಲು-ಬಯಕೆ ನಿಮಗೆ ಹ್ಯಾಗೆ ಗೊತ್ತಾಗ್ಬೇಕು? ಮಾತಾಡಿದರೆ ನಗೋಕೆ ಬರುತ್ತೆ ಹಾಸ್ಯ ಮಾಡೋಕೆ ಬರುತ್ತೆ! ಆ ಕುಲಾಪಿ ಗಾದಿ ಮಾಡಿರೋದು ಗಂಡಸೇ ಹೊರ್ತು ಹೆಂಗಸೆಂದಿಗೂ ಅಲ್ಲ! ನೀವೇನ್ಬೇಕಾದ್ರೂ ಹೇಳಿ ಮಕ್ಕಳ ಮೇಲೆ ಮಮತೆ ಹೆಂಗಸರಿಗಿರೋ ಹಾಗೆ ಗಂಡಸಿಗೆಂದಿಗೂ ಇರೋಲ್ಲ!! ನಮಗೆ ಕೋಪವೇನೋ? ಎಲ್ಲಿ ಮುಖ ಹೀಗಿ ತಿರುಗಿಸಿ... ಪರವಾಗಿಲ್ಲ"[೧೧] ಎಂದು ಗಂಡನನ್ನು ಮುಖಕೊಟ್ಟು ಮಾತಾಡುವಂತೆ ಹೇಳುತ್ತಾಳೆ. ಅಂದರೆ ಗಂಡನಿಗೆ ಮಕ್ಕಳ ಮೇಲೆ ಕಾಳಜಿ ಅಷ್ಟಾಗಿ ಇರುವುದಿಲ್ಲ. ಆದರೆ ಹೆಣ್ಣಿಗೆ ಚಿಕ್ಕ ಹುಡುಗಿ ಇದ್ದಾಗಲಿಂದಲೂ ಮಕ್ಕಳ ಮೇಲೆ ಪ್ರೀತಿ ಕಾಳಜಿ ಇರುತ್ತದೆ. ಅದು ಗಂಡನಿಗೆ ಗೊತ್ತಾಗುವುದಿಲ್ಲ ಎಂದು ಗಂಗಮ್ಮ ತನ್ನ ಗಂಡನಿಗೆ ಹೇಳುತ್ತಾಳೆ.

ಹೀಗೆ ತಮಗೆ ಮುಂದೆ ಆಗುವ ಮಗುವಿನ ಬಗ್ಗೆ ಗಂಡ ಹೆಂಡತಿ ಅನೇಕ ಬಗೆಯಲ್ಲಿ ಕನಸು ಕಾಣುತ್ತಾರೆ. ತನ್ನ ಹೆಂಡತಿ ಗರ್ಭಿಣಿಯಾದಾಗಿನಿಂದ ಒಂದಲ್ಲ ಒಂದು ವಿಷಯವಾಗಿ ಗಂಡನ

ಜೊತೆ ಚರ್ಚೆ ಮಾಡುತ್ತಾಳೆ. ಒಮ್ಮೆ ನಮಗೆ ಆಗುವ ಮಗುವಿಗೆ ಏನೆಂದು ಹೆಸರು ನಾಮಕರಣ ಮಾಡೋಣ ಎಂದು ಹೆಂಡತಿ ಕೇಳಿದಾಗ ಗಂಡ ಚಂದು ಎಂದಿಡೋಣಾಂತ ಹೇಳಿದರೆ, ಹೆಂಡತಿ ಸೋಮು ಎಂದು ಕರೆಯೋಣಾಂತ ಹೇಳುತ್ತಾಳೆ. ಇಲ್ಲಿ ಹೆಸರಿನ ಬಗ್ಗೆ ಯಾವುದೇ ಒಂದು ತೀರ್ಮಾನ ಅಂತಿಮವಾಗುವುದಿಲ್ಲ. ಕೊನೆಗೆ ಗಂಡ, ಹೆಣ್ಣು ಹುಟ್ಟಿದರೆ, ನೀನು ಹೇಳಿದ ಸೋಮು ಗಂಡು ಹೆಸರು, ಯಾವ ಹೆಸರಿಡುತೀಯಾ ಎಂದು ಹೆಂಡತಿಯನ್ನು ಕೇಳುತ್ತಾನೆ. ಅಲ್ಲಿಗೆ ಗಂಗಮ್ಮನಿಗೆ ನಿದ್ದೆ ಬರುತ್ತದೆ. ದೀಪಾ ಆರಿಸಿ ಮಲಗಿ ಬೆಳಿಗ್ಗೆ ಚರ್ಚಿಸೋಣ ಎಂದು ತನ್ನ ಅಸಹಾಯಕತೆಯನ್ನು ತೋರಿಸುತ್ತಾಳೆ. ರಾಜಣ್ಣ ಓದಿ ವಿದ್ಯಾವಂತನಾಗಿದ್ದರಿಂದ ಅವನಲ್ಲಿ ಯಾವುದೇ ಲಿಂಗ ತಾರತಮ್ಯ ಮನೋಭಾವ ಇಲ್ಲ. ಆದರೆ ಅವಳ ಹೆಂಡತಿ ಹಳ್ಳಿಯಿಂದ ಬಂದಿದ್ದು ಅವಳು ಲಿಂಗ ಅಸಮಾನತೆಯನ್ನು ಪುರುಷಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಂಡಿರುತ್ತಾಳೆ. ಅಷ್ಟೇ ಅಲ್ಲ ಅವಳ ಅಮ್ಮ ಮತ್ತು ಅತ್ತೆ ಕೂಡ ಅನಕ್ಷರಸ್ಥರಾಗಿದ್ದೂ ಅವರಲ್ಲಿಯೂ ಕೂಡ ಪುರುಷಪ್ರಧಾನ ವ್ಯವಸ್ಥೆಯನ್ನು ಕಾಣಬಹುದು.

ಚೊಚ್ಚಲ ಗರ್ಭಿಣಿಯಾಗಿದ್ದ ಗಂಗಮ್ಮನಿಗೆ ಹೆರಿಗೆಯ ನೋವು ಕಾಣಿಸಿಕೊಳ್ಳುತ್ತವೆ. ಮೊದಲನೆಯ ಹೆರಿಗೆಯಾದುದರಿಂದ ಮನೆಯಲ್ಲಿ ಎಲ್ಲರಿಗೂ ಸ್ವಲ್ಪ ಆತಂಕ. ಗಂಡ ಹಣಕ್ಕೆ ಬೆಲೆಕೊಡದೇ ಲೇಡಿ ವೈದ್ಯರನ್ನೇ ಗೊತ್ತು ಮಾಡಿದ್ದು. ಹೆರಿಗೆಯ ನೋವು ಜಾಸ್ತಿಯಾದಂತೆಲ್ಲ ರಾಜಣ್ಣನ ಎದೆಯಲ್ಲಿ ಭಯ ಹೆಚ್ಚಾಗುತ್ತಿತ್ತು. ಡಾಕ್ಟರ್ ಬಂದು ನೋಡಿದ ಕೂಡಲೇ ಸ್ವಭಾವಿಕವಾಗಿ ಹೆರಿಗೆಯಾಗುವುದು ಕಷ್ಟಸಾಧ್ಯ ಎಂದು ಹೇಳಿ, ತಾಯಿಯನ್ನು ಪ್ರಾಣಾಪಾಯದಿಂದ ತಪ್ಪಿಸಲು ಕೃತಕವಾಗಿ ಹೆರಿಗೆಯನ್ನು ಮಾಡಿಸಲು ಪ್ರಾರಂಭಿಸಿದರು. ಹೆರಿಗೆಯ ಕೊಠಡಿಯ ಹೊರಗೆ ರಾಜಣ್ಣ, ಅವನ ತಾಯಿ, ಅತ್ತೆ ಎಲ್ಲಾ ಮುಳ್ಳಿನ ಮೇಲೆ ನಿಂತಂತೆ ಇದ್ದರು. ಇದ್ದಕ್ಕಿದ್ದ ಹಾಗೆಯೇ ನರಳುವುದು ನಿಂತಿತು. ಇದನ್ನು ಗಮನಿಸಿದ ಸುಬ್ಬಮ್ಮನವರೂ ಪುಟ್ಟಮ್ಮನವರೂ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಿದ್ದರು. ನಮ್ಮ ಹರಕೆ ಮುಟ್ಟಿತು ದೇವರಿಗೆ! ಅಲ್ವೇ ಪುಟ್ಟಮ್ಮನೋರೇ? ಎಂದರು ಸುಬ್ಬಮ್ಮ.

"ಅಷ್ಟಲ್ಲದೆ ಏನಮ್ಮಾ!" ಎಂದರು ಪುಟ್ಟಮ್ಮ

"ಗಂಡಾಗಿದ್ದರೆ ನನ್ನ ಪುಣ್ಯವೇ ಪುಣ್ಯ"

"ಗಂಡೋ ಹೆಣ್ಣೊ, ಸದ್ಯ ಮಗು-ತಾಯಿ ಸುಖವಾಗಿದ್ದರೆ ಸಾಕಮ್ಮ"[೧೨]

ಈ ಮೇಲಿನ ಸಾಲುಗಳಲ್ಲಿ ಕೂಡ ಹೆಣ್ಣಿನ ತಿರಸ್ಕಾರವನ್ನು ನೋಡಬಹುದು. ಇಲ್ಲಿ ರಾಜಣ್ಣ ತಾಯಿ ಹೇಳುವ ಹಾಗೆ ಗಂಡು ಮಗುವಾದರೆ ಪುಣ್ಯ ಅಂತ ಹೇಳುತ್ತಾಳೆ. ಅಂದರೆ ಹೆಣ್ಣು ಮಗುವಾದರೆ ಅದು ಪಾಪ ಎಂಬ ಮಾತನ್ನು ಇಲ್ಲಿ ನಾವು ಊಹಿಸಿಕೊಳ್ಳಬಹುದು. ಹೇಗೆ ಕುಟುಂಬಗಳಲ್ಲಿಯೂ ಸ್ತ್ರೀ ಅಸಮಾನತೆ ಮನೆಮಾಡಿದೆ ಎಂಬುದನ್ನು ಈ ಕತೆಯಲ್ಲಿ ನೋಡಬಹುದು.

ಈಗಾಗಲೇ ನಾನು ಹಿಂದೆ ಹೇಳಿದ್ದೇನೆ ರಾಜಣ್ಣನಿಗೆ ಯಾವುದೇ ತರಹ ಲಿಂಗ ತಾರತಮ್ಯ ಇಲ್ಲ. ಕಾರಣ ಅವನಿಗೆ ಶಿಕ್ಷಣ ಇದೆ. ನಗರ ಪರಿಸರದ ವಾತಾವರಣದಲ್ಲಿ ಬೆಳೆದಿರುವುದರಿಂದ

ಅವನು ಆಧುನಿಕನಾಗಿದ್ದಾನೆ. ಆದರೆ ಅವನ ಹೆಂಡತಿ ಗಂಗಮ್ಮ ಹಳ್ಳಿಯಲ್ಲಿಯೇ ಹುಟ್ಟಿ ಬೆಳೆದಿರುವುದರಿಂದ, ಅವಳಿಗೆ ಶಿಕ್ಷಣ ಪಡೆಯಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಅವಳ ಮೇಲೆ ಪುರುಷಪ್ರಧಾನ ವ್ಯವಸ್ಥೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಆನಂದರು ಈ ಕತೆಯಲ್ಲಿ ವಿವರಿಸುವ ಸಣ್ಣ ಪ್ರಯತ್ನ ಮಾಡಿದ್ದಾರೆ. ಗಂಗಮ್ಮನ ಹೆರಿಗೆಯಾದುದು ಕೃತಕವಾಗಿ ಅದು ಜೀವಕ್ಕೆ ತುಂಬಾ ಅಪಾಯವಿರುತ್ತದೆ. ತಾಯಿ ಮಗು ಇಬ್ಬರಿಗೂ ತೊಂದರೆ ಇರುವುದರಿಂದ ಅಲ್ಲಿ ಒಂದು ಜೀವ ಸಾಯುವುದು ಅನಿವಾರ್ಯವಾಗುತ್ತದೆ. ಅಂತಹ ಸಂದರ್ಭದಲ್ಲಿ ಪ್ರಜ್ಞೆ ಬಂದ ಮೇಲೆ ಗಂಗಮ್ಮ ಕೇಳುವ ಪ್ರಶ್ನೆ "ಅಮ್ಮಾ, ಹೇಳಿ ಗಂಡೋ ಹೆಣ್ಣೋ? ಎಂದು

ಡಾಕ್ಟರು ಅವಳ ಪ್ರಶ್ನೆಗೆ ಉತ್ತರವನ್ನು ಕೊಡದೇ

"ಸ್ವಲ್ಪ ಸುಮ್ಮನಿರು ತಾಯಿ– ಅವಸರ ಪಡಬೇಡ–ಈಗ ಸ್ವಲ್ಪ ಹೊತ್ತು ಸುಧಾರಿಸಿಕೋ– ಆಯಾಸಪಟ್ಟುಕೋಬಾರದು" ಎಂದರು.

"ಇಲ್ಲಾ ಡಾಕ್ಟರೇ, ಆಯಾಸವೂ ಇಲ್ಲಾ ಗೀಯಾಸವೂ ಇಲ್ಲ. ತೋರಿಸಿ–ನಿಮ್ಮ ದಮ್ಮಯ್ಯ ತೋರಿಸಿ–ಗಂಡೋ ಹೆಣ್ಣೋ–ನಾ ನೋಡ್ಬೇಕು!"[೧೩] ಎಂದು ವೈದ್ಯರ ಬಳಿ ತುಂಬಾ ಹಠ ಮಾಡುತ್ತಾಳೆ. ಗಂಗಮ್ಮನಿಗೆ ಜೀವದ ಭಯವಿದ್ದರೂ, ಅದನ್ನು ತೊರೆದು ತನ್ನ ಮಗು ಗಂಡೋ–ಹೆಣ್ಣೋ ಎಂದು ಹಂಬಳಿಸುತ್ತಾಳೆ. ತನಗೆ ಏನಾದರೂ ಆಗಲಿ, ಆದರೆ ನನ್ನ ಮಗುವನ್ನು ತೋರಿಸಿ, ಇಲ್ಲವೇ ನೀವೇ ಹೇಳಿ. ಎಂದಾಗ 'ಅಮ್ಮಾ, ನಿನ್ನ ಹಟ! ಹೆಣ್ಣೋ–ಗಂಡೋ ಯಾವುದಾದರೂ ಈಗ ಪ್ರಯೋಜನವಿಲ್ಲ ಎಲ್ಲಾ ಒಂದೇ ಎಂದು ಮನಸ್ಸಿಲ್ಲದ ಮನಸ್ಸಿನಿಂದ ವೈದ್ಯರು ಹೇಳಿದರು. ಮಗು ಸತ್ತು ಹೋಗಿರುತ್ತದೆ. ಇದರಿಂದ ಗಂಗಮ್ಮ ಅವಳ ಗಂಡ ರಾಜಣ್ಣ ಮತ್ತು ಅತ್ತೆ ಹಾಗೂ ತಾಯಿ ಇವರಿಗೆಲ್ಲಾ ತುಂಬಾ ದುಃಖವಾಗುತ್ತದೆ.

ಈ ಕತೆಯಲ್ಲಿ ಪುರುಷಪ್ರಧಾನ ವ್ಯವಸ್ಥೆಯನ್ನು ಕತೆಗಾರ ವಸ್ತುವಾಗಿ ಬಳಸಿಕೊಂಡಿದ್ದಾರೆ. ಹೇಗೆ ಒಂದು ಹೆಣ್ಣನ್ನು ಪುರುಷ ತನ್ನ ಅಂಗೈಯಲ್ಲಿ ಇಟ್ಟುಕೊಂಡಿರುತ್ತಾನೆ ಎಂಬುದು ತಿಳಿಯುತ್ತದೆ.

೫.೩. ಶಿಕ್ಷಣ

'ಭವತಿ ಭಿಕ್ಷಾಂದೇಹಿ' ಕತೆ ಶಿಕ್ಷಣದ ಮಹತ್ವವನ್ನು ವಿವರಿಸುತ್ತದೆ. ಕತೆಯಲ್ಲಿ ಬರುವ ಮಾಧು ಭಿಕ್ಷಾನ್ನ ತಿಂದು ಶಾಲೆಗೆ ಹೋಗುತ್ತಾನೆ. ಅವನ ತಂದೆ–ತಾಯಿಗಳು ತೀರಬಡವರು. ಎಲ್ಲೋ ಒಂದು ಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಮಾಧುವು ಮಾತ್ರ ಪಟ್ಟಣಕ್ಕೆ ಬಂದು ಭಿಕ್ಷಾನ್ನದಿಂದ ಎಂಟ್ರೆನ್ಸ್ ತರಗತಿಯಲ್ಲಿ ಓದುತ್ತಿದ್ದನು. ಒಪ್ಪತ್ತು, ಉಪವಾಸ, ತಂಗಳು, ಹಳಸಲು ಎಲ್ಲಾ ಅವನಿಗೆ ಚಿರಪರಿಚಿತವಾಗಿದ್ದವು. ಒಮ್ಮೆ ನಾಗೇಶರಾಯರ ಮನೆಗೆ ಭಿಕ್ಷಾನ್ನಕ್ಕೆ ಹೋಗಿದ್ದಾಗ ಸ್ವಲ್ಪ ಮೆತ್ತಗೆ ಆಗಿದ್ದ ಅನ್ನವನ್ನು ಕೊಡಲು ಶಾರದಾಬಾಯಿ ಮಾಧುವನ್ನು ಕೇಳಿದಾಗ "ಹಾಕಿ ಅಮ್ಮ, ಭಿಕ್ಷಾನ್ನದ ಹುಡುಗರು ಅದೆಲ್ಲಾ ನೋಡುವುದಕ್ಕಾಗುತ್ತದೆಯೇ? ನನಗೆ ಎಲ್ಲಾ ಅಭ್ಯಾಸವಾಗಿದೆ; ಅದು ಉಪವಾಸಕ್ಕಿಂತ ಕಡೆಯೆ ತಾಯಿ!"[೧೪] ಎಂದು ಹಳಸಿದ ಅನ್ನವನ್ನು ತಿನ್ನಲು ತಯಾರಿರುತ್ತಾನೆ.

ಅಂದರೆ ಯಾವುದನ್ನೇ ಆಗಲಿ ಬಿಡದೇ ತಿನ್ನುತ್ತಾನೆ. ಶಾರದಾಬಾಯಿಯ ಮಗಳು ತಾಯಿಯನ್ನು 'ಹಳಸಿದ ಅನ್ನ ಹ್ಯಾಗೆ ತಿಂತಾನೇ ಅಮ್ಮ ಅಸಯ್ಯವಾಗುವುದಿಲ್ಲವೇನೆ?' ಎಂದು ಕೇಳುತ್ತಾಳೆ. ಇದರಿಂದ ಮಾಧುವಿನ ಬಗ್ಗೆ ಕುತೂಹಲ ಹುಟ್ಟಿ ಅವನ ಪೂರ್ವೋತ್ತರಗಳನ್ನೆಲ್ಲಾ ತಿಳಿಯಬೇಕೆಂದು ಗಂಡ-ಹೆಂಡತಿ ತೀರ್ಮಾನಿಸುತ್ತಾರೆ.

ಮರುದಿನ ಮಾಧು ಮನೆಗೆ ಬಂದಾಗ ವಿಚಾರವೆಲ್ಲಾ ತಿಳಿಯುತ್ತದೆ. ಅವನ ಕಥೆಯನ್ನು ಕೇಳಿ ನಾಗೇಶರಾಯರಿಗೂ ಶಾರದಮ್ಮನವರಿಗೂ ಬಹಳ ಚಿಂತೆಯಾಯಿತು. ಅಲ್ಲಿಂದ ಅವನಿಗೆ ದಿನಲೂ ಊಟ ಸಿಗುತ್ತಿತ್ತು. ಜೊತೆಗೆ ಸ್ವಲ್ಪ ತುಪ್ಪವೂ, ಹಬ್ಬ ಹರಿದಿನಗಳಲ್ಲಿ ತಿಂಡಿಗಳು ಸಿಗುತ್ತಿದ್ದವು. ಹೀಗಿರುವಾಗ ಮಾಧು ಒಂದು ವಾರದಿಂದ ನಾಗೇಶರಾಯರ ಮನೆಗೆ ಬಂದಿರಲಿಲ್ಲ. ಇವನ್ನು ಗಮನಿಸಿದ ನಾಗೇಶರಾಯರು ಮಾಧುವಿನ ಮನೆಗೆ ಬಂದು ನೋಡುತ್ತಾನೆ. ಮಾಧು ಜ್ವರ ಬಂದು ಮಲಗಿರುತ್ತಾನೆ. ಪರೀಕ್ಷೆ ಬೇರೆ ಹತ್ತಿರದಲ್ಲೇ ಇರುವುದರಿಂದ, ನಾಗೇಶರಾಯರು ವೈದ್ಯರಿಗೆ ಪತ್ರ ಬರೆಯುತ್ತಾರೆ. ಪ್ರತಿದಿನ ವೈದ್ಯರು ಮಾಧುವನ್ನು ಬಂದು ಆರೋಗ್ಯ ವಿಚಾರಿಸಿಕೊಂಡು ಹೋಗುವಂತೆ ವ್ಯವಸ್ಥೆ ಮಾಡುತ್ತಾನೆ. ಪರೀಕ್ಷೆಗೂ ದುಡ್ಡನ್ನು ಕೊಡುತ್ತಾನೆ. ಇದರಿಂದ ಮಾಧು ಕಾಯಿಲೆಯಿಂದ ಬೇಗ ಗುಣಮುಖನಾಗುತ್ತಾನೆ. ಪರೀಕ್ಷೆಯೂ ಮುಗಿದು ಪಾಸು ಆಗುತ್ತಾನೆ. ಅಲ್ಲಿಂದ ತಿಂಗಳಿಗೆ ಇಪ್ಪತ್ತು ರೂಪಾಯಿ ಶಿಷ್ಯವೇತನ ಬರುತ್ತದೆ. ಅದರಲ್ಲಿ ಹತ್ತು ರೂಪಾಯಿಗಳನ್ನು ತಂದೆ-ತಾಯಿಗಳಿಗೆ ಕಳುಹಿಸುತ್ತಾನೆ. ಜೊತೆಗೆ ಅಲ್ಲಿಯೇ ಒಂದು ಕಡೆ ಪಾಠ ಮಾಡಿ ತಿಂಗಳಿಗೆ ಐದು ರೂಪಾಯಿ ಸಂಪಾದಿಸಿ ಅದರಿಂದ ಪುಸ್ತಕ ಮುಂತಾದ ಖರ್ಚುಗಳನ್ನು ನಿಭಾಯಿಸುತ್ತಾನೆ.

ಮಾಧು ಬಿ.ಎ ತರಗತಿಗೆ ಬರುವಷ್ಟಕ್ಕೆ ಕಷ್ಟ ಕಡಿಮೆಯಾಗುತ್ತದೆ. ಹಾಗಾಗಿ ಮೂರು ವರ್ಷಗಳು ಅನಾಯಾಸವಾಗಿ ಕಳೆದು ಮೊದಲನೆಯ ತರಗತಿಯಲ್ಲಿ ತೇರ್ಗಡೆ ಹೊಂದಿ ಒಂದು ಬಂಗಾರದ ಪದಕವನ್ನು ಸಂಪಾದಿಸಿದನು. ಬಿ.ಎ. ಮುಗಿದ ನಂತರ ದೊಡ್ಡ ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ದೊಡ್ಡ ಮನೆ ಕಟ್ಟುತ್ತಾನೆ. ಮನೆಯಲ್ಲಿ ಪ್ರತಿಯೊಂದಕ್ಕೂ ಒಬ್ಬ ಆಳುಗಳಿರುತ್ತಾರೆ. ಅವನ ತಂದೆ-ತಾಯಿಗಳ ಆರೋಗ್ಯವನ್ನು ನೋಡಿಕೊಳ್ಳುವುದಕ್ಕೆ ಪ್ರತ್ಯೇಕ ಆಳುಗಳನ್ನು ನೇಮಿಸಿರುತ್ತಾನೆ. ನಾಗೇಶರಾಯರು ಮತ್ತು ಶಾರದಮ್ಮನವರೂ ಮಾಧು ಓದುವಾಗ ಅನೇಕ ಬಾರಿ ಸಹಾಯ ಮಾಡಿರುತ್ತಾರೆ. ಅದಕ್ಕಾಗಿ ಅವನಿಗೆ ಬಂದ ಬಂಗಾರದ ಪದಕವನ್ನು ಮೊದಲಿಗೆ ಅವರಿಗೆ ತೋರಿಸುತ್ತಾನೆ. ಮಾಧುವಿನ ಈ ಕೃತಜ್ಞತೆ ವಿನಯವನ್ನು ನೋಡಿದ ಗಂಡ ಹೆಂಡತಿ ತಮ್ಮ ಮಗಳಾದ ಸೀತೆಯನ್ನು ಮಾಧುವಿಗೆ ಕೊಟ್ಟು ಮದುವೆ ಮಾಡುತ್ತಾರೆ. ಇದು ನಾಗೇಶರಾಯರ ಮತ್ತು ಶಾರದಮ್ಮನವರ ಕನಸಾಗಿರುತ್ತದೆ.

ಸೀತೆ ಮತ್ತು ಮಾಧುವಿಗೆ ಮದುವೆಯಾಗಿ ಐದು ವರ್ಷಗಳಾಗಿರುತ್ತದೆ. ಸೀತಾ ಗಂಡನ ಮನೆಯಲ್ಲಿ ಸಂಸಾರ ಮಾಡುತ್ತಾಳೆ. ಮೊದಲಿನಂತೆ ಅವರ ಮನೆಯಲ್ಲಿ ಕೆಲಸಕ್ಕೆ ಆಳುಗಳಿಲ್ಲ. ತನ್ನ ಗಂಡನಿಗೆ ಅತ್ತೆ ಮಾವನಿಗೆ ಅಡಿಗೆ ಮಾಡಿ ಬಡಿಸಿದರೆ ಮಾತ್ರ ಸೀತೆ ತೃಪ್ತಿ. ಅತ್ತೆ ಮಾವನನ್ನು ತಂದೆ ತಾಯಿಯಂತೆ ನೋಡಿಕೊಳ್ಳುತ್ತಾಳೆ. ಗಂಡ ಕೂಡ ಅವಳನ್ನು ತುಂಬಾ ಪ್ರೀತಿಯಿಂದ

ನೋಡಿಕೊಳ್ಳುತ್ತಿದ್ದನು. ಅವರಿಗೆ ಮಗು ಆಗಿದ್ದು, ಅದರ ಹೆಸರು ಕೃಷ್ಣಮೂರ್ತಿ. ಮಾಧವರಾಯರ ಮನೆಯಲ್ಲಿ ಈಗ ಮೂರು ನಾಲ್ಕು ಜನ ಬಡ ವಿದ್ಯಾರ್ಥಿಗಳು ಅವರ ಮನೆಯಲ್ಲಿ ಊಟಮಾಡುತ್ತಿರುತ್ತಾರೆ. ಅವರಿಗೆ ಯಾವ ಕೆಲಸವನ್ನು ಹೇಳುತ್ತಿರಲಿಲ್ಲ. ಹೀಗಿರುವಾಗ ಒಂದು ದಿನ ಗಂಡ ಹೊರಗೆ ಹೋಗಿ ದಣಿದು ಮನೆಗೆ ಬಂದಿರುತ್ತಾನೆ. ಸೀತೆ ಗಂಡನಿಗಾಗಿ ಪಾನಕ ಮಾಡುವಲ್ಲಿ ತೊಡಗಿರುತ್ತಾಳೆ. ಆಗ ಮನೆಗೆ ಒಬ್ಬ ಹತ್ತು ಹನ್ನೆರಡು ವರುಷದ ಹುಡುಗ ಭಿಕ್ಷೆಗಾಗಿ ಬರುತ್ತಾನೆ. ಆ ಹುಡುಗನಿಗೆ ಸೀತೆ 'ಆಮೇಲೆ ಬಾ' ಎಂದು ಉತ್ತರ ಕೊಡುತ್ತಾಳೆ.

ಇದನ್ನು ಕೇಳಿದ ಮಾಧವರಾಯರು "ಅವರ ಮೇಲೆ ಸಿಟ್ಟು ಮಾಡಬಾರದು. ಸೀತಾ ಪಾಪ, ಆ ಹುಡುಗರು ಓದಬೇಕೆಂಬ ಆಸೆಯಿಂದ ಎಷ್ಟೆಷ್ಟೋ ಬಳಲುತ್ತಾರೆ, ಅವರಿಗೆ ಹೊತ್ತಿಗೆ ಹೊತ್ತಿಗೆ ಅನ್ನವಿಲ್ಲ, ನೀರಿಲ್ಲ, ಹೀಗಿರುತ್ತಾರೆ. ಒಂದೊಂದು ದಿನ ಉಪವಾಸ ಕೂಡ ಇದ್ದು ಬಿಡುತ್ತಾರೆ. ಏನೋ, ದೇವರು ನಮಗೆ ಒಂದು ತುತ್ತು ಅನ್ನವನ್ನು ಕೊಟ್ಟಿರುವುದರಿಂದ ಅವರು ನಮ್ಮ ಮನೆಯ ಬಾಗಿಲಿಗೆ ಬರುತ್ತಾರೆ; ಅಂಥವರಿಗೆ ಸಿಡುಕಿನಿಂದ ಅನ್ನ ಹಾಕಿದರೆ ಅದು ಅವರ ಮೈಗೆ ಹತ್ತುವುದಿಲ್ಲ. ನಮಗೆ ಅನ್ನದಾನದ ಫಲವೂ ಬರುವುದಿಲ್ಲ ಸೀತಾ! ಇನ್ನು ಮೇಲೆ ನೀನು ನನಗೋಸ್ಕರವಾದರೂ ಆ ಬಡಪಾಯಿಗಳ ಮೇಲೆ ಯಾವ ಕಾರಣದಿಂದಲೂ ಸಿಟ್ಟು ಮಾಡಬೇಡ" ಎಂದು ಬಡವರ ಮಕ್ಕಳ ಬಗ್ಗೆ ತನ್ನ ಹೆಂಡತಿಗೆ ಹೇಳುತ್ತಾನೆ. ಅಂದರೆ ಮಾಧು ಕೂಡ ಭಿಕ್ಷಾನ್ನದಿಂದ ಬಂದ ಆಹಾರವನ್ನು ತಿಂದು ಶಿಕ್ಷಣವನ್ನು ಪಡೆದಿರುತ್ತಾನೆ. ಹಾಗಾಗಿ ಭಿಕ್ಷುಕರ ಬಗ್ಗೆ ಅವನಿಗೆ ಎಲ್ಲಾ ರೀತಿಯಿಂದಲೂ ಅನುಕಂಪ ಇರುತ್ತದೆ. ಜೊತೆಗೆ ಅವರಿಗೆ ಯಾವ ಸಂಬಂಧಿಕರು ಸಹ ಕೈ ಹಿಡಿಯುವುದಿಲ್ಲ. ತಂದೆ ತಾಯಿಗಳನ್ನು ಬಿಟ್ಟು ಓದಿಗಾಗಿ ನಗರಕ್ಕೆ ಬಂದಿರುತ್ತಾರೆ. ಶಾಲೆಗೆ ಕಟ್ಟಲು ಹಣದ ಸಮಸ್ಯೆ ಕೂಡ ಅವರನ್ನು ಪದೇ ಪದೇ ಬಾದಿಸುತ್ತದೆ. ಹೀಗಿರುವಾಗ ಅಂತಹ ಮಕ್ಕಳಿಗೆ ಒಂದು ತುತ್ತು ಅನ್ನಹಾಕದೇ ಹಿಂದಕ್ಕೆ ಕಳುಹಿಸಿದರೆ ಹೇಗೆ ಎಂದು ತನ್ನ ಹೆಂಡತಿ ಸೀತಾಗೆ ತಿಳಿ ಹೇಳುತ್ತಾನೆ.

ಮಾಧುರಾಯರು ಭಿಕ್ಷೆಗೆ ಸಂಬಂಧಿಸಿದಂತೆ ಅನೇಕ ಮಾತುಗಳನ್ನು ತನ್ನ ಹೆಂಡತಿಗೆ ಹೇಳುವಾಗ, ಅವಳು ಪಕ್ಕದಲ್ಲಿ ಇದ್ದು ಸುಮ್ಮನೆ ಕೇಳುತ್ತಾಳೆ. ತಲೆ ಎತ್ತದೆ ಮುಖ ತಗ್ಗಿಸಿ ನಿಂತಿರುತ್ತಾಳೆ. ಇದರಿಂದ ತನ್ನ ಹೆಂಡತಿಗೆ ಕೋಪ ಬಂದಿರಬಹುದೇ ಎಂದುಕೊಳ್ಳುತ್ತಾ, ಸೀತಾ ನಾನು ನಿನ್ನನ್ನು ನೋಯಿಸಬೇಕು ಅಂತ ಹೇಳುತ್ತಿಲ್ಲ. ನಾನು ಇದನ್ನು ಅನುಭವಿಸಿದ್ದೇನೆ. ಹಾಗಾಗಿ ನಿನಗೆ ಹೇಳುತ್ತಿದ್ದೇನೆ ಎಂದಾಗ, ಸೀತೆಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಆಗ ಮಾಧು ಮತ್ತೇ ಮುಂದುವರಿಸುತ್ತಾನೆ. "ಸೀತಾ, ನಿನ್ನ ತಂದೆ ತಾಯಿಗಳ ಗುರುತು ಆಗುವುದಕ್ಕೆ ಮೊದಲು ನನಗೆ ಬಹಳ ಕಷ್ಟವಾಗುತ್ತಿತ್ತು. ಕೆಲವು ಮನೆಗಳಲ್ಲಿ ತಂಗಳನ್ನವನ್ನು ಹಾಕುತ್ತಿದ್ದರು. ಮತ್ತೆ ಕೆಲವರು ಹಳಸಿದ ಅನ್ನವನ್ನು ಕೂಡ ಹಾಕಿ ಬಿಡುತ್ತಿದ್ದರು. ಬರಿಯ ಹೊಟ್ಟೆಯಲ್ಲಿ ಎಷ್ಟೋ ರಾತ್ರಿಗಳನ್ನು ಕಳೆದಿರುವೆನು. ಈಗ ಅವುಗಳನ್ನು ನೆನಸಿಕೊಂಡರೆ ಕಣ್ಣಿನಲ್ಲಿ ನೀರು ಬರುವುದು. ದೇವರ

ದಯದಿಂದ ನಿನ್ನ ತಂದೆ ತಾಯಿಗಳ ಗುರುತು ಆಯಿತು. ಆ ಮೇಲೆ ನನಗೆ ಎಷ್ಟೋ ಸುಲಭವಾಯಿತು; ನಿನ್ನ ತಂದೆಯಿಂದ ನನಗೆ ಎಷ್ಟೋ ವಿಧದಲ್ಲಿ ಸಹಾಯವಾಯಿತು; ಅವರೇ ನನ್ನ ಭಾಗದ ದೇವರಾಗಿದ್ದರು"[೨೬] ಎಂದು ತನ್ನ ವೃತ್ತಾಂತವನ್ನೆಲ್ಲಾ ಹೆಂಡತಿಗೆ ಹೇಳುತ್ತಾನೆ. ಮಾಧು ಶಿಕ್ಷಣಕ್ಕಾಗಿ ನಗರ ಸೇರಿದ್ದು ಅನೇಕ ವರ್ಷಗಳು ತುಂಬಾ ಕಷ್ಟಗಳನ್ನು ಅನುಭವಿಸಿದ್ದನು. ಹಾಗಾಗಿ ತನ್ನ ಹೆಂಡತಿಗೆ ಯಾವುದೇ ಸಂದರ್ಭದಲ್ಲಿ ಭಿಕ್ಷಕ್ಕೆ ಬಂದವರನ್ನು ಹಿಂದಕ್ಕೆ ಕಳುಹಿಸಬಾರದೆಂದು ಹೇಳುತ್ತಾನೆ. ಯಾಕೆಂದರೆ ಅವನು ಹಾಸಿಗೆಯಿಲ್ಲದೆ ಬರೀ ಗೋಣಿ ತಾಟಿನ ಮೇಲೆ ಮಲಗಿ ಕಾಲಕಳೆದಿದ್ದನು. ದೀಪವನ್ನು ಹಚ್ಚಿ ಇಟ್ಟಿಗೆ ಮೇಲೆ ಇಟ್ಟುಕೊಂಡು ಓದುತ್ತಿದ್ದ, ಕೊಠಡಿಯು ಚಿಕ್ಕದಾಗಿದ್ದು, ಹೊದಿಯುವುದಕ್ಕೆ ಒಂದೇ ಒಂದು ಪಂಚೆ ಮಾತ್ರ ಇದ್ದು, ಪುಸ್ತಕಗಳನ್ನು ತಲೆದಿಂಬಾಗಿ ಬಳಸುತ್ತಿದ್ದನು. ಹಾಗಾಗಿ ಭಿಕ್ಷೆಯವರನ್ನು ಪ್ರೀತಿಯಿಂದ ಕಾಣಬೇಕು ಎಂದು ಹೇಳಿದಾಗ ಸೀತೆಯ ಕಣ್ಣುಗಳಲ್ಲಿ ಫಳ ಫಳನೇ ಕಣ್ಣೀರು ಬರುತ್ತವೆ.

ಇಲ್ಲಿ ಆನಂದರು ಬಡತನವನ್ನು ವಸ್ತುವಾಗಿ ಬಳಸಿಕೊಂಡು ಶಿಕ್ಷಣ ಸಾಮಾನ್ಯಜನರಿಗೆ ದೊರಕುವಾಗ ಎಷ್ಟೆಲ್ಲಾ ಕಷ್ಟಗಳನ್ನು ಪಡಬೇಕಿತ್ತು ಎಂಬುದನ್ನು ವಿವರಿಸಿದ್ದಾರೆ. ಶಿಕ್ಷಣ ಆಗತಾನೇ ನಮ್ಮ ದೇಶಕ್ಕೆ ಕಾಲಿಟ್ಟಿದ್ದು, ಅದು ನಗರಗಳಲ್ಲಿ ಮಾತ್ರ ಆರಂಭವಾಗುತ್ತದೆ. ಈ ಸಂದರ್ಭವನ್ನು ಹಲವು ಸಾಹಿತಿಗಳು ಕತೆ, ಕವನ, ಕಾದಂಬರಿಗಳಲ್ಲಿ ಪರಿಚಯಿಸಿದ್ದಾರೆ. ಹುಡುಗರು ಶಿಕ್ಷಣಕ್ಕಾಗಿ ನಗರ ಸೇರಿಕೊಳ್ಳುವುದು, ಅನಿವಾರ್ಯವಾಗಿರುತ್ತದೆ. ಮಾಸ್ತಿಯವರು ಇದನ್ನೇ ಅವರ ಮೊದಲ ಕತೆಯಾದ ರಂಗನ ಮದುವೆಯಲ್ಲಿ ಹೇಳಿದ್ದಾರೆ. ಹೊಸಹಳ್ಳಿಯಲ್ಲಿ ಕರಣೀಕರೇ ಮೊದಲು ಧೈರ್ಯಮಾಡಿ ಮಗನನ್ನು ಶಿಕ್ಷಣಕ್ಕಾಗಿ ಬೆಂಗಳೂರಿಗೆ ಕಳುಹಿಸುತ್ತಾರೆ ಎಂದು ಕತೆಯಲ್ಲಿ ಉಲ್ಲೇಖಿಸುತ್ತಾರೆ. ಇಂತಹ ಹಲವು ಪಾತ್ರಗಳು ನವೋದಯ ಕಾಲಘಟ್ಟದಲ್ಲಿ ಕಂಡುಬರುತ್ತವೆ.

ಹೆಂಡತಿಯ ಕಾಗದ ಕತೆಯ ಶೀರ್ಷಿಕೆಯೇ ಹೇಳುವಂತೆ ಇಡೀ ಕತೆಯ ವಸ್ತು ಕಾಗದವೇ ಆಗಿದೆ. ಕತೆಯಲ್ಲಿ ಬರುವ ಮುಖ್ಯ ಪಾತ್ರಗಳೇ ಗಂಡ ಮತ್ತು ಹೆಂಡತಿಯಾಗಿದ್ದು, ಮದುವೆಯಾದ ಹೆಂಡತಿ ವಾಣಿ ಮೈಸೂರಿನಲ್ಲಿದ್ದರೆ, ಅವಳ ಗಂಡ ರಾಮನಾಥ ಬೆಂಗಳೂರಿನಲ್ಲಿರುತ್ತಾನೆ. ಇವರಿಬ್ಬರು ಮದುವೆಗೆ ಮುಂಚೆ ಮಾಡಿಕೊಂಡಿದ್ದ ಷರತ್ತುಗಳಲ್ಲಿ ಕಾಗದವನ್ನು ತಪ್ಪದೇ ಬರೆಯಬೇಕಾಗಿತ್ತು. ಹಾಗಾಗಿ ಗಂಡನಿಂದ ಹೆಂಡತಿಗೆ, ಹೆಂಡತಿಯಿಂದ ಗಂಡನಿಗೆ ಕಾಗದಗಳು ಎಂದು ಹೋಗುತ್ತವೆ. ವಾಣಿ ತವರು ಮನೆಯಲ್ಲಿದ್ದರೆ, ರಾಮನಾಥ ಚಿಕ್ಕಪ್ಪನ ಮನೆಯಲ್ಲಿರುತ್ತಾನೆ. ಆನಂದರ ಕತೆಗಳಲ್ಲಿ ಬರುವ ಪುರುಷಪಾತ್ರಗಳು ಬಹುತೇಕ ಮದುವೆಯಾಗಿದ್ದು ಶಿಕ್ಷಣಕ್ಕಾಗಿ ನಗರ ಸೇರಿಕೊಳ್ಳುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ಕಾಗದ ಬರೆಯುವುದು, ಯೋಗಕ್ಷೇಮ ವಿಚಾರಿಸುವುದು, ಆರೋಗ್ಯದ ಬಗ್ಗೆ, ಆಹಾರದ ಬಗ್ಗೆ ಕಾಳಜಿ ವಹಿಸುವಂತೆ ಹೇಳುವುದು ಮಾಮೂಲಿಯಾಗಿರುತ್ತದೆ.

ಒಂದು ದಿನ ಭಾನುವಾರ ರಾಮನಾಥನಿಗೆ ಹೆಂಡತಿಯಿಂದ ಕಾಗದ ಬರಬೇಕಾಗಿರುತ್ತದೆ. ಅದಕ್ಕಾಗಿ ಅವನು ಬಹಳ ಆಸೆಯಿಂದ ಕಾದಿದ್ದ. ಅವನ ಆಸೆ ಹಿಂದಿನ ದಿನದಿಂದಲೇ ಆರಂಭವಾಗಿತ್ತು.

ಅವನು ಮಲಗುವ ಮುಂಚೆ ಹೆಂಡತಿಯ ಕಾಗದದ ಕುರಿತು ಕನಸು ಕಾಣುತ್ತಾನೆ. ಹಿಂದೆ ಬರೆದಿದ್ದ ಕಾಗದದಲ್ಲಿ ವಾಣಿ ಸಂಕ್ಷಿಪ್ತವಾಗಿ ಬರೆದಿರುತ್ತಾಳೆ. ಕಾಗದದ ಕೊನೆಗೆ ಈಗ ಹೆಚ್ಚು ಬರೆಯೋಕೆ ಪುರುಸೊತ್ತಿಲ್ಲ; ಮುಂದಿನವಾರ ದೊಡ್ಡದಾಗಿ ಕಾಗದ ಬರೀತೀನಿ, ಕ್ಷಮಿಸಬೇಕು" ಎಂದು ಬರೆದಿದ್ದು ರಾಮನಾಥನ ಎಲ್ಲಾ ಆಸೆಗಳಿಗೆ, ಕುತೂಹಲಕ್ಕೆ ಕಾರಣವಾಗಿತ್ತು. ಭಾನುವಾರ ಬೇಗ ಎದ್ದು ಅಂಚೆಯವನಿಗಾಗಿ ಕಾಯುತ್ತಿರುತ್ತಾನೆ. ಭಾನುವಾರ ಆಗಿರುವುದರಿಂದ ಅಂಚೆಯವನು ಸ್ವಲ್ಪ ತಡವಾಗಿಯೇ ಬರುತ್ತಾನೆ. ಕಾಗದ ಕೈ ಸೇರಿದ ಕೂಡಲೇ ಅದನ್ನು ಒಡೆಯಬೇಕೆಂದಿರುತ್ತಾನೆ. ಅಷ್ಟರಲ್ಲೇ ಅವನ ಗೆಳೆಯ ಗಣೇಶ ಬಂದು ಅವನನ್ನು ಕ್ರಿಕೇಟ್ ಮ್ಯಾಚಿಗೆ ಕರೆದುಕೊಂಡು ಹೋಗುತ್ತಾನೆ. ಹೆಂಡತಿಯ ಗುಂಗಿನಲ್ಲಿ ಕ್ರಿಕೇಟ್ ಮ್ಯಾಚಿರುವುದನ್ನೇ ಮರೆತಿದ್ದ. ರಾಮಾನಾಥ ಅವಸರ ಅವಸರವಾಗಿ ರೆಡಿಯಾಗಿ ಗೆಳೆಯನೊಂದಿಗೆ ಆಟವಾಡಲು ಹೋಗುತ್ತಾನೆ. ಅಲ್ಲಿ ರಾಮಾನಾಥ ಈ ಕೆಳಗಿನ ಸಮಸ್ಯೆಗಳನ್ನು ಎದುರಿಸುತ್ತಾನೆ.

ರಾಮನಾಥನ ಜೇಬಿನಲ್ಲಿದ್ದ ಕಾಗದ ಪದೇ ಪದೇ ಅವನನ್ನು ಕೆಣುಕುತ್ತಲಿದ್ದು, ಅದನ್ನು ಕುರಿತು ಯೋಚಿಸುತ್ತಿರುವಾಗ ಅವನ ಕಡೆ ಕ್ಯಾಚ್ ಬರುತ್ತದೆ. ಅದನ್ನು ಅವನು ಕೈ ಚೆಲ್ಲಿದ. ಆದ್ದರಿಂದ ಅವನ ಗೆಳೆಯರು ಅವನನ್ನು ಅನೇಕ ರೀತಿಯಲ್ಲಿ ಹಾಸ್ಯ ಮಾಡುತ್ತಾರೆ. ಒಬ್ಬನು; ಆಕಾಶದಲ್ಲಿ ನಕ್ಷತ್ರ ಎಣಿಸುತ್ತಿದ್ದ ಕಣ್ರೋ ಎಂದರೆ, ಮತ್ತೊಬ್ಬನು ಇಲ್ಲಾ ಇಲ್ಲಾ; ಸ್ವರಾಜ್ಯ ಯಾವಾಗ ಕೊಡ್ತಾರೇ ಅಂತ ಯೋಚಿಸ್ತಿದ್ದ, ಅಲ್ವೇನೋ ರಾಮ? ಎಂದು ಅವನನ್ನು ಕುರಿತು ಹಾಸ್ಯ ಮಾಡುತ್ತಾರೆ.

ರಾಮನ ತಂಡದಲ್ಲಿರುವವರು ಬೇಗ ಬೇಗ ಔಟಾಗಿ ಬರುತ್ತಾರೆ. ತಂಡದ ಜವಾಬ್ದಾರಿ ರಾಮನ ಮೇಲೆ ಬೀಳುತ್ತದೆ. ತಂಡದ ಗೆಲುವಿಗಾಗಿ ೩೦ ರನ್‌ಗಳು ಬೇಕಾಗಿರುವುದರಿಂದ ಎಲ್ಲಾರು ರಾಮುನನ್ನೇ ಪ್ರೇರೇಪಿಸುತ್ತಾರೆ. "ರಾಮನಾಥನಿಗಾದರೋ ತನ್ನ ಮೇಲಿದ್ದ ಜವಾಬ್ದಾರೀ ಭಾರಕ್ಕಿಂತ, ತನ್ನ ಷರಾಯಿ ಜೇಬಿನಲ್ಲಿದ್ದ ವಾಣಿಯ ಕಾಗದದ ಭಾರ ಹೆಚ್ಚಾಗಿದ್ದಂತೆ ತೋರಿತು. ಈ ಎರಡು ಭಾಗಗಳನ್ನು ಹೊತ್ತು ಆದಷ್ಟು ದೃಢಪ್ರತಿಜ್ಞೆಯಿಂದ ಹೊರಟ; ತನ್ನಿಂದ ತನ್ನ ಕಡೆಯವರಿಗೆ ಸೋಲಾಗಬಾರದೆಂದುಕೊಂಡು"[೧೭] ಆಟವನ್ನು ಆರಂಭಿಸಿದ. ತಂಡದ ಗೆಲುವಿಗೆ ನಾಲ್ಕು ರನ್‌ಗಳು ಬಾಕಿಯಿರುವಾಗ, ವಾಣಿಯ ಕಾಗದ ಭಾನುವಾರದ ಬದಲು, ಸೋಮುವಾರ ಬರುವ ಹಾಗೇ ವ್ಯವಸ್ಥೆಮಾಡಬೇಕೆಂದು ಯೋಚಿಸುತ್ತಿರುವಾಗ ಅವನ ಗೆಳೆಯ ಚೆಂಡನ್ನು ಪಕ್ಕಕ್ಕೆ ಹೊಡೆದು ಓಡುತ್ತಾನೆ. ಆದರೆ ರಾಮನಾಥ ಓಟಕ್ಕೆ ಸಿದ್ಧನಿರುವುದಿಲ್ಲ ಹಾಗಾಗಿ ರನ್ ಔಟ್ ಆಗುತ್ತಾನೆ. ಇದರಿಂದ ತಂಡಕ್ಕೆ ಸೋಲಾಗುತ್ತದೆ. ಪ್ರತಿಯೊಬ್ಬರೂ ಸೋಲಿಗೆ ಕಾರಣ ರಾಮನಾಥನೇ ಎಂದು ಅವನನ್ನು ದೂಷಿಸುತ್ತಾರೆ.

ಆಟ ಮುಗಿದ ನಂತರ ರಾಮನಾಥ ಮನೆಗೆ ಬೇಗ ಹೋಗಿ ಹೆಂಡತಿಯ ಕಾಗದವನ್ನು ಮನಸಾರೆ ಓದಿ ಆನಂದಿಸಬೇಕೆಂದು ನಿರ್ಧರಿಸುತ್ತಾನೆ. ಆದರೆ ಅವನ ಗೆಳೆಯ ಗಣೇಶ ಸಿನಿಮಾಕ್ಕೆ

ಕರೆದುಕೊಂಡು ಹೋಗುತ್ತಾನೆ. ಅದರಿಂದ ತಪ್ಪಿಸಿಕೊಳ್ಳೋಕೆ ಅನೇಕ ಉಪಾಯಗಳನ್ನು ಹೂಡಿದರೂ ಸಾಧ್ಯವಾಗಲಿಲ್ಲ. ಕೊನೆಗೆ ಸಿನಿಮಾ ಮುಗಿಸಿ ಮನೆಗೆ ಬರುವಾಗ ಸೈಕಲ್‌ನ ಮುಂದುಗಡೆಯ ಚಕ್ರ 'ಶಿಸ್' ಎಂದು ಪಂಚರ್ ಆಗುತ್ತದೆ. ಹೀಗೆ ಭಾನುವಾರ ಒಂದಲ್ಲ ಒಂದು ಸಮಸ್ಯೆ ಬಂದು, ರಾಮನಾಥನ ಹೆಂಡತಿಯ ಕಾಗದವನ್ನು ಓದದೇ ಅಡ್ಡಪಡಿಸುತ್ತವೆ. ಹೀಗೆ ಶಿಕ್ಷಣಕ್ಕಾಗಿ ನಗರಕ್ಕೆ ಹೋದಾಗ ಅಲ್ಲಿ ಏನೆಲ್ಲಾ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ಆನಂದರು 'ಹೆಂಡತಿಯ ಕಾಗದ' ಕತೆಯಲ್ಲಿ ಚಿತ್ರಿಸಿದ್ದಾರೆ.

ಇಂತಹದ್ದೇ ಕಥಾ ವಸ್ತುವನ್ನು ಒಳಗೊಂಡ ಕತೆ 'ಬೇವು-ಬೆಲ್ಲ.' ಇಲ್ಲಿ ಬರುವ ಕಥೆಯ ನಾಯಕರಿಬ್ಬರೂ ಶಿಕ್ಷಣಕ್ಕಾಗಿ ನಗರಕ್ಕೆ ಬಂದಿದ್ದು, ಅಲ್ಲಿ ಅನುಭವಿಸುವ ನೋವು, ಸಮಸ್ಯೆಗಳನ್ನು ಕತೆಗಾರ ಕತೆಯಲ್ಲಿ ನಿರೂಪಿಸಿದ್ದಾರೆ. ಶಿವಸ್ವಾಮಿ ಮತ್ತು ರಂಗಣ್ಣ ಶಿಕ್ಷಣಕ್ಕಾಗಿ ನಗರ ಸೇರಿದ್ದು, ಅವರಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಶಿವಸ್ವಾಮಿ ಮೈಸೂರು ಕಾಲೇಜಿಗೆ ಹೋದ; ರಂಗಣ್ಣ ಬೆಂಗಳೂರು ಕಾಲೇಜು ಸೇರಿದ. ಇಬ್ಬರಿಗೂ ಮದುವೆಯಾಗಿದ್ದು ಹೆಂಡತಿಯರಿಂದ ದೂರ ಉಳಿಯುತ್ತಾರೆ. ಹಾಗಾಗಿ ಇವರಿಬ್ಬರು ಹೋಟಲ್‌ನಿಂದ ಟಿಫನ್ ಕ್ಯಾರಿಯರ್‌ನಲ್ಲಿ ಊಟ ತರಿಸುತ್ತಿದ್ದರು. ಬೆಳಗ್ಗಿನ ಕಾಫಿ ಮಾತ್ರ ಮನೆಯಲ್ಲಿ ಮಾಡಿಕೊಂಡು, ಮಧ್ಯಾಹ್ನದ ಕಾಫಿ ತಿಂಡಿ ಹೊರಗೆ ಮಾಡುತ್ತಾ ಜೀವನ ಸಾಗಿಸುತ್ತಿದ್ದರು.

ರಂಗಣ್ಣನ ದೊಡ್ಡಪ್ಪನ ಮಗಳನ್ನು ಶೇಷಾದ್ರಿಪುರದಲ್ಲಿರುವ ರಾಜಾ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ ಗಂಡಸಿನೊಡನೆ ಮದುವೆಯಾಗಿರುತ್ತದೆ. ಯುಗಾದಿ ಹಬ್ಬದ ಊಟಕ್ಕೆ ರಂಗಣ್ಣನ ಭಾವ ಮನೆಗೆ ಬರುವಂತೆ ಹೇಳಿರುತ್ತಾನೆ. ಅದನ್ನು ಶಿವಸ್ವಾಮಿಯೊಡನೆ ಚರ್ಚಿಸುತ್ತಾನೆ. ಊಟದ ಕುರಿತು ತುಂಬಾ ಸುದೀರ್ಘವಾಗಿ ಚರ್ಚಿಸುತ್ತಾರೆ. ಆದರೂ ಶಿವಸ್ವಾಮಿ ಅದನ್ನು ಒಪ್ಪಿಕೊಳ್ಳುವುದಿಲ್ಲ ರಂಗಸ್ವಾಮಿ ತುಂಬಾ ಒತ್ತಡ ಮಾಡಿದಾಗ "ಆ ಮನೆಯಲ್ಲಿ ನಾಳೆ ಏನು ಸುಖವಿಲ್ಲ ಸಂತೋಷವಿಲ್ಲ. ನನ್ನ ತಮ್ಮಂದಿರು ಇಬ್ಬರು, ತಂಗಿಯೊಬ್ಬಳು ಇದ್ದಾರೆ. ತಾಯಿ ಇಲ್ಲದ ತಬ್ಬಲಿಗಳು ಅಪ್ಪನೋ!... ಅಪ್ಪನೇ ಸರಿ! ಅವನಾಯ್ತು, ಅವನ ಸ್ನೇಹಿತರಾಯ್ತು ಮನೆಯಲ್ಲಿ ನೋಡಿಕೊಳ್ಳೋರು ದಿಕ್ಕಿಲ್ಲ. ಹುಡುಗರು ಏನು ಹಬ್ಬದೂಟ ಮಾಡ್ತಾರೋ ನಾ ಕಾಣೆ. ಇಲ್ಲಿಗೆ ಬರೋಕೆ ಮುಂಚೆ, ಒಂದಿಷ್ಟು ಹಣ್ಣು-ತಿಂಡಿ ತೆಗೆದುಕೊಂಡು ಹೋಗಿ ಕೊಟ್ಟು ಬಂದೆ ತಿನ್ನಲಿ ತಬ್ಬಲಿಗಳು ಎಂದು. ನಾನು ಮನೆ ಮಾಡುವವರೆಗೂ ಈ ಕಷ್ಟ ಆ ಮಕ್ಕಳಿಗೆ. ಬೆನ್ನಲ್ಲಿ ಬಿದ್ದವರು ಅವರ ಪಾಡು ಹಾಗಿರೋವಾಗ ರಂಗೂ, ನಾನು ಯಾವ ಹೊಟ್ಟೆ ಇಟ್ಟುಕೊಂಡು, ನಾಳೆ ಹಬ್ಬದ ಊಟ ಮಾಡಲಿ?"[೧೮] ಎಂದು ತನ್ನ ಗೆಳೆಯನಿಗೆ ಇರುವ ಪರಿಸ್ಥಿತಿಯನ್ನು ನೇರವಾಗಿ ಹೇಳುತ್ತಾನೆ. ಶಿವಸ್ವಾಮಿ ತಾಯಿ ತೀರಿ ಹೋಗಿದ್ದಾಗ ಊರಿಗೆ ಬರುತ್ತಾನೆ. ಬರುವ ವೇಳೆಗಾಗಲೇ ತಂದೆ ತನ್ನ ತಾಯಿ ತೌರು ಮನೆಯಿಂದ ತಂದಿದ್ದ ಒಡವೆ ವಸ್ತುಗಳನ್ನೆಲ್ಲಾ ಮಾರಿರುತ್ತಾನೆ. ನಾಲ್ಕು ವರ್ಷಗಳ ನಂತರ ಈ ಘಟನೆ ನಡೆಯುತ್ತದೆ.

ಯುಗಾದಿ ಹಬ್ಬದ ದಿನ ರಂಗಣ್ಣ ಮತ್ತು ಶಿವಸ್ವಾಮಿಗೆ ಊಟದ ವಿಷಯವಾಗಿ ಮಾತು ಕಥೆ ನಡೆಯುತ್ತದೆ. ರಂಗಣ್ಣನ ಭಾವ ಹಬ್ಬದ ಊಟಕ್ಕೆ ಹೇಳಿರುತ್ತಾನೆ. ಶಿವಸ್ವಾಮಿ ಬರುವುದಿಲ್ಲ ಎಂದು ತಿಳಿದ ಮೇಲೆ ರಂಗಣ್ಣ ಬೈಸಿಕಲ್ ಹತ್ತಿ ಮನೆಯಿಂದ ಹೊರಟು ಹೋಗುತ್ತಾನೆ. ಶಿವಸ್ವಾಮಿ ಬೆಳಿಗ್ಗೆ ಎದ್ದಾಗ ಅವನ ಕುಟುಂಬ ನೆನಪಾಗಿ ಮನಸ್ಸಿಗೆ ಶಾಂತಿಯಿಲ್ಲದೇ, ನೆಮ್ಮದಿ ಇಲ್ಲದೇ ಒಬ್ಬನೇ ಮನೆಯಲ್ಲಿ ಯೋಚಿಸುತ್ತಾ ಕುಳಿತಿರುತ್ತಾನೆ. ಆಗ ಯಾರೋ ಬಂದು ಬಾಗಿಲು ತಟ್ಟಿದ ಶಬ್ದ ಕೇಳಿ ಬಾಗಿಲನ್ನು ತೆಗೆಯುತ್ತಾನೆ. ಟಪಾಲಿನವನು ಇವನ ಕೈಗೆ ಎರಡು ಕಾಗದಗಳನ್ನು ಕೊಡುತ್ತಾನೆ. ಒಂದು ಶಿವಸ್ವಾಮಿಗೆ, ಇನ್ನೊಂದು ರಂಗಣ್ಣನಿಗೆ. ರಂಗಣ್ಣನ ಕಾಗದವನ್ನು ಮೇಜಿನ ಮೇಲಿಟ್ಟು, ತನ್ನ ಕಾಗದವನ್ನು ಶಿವಸ್ವಾಮಿ ಒಡೆದು ನೋಡುತ್ತಾನೆ. ಅದು ಹೆಂಡತಿಯಿಂದ ಬಂದ ಕಾಗದವಾಗಿದ್ದು ಈ ಮುಂದಿನಂತೆ ಬರೆದಿರುತ್ತಾಳೆ. “...ನಾಳೆ ಈ ಕಾಗದ ನಿಮಗೆ ತಲುಪೋ ಹೊತ್ತಿಗೆ ಇಲ್ಲಿ ನಾವೆಲ್ಲಾ ಊಟಕ್ಕೆ ಕೂತಿರ್ತೀವಿ, ಆದರೆ ನೀವು ಇಲ್ಲಿ ಇಲ್ಲಾ ಎಂದು ವ್ಯಾಕುಲವಾಗಿದೆ. ಬಂದಿದ್ದರೆ ಚೆನ್ನಾಗಿತ್ತು. ಬಡವಳ ಮೇಲೆ ದಯ ಬರಲಿಲ್ಲ. ನಾನು ಇಲ್ಲಿದ್ದರೂ, ನನ್ನ ಮನಸ್ಸೆಲ್ಲಾ ನಿಮ್ಮ ಬಳಿಯೇ ಇದೆ. ನಾಳೆ ಎಲ್ಲಾ ನಿಮ್ಮ ಯೋಚನೇಲೇ ಕಾಲ ಕಳೀತೀನಿ, ನೀವು? ನಾಳೆ ನಿಮಗೂ ಎಲ್ಲಾದರೂ ಒಳ್ಳೇ ಊಟ ಸಿಗಲಿ, ನಿಮ್ಮ ಮನಸ್ಸು ಸಂತೋಷವಾಗಿರಲಿ, ನನ್ನ ಹತ್ರ ಇರಲಿ ಎಂತ ದೇವರಲ್ಲಿ ಈಗಿನಿಂದ ಬೇಡಿಕೊಳ್ಳುತ್ತಿದ್ದೇನೆ. ನೀವು ಯುಗಾದೀನ ಹೇಗೆ ಕಳೆದಿರಿ ಅನ್ನೋದಕ್ಕೆ ನಾಳೇನೇ ಕಾಗದಾ ಹಾಕ್ಬೇಕು ಇಲ್ಲವಾದರೆ ನನ್ನಾಣೆ, ಮರೀ ಬೇಡಿ ಖಂಡಿತ ಮರೀಬೇಡಿ”[೧೯] ಎಂದು ಹೆಂಡತಿ ಗಂಡನನ್ನು ವಿನಂತಿಸಿಕೊಳ್ಳುತ್ತಾಳೆ. ಮದುವೆಯಾಗಿ ಗಂಡ ಒಂದೂರಲ್ಲಿ ಹೆಂಡತಿ ಒಂದೂರಲ್ಲಿ ಇರುತ್ತಾರೆ. ಹಬ್ಬಕ್ಕೆ ಸಹ ಗಂಡ ಹೆಂಡತಿಯ ಊರಿಗೆ ಹೋಗದೇ ಇದ್ದಾಗ, ಹೆಂಡತಿ ಗಂಡನಿಗೆ ಈ ತರದ ಆರೈಕೆಗಳೊಂದಿಗೆ, ಅಕ್ಕರೆಯಿಂದ ಕಾಗದ ಬರೆಯುವುದನ್ನು ಈ ಮೇಲಿನ ಸಾಲುಗಳು ತಿಳಿಸುತ್ತವೆ. ಅಂದರೆ ಶಿಕ್ಷಣಕ್ಕಾಗಿ ನಗರಕ್ಕೆ ಹೋಗಿದ್ದ ಹುಡುಗರನ್ನು, ಶಿಕ್ಷಣ ಪಡೆದ ಹುಡುಗಿಯರು ಮದುವೆಯಾದರೆ, ದೂರ ದೂರ ಇದ್ದರೂ ಕೂಡ ಯಾವ ರೀತಿ ಅನನ್ಯತೆ ಇರುತ್ತದೆ ಎಂಬುದನ್ನು ಕತೆಗಾರ ಇಲ್ಲಿ ಹೇಳಲು ಹೊರಟಿದ್ದಾರೆ. ಒಂದು ವೇಳೆ ಶಿಕ್ಷಣ ಪಡೆದ ಹುಡುಗ, ಅನಕ್ಷರಸ್ಥೆಯನ್ನು ಮದುವೆಯಾಗಿದ್ದರೆ ಈ ರೀತಿಯ ಮಾತು ಕತೆಗಳು ನಡೆಯಲೂ ಸಾಧ್ಯವಿಲ್ಲ, ಅದು ಅರ್ಥವಾಗಲೂ ಸಾಧ್ಯವಿಲ್ಲ ಎನ್ನುತ್ತಾ ಶಿಕ್ಷಣದ ಮಹತ್ವವನ್ನು ಕುರಿತು ಕತೆಗಾರ ಕಥೆ ಬರೆದಂತಿದೆ ಎಂದೆನಿಸುತ್ತದೆ.

‘ನಾವೂ ಹಾಗೆಯೇ!’ ಕತೆಯಲ್ಲಿ ಕೂಡ ಶಿಕ್ಷಣಕ್ಕಾಗಿ ನಗರಕ್ಕೆ ಬಂದಿದ್ದು, ಅಲ್ಲಿರುವ ಪರಿಸರವನ್ನು, ಸಮಸ್ಯೆಗಳನ್ನು ಈ ಕತೆಯಲ್ಲಿ ನೋಡಬಹುದು. ಕತೆಯಲ್ಲಿ ಕೇವಲ ಮೂರೇ ಮೂರು ಪಾತ್ರಗಳಿವೆ. ಕೃಷ್ಣಮೂರ್ತಿ ಮತ್ತು ಅವನ ಹೆಂಡತಿ ಶಾರದೆ, ಕೃಷ್ಣಮೂರ್ತಿಯ ಗೆಳೆಯ ಗುಂಡಪ್ಪ ಇವೇ ಮೂರು ಪಾತ್ರಗಳು. ಕತೆಯನ್ನು ೨೮ ಪುಟಗಳಷ್ಟು ವಿಸ್ತರಿಸಿದೆ. ಕೃಷ್ಣಮೂರ್ತಿಗೆ ಮದುವೆಯಾಗಿ ಎರಡು ವರ್ಷಗಳಾಗಿರುತ್ತದೆ. ಗಂಡನಿಗೆ ಕತೆ ಬರೆಯುವ ಅಭ್ಯಾಸವಿದ್ದು ಗಂಡನು ಬರೆದ ಎಲ್ಲಾ

ಕತೆಗಳನ್ನು ಮೊದಲು ಓದುವವಳು ಹೆಂಡತಿಯೇ ಆಗಿರುತ್ತಾಳೆ. ಹೀಗೆ ಅನ್ಯೋನ್ಯವಾಗಿ ಇರುವ ಗಂಡ ಹೆಂಡತಿಯರಲ್ಲಿ ಸಣ್ಣ ಅನುಮಾನಗಳಿಗೂ, ಮನಸ್ತಾಪಗಳಿಗೂ ಅವಕಾಶಕೊಡದೇ ಜೀವನ ನಡೆಸುತ್ತಾರೆ. ಗಂಡ ಕತೆ ಬರೆಯುವಾಗ ಹೆಂಡತಿಯಿಂದ ಅವನಿಗೆ ಸಣ್ಣಪುಟ್ಟ ತೊಂದರೆಗಳಾದಂತೆ, ಹೆಂಡತಿಗೂ ಗಂಡನಿಂದ ಸಣ್ಣಪುಟ್ಟ ಕೋಪವೂ ಬರುವುದುಂಟು. ಆದರೆ ಅದು ಒಂದು ಕ್ಷಣ ಮಾತ್ರ. ಒಂದು ದಿನ ಕೃಷ್ಣಮೂರ್ತಿ ಕತೆಯನ್ನು ಬರೆಯುತ್ತಿರುತ್ತಾನೆ. ಅಲ್ಲಿಗೆ ಶಾರದೆ ಬರುತ್ತಾಳೆ. ಬಂದವಳೇ ತನ್ನ ಗಂಡನನ್ನು ಓರೆಗಣ್ಣಿನಿಂದ ನೋಡುತ್ತ ಯಾಕೆ ಬರೆಯುವುದನ್ನು ನಿಲ್ಲಿಸಿದ್ದಿರಿ ಎಂದು ಕೇಳಿದಾಗ, ನೀನು ಹತ್ತಿರ ಇದ್ದರೆ ಕಥೆ ಬರೆಯೋಕೆ ಮನಸ್ಸು ಎಲ್ಲಿಂದ ತರಲಿ ಎಂಬ ಉತ್ತರ ಬರುತ್ತದೆ. ಹಾಗಾದರೆ ಈವೊತ್ತು ಬೇಡ, ಇನ್ನೆಂದಾದರೂ ಬರೆದರೆ ಆಯ್ತು ಎಂದು ಹೆಂಡತಿಯು ಹೇಳಿದಾಗ ಸರಿ! ಚೆನ್ನಾಯಿ ಈವೊತ್ತೇನೋ ಕಥೆ ಬರೆಯೋಣಾ ಅಂತ ಮನಸ್ಸು ಹುಟ್ಟಿದೆ. ಈವೊತ್ತೇ ಬರೆದುಬಿಡಬೇಕು ಎಂದಾಗ! ಹಾಗಾದರೆ ನೀವೊಬ್ಬರೆ ಬರ್ಕೊಳ್ಳಿ ನಾನು ಈವೊತ್ತು ಇಲ್ಲಿರೋಲ್ಲ ಹೋಗ್ತಿನಿ ಎಂದು ಬಾಗಿಲ ಕಡೆ ನಡೆದಾಗ ಇಲ್ಲ, ಇಲ್ಲ ಬಾ ಈ ವೊತ್ತು ಕಥೆ ಬೇಡ ಇದೇಕೆ ಇಷ್ಟೊಂದು ಕೋಪ ಎಂದು ಹೆಂಡತಿಯನ್ನು ತಂದು ಮಂಚದ ಮೇಲೆ ಕೂರಿಸುತ್ತಾನೆ. ಇಂತಹ ಸನ್ನಿವೇಷಗಳು ಆನಂದರ ಕತೆಗಳಲ್ಲಿ ತುಂಬಾ ಬರುತ್ತವೆ. ಗಂಡ–ಹೆಂಡತಿಯ ದಾಂಪತ್ಯವೇ ವಸ್ತುವಾಗಿ ಅನೇಕ ಕತೆಗಳನ್ನು ಬರೆದಿದ್ದಾರೆ.

ಮಾಸ್ತಿ, ಗೊರೂರಂತೆ ಆನಂದರ ಕತೆಗಳಲ್ಲಿ ಶಿಕ್ಷಣಕ್ಕಾಗಿ ನಗರಕ್ಕೆ ಹೋಗುವ ಹುಡುಗರ ಪಾತ್ರಗಳಿವೆ. ಮದುವೆಯಾದರೂ ಹೆಂಡತಿಯ ಜೊತೆ ಇರದೇ ಶಿಕ್ಷಣಕ್ಕಾಗಿ ನಗರದಲ್ಲಿ ವಾಸಿಸುವುದೂ ಇದೆ. ಈ ಕತೆಯಲ್ಲಿ ಬರುವ ಶಾರದೆ ಗಂಡನನ್ನು ಬಿಟ್ಟು ತೌರುಮನೆಗೆ ಹೋಗುತ್ತಾಳೆ. ಆಗ ಕೃಷ್ಣಮೂರ್ತಿಗೆ ಹುಚ್ಚೇ ಹಿಡಿದಂತೆ ಆಗುತ್ತದೆ. ಯಾವುದರಲ್ಲೂ ಆಸಕ್ತಿ ಇರುವುದಿಲ್ಲ. ಇದನ್ನು ಗಮನಿಸಿದ ಗುಂಡಪ್ಪ ಒಂದು ಸಲಹೆ ಕೊಡುತ್ತಾನೆ. "ಯಾತಕ್ಕೆ, ಹೊರಡೊದು ತಾನೇ ಅಲ್ಲ ಹೆಂಡತಿ ಮನೆಗೆ! ಮುಂದಿನ ವಾರ ಸಲೀಸಾಗಿದೆ. ನಾಳೆ ಶನಿವಾರ ನಾಳಿದ್ದು ಭಾನುವಾರ, ಸೋಮವಾರ ಬೆಳಿಗ್ಗೆ ಕ್ಲಾಸು, ಮಂಗಳವಾರ ರಜ, ಬುಧವಾರ ಒಂದೇ ಫಿರಿಯಡ್ಡು, ಗುರುವಾರ ರಜ, ಶುಕ್ರವಾರ ಚಕ್ರಕೊಟ್ರೆ ಮತ್ತೆ ಶನಿವಾರ ಭಾನುವಾರ ನೋಡು, ಯೋಚನೆ ಮಾಡ್ನೋಡು"[20] ಎಂಬ ಸಲಹೆಯನ್ನು ನೀಡುತ್ತಾನೆ. ಅಂದರೆ ಕೃಷ್ಣಮೂರ್ತಿಗೆ ಯಾವುದೇ ಕೆಲಸದಲ್ಲಿ ಆಸಕ್ತಿ ಇಲ್ಲ ಎನ್ನುವುದು ಗಮನಿಸಿದ ಗುಂಡಪ್ಪ, ಹೆಂಡತಿ ತೌರುಮನೆಗೆ ಹೋಗಿದ್ದರಿಂದ ತನ್ನ ಗೆಳೆಯಳಿಗೆ ಈ ರೀತಿಯಾಗಿರಬಹುದು, ಹಾಗಾಗಿ ಹೆಂಡತಿಯ ಬಳಿ ಹೋದರೆ ಸರಿಹೋಗುತ್ತಾನೆಂದು ಹೇಳುತ್ತಾನೆ. ಆದರೆ ಕೃಷ್ಣಮೂರ್ತಿಯ ಯೋಚನೆಗೆ ಕಾರಣ, ಗುಂಡಪ್ಪನ ಕತೆಯನ್ನು ಕದ್ದು, ಕಥೆಯ ಸ್ಪರ್ಧೆಗೆ ಕಳಿಸಿರುತ್ತಾನೆ. ಅದಕ್ಕೂ ಮುಖ್ಯವಾಗಿ ಗುಂಡಪ್ಪ ಕಥಾ ಸ್ಪರ್ಧೆಗೆ ಕತೆ ಕಳಿಸಿದರೆ, ಕೃಷ್ಣಮೂರ್ತಿಗೆ ಬರುವ ಬಹುಮಾನ ಗುಂಡಪ್ಪನಿಗೆ ಬರುತ್ತದೆಯೆಂದು ಗುಂಡಪ್ಪ ಹೇಳಿರುವ ಮಾತು. ಇವೆಲ್ಲವುಗಳು ಸೇರಿ ಕೃಷ್ಣಮೂರ್ತಿಗೆ ತಲೆ ಹುಚ್ಚಿಡಿದಿರುವಂತೆ ಆಗುತ್ತದೆ.

ಒಂದು ದಿನ ಕಾಲೇಜಿನಿಂದ ಸಾಯಂಕಾಲ ಮನೆಗೆ ಬಂದ ಕೃಷ್ಣಮೂರ್ತಿ ಮತ್ತು ಗುಂಡಪ್ಪ ಮನೆಯಲ್ಲೇ ಟೀ ಕುಡಿದು ಆ ಮೇಲೆ ಸ್ವಲ್ಪ ಸುತ್ತಾಡಿಕೊಂಡು ಬರೋಣ ಎಂದು ಹೊರಗಡೆ ಹೋಗುತ್ತಾರೆ. ಹಾಗೆ ಮಾತಾಡುತ್ತಾ ಗಂಧದ ಎಣ್ಣೆಯ ಕಾರ್ಖಾನೆಯವರೆಗೂ ಬಂದಿದ್ದರೂ, ಮಾತು ಕತೆ ಏನೂ ಹೆಚ್ಚಾಗಿ ನಡೆದಿರಲಿಲ್ಲ. ಯಾಕೆಂದರೆ ಕೃಷ್ಣಮೂರ್ತಿಯ ಮನಸ್ಸು ಬೇರೆ ಏನೋ ಯೋಚಿಸುತ್ತಿರುತ್ತದೆ. ಗುಂಡಪ್ಪ ಮಾತಾಡಿದಾಗ ಮಾತ್ರ ಕೃಷ್ಣಮೂರ್ತಿ ಸುಮ್ಮನೆ ಹುಂ ಹುಂ ಎನ್ನುತ್ತಿದ್ದ ಅಷ್ಟೇ. ಇದನ್ನು ಮೌನವಾಗಿ ಗಮನಿಸಿದ್ದ ಗುಂಡಪ್ಪ ಕೃಷ್ಣಮೂರ್ತಿಯನ್ನು ಯಾಕೆ ಕಿಟ್ಟು ಏನಾಯಿತು. ಇದುವರೆಗೆ ಸರಿಯಾಗಿದ್ದೆ, ಈಗ ಯಾಕೆ ಮೌನವಾದೆ ಅಂತ ಕೇಳಿದಾಗ ರಾತ್ರಿ ನಿದ್ದೆ ಇಲ್ಲ ಅಂತ ಹೇಳುತ್ತಾನೆ. ಹೀಗೆ ಮಾತಿಗೆ ಮಾತು ಮಾತಾಡುತ್ತಾ ಸಂಪಿಗೆ ರಸ್ತೆಯಿಂದ ನಡೆದು ಯಶವಂತಪುರದ ಸ್ಟೇಷನ್ನಿನ ತನಕ ಹೋಗಿ ತಿರುಗಿದರು. ಅಷ್ಟೊತ್ತಿಗಾಗಲೇ ಕತ್ತಲೆಯಾಗಿರುತ್ತದೆ. ಅಲ್ಲಿ ಗುಂಡನ ಕೊಠಡಿ ಹತ್ತಿರವಿದ್ದು, "ಲೋ ಇನ್ನು ಹೊತ್ತಾಯಿತೋ, ಹೋರಡ್ತೀನಿ, ಹೊತ್ತಾಗಿ ಹೋದ್ರೆ ಹೋಟಲ್ನಲ್ಲಿ ಕೂಳ್ಗೇ ಚಕ್ರು"[೨೧] ಎಂದು ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ನಾವು ಈಗಾಗಲೇ ಈ ಹಿಂದಿನ ಕತೆಗಳಲ್ಲಿ ಹೇಳಿದ ಹಾಗೆ, ಹಳ್ಳಿಯಿಂದ ಶಿಕ್ಷಣಕ್ಕಾಗಿ ನಗರಕ್ಕೆ ಬಂದು ಉಳಿದುಕೊಳ್ಳುವ ಎಲ್ಲಾ ಹುಡುಗರ ಸಮಸ್ಯೆ ಇದೇ ಆಗಿದೆ. ನಗರಗಳಲ್ಲಿ ಬಾಡಿಗೆ ಕೊಠಡಿಗಳಲ್ಲಿ ಊಟವನ್ನು ಮಾಡುವವರ ಸಂಖ್ಯೆ ಕಡಿಮೆ. ಏಕೆಂದರೆ ಅಷ್ಟು ವ್ಯವಸ್ಥೆಯಾಗಲಿ, ವ್ಯವಧಾನವಾಗಲಿ ಇರುವುದಿಲ್ಲ. ಜೊತೆಗೆ ಹಳ್ಳಿಗಿಂತ ನಗರಗಳಲ್ಲಿ ಪ್ರತಿಯೊಂದು ದುಡ್ಡಿನ ಮೇಲೆ ನಿಂತಿರುತ್ತದೆ. ಹಾಗಾಗಿ ಹೋಟೆಲ್‌ಗಳಲ್ಲಿ ಊಟವನ್ನು ಮಾಡಿಕೊಂಡು ಶಿಕ್ಷಣವನ್ನು ಮುನ್ನೆಡೆಸುತ್ತಾರೆ. ಅಲ್ಲಿ ಸಮಯಕ್ಕೆ ಸರಿಯಾಗಿ ಹೋದರೆ ಮಾತ್ರ ಊಟ ಸಿಗುತ್ತದೆ. ಹೀಗಿರುವಾಗ ಗುಂಡಪ್ಪನಿಗೆ ಇದರ ಅರಿವಾಗಿ ಕೃಷ್ಣಮೂರ್ತಿಯ ಜೊತೆಯಿಂದ ಬೇಗ ಮನೆಗೆ ಹೊರಡುತ್ತಾನೆ.

ಆನಂದರ ಕತೆಗಳಲ್ಲಿ ಶಿಕ್ಷಣವೂ ಒಂದು ವಸ್ತುವಾಗಿ ಬಳಕೆಯಾಗಿದೆ. ಆದರೆ ಯಾವ ಕತೆಯೂ ಕೂಡ ಶಿಕ್ಷಣವನ್ನು ತಿರಸ್ಕರಿಸಿರುವ ವಸ್ತು ಒಳಗೊಂಡಿಲ್ಲ. ಬದಲಾಗಿ ಶಿಕ್ಷಣವನ್ನು ಪಡೆಯುವಲ್ಲಿ ಎದುರಾಗುವ ಸಮಸ್ಯೆಗಳನ್ನು ಹೇಳಿದ್ದಾರೆ. ಹಳ್ಳಿಯಿಂದ ನಗರಕ್ಕೆ ಬರುವ ಯುವಕರು ಯಾವ ರೀತಿಯಾಗಿ ನಗರಗಳಲ್ಲಿನ ವ್ಯವಸ್ಥೆಗೆ ಹೊಂದಿಕೊಂಡು ಬದುಕು ಸಾಗಿಸುತ್ತಾರೆ ಎಂಬುದನ್ನು ಆನಂದರು ತಮ್ಮ ಕತೆಗಳಲ್ಲಿ ವಿವರಿಸಿದ್ದಾರೆ.

೫.೪. ಹಳ್ಳಿ

ಆನಂದರು ಕತೆಗಳಲ್ಲಿ ನಂಜಿಕೆ, ಆಚರಣೆ, ಶಿಕ್ಷಣ, ಪುರುಷಪ್ರಧಾನ ವ್ಯವಸ್ಥೆ ಕುರಿತು ಕತೆಗಳನ್ನು ರಚಿಸದೇ ಹಳ್ಳಿಯನ್ನು ಕುರಿತು ಕೆಲವು ಕತೆಗಳನ್ನು ರಚಿಸಿದ್ದಾರೆ. ಹಳ್ಳಿಯನ್ನು ನಗರದೊಂದಿಗೆ ಮುಖಾಮುಖಿ ಮಾಡಿದ್ದಾರೆ. ಅಂತಹ ಕಥೆಗಳಲ್ಲಿ 'ನಾನು ಕೊಂದ ಹುಡುಗಿ' ಕಥೆಯೂ ಒಂದಾಗಿದೆ. ಕತೆಯು ಆರಂಭವಾಗುವುದೇ ನಗರದಿಂದ ಬಂದ ನಿರೂಪಕನಿಂದ. ಹಳ್ಳಿಗೆ ಬಂದ ನಿರೂಪಕ ಅವನ ಸಂಚಾರದಲ್ಲಿ ಒಂದು ದಿನ ನಾಗವಳ್ಳಿ ಎಂಬ ಹಳ್ಳಿಯಲ್ಲಿ ಉಳಿಯುವಂತ ಸಂದರ್ಭ ಬರುತ್ತದೆ. ಹಳ್ಳಿಯ ದೊಡ್ಡ ಮನೆಯೆಂದೇ ಪ್ರಸಿದ್ಧಿ ಪಡೆದಿರುವ ಕರಿಯಪ್ಪನವರ

ಮನೆಯಲ್ಲಿರುತ್ತಾರೆ. ಆ ಮನೆಯಲ್ಲಿ ಯಜಮಾನನ ಮಗಳು ಚೆನ್ನಮ್ಮನನ್ನು ನಿರೂಪಕ ನೋಡುತ್ತಾನೆ. ಅವಳು ಪದೇ ಪದೇ ನಿರೂಪಕನಿಗೆ ಮುಖಾಮುಖಿಯಾಗುವಂತೆ ಕತೆ ಅವಕಾಶವನ್ನು ಕಲ್ಪಿಸುತ್ತದೆ. ಹಾಗಾಗಿ ಚೆನ್ನಮ್ಮನನ್ನು ನೋಡಿದ ನಗರ ಪ್ರಜ್ಞೆಯುಳ್ಳ ನಿರೂಪಕ ನಗರ ಮತ್ತು ಹಳ್ಳಿಗಿರುವ ವ್ಯತ್ಯಾಸವನ್ನು ಚೆನ್ನಿ ಮತ್ತು ಪಟ್ಟಣದ ಹುಡುಗಿಯರ ಮೂಲಕ ಹುಡುಕುತ್ತಾನೆ. "ದೊಡ್ಡ ದೊಡ್ಡ ಮರಗಳನ್ನುರುಳಿಸಿ ಧೂಳೆಬ್ಬಿಸುವ ಬಿರುಗಾಳಿಯಂತೆ ಮನಸ್ಸಿನಲ್ಲಿ ಗರ್ಜಿಸುವ ಅಲೆಗಳನ್ನೆಬ್ಬಿಸಿ ಅಲ್ಲೋಲ ಕಲ್ಲೋಲ ಮಾಡುವ ಮುಗುಳ್ನಗೆ; ಚೆನ್ನಮ್ಮನ ಮುಗುಳ್ನಗೆ ಅಂತಹುದಲ್ಲ, ಅದು ಮೃದುವಾಗಿ ಅಲ್ಲಿ ಸುಳಿದು ಚಿಗುರುಗಳಲ್ಲಿ ತೂರಿ ಹೂ ಗೊಂಚಲನ್ನು ಹಾಯ್ದು, ಪರಿಮಳವನ್ನು ಹೊತ್ತು ತರುವ ತಂಗಾಳಿಯಂತೆ, ಹೃದಯದಲ್ಲಿ ಚಿಕ್ಕ ಚಿಕ್ಕ ತರಂಗಮಾಲೆಗಳನ್ನು ಹುಟ್ಟಿಸುವ ಸರಳವಾದ ಮುಗುಳ್ನಗೆ! ಬಿರುಗಾಳಿಯಲ್ಲಿ ಸಿಕ್ಕರೆ ಬರೀ ಧೂಳು! ಕಣ್ಣಿಗೆ, ಬಾಯಿಗೆ ಮಣ್ಣು! ಅದರಲ್ಲಿ ಸೌರಭವಿಲ್ಲ. ಈ ಹಳ್ಳಿಯ ಹುಡುಗಿಯ ನಗುವಿನಲ್ಲೋ? ಓ! ಅದು ಮಲ್ಲಿಗೆಯ ಹುವ್ವಿನ ಹಾಗೆ! ಮಲ್ಲಿಗೆಯ ಹೂವಿನದು ಎಂತಹ ಶುಭ್ರತೆ! ಎಣೆಯಿಲ್ಲದ ಪರಿಮಳ"[೨೨] ಎಂದು ಚೆನ್ನಿಯನ್ನು ನೋಡಿದ ನಿರೂಪಕ ಹಳ್ಳಿ ಮತ್ತು ನಗರಕ್ಕಿರುವ ವ್ಯತ್ಯಾಸವನ್ನು ಈ ಮೇಲಿನ ಸಾಲುಗಳಿಂದ ಗಮನಿಸಿದ್ದಾನೆ. ನಗರದಲ್ಲಿರುವ ಹುಡುಗಿಯರ ನಗು ಬಿರುಗಾಳಿಯಂತೆ, ಬಿರುಗಾಳಿಯಲ್ಲಿರುವುದು ಕಸ, ಕಡ್ಡಿ, ಧೂಳು ಇತ್ಯಾದಿಗಳಿರುತ್ತವೆ. ಅದರಿಂದ ಹಾನಿಯೇ ಹೆಚ್ಚು ಎಂದು ಹೇಳುತ್ತಾರೆ. ಆದರೆ ಹಳ್ಳಿಯ ಹುಡುಗಿಯರ ನಗು ಮೃದುವಾಗಿರುತ್ತದೆ. ಮಲ್ಲಿಗೆಯ ಹೂವು ಹೇಗೆ ಘಮ ಘಮವೆನಿಸುತ್ತದೋ ಅದೇ ರೀತಿ ಎಂದು ಹಳ್ಳಿ ಮತ್ತು ನಗರವನ್ನು ಈ ರೀತಿಯಾಗಿ ನಿರೂಪಕ ಮುಖಾಮುಖಿ ಮಾಡುತ್ತಾರೆ.

ಕರಿಯಪ್ಪನವರ ಮನೆಯಲ್ಲಿ ಇರುವಷ್ಟು ದಿನ ನಿರೂಪಕನಿಗೆ ಪ್ರತಿದಿನ ಒಂದೊಂದು ಹೊಸ ಹೊಸ ಅನುಭವಗಳಾಗುತ್ತವೆ. ಕರಿಯಪ್ಪನವರ ದೊಡ್ಡದಾದ ಮನೆ, ದನಕರುಗಳು, ಕೆಲಸದ ಆಳುಗಳು, ಮನೆ ತುಂಬಾ ಜನ ಇವೆಲ್ಲವೂ ನಿರೂಪಕನ ಮನಸ್ಸನ್ನು ಆಕರ್ಷಿಸುತ್ತವೆ. ಈ ರೀತಿಯ ಮನೆಗಳು ಹಳ್ಳಿಯಲ್ಲಿರಲು ಮಾತ್ರ ಸಾಧ್ಯ. ಆ ಮನೆಯಲ್ಲಿ ಮಾತಾಡುವ ಭಾಷೆ, ತೋರುವ ವಿನಯತೆ, ಅತಿಥಿಯನ್ನು ಮನೆಗೆ ಬರಮಾಡಿಕೊಂಡ ಸಂದರ್ಭ ಇವೆಲ್ಲವೂ ನಗರವಾಸಿಗೆ ತುಂಬಾ ಸಂತೋಷವನ್ನು ನೀಡಿದವು. ಹೀಗೆ ದಿನಗಳನ್ನು ನೆಮ್ಮದಿಯಿಂದ ಕಳೆಯುತ್ತಿರುವಾಗ ಒಂದು ದಿನ ತೋಟವನ್ನು ನೋಡುತ್ತಾನೆ. "ಸ್ವಲ್ಪ ಕಾಲ ನನ್ನ ಮನಸ್ಸು ಆ ತೋಟದ ಸೊಬಗಿನ ಪಾನದಿಂದ ಮುದವೇರಿ ಯಾವುದೋ ವರ್ಣಿಸಲಾಗದ ಸುಖವನ್ನನುಭವಿಸಿತು."[೨೩] ನಗರದಲ್ಲೇ ಇದ್ದು ಅದರಿಂದ ಮನಸ್ಸಿಗೆ ಬೇಜಾರಾಗಿರುತ್ತದೆ. ಅಲ್ಲಿರುವ ವಾಹನಗಳ ಸದ್ದು, ಕಾರ್ಖಾನೆಗಳಿಂದ ಬರುವ ಹೊಗೆ ಇವುಗಳಿಂದ ನಿರೂಪಕನ ಮನಸ್ಸಿಗೆ ನೆಮ್ಮದಿಯೇ ಸಿಗುವುದಿಲ್ಲ. ತೋಟಕ್ಕೆ ಬಂದ ತಕ್ಷಣ ಅಲ್ಲಿ ಬೀಸುವ ತಂಪಾದ ಗಾಳಿ, ಬಾವಿಯ ಸುತ್ತಲೂ ತರತರದ ಹೂವಿನ ಗಿಡಗಳು, ಅವುಗಳಿಂದ ಹೊರಬರುವ ಪರಿಮಳ ಮನಸ್ಸಿಗೆ ಒಂದು ರೀತಿಯ ಮುದವನ್ನು ನೀಡುತ್ತವೆ. ತೋಟಕ್ಕೆ ಹಲವು ಬಗೆಯ ಪಕ್ಷಿಗಳು ಬರುತ್ತಿದ್ದು ಅವುಗಳ ಚಿಲಿಪಿಲಿ ಕಲರವ ಎಲ್ಲೆಲ್ಲೋ

ಕೇಳಿಬರುತ್ತದೆ. ಇಂತಹ ವಾತಾವರಣವನ್ನು ನೋಡಿದ ನಿರೂಪಕನಿಗೆ ಸ್ವರ್ಗವೇ ಕಣ್ಣಮುಂದೆ ಬಂದಂತೆ ಆಗಿತ್ತು ಎಂದು ಹಳ್ಳಿಯನ್ನು 'ನಾನು ಕೊಂದ ಹುಡುಗಿ' ಕತೆಯಲ್ಲಿ ಹೊಗಳುತ್ತಾರೆ.

ಆನಂದರು ಬಹುತೇಕ ಕತೆಗಳಲ್ಲಿ ಹಳ್ಳಿಯನ್ನೇ ಒಪ್ಪಿಕೊಳ್ಳುವ, ಹಳ್ಳಿಯೇ ಶ್ರೇಷ್ಠ ಎಂಬ ತೀರ್ಮಾನವನ್ನು ಹೊರಹಾಕುತ್ತಾರೆ. ಅಂತಹ ವಸ್ತುವನ್ನೊಳಗೊಂಡ ಕತೆಯೇ 'ಸರಸಿಯಗೊಂಬೆ.' ಕತೆಯಲ್ಲಿ ಬರುವ ಕಥಾನಾಯಕಿ ಸರಸಿಯ ತಂದೆ ವೆಂಕಟರಾಮಯ್ಯ. ಇವರು ಹಳ್ಳಿಯ ಶ್ಯಾನುಭೋಗರು. ಇವರದ್ದು ಮಿತವಾದ ಸಂಸಾರ. ಮೂರು ಹೆಣ್ಣುಮಕ್ಕಳಿದ್ದು, ಸರಸಿಯೇ ಮೊದಲನೆಯವಳಾಗಿದ್ದಳು. ಇಲ್ಲಿ ಕತೆ ಹೇಳುವುದು ಮುಕ್ಕಾಲು ಭಾಗ ಸರಸಿಯದೇ ವಿಚಾರಗಳನ್ನು. ಆದರೆ ಅದನ್ನು ಹೇಳುವ ಮುನ್ನ ಸರಸಿಯು ಹಳ್ಳಿಯಲ್ಲೇ ಇರುವುದರಿಂದ ಹಳ್ಳಿಯ ಬಗ್ಗೆ ಕತೆ ಮೊದಲು ಹೇಳುತ್ತದೆ. ಕತೆಯಲ್ಲಿ ಬರುವ ನಿರೂಪಕ ಒಂದರಿಂದ ಐದನೇ ತರಗತಿಯವರೆಗೆ ಹಳ್ಳಿಯಲ್ಲೇ ಶಿಕ್ಷಣವನ್ನು ಮುಗಿಸಿ, ಮುಂದಿನ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಹೋಗುವ ಅನಿವಾರ್ಯತೆ ಬರುತ್ತದೆ. ಬೆಂಗಳೂರಿಗೆ ಬಂದಾಗ ಹಳ್ಳಿಯನ್ನು ಕುರಿತು ಈ ರೀತಿ ಹೇಳುತ್ತಾನೆ. "ಹಳ್ಳಿಯಲ್ಲಿರುವ ತನಕ ನನ್ನ ಮನಸ್ಸಿನಲ್ಲಿದ್ದ ಆನಂದ, ಗೆಲುವು ಇವು ನಾನು ಬೆಂಗಳೂರಿಗೆ ಬಂದೊಡನೆಯೇ ಮಾಯವಾದವು. ಬೆಂಗಳೂರಿಗೆ ಬಂದ ಮೇಲೆ ನಮ್ಮ ಹಳ್ಳಿಯ ಸುಖದ ಆಳ ಇಷ್ಟು ಎಂದು ಗೊತ್ತಾಯಿತು. ಎಷ್ಟು? ಎಂದು ಕೇಳುವಿರೋ? ಅದಕ್ಕೆ ಆಳವೇ ಇಲ್ಲ. ಬೆಂಗಳೂರಿನಲ್ಲಿ ನಾಲ್ಕು ದಿನ ಇರುವುದರಲ್ಲಿಯೇ ನನಗೆ ಹುಚ್ಚು ಹಿಡಿದಂತಾಯಿತು. ಹುಚ್ಚು ಹಿಡಿಯದೆ ಮತ್ತೇನು? ಆ ಮೋಟಾರುಗಳೋ ಆ ಬೈಸಿಕಲ್ಲುಗಳೋ! ಆ ಧೂಳೋ! ಇವೆಲ್ಲವನ್ನು ಮೀರಿಸಿದ ಆ ಜಟಕಾ ಗಾಡಿಗಳೋ! ಅಬ್ಬಬ್ಬ! ಮನಸ್ಸಿನಲ್ಲೇ ನಮ್ಮ ಹಳ್ಳಿ ಬಿಟ್ಟರೆ ಇನ್ನು ಇಲ್ಲ"[೨೪] ಎಂದು ತಾನು ಹಳ್ಳಿಯನ್ನು ಪೂರ್ಣ ಒಪ್ಪಿಕೊಂಡಿರುವ, ನಗರದ ಜೀವನದಿಂದ ಶಾಂತಿ, ನೆಮ್ಮದಿಗಳು ಅಸಾಧ್ಯವೆಂಬುದು ಈ ಸಾಲುಗಳಿಂದ ಗೊತ್ತಾಗುತ್ತದೆ. ಅಂದರೆ ಆಧುನಿಕತೆಯಿಂದ ವಾಹನಗಳು, ನಗರಕ್ಕೆ ವಲಸೆ ಬಂದ ಕುಟುಂಬಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಹಳ್ಳಿಯಲ್ಲಿರುವಂತೆ ಪ್ರಶಾಂತತೆಯಾಗಲಿ, ಮೌನವಾಗಲಿ ನಗರಗಳಲ್ಲಿ ಅಸಾಧ್ಯ ಎಂದು ಹೇಳುತ್ತಾರೆ.

ನವೋದಯದ ಕಾಲಘಟ್ಟದಲ್ಲಿ ಕತೆಗಳನ್ನು ಬರೆದಿರುವ ಅನೇಕ ಕತೆಗಾರರು, ಅವರ ಕತೆಗಳಲ್ಲಿ ಹಳ್ಳಿ ಮತ್ತು ನಗರವನ್ನು ಮುಖಾಮುಖಿ ಮಾಡಿದ್ದಾರೆ. ಅದಕ್ಕೆ ಆನಂದರ ಕತೆಗಳೂ ಹೊರತಾಗಿಲ್ಲ ಎಂಬ ಅಂಶ ಈ ಮೇಲಿನ ಕತೆಗಳಿಂದ ಸ್ಪಷ್ಟವಾಗುತ್ತದೆ. ಆಧುನಿಕತೆಯನ್ನು ತುಂಬಾ ಭಯ ಮತ್ತು ದಿಗ್ಭ್ರಮೆಯಿಂದ ನೋಡಿದ ಅನೇಕ ಕತೆಗಾರರು ಅದನ್ನು ವಸ್ತುವಾಗಿಟ್ಟುಕೊಂಡು ಅನೇಕ ಕತೆ, ಕಾದಂಬರಿ, ಕಾವ್ಯಗಳನ್ನು ರಚಿಸಿರುವುದು ಗೊತ್ತಾಗುತ್ತದೆ. ಕೆಲವು ಕತೆಗಾರರು ಆಧುನಿಕತೆಯನ್ನು ಸುಲಭವಾಗಿ ಬರಮಾಡಿಕೊಂಡರೆ, ಇನ್ನೂ ಕೆಲವರು ಅದನ್ನು ವಿರೋಧಿಸುತ್ತಾರೆ. ಈ ಕತೆಗಳಲ್ಲಿ ಕೂಡ ಆಧುನಿಕತೆಯನ್ನು ವಿರೋಧಿಸುವಂತೆ ಕಥೆಗಳನ್ನು ರಚಿಸಿದ್ದಾರೆ.

ಅಡಿಟಿಪ್ಪಣಿಗಳು

೧. ಹಂಪ ನಾಗರಾಜಯ್ಯ, ಆನಂದರ ಆಯ್ದ ಕತೆಗಳು, ಪು.ಸಂ–೧೬
೨. ಅದೇ, ಪು.ಸಂ–೧೯
೩. ಆನಂದ, ಚಂದ್ರಗ್ರಹಣ ಮತ್ತು ಇತರ ಕಥೆಗಳು, ಪು.ಸಂ–೪೬
೪. ಆನಂದ, ಬೇವು–ಬೇಲ್ಲ, ಪು.ಸಂ–೧೪೧
೫. ಅದೇ, ಪು.ಸಂ–೧೪೪
೬. ಅದೇ, ಪು.ಸಂ–೧೪೫
೭. ಅದೇ, ಪು.ಸಂ–೧೪೯
೮. ಹಂಪ ನಾಗರಾಜಯ್ಯ, ಆನಂದರ ಆಯ್ದ ಕತೆಗಳು, ಪು.ಸಂ–೧೫
೯. ಅದೇ, ಪು.ಸಂ–೨೩
೧೦. ಅದೇ, ಪು.ಸಂ–೫೪
೧೧. ಆನಂದ, ಚಂದ್ರಗ್ರಹಣ ಮತ್ತು ಇತರ ಕಥೆಗಳು, ಪು.ಸಂ–೩೩
೧೨. ಅದೇ, ಪು.ಸಂ–೪೯
೧೩. ಅದೇ, ಪು.ಸಂ–೫೦
೧೪. ಹಂಪ ನಾಗರಾಜಯ್ಯ, ಆನಂದರ ಆಯ್ದ ಕತೆಗಳು, ಪು.ಸಂ–೩೦
೧೫. ಅದೇ, ಪು.ಸಂ–೪೩
೧೬. ಅದೇ, ಪು.ಸಂ–೪೪
೧೭. ಅದೇ, ಪು.ಸಂ–೯೭
೧೮. ಆನಂದ, ಚಂದ್ರಗ್ರಹಣ ಮತ್ತು ಇತರ ಕಥೆಗಳು, ಪು.ಸಂ–೬೯
೧೯. ಅದೇ, ಪು.ಸಂ–೭೨
೨೦. ಹಂಪ ನಾಗರಾಜಯ್ಯ, ಆನಂದರ ಆಯ್ದ ಕತೆಗಳು, ಪು.ಸಂ–೨೧೪
೨೧. ಅದೇ, ಪು.ಸಂ–೨೦೪
೨೨. ಅದೇ, ಪು.ಸಂ–೦೭
೨೩. ಅದೇ, ಪು.ಸಂ–೦೮
೨೪. ಅದೇ, ಪು.ಸಂ–೪೮

ಅಧ್ಯಾಯ – ಆರು

ಗೊರೂರು ಸಣ್ಣ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಅಧ್ಯಾಯ – ಆರು

ಗೊರೂರು ಸಣ್ಣ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆ

ಪೀಠಿಕೆ

ಭಾರತೀಯ ಪರಂಪರೆಯೇ ಆಗಿರುವ ಕಥಾಸಾಹಿತ್ಯ ಕಾಲಮಾನಕ್ಕೆ ಅನುಗುಣವಾಗಿ ತೆರೆದುಕೊಳ್ಳುತ್ತಾ ನವೀನ ಪ್ರಜ್ಞೆಯೊಂದಿಗೆ ಋತುಮಾನದಂತೆ ನಿತ್ಯನೂತನವಾಗಿದೆ. ಭಾರತೀಯರಲ್ಲಿ ಅಂತರ್ಗತವಾಗಿದ್ದ ಈ ಕಥನ ಕಲೆ ಹತ್ತೊಂಬತ್ತನೇ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಪ್ರಭಾವಶಾಲಿಯಾಗಿ ಬೆಳೆದು ಇಂದು ಕನ್ನಡ ಸಾಹಿತ್ಯದಲ್ಲಿ ತನ್ನದೇ ಛಾಪು ಮೂಡಿಸಿದೆ.

ವಿಪುಲ ಕೃಷಿಯಿಂದ ಕಥಾಸಾಹಿತ್ಯ ಅನಾಥ ಪ್ರಜ್ಞೆ, ಗೊಂದಲ, ಅಸ್ಥಿರತೆಯಿಂದ ಮನುಜನನ್ನು ಹೊರತಂದು ಸಮಾಧಾನ ನೀಡಬಲ್ಲ ಜನಪ್ರಿಯ ಮತ್ತು ಪ್ರಭಾವಿ ಮಾಧ್ಯಮವಾಗಿದೆ. ಬದುಕಿನ ಪುಟ್ಟ ತುಣುಕಿಗೆ ಪುಟ್ಟ ಆಕಾರವಾದರೂ ಕತೆ ಬೀರುವ ಪರಿಣಾಮ ಪುಟ್ಟದಲ್ಲ. ಇಂದು ಸಣ್ಣಕತೆ ಬದುಕಿಗೆ ಭರವಸೆ ಕೊಡುವಂತೆ ಬೆಳೆದಿದ್ದು ಕಲಾತ್ಮಕತೆ, ಸಾಹಿತ್ಯ ಗುಣಗಳಿಂದ ನವ ಚೈತನ್ಯದಿಂದ ಭಾಷೆ ಮತ್ತು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಮಹತ್ವದ್ದಾಗಿದೆ.

ಯಶವಂತ ಚಿತ್ತಾಲರು 'ಮನುಷ್ಯನನ್ನು ಅವನ ಮೂಲಕ ಬದುಕನ್ನು ಅರಿಯುವ ಅನನ್ಯ ಮಾಧ್ಯಮವೆಂದು ಅವುಗಳ ಸೃಷ್ಟಿಯ ಮೂಲಕವೇ ಹೊಸತನ್ನು ಗ್ರಹಿಸುತ್ತಾನೆ, ಕಂಡು ಹಿಡಿಯುತ್ತಾನೆ ಬೇರೆ ಯಾವ ಮಾಧ್ಯಮಕ್ಕೂ ದಕ್ಕದ ಬದುಕಿನ ಮಗ್ಗಲುಗಳನ್ನು ಗ್ರಹಿಸುವ ತಾಕತ್ತು ಕತೆಗೆ ಇದೆ' ಎನ್ನುತ್ತಾರೆ.

ಇಂದಿನ ದಿನಮಾನದಲ್ಲಿ ಎಲ್ಲವೂ ಪುಟ್ಟದಾಗುತ್ತಿದೆ. ಇಂತಹ ಆಧುನಿಕ ಸಂದರ್ಭದಲ್ಲಿ ಹದಿನೆಂಟು ಪರ್ವದ ಮಹಾಭಾರತ ಪಠಣಕ್ಕೆ, ಕಾಳಿದಾಸ, ಶೇಕ್ಸ್‌ಪಿಯರನ ಉದ್ದುದ್ದ ನಾಟಕಗಳ ನೋಡಲಿಕ್ಕಿರುವ ಸಮಯಾನುಭಾವದ ಅನಿವಾರ್ಯತೆಯಲ್ಲಿ ಸಮಯಕ್ಕೆ ಅನುಕೂಲವಾಗಿ ಸಣ್ಣಕತೆಗಳು ಸೃಷ್ಟಿಗೊಂಡವು (ಅಂಟಿದ ನಂಟು. ಎಂ. ಧ್ರುವನಾರಾಯಣ. ಕಿ.ರಂ.ನಾಗರಾಜ. ೨೦೧೦) ಎಂದಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಪ್ರಧಾನ ನೆಲೆಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಚಳವಳಿಗಳ ಅನೇಕ ಉತ್ಪನ್ನಗಳಲ್ಲಿ ಕಥಾಸಾಹಿತ್ಯವೂ ಒಂದು. ವಸಾಹತುಶಾಹಿ ಪ್ರಭಾವದಲ್ಲಿ ತನ್ನದೇ ಆದ ವಿಶಿಷ್ಟತೆ ಬೆಳೆಸಿಕೊಂಡ ಗದ್ಯಕಥನದಲ್ಲಿ ಕಥಾಸಾಹಿತ್ಯ ಪ್ರಮುಖವಾದುದು. ಮಾಸ್ತಿಯವರಿಂದ ಆರಂಭಗೊಂಡು ಇಲ್ಲಿಯವರೆಗೆ ಕನ್ನಡ ಕಥೆಗಳ ಪರಂಪರೆ ದೀರ್ಘ ಮತ್ತು ವಿಸ್ತಾರವಾದದ್ದು. ಮಾಸ್ತಿ, ಗೊರೂರರು, ಕುವೆಂಪು, ಕಾರಂತ, ಯಶವಂತ ಚಿತ್ತಾಲ, ಅನಂತಮೂರ್ತಿ, ತೇಜಸ್ವಿ, ಲಂಕೇಶ್ ಮುಂತಾದ ಸೃಜನಶೀಲ ಪ್ರತಿಭೆಗಳು ತಮ್ಮ ಅಭಿವ್ಯಕ್ತಿಯಾಗಿ ಆಯ್ಕೆ ಮಾಡಿಕೊಂಡಿರುವುದನ್ನು ನಾವು ಕಾಣುತ್ತೇವೆ.

ಮಾಸ್ತಿಯವರ ಕಥನಕ್ರಮವು ಕನ್ನಡ ಸಣ್ಣಕತೆ ಪರಂಪರೆಯಲ್ಲಿ ಸತ್ವವಾಗಿ ಸೇರಿಹೋಗಿದೆ ಹಾಗೂ ಇನ್ನೂ ಅನೇಕ ಎತ್ತರಗಳನ್ನು ಕಂಡ ಈ ಸೂಕ್ಷ್ಮ ಸಾಹಿತ್ಯ ಇಂದಿಗೂ ಜೀವಂತವಾಗಿದೆ.

ಮಾಸ್ತಿಯವರ ನಂತರ ಗೊರೂರರು ಅವರ ಪ್ರಭಾವ ವಲಯದಲ್ಲೇ ಕತೆ ಬರೆದವರಾದರೂ ಗಾಂಧೀಜಿಯವರ ಮೂಲ ತತ್ವಗಳ ಚಿಂತನೆಯ ಶ್ರೇಷ್ಠ ಕತೆಗಾರರು. ವಾಸ್ತವತೆಯನ್ನು ಸರಳವಾಗಿ ನಿರೂಪಿಸುವ ಅವರ ಕತೆಗಳಲ್ಲಿ ಗಾಂಧಿಯವರ ತತ್ವದಂತೆ ಶ್ರೀಸಾಮಾನ್ಯ ಕತೆಯಲ್ಲಿ ಪ್ರಮುಖನಾಗಿರುತ್ತಾನೆ. ಗಾಂಧೀಜಿಯವರ ಚಿಂತನೆಗಳನ್ನು ತಮ್ಮ ಕಾಲಕ್ಕೆ ಅನುಗುಣವಾಗಿ ಅಂದಿನ ಪೀಳಿಗೆಯವರಿಗೆ ತಿಳಿಸುವ, ಜಾಗೃತಿಗೊಳಿಸುವ ಜವಾಬ್ದಾರಿಯನ್ನು ನಿರ್ವಹಿಸಿದ ಗೊರೂರರ ಕತೆಗಳು ಹಾಸ್ಯ ಲೇಪಿತವಾದವುಗಳಾಗಿವೆ.

ಖಾದಿ ಪ್ರಚಾರಾಂದೋಲನ, ಗ್ರಾಮೋದ್ಯೋಗ, ಹರಿಜನೋದ್ಧಾರ, ವಯಸ್ಕರ ಶಿಕ್ಷಣ ಮೊದಲಾದ ಸಮಾಜಮುಖಿ ಚಟುವಟಿಕೆಗಳಲ್ಲಿ ಸಕ್ರಿಯರಾದ ಗಾಂಧಿವಾದಿ ಗೊರೂರರು. ಪ್ರಬಂಧ, ಕತೆ, ಪ್ರವಾಸ ಕಥನ, ಜೀವನಚಿತ್ರ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ ಕನ್ನಡ ಸಾಹಿತ್ಯದ ಮಹತ್ವದ ಲೇಖಕರು.

ಕನ್ನಡದಲ್ಲಿ ರಚನೆಯಾಗಿರುವ ಸಣ್ಣ ಕತೆಗಳನ್ನು ಆಧರಿಸಿ ಹೇಳುವುದಾದರೆ, ಗುಣ ಗಾತ್ರಗಳ ದೃಷ್ಟಿಯಿಂದ ಕನ್ನಡ ಕಥಾಸಾಹಿತ್ಯದಲ್ಲಿ ಮಾಸ್ತಿಯವರು ಮೊದಲಿಗರೂ ಅತ್ಯಂತ ಶ್ರೇಷ್ಠರೂ ಆದರೆ, ಕಥಾಸಾಹಿತ್ಯಕ್ಕೆ ನೀಡಿರುವ ಸಮೃದ್ಧ ಕೊಡುಗೆಯ ದೃಷ್ಟಿಯಿಂದ ಗೊರೂರರು ಮಾಸ್ತಿಯವರಿಗೆ ಎರಡನೆಯವರಾಗುತ್ತಾರೆ. ಗ್ರಾಮೀಣ ಜೀವನದ ಚಿತ್ರವನ್ನು ಅತ್ಯಂತ ವೈವಿದ್ಯಮಯವಾಗಿ ಚಿತ್ರಿಸಿರುವ ಕುವೆಂಪು ಅವರೊಡನೆ ಹೋಲಿಸಿದರೆ, ಗೊರೂರರು ಎರಡವನೆಯರಾಗಿ ನಿಲ್ಲುತ್ತಾರೆ. ಆಧುನಿಕ ಕನ್ನಡ ಕಥಾ ಸಾಹಿತ್ಯ ಸಾಧಿಸಿರುವ ಅನುಭವ–ವೈರುದ್ಯ–ವಸ್ತು– ಕಲೆಗಾರಿಕೆ ಮತ್ತು ತಂತ್ರ ಕೌಶಲಗಳ ದೃಷ್ಟಿಯಿಂದ ನೋಡಿದರೆ ಗೊರೂರರು ತುಂಬ ದೂರದಲ್ಲಿಯೇ ನಿಲ್ಲುತ್ತಾರಾದರೂ, ಅಪ್ರಯತ್ನಪೂರ್ವಕವಾಗಿ ಸಹಜ ನಿರೂಪಣೆಯ ತಮ್ಮ ಕಲೆಯಿಂದಾಗಿ ಅವರು ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತಾರೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈ ಹಿನ್ನೆಲೆಯಲ್ಲಿ ನೋಡಿದಾಗ, ಗೊರೂರರ ಕಥಾ ಸಾಹಿತ್ಯವನ್ನು "ಹಳ್ಳಿಯ ಜೀವನವನ್ನು ಕುರಿತವು, ನಗರ ಜೀವನವನ್ನು

ಕುರಿತವು" ಎಂಬುದಾಗಿ ಎರಡು ವರ್ಗಗಳಾಗಿ ವಿಂಗಡಿಸಬಹುದು ಎನ್ನುವ ಎಲ್.ಎಸ್. ಶೇಷಗಿರಿರಾವ್ ಅವರು ಅವರ ಕಥೆಗಳಲ್ಲಿ ಹಳ್ಳಿ ವಹಿಸುವ ಪ್ರಮುಖ ಪಾತ್ರವನ್ನು ಹೀಗೆ ವಿವರಿಸಿದ್ದಾರೆ:

ಗೊರೂರರ ಹಳ್ಳಿಯ ಜೀವನದ ಕಥೆಗಳು ಬೂತಯ್ಯನ ಮಗ ಅಯ್ಯು, ಗಂಡುಬೀರಿ ಹೊಸಬಿ, ಪುಟ್ಟ ಮಲ್ಲಿಗೆ, ಜಮೀನ್ದಾರರು ಇಂತಹ ಹಲವು ವ್ಯಕ್ತಿಗಳನ್ನು ಕುರಿತವಾದರೂ ನಿಜವಾಗಿ ಅವೆಲ್ಲ ಹಳ್ಳಿಯ ಕಥೆಗಳೇ. ಇವೆಲ್ಲವುಗಳಲ್ಲಿ ಹಳ್ಳಿಯೇ ಕೇಂದ್ರ ಪಾತ್ರ. ಎಲ್ಲ ಪಾತ್ರಗಳ ಸುತ್ತಣ ಪರಿಸರ ಕಥೆ ಕಥೆಯಲ್ಲೂ ಸ್ಪಷ್ಟವಾಗಿ ರೂಪ ತಾಳುತ್ತವೆ. ಆ ಪರಿಸರದಲ್ಲಿಯೇ ಇವು ಬದುಕುವುದು ಮಾತ್ರವಲ್ಲ, ಇವುಗಳ ಒಳ ಜೀವನವೂ ಸಾಗುವುದು. ಇವರ ಆಸೆ ಹಂಬಲಗಳು ರೂಪ ತಾಳುವುದು ಈ ಪರಿಸರದಲ್ಲಿಯೇ. ಇಲ್ಲಿ ವಿಜಯ, ಶಾಂತಿ, ಸಮಾಧಾನಗಳನ್ನು ಪಡೆಯುವ ಪಾತ್ರಗಳ ಮೌಲ್ಯಗಳು ಹಳ್ಳಿಯ ಸಮಾಜ ಒಪ್ಪಿರುವ ಮೌಲ್ಯಗಳೇ.

ಗ್ರಾಮಜೀವನದ ಅನೇಕ ಮುಖಗಳನ್ನು ಗೊರೂರರು ತಮ್ಮ ಕಥೆಗಳಲ್ಲಿ ಅನನ್ಯ ರೂಪದಲ್ಲಿ ಅನಾವರಣಗೊಳಿಸುತ್ತಾರೆ. ಈ ವಿವರಗಳು ಕಥೆಯ ಪಾತ್ರಗಳ, ಘಟನೆಗಳ ಅಂಗವಾಗಿಯೇ ಬರುವುದರಿಂದ ಬೇರೆಯಾಗಿ ನಿಲ್ಲದೇ, ತುಂಬ ಪರಿಣಾಮವನ್ನು ಬೀರುತ್ತವೆ. ಉದಾರಣೆಗೆ: ಹಳ್ಳಿಯ ಜೀವನದಲ್ಲಿ ಹಬ್ಬ-ಹರಿದಿನಗಳಿಗೆ ಇರುವ ಪ್ರಾಧಾನ್ಯ, ಶಕುನ-ಜ್ಯೋತಿಷ ಹಳ್ಳಿಗರ ಜೀವನದ ಮೇಲೆ ಬೀರುವ ಪರಿಣಾಮಗಳು, ಅಲ್ಲಿಯ ಪಂಚಾಯ್ತಿ, ನ್ಯಾಯ ಮುಂತಾದವುಗಳನ್ನು ಅವರು ತುಂಬ ಚೆನ್ನಾಗಿಯೇ ಚಿತ್ರಿಸಿದ್ದಾರೆ. ಮಲೆನಾಡಿನ ಜೀವನದ ಅಭಿಶಾಪಗಳಾಗಿದ್ದ ಕಳ್ಳು, ಭೂತ-ಪ್ರೇತಾದಿಗಳ ಬಗೆಗಿನ ಮೂಢನಂಬಿಕೆ, ಬೇಟೆಯ ಹುಚ್ಚು ಮುಂತಾದುವನ್ನು ಕುವೆಂಪು ಅವರು ಚಿತ್ರಿಸುವ ಬಗೆಯನ್ನು ಈ ಚಿತ್ರಗಳು ನೆನಪಿಗೆ ತರುತ್ತವೆ. ಹೋಲಿಕೆಗೂ ಎಡೆಮಾಡಿಕೊಡುತ್ತವೆ.

ಪ್ರಸ್ತುತ ಈ ಅಧ್ಯಾಯದಲ್ಲಿ ಗೊರೂರರ ಕತೆಗಳಲ್ಲಿ ಪರಂಪರೆ ಮತ್ತು ಆಧುನಿಕತೆಯನ್ನು ಈ ಕೆಳಗಿನ ಅಂಶಗಳ ಮೂಲಕ ವಿವರಿಸಲಾಗಿದೆ.

೬.೧. ನಂಬಿಕೆ/ಆಚರಣೆ

೬.೨. ಹಳ್ಳಿ

೬.೩. ವೈಚಾರಿಕತೆ

೬.೪. ಶಿಕ್ಷಣ

೬.೫. ನಗರ

೬.೧. ನಂಬಿಕೆ/ಆಚರಣೆ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಥೆಗಳಲ್ಲಿ ಮಲ್ಲಿಗೆಹಳ್ಳಿಯೇ ಪ್ರಮುಖ ಕೇಂದ್ರ. ಹಳ್ಳಿಯೇ ಕಥಾವಸ್ತು. ಹಳ್ಳಿಯಲ್ಲಿರುವ ಜನರೇ ಕಥೆಗೆ ಪ್ರೇರಣೆಯಾಗಿದ್ದಾರೆ. 'ಕನ್ಯಾಕುಮಾರಿ ಮತ್ತು ಇತರೆ ಕಥೆಗಳು' ಕಥಾ ಸಂಕಲನದಲ್ಲಿ ಮುಖ್ಯವಾದ ಕತೆಯೆಂದರೆ 'ಕನ್ಯಾಕುಮಾರಿ.' ಕತೆಯಲ್ಲಿ ಪರಂಪರೆ ಮತ್ತು ಆಧುನಿಕತೆಗೆ ಸಂಬಂಧಿಸಿದಂತೆ ಅನೇಕ ಅಂಶಗಳು ಕಂಡುಬರುತ್ತವೆ.

ಕತೆಯಲ್ಲಿ ಬರುವ ಶ್ರೀಧರನ ತಂದೆ ತಾಯಿಗಳು ವೈದಿಕ ಪರಂಪರೆಗೆ ಸೇರಿದ್ದು, ಅವರದೇ ಆದ ಕೆಲವು ಜಾತಿಯ ನಿಯಮಗಳಿಗೆ ಕಟ್ಟುಬಿದ್ದಿರುತ್ತಾರೆ. ಶ್ರೀಧರ ಕಲ್ಯಾಣಿ ಎಂಬ ವಿಧವೆಯನ್ನು ಮದುವೆಯಾಗುವ ಪ್ರಸ್ತಾಪ ಮಾಡಿದಾಗ "ಇಂತಹ ವೈದಿಕ ಮಗನಾಗಿ ಜಾತಿಬಿಟ್ಟು ಬೇರೆ ಜಾತಿಯ ಹೆಣ್ಣು ತರುವುದೇ? ನಿನಗೆ ಎರಡು ಇಂಗ್ಲೀಷ್ ಬಂದರೆ ನೀನು ಕಿರಿಸ್ತಾನನೇ ಆಗಿಬಿಟ್ಟೆಯಾ, ರಘುರಾಮನ ಮಗಳು ಜಾನಕಿ ಏನಾಗಿದ್ದಾಳೆ. ಆಚಾರವೂ ಇದೆ. ರೂಪು ಇದೆ. ರಘುರಾಮನಿಗೆ ಗಂಡು ಸಂತತಿ ಇಲ್ಲ. ಕೊನೆಯ ಪಕ್ಷ ಇಪ್ಪತ್ತು ಸಾವಿರ ಆಸ್ತಿಗೆ ಯಜಮಾನನಾಗುವೆ. ಕಲ್ಯಾಣಿಯಂತೆ ಕಲ್ಯಾಣಿ! ರಾಮ! ರಾಮ! ಇದೆಲ್ಲಾ ಕಲ್ಯಾಣಿಯ ತಾಯಿ ಆ ಚಿನ್ನಾಲಿ ಮಾಟ ತಲೆ ಬೋಳಿಸು ಅಂತ ಆಗಲೇ ಅವಳ ಅಣ್ಣನಿಗೆ ಹೇಳಿದೆ. ಅವಳ ಹಣಕ್ಕೆ ಆಸೆಪಟ್ಟು ನನ್ನ ಮಾತನ್ನು ಕೇಳಲಿಲ್ಲ; ಅವಳ ಹತ್ತಿರ ಒಂದು ಮಾತು ಆಡಿದರೆ ಸಾಕು, ಆ ಕಾಲದ ಹುಡುಗರು ಅವಳ ಬಲೆಗೆ ಬೀಳುತ್ತಾರೆ. ಕಲ್ಯಾಣಿಯನ್ನು ಮದುವೆ ಮಾಡಿಕೊಡು ಅಂತ ಅಂಗಲಾಚ್ತಾರೆ. ಬಿ.ಎ ಓದಿದ ನೀನು ಈ ಬಲೆಗೆ ಬೀಳೋದಿಲ್ಲ ಅಂತಿದ್ದೆ. ಆದರೆ ಹುಡುಗಿ ಅಂದರೆ ಹುಡುಗರೆಲ್ಲಾ ಒಂದೇ; ಬಾಯಿ ಬಿಡ್ತಾರೆ, ಆದರೆ ನನ್ನ ಹತ್ತಿರ ಇದೆಲ್ಲ ನಡೆಯುವುದಿಲ್ಲ"[9] ಎಂದು ಶ್ರೀಧರ ತಂದೆ ಮಗನ ಮಾತಿಗೆ ಕಡ್ಡಿ ಮುರಿದಂತೆ ಉತ್ತರಿಸುತ್ತಾನೆ.

ಕತೆಯಲ್ಲಿ ಬರುವ ಶ್ರೀಧರನ ತಂದೆ ತಾಯಿಗಳು ಪರಂಪರೆಯ ಭಾಗವಾಗಿದ್ದು ನಂಬಿಕೆ ಮತ್ತು ಆಚರಣೆಗೆ ಹೆಚ್ಚು ಪ್ರಾಶಸ್ತ್ಯ ನೀಡುತಿದ್ದರು ಎಂಬುದು ಈ ಮೇಲಿನ ಸಾಲುಗಳಿಂದ ಕಂಡು ಬರುತ್ತದೆ. ಇಲ್ಲಿ ಮುಖ್ಯವಾಗಿ ಕಾಣಸಿಗುವ ಅಂಶವೆಂದರೆ ಶ್ರೀಧರ ಅಕ್ಷರ ಕಲಿತ ಹುಡುಗನಾಗಿದ್ದರಿಂದ ಕಲ್ಯಾಣಿಯನ್ನು ಬೆಂಗಳೂರಿಗೆ ಹಾರಿಸ್ಕೊಂಡು ಹೋಗಬಹುದಾಗಿತ್ತು. ಆದರೆ ಅದನ್ನು ಮಾಡದೇ ಒಬ್ಬನೇ ಬೆಂಗಳೂರಿಗೆ ಹೋಗುತ್ತಾನೆ. ಅಂದರೆ ಕಥೆಗಾರ ಇಲ್ಲಿ ಪರಂಪರೆಗೆ ದಕ್ಕೆಯಾಗುತ್ತದೆ. ಎಂದಾಗ ಆಧುನಿಕತೆಯ ಪಾತ್ರಗಳನ್ನು ದುರ್ಬಲಗೊಳಿಸುವ ಕೆಲಸ ಮಾಡುತ್ತಾನೆ. ಹಾಗಾಗಿ ಇಲ್ಲಿ ಪರಂಪರೆ ಜಯಗಳಿಸುತ್ತದೆ. ಹೆಣ್ಣು ಯಾರನ್ನು ಯಾವಾಗ ಬೇಕಾದರೂ ಸೆಳೆಯಬಲ್ಲುದು ಎಂಬ ಮಾಸ್ತಿಯವರ ನಿಲುವು ಗೊರೂರರ ಮೇಲೆ ಪ್ರಭಾವ ಬೀರಿರಬಹುದು.

ಗೊರೂರರ ಬಹು ಚರ್ಚಿತ ಕತೆಗಳಲ್ಲಿ 'ಮುಳ್ಳುಗಿಡ' ಕಥೆಯೂ ಒಂದು. ಈ ಕತೆಯ ಶೀರ್ಷಿಕೆಯೇ ಅನೇಕ ಪ್ರಶ್ನೆಗಳನ್ನು ಓದುಗರ ಮುಂದಿಡುತ್ತದೆ. 'ಮುಳ್ಳುಗಿಡ' ಪರಂಪರೆಯೂ ಹೌದು ಆಧುನಿಕತೆಯೂ ಹೌದು ಎಂಬ ಅಂಶ ಕತೆಯಲ್ಲಿ ಕಂಡುಬರುತ್ತದೆ. ಇಲ್ಲಿ ಮುಖ್ಯವಾಗಿ ನಾಲ್ಕು ಪಾತ್ರಗಳು ಕಂಡುಬರುತ್ತವೆ. ಎರಡು ಕುಟುಂಬಗಳಷ್ಟೇ ಇವೆ. ಸೂರಪ್ಪ ಮತ್ತು ಅವನ ಹೆಂಡತಿ ತಿರುಮಲಮ್ಮ ಒಂದು ಕುಟುಂಬವಾದರೆ, ಕೃಷ್ಣಮೂರ್ತಿ ಮತ್ತು ಲಲಿತಳ ಕುಟುಂಬ ಒಂದಿದೆ. ಎರಡು ಕುಟುಂಬಗಳಲ್ಲಿ ಇರುವ ಭಿನ್ನತೆಗಳೇ 'ಮುಳ್ಳುಗಿಡ' ಕತೆಯ ಕಥಾವಸ್ತು.

ಎಸ್.ಎಸ್.ಎಲ್.ಸಿ ಮುಗಿಸಿಕೊಂಡು ತಾಲ್ಲೂಕು ಕಛೇರಿಯಲ್ಲಿ ಗುಮಾಸ್ತನಾದ ಸೂರಪ್ಪನ ಮನಸ್ಸಿನ ತಾಕಲಾಟಗಳನ್ನು ಕಥೆ ಎಳೆಎಳೆಯಾಗಿ ಬಿಚ್ಚಿಡುತ್ತದೆ. ಸೂರಪ್ಪ ಮದುವೆಯಾದ ಹುಡುಗಿ

ಅನಕ್ಷರಸ್ಥೆಯಾಗಿದ್ದು, ಅವನಿಗೆ ಸರಿಯದ ಹೆಂಡತಿಯಲ್ಲ ಎನ್ನುವುದೇ ಸೂರಪ್ಪನ ಮನಸ್ಸಿನ ಅಸಮಾದಾನಕ್ಕೆ ಕಾರಣ. ಲಲಿತ ಎನ್ನುವ ಅಕ್ಷರಸ್ಥೆಯನ್ನು ಮದುವೆಯಾಗಿದ್ದರೆ! ನಾನು ಇನ್ನೂ ಸ್ವಲ್ಪ ಹೆಚ್ಚು ಓದಿದ್ದರೆ? ಎಂದು ಸೂರಪ್ಪ ಆಗಾಗ ಆಸೆಯಿಂದ ಯೋಚಿಸುತ್ತಿದ್ದನು. ಅದನ್ನೇ ಅವನು ಅನೇಕ ಸಲ ಕನಸನ್ನು ಕಾಣುತ್ತಾನೆ. ವಾಸ್ತವಕ್ಕಿಂತ ಹೆಚ್ಚಾಗಿ ಕಲ್ಪನೆಯಲ್ಲಿಯೇ ಜೀವನ ಸಾಗಿಸುತ್ತಾನೆ.

ಕತೆಯಲ್ಲಿ ಬರುವ ಸೂರಪ್ಪನ ಗೆಳೆಯ ಕೃಷ್ಣಮೂರ್ತಿ ಬಿ.ಎ., ಬಿ.ಎಲ್. ಮಾಡಿ ಮುನಿಸೀಫನಾದನು. ನಂತರ ಸಬ್‌ಜಡ್ಜ್ ಆಗಿ ಸೂರಪ್ಪನಿರುವ ಊರಿಗೆ ವರ್ಗವಾಗಿ ಬರುತ್ತಾನೆ. ಆಗ ಸೂರಪ್ಪ ಅವನ ಜೊತೆಗೆ ಮಾವಿನಕೆರೆ ಬೆಟ್ಟಕ್ಕೆ ವಿನೋಧ ವಿಹಾರಕ್ಕಾಗಿ ಕೃಷ್ಣಮೂರ್ತಿಯ ಜೊತೆಗೆ ಹೋಗಲು ನಿರ್ಧರಿಸುತ್ತಾನೆ. ಸೂರಪ್ಪನ ಮಾತಿಗೆ ಅವಳ ಹೆಂಡತಿ ಪ್ರತಿ ಮಾತನಾಡದೇ ಅವನನ್ನು ಕಳಿಸಿಕೊಡುತ್ತಾಳೆ. ಮದುವೆಯಾದ ದಿನದಿಂದ ಗಂಡ ಮನೆಗೆ ಬಂದಾಗ ಯಾವ ಜವಾಬ್ದಾರಿಯನ್ನು ಅವನಿಗೆ ಹೇಳದೇ ಇಡೀ ಕುಟುಂಬವನ್ನೇ ತಿರುಮಲಮ್ಮ ನಿಭಾಯಿಸುತ್ತಾಳೆ. ಗಂಡನಿಂದ ಏನನ್ನು ಬಯಸದೇ ಅಥವಾ ಕೇಳದೇ ಇದ್ದುದರಲ್ಲಿಯೇ ಜೀವನ ಸಾಗಿಸುತ್ತಾಳೆ. ಕಾರಣ ಅವಳಿಗೆ ಅಕ್ಷರದ ಜ್ಞಾನವಿಲ್ಲ. ಆಡಂಬರದ ಜೀವನ ಗೊತ್ತಿಲ್ಲ. ಆಧುನಿಕತೆಯ ಪರಿಚಯವಿಲ್ಲ. ಆದರೆ ಲಲತಾಳಿಗೆ ತಿರುಮಲಮ್ಮನನ್ನು ಹೋಲಿಸಿದರೆ "ನೀನು ಈ ಸಂಸಾರವೆಂಬ ಮುಳ್ಳುಗಿಡದ ಹೂವು, ಹಣ್ಣು, ನೀನಿಲ್ಲದಿದ್ದರೆ ಇದು ಸಂಸಾರವಾಗುತ್ತಿರಲಿಲ್ಲ, ಸಂಘೋರವಾಗುತಿತ್ತು. ನನಗೆ ಗೊತ್ತಿಲ್ಲದೆಯೆ ನೀನು ನನ್ನ ಮುಖ್ಯ ಬಲ, ರಬ್ಬರ್ ಚೆಂಡು ತನ್ನ ಒಳಗಿರುವ ಗಾಳಿಯ ಬಲದಿಂದ ಹೊರಗಿನ ಯಾವ ಏಟು ಬಿದ್ದರೂ ಅದಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುವಂತೆ ನಿನ್ನ ಬಲದಿಂದ ನಾನು ಈ ತಾಪತ್ರಯಗಳಿಂದ ಹುಚ್ಚನಾಗದೆ ಉಳಿದಿದ್ದೇನೆ. ಈ ಜಗತ್ತಿನಲ್ಲಿ ನನಗೆ ದೊರೆತ ನೀನು ನನ್ನ ಸಖೀ ಮಾತ್ರವಲ್ಲ ನನ್ನ ದೇವತೆಯೂ ಹೌದು. ಇಲ್ಲದಿದ್ದರೆ ತ್ಯಾಜ್ಯವಾಗಿ, ಯಾತಕ್ಕೂ ಅನರ್ಹನಾಗಿ, ಹೊಟ್ಟೆಯ ತುಂಬ ಅನ್ನ ಬಟ್ಟೆ ಸಹ ಕೊಡಲು ಅಶಕ್ತನಾದ ನನ್ನಂತಹ ದೀನನನ್ನು ನೀನು ಯಾವಾಗೋ ಬಿಟ್ಟು ಹೋಗಿರಬೇಕಾಗಿತ್ತು. ನೀನು ಪ್ರೇಮಮಯಿ, ಸಂಸಾರದ ಸಾರ ಭಗವಂತ ನಿನ್ನನ್ನು ನನಗೆ ಕರುಣಿಸಿದುದರಿಂದ ನಾನು ತುಂಬ ಧನ್ಯ ಇದು ತಿಳಿಯದೆ ಕುರುಡನಾಗಿದ್ದೆ"[3] ಎಂದು ಹೆಂಡತಿಯನ್ನು ಗೌರವಿಸುವುದು ಇಲ್ಲಿ ಕಂಡುಬರುತ್ತದೆ.

ಸೂರಪ್ಪ ಕತೆಯ ಆರಂಭದಲ್ಲಿ ತನ್ನ ಹೆಂಡತಿಯನ್ನು ಇವಳು ಶುದ್ಧ ಹಳ್ಳಿಯವಳು, ಇವಳಿಗೆ ಸಂಗೀತವೇ ಗೊತ್ತಿಲ್ಲ. ತಾನು ನಗರದ ಅಥವಾ ವಿದ್ಯೆಯನ್ನು ಕಲಿತ ಹುಡುಗಿಯನ್ನು ಮದುವೆಯಾಗಬೇಕಿತ್ತು ಎಂದು ಹಗಲು ಕನಸು ಕಾಣುತ್ತಾನೆ. ಅಂತಹ ಸಂದರ್ಭದಲ್ಲಿ ಕೃಷ್ಣಮೂರ್ತಿಯ ಹೆಂಡತಿಯಾದ ಲಲಿತಳನ್ನು ನೋಡಿದ ತಕ್ಷಣ ತನ್ನ ಹೆಂಡತಿ ಏನೂ ಅಲ್ಲ ಎನ್ನುವ ತಿರಸ್ಕಾರ ಮನೋಭಾವ ಉಂಟಾಗುತ್ತದೆ. "ಊಹು, ಇದು ಪ್ರಯೋಜನವಿಲ್ಲ ಬರಿಯ ನಿರ್ಗಂಧ ಇದರಲ್ಲಿ ಹೂವೇ ಇಲ್ಲ. ಬರಿಯ ಮುಳ್ಳಿನ ಗಿಡ" ಎಂದುಕೊಳ್ಳುತ್ತಾನೆ.

ಒಮ್ಮೆ ಕೃಷ್ಣಮೂರ್ತಿ ಮತ್ತು ಸೂರಪ್ಪ ಮಾವಿನಕೆರೆ ಬೆಟ್ಟಕ್ಕೆ ವಿನೋದ ವಿಹಾರಕ್ಕಾಗಿ ಹೊಗಬೇಕಾದ ಸಂದರ್ಭದಲ್ಲಿ ಕೃಷ್ಣಮೂರ್ತಿ ಮತ್ತು ಅವನ ಹೆಂಡತಿಯ ವಾಗ್ವಾದವನ್ನು ನೋಡಿದ ಸೂರಪ್ಪನ ಕಣ್ಣಲ್ಲಿ ಕಣ್ಣೀರು ಧರೆ ಧರೆಯಗಿ ಬರುತ್ತದೆ. ತಿರುಮಲಮ್ಮ ತನ್ನ ಗಂಡನಿಗೆ ಮಾಡಿದ ಸಹಾಯವನ್ನು ನೆನೆದು ಸೂರಪ್ಪ ತನ್ನ ಹೆಂಡತಿ ನಿಜವಾಗಲೂ ದೇವತೆ. ಅವಳು ಮನೆಯ ಸಂಸಾರವನ್ನು ಇಷ್ಟು ದಿನ ಹೇಗೆ ನಿಭಾಯಿಸಿದಳು. ಒಂದು ದಿನಾನು ನಾನು ಅವಳ ಕಷ್ಠವನ್ನು ಕೇಳಿದವನಲ್ಲ ಎಂದು ತನ್ನ ಬಗ್ಗೆ ತನಗೆ ತಿರಸ್ಕಾರ ಉಂಟಾಗುತ್ತದೆ.

'ಸಫಲ ಜೀವನ' ಕತೆಯಲ್ಲಿ ಬರುವ ವೆಂಕಟರಾಯರು ತಾಲೂಕು ಕಛೇರಿಯಲ್ಲಿ ಮೂವತ್ತೈದು ವರ್ಷಗಳು ಕೆಲಸ ಮಾಡಿ ನಿವೃತ್ತರಾದರು. ಆಗ ಜೀವನ ಸಾಗಿಸಲು ನಗರದಲ್ಲಿ ಮನೆ ಇರಲಿಲ್ಲ. ಬಾಡಿಗೆ ಕಟ್ಟುವಷ್ಟು ಶ್ರೀಮಂತರಲ್ಲ. ಹೀಗಿರುವಾಗ ಹಳ್ಳಿಗೆ ಬರುವ ಯೋಚನೆ ಮಾಡುತ್ತಾರೆ. ಮಲ್ಲಿಗೆಹಳ್ಳಿ ಅವರು ಹುಟ್ಟಿದ ಊರು, ಅಲ್ಲಿಗೆ ಗಂಡ ಹೆಂಡತಿ ಬರುತ್ತಾರೆ. ಬಂದ ದಿನವೇ ಹೇಮಾವತಿ ನದಿಯಲ್ಲಿ ಸ್ನಾನ ಮಾಡಿ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ದೇವರನ್ನು ಸೇವಿಸಿ, ದೇವತಾ ಸಾನಿಧ್ಯದಿಂದ ದೊರಕುವ ಅನಿರ್ವಚನೀಯವಾದ ಶಾಂತಿಯನ್ನೂ ನೆಮ್ಮದಿಯನ್ನೂ ಹೊಂದುತ್ತಾರೆ. ನಗರದಲ್ಲಿ ಅನುಭವಿಸಿದ ದುರ್ನಾತದ ಕೊಳಕು ನಲ್ಲಿಗಳು, ಇಕ್ಕಟ್ಟಾದ ಮನೆಗಳಲ್ಲಿ ವಾಸಿಸಿ ಜೀವಮಾನವೆಲ್ಲ ತಾವು ಅಂದುಕೊಂಡಿದ್ದೆಲ್ಲ ಅನುಭವಿಸಲು ಸಾಧ್ಯವಾಗದೇ ಮೂವತ್ತೈದು ವರ್ಷಗಳು ಕಳೆದು ಹೋಗಿರುತ್ತವೆ. ಈಗಲಾದರೂ ನದಿ, ದೇವಸ್ಥಾನ, ಪೂಜೆ, ಸೇವೆ, ಧ್ಯಾನ ಮುಂತಾದ ಆಸೆಗಳೆಲ್ಲ ಹಿಡೇರಬಹುದೆಂದುಕೊಳ್ಳುತ್ತಾಳೆ ವೆಂಕಟರಾಯರ ಹೆಂಡತಿ. ಇದನ್ನು ವೆಂಕಟರಾಯರು ಒಪ್ಪಿಕೊಳ್ಳುತ್ತಾರೆ. ತನ್ನ ಹೆಂಡತಿಯ ಇಚ್ಛೆಯಂತೆ ಅವರು ಚಾಚುತಪ್ಪದೆ ನಿಯಮ ನಿಷ್ಠೆಗಳನ್ನು ಪಾಲಿಸುತ್ತಾರೆ.

ಮಲ್ಲಿಗೆ ಹಳ್ಳಿಯಲ್ಲಿಯೂ ಕೆಲವು ನಿವೃತ್ತ ಅಧಿಕಾರಿಗಳಿದ್ದರು. ಅವರೆಲ್ಲ ಶ್ರೀಮಂತರೇ, ಆದರೆ ವೆಂಕಟರಾಯರ ನೌಕರಿಯಷ್ಟು ಕೆಳದರ್ಜೆಯ ನೌಕರ ಹಳ್ಳಿಯಲ್ಲಿ ಯಾರು ಇರಲಿಲ್ಲ. ಅವರೆಲ್ಲ ಪ್ರತಿದಿನ ಸಂಜೆ ನದಿಯ ತೀರದ ಮಂಟಪದಲ್ಲಿ ಸೇರುತ್ತಿದ್ದರು. ಅವರು ಸಂಭಾಷಣೆ ಮಾಡುವ ವಿಷಯ ಒಂದೇ ಆಗಿರುತ್ತದೆ. "ನಾನು ನನ್ನ ಅಧಿಕಾರದಲ್ಲಿದ್ದಾಗ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂಬುದೇ ಆಗಿತ್ತು. ಹಾಗಾಗಿ ವೆಂಕಟರಾಯರಿಗೆ ಇದು ಸರಿಯೆನಿಸಲಿಲ್ಲ. ಆದರೂ ಅನಿವಾರ್ಯವಾಗಿ ಕೆಲವು ದಿನಗಳನ್ನು ಪೆನ್ಷನ್‌ನರ್‌ಗಳ ಜೊತೆಯಲ್ಲಿ ಕಳೆಯುತ್ತಾನೆ. ನದಿ ಹರಿಯುವುದನ್ನು ನೋಡಿ ಈ ನೀರನ್ನು ಉಪಯೋಗಿಸಿ ಏನನ್ನಾದರೂ ಬೆಳೆಯಬೇಕೆಂದು ನಿರ್ಧರಿಸಿಕೊಳ್ಳುತ್ತಾನೆ. ಜಮೀನನ್ನು ನೋಡಿದ ಮೇಲೆ ಅದರ ಮಾಲೀಕನನ್ನು ಪತ್ತೆಹಚ್ಚಿ ಸಾವಿರದ ಐನ್ನೂರು ರೂಪಾಯಿಗಳನ್ನು ಕೊಟ್ಟು ಆರು ಎಕರೆ ಖುಷ್ಕಿ ನೆಲವನ್ನು ಕೊಂಡುಕೊಳ್ಳುತ್ತಾನೆ. ಮರುದಿನ ಸಂಗತಿ ತಿಳಿದಾಗ ಉಳಿದ ಪೆನ್ಷನ್‌ನರ್‌ಗಳು "ಇವನೊಬ್ಬ ಹುಚ್ಚ. ಈ ವಯಸ್ಸಿನಲ್ಲಿ ಇವನಿಗೆ ವ್ಯವಸಾಯ ಮಾಡುವುದಕ್ಕೆ ಆಗುತ್ತದೆಯೇ? ಅದೋ. ಬಯಲು ಬೆಂಗಾಡು. ನದಿಯಲ್ಲಿ

ನೀರಿದ್ದ ಮಾತ್ರಕ್ಕೆ ಏನು ಬಂತು? ಆ ನೀರು ಆ ನೆಲಕ್ಕೆ ಹತ್ತುವುದು ಸುಲಭದ ಮಾತೆ? ಆಗುವುದಾಗಿದ್ದರೆ ರೈತರು ಬಿಡುತ್ತಿದ್ದರೇ? ಜಮೀನಿನ ಯಜಮಾನರು ಮಾರುತ್ತಿದ್ದರೆ. ಇವನಿಗೆ ವ್ಯವಸಾಯದ ಅನುಭವ ತಾನೇ ಏನಿದೆ? ದಾಸಯ್ಯ ಎತ್ತ, ದನಕರ ಎತ್ತ? ಜೀವಮಾನವೆಲ್ಲ ಕೂಡು ಹಾಕಿದ್ದ ನಾಲ್ಕು ಕಾಸು ಕೈಯಲ್ಲಿ ಇತ್ತು. ಅದನ್ನು ನೀರಿಗೆ ಹಾಕಿದ" ಎಂದು ಪೆನ್ಷನ್‌ನರ್‌ಗಳು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುತ್ತಾರೆ. ಇದು ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ವೆಂಕಟರಾಯರು ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ.

ಆರಂಭದಲ್ಲಿ ಸೊಗಸಾದ ಒಂದು ಭಾವಿಯನ್ನು ತೋಡಿಸಿದರು. ನೀರು ಸಮೃದ್ಧವಾಗಿದ್ದು, ಎಳನೀರಿನಂತೆ ರುಚಿಯಾಗಿಯೂ ಇದ್ದಿತು. ವಿದ್ಯುಚ್ಛಕ್ತಿ ಇರಲಿಲ್ಲ. ಹಾಗಾಗಿ ಕೈಯಾತವನ್ನು ಹೂಡಿದರು ಭಾವಿಯ ಸಮೀಪದ ಮುಕ್ಕಾಲು ಎಕರೆ ಭೂಮಿಯನ್ನು ಮಾತ್ರ ನೀರು ಹರಿಸಿ ಬೆಳೆಸುವ ಪೈರಿಗೆ ಆರಿಸಿಕೊಂಡರು. ಉಳಿದ ಜಮೀನನ್ನು ಮಳೆಯಿಂದ ಬೆಳೆಯುವ ಪೈರಿಗೆ ಬಿಟ್ಟುಕೊಂಡರು. ಬೇಲಿಯನ್ನು ಹಾಕಿ, ಪಾತಿಗಳನ್ನು ಮಾಡಿ ಶೀಘ್ರ ಫಲವನ್ನು ಕೊಡುವ ಹೂವು, ಮರುಗ, ತರಕಾರಿ, ವೀಳೆದೆಲೆ, ಹಂಬು, ಸೀಬೆಗಿಡ, ದಾಳಿಂಬೆ, ನಿಂಬೆ, ಪಪ್ಪಾಯ, ಚಕ್ಕೋತ ಗಿಡಗಳನ್ನು ಬೆಳೆಸಿದರು. ಹಾಲು ಕರೆಯುವ ಸೊಗಸಾದ ಎರಡು ಹಸುಗಳನ್ನು ಕೊಂಡುಕೊಂಡರು. ಎತ್ತು, ಹಸು, ಬಾವಿ, ಜಮೀನು ಇಲ್ಲಿಗೆ ಅವರ ಕೈಯಲ್ಲಿದ್ದ ಹಣ ಬರಿದಾಯಿತು. ಆದರೂ ಎದೆಗುಂದದೆ ತನ್ನ ಛಲವನ್ನು ಸಾಧಿಸುತ್ತಾನೆ.

ಸ್ವಲ್ಪ ದಿನಗಳಲ್ಲಿಯೇ ವೆಂಕಟರಾಯರ ತೋಟದಲ್ಲಿ ಬಗೆ ಬಗೆಯ ಹೂವುಗಳು ಬೆಳೆಯತೊಡಗಿದವು. ನಿತ್ಯ ವೆಂಕಟರಾಯರೇ ಒಂದು ಬುಟ್ಟಿ ಹೂವು ತಂದು ಮನೆಯಲ್ಲಿ ಇಡುತ್ತಿದ್ದರು. ಅದನ್ನು ಅವರ ಹೆಂಡತಿ ದೇವಸ್ಥಾನಕ್ಕೆ ಕೊಡುತ್ತಿದ್ದರು. ತೋಟದ ಜೊತೆಯಲ್ಲಿ ರಾಗಿ, ಜೋಳ, ಶೇಂಗಾ, ಮೆಣಸಿನಕಾಯಿ ಕೊಡುತ್ತಿದ್ದು, ಯಾವ ಸಮಯದಲ್ಲೂ ವೆಂಕಟರಾಯರ ಮನೆಯಲ್ಲಿ ಹಾಲು ಸಿಗುವಂತಾಯಿತು. ಮೂವತ್ತೈದು ವರ್ಷಗಳ ದಾರಿದ್ರ್ಯ ಮರೆಯಾಗಿ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ, ತರಕಾರಿ, ಹಣ್ಣುಗಳಿಂದ ಮನೆ ಹಿಂದೆಂದೂ ಇಲ್ಲದಷ್ಟು ಸಮೃದ್ಧವಾಗಿತ್ತು. ಆ ವರುಷ ಶ್ರೀಕೃಷ್ಣಾಷ್ಟಮಿಯಂದು ಎಲ್ಲರೂ ಶ್ರೀಕೃಷ್ಣನಿಗೆ ಹಸುವಿನ ಹಾಲಿನಲ್ಲಿ ಅರ್ಘ್ಯವನ್ನು ಕೊಟ್ಟರು. ಗೋಪಾಲನಾದ ಶ್ರೀಕೃಷ್ಣನು, ಗೋವಿನ ಶುದ್ಧವಾದ ಹಾಲನ್ನು ಕಂಡು ಎಷ್ಟೋವರ್ಷಗಳಾಗಿತ್ತು.

ಹೀಗಿರುವಾಗ ವೆಂಕಟರಾಯರು ದೇವಸ್ಥಾನ, ಪೂಜೆಗಳಲ್ಲಿ ಭಾಗವಹಿಸುವುದೇ ಕಡಿಮೆಯಾಯಿತು. ಬೆಳಗ್ಗೆ ಎದ್ದ ಕೂಡಲೇ ಹೊಲಕ್ಕೆ ಹೋದರೆ, ಮನೆಗೆ ಹೊತ್ತು ಮಾಡಿಕೊಂಡು ಬರುತ್ತಾನೆ. ಹಬ್ಬದ ದಿನ ಕೂಡ ಮನೆಯಲ್ಲಿ ಇರುವುದಿಲ್ಲ. ಹಾಗಾಗಿ ಹೆಂಡತಿಗೆ ತನ್ನ ಗಂಡನ ವಿಚಾರದಲ್ಲಿ ಸ್ವಲ್ಪ ಅಸಮಾಧಾನ ಉಂಟಾಗಿತ್ತು. ಕೊನೆಗೆ ಹೆಂಡತಿಯ ಇಂಗಿತವನ್ನು ಅರಿತ ವೆಂಕಟರಾಯರು ಹೊಲಕ್ಕೆ ಹೋಗುವುದನ್ನೇ ಬಿಟ್ಟರು. ಇರುವ ಹಸು ಮತ್ತು ದನವನ್ನು ಮಾರಿದರು. ಯಾವಾಗಲೂ

ದೇವಸ್ಥಾನದಲ್ಲೇ ಕಾಲ ಕಳೆಯುತ್ತಿದ್ದರು. ಹೊಲಕ್ಕೆ ಹೋಗುವಾಗ ವೆಂಕಟರಾಯರಿಗೆ ಹುಚ್ಚು ಹಿಡಿದಿದೆ ಎಂದು ಬಾವಿಸಿದ ನಿವೃತ್ತ ಪೆನ್ಷನ್‌ರವರು ಅವನು ಹೊಲಕ್ಕೆ ಹೋಗುವುದನ್ನು ಬಿಟ್ಟಾಗ "ದೇವರು ಯಾರನ್ನೂ ಕೆಡುವುದಕ್ಕೆ ಬಿಡುವುದಿಲ್ಲ, ಅವರು ಬೇಡವೆಂದರೂ ತಾನೇ ಹೋಗಿ ಅವರನ್ನು ಜುಟ್ಟು ಹಿಡಿದು ಎಳೆದುಕೊಂಡು ಬರುತ್ತಾನೆ. ಇದಕ್ಕೆ ನಿದರ್ಶನ ನಿತ್ಯಾ ಕಾಣುತ್ತಿದೆ. ಇಂದು ಕಾಣುತ್ತಿದೆ. ನಾಳೆಯೂ ಕಾಣುತ್ತದೆ" ಎಂದು ಹೇಳುತ್ತಾ ವೆಂಕಟರಾಯರ ಕಡೆ ನೋಡುತ್ತಾರೆ. ಆದರೆ ವೆಂಕಟರಾಯರು ಇದು ಯಾವುದನ್ನು ಕಿವಿಗೆ ಹಾಕಿಕೊಳ್ಳದೇ ಸುಮ್ಮನೆ ಕುಳಿತಿರುತ್ತಾರೆ.

ಇಲ್ಲಿ ವೈದಿಕ ಪರಂಪರೆಯ ಪ್ರಭಾವ ಹೆಚ್ಚಾಗಿರುವುದು ಕಂಡು ಬರುತ್ತದೆ. ಎಲ್ಲದಕ್ಕೂ ದೇವರೇ ಕಾರಣ ಎಂದು ಹೇಳುವ ವರ್ಗವನ್ನು ಬೇರೆ ಯಾವ ವರ್ಗದವರು ಅದಕ್ಕೆ ವಿರುದ್ಧವಾಗಿ ಮಾತನಾಡುವುದನ್ನೇ ಕಟ್ಟಿಹಾಕಿದೆ. ಗೊರೂರರ ಕತೆಗಳ ಆಶಯವು ನಂಬಿಕೆ ಹಾಗೂ ಆಚರಣೆಯೇ ಪ್ರಧಾನ ಅಂಶವಾಗಿರುವುದನ್ನು ನಾವು ಈ ಕತೆಯಲ್ಲಿ ಕಾಣಬಹುದು.

ಮಾಸ್ತಿಯವರ ಸಣ್ಣ ಕತೆಗಳಂತೆ ಗೊರೂರರ ಸಣ್ಣಕಥೆಗಳು ದೀರ್ಘವಾಗಿ ಲಘು ಪ್ರಬಂಧದಂತೆ ಕತೆಗಳನ್ನು ರಚಿಸಿದ್ದಾರೆ. ಅಂತಹ ಕತೆಗಳ ಸಾಲಿಗೆ 'ಮರೆಯಾದ ಮಾರಮ್ಮ' ಕತೆಯೂ ಸೇರಿಕೊಂಡಿದೆ. ಇಲ್ಲಿ ಕಂಡುಬರುವ ನಿರ್ವಾಣಿ ಜೈಲಿನಿಂದ ಬಿಡುಗಡೆ ಹೊಂದಿ, ತನಗೆ ಊರು ಮತ್ತು ತನಗೆ ಬೇಕಾದವರು ಊರಲ್ಲಿ ಇಲ್ಲದ್ದರಿಂದ ಮುಂದೆ ಏನು ಮಾಡಬೇಕೆಂದು, ಎಲ್ಲಿಗೆ ಹೋಗಬೇಕೆಂದು ಯೋಚಿಸಿ ಕೊನೆಗೆ 'ಗುಡ್ಡೆತಳ' ಎಂಬ ಹಳ್ಳಿಗೆ ಹೋಗುತ್ತಾನೆ. ಅಲ್ಲಿ ಊರ ಹೊರಗೆ ಒಂದು ಹಳೇ ಕಲ್ಲಿನ ಮಂಟಪ ಕಾಣಿಸುತ್ತದೆ. ಅಲ್ಲಿಂದಲೇ ತನ್ನ ಜೀವನ ನಿರ್ವಾಹಣೆಗೆ ಮುಂದಾಗುತ್ತಾನೆ. ಅವನು ಅಪರಾಧಿಯಾಗಿ ಜೈಲಿನಲ್ಲಿ ೬ ತಿಂಗಳು ಕಠಿಣ ಶಿಕ್ಷೆಗೆ ಒಳಗಾಗಿದ್ದರಿಂದ ಗಡ್ಡ ಮತ್ತು ಕೂದಲು ತುಂಬಾ ಉದ್ದ ಬೆಳೆದಿರುತ್ತವೆ. ಇದನ್ನೇ ಬಳಸಿಕೊಂಡು ಒಬ್ಬ ಸನ್ಯಾಸಿಯಾಗಿ, ಸ್ವಾಮಿಯಾಗಿ, ಪೂಜಾರಿಯಾಗಿ ತನ್ನ ಕೆಲಸವನ್ನು ಆರಂಭಿಸುತ್ತಾನೆ.

ನಿರ್ವಾಣಿ ಹಳೆ ಮಂಟಪಕ್ಕೆ ಬಂದ ಸುದ್ದಿ ತಿಳಿದ ಆ ಹಳ್ಳಿಯ ಜನ ತಂಡೋಪತಂಡವಾಗಿ ನೋಡಲು ಬರುತ್ತಾರೆ. ಬಂದವರೆಲ್ಲ ಅವನಿಗೆ ಹಣ್ಣುಗಳನ್ನು ಪ್ರಸಾದವನ್ನು ತಂದು ಕೊಡುತ್ತಿದ್ದರು. ಆದ್ದರಿಂದ ಅವನಿಗೆ ಅಡಿಗೆ ಮಾಡಿಕೊಳ್ಳುವ ಅನಿವಾರ್ಯವೇ ಇರಲಿಲ್ಲ. ದಿನದಿನಕ್ಕೆ ನಿರ್ವಾಣಿಯು ಹೆಚ್ಚು ಪ್ರಚಾರ ಪಡೆದುಕೊಂಡನು. ಆ ಹಳ್ಳಿಯಲ್ಲಿ ಆ ಮಂಟಪದಲ್ಲಿ ಈ ಹಿಂದೆ ಒಬ್ಬ ಬೈರಾಗಿ ಇದ್ದನು. ಅವನ ನಂತರ ನಿರ್ವಾಣಿ ಬಂದುದರಿಂದ ಹಿಂದೆ ಇದ್ದ ನಂಬಿಕೆ ಮತ್ತೇ ಜನರಲ್ಲಿ ಮೂಡಿತು. ಜನರು ಒಂದಲ್ಲ ಒಂದು ರೀತಿಯ ಸಮಸ್ಯೆಯನ್ನು ತರುತ್ತಿದ್ದರು. "ಎಮ್ಮೆ ಉಚ್ಚಿಕೊಂಡಿತು ಏನು ಮಾಡಬೇಕು, ಹಸು ಮನೆಗೆ ಬರದೆ ತಪ್ಪಿಸಿಕೊಂಡಿದೆ. ಹೊಸ ಮನೆಗೆ ಬಂದ ಮೇಲೆ ಏಳಿಗೆ ಆಗುತ್ತಿಲ್ಲ, ಕುರಿ, ಕೋಳಿಗಳೆಲ್ಲ ಸಾಯುತ್ತಿವೆ, ಜ್ವರ ಬರುತ್ತಿದೆ. ಅದಕ್ಕೆ ಯಂತ್ರ ಕಟ್ಟಿ; ಇಂತಹ ಜಮೀನನ್ನು ಕೊಂಡುಕೊಂಡರೆ ನಮಗೆ ಏಳಿಗೆಯೇ?"" ಎಂದೆಲ್ಲ ನಿರ್ವಾಣಿಗೆ ಗಿರಾಕಿಗಳು ಹೆಚ್ಚು ಹೆಚ್ಚು ಬರತೊಡಗಿದವು. ಮೂರು ತಿಂಗಳು ಕಳೆಯುವುದರೊಳಗೆ ನಿರ್ವಾಣಿಯ ಹೆಸರು

ಸುತ್ತಲ ಹತ್ತಾರು ಹಳ್ಳಿಗಳಿಗೆ ಗೊತ್ತಾಯಿತು. ಜನರ ಈ ಭಕ್ತಿಯನ್ನು ಕಂಡ ನಿರ್ವಾಣಿ ಕೆಲವು ಕೆಲಸಗಳನ್ನು ಜನರಿಗೆ ಪವಾಡದಂತೆ ಕಾಣಲು ಮಾಡುತ್ತಾನೆ.

ಮಾಯಣ್ಣ ಒಂದು ತೆಂಗಿನ ಗಿಡವನ್ನು ನೆಡುತ್ತಾನೆ. ನಿರ್ವಾಣಿ ಇನ್ನೊಂದನ್ನು ಅದರ ಪಕ್ಕದಲ್ಲೇ ನೆಡುತ್ತಾನೆ. ನಿರ್ವಾಣಿಯ ಉದ್ದೇಶ ಒಂದು ಗಿಡ ಹೋದರೆ ಮತ್ತೊಂದು ಗಿಡ ಬೆಳೆಯಲಿ ಎಂದಷ್ಟೇ ಆಗಿತ್ತು. ಆದರೆ ಅದು ಪಡೆದ ಸ್ವರೂಪ ಬೇರೆಯಾಯಿತು. ಮಾಯಣ್ಣ ದಿನಾಲೂ ಅದನ್ನು ಹೋಗುವಾಗ ಬರುವಾಗ ನೋಡುತ್ತಿರುತ್ತಾನೆ. ಮೂರು ತಿಂಗಳ ನಂತರ ಅದರಲ್ಲಿ ಎರಡು ಹಸಿರು ಗರಿಗಳನ್ನು ಕಂಡು ಮಾಯಣ್ಣನಿಗೆ ಆಶ್ಚರ್ಯವಾಯಿತು. ಅದು ಮಹಾಸ್ವಾಮಿಗಳ ಮಹಿಮೆಯೇ ಹೊರತು ಮತ್ತೇನೂ ಅಲ್ಲ ಎಂದು ಇಡೀ ಹಳ್ಳಿಯ ತುಂಬಾ ಪ್ರಚಾರಮಾಡಿದನು. ಇದನ್ನು ತಿಳಿದ ಪಟೇಲರು ಆಶ್ಚರ್ಯ ಪಡುತ್ತಾರೆ. ಅದಕ್ಕೆ ಒಂದು ನೆಳಲಿನ ಚಪ್ಪರವನ್ನು ಹಾಕಿಸುತ್ತಾರೆ. ಇದನ್ನು ತಿಳಿದ ಹಳ್ಳಿಯವರು "ಮಹಿಳೆಯರು ತಟ್ಟೆಗಳಲ್ಲಿ ಹೂವು, ಹಣ್ಣು, ಕಾಯಿ, ಎಣ್ಣೆ, ಹಣತೆ ಇವುಗಳನ್ನೆಲ್ಲ ತಂದು ತೆಂಗಿನ ಸಸಿಗಳಿಗೆ ಪೂಜೆ ಮಾಡಿ ಪ್ರದಕ್ಷಿಣೆ, ನಮಸ್ಕಾರ ಮಾಡಿದರು. ಸುದ್ಧಿ ತಿಳಿದು ಊರಿನ ಆದಿ ಕರ್ನಾಟಕ ವಾದ್ಯಗಾರರು ಮೇರಿ, ತಮಟೆ, ಡಂಕ, ಭಾಂಕಿ, ಕೊಂಬು, ಕಹಳೆ, ತಾಳ, ಕುಣಿಮಿಣಿಗಳೊಂದಿಗೆ ಬಂದು ವಾದ್ಯ ಮಾಡಿದರು. ಸುತ್ತಮುತ್ತಲ ದಾಸಯ್ಯಗಳೆಲ್ಲ ತಮ್ಮ ಎತ್ತುಗಳ ಮೇಲೆ ನಗಾರಿ, ಭಾಂಕಿ, ತುತ್ತೂರಿಗಳೊಡನೆ ಬಂದು ಸೇರಿದರು. ವಾದ್ಯಘೋಷ, ಅಂತರಿಕ್ಷವನ್ನು ಭೇದಿಸುವಂತೆ ಮೊಳಗಿತ್ತು."[3] ಹೀಗೆ ನಿರ್ವಾಣಿಯ ಹೆಸರು ಪವಾಡ ಪುರುಷನಂತೆ ಪ್ರಸಿದ್ಧಿಯಾಯಿತು. ಇದನ್ನು ಬಳಸಿಕೊಂಡು ಏನಾದರೂ ಹಣವನ್ನು ಸಂಪಾದಿಸಬೇಕೆಂದು ನಿರ್ವಾಣಿ ಯೋಚಿಸುತ್ತಿರುವಾಗ, ಒಂದು ದಪ್ಪವಾದ ಮರದ ತುಂಡನ್ನು ತಂದು ಅದನ್ನು ಮಂಟಪದ ಒಳಗಡೆ ದೇವಿಯಂತೆ ಅದನ್ನು ಅಲಂಕರಿಸುತ್ತಾನೆ. ಮರದ ತುಂಡಿಗೆ ಭಕ್ತರು ತಂದ ಎಣ್ಣೆಯನ್ನು ಸುರಿದು ಅದಕ್ಕೆ ಚೆನ್ನಾಗಿ ಕುಡಿಸಿದನು. ಅಡುಗೆ ಮಾಡುವಾಗ ಉಳಿದಿದ್ದ ಕೆಂಡವನ್ನೆಲ್ಲ ಆರಿಸಿ ಚೆನ್ನಾಗಿ ಪುಡಿ ಮಾಡಿ ಅದನ್ನು ಹಲಗೆಗೆ ಬಳಿದನು. ಅದು ಕರೀಕಲ್ಲಿನಂತೆ ಹೊಳೆಯ ತೊಡಗಿತು. ಬಿಳಿನಾಮ, ಕುಂಕುಮಗಳಿಂದ ಅಚ್ಚುಕಟ್ಟಾಗಿ ಕಾಣುವಂತೆ ಹಲಗೆಯ ಮೇಲೆ ಮಾರಮ್ಮನ ಕಣ್ಣು, ಮುಖ, ಕಿವಿ, ಬಾಯಿ ಎಲ್ಲವನ್ನು ಚಿತ್ರಿಸಿದನು. ಹೀಗೆ ಜನರಲ್ಲಿ ನಂಬಿಕೆಯನ್ನು ಹುಟ್ಟಿಸುವ ಕೆಲಸ ನಿರ್ವಾಣಿ ಮಾಡುತ್ತಾನೆ. ಅಷ್ಟೇ ಅಲ್ಲ ಊರಿನಲ್ಲಿರುವ ಜನರ ಸಮಸ್ಯೆಗಳನ್ನು ಕೇಳಿದಾಗ, ಆ ಸಮಸ್ಯೆಗಳನ್ನು ಊರಿನ ಬೇರೊಬ್ಬರಲ್ಲಿ ಮಾಹಿತಿ ಪಡೆದು ತಾನೇ ಅದನ್ನು ಕಂಡು ಹಿಡಿದವನಂತೆ ಹೇಳಿ ದೆವ್ವಗಳನ್ನು ಬಿಡಿಸುವುದಾಗಿಯೂ ಹೆಸರು ಪಡೆದನು.

ನಿರ್ವಾಣಿಯನ್ನು ಪವಾಡ ಪುರುಷರೆಂದು ನಂಬಿದ ಆ ಹಳ್ಳಿಯ ಜನರು ಅವನು ಕುಣಿಸಿದಂತೆ ಕುಣಿಯುವ ಬೊಂಬೆಗಳಾಗುತ್ತಾರೆ. ಒಂದು ದಿನ ನವರಾತ್ರಿಯ ದುರ್ಗಾಷ್ಟಮಿಯ ದಿನ ಬಂಡಿ ಹಬ್ಬವನ್ನು ಮಾಡುವುದೆಂದು ನಿರ್ಣಯವಾಯಿತು. ಇದರ ಉಪಯೋಗ ಪಡೆದು ನಿರ್ವಾಣಿ

ಹಣವನ್ನು ಸಂಪಾದಿಸುವ ಉಪಾಯವನ್ನು ಮಾಡುತ್ತಾನೆ. ದೇವರಿಗೆ ಹರಕೆ ಇದ್ದರೆ ಅದನ್ನು, ಹಣದ ರೂಪದಲ್ಲಿ ಕೊಡುವಂತೆ ಹೇಳುತ್ತಾನೆ. ಹೀಗೆ ಹಣವನ್ನು ಸಂಪಾದಿಸುವುದೇ ನಿರ್ವಾಣಿಯ ಕೆಲಸವಾಯಿತು. ಆ ಹಣದಿಂದ ಅದೇ ಹಳ್ಳಿಯಲ್ಲಿರುವ ಹೊನ್ನಿಯನ್ನು ಮದುವೆಯಾಗಬಹುದೆಂದು ಯೋಚಿಸುತ್ತಾನೆ. ಆದರೆ ಅದಕ್ಕೆ ಅವಳು ಒಪ್ಪದಿದ್ದಾಗ ಹಳ್ಳಿಯನ್ನೇ ಬಿಟ್ಟು ಹೋಗುತ್ತಾನೆ.

ಒಟ್ಟಾರೆಯಾಗಿ ಮಾರೆಯಾದ ಮಾರಮ್ಮ ಕತೆಯಲ್ಲಿ ತುಂಬಾ ನಂಬಿಕೆ ಮತ್ತು ಆಚರಣೆಗೆ ಸಂಬಂಧಿಸಿದ ಅಂಶಗಳು ಸಿಗುತ್ತವೆ. ಹಳ್ಳಿಯಲ್ಲಿರುವ ಎಲ್ಲಾ ಜನರು ನಿರ್ವಾಣಿ ಹೇಳಿದ್ದನ್ನೇ ನಂಬುತ್ತಾರೆ. ಅವರಿಗೆ ಅದನ್ನು ಯೋಚಿಸುವಷ್ಟು ವ್ಯವಧಾನವಾಗಲಿ, ಸಂಯಮವಾಗಲಿ ಕತೆಗಾರ ನೀಡಿಲ್ಲ. ಎಲ್ಲಿ ಪರಂಪರೆ ಹೆಚ್ಚಾಗಿ ಬದುಕು ದುಸ್ಥರವಾಗುತ್ತದೋ ಅಲ್ಲಿ ಆಧುನಿಕತೆಯನ್ನು ತಂದು ಅಲ್ಲಿಗೆ ಕತೆಯನ್ನು ಮುಗಿಸುವ ತಂತ್ರ ಕತೆಯ ಯಶಸ್ಸಿಗೆ ಕಾರಣವಾಗಿದೆ.

'ಬೂತಯ್ಯನ ಮಗ ಅಯ್ಯು' ಕತೆಯಲ್ಲಿ ಮಾರಿಜಾತ್ರೆಯ ಕುರಿತು ಪ್ರಸ್ತಾಪ ಬರುತ್ತದೆ. ಇದಕ್ಕೆ ಹಣ ಮತ್ತು ಕೋಣಗಳ ಬಲಿ ಹೆಚ್ಚು, ಹಾಗಾಗಿ ಅಯ್ಯು ಅದನ್ನು ಓಪ್ಪುವುದಿಲ್ಲ. ಆದರೆ ಗುಳ್ಳನು ಮಾರಿ ಜಾತ್ರೆಯನ್ನು ಮಾಡಲೇ ಬೇಕೆಂದು ಪಟ್ಟು ಹಿಡಿಯುತ್ತಾನೆ. ಕೋಣಗಳನ್ನು ಕಡೆಯುವುದನ್ನು ಈ ವರ್ಷ ನಿಲ್ಲಿಸಿ ಎಂದ ಅಯ್ಯು ರೈತರನ್ನು ಕೇಳಿಕೊಂಡಿದ್ದನು. ಆ ವೇಳೆಗೆ ಅಲ್ಲಿಗೆ ಬಂದ ಗುಳ್ಳನು "ಜಾತ್ರೆ ಬಿಟ್ರೆ ಊರು ಪ್ರಬಲ ಆಗೋಲ್ಲ, ಅಯ್ಯನ ಮಾಟವೂ ಅದೇಯ ನಮ್ಮ ಅಪ್ಪ ಅಜ್ಜನ ಕಾಲದಿಂದ ನಡಕೊಂಡು ಬಂದಿರೋ ದೇವರು ದಿಂಡರು ಇವತ್ತು ನಮಗೆ ಆಗದೋರಾದ್ರ? ಜಾತ್ರೆ ಬಿಡಲಿ ಒಕ್ಕಡಾದ ಪ್ಲೇಗೋ ಕಾಲರಾನೋ ದೊಡ್ಡ ರೋಗಾನೋ ಹೊಡೆದು ಈ ಮುಂಡೆ ಮಕ್ಳನ್ನೆಲ್ಲಾ ಸವರಿಕೊಂಡು ಹೋಗ್ಲಿ, ಆಮೇಲೆ ರಾಜ್ಯ ಎಲ್ಲಾ ನಂದೇ ಅಂತ ಅಯ್ಯು ಹೇಳ್ತಾನೆ"[2] ಎಂದು ಗುಳ್ಳನು ತನ್ನ ಹಠವನ್ನು ಸಾಧಿಸುತ್ತಾನೆ. ಅಯ್ಯುಗೆ ಆಧುನಿಕತೆಯ ಆಯಾಮ ಇರುವುದರಿಂದ ಮಾರಿಜಾತ್ರೆಯಲ್ಲಿ ಬಲಿಯನ್ನು ಕೊಡುವುದು ಬೇಡ ಎಂದು ಹೇಳುತ್ತಾನೆ. ಆದರೆ ಗುಳ್ಳನಿಗೆ ಆಚರಣೆ ಮುಖ್ಯವಾಗಿ ಜಾತ್ರೆಯನ್ನು ಮಾಡಲೇಬೇಕು ಎಂಬ ವಾದವನ್ನು ಹಳ್ಳಿಯ ಜನರಿಗೆ ಹೇಳುತ್ತಾನೆ.

ಆದರೆ ಕತೆಯ ಕೊನೆಯಲ್ಲಿ ಜಾತ್ರೆ ನಡೆಯುವುದಿಲ್ಲ. ಅಲ್ಲಿ ಅಯ್ಯು ಮತ್ತು ಗುಳ್ಳನ ಮನಸ್ಥಿತಿ ಒಂದಾಗಿರುತ್ತವೆ. ಅಂದರೆ ಪರಂಪರೆಯನ್ನು ಉಳಿಸಿಕೊಳ್ಳಬೇಕು ಎಂಬ ಮಾತು ಎಷ್ಟು ಮುಖ್ಯವೋ! ಆಧುನಿಕತೆಯು ಬೇಕು ಎಂಬ ಮಾತು ಅಷ್ಟೇ ಸತ್ಯವಾಗಿದೆ.

ದೊಳ್ಳನ ಹರಕೆ ಕತೆಯಲ್ಲಿಯೂ ಕೂಡ ಮಾರಿಜಾತ್ರೆಯ ಉಲ್ಲೇಖ ಇದೆ. ಕೋಟೆಕೊರದ ದೊಳ್ಳ, ಕತ್ತರಿಗಟ್ಟದ ಜಾತ್ರೆ ದಿವಸ ನಂಟರು ಇಷ್ಟರೊಡನೆ ಸುಖವಾಗಿ ಹೇಮಾವತೀ ತೀರದ ತೋಪಿನ ಮಾವಿನ ಮರದ ಕೆಳಗೆ ಊಟ ಮಾಡಿ ಮಲಗಿಕೊಂಡಿರುತ್ತಾನೆ. ದೊಳ್ಳನ ನೆಂಟರೆಲ್ಲ ಹೆಂಡ ಕುಡಿದಿದ್ದರಿಂದ ನಿದ್ದೆಗೆ ಜಾರಿದರು. ಆದರೆ ದೊಳ್ಳನಿಗೆ ಮಾತ್ರ ನಿದ್ದೆ ಬರಲಿಲ್ಲ. ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ. ಯಾಕೆ ಎಂದು ಯೋಚನೆ ಮಾಡುವಾಗ ದೊಳ್ಳನು ಮನೆಯನ್ನು

ಕಟ್ಟುವಾಗ ಜೋಯಿಸರಿಂದ ಶಾಸ್ತ್ರವನ್ನು ಕೇಳಿ ಸರಿಯಾದ ಶಾಂತಿ ಇತ್ಯಾದಿಗಳನ್ನು ಮಾಡದೇ ಇರುವುದರಿಂದ ಜಡೆಮುನಿಯದೆವ್ವ ಅವನ ದೇಹವನ್ನು ಸೇರಿರುತ್ತದೆ. ಜಡೆಮುನಿಯ ಮಾರಮ್ಮನ ಸೇವಕನಾಗಿದ್ದರಿಂದ ಮಾರಿಯ ಜಾತ್ರೆಯನ್ನು ಮಾಡಿ, ಮಾರಮ್ಮನನ್ನು ಪೂರ್ಣವಾಗಿ ತೃಪ್ತಿಪಡಿಸಬೇಕೆಂದು ತೀರ್ಮಾನಿಸುತ್ತಾನೆ. "ನಮ್ಮ ಹಿರೀಕರಿಗೆ ಆದ್ದು ನಮಗೂವೆ, ಮನುಷ್ಯರಿಗೆ ಸಿಟ್ಟು ಬಂದರೆ ಚಿಂತೆಯಿಲ್ಲ, ಮಾರಿಗೆ ಸಿಟ್ಟು ಬಂದರೆ ಊರು ತೊಳೀತಾಳೆ, ಹೇಗಾದರೂ ಮಾಡಿ ಈ ಸಲ ಜಾತ್ರೆ ನಡೆಸಲೇಬೇಕು"೮ ಎಂದು ಅವನು ಹರಕೆ ಮಾಡಿಕೊಂಡನು.

ದೊಳ್ಳನು ಹರಕೆಯನ್ನು ನಡೆಸುವ ಸಲುವಾಗಿ ೧೫ ವರ್ಷಗಳಿಂದ ನಿಂತಿದ್ದ ಜಾತ್ರೆಯನ್ನು ಮಾಡಬೇಕು. ಜಾತ್ರೆಗೆ ತಗಲುವ ಖರ್ಚನ್ನು ನಾನೇ ಕೊಡುತ್ತೇನೆಂದು ಹೇಳಿ ಜನರನ್ನು ಹುರಿದುಂಬಿಸುತ್ತಾನೆ. ಆದರೆ ಬ್ರಾಹ್ಮಣರು ಮತ್ತು ಒಕ್ಕಲಿಗರಿಗೆ ಪದೇಪದೇ ಮನಸ್ತಾಪ ಇರುತ್ತದೆ. ಹಾಗಾಗಿ ಬ್ರಾಹ್ಮಣರು ಕೋಣಗಳನ್ನು ಆಂಜನೇಯನ ಎದುರಿಗೆ ಕಡಿಯಬಾರದು, ಮಾರಮ್ಮನ ಎದುರಿಗೆ ಬೇಕಾದದ್ದು ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದರೆ ಮಾರಿಗುಡಿಯ ಮುಂದೆ ಜಾಗ ಇಲ್ಲ. ಅದು ತಿರುಗಾಡುವ ರಸ್ತೆ, ಆಂಜನೇಯ ಮಾರಮ್ಮ ಎಲ್ಲಾ ಒಂದೇ ಎರಡೂ ದೇವರೇ ಎಂದು ದೊಳ್ಳನು ಹೇಳುತ್ತಾನೆ. ಬ್ರಾಹ್ಮಣರಿಗೆ ಎಲ್ಲಾ ಕಡೆಯು ದೇವಸ್ಥಾನಗಳಿದ್ದು, ಒಕ್ಕಲಿಗರಿಗೆ ಮಾರಿಯ ದೇವಸ್ಥಾನ ಇರಲೆಂದು ರಾತ್ರಿಯೇ ಒಕ್ಕಲಿಗರೆಲ್ಲಾ ಸೇರಿ ಕನ್ನಂಬಾಡಿಯ ಅಮ್ಮನನ್ನು ಇಟ್ಟು ಪ್ರತಿಷ್ಠಾಪಿಸಿ ಬಿಟ್ಟರು. ಮಾರಿ ಜಾತ್ರೆಗೆ ಎರಡು ತಿಂಗಳು ಮುಂಚೆ ಕೋಣಗಳನ್ನು ಬಲಿ ಕೊಡಲು ರಣರಂಗವನ್ನು ನೆಡುವ ಪದ್ಧತಿ. ಆ ಕಂಬವನ್ನು ನೆಡುವ ವಿಚಾರದಲ್ಲಿ ಮತ್ತೇ ಬ್ರಾಹ್ಮಣರಿಗೂ ಒಕ್ಕಲಿಗರಿಗೂ ಗಲಾಟೆಯಾಗುತ್ತದೆ. ಅನೇಕ ಗಂಟೆಗಳ ಚರ್ಚೆ ನಂತರ ಇದು ಹನುಮಂತರಾಯನ ಹಬ್ಬವಲ್ಲ, ಮಾರಿಯಮ್ಮನ ಹಬ್ಬ ಆದುದರಿಂದ ಮಾರಿಯಮ್ಮನ ಎದುರಿಗೆ ಕಂಬವನ್ನು ನೆಟ್ಟು ಅಲ್ಲಿಯೇ ಕೋಣಗಳನ್ನು ಕಡಿಯಬೇಕೆಂದು ತೀರ್ಮಾನಿಸುತ್ತಾರೆ. ಆದರೆ ಇದು ದೊಳ್ಳನಿಗೆ ಇಷ್ಟವಿಲ್ಲ. ಆಂಜನೇಯನ ಎದುರಿನ ವಿಶಾಲವಾದ ಬಯಲಿನಲ್ಲಿ ಕೋಣಗಳನ್ನು ಕಡಿಯಬೇಕೆಂದು ದೊಳ್ಳನ ಆಸೆ. ಹಾಗಾಗಿ ಮರಿಯಮ್ಮನ ಗುಡಿಯ ಮುಂದೆ ನೆಟ್ಟಿದ ಕಂಬವನ್ನು ಕಿತ್ತು, ಆಂಜನೇಯನ ದೇವಸ್ಥಾನದ ಮುಂದೆ ನೆಟ್ಟನು.

ಹೀಗೆ ಜಾತ್ರೆಗೆ ಸಿದ್ಧತೆ ನಡೆಯುವಾಗ ಆಂಜನೇಯನ ಗದ್ದದಲ್ಲಿ ಆರು ಕಾಸಿನಗಲದ ಚಕ್ಕೆಯು ಹಾರಿಹೋಗಿರುವುದು ಊರಿನವರಿಗೆಲ್ಲಾ ಗೊತ್ತಾಯಿತು. ಇದಕ್ಕೆ ದೊಳ್ಳನ್ನೆ ಕಾರಣ ಎಂದು ಅನೇಕರು ದೊಳ್ಳನನ್ನು ದ್ವೇಷಿಸಿದರು. "ಮಾರಿಯಮ್ಮನ ಮುಖದ ಮೇಲೆ ಅಂಟಿಸಿದ್ದ ಕಣ್ಣುಗಳೂ ಮೂಗೂ ಹಲ್ಲೂ ಇರಲಿಲ್ಲ. ಅರಸಿನ ಕುಂಕುಮ ಯಾವುದು ಇರಲಿಲ್ಲ. ಬರವಣಿಗೆಯೂ ಇರಲಿಲ್ಲ. ಆದರೆ ಅಲ್ಲಿ ನಿಂತಿದ್ದುದು ಮಾರಿಯಮ್ಮನ ಕಲ್ಲೇ ಎಂಬುದರಲ್ಲಿ ಯಾರಿಗೂ ಸಂದೇಹವಿರಲಿಲ್ಲ."೯ ಆಗ ಎಲ್ಲರೂ ಗಾಬರಿಯಾಗುತ್ತಾರೆ. ಮಾರಮ್ಮ ಮುಖ ತಿರುಗಿಸಿ ನಮ್ಮ ಕಡೆಗೆ ಬೆನ್ನು ಮಾಡವಳೆ, ಇದರಿಂದ ರೈತರಿಗೆಲ್ಲಾ ಅನಿಷ್ಟ ಎಂದು ಹೇಳುತ್ತಾರೆ.

ಕೊನೆಗೆ ಹನ್ನೆರಡು ಹಳ್ಳಿಯ ಜನ ಸೇರಿ ಪಂಚಾಯಿತಿ ಮಾಡಿ ಊರಿನ ಅನಿಷ್ಟವನ್ನು ದೂರ ಮಾಡಬೇಕೆಂದು ತೀರ್ಮಾನಿಸುತ್ತಾರೆ. ಇದಕ್ಕೆ ದೊಳ್ಳನೇ ಕಾರಣ ಎನ್ನುತ್ತಾರೆ. ಹಾಗಾಗಿ ದೊಳ್ಳನು ನೂರು ರೂಪಾಯಿ ದಂಡವನ್ನು ಕಟ್ಟಬೇಕು, ರಣಕಂಬವನ್ನು ಮಾರಿಯಮ್ಮನ ಗುಡಿಯ ಮುಂದೆ ನೆಡಬೇಕು. ಮಾರಮ್ಮ ಮತ್ತೆ ಮುಖವನ್ನು ಊರಕಡೆ ತಿರುಗಿಸಬೇಕೆಂದರೆ ಹತ್ತು ತೊಲ ಚಿನ್ನವನ್ನಾದರೂ ಮಾರಿಯಮ್ಮನಿಗೆ ಕೊಡಿಸಬೇಕು. ಜೊತೆಗೆ ದೊಳ್ಳನು ತಿರುಪತಿಗೆ ಯಾತ್ರೆ ಹೋಗಿ ತಲೆ ಬೋಳಿಸಿಕೊಂಡು ಕಪ್ಪಕಾಣಿಕೆ ಒಪ್ಪಿಸಿಬರಬೇಕೆಂದು ತೀರ್ಮಾನವಾಯಿತು.

ಇಲ್ಲಿ ನಮಗೆ ಮುಖ್ಯವಾಗಿ ಕಂಡು ಬರುವುದೇನೆಂದರೆ ಬ್ರಾಹ್ಮಣ ವರ್ಗವೇ ಶ್ರೇಷ್ಠ ಅವರು ಹೇಳಿದಂತೆ ಜನಸಾಮಾನ್ಯರು ಕೇಳಬೇಕು. ಬೇರೆ ದೇವರುಗಳನ್ನು ಬ್ರಾಹ್ಮಣರ ದೇವರುಗಳ ಜೊತೆಗೆ ಸೇರಿಸಬಾರದು.

ಬೂತಯ್ಯನ ಮಗ ಅಯ್ಯು, ದೊಳ್ಳನ ಹರಕೆ ಕತೆಗಳಲ್ಲಿ ಮಾರಿಹಬ್ಬದ ಆಚರಣೆ ಕುರಿತ ವಿವರಗಳಿದ್ದರೆ, ಗಂಡು ಬೀರಿ ಹೊಸಬಿ ಕತೆಯಲ್ಲಿ ಯುಗಾದಿ ಹಬ್ಬದ ಆಚರಣೆ ಇದೆ. ಈ ಹಬ್ಬದಲ್ಲಿ ಊರಿನ ಎಲ್ಲಾರಿಗೂ ಸಂಭ್ರಮ. ಪೂಜಾರಿ ಆಂಜನೇಯನನ್ನು ಚೆನ್ನಾಗಿ ಅಲಂಕರಿಸಿ, ಭಕ್ತಾದಿಗಳು ಬರುವುದನ್ನೇ ಎದುರು ನೋಡುತ್ತಿದ್ದನು. ಹಳ್ಳಿಯಲ್ಲಿರುವ ಹೆಣ್ಣು, ಗಂಡು ಮಕ್ಕಳೆಲ್ಲಾ ನದಿಯಲ್ಲಿ ಸ್ನಾನ ಮಾಡಿ, ಮಡಿ ಮಾಡಿದ ಬಟ್ಟೆಗಳನ್ನು ತೊಟ್ಟು, ಹಣೆಗೆ ನಾಮವನ್ನು, ಜುಟ್ಟಿಗೆ ದವನವನ್ನು ಸಿಕ್ಕಿಸಿಕೊಂಡು ಗುಡಿಗೆ ಹೋಗುವುದಕ್ಕೆ ಸಿದ್ದವಾಗಿ ನಿಂತಿದ್ದರು. ದೇವಸ್ಥಾನಕ್ಕೆ ಹೋಗಿ ಬಂದ ನಂತರ, ಮನೆಗೆ ಪೂಜಾರಿಯನ್ನು ಕರೆದುಕೊಂಡು ಬಂದು ಅವನಿಗೆ ಪಡಿಯನ್ನು ಕೊಡುವವರೆಗೂ ಯಾರೂ ನೀರನ್ನು ಸಹ ಬಾಯಿಗೆ ಹಾಕಿಕೊಳ್ಳುವಂತಿಲ್ಲ. ಹೀಗೆ ಗಂಡುಬೀರಿ ಹೊಸಬಿ ಕತೆಯಲ್ಲಿ ಯುಗಾದಿ ಹಬ್ಬವನ್ನು ಹಳ್ಳಿಯ ಜನರು ಹೇಗೆ ಆಚರಿಸುತ್ತಿದ್ದರು ಎಂಬುದನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಈ ಕತೆಯಲ್ಲಿ ಚಿತ್ರಿಸಿದ್ದಾರೆ.

ಈ ಕತೆಯಲ್ಲಿ ಬರುವ ಕಥಾನಾಯಕಿ ಹೊಸಬಿ "ಯುಗಾದಿ ಹಬ್ಬದ ದಿವಸ ಉಳಿದವರಿಗಿಂತ ಹೆಚ್ಚು ಮಡಿಯಾಗಿದ್ದಳು. ತನ್ನ ಪ್ರೀತಿಯ ಹಸುವಿನ ಮೈಯನ್ನು ತೊಳೆದು ಅದರ ಹಣೆಗೆ ಕುಂಕುಮವನ್ನಿಟ್ಟು ಕೋಡಿಗೆ ಚೆಂಡುಹೂವಿನ ದಂಡೆಯನ್ನು ಸುತ್ತಿ ಸಿಂಗರಿಸಿದಳು. ಕುಂಟನಾದ ಬೋರನಿಗೆ ಬಲತ್ಕಾರದಿಂದ ಬಿಸಿನೀರಿನಲ್ಲಿ ಸ್ನಾನ ಮಾಡಿಸಿದಳು. ದೋಸೆ, ಪಾಯಸ ಮುಂತಾದ ರುಚಿಯಾದ ಅಡಿಗೆಗಳನ್ನೆಲ್ಲಾ ಮಾಡಿಟ್ಟು ದೇವಸ್ಥಾನಕ್ಕೆ ತಳಿಗೆಯನ್ನು ತೆಗೆದುಕೊಂಡು ಹೋದಳು." ಇಡೀ ಹಳ್ಳಿಯಲ್ಲಿಯೇ ಒಕ್ಕಲಿಗರ ಪೈಕಿ ರುಚಿಯಾದ ಅಡುಗೆಯನ್ನು ಮಾಡುವವಳು ಹೊಸಬಿ ಎಂಬ ಮಾತು ಜನಪ್ರಿಯವಾಗಿದೆ. ದೇವಸ್ಥಾನದಿಂದ ಮನೆಗೆ ಬಂದ ಹೊಸಬಿ ತನ್ನ ತಂದೆ ಬೋರನು ಹೆಂಡವನ್ನು ಕುಡಿದಿದ್ದರಿಂದ ಬಹಳ ಕೋಪ ಬರುತ್ತದೆ. ಆಗ ತಂದೆಯನ್ನು ದನಗಳ ಕೊಠಡಿಯಲ್ಲಿಯೇ ಊಟವನ್ನು ಕೊಡದೇ ಬೀಗ ಹಾಕುತ್ತಾಳೆ. ಇದರಿಂದ ಬುದ್ಧಿಕಲಿತ ತಂದೆ ಹೆಂಡ ಕುಡಿಯುವುದನ್ನು ಬಿಡುತ್ತಾನೆ. ಅದರ ಬದಲಿಗೆ ಹುಳಿಮಜ್ಜಿಗೆಯನ್ನು ಕುಡಿಯಲು ಅಭ್ಯಾಸ ಮಾಡಿಕೊಂಡನು.

ಗೊರೂರರ ಕಥೆಗಳಲ್ಲಿನ ವಸ್ತು ಹಳ್ಳಿಯೇ ಅಗಿರುವುದುರಿಂದ ಅಲ್ಲಿ ಹಬ್ಬಗಳು, ಆಚರಣೆಗಳು ಕಂಡುಬರುವುದು ಸಾಮಾನ್ಯ. ಆದರೆ ಅವನ್ನೇ ಮುಖ್ಯ ನೆಲೆಗೆ ತಂದು ಅದಕ್ಕೆ ಪೂರಕವಾಗಿ ಸಮಾಜದ ಬೇರೆ ಬೇರೆ ಅಂಶಗಳನ್ನು ಸೇರಿಸುವುದು ಇದೆಯಲ್ಲ ಅದು ನಿಜಕ್ಕೂ ಗೊರೂರರ ಕಥೆಗಳ ಮಹತ್ವವನ್ನು ಹೆಚ್ಚಿಸಿದೆ.

೬.೨. ಹಳ್ಳಿ

ಗೊರೂರು ಹಳ್ಳಿಯನ್ನೇ ಮುಖ್ಯವಾಗಿಟ್ಟುಕೊಂಡು ಕೆಲವು ಕತೆಗಳನ್ನು ಬರೆಯುತ್ತಾರೆ. ಗಂಡು ಬೀರಿ ಹೊಸಬಿ ಕತೆಯು ಇಡೀ ಹಳ್ಳಿಯಲ್ಲೇ ಆರಂಭವಾಗಿ, ಹಳ್ಳಿಯಲ್ಲಿಯೇ ಮುಕ್ತಾಯವಾಗುತ್ತದೆ. ಹಳ್ಳಿಯಲ್ಲಿ ನಗರಕ್ಕಿಂತ ಕಡಿಮೆ ಜನಸಂಖ್ಯೆ ಇದ್ದು, ಅಕ್ಕಪಕ್ಕದವರ ಪರಿಚಯ, ಅವರು ಮಾಡುವ ಉದ್ಯೋಗ ಇತ್ಯಾದಿಗಳು ನಗರದಲ್ಲಿರುವವರಿಗಿಂತ ಹಳ್ಳಿಯವರಿಗೆ ಖಚಿತವಾಗಿ ವಿವರಗಳು ಗೊತ್ತಿರುತ್ತವೆ. ಈ ಕತೆಯ ನಾಯಕಿ ಹೊಸಬಿಯನ್ನು ಕಂಡು ಅಕ್ಕ ಪಕ್ಕದ ಹೆಣ್ಣುಗಳು ಈ ರೀತಿ ಮಾತಾಡಿಕೊಳ್ಳುತ್ತಾರೆ.

"ಬೋರಿ–ಏನ್ನಾಳಿ ನಿಂತ್ಕೊಂಬ್ಬಿಟ್ಟೆ ಕೆಲ್ಸ ಎಲ್ಲ ಆಯ್ತಾ?
ಕಾಳಿ–ಏನು ಕೆಲ್ಸನೋಮ್ಮ ಎಷ್ಟು ಮಾಡಿದ್ರು ಇದ್ದೆ ಆಯ್ತೆ.
ಬೋರಿ–ಒಬ್ಬೊಬ್ಬರ್ಗೆ ಕೆಲ್ಸ ಮಾಡೋಕೆ ಬೇಸರ್ಕೆನೆ ಇಲ್ಕಣೆ
ಆಗಸನ್ಗೆ ಕೂಡ ಕೊಡ್ದೆ ಗಂಡಸ್ರ ಅರ್ವೆನೆಲ್ಲ ತಾವೆ ಸೆಣಿತಾರೆ
ಕಾಳಿ ಅವರಿಗೇನವ್ವ ಹೊಲ ಆಯ್ತೆ? ಗದ್ದೆ ಆಯ್ದೆ? ಇರೋ ಅರ್ವೆ
ಸೆಣಕೊಳ್ದೆ ಬಿಟ್ರೆ ಉಂಡಿಟ್ಟು ಅರಗಬೇಕೆಲ್ಲವ್ವಾ?"[೧೧]

ಹಳ್ಳಿಯಲ್ಲಿರುವ ಜನರು ಹೇಗೆ ಶ್ರೀಮಂತಿಕೆಯನ್ನು ತೋರಿಸಿಕೊಳ್ಳುತ್ತಾರೆ ಎಂಬುದಕ್ಕೆ ಇದು ಉದಾಹರಣೆಗಾಗಿ ಬಳಸಿರಬಹುದು. ಈ ಮೇಲಿನ ಮಾತುಗಳು ಹೊಸಬಿಯನ್ನು ಕುರಿತು ಹೇಳಿದವುಗಳಾಗಿವೆ. ಏಕೆಂದರೆ ಹೊಸಬಿಗೆ ಗದ್ದೆಯಾಗಲಿ ಹೊಲವಾಗಲಿ ತೋಟವಾಗಲಿ ಯಾವ ಜಮೀನು ಇಲ್ಲದುದರಿಂದ ಅವರು ತನ್ನನ್ನು ಈ ರೀತಿ ಹಾಸ್ಯ ಮಾಡುತ್ತಿರುವರೆಂಬುದು ಹೊಸಬಿಗೂ ಗೊತ್ತಿತ್ತು. ಅವರ ಮಾತುಗಳು ಕೇಳಿ ಹೊಸಬಿಯು ಸಿಟ್ಟಾಗಿ ಮನೆಗೆ ಹೋಗುತ್ತಾಳೆ.

ಹೊಸಬಿಯನ್ನು ಕಂಡು ಇಡೀ ಹಳ್ಳಿಯೇ ಬೆರಗಾಗುತ್ತದೆ. ಸ್ವತಃ ತಾನೇ ಹಸುವನ್ನು ಜೋಡಿದಾರರಿಂದ ಪಡೆದು, ಅದನ್ನು ಮೇಯಿಸಲು ಸ್ವಲ್ಪ ಸ್ಥಳವನ್ನು ಕೊಡಬೇಕೆಂದು ಕೇಳುತ್ತಾಳೆ. ಜೊತೆಗೆ ಮನೆಯಲ್ಲಿದ್ದ ಬೆಳ್ಳಿಯ ಒಡವೆಗಳನ್ನು ಮಾರಿ, ಮರಿ ಕೋಳಿಗಳನ್ನು ಹೆಚ್ಚಾಗಿ ಕೊಂಡುಕೊಂಡು ಮೊಟ್ಟೆಯ ವ್ಯಾಪಾರವನ್ನು ಪ್ರಾರಂಭಿಸಿದಳು. ಬೋರನು ಎಡವಿ ಬಿದ್ದಾಗ ಅವನ ಮಕ್ಕಳು ತಿರುಪಕ್ಕೆ ಹೋಗುವರೆಂದು ತಿಳಿದಿದ್ದವರು ಹೊಸಬಿಯ ಈ ಹುರುಪನ್ನು, ಸ್ವಾತಂತ್ರ್ಯವನ್ನು ಕಂಡು ಬೆರಗಾಗುತ್ತಾರೆ. ಅಷ್ಟೇ ಅಲ್ಲ ತರಕಾರಿಗಳನ್ನು ಬೆಳೆಯುತ್ತಾಳೆ. ಹೀಗೆ ಒಂದಕ್ಕೊಂದು ಹೆಚ್ಚಾಗಿ ಅವರ ಸಂಸಾರ ಸುಖಕರವಾಗಿ, ಅಭಿವೃದ್ಧಿಯು ಹೆಚ್ಚಲು ಕಾರಣವಾಯಿತು.

ಹೀಗೆ ಗೊರೂರು ಹಳ್ಳಿಯನ್ನು ವಿವರಿಸುವಾಗ ಹೇಗೆ ಹಳ್ಳಿಯಲ್ಲಿ ಪ್ರತಿದಿನ ಜನ ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯೆಗಳನ್ನು ಅದರಲ್ಲೂ ಹೆಚ್ಚಾಗಿ ಹೆಣ್ಣು ಮಕ್ಕಳು ಅನುಭವಿಸುವ ಸಮಸ್ಯೆಗಳನ್ನು

ಹೆಚ್ಚಾಗಿ ಕಥೆಯ ವಸ್ತುವಾಗಿ ಬಳಸಿಕೊಂಡಿದ್ದಾರೆ. ಜೊತೆಗೆ ಹೆಣ್ಣು ಮತ್ತು ಗಂಡು ಹೇಗೆ ಆರಂಭದಲ್ಲಿ ಎದುರು ಬದುರಾಗಿ ಸೆಣೆಸಾಟ ಮಾಡಿ, ಕೊನೆಗೆ ಆ ಪಾತ್ರಗಳು ಆಪ್ತವಾಗಿ (ಮದುವೆಯಾಗುವ ಮೂಲಕ/ಗೆಳೆಯ/ತಿಯಾಗುವ ಮೂಲಕ) ಕತೆ ಮುಕ್ತಾಯವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಗಂಡು ಬೀರಿ ಹೊಸಬಿಯಲ್ಲಿ ಬರುವ ಕಾಳಿ, ಬೋರಿ ಒಂದು ಪಕ್ಷವಾದರೆ ಹೊಸಬಿ ಒಂದು ಪಕ್ಷವಾಗಿ ಆರಂಭದಿಂದಲೂ ಶತ್ರುಗಳಾಗಿ ಮುಂದುವರಿಯುತ್ತಾರೆ. ಆದರೆ ಕತೆಯ ಕೊನೆಯಲ್ಲಿ ಕಾಳಿಯ ನಾಲ್ಕು ವರ್ಷದ ಮಗುವನ್ನು ಹೊಸಬಿ ಗೂಳಿಯಿಂದ ರಕ್ಷಿಸುವ ಮೂಲಕ ಒಂದಾಗುತ್ತಾರೆ.

ಮಾದ ಆರಂಭದಲ್ಲಿ ಹೊಸಬಿಯನ್ನು ಕಂಡರೆ ಕೆಂಡಕಾರುತ್ತಾನೆ. ಏಕೆಂದರೆ ಇಷ್ಟು ದಿನ ತಾನೊಬ್ಬನೇ ಹಸುವನ್ನು ಮೇಯಿಸುತ್ತಿದ್ದನು. ಜೊತೆಗೆ ಒಂದು ಸುಂದರ ವಾದ ನಾಯಿಯನ್ನು ಸಾಕಿರುತ್ತಾನೆ. ಇವನಿಗೆ ಪ್ರತಿಯಾಗಿ ಹೊಸಬಿಯು ಒಂದು ಕುಂಟ ಹಸುವನ್ನು, ಬಡಕಲು ನಾಯಿಯನ್ನು ಸಾಕುತ್ತಾಳೆ. ಇದರಿಂದ ಇವರಿಬ್ಬರು ಕತೆಯ ಆರಂಭದಲ್ಲಿ ಶತ್ರುಗಳಾಗಿ ಕಂಡುಬರುತ್ತಾರೆ. ಆದರೆ ಕತೆಯ ಕೊನೆಗೆ ಹೊಸಬಿಯ ಶ್ರಮ, ಶ್ರದ್ಧೆ, ಅವಳು ಮಾಡುವ ಕೆಲಸ, ಕೈರುಚಿಯನ್ನು ನೋಡಿದ ಮಾದ ಹೊಸಬಿಯನ್ನು ಮದುವೆಯಾಗುವ ಮೂಲಕ ಗಂಡ ಹೆಂಡತಿಯಾಗುತ್ತಾರೆ. ಇಂತಹ ಅನೇಕ ಪಾತ್ರಗಳು ಗೊರೂರರ ಕತೆಗಳಲ್ಲಿ ಸಿಗುತ್ತವೆ.

'ಪುಟ್ಟಮಲ್ಲಿಗೆ' ಕತೆಯಲ್ಲಿಯೂ ಹಳ್ಳಿಗೆ ಸಂಬಂಧಿಸಿದ ಅನೇಕ ವಿಚಾರಗಳು ಅನಾವರಣಗೊಂಡಿವೆ. ಪ್ರಸ್ತುತ ಕತೆಯಲ್ಲಿ ಬರುವ ಕಥಾನಾಯಕಿ ಪುಟ್ಟಮಲ್ಲಿಗೆಯನ್ನೇ ಕೇಂದ್ರವನ್ನಾಗಿಸಿಕೊಂಡು ಕತೆಗಾರರು ಕತೆಯನ್ನು ಹೆಣೆದಿದ್ದಾರೆ. ಹಳ್ಳಿಯಲ್ಲಿರುವ ಕರಿಯ ಪುಟ್ಟಮಲ್ಲಿಗೆಯನ್ನು ಮದುವೆಯಾಗಬೇಕೆಂದು ತೀರ್ಮಾನಿಸುತ್ತಾನೆ. ಅವನಿಗೆ ಪುಟ್ಟಮಲ್ಲಿಗೆಯ ತಂದೆಯಷ್ಟೇ ವಯಸ್ಸಾಗಿರುತ್ತದೆ. ಕರಿಯ ಹಳ್ಳಿಯ ತಳವಾರನಾಗಿ ನೇಮಕವಾಗಿರುತ್ತಾನೆ. ಆದರೆ ಪೆರಿಯಾಪಟ್ಟಣದಿಂದ ಬಂದ ಬಸವಯ್ಯ ಪುಟ್ಟಮಲ್ಲಿಗೆಯನ್ನು ಮದುವೆಯಾಗುತ್ತಾನೆ. ಕರಿಯ ಪುಟ್ಟಮಲ್ಲಿಗೆಯನ್ನು ಮದುವೆಯಾಗಬೇಕೆಂದು ತೀರ್ಮಾನಿಸುತ್ತಾನೆ. ಕರಿಯ ಪುಟ್ಟಮಲ್ಲಿಗೆಯನ್ನು ಮದುವೆಯಾಗಲು ಅನೇಕ ತಂತ್ರಗಳನ್ನು ರೂಪಿಸುತ್ತಾನೆ. ಆ ತಂತ್ರಗಳಾವುವು ಅವನ ಕೈ ಹಿಡಿಯುವುದಿಲ್ಲ. ಮೊದಲನೆಯದಾಗಿ ತಳವಾರ ತನ್ನ ಕಾರ್ಯವನ್ನು ಸಾಧಿಸಲು ಪೂಜಾರಿಯನ್ನು ತಂತ್ರವನ್ನಾಗಿ ಮಾಡಿಕೊಳ್ಳುತ್ತಾನೆ. ಪುಟ್ಟಮಲ್ಲಿಗೆಗೆ ದೇವರ ಮೇಲೆ ಅಪಾರವಾದ ಭಕ್ತಿ ಇರುವುದರಿಂದ ಪೂಜಾರಿಯ ಮೂಲಕ ಪುಟ್ಟಮಲ್ಲಿಗೆಯ ಮನಸ್ಸನ್ನು ಒಪ್ಪಿಸಲು ಪ್ರಯತ್ನ ಮಾಡುತ್ತಾನೆ. "ಇಲ್ಲ, ಆಗೋಕಿಲ್ಲ. ಆ ಹುಡುಗಿ ಬಲು ಒಳ್ಳೇ ಹುಡುಗಿ ದೇವರಲ್ಲಿ ಅದ್ಕೆ ಭಾರಿ ಭಕ್ತಿ ಆಯ್ತೆ. ನನ್ಕಂಡ್ರೆ ದೇವರ್ಕ್ಕಂಡಂಗೆ ನಡ್ಕೊತಾಳೆ ನಾ ಒಲ್ಲೆ. ನೀನೇ ಅವಳಿಗೆ ಬೇಕಾದ ಸಕನ, ಸಾಲಾವಳಿ ಹೇಳು"[೧೨] ಎಂದು ಐನೂರು ತಳವಾರನ ಮಾತನ್ನು ಒಪ್ಪುವುದಿಲ್ಲ. ಆದರೂ ಕರಿಯ ಐನೂರನ್ನು ಎದುರಿಸುತ್ತಾನೆ. ಕೊನೆಗೆ ತಳವಾರನಂತೆ ಪುಟ್ಟಮಲ್ಲಿಗೆಗೆ ಸುಳ್ಳನ್ನು ಹೇಳುತ್ತಾನೆ. ನಾನು ದೇವರನ್ನ ಕೇಳ್ದೆ, ಸ್ವಾಮಿ ಇತರ ಹೇಳ್ದ, ಬೇಕಾದ್ರೆ ಅವನೇ

ಹೇಳ್ಳೋದನ್ನ ಕೇಳು, ಇಲ್ದಿದ್ರೆ ಬಿಡು ಎಂದು ಪುಟ್ಟಮಲ್ಲಿಗೆಗೆ ಭಯವನ್ನು ಹೇಳುತ್ತಾನೆ. ಇದನ್ನು ಕೇಳಿದ ಪುಟ್ಟಮಲ್ಲಿಗೆಯ ತಾಯಿ ಕೂಡ ಅವನನ್ನು ತಿರಸ್ಕರಿಸುತ್ತಾಳೆ. ಬಸವಯ್ಯ ಯಾರೋ ನಮಗೆ ಗೊತ್ತಿಲ್ಲ, ಅವನ ಕುಲ, ಮನೆ ಯಾವುದು ಗೊತ್ತಿಲ್ಲ, ಅವನ ಮನೆಯನ್ನು ನೋಡಿದವರು ಯಾರು? ಅಷ್ಟಕ್ಕೂ ಹೆಣ್ಣನ್ನು ಅಷ್ಟು ದೂರ ಕೊಟ್ಟು ಪಡುವ ಸುಖ ಏನು? ಎಂದು ಬಸವಯ್ಯನು ಬೇಡ ಮದುವೆನೂ ಬೇಡ ಎನ್ನುತ್ತಾಳೆ. ಈ ರೀತಿ ತಳವಾರ ಪುಟ್ಟಮಲ್ಲಿಗೆಯನ್ನು ಮದುವೆಯಾಗಲೂ ಐನೂರನ್ನು ಬಳಸಿಕೊಳ್ಳುತ್ತಾನೆ.

ಎರಡನೆಯದಾಗಿ ಕರಿಯ ಊರಿಗೆ ಬಂದಿದ್ದ ಬುಡಬುಡಕೆ ದಾಸಯ್ಯಗಳ ಗುಂಪಿನಲ್ಲಿ ಒಬ್ಬ ಮುದುಕಿ ಸಕನ ಹೇಳುತ್ತಿದ್ದಳು. ಇದನ್ನು ತಿಳಿದ ಹಳ್ಳಿಯವರೆಲ್ಲ ಆ ಮುದುಕಿಯ ಬಳಿ ಶಕುನ ಕೇಳುಸುತ್ತಿದ್ದರು. ಪೂಜಾರಿಯ ಮಾತನ್ನು ಕೇಳಿದ ಪುಟ್ಟಮಲ್ಲಿಗೆ ಭಯಭೀತಳಾಗಿದ್ದು, ಅವಳು ಮುದುಕಿಯ ಬಳಿ ಶಾಸ್ತ್ರ ಕೇಳಿಸುವಳು ಎಂದು ತಿಳಿದ ಕರಿಯ ಬುಡಬುಡಕೆ ಮುದುಕಿಯ ಹತ್ತಿರ ಹೋಗುತ್ತಾನೆ. ಶಕುನದ ಮುದುಕಿ ಸಂತೆಮಾಳದ ಆಲದ ಮರದ ನೆರಳಿನಲ್ಲಿ ಒಂದು ಕಡೆ ಗುಡಿಸಲನ್ನು ಹಾಕಿಕೊಂಡಿದ್ದಳು. ಗುಡಿಸಲಿನ ಮುಂದೆ ಜನ ಹೆಚ್ಚಾಗಿ ಸೇರಿತ್ತು. ಒಬ್ಬರಿಗಿಂತ ಒಬ್ಬರು ಒಳಕ್ಕೆ ಮುಂದೆ ನುಗ್ಗಲು ಉತ್ಸಾಹವುಳ್ಳವರಾಗಿದ್ದರು. ಅನೇಕರು ಶಕುನವನ್ನು ಕೇಳದೇ ಹೋಗಕೂಡದೆಂದು ಗುಡಿಸಲಿನ ಬಾಗಿಲನ್ನು ಕಾಯುತ್ತಾ ನಿಂತಿರುತ್ತಾನೆ. ಅಲ್ಲಿಗೆ ಕರಿಯನು ಬರುತ್ತಾನೆ. ಏನಾದರೂ ಮುದುಕಿಗೆ ಆಸೆ ತೋರಿಸಿ ತನ್ನಂತೆ ಪುಟ್ಟಮಲ್ಲಿಗೆಗೆ ಶಕುನ ಹೇಳುವಂತೆ ಮಾಡಬೇಕೆಂದು ಅಲ್ಲಿಗೆ ಬಂದಿರುತ್ತಾನೆ. ಅದರಂತೆ ಕರಿಯ ಮುದುಕಿಗೆ ಒಂದು ಬೆಳ್ಳಿಯ ರೂಪಾಯಿಯನ್ನು ಕೊಟ್ಟು ಮುದುಕಿಯನ್ನು ಒಪ್ಪಿಸುತ್ತಾನೆ. ಆದರೆ ಇದನ್ನು ಮರೆಯಲ್ಲಿ ನಿಂತು ಕೇಳಿಸಿಕೊಂಡ ಬಸವಯ್ಯ ಕರಿಯನಿಗೆ ಪ್ರತಿತಂತ್ರ ರೂಪಿಸುತ್ತಾನೆ. ಕೊನೆಗೆ ಬಸವಯ್ಯ ಮತ್ತು ಪುಟ್ಟಮಲ್ಲಿಗೆ ಮದುವೆಯಾಗುತ್ತದೆ.

ಹೀಗೆ ಈ ಕತೆಯಲ್ಲಿ ಒಂದು ಹೆಣ್ಣನ್ನು ಪಡೆಯಲು ಗಂಡು ಏನೆಲ್ಲಾ ಪ್ರಯತ್ನ ಪಡುತ್ತಾನೆ ಎಂಬುದನ್ನು ಕತೆಗಾರ ಚಿತ್ರಿಸಿದ್ದಾರೆ. ಇದು ನಡೆಯುವುದು ಹಳ್ಳಿಯಾಗಿರುವುದರಿಂದ ಇಲ್ಲಿ ನಡೆಯುವ ತಂತ್ರಗಳು, ಪ್ರತಿತಂತ್ರಗಳು ತುಂಬಾ ಯಶಸ್ವಿಯಗಿ ಮೂಡಿಬಂದಿವೆ.

ಬಸವಯ್ಯ ಆಧುನಿಕ ಮನೋಭಾವನೆಯನ್ನು ಹೊಂದಿದವನಾಗಿದ್ದು, ಪುಟ್ಟಮಲ್ಲಿಗೆ ಪರಂಪರೆಯ ಮನೋಭಾವವನ್ನು ಹೊಂದಿದವಳಾಗಿದ್ದಾಳೆ. ಈ ಹೆಣ್ಣು ಗಂಡಿನ ತಂದೆ-ತಾಯಿಗಳು ಇವರ ಮದುವೆಯನ್ನು ಆರಂಭದಲ್ಲಿ ಒಪ್ಪುವುದಿಲ್ಲ. ಕಾರಣ ಬಸವಯ್ಯನ ತಂದೆ "ನಿನ್ನ ವೇಗ್ಯತೆಗೆ ಗೊಬ್ಬರದ ಹೆಣ್ಣೇ ಸರಿ. ಪಟ್ಟಣದಿಂದ ಚೆಂದುಳ್ಳ ಹುಡುಗೀನ ತಂದು ಮದ್ವೆ ಮಾಡಬೇಕು ಅಂತ ಮಾಡಿದ್ದೆ. ನೀನು ಹಳಸಿದ ಹಿಟ್ಟ ಹುಡ್ಕೊ ನಾಯಿ ಹಂಗೆ ಎಲ್ಲೋ ಹೋಗಿ ಕುಲಗೋತ್ರ ಗೊತ್ತಿಲ್ದ ತಿರುಕರ ಹೆಣ್ಣು ತಂದೆ"[5] ಎಂದು ಹೇಳುತ್ತಾನೆ. ಬಸವಯ್ಯನ ತಂದೆ ತನ್ನ ಮಗನಿಗೆ ವಿದ್ಯಾವಂತಳಾದ ಪಟ್ಟಣದ ಒಕ್ಕಲಿಗರ ಹೆಣ್ಣನ್ನು ಮದುವೆ ಮಾಡಿ ತನ್ನ ಮನೆಯಲ್ಲಿ ನಾಗರಿಕತೆಯನ್ನು

ಬೆಳೆಸಬೇಕೆಂದುಕೊಂಡಿದ್ದನು. ಅಷ್ಟೇ ಅಲ್ಲ, ಒಕ್ಕಲಿಗರ ಸಂಬಂಧ ಬೆಳೆಸಬೇಕೆಂದು, ರಾವಬಹದೂರು, ಧರ್ಮ ಪರಾಯಣ ಇತ್ಯಾದಿ ಬಿರುದುಗಳನ್ನು ಪಡೆದು ಜನಪ್ರತಿನಿಧಿಯಾಗಬೇಕೆಂಬ ಆಸೆಯನ್ನು ಹೊಂದಿದ್ದನು. ಶ್ರೀಮಂತರ ಮನೆಯ ಹೆಣ್ಣನ್ನು ಅದರಲ್ಲೂ ದೊಡ್ಡ ಅಧಿಕಾರಿಯಾಗಿದ್ದವರ ಮಗಳನ್ನು ತನ್ನ ಮನೆಯ ಸೊಸೆಯಾಗಿ ತಂದುಕೊಳ್ಳಬೇಕೆಂದುಕೊಂಡಿದ್ದ. ಜೊತೆಗೆ ಮದುವೆಯಾಗುವ ಹುಡುಗಿಗೆ ಇಂಗ್ಲೀಷ್ ಭಾಷೆಯೂ ಬರಬೇಕು. ಅಂತಹ ಹುಡುಗಿಯನ್ನು ಬಸವಯ್ಯನ ತಂದೆ ತನ್ನ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದನು.

ಇದು ಹುಡುಗನ ತಂದೆಯ ವಿಚಾರವಾದರೆ ಇನ್ನು ಹುಡುಗಿಯಾದ ಪುಟ್ಟಮಲ್ಲಿಗೆಯ ತಾಯಿ ತನ್ನ ಮಗಳನ್ನು ಗೊತ್ತಿಲ್ಲದ ಬಸವಯ್ಯನಿಗೆ ಮದುವೆಮಾಡಿ ಕೊಡಲು ಇಷ್ಟವಿಲ್ಲ. ಅದು ಪೂಜಾರಿಯ ಬಾಯಿಂದ ಕೇಳಿದಾಗಲಂತೂ ಅವಳಿಗೆ ಅನೇಕ ಪ್ರಶ್ನೆಗಳು ಉದ್ಭವವಾಗುತ್ತವೆ. ಕೊನೆಗೆ ಅವೆಲ್ಲ ಸುಳ್ಳಾಗುತ್ತವೆ. ಆಗ ತನ್ನ ಮಗಳನ್ನು ಬಸವಯ್ಯನಿಗೆ ಮದುವೆ ಮಾಡಿಕೊಡುತ್ತಾಳೆ. ಇಲ್ಲಿ ನಗರ ಮತ್ತು ಹಳ್ಳಿಯ ಕುರಿತ ಹೋಲಿಕೆಗಳಿವೆ. ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿ ಇದೆ. ಬಸವಯ್ಯ ಮತ್ತು ಅವನ ತಂದೆಯಲ್ಲಿ ಆಧುನಿಕತೆಯ ಅಂಶಗಳು ಕಂಡುಬಂದರೆ, ಪುಟ್ಟಮಲ್ಲಿಗೆ ಮತ್ತು ಅವಳ ಹಳ್ಳಿಯಲ್ಲಿ ಪರಂಪರೆಯ ಬಹು ವಿವರಗಳ ಚರ್ಚೆ ಕಂಡು ಬರುತ್ತಿದೆ.

'ವೈಯ್ಯಾರಿ' ಕತೆ ಅನೇಕ ಕಾರಣಗಳಿಗಾಗಿ ಬಹುಮುಖ್ಯವಾದ ಕತೆಯಾಗಿ ಪ್ರಸಿದ್ದಿ ಪಡೆದಿದೆ. ವೈಯ್ಯಾರಿ ಕತೆಯೇ ಗೊರೂರು ಕಥಾ ಸಂಕಲನದ ಹೆಸರುಗಳಲ್ಲಿ ಒಂದಾಗಿದೆ. ಇಲ್ಲಿ ಬರುವ ವಿಧವೆಯ ಪಾತ್ರಕ್ಕೆ ಗೊರೂರರು 'ವೈಯ್ಯಾರಿ'ಎಂದು ಕರೆದಿರುವದು ಸ್ತ್ರೀಯರ ಮೇಲಿನ ಅಭಿಮಾನವನ್ನು, ಕಾಳಜಿಯನ್ನು ತೋರಿಸುತ್ತದೆ. ಈ ಕತೆಯಲ್ಲಿ ಬರುವ ಕಥಾನಾಯಕ ರಾಮಸ್ವಾಮಿ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಹೋಗಿರುತ್ತಾನೆ. ಒಂದು ದಿನ ಹಳ್ಳಿಗೆ ವಾಪಸ್ಸು ಬರುವಾಗ ಅನೇಕ ತಿಂಗಳುಗಳಿಂದ ಮೈಸೂರಿನಲ್ಲಿ ಪುಸ್ತಕಗಳ ಧೂಳನ್ನು ಕುಡಿದು, ಫೌಂಟೆನ್ ಪೆನ್ ಶಾಯಿಯನ್ನು ಹೀರಿ, ಹೂವು ಅರಳಿದರೂ ನೋಡದೆ, ಗಾಳಿ ಬೀಸಿದರೂ ತಿಳಿಯದೇ, ಮೋಡಗಳು ಅಂತರಿಕ್ಷದಲ್ಲಿ ಬಗೆಬಗೆಯ ಚಿತ್ರಗಳನ್ನು ಬರೆದರೂ ಕಾಣದೆ ಜೂಜಿನ ಕುದುರೆಯಂತೆ ಒಂದೇ ಸಮನೆ ಓದಿನ ಓಟವನ್ನು ನಡೆಸುತ್ತಿದ್ದ ಯುವಕನಿಗೆ ನಮ್ಮ ಹಳ್ಳಿಯ ಆ ಸಂಜೆ ಗಂಧರ್ವರ ಸೀಮೆಯಾಗಿ ಮಾಟದ ನಾಡಾಗಿ ಹೊಸದಾಗಿ ಹುಲುಸಾಗಿ ಕಂಡಿತು"[೧೪] ಎಂದು ಕತೆಗಾರ ಹಳ್ಳಿಯನ್ನು ವರ್ಣಿಸಿದ್ದಾನೆ. ಅಂದರೆ ನಗರಗಳಲ್ಲಿರುವ ಪರಿಸರದಿಂದ ಮನಸ್ಸಿಗೆ ನೆಮ್ಮದಿಯಾಗಲಿ, ಶಾಂತಿಯಾಗಲಿ ಸಿಗುವುದಿಲ್ಲ. ಕಾರಣ ಆಧುನಿಕತೆಯಿಂದ ಮೋಟಾರ್ ವಾಹನಗಳ ಸದ್ದು, ಅವುಗಳಿಂದ ಬಿಡುಗಡೆಯಾಗುವ ಕಾರ್ಬನ್ ಇವು ಆರೋಗ್ಯದ ದುಷ್ಪರಿಣಾಮ ಬೀರುತ್ತವೆ ಮತ್ತು ಶಿಕ್ಷಣದಿಂದ ನಾವು ಎಲ್ಲವನ್ನು ಪಡೆಯಲು ಸಾಧ್ಯವಿಲ್ಲ. ಅದು ಓಟದ ಕುದುರೆಯಂತೆ ಓಡುವುದೇ ಕೆಲಸವಾಗಿರುವಾಗ ಪರಿಸರವನ್ನು ನೋಡುವಷ್ಟು ಸಮಯವಾಗಲಿ, ಅದನ್ನು ಅನುಭವಿಸುವ ವ್ಯವಧಾನವಾಗಲಿ ಇರುವುದಿಲ್ಲ ಎಂಬುದು

ಈ ಮೇಲಿನ ಸಾಲುಗಳಿಂದ ತಿಳಿಯಬಹುದು. ಇಲ್ಲಿ ನಾವು ಗಮನಿಸಬಹುದಾದ ಇನ್ನೊಂದು ಅಂಶವೆಂದರೆ ಕತೆಗಾರರ ಮೇಲೆ ಹಳ್ಳಿಯ ಪ್ರಭಾವ, ನಗರಕ್ಕಿಂತ ಹಳ್ಳಿ ಹೇಗೆ ಭಿನ್ನ ಮತ್ತು ಶ್ರೇಷ್ಠ ಎನ್ನುವುದನ್ನು ಕತೆಗಾರರು ಈ ಕತೆಯಲ್ಲಿ ವಿಶ್ಲೇಷಿಸಿದ್ದಾರೆ.

ಲಲಿತ ಈ ಕಥೆಯ ಕಥಾನಾಯಕಿಯಾಗಿದ್ದು, ಬಾಲವಿಧವೆಯಾಗುತ್ತಾಳೆ. ಆದರೆ ಕತೆ ಅದನ್ನು ಎಲ್ಲಿಯೂ ಹೇಳುವುದಿಲ್ಲ. ಎಷ್ಟು ಸಾಧ್ಯನೋ ಅಷ್ಟು ಆ ಪಾತ್ರವನ್ನು ಕತೆಗಾರ ಮುನ್ನೆಲೆಗೆ ತಂದಿದ್ದಾನೆ. ಅವಳಿಗೆ ನಾನು ವಿಧವೆ ಎನ್ನುವ ಭಾವನೆ ಮನಸ್ಸಿನಲ್ಲಿದ್ದರೂ ಅದನ್ನು ಎಲ್ಲಿಯೂ ತೋರಿಸಿಕೊಳ್ಳುವುದಿಲ್ಲ. ವೈದಿಕರ ಜಾತಿಗೆ ಸೇರಿದ ವೈಯ್ಯಾರಿ ವಿಧವೆಯಾಗಿದ್ದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ತನ್ನ ತಂಗಿಯಂದಿರಿಗೆ ಮದುವೆ ಮಾಡಬೇಕೆಂದು ವೈಯ್ಯಾರಿಯ ತಂದೆ ಪ್ರಯತ್ನ ಪಟ್ಟರೂ, ಅದು ವೈಯ್ಯಾರಿಯ, ವೈಯ್ಯಾರದ ಮುಂದೆ ನಡೆಯುವುದಿಲ್ಲ. ಲಲಿತೆಗಿಂತ ತನ್ನ ತಂಗಿಯಂದಿರು ಸೌಂದರ್ಯದಲ್ಲಿ ಕಡಿಮೆ ಏನೂ ಇಲ್ಲ. ಆದರೆ ಹುಡುಗಿಯನ್ನು ನೋಡಲು ಬರುವ ಹುಡುಗರೆಲ್ಲಾ ಲಲಿತಾಳನ್ನು ನೋಡಿ ಹೋಗುತ್ತಾರೆ. ಅಷ್ಟೇ, ಅಲ್ಲಿಗೆ ಬಂದು ಹೋದ ಹುಡುಗರು ಮೌನವಾಗುತ್ತಾರೆ. ಇವನ್ನು ನೋಡಿದ ಹಳ್ಳಿಯ ಹೆಂಗಸರು ಹೇಳುವಂತೆ ಕತೆಗಾರ ಜನಪದ ದಾಟಿಯ ಸಾಲುಗಳನ್ನು ಉಲ್ಲೇಖಿಸುತ್ತಾನೆ.

"ಒನಕೆ ಒಳ್ಳೆದವ್ವ ಒಲಿದು ಕುಟ್ಟುವರಿಲ್ಲ
ಸೀರೆ ಒಳ್ಳೆದವ್ವ ಸೆರಗಿಲ್ಲ! ಹೆಣ್ಣಿನ
ಗುಣ ಒಳ್ಳೆದವ್ವ ಋಣವಿಲ್ಲ"[೧೫]

ಈ ಸಾಲುಗಳು ವೈಯ್ಯಾರಿಯ ಸೌಂದರ್ಯವನ್ನು, ಗುಣವನ್ನು ಗುರಿತ ಸಾಲುಗಳಾಗಿವೆ. ವೈಯ್ಯಾರಿಗೆ ಗಂಡನಿಲ್ಲ, ಅವಳೊಬ್ಬ ವಿಧವೆ ಎಂಬುದನ್ನು ಬಿಟ್ಟರೆ ಅವಳು ಯಾರಿಗೂ ಕಡಿಮೆ ಇಲ್ಲ. ಹಾಗಾಗಿ ಅವಳನ್ನು ಕಂಡು ಹಳ್ಳಿಯ ಹೆಂಗಸರು ಅವಳನ್ನು ನಿಂದಿಸುತ್ತಾರೆ. ಆದರೆ ಲಲಿತಾ ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ತನ್ನ ಕೆಲಸ ಮಾಡಿಕೊಂಡು ತನ್ನ ಪಾಡಿಗೆ ತಾನಿರುತ್ತಾಳೆ. ಕೊನೆಗೆ ಇದೆಲ್ಲವನ್ನು ಮೀರಿ ರಾಮಸ್ವಾಮಿ ವಿಧವೆಯಾಗಿದ್ದ ಲಲಿತಾಳನ್ನು ಮದುವೆಯಾಗುತ್ತಾನೆ. ರಾಮಸ್ವಾಮಿಯೂ ವೈದಿಕರ ಪರಂಪರೆಯಲ್ಲಿ ಬೆಳೆದಿದ್ದರೂ ಅದನ್ನು ಮೀರುವ ಪ್ರಯತ್ನ ಮಾಡುತ್ತಾನೆ. ಇಲ್ಲಿ ಗೊರೂರು ರಾಮಸ್ವಾಮಿಯವರು ಲಲಿತಾಳಿಗೆ ಮರು ವಿವಾಹವನ್ನು ಮಾಡಿಸುವ ಮೂಲಕ ಸ್ತ್ರೀಗೆ ಪ್ರಾತಿನಿಧ್ಯವನ್ನು ಕೊಡುತ್ತಾರೆ. ಅಂದರೆ ಪರಂಪರೆಯನ್ನು ಮುಖ್ಯವಾಗಿಟ್ಟುಕೊಂಡು ಕಥೆಗಳನ್ನು ಬರೆದರೂ, ಎಲ್ಲಿ ಜೀವನಕ್ಕೆ ಪರಂಪರೆಯಿಂದ ತೊಂದರೆಯಾಗುತ್ತದೋ ಅಲ್ಲಿ ಪರಂಪರೆಯನ್ನು ಮೀರಿ ಆಧುನಿಕತೆಗೆ ಒತ್ತು ಕೊಟ್ಟಿರುವುದನ್ನು ಕಾಣಬಹುದು. ಬದುಕಿಗೆ ಭಾವನೆಗಳೇ ಮುಖ್ಯವಾದಾಗ ಉಳಿದೆಲ್ಲವುಗಳು ಶೂನ್ಯವಾಗುತ್ತವೆ.

'ಅಮ್ಮನ ಬಸವ' ಕತೆಯಲ್ಲಿ ಬರುವ 'ಮರಿಬಸವ' ಕತೆಯ ಕೇಂದ್ರವಸ್ತು. ಇವನು ಒಂದು ಸಲ ಹಸುವನ್ನು ಕದ್ದು ಸಿಕ್ಕಿಬಿದ್ದಿದ್ದ. ಹಾಗಾಗಿ ಅವನಿಗೆ ಜೈಲು ಶಿಕ್ಷೆ ವಿಧಿಸಿದ್ದರು. ಅದನ್ನು

ಮುಗಿಸಿ ಜೈಲಿನಿಂದ ಬಿಡುಗಡೆಯಾಗಿದ್ದ. ಇವನು ಊರು ನಂಜನಗೂಡಾಗಿದ್ದು, ಬೆಂಗಳೂರಿನ ಜೈಲಿಗೆ ಹಾಕಿದ್ದರು. ಬಿಡುಗಡೆಯಾದ ನಂತರ ಆಯಾಸವಾಡೆ ಗ್ರಾಮದ ಪಟೇಲ್ ಶಿವಪ್ಪನ ಪರಿಚಯವಾಗಿ ಅದೇ ಹಳ್ಳಿಯಲ್ಲಿ ದನಕರುಗಳನ್ನು ಕಾಯಲು ಸೇರಿಕೊಂಡನು. ಅಲ್ಲಿಂದ ಮರಿಬಸವನ ಹೆಸರು 'ತಮ್ಮಡಿ ಅಯ್ಯನೆಂದೇ' ಪ್ರಸಿದ್ಧಿಯಾಯಿತು. ಹಳ್ಳಿಯ ಜನರಲ್ಲಿ ಮೂಢ ನಂಬಿಕೆ ಬರಲು ತಮಡಿ ಅಯ್ಯನೇ ಮುಖ್ಯವಾದನು. ಇದ್ದಕ್ಕಿದ್ದಂತೆ ಇವನ ಹೆಸರು ದಿನದಿಂದ ದಿನಕ್ಕೆ ಹೆಚ್ಚು ಜನಪ್ರಿಯವಾಯಿತು. ದನ ಕಳೆದುಹೋದಾಗ, ಹಸುಗೆ ಕಾಯಿಲೆಯಾದಾಗ ಇವನು ಹೇಳಿದಂತೆ ನಡೆಯಿತು. ಇವನು ಹೇಳಿದ ಮಾತಿನಂತೆ ಎಲ್ಲಾನು ನಡೆಯುತ್ತಿದ್ದರಿಂದ ಜನರು ಇವನಲ್ಲಿಗೆ ಬಂದು ಹೋಗುವುದು ದಿನ ದಿನಕ್ಕೆ ಹೆಚ್ಚಾಗತೊಡಗಿತು. ದನಗಳನ್ನು ಕದಿಯುವುದೇ ಉದ್ಯೋಗವಾಗಿದ್ದ ಅಯ್ಯನಿಗೆ, ಅವುಗಳ ಕಾಯಿಲೆಗಳ ಬಗ್ಗೆ ಕಿಂಚಿತ್ತು ಗೊತ್ತಿರಲಿಲ್ಲ. ವಿಭೂತಿಯನ್ನು ಮಜ್ಜಿಗೆಯಲ್ಲಿ ಮಂತ್ರಿಸಿಕೊಡುತ್ತಿದ್ದನು. ಅದನ್ನು ದನಗಳಿಗೆ ಕುಡಿಸಿದ್ದರಿಂದ ಬಂದ ಕಾಯಿಲೆ ವಾಸಿಯಾಗುತ್ತಿತ್ತು. ಅಲ್ಲಿಂದ ಮುಂದೆ ಹಾವಿನ ವಿಷದಂತೆ ಅಯ್ಯನ ಹೆಸರು ಏರತೊಡಗಿತು. “ದನಗಳಿಗೆ ರೋಗಬರಲಿ, ಒದೆಯಲಿ, ಹಾಲು ಕೊಡದಿರಲು, ಪೋಲಿಹೋಗಲಿ, ಯಾವುದಕ್ಕೂ ತಮ್ಮಡಿ ಅಯ್ಯನದೇ ಸಂಜೀವಿನಿ, ಮಕ್ಕಳಿಗೆ ಕೆಮ್ಮು, ಜ್ವರ, ಬಾಲಗ್ರಹ, ಕೊನೆಗೆ ಹೆಚ್ಚು ಅಳು ಚಂಡಿ ಮೊಂಡಾಟ ಯಾವುದಕ್ಕೂ ತಮಡಿ ಅಯ್ಯನ ವಿಭೂತಿ ಚಿಟಿಕೆಗಳೇ ಔಷಧಿ. ಕೊನೆ ಕೊನೆಗೆ ಜನ ಅವನನ್ನು ಎಲ್ಲಾ ವಿಷಯಗಳಲ್ಲಿಯೂ ಸಲಹೆ ಕೇಳತೊಡಗಿದರು. ಬಾಣಂತಿಯ ಕಾಯಿಲೆಗೆ, ಬಸರಾಗುವುದಕ್ಕೆ, ಗಂಡು ಮಕ್ಕಳಾಗುವುದಕ್ಕೆ, ಹೆಣ್ಣು ಗಂಡುಗಳ ಜಾತಕ ಕೂಡುವುದಕ್ಕೆ, ಶಕುನ ಸಾಲಾವಳಿಗೆ, ಮಳೆ ಜ್ಯೋತಿಷ್ಯಕ್ಕೆ ಎಲ್ಲಕ್ಕೂ ತಮಡಿ ಅಯ್ಯನೇ ಗುರುವಾದನು.”[೧೬] ಆದ್ದರಿಂದ ಇವನಲ್ಲಿ ಜನರಿಗೆ ತುಂಬಾ ನಂಬಿಕೆ ಮತ್ತು ಗೌರವ ಹೆಚ್ಚಾಯಿತು. ಪ್ರತಿಯೊಂದು ರೋಗಕ್ಕೆ, ಸಮಸ್ಯೆಗೆ ಅಯ್ಯನೇ ಪರಿಹಾರ ಕೊಡಬೇಕು ಎನ್ನುವಷ್ಟರ ಮಟ್ಟಿಗೆ ಜನರ ಮೇಲೆ ಪ್ರಭಾವ ಬೀರಿದನು. ಹಾಗಿಂದ ಮರಿಬಸವನ ಹೆಸರು 'ಅಮ್ಮನ ಬಸವ' ಎಂದು ಬದಲಾಯಿತು.

ಜನರ ಅಜ್ಞಾನವನ್ನು ಅರಿತ ಅಮ್ಮನ ಬಸವ ಜನರ ಮೇಲೆ ತನ್ನ ಶಕ್ತಿಯನ್ನು ಪ್ರದರ್ಶಿಸಲು ಆರಂಭಿಸುತ್ತಾನೆ. ಮೊದಲನೆಯದಾಗಿ ಹಳ್ಳಿಯಲ್ಲಿ ಈಶ್ವರ ದೇವಾಲಯದ ಮುಂದೆ ಒಂದು ಬಸವನ ವಿಗ್ರಹವಿತ್ತು. ಇದ್ದಕ್ಕಿದಂತೆ ಅದರ ಮುಂದೆ ಕುಳಿತು ಅಳುವುದಕ್ಕೆ ಆರಂಭಿಸುತ್ತಾನೆ. ಇದನ್ನು ತಿಳಿದ ಜನ ಅಲ್ಲಿಗೆ ಬಂದು ಮಾತಾಡಿಸಿದರೆ, ಯಾರ ಜೊತೆಗೂ ಮಾತಾಡದೇ ಮೌನಿಯಾಗಿರುತ್ತಾನೆ. ಇದು ಹಳ್ಳಿಯ ಜನರ ಆತಂಕಕ್ಕೆ ಕಾರಣವಾಗುತ್ತದೆ. ಊರಿಗೆ ಏನೋ ಅಪಾಯ ಬಂದಿದೆ ಎಂದು ಪ್ರತಿಯೊಂದು ಮನೆಯಿಂದ ತೆಂಗಿನಕಾಯಿ. ಸಿಗರೇಟ್ ಪ್ಯಾಕ್ ತಂದು ಇಡಿಗಾಯಿ ಅವನ ಮುಂದೆ ಹಾಕಿ ಆರತಿ ಎತ್ತಿದರು. ಅಯ್ಯನಿಗೆ ಸಿಗರೇಟ್ ಅಂದರೆ ಪಂಚಪ್ರಾಣ ಎಂದು ಜನ ತಿಳಿದಿದ್ದರಿಂದ ಯಾರೇ ಶಾಸ್ತ್ರ ಕೇಳಲು ಬಂದಾಗ ತಪ್ಪದೇ ಸಿಗರೆಟ್ ಪ್ಯಾಕ್ ತೆಗೆದುಕೊಂಡು ಬರುವುದು ಅಭ್ಯಾಸವಾಗಿರುತ್ತದೆ. ಜನ ಏನೇ ಮಾಡಿದರೂ ಅವನ

ಕಣ್ಣಿನಲ್ಲಿ ಬರುವ ನೀರು ನಿಲ್ಲಲೇ ಇಲ್ಲ. ಕೊನೆಗೆ ಊರಿನ ಪಟೇಲ ಶಿವಪ್ಪನವರು ಬರುತ್ತಾರೆ. ಆಗ ಊರ ಜನರೆಲ್ಲ ಸೇರಿ ಅಯ್ಯನನ್ನು ಕೇಳಿದಾಗ ಬಹಳ ಕಷ್ಟದಿಂದ ಬಸವಣ್ಣನ ವಿಗ್ರಹದ ಕಡೆ ಕೈ ತೋರಿಸಿ ವಿಗ್ರಹ ಸ್ವಲ್ಪ ಎಡಕ್ಕೆ ತಿರುಗಿದೆ ಎಂದು ಸುಳ್ಳನ್ನು, ಹೇಳಿ ಅದು ಜನ ನಂಬುವಂತೆ ಮಾಡುತ್ತಾನೆ. ನಾಳೆ ಬಂದು ನೋಡಿ ಮತ್ತೇ ಸ್ವಲ್ಪ ಎಡಕ್ಕೆ ತಿರುಗಿರುತ್ತದೆ ಎಂದು ಸುಳ್ಳು ಸುಳ್ಳನೇ ಹೇಳಿ ಜನರು ನಂಬುವಂತೆ ಮಾಡುವುದು, ಜೊತೆಗೆ ಜನರಿಗೆ ಅದು ಕಾಣಿಸುವುದಿಲ್ಲ; ಒಂದು ವೇಳೆ ಅದು ಕಂಡರೆ ನಿಮ್ಮ ಕಣ್ಣು ಪೋಟೆ ಬೀಳುವವರೆಗೆ ಅಳುತ್ತಿದ್ದಿರೆಂದು ಹೇಳುತ್ತಾನೆ. ಈ ರೀತಿಯಾಗಿ ಜನರನ್ನು ಸಂಪೂರ್ಣವಾಗಿ ನಂಬಿಸಿದ್ದನು. ತಾನು ಹೇಳಿದ್ದೇ ನಿಜ ಅನ್ನುವಷ್ಟರ ಮಟ್ಟಿಗೆ ಜನರನ್ನು ಮರಳು ಮಾಡುತ್ತಾನೆ.

ಜನರ ನೆಮ್ಮದಿಯನ್ನು ಕೆಡಿಸಿದ ಅಯ್ಯ, ಜನರಲ್ಲಿ ಭಯದ ವಾತಾವರಣ ನಿರ್ಮಾಣಮಾಡಿದನು. ಬಸವಣ್ಣನ ವಿಗ್ರಹವನ್ನು ನೋಡಿದ ಪ್ರತಿಯೊಬ್ಬರಿಗೂ ಎಡಗಡೆಗೆ ತಿರುಗಿದಂತೆ ತೋರಿತು. ಆದರೆ ಪಟೇಲ್‌ರಿಗೆ ಮಾತ್ರ ಮೊದಲಿದ್ದಂತೆ ತೋರಿತು. ಎಲ್ಲರೂ ಖಾತರಿಯಾಗಿ ಬಸವ ಎಡಕ್ಕೆ ತಿರುಗಿರುವುದು ನಿಜ ಎಂದಾಗ ಪಟೇಲ ಅದನ್ನು ಒಪ್ಪಿಕೊಳ್ಳಬೇಕಾಯಿತು. ಕೊನೆಗೆ ಭಯ ಭೀತರಾದ ಜನ ಅಯ್ಯನಿಗೆ ಅಡ್ಡಬಿದ್ದು ಪದೇ ಪದೇ ಕೇಳಿದಾಗ "ಈ ಬಸವ ಎಡಕ್ಕೆ ತಿರುಗುತ್ತಿರುವುದನ್ನು ತಪ್ಪಿಸದಿದ್ದರೆ, ಇವತ್ತಿಗೆ ಮೂರು ತಿಂಗಳಿಗೆ, ಇದು ಪೂರ್ತ ಎಡಕ್ಕೆ ಮುಖವಾಗುವುದು. ನಂದೀಶ್ವರನಿಗೆ ನಮ್ಮ ಮೇಲೆ ಕೋಪ ಬಂದಿದೆ. ಆಗ ಏನಾಗುವುದು ಗೊತ್ತೆ? ಶಿವ ಶಿವ ನೆನಸಿಕೊಂಡರೆ ಎದೆ ನಡುಗುವುದಲ್ಲ? ಊರು ನಿರ್ನಾಮವಾಗುವುದು ಒಂದು ಮನೆಯ ಜನವೂ, ದನವೂ ಇರುವುದಿಲ್ಲ ಈ ಊರಿನ ಬಾಳು ಇನ್ನು ಮುಗಿಯಿತು"[೧೭] ಎಂಬ ಮಾತುಗಳನ್ನು ಹೇಳುವ ಮೂಲಕ ಜನರನ್ನು ಮತ್ತಷ್ಟು ಭಯದಲ್ಲಿಡುತ್ತಾನೆ. ಜನರೆಲ್ಲಾ ಇದನ್ನು ಒಪ್ಪಿಕೊಂಡು ಅಯ್ಯನ ಮಾತಿನಂತೆ ಕೇಳುತ್ತಾರೆ. ಇದೆಲ್ಲಾ ಸರಿಯಾದ ಮೇಲೆ ಊರಿನಲ್ಲಿ ಜಾತ್ರೆ ಮಾಡಬೇಕೆಂದು ಜನರಿಗೆ ಹೇಳುತ್ತಾನೆ. ಹೂವು, ಅಭಿಷೇಕ, ರಾಶಿಗಟ್ಟಲೇ ಹಣ್ಣುಗಳು, ಕರ್ಪೂರ, ಊದುಕಡ್ಡಿ ಇತ್ಯಾದಿಗಳಿಂದ ಹಳ್ಳಿಯಲ್ಲಿರುವ ಈಶ್ವರ ದೇವಾಲಯದಲ್ಲಿ ಒಳ್ಳೆಯ ಸೇವೆ ಏರ್ಪಟ್ಟಿರುತ್ತದೆ. ಈಶ್ವರನ ವಾಹನವಾದ ಎತ್ತುಗಳನ್ನು ಸಿಂಗಾರಮಾಡಿಕೊಂಡು ಎಲ್ಲಾ ಜೋಡಿಗಳನ್ನು ತಂದು ದೇವರ ಮುಂದೆ ಕಟ್ಟಿ ಹಾಕಿರುತ್ತಾರೆ. ಅವುಗಳನ್ನು ಅವರ ಮಾಲೀಕರು ತುಂಬಾ ಕಷ್ಟಪಟ್ಟು ಇಷ್ಟದಿಂದ ದಷ್ಟಪುಷ್ಟವಾಗಿ ಬೆಳೆಸಿರುತ್ತಾರೆ. ಊರಿನ ಗಂಡು ಹೆಣ್ಣುಗಳೆಲ್ಲ ದೇವಾಲಯದ ಮುಂದಿನ ವಿಶಾಲವಾದ ಬಯಲಿನಲ್ಲಿ ಸೇರಿರುತ್ತಾರೆ. ಆ ದಿನ ರಾತ್ರಿ ಹನ್ನೆರಡು ಗಂಟೆಗೆ ಪೂಜೆ ಮುಗಿದು ಅಲ್ಲಿ ಸೇರಿದ್ದವರಿಗೆಲ್ಲ ತೀರ್ಥ, ಪ್ರಸಾದ ವಿನಿಯೋಗವಾಯಿತು. ಬೆಳಗ್ಗೆಯಿಂದ ದಣಿದಿದ್ದ ಜನರು ನೆಲಸಿಕ್ಕೊಡನೆಯೇ ಮಲಗಿಬಿಟ್ಟರು. ಬೆಳಗಾಗುವ ತನಕ ಅವರಾರಿಗೂ ಎಚ್ಚರವಾಗಲಿಲ್ಲ. ಬೆಳಿಗ್ಗೆ ಎದ್ದು ನೋಡಿದಾಗ ಉತ್ತಮವಾದ ಆರು ಜೊತೆ ಎತ್ತುಗಳು ಎಲ್ಲಿಯೂ ಕಾಣಲಿಲ್ಲ. ಅವುಗಳನ್ನು ಕದ್ದುಕೊಂಡು ಹೋಗಿದ್ದ ಅಮ್ಮನ ಬಸವ ಹೀಗೆ ದನಗಳನ್ನು ಕದ್ದ. ಅಮ್ಮನ ಬಸವನಿಗೆ ಜೈಲು

ಶಿಕ್ಷೆಯಾಗಿ, ಬಿಡುಗಡೆಯಾದ ದಿನದಿಂದ, ಅವನು ಹೇಗೆ ಚಾಣಾಕ್ಷನಾಗಿದ್ದನು ಎಂಬುದನ್ನು ಅಮ್ಮನ ಬಸವ ಕತೆ ವಿವರಿಸುತ್ತದೆ.

'ಉತ್ತರಾಧಿಕಾರಿ' ಕತೆಯಲ್ಲಿ ಹಳ್ಳಿಗೆ ಸಂಬಂಧಿಸಿದಂತೆ ಅನೇಕ ಅಂಶಗಳು ಕಂಡುಬರುತ್ತವೆ. ಸದಾಶಿವ ನಿವೃತ್ತಿಹೊಂದಿದ ಮೇಲೆ ಹಳ್ಳಿಗೆ ಬಂದು ವಾಸಿಸುತ್ತಾನೆ. ನಗರಕ್ಕಿಂತ ಹಳ್ಳಿಯಲ್ಲಿ ತುಂಬಾ ಕಡಿಮೆ ಬೆಲೆಗೆ ದಿನಬಳಕೆಯ ವಸ್ತುಗಳು ಸಿಗುತ್ತವೆ. ಖರ್ಚು ಕಡಿಮೆ. ಅವನ ಹೆಂಡತಿ ಶಾರ್ವರಿಯೂ ಎಂದು ಪಟ್ಟಣಕ್ಕೆ ಹೋಗಬೇಕೆಂದು ಆಸೆ ಪಡುವುದಿಲ್ಲ. ಪ್ರಕೃತಿಯಲ್ಲಿ ಜೀವನದ ಹತ್ತು ವರ್ಷಗಳನ್ನು ಹತ್ತು ದಿನಗಳಂತೆ ಕಳೆದು ಬಿಟ್ಟರು. ಅವರಿಬ್ಬರಲ್ಲೂ ಯಾವುದೇ ಅನುಮಾನ, ಸಂಶಯಗಳಿಗೆ ಅವಕಾಶಕೊಡದೇ ತುಂಬಾ ಅನೋನ್ಯವಾಗಿ ಬದುಕಿದರು. ಹೀಗೆ ಹತ್ತು ವರ್ಷಗಳು ಕಳೆದು, ನಂತರ ಶಾರ್ವರಿ ಗರ್ಭಿಣಿಯಾಗಿ ಒಂದು ಗಂಡು ಶಿಶುವನ್ನು ಹಡೆದು ಇಹಲೋಕ ಯಾತ್ರೆ ಮುಗಿಸಿದರು. ಆ ಶಿಶುವೇ ವಿಶ್ವೇಶ್ವರ.

ತನ್ನ ಹೆಂಡತಿ ಸತ್ತಾಗ ಸದಾಶಿವ, ಹೆಂಡತಿಯ ಶವವನ್ನು "ದಹನ ಸಂಸ್ಕಾರ ನಡೆದುದು ಆ ಊರಿನ ನಾಲೆಯ ಕೆಳಗಿನ ತೋಟದಲ್ಲಿ. ಆ ತೋಟದ ಬಾವಿಯ ಹತ್ತಿರ ಸ್ನಾನ ಮತ್ತು ಕರ್ಮಗಳಿಗೆ ನೀರು ಸುಲಭವಾಗಿ ಸಿಕ್ಕುತ್ತಿದ್ದುದರಿಂದ ಅಲ್ಲಿಯೇ ಊರಿನವರು ಶಾರ್ವರಿಯ ಅಗ್ನಿ ಸಂಸ್ಕಾರಕ್ಕೆ ಏರ್ಪಡಿಸಿದ್ದರು."[೧೮] ಹಾಗಾಗಿ ಹಳ್ಳಿಯನ್ನು ಸದಾಶಿವ ಬಿಡುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಕತೆಗಾರ ಹಳ್ಳಿಯ ಬಗ್ಗೆ ಇರುವ ಗೌರವವನ್ನು ಮತ್ತು ಹಳ್ಳಿಯ ಶ್ರೇಷ್ಠತೆ, ಉಪಯೋಗಗಳನ್ನು ಕುರಿತು ಕತೆ ಹೆಣೆದಿದ್ದಾರೆ.

೬.೩. ವೈಚಾರಿಕತೆ

ಗೊರೂರರ ಕಥೆಗಳ ವಸ್ತು ಮುಖ್ಯವಾಗಿ ಹಳ್ಳಿಯೇ ಆಗಿರುತ್ತದೆ. ಹಳ್ಳಿಯಲ್ಲಿ ಅನೇಕ ಸಮಸ್ಯೆಗಳಿದ್ದು. ಅವುಗಳನ್ನು ಅರ್ಥೈಸಲು 'ಸಮಸ್ಯೆಗಳೇ ಕೆಲವು ಕತೆಗಳಲ್ಲಿ ಮುಖ್ಯವಾಗಿವೆ. ಅಂತಹ ಕಥೆಗಳಲ್ಲಿ "ಗಂಡು ಬೀರಿ ಹೊಸಬಿ" ಕತೆಯೂ ಒಂದು. ಇಲ್ಲಿ ಬರುವ ಕಥೆಯ ನಾಯಕಿ ಹೊಸಬಿ ತನ್ನ ತಂದೆಯ ಕಷ್ಟವನ್ನು ನೋಡಿ ಅದನ್ನು ಬಗೆಹರಿಸಲು ತಾನೇ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ನಿಬಾಯಿಸುತ್ತಾಳೆ. ಕತೆಯ ಆರಂಭದಲ್ಲಿ ಹೊಸಬಿಯ ತಂದೆ ಬೋರನು ತನ್ನ ಮಗಳನ್ನು ಊರಿನ ಶ್ಯಾನುಭೋಗರ ಮನೆಯಲ್ಲಿ ಜೀತಕ್ಕೆ ಹಾಕಬೇಕೆಂದು ಯೋಚಿಸುತ್ತಾನೆ. ಆದರೆ ಹೊಸಬಿ ತಂದೆಯ ಮಾತನ್ನು ಮೀರಿ ಜೋಡಿದಾರರ ಬಳಿ ಹೋಗಿ ಒಂದು ಕುಂಟ ಹಸುವನ್ನು ಮತ್ತು ಅದನ್ನು ಮೇಯಿಸಲು ತಮ್ಮ ಸ್ವಂತ ಹುಲ್ಲುಗಾವಲಿನಲ್ಲಿ ಸ್ಥಳವನ್ನು ಕೊಡಬೇಕೆಂದು ಕೇಳಿಕೊಂಡಳು. ಜೋಡಿದಾರರಿಗೆ ಆ ಹುಡುಗಿಯ ಮಾತನ್ನು ಕೇಳಿ ಆಶ್ಚರ್ಯವೂ ಕುತೂಹಲವೂ ಉಂಟಾಯಿತು.

ಹೀಗೆ ಒಂದು ಹಸುವನ್ನು ಪಡೆದ ಹೊಸಬಿಯ ಮನೆಯಲ್ಲಿ ಹಾಲು. ಮೊಸರು ಸಮೃದ್ಧಿಯಾಯಿತು. ಕೆಲವು ಕೋಳಿಗಳನ್ನು ಸಾಕುತ್ತಿದ್ದಳು. ಮೊಟ್ಟೆಯ ವ್ಯಾಪಾರವನ್ನು ಪ್ರಾರಂಭಿಸಿದಳು.

ಇದರಿಂದ ಅವಳ ಸಂಪಾದನೆಯು ವೃದ್ಧಿಯಾಯಿತು. ಜೊತೆಗೆ ತರಕಾರಿಯನ್ನು ಬೆಳೆಯುವುದರಲ್ಲಿ ಪ್ರಚಂಡಳೆನಿಸಿಕೊಂಡಳು. ಅಂದರೆ ಹೆಣ್ಣು ಏನನ್ನೂ ಮಾಡಲು ಆಗುವುದಿಲ್ಲ ಎಂದು ಹೇಳುತ್ತಿದ್ದ ಜನರಿಗೆ ಹೊಸಬಿ ತನ್ನ ಕೆಲಸದ ಮೂಲಕ ಉತ್ತರ ಕೊಡುತ್ತಾಳೆ. ಬೋರನ ಮಕ್ಕಳು ತಿರುಪಕ್ಕೆ ಹೋಗುವರೆಂದು ತಿಳಿದಿದ್ದವರು ಹೊಸಬಿಯ ಈ ಹುರುಪನ್ನು, ಸ್ವಾತಂತ್ರ್ಯವನ್ನು ಕಂಡು ಬೆರಗಾದರೂ. ಮಾದನೊಬ್ಬನಿಗೆ ಮೀಸಲಾಗಿದ್ದ ಹುಲ್ಲುಗಾವಲಿನಲ್ಲಿ ಇವಳು ಪಾಲುದಾರಳಾದಳು. ಇದರಿಂದ ಹೊಸಬಿಯನ್ನು ಕಂಡರೆ ಮಾದನಿಗೆ ಕೋಪವುಂಟಾಗಿದ್ದಿತು.

ಇಷ್ಟೇ ಅಲ್ಲ ಹೊಸಬಿ ಇನ್ನೂ ಅನೇಕ ರೀತಿಯ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುತ್ತಾಳೆ. "ಹಳ್ಳಿಗಾಡಿನಲ್ಲಿ ರೈತರೆಲ್ಲರೂ ತಮ್ಮ ಬಟ್ಟೆಗಳನ್ನು ಅಗಸರಿಗೆ ಕೊಟ್ಟು ಮಡಿ ಮಾಡಿಸುತ್ತಾರೆ. ಹಳ್ಳಿಯವರ ಬಟ್ಟೆಗಳು ಬೇಗ ಹರಿಯುವುದಕ್ಕೆ ಅದೇ ಕಾರಣ. ರೈತನು ಒಂದು ಬಟ್ಟೆಯನ್ನೋ ದಟ್ಟಿಯನ್ನೋ ಹತ್ತು ಹನ್ನೆರಡು ದಿವಸ ಉಟ್ಟುಕೊಂಡು ಅದು ನೀರಿಗೆ ನೆನೆಯದಂತೆ, ಬೆಂಕಿಗೆ ಉರಿಯದಂತೆ ಮೇಣಗಬಟವಾಗುವ ಹಾಗೆ ಮಾಡಿ ಅನಂತರ ಅದನ್ನು ಹಳ್ಳಿಯ ಅಗಸನಿಗೆ ಹಾಕುತ್ತಾನೆ. ಅವನು ಅದನ್ನು ಉಬ್ಬೆಕಾಸಿ ಆ ಬಟ್ಟೆಯಿಂದ ಕಲ್ಲು ಚೂರಾಗುವುದೋ ಎಂಬಂತೆ ಒಗೆದು ಮಡಿ ಮಾಡಿಕೊಂಡು ಬರಲು ಹನ್ನೆರಡು ಹದಿಮೂರು ದಿವಸಗಳನ್ನು ತೆಗೆದುಕೊಳ್ಳುತ್ತಾನೆ. ಆ ಬಟ್ಟೆ ಬರುವವರೆಗೆ ರೈತನಿಗೆ ತಾನು ಉಟ್ಟಿರುವುದರ ಹೊರತು ಬೇರೆ ಅರಿವೆ ಇರುವುದಿಲ್ಲ. ಹೀಗಾಗಿ ಅವನು ಬಟ್ಟೆಯನ್ನು ಬದಲಾಯಿಸುವುದು ತಿಂಗಳಿಗೆ ಎರಡೇ ಸಲ. ಅಗಸನು ನಾಲ್ಕು ಸಲ ಮಡಿಮಾಡಿ ತರುವುದರೊಳಗಾಗಿ ಬಟ್ಟೆಯು ಚೂರಾಗುತ್ತದೆ. ಹಳ್ಳಿಯಲ್ಲಿ ತನ್ನ ಬಟ್ಟೆಯನ್ನು ತಾನು ಒಗೆದುಕೊಳ್ಳುವ ಒಕ್ಕಲಿಗನು ಇಲ್ಲವೇ ಇಲ್ಲ. ಹೆಂಗಸರು ತಮ್ಮ ಶಾಲೆಗಳನ್ನು ಮಾತ್ರ ಕೆರೆಯಲ್ಲಿಯೋ ಹಳ್ಳದಲ್ಲಿಯೋ ಕುಕ್ಕಿಕೊಳ್ಳುತ್ತಾರೆ. ಗಂಡಸಿನ ದಟ್ಟಿಯನ್ನು ದುಪಟಿಯನ್ನೂ ಯಾವ ರೈತನ ಹೆಂಡತಿಯೂ ಒಗೆಯುವುದಿಲ್ಲ. ಸುಗ್ಗಿ ಕಾಲದಲ್ಲಿ ಅಗಸನಿಗೆ ಹಡದೆಯನ್ನು ರೈತನು ಕೊಡುವುದು ಅವನಿಂದ ಹನ್ನೆರಡು ತಿಂಗಳೂ ಬಟ್ಟೆಗಳನ್ನು ಮಡಿಮಾಡಿಸುವುದಕ್ಕಾಗಿಯೇ"[೧೯] ಇಂತಹ ಹಳ್ಳಿಯಲ್ಲಿ ಬಟ್ಟೆಗಳನ್ನು ಅಗಸನಿಗೆ ಕೊಡದೇ, ಗಂಡಸರನ್ನದೇ ತನ್ನ ತಮ್ಮಂದಿರ ಮತ್ತು ಬೋರನ ಬಟ್ಟೆಗಳನ್ನು ಹೊಸಬಿಯೇ ವಾರಕ್ಕೆ ಒಂದು ಸಲ ಚೆನ್ನಾಗಿ ತೊಳೆದು ಮಡಿಮಾಡುತ್ತಿದ್ದಳು. ಹಾಗಾಗಿ ಹಳ್ಳಿಯವರಿಗಿಂತ ಯಾವಾಗಲೂ ಬಟ್ಟೆಗಳು ಶುಭ್ರವಾಗಿರುತ್ತಿದ್ದವು. ಅಗಸನಿಗೆ ಕೊಡಬೇಕಾದ ರಾಗಿಯೂ ಹೊಸಬಿಯಲ್ಲಿಯೇ ಉಳಿಯುತ್ತಿತ್ತು. ಇದನ್ನು ಕಂಡ ಊರಿನವರು ಹೊಸಬಿಯನ್ನೇ ಒಂದು ಜಾತಿಯನ್ನಾಗಿ ಮಾಡಿ ಒಂದು ರೀತಿಯಿಂದ ಬಹಿಷ್ಕರಿಸಿದ್ದರು. ಹೊಸಬಿಯ ನೆರೆಹೊರೆಯವರು ಅವರ ಬಟ್ಟೆಗಳನ್ನು ಕಂಡು ಆ ಅರಿವೆಗಳು ಬಾರಿ ಕೊಳಕು ಹದಿನೈದು ದಿನಕ್ಕೆ ಒಂದು ಸಲ ಕೂಡ ಅವುಗಳನ್ನ ಸೆಣೆಯೋದಿಲ್ಲ"[೨೦] ಎಂದುಕೊಳ್ಳುತ್ತಿದ್ದಳು. ಇದನ್ನು ಗಮನಿಸಿದ ಕಾಳಿ ಮತ್ತು ಜೋರಿ ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ತನ್ನ ಕೆಲಸವನ್ನು ಮಾಡಿಕೊಂಡು ಅವರಿಗೆ ಕೇಡನ್ನು ಬಯಸದೇ ಇರುತ್ತಾಳೆ. ಹೀಗೆ ಈ ಕತೆಯಲ್ಲಿ ಪರಂಪರೆ ಮತ್ತು ಆಧುನಿತೆಗೆ ಸಂಬಂಧಿಸಿದಂತೆ

ಅನೇಕ ಅಂಶಗಳು ಬಂದು ಹೋಗುತ್ತವೆ. ಕತೆಯ ಆರಂಭದಲ್ಲಿ ಬೋರನಿಂದ ಆರಂಭವಾದ ವೈಚಾರಿಕತೆ ಹೊಸಬಿಯವರೆಗೂ ಮುಂದುವರೆಯುತ್ತದೆ. ಎಲ್ಲಿ ಆಧುನಿಕತೆಯು ಪರಂಪರೆಗಿಂತ ಹೆಚ್ಚು ಪ್ರಬಲವಾಗುತ್ತದೋ ಅಲ್ಲಿ ಪರಂಪರೆ ಸೋಲುತ್ತದೆ. ಆಧುನಿಕತೆ ಜಯಗಳಿಸುತ್ತದೆ.

"ಈಡಿಗರ ಹೆಣ್ಣು" ಕತೆ ಆಧುನಿಕತೆಯಿಂದ ಬಂದ ಶಿಕ್ಷಣದಿಂದ ಆರಂಭವಾಗಿ ಪರಂಪರೆಯಿಂದ ಬಂದ ಕೃಷಿಯಲ್ಲಿ ಕತೆ ಮುಗಿಯುತ್ತದೆ. ಈ ಕತೆಯಲ್ಲಿ ಬರುವ ಮಾಧವ ಶ್ರೀಮಂತರ ಮಗ. ಬೆಂಗಳೂರಿನಲ್ಲಿ ಶಿಕ್ಷಣ ಪಡೆದು ಉತ್ತಮ ತರಗತಿಯಲ್ಲೇ ತೇರ್ಗಡೆಯಾಗುತ್ತಾನೆ. ಇವನ ಅಣ್ಣ ಆಗಲೇ ದೊಡ್ಡ ಡಾಕ್ಟರ್ ಆಗಿರುತ್ತಾನೆ. ತನ್ನ ತಂದೆಗೂ ಮಾಧುವನ್ನು ಚೆನ್ನಾಗಿ ಓದಿಸಿ ಅವನನ್ನು ದೊಡ್ಡ ಅಧಿಕಾರಿಯನ್ನಾಗಿ ಮಾಡಬೇಕು, ಬೆಂಗಳೂರಿನಲ್ಲಿ ನೆಲಸಿದ್ದ ಪ್ರಸಿದ್ಧರ ಮಗಳನ್ನು ಮಾಧುವಿಗೆ ಮದುವೆ ಮಾಡುವಂತೆ ಕನಸನ್ನು ಕಾಣುತ್ತಿರುತ್ತಾನೆ. ತಂದೆಯ ಉದ್ದೇಶ ಹಿಡೇರುವಂತೆ ಮಗನು ಕೂಡ ತನ್ನ ಬೆಳವಣಿಗೆಯನ್ನು ಹೊಂದುತ್ತಿರುತ್ತಾನೆ. ಭಾಸ್ಕರರಾಯರ ಉದ್ದೇಶ ಮದ್ರಾಸಿನಲ್ಲಿ ನ್ಯಾಯಾಧೀಶರಾಗಿದ್ದು, ನಿವೃತ್ತರಾಗಿದ್ದವರ ಮಗಳಾದ ಮಣಿಯನ್ನು ಮಾಧುವಿಗೆ ಮದುವೆಮಾಡಬೇಕೆಂದು, ಮಣಿಯು ಶಿಕ್ಷಣವನ್ನು ಪಡೆದಿದ್ದು ಆಧುನಿಕತೆಗೆ ಒಳಗಾಗಿರುತ್ತಾಳೆ. ಇಂಗ್ಲೀಷ್ ಕೂಡ ಮಾತನಾಡುವುದಕ್ಕೆ ಬರುತ್ತದೆ. ಅವಳ ವೇಷಭೂಷಣ ಆಧುನಿಕತೆಯಿಂದ ಕೂಡಿದೆ. ಬಗೆ ಬಗೆಯ ಫೇಸ್‌ಪೌಡರು, ಸೆಂಟು, ಸ್ವೆಟರ್ ಇತ್ಯಾದಿಗಳನ್ನು ಬಳಸುತ್ತಾಳೆ. ಸಂಪೂರ್ಣವಾಗಿ ಆಧುನಿಕತೆಗೆ ಒಳಗಾಗಿರುವುದನ್ನು ಈ ಕತೆಯಲ್ಲಿ ಕಾಣಬಹುದು. ಮಣಿಯನ್ನು ಕಂಡು ಮಾಧು ಅವಳನ್ನು ಮದುವೆಯಾಗಲು ಒಪ್ಪಿಕೊಳ್ಳುತ್ತಾಳೆ.

ಸ್ವಲ್ಪ ದಿನದ ನಂತರ ಮಾಧು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಅವನಿಗೆ ಸರ್ಕಾರದಲ್ಲಿ ಯಾವುದಾದರೂ ಒಂದು ಹುದ್ದೆ ಸಿಗುವುದರಲ್ಲಿ ಅನುಮಾನವಿಲ್ಲ ಎಂದು ಅವನ ಕುಟುಂಬದವರು ತೀರ್ಮಾನಿಸುತ್ತಾರೆ. ಆದರೆ ಪರೀಕ್ಷೆ ಮುಗಿದ ನಂತರ ಮಾಧು ತನ್ನ ಸ್ನೇಹಿತನ ಊರಿಗೆ ಹೋಗಲು ತಿರಸ್ಕರಿಸುತ್ತಾನೆ. ಆದರೆ ಶ್ಯಾಮುವಿನ ತುಂಬಾ ಒತ್ತಾಯಕ್ಕೆ ಮಣಿದು ಒಪ್ಪಿಕೊಳ್ಳುತ್ತಾನೆ. ಮಾಧು ನಗರದಲ್ಲಿ ಹುಟ್ಟಿ ಅಲ್ಲಿಯೇ ಬೆಳೆದಿರುವುದರಿಂದ ನಗರ ಅವನನ್ನು ಆಕರ್ಷಿಸಿರುತ್ತದೆ. ಹಾಗಾಗಿ ಅವನಿಗೆ ಹಳ್ಳಿಯೆಂದರೆ ಒಂದು ರೀತಿಯ ತಿರಸ್ಕಾರ ಇರುತ್ತದೆ. ಆ ಹಾಳು ಕೊಂಪೆ; ಬಸ್ ಇಲ್ಲ; ರಸ್ತೆ ಇಲ್ಲ; ನ್ಯೂಸ್ ಪೇಪರ್ ಇಲ್ಲ; ಸಿನಿಮಾ ಇಲ್ಲ, ಕಣ್ಣಿಗಾದರೂ ಹಬ್ಬ ಮಾಡಿಕೊಳ್ಳೋಣ ಅಂದರೆ ನೋಡೋದಕ್ಕೆ ಒಳ್ಳೆ ಹುಡುಗಿಯರಿಲ್ಲ; ಇಂತಹ ಕಾಡಿಗೆ ಹೋಗಿ ಕೂರಬೇಕಾದವರು ಸನ್ಯಾಸಿಗಳು ಮತ್ತು ಮೈಗಳ್ಳರು ಎಂದು ಹಳ್ಳಿಯನ್ನು ತೆಗಲುತ್ತಾನೆ. ಆದರೆ ಶ್ಯಾಮು ಮಾಧುವನ್ನು ತುಂಬಾ ಪ್ರಾರ್ಥಸಿ ಅಲ್ಲಿ ಕೂಡ ಎಲ್ಲಾ ರೀತಿಯೂ ಸುಖವಿದೆ ನೀನು ನಮ್ಮ ಹಳ್ಳಿಗೆ ಬರಲೇಬೇಕು ಎಂದು ಕೇಳಿದಾಗ "ಬಿಡು ಬಿಡು ಅಲ್ಲಿಯ ಸುಖ ಏಕಾಂತ ಸುಖ, ಅಲ್ಲಿಯ ಜೀವ ನಿರ್ಜಿವ ಅಲ್ಲಿಯ ಜನ ಕಾಡು ಜನ, ಅಲ್ಲಿಯು ಹೆಣ್ಣುಗಳು ಕೊರಚರು, ಕೊರಮರು, ಶಾಂತಾ ಅಪ್ಪೆ, ಮಾಧುರಿ, ನಮ್ಮ ಮಣಿ ಎಲ್ಲರನ್ನೂ ಅವನ ಮುಂದೆ ನಿವಾಳಿಸಬೇಕು

ಅಲ್ಲವೇ? ಅಯ್ಯೋ ಪ್ರಾಣಿ ನಿನ್ನ ಮಲೆನಾಡು ವಡ್ಯಾಣದ ಸುಖ ನಿನಗೆ ಇರಲಿ. ಆ ಇಂದ್ರಲೋಕದ ನಂದನವನ ನನಗೆ ಬೇಡ, ಈ ಬೆಂಗಳೂರು ನರಕವೇ ನನಗೆ ಸಾಕು"[೨೧] ಎಂದು ನಗರವನ್ನೇ ಇಷ್ಟಪಡುತ್ತಾನೆಯೇ ವಿನಃ ಹಳ್ಳಿಯನ್ನು ಇಷ್ಟಪಡುವುದಿಲ್ಲ. ಅವನ ಪ್ರಕಾರ ನಗರವೇ ಶ್ರೇಷ್ಠ ಅಲ್ಲಿ ಎಲ್ಲವು ಸಿಗುತ್ತದೆ. ಸಮಯ ಹೋಗುವುದೇ ತಿಳಿಯುವುದಿಲ್ಲ. ಹಳ್ಳಿಯಲ್ಲಿ ಯಾವುದೇ ರೀತಿಯಲ್ಲಿ ಸುಖ ಸಿಗುವುದಿಲ್ಲ ಎಂದು ಹಳ್ಳಿಯನ್ನು ತಿರಸ್ಕರಿಸುತ್ತಾನೆ.

ಗೊರೂರರ ಕತೆಗಳಲ್ಲಿ ಚಿತ್ರಿತವಾದ ಸ್ತ್ರೀಪಾತ್ರಗಳಲ್ಲಿ ವೈಯಾರಿ ಪಾತ್ರ ಹೆಸರಿಗೆ ತಕ್ಕಂತೆ ವೈಯ್ಯಾರದಿಂದ ಕೂಡಿದೆ. ಇಡೀ ಕತೆಯು ಹಳ್ಳಿಯಲ್ಲಿ ಆರಂಭವಾಗಿ, ಹಳ್ಳಿಯಲ್ಲಿಯೇ ಕತೆಯ ಮುಕ್ತಾಯವನ್ನು ಕಾಣಬಹುದು. ಮಾಸ್ತಿಯವರ ಕತೆಗಳಲ್ಲಿ ಶಿಕ್ಷಣಕ್ಕಾಗಿ ನಗರಕ್ಕೆ ಹೋಗುವ ಪಾತ್ರಗಳಿರುವಂತೆ, ಗೊರೂರರ ಕತೆಗಳಲ್ಲಿ ಕೂಡ ಶಿಕ್ಷಣಕ್ಕಾಗಿ ನಗರಕ್ಕೆ ಹೋಗುವಂತಹ ಅನೇಕ ಪಾತ್ರಗಳಿವೆ. ಈ ಕತೆಯಲ್ಲಿ ಬರುವ ಕಥಾನಾಯಕ ರಾಮಸ್ವಾಮಿ ಶಿಕ್ಷಣಕ್ಕಾಗಿ ನಗರಕ್ಕೆ ಹೋಗಿರುತ್ತಾನೆ. ಒಂದು ದಿನ ಹಳ್ಳಿಗೆ ಬರುವ ಸಮಯದಲ್ಲಿ ಸಾಯಂಕಾಲದ ಸಂಧ್ಯಾವಂದನೆಗಾಗಿ ನದಿಗೆ ಹೋಗುತ್ತಾನೆ. ಇವನು ಶಿಕ್ಷಣವನ್ನು ಪಡೆದ ಮೇಲು ಸಂಧ್ಯಾವಂದನೆ ಬಿಡದಂತೆ ವೈದಿಕ ಧರ್ಮ ಅವನನ್ನು ಕಟ್ಟಿ ಹಾಕಿರುತ್ತದೆ. ಅಷ್ಟೇ ಅಲ್ಲ, ಬಿ.ಎ.ತರಗತಿಗೆ ಬಂದಿದ್ದರೂ ಒಂದು ದಿನ ಹೋಟಲಿಗೆ ಹೋಗಿರಲಿಲ್ಲ. ಒಂದು ಬಾಡಿಗೆ ಮನೆ ಮಾಡಿ ಅವನೇ ಅಡಿಗೆ ಮಾಡಿಕೊಳ್ಳುತ್ತಿದ್ದನು. ಪೂರ್ತಿ ಕ್ಷೌರವನ್ನೇ ಎರಡು ಮೂರು ದಿನಗಳಿಗೊಮ್ಮೆ ಮಾಡಿಸಿಕೊಳ್ಳುತ್ತಿದ್ದ. ತಣ್ಣೀರಿನ ಸ್ನಾನವನ್ನು ಒಂದು ದಿನ ಬಿಟ್ಟವನಲ್ಲ, ಗಾಢಾವಾದ ನಾಮ ಯಾವಾಗಲೂ ಹಣೆಯ ಮೇಲಿರುತ್ತದೆ. ಹೀಗೆ ವೈದಿಕರ ಮಗನಾಗಿ ಹುಟಿದ ರಾಮಸ್ವಾಮಿ ತನ್ನ ಧರ್ಮವನ್ನು ಚಾಚುತಪ್ಪದಂತೆ ನಡೆಸಿಕೊಂಡು ಬರುತ್ತಾನೆ.

ಊರಿಗೆ ಬರುವ ಸಮಯದಲ್ಲಿ ಸಂಧ್ಯಾವಂದನೆಗಾಗಿ ನದಿಗೆ ಹೋಗುತ್ತಾನೆ. ಆ ಸಂದರ್ಭದಲ್ಲಿ ಅಲ್ಲಿಗೆ ಲಲಿತ ಅನ್ನೋ ಬಾಲವಿಧವೆ ಪಾತ್ರೆಗಳನ್ನು ಬೆಳಗುತ್ತಿರುವುದು ಕಾಣಿಸಿತು. ಅವರಿಬ್ಬರೂ ಒಬ್ಬರನ್ನೊಬ್ಬರು ನೋಡುತ್ತಾ ನಿಂತರು. ಆ ಹುಡುಗಿಯನ್ನು ನೋಡದ ರಾಮಸ್ವಾಮಿಗೆ ಆಶ್ಚರ್ಯವಾಗುತ್ತದೆ. "ಆ ನದಿ, ಆ ಮುಳುಗುವ ಸೂರ್ಯ, ಆ ಸಂಜೆ, ಆ ತಂಗಾಳಿ, ಆ ಹಾರಾಡುತ್ತಿದ್ದ ಪಾರಿವಾಳದ ಪಕ್ಷಿಗಳು, ಕಣ್ಣನ್ನು ಮಿಟಕಿಸುತ್ತಾ ಅಣಕಿಸುತ್ತಿರುವ ಆ ಮೀನುಗಳು; ಆ ಗಂಧರ್ವರ ಸೀಮೆಗೆ ಅರ್ಹಳಾದ ಅಪ್ಸರೆಯಾಗಿ ಆಕೆ ತೋರಿದಳು"[೨೨] ಇದನ್ನು ನೋಡಿದಾಗ ರಾಮಸ್ವಾಮಿಯ ಮನಸ್ಸು ಗಾಳಿಯಲ್ಲಿ ತೇಲಾಡಿದಂತೆ ಆಯಿತು. ನಿಜಕ್ಕೂ ಅವನ ಸುತ್ತಾ ಅಪ್ಸರ ಸ್ತ್ರೀಯರೇ ಬಂದು ನೃತ್ಯ ಮಾಡಿದರೂ ಅವನಿಗೆ ಅಷ್ಟು ಆಶ್ಚರ್ಯವಾಗುತ್ತಿರಲಿಲ್ಲ. ಹುಡುಗಿಗೆ ಹದಿನಾಲ್ಕು ಹದಿನೈದು ವರ್ಷ ವಯಸ್ಸಾಗಿತ್ತು. ಅವಳ ಅಂಗಾಂಗಳೆಲ್ಲ ಪುಷ್ಟವಾಗಿ ಬೆಳೆದಿದ್ದವು. ಅವಳನ್ನು ನೋಡುತ್ತಾ ಅವಳ ಮೇಲೆ ಇಟ್ಟ ಕಣ್ಣನ್ನು ತೆಗೆಯದೇ ರಾಮಸ್ವಾಮಿ ಸಂಧ್ಯಾವಂದನೆಯನ್ನು ಮುಗಿಸುತ್ತಾನೆ. ಇದ್ದಕ್ಕಿದಂತೆ ಮಳೆಯ ಹನಿಗಳು ರಭಸವಾಗಿ ಬೀಳಲು ಅಲ್ಲಿದ್ದ ಕಮಾನಿನ ಕೆಳಗೆ ಹುಡುಗ ಮತ್ತು ಹುಡುಗಿ ರಕ್ಷಣೆಗಾಗಿ ಹೋಗುತ್ತಾರೆ. ಅಲ್ಲಿ ಇಬ್ಬರಿಗೂ ಪರಿಚಯವಾಗಿ ಯಾರ

ಮಕ್ಕಳು, ಯಾವ ಊರಿನವರು ಎಂಬುದು ತಿಳಿಯುತ್ತದೆ. ಹೀಗೆ ರಾಮಸ್ವಾಮಿ ಮತ್ತು ಲಲಿತಳ ಪರಿಚಯವಾಗುತ್ತದೆ.

ರಂಗಚಾರ್ಯರು ರಾಮಸ್ವಾಮಿಯ ತಂದೆಯವರಷ್ಟೇ ವೈದಿಕರೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ರಂಗಚಾರ್ಯರು ಅನೇಕ ನೋವುಗಳನ್ನು ಅನುಭವಿಸಿದ್ದರಿಂದ ಅವರ ಮನಸ್ಸು ಪಕ್ವವಾಗಿತ್ತು. ರಂಗಚಾರ್ಯರಿಗೆ ೪೦ ವಯಸ್ಸಾಗಿದ್ದಾಗ ತನ್ನ ಹೆಂಡತಿ ಸಾವನ್ನಪ್ಪಿದಳು. ನಂತರ ತನ್ನ ಹೆಂಡತಿ ತೀರಿಕೊಂಡ ೨-೩ ತಿಂಗಳಲ್ಲಿ ಅಳಿಯನೂ ಈಜಲು ಹೋಗಿ ಮುಳುಗಿ ಹೋದನು. ಲಲಿತ ಚಿನ್ನದ ಬೊಂಬೆಯಂತಹ ಹುಡುಗಿ ಹನ್ನೊಂದು ವರುಷಕ್ಕೆ ವಿಧವೆಯಾದಳು.

ರಂಗಚಾರ್ಯರಿಗೆ ಐದು ಜನ ಹೆಣ್ಣುಮಕ್ಕಳಿದ್ದರು. ಲಲಿತ(೧೩), ರುಕ್ಮಿಣಿ (೧೧), ರಂಗನಾಯಕಿ(೯), ಸೀತಾ (೭), ಲಕ್ಷ್ಮೀ (೫), ಲಲಿತಾಗೆ ಹದಿಮೂರು ವಯಸ್ಸಾಗಿದ್ದಾಗ ತನ್ನ ತಂಗಿ ರುಕ್ಕಿಣಿಯನ್ನು ಮದುವೆಯಾಗುವ ಉದ್ದೇಶದಿಂದ ನೋಡಿಕೊಂಡು ಹೋಗಬೇಕೆಂದು ಒಬ್ಬ ವರನು ಬರುತ್ತಾನೆ. ಅವನ ಹೆಸರು ಮರಳಹಳ್ಳಿ ಶ್ರೀನಿವಾಸ. ತನ್ನ ತಂಗಿಗೆ ಗಂಡು ನೋಡಲು ಬರುವುದರಿಂದ ಲಲತಾಳಿಗೂ ಹಬ್ಬವಾಯಿತು. ತನ್ನ ತಂಗಿಯನ್ನು ಅಲಂಕಾರ ಮಾಡಿ, ತಾನು ಸ್ವಲ್ಪ ಅಲಂಕಾರ ಮಾಡಿಕೊಂಡಳು. ಮನೆಗೆ ಬಂದ ಶ್ರೀನಿವಾಸನಿಗೆ ರುಕ್ಮಿಣಿಯ ಬದಲು ಲಲಿತಾಳೇ ಇಷ್ಟವಾಗುತ್ತಾಳೆ. ಮುಂಗಾರು ಮಿಂಚು ನನ್ನನ್ನು ಕೊಂದಳು ಎಂದುಕೊಂಡು ಹೊರಟು ಹೋದನು. ಎರಡನೇ ಬಾರಿ ರುಕ್ಮಿಣಿಯನ್ನು ನೋಡಲು ನಾರಾಯಣಯ್ಯಂಗಾರ್‍ರ ಮಗ ನರಸಿಂಹನು ಬಂದಾಗ ಇದೇ ಆಯಿತು. ಹೀಗೆ ಲಲಿತ ತನ್ನ ತಂಗಿಯರ ಮದುವೆಗೆ ದೊಡ್ಡ ತೊಡಕಾಗಿ ನಿಂತಳು. ಬಂದ ಬಂದ ಗಂಡುಗಳೆಲ್ಲ ಲಲಿತಾಳಿಗೆ ಸೋತು ಹಿಂದಿರುಗಿದವು.

ರಾಮಸ್ವಾಮಿಗೆ ೨೫ ವಯಸ್ಸಾಗಿತ್ತು. ಅವನು ಊರಿಗೆ ಈ ಹಿಂದೆ ಒಂದು ಸಲವೂ ಬಂದಿರಲಿಲ್ಲ. ಅವನ ತಂದೆ ಮೈಸೂರಿಗೆ ಬಂದಾಗ ರಂಗಣ್ಣನಿಗೆ ಲೆಕ್ಕವಿಲ್ಲದಷ್ಟು ಹೆಣ್ಣುಗಳಿವೆ. ಕುದುರೆಗಳ ಹಾಗೆ ಬೆಳೆದಿವೆ. ನಿನಗೆ ಯಾವುದು ಬೇಕೋ ಅದನ್ನು ಒಪ್ಪಿಕೋ, ನೀನು ಒಪ್ಪಿದನ್ನು ನಾನು ಮದುವೆ ಮಾಡಿಸುತ್ತೇನೆಂದು ಹೇಳಿರುತ್ತಾನೆ. ಅದರಂತೆ ರಾಮಸ್ವಾಮಿ ಹೆಣ್ಣನ್ನು ನೋಡಲು ರಂಗಣ್ಣ ಮನೆಗೆ ಬಂದಾಗ ರುಕ್ಷ್ಮಿಣಿಯನ್ನು ತೋರಿಸುತ್ತಾರೆ. ಆಗಲೇ ರಾಮಸ್ವಾಮಿಗೆ ಹೆಸರಿನ ವ್ಯತ್ಯಾಸ ತಿಳಿಯುತ್ತದೆ. ತಾನು ಲಲಿತಳನ್ನೇ ಮದುವೆಯಾಗುತ್ತೇನೆಂದು ಹೇಳುತ್ತಾನೆ. ರಂಗಣ್ಣನವರಿಗೆ ಸಿಡಿಲು ಬಡಿದಂತಾಗುತ್ತದೆ. ರಾಮ ರಾಮ, ಶಾಂತಂ ಪಾಪಂ, ಶಾಂತಂ ಪಾಪಂ ಎಂದರು. ಇದನ್ನು ಕೇಳಿದ ರಾಮಸ್ವಾಮಿಗೆ ದಿಗ್ಭ್ರಮೆ ಆಯಿತು. "ರಂಗಣ್ಣನವರೇ, ಯಾಕೆ ಹೀಗೆ ಹೇಳುತ್ತೀರಿ? ನಾನೇನು ಅವಳನ್ನು ಸುಖವಾಗಿ ಇಟ್ಟುಕೊಳ್ಳುವುದಿಲ್ಲ ಅಂತ ಭಯವೆ? ವೈದಿಕ ಗೊಡ್ಡು ಮನೆಯಲ್ಲಿ ಕೆಲಸ ಜಾಸ್ತಿ ಅಂತ ಭಯವೆ? ಇನ್ನಾರಿಗಾದರೂ ಗೊತ್ತಾಗಿದೆಯೆ?"[೨೩] ಎಂದು ಪ್ರಶ್ನೆಗಳನ್ನು ಒಂದೇ ಬಾರಿಗೆ ಕೇಳುತ್ತಾನೆ. ಆದಿನ ರಾತ್ರಿ ರಂಗಣ್ಣನಿಗೆನೋ ನಿದ್ರೆ ಬಂದಿತು. ಆದರೆ ರಾಮಸ್ವಾಮಿಯ ಮನಸ್ಸು ಬಿರುಗಾಳಿಯ ಸಮುದ್ರದ ಅಲೆಗಳಿಗೆ ಸಿಕ್ಕಿ ಒದ್ದಾಡಲಾರಂಭಿಸಿತು. ಅವನಿಗೆ ಹೊಳೆಯಲ್ಲಿ

ಕಂಡ ಲಲಿತಾಳಿಗೂ ತಾನು ಮನೆಯಲ್ಲಿ ಕಂಡ ಲಲಿತಾಳ ವ್ಯತ್ಯಾಸಕ್ಕೆ ಕಾರಣಗೊತ್ತಾಯಿತು. ಇವಳನ್ನು ಮದುವೆಯಾಗದಿದ್ದರೆ ಬೇರೆ ನನಗೆ ಸುಖವಿಲ್ಲ ಎಂದು ತೀರ್ಮಾನಿಸಿಕೊಂಡನು. ಬೆಳಿಗ್ಗೆ ಎದ್ದವನೇ ಲಲಿತಾಳನ್ನು ಭೇಟಿಯಾಗಿ ಮದುವೆಯಾಗುವಂತೆ ಕೇಳಿದನು, ಅದಕ್ಕೆ ಅವಳು ಒಪ್ಪಿಗೆಯನ್ನು ಸೂಚಿಸಿದಳು. ವೈದಿಕ ಪರಂಪರೆಯಿಂದ ಬಂದ ರಾಮಸ್ವಾಮಿಯ ತಂದೆ-ತಾಯಿ ಆರಂಭದಲ್ಲಿ ತನ್ನ ಮಗ ವಿಧವೆಯನ್ನು ಮದುವೆಯಾಗಲು ಒಪ್ಪುವುದಿಲ್ಲ. ಕೊನೆಗೆ ಎಲ್ಲವೂ ಸರಿಹೋಗಿ ಊರಿನಲ್ಲಿಯೇ ಭರ್ಜರಿಯಾಗಿ ಮದುವೆ ಮಾಡುತ್ತಾರೆ. ಊರಿನಲ್ಲಿರುವ ವಯಸ್ಸಾದ ಮುತ್ತೈದೆಯರು ಎಲಾ ವೈಯ್ಯಾರಿ ಬಲೆ ಬೀಸಿದಕ್ಕೆ ಕೊನೆಗೂ ಒಂದು ಮೀನನ್ನು ಹಿಡಿದೇ ಹಿಡಿದಳು ಎಂದರೆ, ಪುರೋಹಿತರು ಇದರಿಂದ ಊರು ಹಾಳಾಗ್ತದೆ ಎಂದರು, ಶ್ಯಾನುಭೋಗರು ಅಯ್ಯೋ ಬಿಡಿ ಸ್ವಾಮಿ ಈ ಊರು ಇವತ್ತಿನದಲ್ಲ ಹಾಳಾಗೊಕೆ ಹಿಂದೆ ಎಷ್ಟು ನಡಿತೋ ಮುಂದೆ ಎಷ್ಟು ನಡೀಬೇಕೋ ಎಂದರು.

ಇಲ್ಲಿ ಮುಖ್ಯವಾಗುವುದು ರಾಮಸ್ವಾಮಿಯ ಪಾತ್ರ ಚಿತ್ರಣ. ಕತೆಯ ಆರಂಭದಲ್ಲಿ ವೈದಿಕ ಪರಂಪರೆಯ ಭಾಗವಾಗಿದ್ದು, ನಗರಕ್ಕೆ ಶಿಕ್ಷಣಕ್ಕೆ ಹೋದರೂ ತನ್ನ ಆಚರಣೆಯನ್ನು ಬಿಡುವುದಿಲ್ಲ. ಅಷ್ಟೇ ಅಲ್ಲ ಎಂತ ಸಂದರ್ಭದಲ್ಲೂ ಅದನ್ನು ತಿರಸ್ಕರಿಸುವುದಿಲ್ಲ. ಆದರೆ ಕೇವಲ ಒಂದು ಹೆಣ್ಣಿಗಾಗಿ ಇಡೀ ಪರಂಪರೆಯನ್ನೇ ಮೀರಿ ವಿಧವೆಯನ್ನು ಮದುವೆಯಾಗುವುದು ವೈಚಾರಿಕತೆಯಿಂದ ಬಂದುದಾಗಿದೆ. ಇಲ್ಲಿ ನಿಜವಾಗಲೂ ಕತೆಗಾರರ ತಂತ್ರ ತುಂಬಾ ಶ್ಲಾಘನೀಯ.

'ಮುಳ್ಳುಗಿಡ' ಕತೆಯಲ್ಲಿ ಮುಖ್ಯವಾಗಿ ನಾಲ್ಕು ಪಾತ್ರಗಳಿವೆ. ಅವರಲ್ಲಿ ಮೂರು ಪಾತ್ರಗಳು ಶಿಕ್ಷಣ ಪಡೆದ ಪಾತ್ರಗಳು, ಆಧುನಿಕತೆಯನ್ನು ಒಪ್ಪಿಕೊಂಡ ಪಾತ್ರಗಳು. ಆದರೆ ಒಂದು ಪಾತ್ರ ಮಾತ್ರ ಹಳ್ಳಿಯನ್ನೇ ಪ್ರಧಾನವಾಗಿಸಿಕೊಂಡು, ತನ್ನ ಸಂಸಾರವೇ ಶ್ರೇಷ್ಠ ಎಂಬ ಭಾವನೆಯಿರುವ, ಶಿಕ್ಷಣದ ತಂಟೆಗೆ ಹೋಗದೇ ತನ್ನ ಪಾಡಿಗೆ ತಾನು ಬದುಕುತ್ತಾಳೆ. ಗೊರೂರರು ಸ್ತ್ರೀಪಾತ್ರಗಳಿಗೆ ಪ್ರಮುಖ ಸ್ಥಾನವನ್ನು ಕಲ್ಪಿಸಿದ್ದರೂ ಎಂಬುದಕ್ಕೆ ಮುಳ್ಳುಗಿಡ ಕತೆಯಲ್ಲಿ ಬರುವ ಲಲಿತ ಪಾತ್ರವೇ ಸಾಕ್ಷಿ.

ಲಲಿತ ಶಿಕ್ಷಣವನ್ನು ಪಡೆದಿರುತ್ತಾಳೆ. ಹಾಗಾಗಿ ಯಾವುದೇ ಕಾರಣಕ್ಕೂ ಗಂಡ ತನಗೆ ಸಮಾನ ಎಂಬ ನಿಲುವು ಅವಳದಾಗಿರುತ್ತದೆ. ಗಂಡಿಗೆ ಹೇಗೆ ಸ್ವಾತಂತ್ರ್ಯ ಇದೆಯೋ ತನಗೂ ಕೂಡ ಅಷ್ಟೇ ಸ್ವಾತಂತ್ರ್ಯ ಇದೆ ಎಂದು ಹೇಳುತ್ತಾಳೆ. ಒಂದು ದಿನ ಸೂರಪ್ಪನ ಜೊತೆಗೆ ಮಾವಿನಕೆರೆ ಬೆಟ್ಟಕ್ಕೆ ವಿನೋದ ವಿಹಾರಕ್ಕಾಗಿ ಹೋಗುವ ಸಂದರ್ಭ ಬರುತ್ತದೆ. ಕೃಷ್ಣಮೂರ್ತಿಯ ವಾದ ನಾನು ನನ್ನ ಗೆಳೆಯ ಇಬ್ಬರು ಹೋಗುತ್ತೇವೆ. ಈಗ ನೀನು ಬರುವುದು ಬೇಡ, ಯಾವಾಗಲಾದರೂ ನಾನು ನೀನು ಹೋಗೋಣ ಎಂದು ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಲಲಿತಳ ವಾದ "ನಾನು ಬಂದರೆ ನಿಮಗೆ ಕಷ್ಟ ಏನು? ಇನ್ನೊಂದು ದಿನವೂ ಹೋಗೋಣ ನನಗೂ ಇಲ್ಲಿ ಕುತುಕೊಂಡು ಬೇಜಾರಾಗಿದೆ. ನನ್ನ ಕಾಲಿನಲ್ಲಿ ನಾನು ನಡೆದುಕೊಂಡು ಬರುತ್ತೇನೆ.

ನನ್ನ ಪಾಡಿಗೆ ನಾನು ಮನೆ ಕಾವಲಿಗೆ ಮುದಿಗೂಬೆಯಂತೆ ಬಿದ್ದಿರತೀನಿ ನೀವು ಮಾತ್ರ ಯಾವತ್ತು ರಜ ಬಂದರು ಊರು ಊರು ತಿರುಗುತ್ತ ವಿನೋದವಾಗಿರಿ ಇನ್ನು ನನ್ನಿಂದ ಸಹಿಸುವದಕ್ಕೆ ಆಗುವುದಿಲ್ಲ. ನನ್ನನ್ನು ಬಿಟ್ಟು ನೀವು ಎಲ್ಲಿಗೂ ಹೋಗಕೂಡದು. ಎಲ್ಲಿ ಹೋದರೂ ನಾನು ಜೊತೆಯಲ್ಲಿ ಬರುವವಳೆ, ಇವತ್ತಂತೂ ಬಂದೇ ಬರುತ್ತೇನೆ"[೨೪] ಎಂದು ಕಡ್ಡಿ ಮುರಿದಂತೆ ಹೇಳುತ್ತಾಳೆ. ಲಲಿತಾಳು ಶಿಕ್ಷಣ ಪಡೆದಿದ್ದರಿಂದ ಅವಳಿಗೂ ತಾನು ಗಂಡನಷ್ಟೇ ಸಮರ್ಥಳು ಎಂಬ ಅಭಿಪ್ರಾಯ ಇರುತ್ತದೆ. ಹಾಗಾಗಿ ಕೃಷ್ಣಮೂರ್ತಿಯನ್ನು ಎಲ್ಲಿಗೂ ಹೋಗಲು ಬಿಡುವುದಿಲ್ಲ. ಹೋದರೆ ನಾನು ಜೊತೆಗೆ ಬರುತ್ತೇನೆಂದು ವಾದಮಾಡುತ್ತಾಳೆ. ಈ ರೀತಿಯಾಗಿ ಪುರುಷನ ಜೊತೆ ವಾದ ಮಾಡುವ ಪಾತ್ರಗಳು ಮಾಸ್ತಿಯವರಲ್ಲಿ ವಿರಳ. ಇಲ್ಲಿ ಕತೆಯ ನಿರೂಪಕರ ನಿಲುವು ಸ್ಪಷ್ಟವಾಗಿದೆ. ಅಂದರೆ ಪಂಪರೆಯಲ್ಲಿ ಬೆಳೆದಿರುವ ವಾತಾವರಣದಲ್ಲಿ ಸ್ತ್ರೀಯ ಸ್ವಾತಂತ್ರ್ಯಕ್ಕೆ ಅಷ್ಟಾಗಿ ಮನ್ನಣೆ ಸಿಗುವುದಿಲ್ಲ. ಆದರೆ ಆಧುನಿಕತೆ ಬಂದಾಗ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ ಇದೆ ಎಂದು ಮುಳ್ಳುಗಿಡ ಕತೆಯು ಹೇಳುತ್ತದೆ. ಕೊನೆಗೆ ಆಧುನಿಕತೆ ಎಲ್ಲಿ ಜಯಗಳಿಸುತ್ತದೆಯೋ ಅಲ್ಲಿ ಪರಂಪರೆಯನ್ನು ಅಡ್ಡ ತಂದು ಪರಂಪರೆಯೇ ಗೆಲ್ಲುವಂತೆ ಮಾಡುವುದು ಕತೆಗಾರರ ವಿಶೇಷವಾಗಿದೆ.

ಕತೆಯ ಆರಂಭದಲ್ಲಿ ಕತೆಗಾರ ಆಧುನಿಕತೆಯನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತಾನೆ. ಅದಕ್ಕೆ ತಕ್ಕಂತೆ ಪಾತ್ರ ಚಿತ್ರಣವಿದೆ. ನಗರವನ್ನು ಹೊಗಳುವ ವಿವರಗಳಿವೆ. ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವ ಸಾಲುಗಳಿವೆ. ಇನ್ನೂ ಮುಂತಾದ ಅಂಶಗಳ ಮೂಲಕ ಆಧುನಿಕತೆ ಬೇಕೆ ಬೇಕು ಎಂಬ ನಿಲುವು ಕತೆಯ ಆರಂಭದಲ್ಲಿ ಕಾಣುತ್ತದೆ. ಆದರೆ ಎಲ್ಲಿ ಸಂಸಾರಗಳು, ನೆಮ್ಮದಿಯನ್ನು ಕೆಡಿಸಿಕೊಳ್ಳುತ್ತವೆಯೋ, ಮನುಷ್ಯನನ್ನು ಕಾಡುತ್ತವೆಯೋ, ಅಲ್ಲಿ ಪರಂಪರೆಯಲ್ಲಿಯೇ ಅದಕ್ಕೆ ಉತ್ತರವನ್ನು ಹುಡುಕುವ ಕೆಲಸ ಗೊರೂರರು ಈ ಕತೆಯಲ್ಲಿ ಮಾಡಿದ್ದಾರೆ. ಈ ತಂತ್ರಗಳೇ ಗೊರೂರರ ಕತೆಗಳಿಗೆ ಒಂದು ಪ್ರಾಮುಖ್ಯತೆ ಸಿಗುವಂತೆ ಮಾಡಿವೆ.

'ಉತ್ತರಾಧಿಕಾರಿ' ಕತೆಯಲ್ಲಿ ತಂದೆ ಮತ್ತು ಮಗನನ್ನು ಕೇಂದ್ರವಾಗಿಟ್ಟುಕೊಂಡು ಕತೆ ರಚಿಸಿದ್ದಾರೆ. ಸದಾಶಿವ ಈ ಕತೆಯಲ್ಲಿ ತಂದೆಯ ಪಾತ್ರವಾದರೆ, ವಿಶ್ವೇಶ್ವರ ಮಗನ ಪಾತ್ರವಾಗಿ ಕಾರ್ಯನಿರ್ವಹಿಸುತ್ತದೆ. ಸದಾಶಿವ ಶಾರ್ವರಿ ಎಂಬ ಹೆಣ್ಣನ್ನು ಮದುವೆಯಾಗುತ್ತಾನೆ. ಮದುವೆಯಾಗಿ ಹತ್ತುವರ್ಷಕ್ಕೆ ಅವಳು ಮರಣ ಹೊಂದುತ್ತಾಳೆ. ಇವರಿಗೆ ಒಂದು ಗಂಡುಮಗು ಆಗಿರುತ್ತದೆ. ಅವನೇ ವಿಶ್ವೇಶ್ವರ. ಸದಾಶಿವನಿಗೆ ಮೂವತ್ತೈದು ರೂಪಾಯಿ ಸಂಬಳದ ಒಂದು ಉದ್ಯೋಗ ಸಿಕ್ಕಿರುತ್ತದೆ. ತಾಯಿ ಇಲ್ಲದ ಮಗನನ್ನು ತುಂಬಾ ಪ್ರೀತಿಯಿಂದ ಸಾಕುತ್ತಾನೆ. ಮಗನ ಹಾಲಿಗಾಗಿ ಸಮೀಪದ ಹಳ್ಳಿಯ ಒಬ್ಬ ತಾಯಿ ಬಂದು. ಮಗುವಿಗೆ ಮೊಲೆ ಹಾಲು ಕೊಡಲು ಗೊತ್ತುಮಾಡಿದನು. ಜೊತೆಗೆ ಹಸುವಿನ ಹಾಲು, ಆಡಿನ ಹಾಲು ಇತ್ಯಾದಿಗಳಿಂದ ಮಗು ದಡಾರ ಕಾಯಿಲೆ ಗೆದ್ದು ಎರಡು ವರ್ಷ ದಾಟಿತು. ಮಗನನ್ನು ಚೆನ್ನಾಗಿ ಓದಿಸಬೇಕೆಂದು ಸದಾಶಿವ ತನ್ನ ಸಂಬಂಳವನ್ನೆಲ್ಲ ಅವನ ಮಗನಿಗೆ ಮೀಸಲಿಟ್ಟಿದ್ದನು. ಹಾಗೂ ಹೀಗೂ ಮಾಡಿ ಮಗನನ್ನು ಎಸ್.ಎಸ್.ಎಲ್.ಸಿ ಓದಿಸುತ್ತಾನೆ.

ಮಗ ಸ್ವಲ್ಪ ದಡ್ಡ ಫೇಲ್ ಆದಾಗ ಅವನನ್ನು ಬಯ್ಯದೇ ತನ್ನಂತೆ ತನ್ನ ಮಗ ಎಂದುಕೊಳ್ಳುತ್ತಾನೆ. ಕೊನೆಗೆ ಬಿ.ಎ.ಓದಿ ಸಬ್‌ಇನ್ಸ್‌ಸ್ಪೆಕ್ಟರ್ ಆಗಿ ಕೆಲಸಕ್ಕೆ ಸೇರುತ್ತಾನೆ. ಇದರಿಂದ ಸದಾಶಿವನ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ತನ್ನ ಆಸೆಗಳು ಒಂದಕ್ಕೊಂದು ರೆಕ್ಕೆ ಬಿಚ್ಚಿಕೊಳ್ಳುತ್ತವೆ. ತನ್ನ ಮಗನಿಂದ ದೂರವಾಗಿದ್ದ ಸಂಬಂಧಗಳು ಈಗ ಪುನಃ ಹತ್ತಿರವಾಗುತ್ತವೆ. ಬಂದ ಹುಡುಗಿಯ ಪೈಕಿ ಒಂದು ಹೆಣ್ಣನ್ನು ಆರಿಸಿಕೊಂಡರೆ ಆಯ್ತು ಎಂದು ಸದಾಶಿವ ನೆಮ್ಮದಿಯಿಂದಿರುತ್ತಾನೆ. ಆದರೆ ವಿಶ್ವೇಶ್ವರನಿಂದ ತಾನೇ ಒಂದು ಹೆಣ್ಣನ್ನು ಆರಿಸಿಕೊಂಡಿರುವುದಾಗಿ ಕಾಗದ ಬರುತ್ತದೆ. ಇದು ತಂದೆಗೆ ಕಷ್ಟವಾದರೂ ಮಗನ ಇಷ್ಟವೇ ಮುಖ್ಯವಾಗುತ್ತದೆ. ಅದರಂತೆ ಮದುವೆಯೂ ನಡೆಯುತ್ತದೆ. ತಂದೆ ಇಲ್ಲದೇ ಮದುವೆ ನಡೆಯುತ್ತಿತ್ತು ಎಂದು ಸದಾಶಿವ ಬೆಂಗಳೂರಿಗೆ ಹೋದಾಗ ತಿಳಿಯುತ್ತಾನೆ. ವರನ ತಂದೆ ಯಾರೆಂಬುದು ಗಮನಿಸಲೇ ಇಲ್ಲ. ಇದಾವುದರಿಂದಲೂ ಸದಾಶಿವನಿಗೆ ಯಾರ ಮೇಲೆಯೂ ಅಸಮಾಧಾನವಾಗಲಿಲ್ಲ. ಮಗನ ಮೇಲಿನ ಪ್ರೀತಿ ಸ್ವಲ್ಪವೂ ಕಡಿಮೆಯಾಗಲಿಲ್ಲ. ಇದು ತಂದೆಗೆ ಅಭ್ಯಾಸವಾಗಿತ್ತು.

ಇದೆಲ್ಲ ನಡೆಯುವ ಸಮಯಕ್ಕೆ ಸದಾಶಿವ ನಿವೃತ್ತಿ ಹೊಂದಿ ಹಳ್ಳಿಗೆ ಹಿಂದಿರುಗಿದನು. ಬೇರೆ ಎಲ್ಲಿಯೂ ಮನೆ, ಉದ್ಯೋಗ ಇಲ್ಲದೇ ಇರುವುದರಿಂದ ಹಳ್ಳಿಯಲ್ಲಿಯೇ ಒಂದು ಮನೆ ಬಾಡಿಗೆ ತೆಗೆದುಕೊಂಡು ಅಲ್ಲಿದ್ದನು. ಅಲ್ಲಿಯೇ ಸ್ವಲ್ಪ ಜಾಮೀನು ತೆಗೆದುಕೊಂಡು ಜೀವನ ಆರಂಭಿಸಿದನು. ನೀರು ಪಕ್ಕದಲ್ಲೇ ಸಿಗುವುದರಿಂದ ಯಾವುದೇ ಸಮಸ್ಯೆಯಾಗದೇ ತನ್ನ ಹೆಂಡತಿ ಶವಸಂಸ್ಕಾರವಾದ ಜಾಗದಲ್ಲೇ ಹೂವಿನ ಗಿಡ, ತುಳಸಿಗಿಡಗಳನ್ನು ಬೆಳೆಸಿದನು. ಈಚೆಗೆ ಅಲ್ಲಿ ಒಂದು ಹೂವಿನ ಗಿಡಗಳ ಬೃಂದಾವನವನ್ನು ಕಟ್ಟುತ್ತಾನೆ. ಅಲ್ಲಿಯೇ ಒಂದು ಸಣ್ಣಗುಡಿಸಲನ್ನು ಕಟ್ಟಿಕೊಳ್ಳುತ್ತಾನೆ. ತೋಟವನ್ನು ದಿನದಿಂದ ದಿನಕ್ಕೆ ಫಲವತ್ತಾಗಿ ಮಾಡುತ್ತಾನೆ. ದಿನ ದುಡಿಯುವುದೇ ಅವನ ಅಭ್ಯಾಸವಾಗಿ ಹೋಗಿತ್ತು. ಅಲ್ಲಿ ತೆಂಗು-ಅಡಿಕೆ, ವಿಳೇದೆಲೆ ಸಸಿಗಳನ್ನು ಹಾಕಿ ತೋಟವಾಗಿದ್ದನ್ನು ಒಂದು ಪುಣ್ಯ ಕ್ಷೇತ್ರವನ್ನಾಗಿ ಮಾಡುತ್ತಾನೆ. ಅವುಗಳೆಲ್ಲ ಫಲಕೊಡಲು ಆರಂಭಿಸಿದಾಗ ಯಾರು ಬಂದರೂ ಅವುಗಳನ್ನು ದಾನಮಾಡುತ್ತಾನೆ.

ಹೀಗೆ ಸದಾಶಿವ ಎಷ್ಟೇಲ್ಲ ಕಷ್ಟ ಪಟ್ಟರೂ ತನ್ನ ಮಗನಿಗೆ ಯಾವುದೇ ತೊಂದರೆಯನ್ನು ಕೊಡಲಿಲ್ಲ. ಮಗನಿಂದ ಯಾವುದೇ ಪ್ರತಿಫಲವನ್ನು ಕೇಳಲಿಲ್ಲ. ಆದರೆ ಮಗ ತಂದೆಗೆ ಇಷ್ಟವಾಗುವಂತೆ ಬದುಕಲಿಲ್ಲ, ತಂದೆಯ ಮಾತುಗಳಲ್ಲಿ ಒಂದನ್ನೂ ನಡೆಸಿಕೊಡುವುದಿಲ್ಲ. ಹೀಗಿರುವಾಗ ಬೃಂದಾವನದಂತೆ ಬೆಳೆಸಿದ ತೋಟವನ್ನು ಮಗ ಬೇರೆಯವರಿಗೆ ಮಾರುತ್ತಾನೆ. ತಂದೆ ಏನು ಹೇಳಿದರೂ ಮಗ ಅದನ್ನು ಕೇಳಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಹೆಚ್ಚಾಗಿ ತಂದೆ ಮಾತನಾಡಲು ಹೋದರೆ "ಆ ಹಳೆ ಗೊಡ್ಡು ಸಂಪ್ರದಾಯವೆಲ್ಲ ನನಗೆ ಸೇರೋದಿಲ್ಲ. ಸತ್ತ ಮೇಲೆ ಬೂದಿ"[39] ಎಂದು ವಿಶ್ವೇಶ್ವರ ತಂದೆಗೆ ಹೇಳುತ್ತಾನೆ.

ಈ ಕತೆಯಲ್ಲಿಯೂ ಪರಂಪರೆ ಮತ್ತು ಆಧುನಿಕತೆಯ ಮುಖಾಮುಖಿಯಾಗಿರುವುದನ್ನು ಕಾಣಬಹುದು. ವಿಶ್ವೇಶ್ವರನ ತಂದೆ ಪರಂಪರೆಯ ಭಾಗವಾಗಿದ್ದು, ತನ್ನ ಮಗ ತನ್ನಂತೆ ಜೀವನ

ಸಾಗಿಸಬೇಕೆಂದುಕೊಳ್ಳುವ ಅವನ ಎಲ್ಲಾ ಆಲೋಚನೆಗಳು ಪರಂಪರೆಯ ಭಾಗವಾಗಿಯೇ ಕತೆಯಲ್ಲಿ ನಿರೂಪಿತವಾಗಿವೆ. ಆದರೆ ಆಧುನಿಕತೆಯ ಫಲವಾಗಿ ಬಂದ ಶಿಕ್ಷಣದಿಂದ ಸದಾಶಿವನ ಮಗ ಉದ್ಯೋಗವನ್ನು ಪಡೆಯುತ್ತಾನೆ. ಹಾಗಾಗಿ ಅವನಿಗೆ ತಂದೆಯಾಗಲಿ, ತಂದೆ ಮಾಡುತ್ತಿದ್ದ ಕೃಷಿಯಾಗಲಿ ಅವನಿಗೆ ಮುಖ್ಯವಾಗುವುದಿಲ್ಲ. ತಾನು ತನ್ನ ಹೆಂಡತಿ ಮಾತ್ರ ಮುಖ್ಯ ಎನ್ನುವ ಆಲೋಚನೆಗೆ ಕಟ್ಟುಬೀಳುತ್ತಾನೆ.

೬.೪. ಶಿಕ್ಷಣ

ಶಿಕ್ಷಣ ಆಧುನಿಕತೆಯಿಂದ ಬಂದಿದ್ದು, ಅದು ಸಮಾಜದಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. ಶಿಕ್ಷಣದಿಂದ ಉದ್ಯೋಗಕ್ಕೆ ದಾರಿಯಾದರೆ, ಉದ್ಯೋಗದಿಂದ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾದವು. ಗೊರೂರರು ಶಿಕ್ಷಣವನ್ನು ಕಥೆಗಳಲ್ಲಿ ವಸ್ತುವಾಗಿ ಬಳಸಿಕೊಂಡಿದ್ದಾರೆ. ಕೆಲವು ಕತೆಗಳಲ್ಲಿ ಶಿಕ್ಷಣದಿಂದ ಕುಟುಂಬಕ್ಕೆ ಅನುಕೂಲವಾದರೆ, ಮತ್ತೇ ಕೆಲವು ಕುಟುಂಬಗಳಿಗೆ ಶಿಕ್ಷಣ ಮಾರಕವಾಗಿದೆ. ಇಂತಹ ವಸ್ತುವನ್ನೊಳಗೊಂಡ ಕತೆಗಳಲ್ಲಿ 'ದೃಷ್ಟಿಲಾಭ' ಕತೆಯೂ ಒಂದಾಗಿದೆ. ಕತೆಯಲ್ಲಿ ಬರುವ ಶೇಷು ವಿಕಾರಿಯಾಗಿ, ಕಾಗೆಯ ಹಾಗೆ ಇದ್ದಾನೆ. ಇವನ ತಂದೆ ತಾಯಿ ಬೆಂಗಳೂರು ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ ಸಣ್ಣ ಜಮೀನುದಾರರಾಗಿ ಜೀವನಕ್ಕೆ ಸಾಕಾಗದೇ ತುಂಬಾ ಕಷ್ಟದಿಂದ ಜೀವನವನ್ನು ನೂಕುತಿರುತ್ತಾರೆ. ಹಾಗಾಗಿ ಶಿಕ್ಷಣಕ್ಕಾಗಿ ಅವರ ಬಂಧುಗಳ ಮನೆಯಲ್ಲಿರುತ್ತಾನೆ. ಹೀಗೆ ಅವನ ಶಿಕ್ಷಣ ಮುಂದುವರಿಯುತ್ತಿರುವಾಗ ಇಂಟರ್ ಮೀಡಿಯೇಟ್ ಜೂನಿಯರ್ ತರಗತಿಯಲ್ಲಿ ಓದುತ್ತಿದ್ದಾಗ ಶೇಷುವಿನ ಮದುವೆ ಗೊತ್ತಾಗಿ, ಲಗ್ನ ಪತ್ರಿಕೆ ಮುದ್ರಣವಾಗುತ್ತದೆ. ಹುಡುಗಿಯದು ಮೈಸೂರಿನ ಹತ್ತಿರದ ಒಂದು ಹಳ್ಳಿ. ತಂದೆಯಿಲ್ಲ, ತಾಯಿ ಮಾತ್ರ ಇದ್ದಾಳೆ. ಅಕ್ಕ ತಂಗಿ, ಅಣ್ಣ-ತಮ್ಮ ಯಾರು ಇಲ್ಲ. ಇವರು ಶೇಷುವಿಗೆ ದೂರದ ಸಂಬಂಧಿಗಳಾಗಿರುತ್ತಾರೆ. ಹುಡುಗಿಗೆ ೧೨ ವರ್ಷಕ್ಕಿಂತ ಹೆಚ್ಚಿರಲಾರದು.

ಕತೆಯ ನಿರೂಪಕ ಶೇಷುವಿನ ಗೆಳೆಯ. ಹಾಗಾಗಿ ನಿರೂಪಕನಿಗೂ ಮದುವೆಯ ಆಹ್ವಾನ ಬಂದಿರುವುದರಿಂದ ಮದುವೆಗೆ ಹೋಗಿರುತ್ತಾನೆ. ಶೇಷುವಿಗೆ ಓದುತಿದ್ದ ಕಾಲದಲ್ಲಿ ಸಹಾಯ ಮಾಡಿದವರು ಹುಡುಗಿಯ ತಾಯಿ ಎಂದು ಗೊತ್ತಾಗುತ್ತದೆ. ಈಗಾಗಲೇ ಶೇಷುವಿನ ವಿದ್ಯಾಭ್ಯಾಸಕ್ಕಾಗಿ ಎರಡು ಮೂರು ಜಾಮೀನುಗಳನ್ನು ಮಾರಿರುತ್ತಾರೆ. ಅಳಿಯ ಬಿ.ಎ.ಪದವಿಯನ್ನು ಪಡೆದು ಬಂದು ಉದ್ಯೋಗ ಪಡೆದರೆ ಅಷ್ಟೇ ಸಾಕು ಎಂಬುದು ಶೇಷುವಿನ ಅತ್ತೆಯ ಆಸೆ. ಜಾನಕಿ ಶೇಷುನನ್ನು ಮದುವೆಯಾದಳು. ನಿರೂಪಕ ಶೇಷುನನ್ನು ನಿನಗೆ ಈ ಹುಡುಗಿಯನ್ನು ಮದುವೆಯಾಗಲು ಒಪ್ಪಿಗೆಯೇ? ಎಂದು ಅಲ್ಲಿಯೇ ಕೇಳುತ್ತಾನೆ. ಅದಕ್ಕವನು ಈಗ ಅವೆಲ್ಲಾ ಅನವಶ್ಯಕ ಮದುವೆ ಮುಗಿಯಲಿ ಎಂದು ಹೇಳುತ್ತಾನೆ. ಹುಡುಗನ ತಂದೆ-ತಾಯಿ ಮದುವೆಯನ್ನು ಹುಡುಗಿಯ ಮನೆ ಖರ್ಚಿನಲ್ಲೇ ಮುಗಿಸಿಕೊಂಡು ಹೊರಡುತ್ತಾರೆ. ಇನ್ನೂ ಶೇಷು ದಿನದಿಂದ ದಿನಕ್ಕೆ ತುಂಬಾ ಶೋಕಿ

ಮಾಡುತ್ತಿದ್ದನು. ಫಸ್ಟ್‌ಕ್ಲಾಸ್ ಬೈಸಿಕಲ್ಲು, ಕೈಗೆ ಗಡಿಯಾರ, ಸೂಟ್‌ಗಳನ್ನು ಕೊಂಡುಕೊಂಡನು. ಪ್ರತಿದಿನ ತಪ್ಪದೇ ಸಿನಿಮಾ ನೋಡುತ್ತಿದ್ದನು. ಅತ್ತೆ ಕಷ್ಟಪಟ್ಟು ಕಳುಹಿಸುತ್ತಿದ್ದ ಹಣವನ್ನು ದುಂದುವೆಚ್ಚ ಮಾಡುತ್ತಾನೆ. ಆದರೂ ಬಿ.ಎ.ತರಗತಿಯನ್ನು ಯಶಸ್ವಿಯಾಗಿ ತೇರ್ಗಡೆಯಾದನು.

ನಿರೂಪಕ ಒಮ್ಮೆ ತನ್ನ ಕೆಲಸಕ್ಕಾಗಿ ಮೈಸೂರಿಗೆ ಹೋಗಿದ್ದಾಗ ಶೇಷುನನ್ನು ಭೇಟಿಯಾಗುತ್ತಾನೆ. ಶೇಷು ಅತ್ತೆಯ ಮನೆಗೆ ಕರೆಯುತ್ತಾನೆ. ಒಂದು ವರ್ಷದಿಂದ ಶೇಷು ಅತ್ತೆಯ ಮನೆಗೆ ಹೋಗಿರುವುದಿಲ್ಲ. ಅತ್ತೆ ಮಾತ್ರ ಒಂದೊಂದು ಕಾಗದಗಳನ್ನು ಹಾಕುತ್ತಲೇ ಇರುತ್ತಾಳೆ ಎಂದಾಗ, ಶೇಷುವಿನ ಮೇಲೆ ನಿರೂಪಕನಿಗೆ ಒಂದು ರೀತಿಯ ಕೋಪ ಬರುತ್ತದೆ. ಇವನ ವಿದ್ಯೆ ಏನು? ಇವನ ಡಿಗ್ರಿ ಏನು? ಇವನು ಬೆಳೆಸಿಕೊಳ್ಳುತ್ತಿರುವ ಸ್ವಭಾವವೇನು? ಕಾಲೇಜಿನಲ್ಲಿ ಇವನು ಕಲಿತುದು ಇದೆಯೇ? ತಿಂಗಳು ತಿಂಗಳು ಇವನಿಗೆ ೪೦-೫೦ ರೂಪಾಯಿ ಕೊಡುತ್ತಿರುವುದರ ವಿಷಯದಲ್ಲಿ ಇವನ ನಡತೆ ಏನು? ಇವನು ಮನುಷ್ಯ ಕುಲವೇ? ದನವೇ?[೨೬] ಎಂದು ಶೇಷುವಿನೊಂದಿಗೆ ನಿರೂಪಕ ಅತ್ತೆಯ ಮನೆಗೆ ಹೋಗುತ್ತಾನೆ. ಇವರನ್ನು ನೋಡಿದ ಶೇಷುವಿನ ಅತ್ತೆ ಅತ್ತೇಬಿಟ್ಟಳು. ಮದುವೆಯಾದಂದಿನಿಂದ ಇವನು ಊರಿಗೆ ಹೋಗಿರುವುದಿಲ್ಲ. ಕಾಗದವನ್ನು ಬರೆಯಲಿಲ್ಲ. ಇಲ್ಲೇ ಹತ್ತಿರದಲ್ಲಿದ್ದರೂ, ಯಾವುದಕ್ಕೂ ಉತ್ತರವನ್ನೇ ಕಳುಹಿಸಲ್ಲ. ನಾವು ಪರಿಚಯ ಇದ್ದವರ ಬಳಿ ಹೋಗಿ ಇವನ ಆರೋಗ್ಯವನ್ನು ವಿಚಾರಿಸಿಕೊಳ್ಳಬೇಕು. ನಮಗೆ ತಾನೇ ಯಾರಿದ್ದಾರೆ ಮಗನು ಇವನೇ ಅಳಿಯನು ಇವನ್ನೇ ಎಂದು ಹೇಳುತ್ತಾಳೆ.

ಮದುವೆಯಾಗಿ ಒಂದು ವರ್ಷವಾದರೂ ಪ್ರಸ್ತವಾಗುವುದಿಲ್ಲ. ಒಂದು ವರ್ಷದ ನಂತರ ಜಾನಕಿ ಮತ್ತು ಶೇಷುವಿಗೆ ಪ್ರಸ್ತವಾಗುತ್ತದೆ. ಮತ್ತೇ ಸಾಲಕ್ಕಾಗಿ ೩೦೦ ರೂಪಾಯಿಗಳನ್ನು ಅಳಿಯ ಅತ್ತೆಯಿಂದ ಕಿತ್ತುಕೊಳ್ಳುತ್ತಾನೆ. "ಇಲ್ಲಿಗೆ ನಮ್ಮ ಶಕ್ತಿ ಮುಗಿಯಿತು. ಶೇಷುವಿನ ವಿದ್ಯೆಯು ಪೂರೈಸಿತು. ಎಣ್ಣೆಗೆ ಬತ್ತಿಗೆ ನೇರ ಎಂಬಂತೆ ಆಯಿತು. ಎಲ್ಲಾ ಜಮೀನುಗಳನ್ನು ಮಾರಿಬಿಟ್ಟೆ. ಹೇಗಾದರೂ ಆಗಲಿ, ಸದ್ಯ ದೇವರು ಇಷ್ಟರಮಟ್ಟಿಗೆ ಮಾಡಿದನಲ್ಲ"[೨೭] ಎಂದು ನಿರೂಪಕ ಮತ್ತು ಅಳಿಯನ ಬಳಿ ಅತ್ತೆ ಹೇಳಿಕೊಳ್ಳುತ್ತಾಳೆ. ಒಂದು ವರ್ಷದ ನಂತರ ಮೈಸೂರಿನಲ್ಲಿಯೇ ಶೇಷುವಿಗೆ ಉಪಾಧ್ಯಾಯನ ಕೆಲಸ ಸಿಕ್ಕು ತಿಂಗಳಿಗೆ ೬೦ ರೂಪಾಯಿ ಸಂಬಳ ಬರುತಿತ್ತು. ಇವನ ವಿದ್ಯೆ, ಸಂಪತ್ತು, ಇವನ ದರ್ಜೆಗೆ ಹಳ್ಳಿಯ ಹುಡುಗಿಯಾದ ಜಾನಕಿ ಸರಿಹೋಗುವುದಿಲ್ಲ. ಆಗ ೧೮-೧೯ ವರ್ಷದ ಆನಂದ ಎನ್ನುವ ಯುವತಿಯನ್ನು ವಿವಾಹವಾದನು. ಮೈಸೂರಿನಲ್ಲಿ ಒಂದು ಮನೆಮಾಡಿ ಹೆಂಡತಿಯನ್ನು ಕರೆದುಕೊಂಡು ಬಂದನು. ಮದುವೆಯಾದ ಎರಡೇ ತಿಂಗಳಿಗೆ ಪ್ರಸ್ತವಾಯಿತು. ಓಗಿರುವಾಗ ನಿರೂಪಕ ಜಾನಕಿಯನ್ನು ಶೇಷುವಿನ ಮನೆಯಲ್ಲಿ ಬಂದು ಇರುವಂತೆ ಹೇಳುತ್ತಾನೆ. ತಾಯಿಯೊಂದಿಗೆ ಬಂದ ಜಾನಕಿ ಶೇಷುವಿನ ಮನೆಯಲ್ಲಿ ನಿಲ್ಲುತ್ತಾಳೆ. ಜಾನಕಿ ಮತ್ತು ಆನಂದ ತನ್ನ ಗಂಡನಿಗಾಗಿ ಕಿತ್ತಾಡುವುದಿಲ್ಲ. ಆದರೆ ಅತ್ತೆ ೦೧ ಮತ್ತು ಅತ್ತೆ ೦೨ ಇವರಿಬ್ಬರೂ ನಾಯಿಗಳಂತೆ ಪ್ರತಿದಿನ ಕಿತ್ತಾಡುತ್ತಾರೆ. ಜಾನಕಿಯ ತಾಯಿ ಶೇಷುವಿನ ವಿರುದ್ಧ ವಿದ್ಯಾಭ್ಯಾಸದ

ಮುಖ್ಯಾಧಿಕಾರಿಯಲ್ಲಿ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಜಾನಕಿಗೆ ಜ್ವರ ಬಂದು ೮-೧೦ ದಿನಗಳಾದರೂ ವಾಸಿಯಾಗುವುದಿಲ್ಲ. ಇನ್ನು ಶೇಷುವಿನ ಮನೆಯಲ್ಲಿ ಇದ್ದು ಪ್ರಯೋಜನವಿಲ್ಲವೆಂದು ಯೋಚಿಸಿ, ಜ್ವರ ವಾಸಿಯಾದ ನಂತರ ಮತ್ತೆ ಬರುವುದಾಗಿ, ಈಗ ಹಳ್ಳಿಗೆ ಹೋಗಲು ತಾಯಿ ಮಗಳು ಸಿದ್ದರಾಗಿ ಹಳ್ಳಿಗೆ ಹೊರಟು ಹೋಗುತ್ತಾರೆ.

ಆ ಮೇಲೆ ಎರಡು ವರ್ಷಗಳ ನಂತರ ಶೇಷುವಿನ ತಂದೆ-ತಾಯಿಗಳು ತೀರಿಕೊಂಡರು. ಜಾನಕಿ ಮತ್ತು ಅವಳ ತಾಯಿ ಒಂದೆರೆಡು ಬಾರಿ ಶೇಷುವಿನ ಮನೆಗೆ ಬಂದು ಕಾದಾಡಿಕೊಂಡು ವಾಪಸ್ಸು ಹೋಗುತ್ತಾರೆ. ಆನಂದ ಪಟ್ಟಣದ ನಾಗರಿಕತೆಯಲ್ಲಿ ಗೆಲುವಾಗಿ ಬೆಳೆಯುತ್ತಿರುತ್ತಾಳೆ. ಪ್ರತಿದಿನ ಬ್ಯಾಟ್‌ಮಿಟನ್ ಆಡುವುದು, ಕೈಗೆ ಗಡಿಯಾರ, ಕಾಲಿಗೆ ಚಪ್ಪಲಿ, ಸ್ತ್ರೀ ಸಮಾಜ, ಸಿನಿಮಾ, ಪಾರ್ಕ್, ವಾಕಿಂಗ್, ಇವೇ ಅವಳ ದಿನಚರಿಯಾಗಿರುತ್ತದೆ. ಶೇಷು ಸುಖಿಯಾದ ಜೀವನವನ್ನು ಅನುಭವಿಸುತ್ತಿರುತ್ತಾನೆ. ಇಂತಹ ಸಮಯದಲ್ಲಿ ಶೇಷುವಿಗೆ ಕಲ್ಲು ಶಿಡಬು ರೋಗ ಬರುತ್ತದೆ. ಬಾಲ್ಯದಲ್ಲಿಯೇ ಸಣ್ಣ ಶಿಡಬು ರೋಗ ಬಂದಿರುತ್ತದೆ. ಶೇಷುವಿನ ಈ ಸ್ಥಿತಿಯನ್ನು ನೋಡಿ ಆನಂದ ಮತ್ತು ಅವಳ ತಾಯಿ ಹೆದರಿ ಊರಿಗೆ ಓಡಿಬಿಟ್ಟರು. ನಿರೂಪಕ ಶೇಷುವಿನ ಹತ್ತಿರ ಬಂದು ಅವನನ್ನು ವಿಚಾರಿಸಿ ಜಾನಕಿಗೆ ಒಂದು ಕಾಗದ ಬರೆಯುತ್ತಾನೆ. ಕಾಗದ ತಲುಪಿದ ಮರುದಿನವೇ ತಾಯಿಯೊಂದಿಗೆ ಜಾನಕಿ ಮೈಸೂರಿಗೆ ಬರುತ್ತಾಳೆ. ಬಂದಾಗಿನಿಂದ ಎರಡು ತಿಂಗಳುಗಳ ಕಾಲ ಗಂಡನ ಹಾರೈಕೆ ಮಾಡುತ್ತಾಳೆ. ಬಂದ ರೋಗ ಗುಣವಾಗುತ್ತದೆ. ಎರಡು ಕಣ್ಣುಗಳು ಮಾತ್ರ ಹೋದವು. ಆನಂದಳಿಗೂ ಕಾಗದ ಬರೆಯುತ್ತಾರೆ. ಅವಳು ಬರುವುದಿಲ್ಲ ಎನ್ನುವ ಉತ್ತರ ನೀಡುತ್ತಾಳೆ. ತನ್ನ ಹೆಂಡತಿ ಜಾನಕಿ ಮತ್ತು ಅತ್ತೆಯನ್ನು ಪ್ರೀತಿಯಿಂದ ಕಾಣುತ್ತಾನೆ. ಆರಂಭದಲ್ಲಿ ಶಾಲೆಗೆ ಒಬ್ಬ ವಿದ್ಯಾರ್ಥಿ ಕೈಹಿಡಿದುಕೊಂಡು ಶೇಷುವನ್ನು ಕರೆದುಕೊಂಡು ಹೋಗುತ್ತಿದ್ದ, ಆದರೆ ಬರುಬರುತ್ತ ತನ್ನ ಕುರುಡಿಗೆ ಹೊಂದಿಕೊಳ್ಳುತ್ತಾನೆ. ಕೈಯಲ್ಲಿ ಕೋಲನ್ನು ಹಿಡಿದು ರಸ್ತೆ ಬದಿಯ ಕಾಲುಹಾದಿಯಲ್ಲಿ ಅಭ್ಯಾಸ ಬಲದಿಂದ ಕಣ್ಣು ಕಾಣುತ್ತಿರುವ ಮನುಷ್ಯನಂತೆಯೇ ಸರಾಗವಾಗಿ ಆತ್ಮವಿಶ್ವಾಸದಿಂದ ನಡೆಯುತ್ತಿದ್ದನು. ಈಚಿನ ದಿನಗಳಲ್ಲಿ, ಶೇಷುವಿಗೆ ತನ್ನ ಕೆಲಸಗಳನ್ನು ತಾನು ಸ್ವತಂತ್ರವಾಗಿ ಮಾಡಿಕೊಳ್ಳುವಷ್ಟು ಕಣ್ಣು ಕಾಣತೊಡಗಿದೆ. ಜಾನಕಿ ಒಂದು ಮಗುವಿನ ತಾಯಿಯಾಗುತ್ತಾಳೆ.

ಈ ಕತೆಯಲಿ ನಮಗೆ ಕಂಡುಬರುವ ಪ್ರಮುಖ ಅಂಶಗಳೆಂದರೆ ಹಳ್ಳಿಯಿಂದ ಬಂದ ಜಾನಕಿ ತನ್ನ ಗಂಡನ ರೋಗನಿವಾರಣೆಯಲ್ಲಿ ಪ್ರಮುಖಪಾತ್ರವಹಿಸಿದರೆ, ನಗರದಲ್ಲಿ ತನ್ನ ಗಂಡನೊಂದಿಗಿದ್ದ ಆನಂದ ತನ್ನ ಗಂಡನ ದುಂದು ವೆಚ್ಚಗಳಿಗೆ ಕಾರಣಳಾಗುತ್ತಾಳೆ. ಇಲ್ಲಿ ಕತೆಗಾರ ಮುಖ್ಯವಾಗಿ ಹಳ್ಳಿ ಮತ್ತು ಶಿಕ್ಷಣವನ್ನು ಮುಖಾಮುಖಿಯಾಗಿಸಿದ್ದಾರೆ. ಹಳ್ಳಿಯ ಪ್ರತಿನಿಧಿಯಾಗಿ ಜಾನಕಿ ಮತ್ತು ಅವಳ ತಾಯಿ ಕಂಡುಬಂದರೆ, ಶಿಕ್ಷಣದ ಪ್ರತಿನಿಧಿಯಾಗಿ ಶೇಷು ಮತ್ತು ಅವನ ಹೆಂಡತಿ ಆನಂದ ಕಂಡುಬರುತ್ತಾರೆ. ಶಿಕ್ಷಣ ನಮ್ಮ ಅವಶ್ಯಕತೆಯನ್ನು ಮಾತ್ರ ನಿರ್ವಹಿಸುತ್ತದೆ. ಆದರೆ ಪರಂಪರೆಯಿಂದ

ಬಂದ ನಮ್ಮ ಜೀವನ ಮೌಲ್ಯಗಳನ್ನು ಹಳ್ಳಿ ನಮಗೆ ಕಲಿಸುತ್ತದೆ. ಇಲ್ಲಿ ಶಿಕ್ಷಣ ಆಧುನಿಕತೆಯ ಭಾಗವಾಗಿ ಕಾರ್ಯನಿರ್ವಹಿಸಿದರೆ, ಹಳ್ಳಿ ಪರಂಪರೆಯ ಭಾಗವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಹೀಗೆ ಪರಂಪರೆ ಮತ್ತು ಆಧುನಿಕತೆಗಳನ್ನು ಗೊರೂರು ಕಥೆಗಳಲ್ಲಿ ಮುಖಾಮುಖಿಯಾಗಿಸುವ ಸಂದರ್ಭದಲ್ಲಿ ಯಾವುದರ ಪ್ರಭಾವ ಹೆಚ್ಚಾಗಿರುತ್ತದೆ, ಅದನ್ನು ಮುನ್ನೆಲೆಗೆ ತಂದು ಕಥೆಯನ್ನು ಕೊನೆಗಾಣಿಸುವ ತಂತ್ರವನ್ನು ಬಳಸಿದ್ದಾರೆ. ಆದರೆ ಇಂತಹ ಪಾತ್ರಗಳು ಗೊರೂರರಲ್ಲಿ ಅತ್ಯಂತ ವಿರಳವಾಗಿವೆ. ಏಕೆಂದರೆ ಅವರ ಮನಸ್ಸು ಪರಂಪರೆಯನ್ನು ಬಿಟ್ಟುಕೊಡಲು ಅಷ್ಟಾಗಿ ಒಪ್ಪಿಕೊಳ್ಳುವುದಿಲ್ಲ. ಅನಿವಾರ್ಯ ಬಂದ ಸಂದರ್ಭದಲ್ಲಿ ಅದನ್ನು ಸುಲಭವಾಗಿ ತನಗೆ ಗೊತ್ತಿಲ್ಲದೇ ಬಿಟ್ಟುಕೊಡುವ ಪಾತ್ರಗಳು ಹಲವು ಇವೆ.

ಶಯನೋತ್ಸವ ಕತೆಯಲ್ಲಿ ಶಿಕ್ಷಣದಿಂದ ಕೆಲವೊಂದು ಬದಲಾವಣೆಗಳು ಕುಟುಂಬದಲ್ಲಿ ನಡೆಯುತ್ತವೆ. ವೆಂಕಟಾದ್ರಿಯ ಮನೆಯಲ್ಲೂ ಇಂತಹ ಬದಲಾವಣೆಗಳು ನಡೆಯುತ್ತಿದ್ದು, ಅದನ್ನು ಗೊರೂರು ಈ ಕತೆಯಲ್ಲಿ ವಸ್ತುವಾಗಿ ಬಳಸಿಕೊಂಡಿದ್ದಾರೆ. ದೇವಿಹಳ್ಳಿಯ ಬಡ ಜಮೀನ್ದಾರ ವೆಂಕಟಪ್ಪನಿಗೆ ರಾಧಮ್ಮನೊಡನೆ ವಿವಾಹವಾಗುತ್ತದೆ. ಮದುವೆಯಾದ ಒಂದು ವರ್ಷಕ್ಕೆ ಒಂದು ಹೆಣ್ಣು, ನಂತರ ಪ್ರತಿ ಎರಡು ವರ್ಷಕ್ಕೆ ಒಂದು ಗಂಡಿನಂತೆ ನಾಲ್ಕು ಗಂಡು ಮತ್ತು ಎರಡು ಹೆಣ್ಣುಗಳನ್ನು ಹಡೆದಳು. ಮೊದಲನೆಯ ಹೆಣ್ಣುಮಗಳಿಗೆ ಮದುವೆಯಾಗಿ ಗಂಡ ಮರಣಹೊಂದಿದ್ದರಿಂದ ಅವಳು ತಂದೆಯ ಮನೆಗೆ ಬಂದು ನೆಲೆ ನಿಲ್ಲುತ್ತಾಳೆ. ವೆಂಕಟಾದ್ರಿಯದು ಅವಿಭಕ್ತ ಕುಟುಂಬವಾಗಿರುವುದರಿಂದ ಮನೆಯಲ್ಲಿ ಕಿರುಚಾಟ, ಗದ್ದಲ ಪ್ರತಿದಿನ ಇದ್ದೇ ಇರುತ್ತದೆ. ಮೂರು ಜನ ಗಂಡು ಮಕ್ಕಳಿಗೆ ಮದುವೆಯಾಗಿ ಮಕ್ಕಳಾಗಿರುತ್ತವೆ. ಆದರೆ ಅವರಿಗೆ ಕುಳಿತುಕೊಳ್ಳುವುದಕ್ಕಾಗಲೀ, ನಿಲ್ಲುವುದಕ್ಕಾಗಲೀ, ಮಾತನಾಡುವುದಕ್ಕಾಗಲೀ, ಸಮಯವಾಗಲೀ, ಏಕಾಂತ ಸ್ಥಳವಾಗಲೀ ಇಲ್ಲ.

ಈಚೆಗೆ ವೆಂಕಟಾದ್ರಿಯ ಕೊನೆಯಮಗ ನರಸಿಂಹನಿಗೆ ಪಟ್ಟಣದ ವಾಸಿಯಾದ ವನಜಳೊಂದಿಗೆ ಮದುವೆಯಾಗುತ್ತದೆ. ವನಜ ಹಾಸನದವಳಾಗಿದ್ದು, ಹೈಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಳು. ಆಧುನಿಕತೆಯನ್ನು ಅಲ್ಪ ಸ್ವಲ್ಪ ಅಳವಡಿಸಿಕೊಂಡಿದ್ದಳು. ಮಾವನ ಮನೆಯಲ್ಲಿ ಯಾವಾಗಲೂ ಗದ್ದಲವೋ ಗದ್ದಲ. ಏಕಾಂತದ ಅಭಾವ, ಚೂರು. ಗಂಡನೊಂದಿಗೆ ಮಾತಾಡಲು ಸಮಯ ಮತ್ತು ಸ್ಥಳವೇ ಸಿಗುವುದಿಲ್ಲ. ಮದುವೆಯಾಗಿ ಎಂಟು ತಿಂಗಳಾದರೂ, ತನ್ನ ಗಂಡನೊಂದಿಗೆ ಒಂದು ದಿನ ಮಾತಾಡುವಷ್ಟು ಅವಕಾಶವೇ ಸಿಗುವುದಿಲ್ಲ. ತುಂಬಾ ಪ್ರಯತ್ನ ಪಟ್ಟರೂ ವನಜನಿಗೆ ತನ್ನ ಗಂಡ ಮಾತಾಡಲು ಸಿಗುವುದಿಲ್ಲ.

ಒಂದು ದಿನ ಸಾಯಂಕಾಲ ವೆಂಕಟಾದ್ರಿ ತನ್ನ ಹೆಂಡತಿಗೆ ನಾಳೆ ನಡೆಯುವ ರಂಗಪುರದ ರಥೋತ್ಸವಕ್ಕೆ ಮನೆ ಮಂದಿಯೆಲ್ಲಾ ಹೊರಡಬೇಕು ಎಂದು ಹೇಳುತ್ತಾನೆ. ಹೇಳಿದ ಕೂಡಲೇ ಮನೆಯಲ್ಲಿ ಪ್ರಯಾಣದ ಸಿದ್ಧತೆಗಳು ಆರಂಭವಾದವು. ಎಲ್ಲರೂ ರಥೋತ್ಸವಕ್ಕೆ ಹೊರಡಲು ತಯಾರಾಗುತ್ತಾರೆ. ಆದರೆ ನರಸಿಂಹನಿಗೆ ಮಾತ್ರ ಇಷ್ಟವಿಲ್ಲ. ತನ್ನ ಹೆಂಡತಿಗೂ ಅದನ್ನು ಹೇಳುತ್ತಾನೆ.

ಎಲ್ಲರೂ ಜಾತ್ರೆಗೆ ಹೋಗಿ ಬರಲಿ ನಾವಿಬ್ಬರೂ ಒಂದು ದಿನವಾದರೂ ಸದ್ದು ಗದ್ದಲವಿಲ್ಲದೆ ನಮ್ಮ ಪಾಡಿಗೆ ಸುಖವಾಗಿರೋಣ. ಈ ಮನೆಯಲ್ಲಿ ಇಷ್ಟು ಬಿಡುವು ಏಕಾಂತವು ಶಾಂತಿಯೂ ಸಿಕ್ಕುವುದು ಇನ್ನು ಎಷ್ಟು ವರ್ಷಕ್ಕೋ?"[೨೮] ಎಂದು ತನ್ನ ಹೆಂಡತಿಗೆ ಅದನ್ನು ಒಪ್ಪಿಕೊಳ್ಳುವಂತೆ ಹೇಳಿದ. ಇದನ್ನೇ ಕಾಯುತ್ತಿದ್ದ ವನಜಳಿಗೆ ಎಲ್ಲಿಲ್ಲದ ಸಂಭ್ರಮ, ಸಡಗರ ಉಂಟಾಯಿತು. ಅಂದರೆ ನರಸಿಂಹ ಮತ್ತು ಅವನ ಹೆಂಡತಿಗೆ ದೇವರಿಗಿಂತ ಮುಖ್ಯ ಗಂಡ ಹೆಂಡತಿ ಒಂದು ದಿನಾದರೂ ಜೊತೆಯಲ್ಲಿ ಸ್ವತಂತ್ರವಾಗಿರಬೇಕು ಎಂಬುದಾಗಿದೆ. ಇಡೀ ಕುಟುಂಬವೇ ಇದನ್ನು ಒಪ್ಪದಿದ್ದರೂ, ಗಂಡ–ಹೆಂಡತಿ ಮಾತ್ರ ಇದನ್ನು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಶಿಕ್ಷಣವೆಂಬ ಆಯುಧ ಬೆಂಬಲಕ್ಕೆ ನಿಲ್ಲುತ್ತದೆ. ಇಡೀ ಪರಂಪರೆಯ ಭಾಗವಾಗಿ ಬಂದಿರುವ "ದೇವರು ಶ್ರೇಷ್ಠ" ಎಂಬ ಮಾತನ್ನು ವನಜಾ ಮತ್ತು ಅವಳ ಗಂಡ ನಿರಾಕರಿಸುತ್ತಾರೆ. ಆದರೆ ವೆಂಕಟಾದ್ರಿ ಯಾರನ್ನು ಬಿಡದೇ ರಥೋತ್ಸವಕ್ಕೆ ಹೊರಡಿಸುತ್ತಾನೆ.

ಎಲ್ಲಾರು ಬೆಳಿಗ್ಗೆ ಸ್ನಾನಮಾಡಿ ೮ ಗಂಟೆ ಬಸ್ಸಿಗೆ ಹೊರಡಲು ಸಿದ್ಧರಾಗುತ್ತಾರೆ. ಆದರೆ ನರಸಿಂಹ ಮಾತ್ರ ತಲೆನೋವು ಎಂದು ತಲೆಗೆ ಮುಸುಕು ಹಾಕಿಕೊಂಡು ಮಲಗುತ್ತಾನೆ. ವನಜ ಇನ್ನೂ ಸಿದ್ಧಳಾಗಿರುವುದಿಲ್ಲ. ಇದನ್ನು ನೋಡಿದ ಓರಗಿತ್ತಿಯರು, ನಾದಿನಿ ಅತ್ತೆ ಎಲ್ಲರೂ "ಈ ಕಾಲದ ಹುಡುಗಿಯರಿಗೆ ದೇವರಲ್ಲಿ ಭಕ್ತಿ ಎಲ್ಲಿಂದ ಬರಬೇಕು? ಹಾಸನ ಪಟ್ಟಣದವಳು. ರಂಗಪುರದ ರಥೋತ್ಸವವೇ? ಅಲ್ಲೇನಿದೆ ಇವರ ಕೂತಾಟಕ್ಕೆ? ಇವಳ ಮಾತನ್ನು ಕೇಳಿಕೊಂಡು ಅವನೂ ಕುಣಿಯುತ್ತಾನೆ"[೨೯] ಎಂದು ವನಜಳನ್ನು ಕುರಿತು ಮಾತಾಡುತ್ತಾರೆ. ಇದರಿಂದ ಅವಳು ಹೊರಟೇ ಬಿಟ್ಟಳು. ನರಸಿಂಹನು ತಲೆಗೆ ಕಟ್ಟಿದ ಬಟ್ಟೆಯನ್ನು ಬಿಚ್ಚದೇ ಹೊರಟನು.

ರಂಗನಾಥನ ದೇವಾಲಯಕ್ಕೆ ಎಲ್ಲರೂ ಹೋಗುತ್ತಾರೆ. ಹೋಗಿ ಬೇಗ ಬೇಗ ಎಲ್ಲಾರೂ ಸ್ನಾನಕ್ಕಾಗಿ ನದಿಗೆ ಇಳಿಯುತ್ತಾರೆ. ಸ್ತ್ರೀಯರೂ, ಪುರುಷರೂ ಸ್ಥಳ ಸಿಕ್ಕಿದೆಡೆ ಒಟ್ಟೊಟ್ಟಿಗೇ ನೀರಿಗೆ ಇಳಿದು ಮುಳುಗು ಹಾಕುತ್ತಿದ್ದರು. ವೆಂಕಟಾದ್ರಿಯ ಸಂಸಾರದವರೆಲ್ಲ ಸ್ನಾನ ಮಾಡಿ ಮೂಲದೇವರ ದೇವಸ್ಥಾನಕ್ಕೆ ಹೋಗುತ್ತಾರೆ. ಆದರೆ ನರಸಿಂಹ ಮತ್ತು ವನಜ ಇನ್ನೂ ನೀರಿನಲ್ಲಿ ಆಟವಾಡುತ್ತಾರೆ. ಮದುವೆಯಾಗಿದ್ದ ೪ ತಿಂಗಳಿಂದ ವನಜಳನ್ನು ನರಸಿಂಹ ಈ ರೂಪದಲ್ಲಿ ನೋಡಿಯೇ ಇರಲಿಲ್ಲ. "ಅವಳು ಸೊಂಟದವರೆಗಿನ ನೀರಿನಲ್ಲಿ ನಿಂತಿದ್ದಳು. ಅವಳ ಲಾವಣ್ಯ ಪ್ರವಾಹ, ನದಿಯ ಪ್ರವಾಹದೊಂದಿಗೆ ಬೆರೆತು ಹರಿಯುತ್ತಿತ್ತು. ಮುಂಗುರುಳು, ಪದೇ ಪದೇ ಕಪೋಲದ ಮೇಲೂ, ಹಣೆಯ ಮೇಲೂ ಬಿದ್ದು ಚೇಷ್ಟೆ ಮಾಡುತ್ತಿದ್ದುದರಿಂದ, ಅವಳು ಎರಡು ಕೈಗಳಿಂದಲೂ ಅದನ್ನು ಒಂದಕ್ಕೆ ಸರಿಸುತ್ತಿದ್ದಳು. ಶುಭ್ರವಾಗಿ ತೊಳೆದ ಅವಳ ಮುಖಮಂಡಲ, ಮಳೆಯಿಂದ ತೋಯ್ದು ಉಷಾ ಕಾಲದಂತೆ ಕನ್ನಡಿಯಂತೆ ಹೊಳೆಯುತ್ತಿದ್ದಿತು. ಸೀರೆಯನ್ನು ಪೂರ್ತ ಉಟ್ಟದರೂ ಅದರ ತೆಳು ಪೊರೆಯ ಒಂದೆ ಕಮಲದ ಮೊಗ್ಗೆಯಂಥ ಉಬ್ಬರವಿಳಿತದ ಸ್ತನಪಕ್ಷಿಯ ವಿಜೃಂಭಣೆ ತೋರುತ್ತಿತ್ತು. ನರಸಿಂಹ ತನ್ನ ಹೆಂಡತಿಯನ್ನು ನೋಡಿ ತಾನೇ ದಿಗ್ಭ್ರಾಂತನಾದ."[೩೦] ಆದರೆ

ನರಸಿಂಹ ಹೆಂಡತಿಯ ಹತ್ತಿರ ಹತ್ತಿರ ಬರುತಿದ್ದಂತೆ ವನಜ ದಡದ ಕಡೆಗೆ ಹೆಜ್ಜೆ ಹಾಕತೊಡಗಿದಳು. ಅದನ್ನು ನೋಡಿದ ನರಸಿಂಹ ವನಜನನ್ನು ನೀರಿನಲ್ಲೇ ಅಪ್ಪಿಕೊಂಡುಬಿಟ್ಟ. ಗಾಬರಿಯಾದ ವನಜ ಯಾರಾದರೂ ನೋಡುತ್ತಾರೆ ಎಂದಾಗ, ಎಲ್ಲಾರು ದೇವರ ದರ್ಶನಕ್ಕೆ ಹೋಗಿದ್ದಾರೆ ಎನ್ನುವ ಉತ್ತರ ನರಸಿಂಹನಿಂದ ಬರುತ್ತದೆ. ಹೀಗೆ ತುಂಬಾ ಹೊತ್ತು ನೀರಿನಲ್ಲಿ ಕಾಲ ಕಳೆಯುತ್ತಾರೆ. ನಂತರ ಒಂದು ಕಲ್ಲುಮಂಟಪಕ್ಕೆ ಹೋಗಿ ಬಟ್ಟೆಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಆನಂತರ ಅಲ್ಲಿದ್ದ ಮಂಟಪದಲ್ಲೇ ಇಬ್ಬರು ಮಲಗುತ್ತಾರೆ. ಎಚ್ಚರವಾದಾಗ ಕೆದರಿದ ತಲೆ, ವಸ್ತ್ರಗಳನ್ನು ಅವಸರ, ಅವಸರವಾಗಿ ಸರಿಮಾಡಿಕೊಂಡರು. ಅವರು ಮಂಟಪದಿಂದ ಹೊರಕ್ಕೆ ಬರುವ ಹೊತ್ತಿಗೆ ಪಶ್ಚಿಮದಲ್ಲಿ ಸೂರ್ಯನ ಕೆಂಪು ದುಂಡು ತಿರುಗುತ್ತಿತ್ತು. ನರಸಿಂಹ ತನ್ನ ಕೈಗಡಿಯಾರ ನೋಡಿಕೊಂಡು ಹೊತ್ತಾಯಿತು ಅಣ್ಣ ಏಳು ಗಂಟೆಗೆ ಎಲ್ಲರೂ ಬಸ್ಸಿನ ಹತ್ತಿರ ಬರಬೇಕೆಂದು ಹೇಳಿದ್ದ ನಡಿ ಹೋಗೋಣ ಎಂದು ತನ್ನ ಹೆಂಡತಿಯನ್ನು ಕರೆಯುತ್ತಾನೆ. ವನಜ "ದೇವರ ಸೇವೆಗೆಂದು ಬಂದು ದೇವರನ್ನು ನೋಡದೇ ಹೋಗುವುದೇ ಎಂದಾಗ, ನರಸಿಂಹ "ಸೇವೆ ಆಯಿತು. ದೇವರು ಅರ್ಥ ಮಾಡಿಕೊಳ್ಳುತ್ತಾನೆ. ತನ್ನ ಮಕ್ಕಳ ಆಟ, ತಂದೆಗೆ ಪ್ರಿಯವಲ್ಲವೇ?" ಎಂದ.

ಹೀಗೆ ವೆಂಕಟಾದ್ರಿಯ ಸಂಸಾರದಲ್ಲಿ ಎಲ್ಲಾರೂ ದೇವರು, ನಂಬಿಕೆ ಎಂದು ಭಕ್ತಿಯಿಂದ ರಥೋತ್ಸವ ಮುಗಿಸಿದರೆ, ನರಸಿಂಹ ಮತ್ತು ಅವನ ಹೆಂಡತಿ ರಥೋತ್ಸವಕ್ಕೆ ಹೋಗಿ ದೇವರನ್ನು ನೋಡದೇ ಮನೆಗೆ ಬರುತ್ತಾರೆ. ಏಕೆಂದರೆ ಇವರು ಆಧುನಿಕ ಮನೋಭಾವ ಉಳ್ಳವರು. ಶಿಕ್ಷಣ ಪಡೆದಿದ್ದ ವನಜ ಮತ್ತು ನರಸಿಂಹ ಬದಲಾವಣೆಯನ್ನು ಬಯಸುತ್ತಾರೆ. ಪರಂಪರೆಯಿಂದ ಬಂದ ಆಚರಣೆಗಳನ್ನು ಮುರಿಯಲು ಪ್ರಯತ್ನ ಮಾಡುತ್ತಾರೆ.

ಗೊರೂರು ಗಾಂಧೀಜಿಯ ಪ್ರಭಾವದಲ್ಲಿ ಸಾಹಿತ್ಯವನ್ನು ರಚಿಸಿದರು. ಗಾಂಧೀಜಿಯ ತತ್ವಗಳೇ ಗೊರೂರರ ಅನೇಕ ಕಥೆಗಳಿಗೆ ವಸ್ತುವಾಗಿವೆ. ಅವುಗಳಲ್ಲಿ 'ಬಿಸಿಲು ಕುದುರೆ' ಕಥೆಯು ಒಂದು. ಈ ಕತೆಯ ಕಥಾನಾಯಕಿ ಕರುಣಾ ಹತ್ತನೇ ವಯಸ್ಸಿಗೆ ಮದುವೆಯಾಗುತ್ತಾಳೆ. ಇವಳ ತಂದೆ ಶ್ರೀನಿವಾಸನು ಸ್ವಲ್ಪ ಆಧುನಿಕನೆ. ಆದರೆ ಮಲ್ಲಿಗೆಯ ಹಳ್ಳಿಯಲ್ಲಿನ ವೈದಿಕರ ಮುಂದೆ ಇವನ ಆಟ ನಡೆಯುವುದಿಲ್ಲ. ವೈದಿಕರ ಪ್ರಕಾರ ಹುಡುಗಿಯರಿಗೆ ಹದಿನಾರು ವಯಸ್ಸಿಗೆ ಮುಂಚೆ ಮದುವೆ ಮಾಡಬೇಕು. ಆದರೆ ಶ್ರೀನಿವಾಸ ಅದನ್ನು ತಿರಸ್ಕರಿಸಿ ತನ್ನ ಮಗಳಿಗೆ ಹದಿನಾರು ವರ್ಷ ದಾಟುವವರೆಗೆ ಮದುವೆ ಮಾಡುವುದಿಲ್ಲ ಎಂದು ಹಠಮಾಡುತ್ತಾನೆ. ಅದಕ್ಕೆ ಸಂಬಂಧಪಟ್ಟಂತೆ ಅವನು ಬಂದು ರಥೋತ್ಸವದಲ್ಲಿ ಉಪನ್ಯಾಸ ಮಾಡುತ್ತಾನೆ. ಆದರೆ ಶ್ರೀನಿವಾಸನ ತಾಯಿಗೆ ವಯಸ್ಸಾಗಿದ್ದು, ತಾನು ಸಾಯುವುದರೊಳಗೆ ತನ್ನ ಮೊಮ್ಮಗಳಾದ ಕರುಣಾಳ ಮದುವೆಯನ್ನು ನೋಡಬೇಕೆಂಬ ಬಯಕೆಯನ್ನು ವ್ಯಕ್ತಿಪಡಿಸುತ್ತಾಳೆ. ಅದಕ್ಕಾಗಿ ಶ್ರೀನಿವಾಸನು ತನ್ನ ಮಗಳು ಕರುಣಾಳ ಮದುವೆಯನ್ನು ಹತ್ತನೇ ವಯಸ್ಸಿಗೆ ಮಾಡಿದ. ಮದುವೆ ನಡೆದ ಮೂರು ತಿಂಗಳೊಳಗಾಗಿ ಕರುಣಾ ವಿಧವೆಯಾದಳು. ಅದೇ ವರ್ಷ ಲೋವರ್ ಸೆಕೆಂಡರೀ ಪರೀಕ್ಷೆ ಕಟ್ಟಿ, ಪಾಸೂ ಆದಳು.

ಆಗಲೂ ವೈದಿಕರು ಶ್ರೀನಿವಾಸನ ಬೆನ್ನು ಬಿದ್ದರು. ಮಗಳ ತಲೆಯನ್ನು ಬೋಳಿಸಬೇಕೆಂದು ಹಠ ಹಿಡಿದರು. ಅಷ್ಟೋತ್ತಿಗಾಗಲೇ ಶ್ರೀನಿವಾಸನಿಗೆ ತನ್ನ ತಪ್ಪಿನ ಅರಿವಾಗಿ ತನ್ನ ತಾಯಿಯ ಮಾತನ್ನು ಕೇಳದೇ ಮದರಾಸಿನಲ್ಲಿರುವ ತನ್ನ ದೂರದ ನೆಂಟನೊಬ್ಬನು, ಟಪಾಲು ಇಲಾಖೆಯಲ್ಲಿ ಕೆಲಸದಲ್ಲಿದ್ದನು. ಅವನು ಕರುಣಾಳನ್ನು ಕರೆದುಕೊಂಡು ಕಾಲೇಜಿಗೆ ಸೇರಿಸಿ ವಿದ್ಯೆ ಕಲಿಸುತ್ತೇನೆಂದು ಹೇಳಿ ಮದರಾಸಿಗೆ ಕರೆದುಕೊಂಡು ಹೋದನು. ಒಂಬತ್ತು ವರ್ಷಗಳ ನಂತರ ಕರುಣಾ ಊರಿಗೆ ಬರುತ್ತಾಳೆ ಎಂಬ ವದಂತಿ ಹಳ್ಳಿಯಲ್ಲಿ ಹಬ್ಬಿತು. ಅಷ್ಟೋತ್ತಿಗಾಗಲೇ ಅವಳು ಬಿ.ಎ.ಪಾಸ್ ಮಾಡಿದ್ದಳು. ಮಲ್ಲಿಗೆಹಳ್ಳಿಯಲ್ಲಿಯೂ ಅನೇಕ ಯುವಕರು ಬಿ.ಎ., ಎಂ.ಎ ಪದವಿಗಳನ್ನು ಪಡೆದಿದ್ದರು. ಇಡೀ ಈ ವೈದಿಕರಲ್ಲೇ ಬಿ.ಎ ಪಾಸ್ ಮಾಡಿದ ಹುಡುಗಿ ಎಂದರೆ ಅದು ಕರುಣಾಳು ಮಾತ್ರ. ಇವಳಿಗೆ ಚಿಕ್ಕಂದಿನಲ್ಲಿ ಮದುವೆಯಾಗಿದ್ದರೂ, ಗಂಡ ಮರಣ ಹೊಂದಿದ್ದರೂ ಚಲನಚಿತ್ರ ತಾರೆಯರೂ ನಾಚುವಂತೆ, ಕೈಗೆ ಗಡಿಯಾರವನ್ನು, ಕಾಲಿಗೆ ಚಪ್ಪಲಿಯನ್ನು, ತಲೆಗೆ ಹೂವನ್ನು ಮುಡಿದಿದ್ದಳು. ಅವಳು ಬರುವ ದಾರಿಗೆ ಸ್ವಾಗತ ಮಾಡಲೂ ಇಡೀ ಮಲ್ಲಿಗೆಹಳ್ಳಿಯ ವಿದ್ಯಾವಂತರ ಗುಂಪೇ ಸೇರಿತ್ತು. ಬಸ್ಸಿನಿಂದ ಇಳಿದ ಕೂಡಲೇ ಪ್ರತಿಯೊಬ್ಬ ಯುವಕರು ತಮ ತಮಗೆ ಸಿಕ್ಕ ಲಗೇಜನ್ನು ಹೊತ್ತುಕೊಂಡು ಕರುಣಾಳಿಂದೆ ಹೋಗುತ್ತಾರೆ. ಇದನ್ನು ನೋಡಿ ಹಳ್ಳಿಯಲ್ಲಿ ವಯಸ್ಕರಾದ ಸುಮಂಗಲೆಯರೂ ವೈದಿಕರು ಮೂಗು ಮುರಿದರು. ಮನೆಗೆ ಬಂದ ಯುವಕರೆಲ್ಲರೂ ಕರುಣಾಳ ಪರಿಚಿತರೇ. ಒಂಭತ್ತು ವರ್ಷಗಳಿಂದ ಮರೆತಿದ್ದ ಸಂಗತಿಗಳೆಲ್ಲ ಒಂದೊಂದಾಗಿ ಗರಿಬಿಚ್ಚಿಕೊಳ್ಳುತ್ತಾವೆ. "ಸಾಧಾರಣವಾಗಿ ಜಡವಾಗಿ ಮಲಗಿದ್ದ ಮಲ್ಲಿಗೆ ಹಳ್ಳಿಯಲ್ಲಿ ಕರುಣಾವಿನ ಆಗಮನದಿಂದ ಹೊಸ ಚೈತನ್ಯವೇ ಉಂಟಾಯಿತು. ಮದುವೆಯಾಗುವ ವಯಸ್ಸಿನ ಎಲ್ಲಾ ಹುಡುಗರಿಗೂ ವಿಧವಾ ವಿವಾಹ ನ್ಯಾಯ ಸಮ್ಮತವಾದುದಾಗಿಯೂ ಸಮಾಜದ ಏಳಿಗೆಗೆ ಸಾಧಕವಾದುದಾಗಿಯೂ ತೋರಿತು."[೩೧] ಕರುಣಾಳು ಬಂದ ದಿನದಿಂದ ಶ್ರೀನಿವಾಸನ ಮನೆಯಲ್ಲಿ ವಿಧವಾವಿವಾಹ ಕುರಿತು ಚರ್ಚೆಗಳು ನಡೆಯಲು ಆರಂಭವಾದವು. ಊರಿನ ಯುವಕರು ಪ್ರತಿದಿನ ಶ್ರೀನಿವಾಸನ ಮನೆಗೆ ಹೋಗುವುದಕ್ಕೆ ಯಾವುದಾದರೂ ಒಂದು ಕೆಲಸ ಇದ್ದೇ ಇರುತ್ತಿತ್ತು.

ಕರುಣಾ ಖಾದಿ ಸೀರೆ ಉಟ್ಟುಕೊಂಡು ಮಲ್ಲಿಗೆ ಹಳ್ಳಿಯಲ್ಲಿ ಇಳಿದ ದಿನಗಳಿಂದ ಹಳ್ಳಿಯ ಯುವಕರೆಲ್ಲಾ ಖಾದಿ ಭಕ್ತರೇ ಆದರು. ಒಂದು ದಿನ ಕರುಣಾ ತನ್ನ ಪೆಟ್ಟಿಗೆಯಲ್ಲಿದ್ದ ಚರಕವನ್ನು ಹೊರಕ್ಕೆ ತೆಗೆದು ನೂಲುತ್ತಿದ್ದಳು. ಆ ದಿನ ಇಡೀ ಮಲ್ಲಿಗೆಹಳ್ಳಿಯಲ್ಲಿ ಎಷ್ಟೊ ವರ್ಷಗಳಿಂದ ಮೂಲೆಗೆ ಬಿದ್ದಿದ್ದ ರಾಟೆಗಳೆಲ್ಲ ಹೊರಕ್ಕೆ ಬಂದವು. ಪದವಿಗಳನ್ನು ಪಡೆದು ಊರಲ್ಲಿ ಕೆಲಸವಿಲ್ಲದೇ ಖಾಲಿಯಾಗಿ ತಿರುಗುತ್ತಿದ್ದ ಯುವಕರೆಲ್ಲಾ ಚರಕ ಹಿಡಿದು ನೂಲುವುದಕ್ಕೆ ಆರಂಭಿಸಿದರು. ಯಾರಲ್ಲಿ ಚರಕವಿಲ್ಲವೋ ಅವರು ಬೇರೆಯವರಿಂದ ಸಾಲ ಪಡೆದರು. ಮತ್ತೇ ಕೆಲವರು ಸ್ವತಃ ಖರ್ಚುಗಳಲ್ಲಿ ಚರಕಗಳನ್ನು ತಯಾರಿಸಿಕೊಳ್ಳುತ್ತಾರೆ. ಹಳ್ಳಿಗೆ ಹಳ್ಳಿಯೇ ಜೇನುಹುಳಗಳಂತೆ ಕ್ರಿಯಾಶೀಲವಾಯಿತು. ಯುವಕರಷ್ಟೇ ಅಲ್ಲ ವಯಸ್ಸಾದವರು ನೂಲು ತೆಗೆಯುವಲ್ಲಿ ಒಬ್ಬರಿಗಿಂತ ಒಬ್ಬರಲ್ಲಿ ಹುಮ್ಮಸ್ಸು

ಹೆಚ್ಚಾಗಿತ್ತು. "ಮಹಾತ್ಮಗಾಂಧಿಯವರೇನಾದರೂ ಆ ಕಾಲದಲ್ಲಿ ಅಲ್ಲಿ ಬಂದಿದ್ದರೆ, ಕರನಿರಾಕರಣ ಚಳುವಳಿಗೆ ಬರದೋಲಿಯನ್ನು ಆರಿಸುವುದನ್ನು ಬಿಟ್ಟು ಮಲ್ಲಿಗೆ ಹಳ್ಳಿಯನ್ನು ಆರಿಸುತ್ತಿದ್ದರು"[೩೨] ಎಂದು ನಿರೂಪಕ ಗಾಂಧೀಜಿಯವರ ಖಾದಿಪ್ರೇಮವನ್ನು, ಹಳ್ಳಿಯ ಶ್ರೇಷ್ಠತೆಯನ್ನು ಈ ಸಾಲುಗಳ ಮೂಲಕ ಹೇಳಿದ್ದಾರೆ. ಅಷ್ಟೇ ಅಲ್ಲ ಗೊರೂರರ ಸಾಹಿತ್ಯದ ಮೇಲೆ ಗಾಂಧೀಜಿಯ ಪ್ರಭಾವವಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ಶಿಕ್ಷಣದಿಂದ ಏನೇನೂ ಬದಲಾವಣೆ ಮಾಡಬಹುದು, ಅದರಿಂದ ಉಪಯೋಗಗಳೇನು? ಅದರಿಂದಾಗುವ ಪರಿಣಾಮಗಳೇನು ಎಂಬುದನ್ನು ಬಿಸಿಲು ಕುದುರೆ ಕತೆಯಲ್ಲಿ ನೋಡಬಹುದು. ಕರುಣಾಳಿಂದ ಗಂಡಸರಷ್ಟೇ ಪ್ರಭಾವಿತರಾಗಿಲ್ಲ, ಹೆಂಗಸರು ಪ್ರಭಾವಿತರಾಗಿದ್ದರು. ಸ್ತ್ರೀಯರೆಲ್ಲಾ ಹೊಸದಾಗಿ ಅಕ್ಷರ ಕಲಿಯಲು ಪುಸ್ತಕಗಳನ್ನು ಹಿಡಿದು ದೇವಸ್ಥಾನದಲ್ಲಿ ಸೇರುತ್ತಾರೆ. ಸಂಘ-ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾರೆ. ಸ್ತ್ರೀಯರ ಕುರಿತು ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ಆರಂಭದಲ್ಲಿ ಯಾರು ಕರುಣಾಳನ್ನು ಬಹಿಷ್ಕರಿಸಿದ್ದರೋ ಅವರೆಲ್ಲಾ ಕರುಣಾಳ ಅಭಿಮಾನಿಗಳಾಗುತ್ತಾರೆ. ಎಲ್ಲಾದಕ್ಕೂ ಕರುಣಾಳೆ ಪ್ರೇರಣೆ ಎನ್ನುವಂತೆ ಮಲ್ಲಿಗೆ ಹಳ್ಳಿಯಲ್ಲಿ ಅವಳ ಹೆಸರು ಪ್ರಸಿದ್ಧಿಯಾಯಿತು. ದೇವಸ್ಥಾನಕ್ಕೆ ಹೋಗುವಾಗ ಹಾಕುವ ಬಟ್ಟೆಗಳು ಕೂಡ ಬದಲಾಗಿ ಹೋದವು. ಹೀಗೆ ಬದಲಾವಣೆಗಳ ಸುರಿಮಳೆಯೇ ಮಲ್ಲಿಗೆಹಳ್ಳಿಗೆ ಬಂದಿತು. ಮಲ್ಲಿಗೆಹಳ್ಳಿಯಲ್ಲಿ ಓದಿದ ಯುವಕರ ಸಂಖ್ಯೆ ಎಚ್ಚಿದ್ದರೂ ಹಳ್ಳಿಯಲ್ಲಿ ಯಾವುದೇ ಬದಲಾವಣೆಗಳೂ ಆಗಿರಲಿಲ್ಲ. ಎಲ್ಲಿ ನೋಡಿದರೆ ಅಲ್ಲೇ ತಿಪ್ಪೆಗಳು, ಕೊಚ್ಚೆ ಗುಂಡಿಗಳು, ಗೊಬ್ಬರದ ರಾಶಿಗಳೇ ಬಿದ್ದಿರುತ್ತದೆ. ಬೀದಿಗಳಲ್ಲಿ ನಡೆದಾಡುತ್ತಿದ್ದರೆ ದುರ್ನಾತ ಬರುತ್ತದೆ. ಇವೆಲ್ಲವುಗಳನ್ನು ನೋಡಿದರೆ ಒಂದು ವಾರದೊಳಗೆ ಮಲೇರಿಯಾ ಜ್ವರ ಬರುವುದು ಖಂಡಿತ ಎನ್ನುವಷ್ಟರ ಮಟ್ಟಿಗೆ ಹಳ್ಳಿಯ ಪರಿಸ್ಥಿತಿ ಬಂದಿದೆ. ಇದನ್ನು ಮೌನವಾಗಿಯೇ ಗಮನಿಸಿದ ಕರುಣಾ "ಗಾಂಧಿಯವರಿಗೆ ಹಳ್ಳಿಗಳ ನಿಜವಾದ ಸ್ಥಿತಿ ತಿಳಿಯದು ತಿಳಿದಿದ್ದರೆ ಅವರು ಈ ರೀತಿ ವಿದ್ಯಾವಂತರು ಹಳ್ಳಿಯಲ್ಲಿ ಹೋಗಿ ನೆಲಸಿದರೆ ಹಳ್ಳಿಯವರ ಉದ್ದಾರ ಎಂದು ಹೇಳುತ್ತಿರಲಿಲ್ಲ"[೩೩] ಎಂಬ ಮಾತನ್ನು ತಂದೆಯವರ ಬಳಿ ಪ್ರಸ್ತಾಪಿಸುತ್ತಾಳೆ. ಇಲ್ಲಿ ಸಹ ಕತೆಗಾರರು ಗಾಂಧೀಜಿಯ ಆಶಯಗಳೇನಾಗಿತ್ತು ಎಂಬುದನ್ನು ವಿವರಿಸುವ ಕೆಲಸ ಮಾಡುತ್ತಾರೆ. ಕರುಣಾ ಎಂಬ ವಿಧವಾ ಪಾತ್ರದ ಮೂಲಕ ಇಡೀ ಮಲ್ಲಿಗೆ ಹಳ್ಳಿಯ ಅಭಿವೃದ್ಧಿಯನ್ನು ಕತೆಗಾರ ಬಯಸುತ್ತಾನೆ.

ಮಲ್ಲಿಗೆ ಹಳ್ಳಿಯಲ್ಲಿ ಕೆಲವರು ಹೆಂಡ ಕುಡಿಯುವ ಚಟಕ್ಕೆ ಬಿದ್ದಿದ್ದು, ಕೆಲವು ಮನೆಗಳಲ್ಲಿ ಪ್ರತಿದಿನ ಗಂಡ ಹೆಂಡತಿಗೆ ಜಗಳ ಆಗುತ್ತಿರುತ್ತದೆ. ಒಮ್ಮೆ ಶೇಷುವಿನ ಮನೆಯಲ್ಲಿ ಅದೇ ನಡೆಯಿತು. ತುಂಬಾ ಹೆಂಡ ಕುಡಿದು ಬಂದ ಶೇಷು ಹೆಂಡತಿಯನ್ನು ಚೆನ್ನಾಗಿ ಬಡಿದ ಅದು ಊರಲೆಲ್ಲ ಹಬ್ಬಿತು. ಈ ಓಂದೆ ದೊಡ್ಡಲಕ್ಕಿ, ಮರಿಯಾಲಕ್ಕಿ ತಮ್ಮ ತಮ್ಮ ಹೆಂಡತಿಯರನ್ನು ಕುಡಿದ ಮತ್ತಿನಲ್ಲಿ ಹೊಡೆದಿದ್ದರೂ. ಆಗ ಊರಿನಲ್ಲಿ ಕರುಣಾ ಇರಲಿಲ್ಲ. ಈರನು ಹೆಂಡತಿಯನ್ನು ಹೊಡೆದ ದಿನ ಊರೊಳಗೆ ಬಂದಿದ್ದಳು. ಈ ವಿಚಾರಗಳು ಕರುಣಾಳಿಗೆ ಗೊತ್ತಾಗಿ ಗಾಂಧೀಜಿಯ

ಪಾನ ವಿರೋಧ ಚಳುವಳಿ ಕುರಿತು ತನ್ನ ತಂದೆಯೊಂದಿಗೆ ಚರ್ಚಿಸಿ ಇಡೀ ಮಲ್ಲಿಗೆ ಹಳ್ಳಿಯಲ್ಲಿ ಪಾನವಿರೋಧ ಚಳುವಳಿ ಆರಂಭವಾಯಿತು. ಇದು ಇಲ್ಲಿಗೆ ನಿಲ್ಲಲಿಲ್ಲ ಊರಿನಲ್ಲಿ ಎಲ್ಲಿ ನೋಡಿದರೂ ಸಂಘ ಸಂಸ್ಥೆಗಳು, ವಿಧವಾ ವಿವಾಹ ಇತ್ಯಾದಿಗಳು ಹೆಚ್ಚು ಪ್ರಚಾರಕ್ಕೆ ಬಂದವು. ಶಾಮಣ್ಣ, ಮುತ್ತಣ್ಣ, ರಾಮು, ಗೋಪಾಲ ಎಲ್ಲರೂ "ಹಿಂದು ಸಮಾಜ ಉಳಿಯಬೇಕಾದರೆ ವಿಧವಾ ವಿವಾಹ ಅತ್ಯಾವಶ್ಯಕ. ಇದುವರೆಗೆ ನಾವು ಕುರುಡರಾಗಿದ್ದೇವೆ. ಈಗ ನಮ್ಮ ಕಣ್ಣು ತೆರೆಯಿತು. ಎಚ್ಚೆತ್ತ ನಾವು ಇನ್ನು ಮಲಗುವುದಿಲ್ಲ ಹಿರಿಯರ ಮೇಲುಪಂಕ್ತಿ ಇನ್ನು ನಮಗೆ ಸಾಕು. ವಿಧವೆಯರ ಕಣ್ಣೀರು ಕಾಲುವೆ ಹರಿಯುವುದು ಇಂದಿಗೆ ನಿಂತಿತು. ದೇಶಕ್ಕೆ ಮೇಲು ಪಂಕ್ತಿಗು' ಆಗುವಂತೆ ನಮ್ಮ ಯುವಕರೆಲ್ಲಾ ವಿಧವಾ ವಿವಾಹವನ್ನೇ ಮಾಡಿಕೊಳ್ಳಬೇಕು"[೩೪] ಎಂದು ತೀರ್ಮಾನಿಸಿದರು. ಅಲ್ಲಿಂದ ಮಲ್ಲಿಗೆ ಹಳ್ಳಿಯಲ್ಲಿ ವಿಧವಾ ವಿವಾಹದ ಕಿಚ್ಚು ತುಂಬಾಕಡೆ ಹರಡಿತು. ಕರುಣಾ ಊರಿಗೆ ಬಂದಾಗಿನಿಂದ ಒಂದಿಲ್ಲ ಒಂದು ರೀತಿಯ ಬದಲಾವಣೆಗಳು ಪ್ರತಿನಿತ್ಯ ಮಲ್ಲಿಗೆಹಳ್ಳಿಯಲ್ಲಿ ನಡೆಯುತ್ತಿದ್ದವು. ಆದರೆ ಕರುಣಾ ತನ್ನ ಗಂಡ ರಾಮಚಂದ್ರನೊಂದಿಗೆ ಮದರಾಸಿಗೆ ಹೋದಳು. ಹಳ್ಳಿಯಲ್ಲಿ ಅದೇ ಜಡ್ಡುಗಟ್ಟಿದ್ದ ಆಚರಣೆಗಳು ಜಾರಿಗೆ ಬಂದವು. ವಿಧವಾ ವಿವಾಹ, ಗ್ರಾಮಪುನರುಜ್ಜೀವನ ಎಲ್ಲಾ ಮಾತು ನಿಂತೇ ಹೋಯಿತು. ಹೀಗೆ ಈ ಕತೆಯಲ್ಲಿ ಗೊರೂರರು ಶಿಕ್ಷಣದ ಬಗ್ಗೆ, ಅದರಲ್ಲೂ ಮಹಿಳೆಗೆ ಶಿಕ್ಷಣ ಕೊಟ್ಟರೇ ಏನೆಲ್ಲ ಸಾಧ್ಯ ಎಂಬುದನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ.

೬.೫. ನಗರ

ಗೊರೂರು ತಮ್ಮ ಕತೆಗಳಲ್ಲಿ ಹಳ್ಳಿಯನ್ನೇ ಮುಖ್ಯವಸ್ತುವಾಗಿ ಬಳಸಿಕೊಂಡರು, ಕೆಲವು ಕತೆಗಳನ್ನು ನಗರಕ್ಕೆ, ನಗರ ಜೀವನಕ್ಕೆ ಸಂಬಂಧಿಸಿದಂತೆ ಕೆಲವು ಕತೆಗಳನ್ನು ರಚಿಸಿದ್ದಾರೆ. ಮೊದಲ ದೀಪಾವಳಿ ಕತೆಯಲ್ಲಿ ನಗರಕ್ಕೆ ಸಂಬಂಧ ಪಟ್ಟ ಅನೇಕ ಅಂಶಗಳು ಚಿತ್ರಿತವಾಗಿವೆ. ಶಾಮಣ್ಣನವರ ಬೀಗ ಶ್ರೀನಿವಾಸಯ್ಯ ಬೆಂಗಳೂರಿನಲ್ಲಿ ವಾಸವಾಗಿದ್ದ, ದೀಪಾವಳಿ ಹಬ್ಬಕ್ಕೆ ತನ್ನ ಅಳಿಯನಾದ ವಾಸುನನ್ನು ಕಳುಹಿಸುವಂತೆ ಕಾಗದವನ್ನು ಬರೆದಿದ್ದ. ಈ ಕಾಗದ ಕುರಿತು ಕಥೆ ಹೆಚ್ಚು ಬೆಳಕು ಚೆಲ್ಲುತ್ತದೆ. ಶಾಮಣ್ಣ ಹಳ್ಳಿಯಲ್ಲಿ ವಾಸವಾಗಿದ್ದು ವಿಶಾಲವಾದ ಮನೆ, ನದಿಯನೀರು, ಬಯಲಿನ ಗಾಳಿ, ಒಂದು ರೀತಿಯ ವಿರಾಮ ಇವೆಲ್ಲವುಗಳನ್ನು ಪ್ರತಿದಿನ ಸವಿಯುತ್ತಿದನು. ಹೀಗಿರುವಾಗ ಒಂದು ದಿನ ಬೀಗರ ಮನೆಗೆ ಬೆಂಗಳೂರಿಗೆ ಹೋಗಿರುತ್ತಾನೆ. ಅಲ್ಲಿ ತನಗೆ ಆದ ಕಷ್ಟವನ್ನು ಶಾಮಣ್ಣ ನರಹರಿಗೆ ಈ ರೀತಿ ವಿವರಿಸುತ್ತಾನೆ. "ನೋಡಪ್ಪ ನರಹರಿ, ನಿನಗೆ ಹಿಂದೆಯೇ ಹೇಳಿದೆನಲ್ಲ, ಬೀಗರ ಮನೆಯಲ್ಲಿ ನನಗೆ ಆದ ಮರ್ಯಾದೆ! ಅಕ್ಕಿಯೋ ಆನೆ ಅಕ್ಕಿ, ಕಾಫಿ ಕಲಗಚ್ಚು, ಬಾಯಿಗೆ ಹಾಕೋಗೆ ಆಗಲಿಲ್ಲ. ಇನ್ನು ಉಪ್ಪಿಟ್ಟೋ? ಬರಿಯ ಹಿಟ್ಟು, ಅದ್ಯಾವ ಸೀಮೆ ರವೆಯೋ ದೇವರಿಗೆ ಗೊತ್ತು. ಇನ್ನು ಹಾಲೋ? ಹಾಲೇನಯ್ಯ, ಬೆಕ್ಕು ಕೂಡ ಆ ಹಾಲನ್ನು ಮುಟ್ಟೋದಿಲ್ಲ. ತರಕಾರಿ ಹೆಸರೇ ಇಲ್ಲ. ಹೋಗಲಿ ಅಂದರೆ ಕುಡಿಯೋ ನೀರಿಗೂ ದರಿದ್ರವೇನಯ್ಯಾ ಯಾವಾಗ

ನೋಡಲಿ ನಲ್ಲಿ ಬಂದ್. ಬೆಂಗಳೂರಲ್ಲಿ ಎಲ್ಲಾ ಇಷ್ಟು ಅಧ್ವಾನ ಅಂತ ನಾನು ತಿಳಿದುಕೊಂಡಿರಲಿಲ್ಲ. ಇನ್ನೂ ಕೇಳು, ಅಭ್ಯಂಜನ, ದೇವರೇ ಗತಿ! ಮೈಗೆಲ್ಲಾ ಎಣ್ಣೆ ಬಳಕೊಂಡು ನಿಂತೀದೀನಿ. ಹಂಡೇಲಿ ನೀರು ಕೊತಕೊತನೆ ಕುದೀತಿದೆ. ಇದ್ದಕ್ಕಿದ್ದಂತೆ ಯಾವತ್ತೂ ನಿಲ್ಲದ ನೀರು ಅವತ್ತು ನಿಂತು ಬಿಡೋಣವೇ? ಎಲ್ಲೋ ದಾರೀಲಿ ಕೊಳವೆ ಒಡೆದು ನೀರು ಬಯಲು ಬಿದ್ದು ಹೋಗುತ್ತಿತ್ತಂತೆ ಅದು ಸರಿಯಾದ್ದು ಅರ್ಧರಾತ್ರಿಗೆ ಎಣ್ಣೆ ಬಳಕೊಂಡಿದ್ದ ನನ್ನ ಪಾಡು ಏನಾಗಿರ್ಬೇಕು ಯೋಚಿಸಿಕೊ, ಬಂದ ಮೇಲೆ ನನಗೆ ಒಂದು ತಿಂಗಳು ಬೇಕಾಯಿತು. ಸುಧಾರಿಸಿಕೊಳ್ಳೊಕೆ."[೩೫] ಇದು ಶಾಮಣ್ಣ ಬೆಂಗಳೂರಿನಲ್ಲಿ ಬೀಗರ ಮನೆಯಲ್ಲಿ ಅನುಭವಿಸಿದ ಕಷ್ಟವನ್ನು ನರಹರಿಗೆ ಹೇಳುತ್ತಾನೆ. ಇದು ಅವನಿಗೆ ಹೇಳಿದ್ದು ಹತ್ತನೇ ಸರ್ತಿ. ಅಂದರೆ ಹಳ್ಳಿಯಲ್ಲಿಯೇ ಇದ್ದ ಶಾಮಣ್ಣ ಈ ರೀತಿಯ ತೊಂದರೆಯನ್ನು ಅನುಭವಿಸಿದ್ದ. ಇಲ್ಲಿ ನಮಗೆ ಮುಖ್ಯವಾಗಿ ಕಂಡು ಬರುವುದೆಂದರೆ ಹಳ್ಳಿಯಿಂದ ನಗರಕ್ಕೆ ಹೋದಾಗ ಎದುರಿಸುವ ಸಮಸ್ಯೆಗಳು, ಅಲ್ಲಿರುವ ವ್ಯವಸ್ಥೆ ಇತ್ಯಾದಿಗಳನ್ನು ನಾವು ಇಲ್ಲಿ ಗಮನಿಸಬಹುದು. ಗೊರೂರರು ಕತೆಗಳನ್ನು ಬರೆಯಲು ಗಾಂಧೀಜಿ ಪ್ರೇರಣೆಯಾಗಿರುವಂತೆ, ಹಳ್ಳಿಯಿಂದಲೂ ಪ್ರೇರಣೆ ಪಡೆದಿದ್ದಾರೆ. ಅವರ ಕಥೆಗಳಲ್ಲಿನ ಬಹುತೇಕ ವಸ್ತು ಹಳ್ಳಿಯೇ ಆಗಿದೆ. ಜನ ಬದುಕನ್ನು ಕತೆಗಳಲ್ಲಿ ಗೊರೂರರು ತುಂಬಾ ಶ್ರದ್ಧೆಯಿಂದ ನಿರ್ವಹಿಸಿದ್ದಾರೆ.

ಈ ಕತೆಯ ವಸ್ತುವೇ ನಗರ ಮತ್ತು ಹಳ್ಳಿಯ ಭಿನ್ನತೆಯನ್ನು ಗುರುತಿಸುವುದಾಗಿದೆ. ಶಾಮಣ್ಣನವರು ಬೀಗರ ಮನೆಗೆಂದು ಬೆಂಗಳೂರಿಗೆ ಹೋಗಿದ್ದಾಗ ನಡೆದ ಒಂದು ಘಟನೆಯನ್ನು, ಪದೇ ಪದೇ ಅದನ್ನು ಹೇಳುವ, ತನ್ನ ಮಗ ವಾಸುವಿಗೂ ಬೆಂಗಳೂರಿನ ಸಹವಾಸ ಬೇಡ ಎಂದು ಹೇಳುತ್ತಾನೆ. ಶಾಮಣ್ಣನವರಿಗೆ ನಗರ ಎಂದರೆ ನರಕ ಎನ್ನುವಷ್ಟು ನಗರದ ಮೇಲೆ ದ್ವೇಷ ಉಂಟಾಗಿರುತ್ತದೆ. ಒಮ್ಮೆ ತನ್ನ ಮಗ ವಾಸುವಿಗೆ ಬೆಂಗಳೂರನ್ನು ಕುರಿತು "ಇಲ್ಲಿ ಮನುಷ್ಯ ಕೈಕಾಲು ಮುರಿದುಕೊಂಡೇ ಕುಳಿತಿರಬೇಕು. ಕಾಲು ನೀಡುವುದಕ್ಕೂ ಅವಕಾಶವಿಲ್ಲ. ಗಾಳಿಗೆ ದುಡ್ಡು ಬೆಳಕಿಗೂ ದುಡ್ಡು ನೀರಿಗೆ ದುಡ್ಡು ಕುಳಿತಿದ್ದರೆ ನಿಂತಿದ್ದರೆ, ತಿರುಗಾಡಿದರೆ ಎಲ್ಲಕ್ಕೂ ದುಡ್ಡು ಹಾಳು ಊರಿನ ಸಂಬಂಧ"[೩೬] ಎಂದು ಮಗನಿಗೆ ಶಾಮಣ್ಣ ಹೇಳುತ್ತಾನೆ. ಅಷ್ಟೇ ಅಲ್ಲ ಬೀಗರಿಗೆ ಇನ್ನು ನಿನ್ನ ಮನೆ ಮೆಟ್ಟಿಲು ತುಳಿಯೋಲ್ಲ ಅಂತ ಕಾಗದವನ್ನೂ ಬರೆಯುತ್ತಾನೆ. ಅದಕ್ಕೆ ಪ್ರತಿಯಾಗಿ ಅವರ ಬೀಗ ನಾನು ನಿನ್ನ ಮನೆ ಮೆಟ್ಟಿಲು ತುಳಿಯೊಲ್ಲ. ಅಂತ ಕಾಗದ ಬರೆಯುತ್ತಾರೆ. ಹೀಗೆ ಗೊರೂರು ಹಳ್ಳಿ ಮತ್ತು ನಗರದ ಮುಖಾಮುಖಿಯನ್ನು ಹಲವು ಕಥೆಗಳಲ್ಲಿ ಕಥಾವಸ್ತುವಾಗಿ ಬಳಸಿಕೊಂಡಿದ್ದಾರೆ.

'ಉತ್ತರಾಧಿಕಾರಿ' ಕತೆಯಲ್ಲಿ ಬರುವ 'ಸದಾಶಿವ'ನ ಮಗ ವಿಶ್ವೇಶ್ವರ ಓದಿ ಉದ್ಯೋಗ ಸೇರಿದ ನಂತರ ಹಳ್ಳಿಯ ಬಗ್ಗೆ ತಿರಸ್ಕಾರ ಮನೋಭಾವ ವ್ಯಕ್ತಪಡಿಸುತ್ತಾನೆ. ಅವನು ನಗರದ ಹುಡುಗಿಯನ್ನು ಮದುವೆಯಾಗಿದ್ದರಿಂದ ಅವಳು ಕೂಡ ನಗರದ ವಾತಾವರಣವನ್ನೇ ಬಯಸುತ್ತಾಳೆ. ಸದಾಶಿವ ಹಳ್ಳಿಯಲ್ಲಿ ಭೂಮಿಯನ್ನು ತೆಗೆದುಕೊಂಡು. ಶ್ರಮ-ಶ್ರದ್ಧೆಯಿಂದ ಹೊಲವನ್ನು ಬೃಂದಾವನವನ್ನಾಗಿ ಮಾಡುತ್ತಾನೆ. ಅನೇಕ ಹೂವುಗಳನ್ನು ಬೆಳೆದು ದಾನಮಾಡುತ್ತಾನೆ. ತೆಂಗು. ಅಡಿಕೆ ಸಸಿಗಳನ್ನು

ಹಾಕಿ ಪುಣ್ಯಕ್ಷೇತ್ರವಾಗುವಂತೆ ಮಾಡುತ್ತಾನೆ. ಆದರೆ ವಿಶ್ವೇಶ್ವರ ಅದನ್ನು ಕಡಿಮೆ ಬೆಲೆಗೆ ಮಾರುತ್ತಾನೆ. ನಾಲ್ಕು ವರ್ಷಗಳಲ್ಲಿ ಸದಾಶಿವನ ಮಗನಿಗೆ ಎರಡು ಮೂರು ಊರಿಗೆ ವರ್ಗವಾಯಿತು. ಅವನಿಗೆ ಎರಡು ಮಕ್ಕಳಾಗಿದ್ದರು. ತನ್ನ ಹೆಂಡತಿಯನ್ನು ತಂದೆಯ ಹಳ್ಳಿಗೆ ಒಂದು ಸಲ ಕೂಡ ಕರೆದುಕೊಂಡು ಬರುವುದಿಲ್ಲ. ಅವಳಿಗೂ ಹಳ್ಳಿಗೂ ಆಗಿಬರುತ್ತಿರಲಿಲ್ಲ.

ಆಧುನಿಕತೆಯಿಂದ ಬಂದ ಶಿಕ್ಷಣ ಹೇಗೆ ಹಳ್ಳಿಯ ಜನರ ಮೇಲೆ ಪರಿಣಾಮ ಬೀರಿತ್ತು ಎಂಬುದನ್ನು ಕಥೆಗಾರ ಇಲ್ಲಿ ಸೂಕ್ಷ್ಮವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ. ಶಿಕ್ಷಣ ಪಡೆದ ಯುವಕ ಯುವತಿಯರು ಆಧುನಿಕತೆಯನ್ನು ಹೇಗೆ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ ಎಂಬುದಕ್ಕೆ ಈ ಕತೆ ಉತ್ತಮ ನಿದರ್ಶನ.

ಅಡಿಟಿಪ್ಪಣಿಗಳು

೧. ಗೊರೂರು, ಕನ್ಯಾಕುಮಾರಿ ಮತ್ತು ಇತರೆ ಕತೆಗಳು, ಪುಟ–೧೨
೨. ಅದೇ, ಪುಟ–೫೦
೩. ಅದೇ, ಪುಟ–೧೯೦
೪. ಗೊರೂರು, ವೈಯ್ಯಾರಿ, ಪುಟ–೨೦೬
೫. ಗೊರೂರು, ಮರೆಯಾದ ಮಾರಮ್ಮ, ಪುಟ–೧೭
೬. ಅದೇ, ಪುಟ–೨೧
೭. ಗೊರೂರು, ವೈಯ್ಯಾರಿ, ಪುಟ–೩೧
೮. ಅದೇ, ಪುಟ–೫೨
೯. ಅದೇ, ಪುಟ–೫೮
೧೦. ಅದೇ, ಪುಟ–೭೧
೧೧. ಅದೇ, ಪುಟ–೬೬
೧೨. ಅದೇ, ಪುಟ–೧೧೨
೧೩. ಅದೇ, ಪುಟ–೧೨೧
೧೪. ಅದೇ, ಪುಟ–೨೫೦
೧೫. ಅದೇ, ಪುಟ–೨೫೬
೧೬. ಗೊರೂರು, ಕಮ್ಮಾರ ವೀರಭದ್ರಾಚಾರಿ, ಪುಟ–೩೫
೧೭. ಅದೇ, ಪುಟ–೩೭
೧೮. ಅದೇ, ಪುಟ–೭೭
೧೯. ಗೊರೂರು, ವೈಯ್ಯಾರಿ, ಪುಟ–೬೪
೨೦. ಅದೇ, ಪುಟ–೬೫

೨೧. ಅದೇ, ಪುಟ-೮೬

೨೨. ಅದೇ, ಪುಟ-೨೫೦

೨೩. ಅದೇ, ಪುಟ-೨೫೩

೨೪. ಗೊರೂರು, ಕನ್ಯಾಕುಮಾರಿ ಮತ್ತು ಇತರ ಕತೆಗಳು, ಪುಟ-೪೬

೨೫. ಗೊರೂರು, ಕಮ್ಮಾರ ವೀರಭದ್ರಾಚಾರಿ, ಪುಟ-೮೩

೨೬. ಗೊರೂರು, ವೈಯ್ಯಾರಿ, ಪುಟ-೧೩೪

೨೭. ಅದೇ, ಪುಟ-೧೩೫

೨೮. ಗೊರೂರು, ಮರೆಯಾದ ಮಾರಮ್ಮ, ಪುಟ-೧೩೬

೨೯. ಅದೇ, ಪುಟ-೧೩೭

೩೦. ಅದೇ, ಪುಟ-೧೩೮

೩೧. ಗೊರೂರು, ಶಿವರಾತ್ರಿ, ಪುಟ-೫೭

೩೨. ಅದೇ, ಪುಟ-೫೮

೩೩. ಅದೇ, ಪುಟ-೬೩

೩೪. ಅದೇ, ಪುಟ-೬೬

೩೫. ಗೊರೂರು, ಕಮ್ಮಾರ ವೀರಭದ್ರಾಚಾರಿ, ಪುಟ-೩೩

೩೬. ಅದೇ, ಪುಟ-೨೩

ಅಧ್ಯಾಯ – ಏಳು

ಮಾಸ್ತಿ ಆನಂದ ಮತ್ತು ಗೊರೂರು ಕತೆಗಳ ತೌಲನಿಕ ಅಧ್ಯಯನ

ಅಧ್ಯಾಯ - ಏಳು

ಮಾಸ್ತಿ ಆನಂದ ಮತ್ತು ಗೊರೂರು ಕತೆಗಳ ತೌಲನಿಕ ಅಧ್ಯಯನ

ಈಗಾಗಲೇ ಹಿಂದಿನ ಅಧ್ಯಾಯಗಳಲ್ಲಿ ಮಾಸ್ತಿ, ಆನಂದ, ಗೊರೂರರ ಕತೆಗಳನ್ನು ಕುರಿತು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಆದರೆ ಈ ಅಧ್ಯಾಯದಲ್ಲಿ ಮೂರು ಜನ ಕತೆಗಾರರನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಕಾರಣ ಯಾವ ಕತೆ ಉತ್ತಮ, ಒಬ್ಬ ಕತೆಗಾರ ಉತ್ತಮವೆಂದು ಕರೆಯಬೇಕಾದರೆ ಅದನ್ನು ಬೇರೊಬ್ಬ ಕತೆಗಾರನೊಂದಿಗೆ/ಕತೆಯೊಂದಿಗೆ ಹೋಲಿಸಿದಾಗ ಮಾತ್ರ ನಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆ. ಈ ದೃಷ್ಠಿಯನ್ನಿಟ್ಟುಕೊಂಡು ಮೂರು ಜನ ಕತೆಗಾರರ ಸಣ್ಣ ಕತೆಗಳಲ್ಲಿ ಕಂಡು ಬರುವ ಸಾಮ್ಯತೆ, ಭಿನ್ನತೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿ ಕತೆಗಳ ವಸ್ತು, ಪಾತ್ರ ದೃಷ್ಠಿ ಹಾಗೂ ಅಭಿವ್ಯಕ್ತಿಯ ದೃಷ್ಠಿಯಿಂದ ಅಧ್ಯಯನ ಮಾಡಲಾಗಿದೆ.

*** ವಸ್ತುವಿನ ದೃಷ್ಠಿಯಿಂದ**

ಪ್ರತಿಯೊಂದು ಕತೆ ಯಶಸ್ವಿಯಾಗುವುದು ಕತೆಯಲ್ಲಿರುವ ವಸ್ತುವಿನ ಮೇಲೆ, ಅಲ್ಲಿ ಕತೆಗಾರನ ಆಶಯ ವ್ಯಕ್ತವಾಗಿದ್ದು, ಪಾತ್ರಗಳ ರಚನಾ ಕ್ರಮಗಳು ಅದನ್ನು ವ್ಯಕ್ತಪಡಿಸುತ್ತವೆ. ಹಾಗಾಗಿ ಕತೆಯ ವಸ್ತು ಅದರ ಮೂಲ ಅಂಶ. ಈ ಹಿನ್ನೆಲೆಯಲ್ಲಿ ಮಾಸ್ತಿ, ಆನಂದ, ಗೊರೂರರ ಕತೆಗಳ ವಸ್ತು ಮೇಲುನೋಟಕ್ಕೆ ಒಂದೇ ಆಗಿ ಕಂಡುಬಂದರೂ, ಅವುಗಳನ್ನು ಅಧ್ಯಯನ ಮಾಡಿದಾಗ ವಸ್ತುವಿನಲ್ಲಿರುವ ಕೆಲವೊಂದು ಸೂಕ್ಷ್ಮವಾದ ವ್ಯತ್ಯಾಸಗಳು ಕಂಡುಬರುತ್ತವೆ.

ಮಾಸ್ತಿಯವರು ತಾನು ಬರೆದ ಕತೆಗಳನ್ನು ಕುರಿತು ಈ ರೀತಿ ಹೇಳುತ್ತಾರೆ. "ನನ್ನ ಕತೆಗಳನ್ನು ಬರೆಯುವಲ್ಲಿ ನನ್ನ ಉದ್ದೇಶ ಒಂದು ಎಂದು ನಾನು ಹಲವು ಸಂದರ್ಭಗಳಲ್ಲಿ ಹೇಳಿದ್ದೇನೆ. ಆ ಉದ್ದೇಶ, ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇಂದಿನ ಹಿಂದಿನ, ನಮ್ಮ ನಾಡಿನ, ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ, ಐತಿಹಾಸಿಕ ಜೀವನ ಚಿತ್ರಗಳು ನನ್ನ ಕಥೆಗಳಲ್ಲಿ ಕಾಣುತ್ತೇವೆ. ಇವು ಸತ್ಯವನ್ನು ಬಿಂಬಿಸಿವೆ.

ಸ್ಫುಟವಾಗಿವೆ, ಇಷ್ಟೊ ಅಷ್ಟೊ ರಸಾನುಭವವನ್ನು ನೀಡುತ್ತವೆ ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು"[13] ಎಂದು ಹೇಳಿದ್ದಾರೆ. ಅಂದರೆ ಅವರು ಬರೆದ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಕತೆಗಳೆಲ್ಲವೂ ಅವರಿಗೆ ನೀಡಿದ ಅನುಭವಗಳಾಗಿದ್ದು ಅವುಗಳನ್ನು ಓದುಗರಿಗೆ ಹೇಳುತ್ತಿದ್ದೇನೆಂದು ತಮ್ಮ ಮಾತನ್ನು ವ್ಯಕ್ತಪಡಿಸುತ್ತಾರೆ. ಅದಕ್ಕಾಗಿ ಮಾಸ್ತಿಯವರು ನವೋದಯ ಕತೆಗಾರರ ಸಾಲಿನಲ್ಲಿ ಮುಖ್ಯ ಎನಿಸಿಕೊಳ್ಳುತ್ತಾರೆ. ಅವರ ಕತೆಗಳು ಯಾವುದೋ ಒಂದು ವಸ್ತು ವಿಷಯಕ್ಕೆ ಸೀಮಿತವಾಗದೆ, ವಸ್ತುವಿನಲ್ಲಿ ವೈವಿಧ್ಯತೆ ಇದೆ. ತಳಸಮುದಾಯದಿಂದ ಹಿಡಿದು ಸಮಾಜದ ಅತ್ಯಂತ ಮೇಲ್ವರ್ಗದವರೆಗೂ ಅವರ ಕಥಾವಿಸ್ತಾರ ಹರಡಿಕೊಂಡಿದೆ.

ಮಾಸ್ತಿಯವರ ಆರಂಭದ ಕತೆಗಳಾದ ರಂಗಪ್ಪನ ದೀಪಾವಳಿ, ರಂಗಪ್ಪನ ಕೋರ್ಟ್‌ಶಿಪ್ ಈ ಕತೆಗಳಲ್ಲಿ ಕತೆಯನ್ನು ಹೇಳುವ ಶಾಮಣ್ಣ ಶಿಕ್ಷಣ ಪಡೆದು ಆಧುನಿಕತೆಗೆ ಒಳಗಾದ ಶಿಕ್ಷಿತ ಸಂವೇದನೆಯ ರಂಗಪ್ಪನಲ್ಲಿ ಅಮೂರ್ತವಾದ ಅವನ ಕಲ್ಪನೆ ಸಹೃದಯ ಮತ್ತು ವ್ಯಂಗ್ಯದಿಂದ ನೋಡುತ್ತಲೇ ಯಾವುದು ಸಮಾಜ ಒಪ್ಪಿಕೊಂಡಿರುತ್ತದೆಯೋ ಅದನ್ನು ರಂಗಪ್ಪನು ಒಪ್ಪಿಕೊಳ್ಳುವಂತಹ ಸನ್ನಿವೇಶಗಳನ್ನು ಕತೆಗಳಲ್ಲಿ ನೋಡುತ್ತೇವೆ. ಶಾಮಣ್ಣ ಹಿಂದಿನ ತಲೆಮಾರಿಗೆ ಸೇರಿದವನಾಗಿದ್ದು, ರಂಗಪ್ಪನ ಕೆಲವು ವಿಚಾರಗಳನ್ನು ಒಪ್ಪಿಕೊಳ್ಳುವುದಿಲ್ಲ. ಕಾರಣ ರಂಗಪ್ಪನ ವಿಚಾರಗಳು ಪರಂಪರೆಗೆ ವಿರುದ್ಧ ದಿಕ್ಕಿನಲ್ಲಿರುತ್ತವೆ. ಇಲ್ಲಿ ಮಾಸ್ತಿಯವರು ತನ್ನ ಆಶಯಕ್ಕೆ ದಕ್ಕೆ ಬರದಂತಲೇ ತನ್ನ ಜವಾಬ್ದಾರಿ ಮತ್ತು ಕೆಲಸವನ್ನು ನಿರೂಪಕನ ಮೇಲೆ ಹಾಕುತ್ತಾನೆ. ಅದು ಮಾಸ್ತಿಯವರ ತಂತ್ರವೂ ಹೌದು. ಯಾವುದೇ ವಸ್ತುವನ್ನು ನೇರವಾಗಿ ಹೇಳದೇ ಅದನ್ನು ನಿರೂಪಕ/ಇಲ್ಲವೇ ಮತ್ತೊಂದು ಪಾತ್ರದ ಮೂಲಕ ಹೇಳಿಸುವುದು. ಇಲ್ಲಿ ಮಾಸ್ತಿಯವರು ತಾನು ಕೇಳಿದ ಮತ್ತು ತನಗೆ ಹೇಳಿದ ಇಲ್ಲವೇ ತನ್ನ ಅನುಭವಕ್ಕೆ ಬಂದ ಅಂಶಗಳನ್ನು ಕತೆಗೆ ವಸ್ತುವಾಗಿ ಬಳಸಿಕೊಂಡಿದ್ದಾರೆ.

ಜೋಗ್ಯೋರ ಅಂಜಪ್ಪನ ಕೊಳಿಕತೆಯಲ್ಲಿ ತಮ್ಮ ಗ್ರಹಿಕೆಯ ಇಕ್ಕಟ್ಟು ಮತ್ತು ಸಂಕೋಚಗಳನ್ನು ಮೀರುವುದರಿಂದ ಅದು ಅವರ ಉತ್ತಮ ಕತೆಗಳಲ್ಲಿ ಒಂದಾಗಿದೆ. ಅಂಜಪ್ಪ ಭಿಕ್ಷೆಗಾಗಿ ಊರೂರು ಅಲೆಯುತ್ತಿದ್ದು ನಲವತ್ತು ವರ್ಷದ ಹಿಂದೆ ನಡೆದ ಒಂದು ಘಟನೆಯನ್ನು ಹೇಳುವಾಗ ಅವನಲ್ಲಿ ಯಾವುದೇ ರೀತಿಯ ಸಂಕೋಚ, ಆವೇಶ, ಸಿಟ್ಟನ್ನು ಮಾಡಿಕೊಳ್ಳದೇ ನಡೆದ ಘಟನೆಯನ್ನು ನಿರಾಯಾಸವಾಗಿ ರಂಗಪ್ಪನಿಗೆ ಹೇಳುತ್ತಾನೆ. ರಂಗಪ್ಪನಿಗೆ ತಾಲೂಕಿನ ಬೆಂಚ್‌ಮ್ಯಾಜಿಸ್ಟ್ರೇಟ್ ಹುದ್ದೆಯನ್ನು ಪಡೆದಿದ್ದು ಅದನ್ನು ನಿಬಾಯಿಸಲು ಮೈಯೆಲ್ಲಾ ಕಣ್ಣುಗಳು ಇರಬೇಕು ಎಂಬ ಎಚ್ಚರಿಕೆಯನ್ನು ಹೇಳುತ್ತಾನೆ. ಅಂಜಪ್ಪನಿಗೆ ಆದ ಅನುಭವವನ್ನು ಅವನೇ ಹೇಳಿರುವುದರಿಂದ ಕತೆಗೆ ಅಧಿಕೃತತೆ ಬರುತ್ತದೆ. ಇದು ಕಥೆಗಾರನ ತಂತ್ರವಾಗಿ ಕಂಡುಬರುತ್ತದೆ. ಇದು ನಡೆದಿದ್ದು ಮತ್ತು ಹೇಳುವುದರ ನಡುವೆ ಅನೇಕ ವರ್ಷಗಳೇ ಕಳೆದುಹೋಗಿವೆ.

ಕಲ್ಮಾಡಿಯ ಕೋಣ ಕತೆ, ಜನರಲ್ಲಿರುವ ಮೌಢ್ಯತೆಯನ್ನು ಪರಿಚಯಿಸುವ, ಅದರಿಂದಾಗುವ ಅನಾಹುತಗಳನ್ನು ಹೇಳುವ ಕೆಲಸ ಮಾಡುತ್ತವೆ. ಇಲ್ಲಿ ಹೇಗೆ ತಳಸಮುದಾಯಗಳು ಮೇಲ್ವರ್ಗದವರ

ಕೈಗೊಂಬೆಯಾಗಿವೆ ಎಂಬುದನ್ನು ಗಮನಿಸಬಹುದು. ಹಳ್ಳಿಯಲ್ಲಿರುವ ಮಾರಿಗೆ ಒಂದು ಕೋಣ, ಕುರಿ, ಕೋಳಿಯಿಂದ ತೃಪ್ತಿಯಾದರೆ, ಕಲ್ಮಾಡಿಯಲ್ಲಿರುವ ಕಲ್ಲಿನ ಮಾರಿಗೆ ಮಾತ್ರ ಮೂರು ವರ್ಷ ತುಂಬಿದ ಬಲಿತ ಕೋಣವೇ ಬಲಿಬೇಕಾಗುತ್ತದೆ. ಇದು ಆ ಹಳ್ಳಿಯ ಆಚರಣೆ/ನಂಬಿಕೆಯಾಗಿದೆ. ಒಮ್ಮೆ ಮುನಿಯಿಂದ ಆದ ಎಡವಟ್ಟಿನಿಂದಾಗಿ ಒಂದು ಗುಡಿ ಇರುವುದು ಎರಡು ಗುಡಿಗಳಾಗಿ ಎರಡು ಕೋಣಗಳನ್ನು ಬಲಿಕೊಡುವುದು ಆಚರಣೆಯಾಗಿ ಮುಂದುವರೆಯುತ್ತದೆ. ಇಲ್ಲಿ ಕಥೆಗಾರ ಪ್ರಾಣಿಯ ಬಲಿಯನ್ನು ಕೊಡುವ ಮತ್ತು ಅಲ್ಲಿನ ಜನರ ನಂಬಿಕೆಗಳನ್ನು ಹೇಳುವಾಗ ಸಹಾನುಭೂತಿಯಲ್ಲಿಯೇ ಅವುಗಳನ್ನು ಕತೆಗಳಲ್ಲಿ ಹೇಳುವ ಪ್ರಯತ್ನ ಮಾಡಿದ್ದಾರೆ.

ಮಾಸ್ತಿಯವರು ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಮಹಾನ್ ವ್ಯಕ್ತಿಗಳನ್ನು ಕುರಿತು ಕತೆಗಳನ್ನು ಬರೆದಿದ್ದಾರೆ. ಆದರೆ ಕತೆಗಳನ್ನು ಹೇಳುವ ಮತ್ತು ನಿರೂಪಿಸುವ ಕ್ರಮ ಬೇರೆ ಕತೆಗಾರರಿಗಿಂತ ಭಿನ್ನವಾಗಿದೆ. ಮಾಸ್ತಿಯವರ ನೇರವಾಗಿ ಪ್ರವೇಶಿಸುವುದಿಲ್ಲ. ಬದಲಾಗಿ ಬೇರೊಬ್ಬ ನಿರೂಪಕನನ್ನೋ ಇಲ್ಲವೇ ಪಾತ್ರವನ್ನು ಸೃಷ್ಠಿಸುವ ಮೂಲಕ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳುತ್ತಾರೆ.

ವೆಂಕಟಿಗನಹೆಂಡತಿ ಕತೆಯಲ್ಲಿ ಬರುವ ವೆಂಕಟಿಗ ಕಥೆಯ ನಾಯಕನಾಗಿದ್ದು, ಅವನಿಗೆ ಒಂದಲ್ಲ ಒಂದು ರೀತಿಯ ಸಮಸ್ಯೆಗಳು ಬಂದರೂ ಅವುಗಳನ್ನು ಸುಲಭವಾಗಿ ನಿಭಾಯಿಸುವುದನ್ನು ಕತೆಗಾರ ಈ ಕತೆಯಲ್ಲಿ ಹೇಳಿದ್ದಾರೆ. ಶ್ರೀರಾಮರು ಹೇಳಿದ ಕತೆಯನ್ನು ನಿರೂಪಕ ಹೇಳಿದ್ದಾನೆ. ಅದು ಶ್ರೀರಾಮನ ಅನುಭವದ ಒಂದು ಸಂಗತಿ. ವೆಂಕಟರಮಣ ಎಂಬುದು ವೆಂಕಟಿಗನ ಪೂರ್ವದ ಹೆಸರು. ಇವನಿಗೆ ಅತ್ತೆಯ ಮಗಳಾದ ರಂಗಿ ಎಂಬ ಹುಡುಗಿಯೊಡನೆ ವಿವಾಹವಾಗುತ್ತದೆ. ಆರಂಭದಲ್ಲಿ ಒಳ್ಳೆ ಸಂಸಾರಿಗಳಾಗಿ ಜೀವನ ಮಾಡಿದರು. ಆದರೆ ಪುಣ್ಯವಂತ ರೆಡ್ಡಿಯ ಕುತಂತ್ರದಿಂದ ರಂಗಿ ತನ್ನ ಗಂಡನನ್ನು ಬಿಟ್ಟು ರೆಡ್ಡಿಯೊಂದಿಗೆ ಮನೆಬಿಟ್ಟು ಹೋಗುತ್ತಾಳೆ. ತಿರುಗಿಬಾರದ ಹೆಂಡತಿಗಾಗಿ ಕಾಯದೇ ವೆಂಕಟಿಗ ಬೆಂಗಳೂರಿಗೆ ಹೋಗಿ ಜೀವನ ಸಾಗಿಸುತ್ತಾನೆ. ಕೊನೆಗೆ ಹೆಂಡತಿ ಮಗನೊಂದಿಗೆ ಬಂದಾಗ ಯಾವುದನ್ನು ಕೇಳದೇ ಹೆಂಡತಿಯನ್ನು ಸ್ವೀಕರಿಸುತ್ತಾನೆ.

ತನ್ನ ಹೆಂಡತಿಯು ಪರಪುರುಷನೊಂದಿಗೆ ಹೋದಾಗ, ಯಾರ ಮಾತನ್ನು ಕೇಳದೇ ತನಗೆ ಸರಿ ಅನಿಸಿದ್ದನ್ನು ಮಾತ್ರ ಮಾಡುತ್ತಾನೆ. ಸ್ವತಃ ಅವರ ಅತ್ತೆಯೇ ತನ್ನ ಮಗಳನ್ನು ಎಳೆದು, ಹೊಡೆದು ತಂದು ಸಂಸಾರ ಮಾಡು ಎಂದರೂ ಅದನ್ನು ಮಾಡದೇ ಅದನ್ನು ಎದುರಿಸಲು ಬೆಂಗಳೂರಿಗೆ ಹೋಗುತ್ತಾನೆ. ಆದರೂ ತನ್ನ ಹೆಂಡತಿಯ ಬಗ್ಗೆ ಒಳ್ಳೆಯ ಅಭಿಪ್ರಾಯವಿರುತ್ತದೆ.

"ಇಲ್ಲ ನಾಯನ, ಇಲ್ಲ, ತಿಳಿಯದ ಹುಡುಗಿ, ಈಗಲೂ ಅಷ್ಟೇ ಅವಳೇನು ತಿಳಿದ ಹೆಂಗಸಲ್ಲ, ಪಾಪ".

"ಮಗು ಯಾರದರೇನು? ಬಾಲಗೋಪಾಲ, ಸಾಕಿದವರು ಪುಣ್ಯವಂತರು"

"ಹೆಣ್ಣು ಜೀವ, ಹಗೆ ಸತ್ತರೂ ಅಳಬೇಕು"

"ನಮ್ಮ ಸ್ವಾಮಿಯವರು ಎಂತ ಹೇಳ್ತೇನೆ. ತಾಯೀನ ಮಗೂನ ಹರಸಿ. ಆದರೆ ಊರಿನ ಸಂಗತಿ ನಿಮಗೆ ತಿಳಿದಿದೆ ಎನ್ನುವುದನ್ನು ತೋರಿಸಿಕೊಳ್ಳಬೇಡಿ. ಅವಳು ಮನಸ್ಸು ಚಿಕ್ಕದು

ಮಾಡಿಕೊಳ್ಳುತ್ತಾಳೆ."[3] ವೆಂಕಟಿಗನ ಹೆಂಡತಿ ಕತೆಯಲ್ಲಿ ಸಂಘರ್ಷಕ್ಕೆ ಎಷ್ಟು ಅವಕಾಶಗಳಿದ್ದರೂ, ಅವುಗಳನ್ನು ಸಂಘರ್ಷಕ್ಕೆ ಒಡ್ಡದೇ ಕತೆಯನ್ನು ಮುಂದುವರಿಸಿದ ಕತೆಗಾರರ ತಂತ್ರ ಯಶಸ್ವಿಯಾಗಿದೆ. ಮಾಸ್ತಿಯವರ ಬಹುತೇಕ ಕತೆಗಳಲ್ಲಿ ಎಲ್ಲಿ ಪರಂಪರೆಗೆ ಹಾನಿ ಅಥವಾ ದಕ್ಕೆಯುಂಟಾಗುತ್ತದೆಯೋ ಅಲ್ಲಿ ಆ ಪಾತ್ರವನ್ನು ಸಾಯಿಸುವುದು ಕಂಡುಬರುತ್ತದೆ. ವೆಂಕಟಶಾಮಿಯ ಕತೆಯಲ್ಲಿಯೂ ಕೂಡ ಇದೇ ಆಗಿದೆ. ವೆಂಕಟಶಾಮಿ ದೊಂಬರ ಹುಡುಗಿಯ ಪ್ರೀತಿಗೆ ಸಿಲುಕಿ, ಅವಳನ್ನು ಮದುವೆಯಾಗಲು ಒಪ್ಪಿಕೊಂಡಿರುತ್ತಾನೆ. ಆದರೆ ಸಂಪ್ರದಾಯಸ್ಥ ಸಮಾಜ ಅದಕ್ಕೆ ಮನ್ನಣೆ ಕೊಡುವುದಿಲ್ಲ. ಅದನ್ನು ಎದುರಿಸಲು ಬೆಂಗಳೂರಿಗೆ ಹೋಗುವ ಉಪಾಯ ಮಾಡುತ್ತಾನೆ. ಅದು ಕೈಗೂಡದಿದ್ದಾಗ ಜ್ವರ ಬಂದು ಸಾಯುತ್ತಾನೆ. ಇದು ಮಾಸ್ತಿಯವರದು ಪರಂಪರವಾದಿ ಮನಸ್ಸು ಎಂಬುದಕ್ಕೆ ಸಾಕ್ಷಿಯಾಗಿವೆ.

ಗೊರೂರರ ಕತೆಗಳ ವಸ್ತು ಹಲವು ಬಗೆಯಲ್ಲಿ ಭಿನ್ನವಾಗಿವೆ. 'ವೈಯ್ಯಾರಿ' ಗೊರೂರರ ಕಥಾ ಸಂಕಲನಗಳಲ್ಲಿ ಒಂದಾಗಿದ್ದು, ಕಥಾ ಸಂಕಲನದಲ್ಲಿ ಬರುವ ಕತೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. 'ಗಂಡುಬೀರಿ ಹೊಸಬಿ' ಕತೆಯಲ್ಲಿ ಬರುವ ಕತೆಯ ನಾಯಕಿ 'ಹೊಸಬಿ' ಬದುಕುವ ರೀತಿಯನ್ನು ಇಡೀ ಹಳ್ಳಿಯೇ ಆಶ್ಚರ್ಯಪಡುವಂತೆ ಮಾಡುತ್ತದೆ. ಬೋರನು ಹೊಸಬಿಯ ತಂದೆಯಾಗಿದ್ದು, ಕುಡಿತದ ಚಟಕ್ಕೆ ದಾಸನಾಗಿರುತ್ತಾನೆ. ತನ್ನ ಜಾತಿಗೆ ವಿರುದ್ಧವಾದ ಕೆಲಸವನ್ನು ಮಾಡುತ್ತಾನೆ. ಮದುವೆಯಾದ ಹೆಣ್ಣು ಸಹ ಬೇರೆಯ ಪಂಗಡಕ್ಕೆ ಸೇರಿದವಳಾಗಿರುತ್ತಾಳೆ. ಮದುವೆಯಾಗಿ ಕೆಲವು ವರ್ಷಗಳ ನಂತರ ಹೆಂಡತಿ ಸಾವನ್ನಪ್ಪುತ್ತಾಳೆ. ಆಗ ಬೋರನಿಗೆ ದಿಕ್ಕು ಕಾಣದಂತಾಗುತ್ತದೆ. ಅದೇ ವೇಳೆಗೆ ಅವನ ಕಾಲು ಮರದ ಬುಡಕ್ಕೆ ಎಡವಿ ತೊಡೆಗಳು ಜಜ್ಜಿ ಹೋಗುತ್ತವೆ. ಕಾಲು ಕುಂಟಾಗಿ ಅವುಗಳ ಸ್ವಾಧೀನ ಅವನಿಗೆ ತಪ್ಪಿಹೋಯಿತು.

ಬೋರನಿಗೆ ಮೂರು ಜನ ಮಕ್ಕಳಿದ್ದೂ, ಅವರನ್ನು ನೋಡಿಕೊಳ್ಳಲು ಯಾರು ಇರುವುದಿಲ್ಲ. ಸಂಪಾದನೆಯೂ ಇಲ್ಲವಾಗಿ ಹಿರಿಯ ಮಗಳಾದ ಹೊಸಬಿಯನ್ನು ಹಳ್ಳಿಯ ಶ್ಯಾನುಭೋಗರ ಮನೆಯಲ್ಲಿ ಜೀತಕ್ಕೆ ಹಾಕಬೇಕೆಂದು ಯೋಚಿಸುತ್ತಾನೆ. ಆದರೆ ಹೊಸಬಿ ಅದನ್ನು ಒಪ್ಪಿಕೊಳ್ಳದೇ ಜೋಡಿದಾರರಿಂದ ಒಂದು ಕುಂಟ ಹಸುವನ್ನು, ಅದನ್ನು ಮೇಯಿಸಲು ಸ್ವಲ್ಪ ನೆಲವನ್ನು ಕೇಳಿ ಪಡೆಯುತ್ತಾಳೆ. ಜೊತೆಗೆ ಮನೆಯಲ್ಲಿದ್ದ ಬೆಳ್ಳಿಯ ಒಡವೆಗಳನ್ನು ಮಾರಿ ಕೋಳಿಗಳನ್ನು ಹೆಚ್ಚಾಗಿ ಕೊಂಡುಕೊಂಡು ಮೊಟ್ಟೆಯ ವ್ಯಾಪಾರವನ್ನು ಪ್ರಾರಂಭಿಸುತ್ತಾಳೆ. ಹೀಗೆ ಹೊಸಬಿಯ ಸಂಪಾದನೆ ದಿನದಿಂದ ದಿನಕ್ಕೆ ಹೆಚ್ಚಾಗಿ ಅವಳ ಕುಟುಂಬ ಆರ್ಥಿಕವಾಗಿ ಬಲಿಷ್ಠವಾಯಿತು.

ಇನ್ನು ಸಾಮೂಹಿಕವಾಗಿ ಹಳ್ಳಿಯ ಜನರೆಲ್ಲ ತಮ್ಮ ತಮ್ಮ ಬಟ್ಟೆಗಳನ್ನು ಊರಿನ ಅಗಸನಿಗೆ ಕೊಟ್ಟು ಮಡಿ ಮಾಡಿಸಿದರೆ ಹೊಸಬಿ ಮಾತ್ರ ಹೆಣ್ಣು-ಗಂಡು ಎಂದು ಬೇದಮಾಡದೇ ಎಲ್ಲಾರ ಬಟ್ಟೆಗಳನ್ನು ಹೊಸಬಿಯೇ ಮಡಿ ಮಾಡುವುದರಿಂದ ಅಗಸನಿಗೆ ಕೊಡಬೇಕಾಗಿದ್ದ ಪಾಲು ತನ್ನಲ್ಲಿಯೇ ಉಳಿಯುತ್ತದೆ. ಹೊಸಬಿಯನ್ನು ಕುರಿತು ಅಕ್ಕಪಕ್ಕದ ಮನೆಯಲ್ಲಿರುವ ಹೆಂಗಸರು ಅನೇಕ ರೀತಿಯಲ್ಲಿ ಅವಳನ್ನು ನಿಂದಿಸುತ್ತಾರೆ. ಆದರೆ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ತನ್ನ ಕೆಲಸದಲ್ಲಿ ಮಗ್ನಳಾಗುತ್ತಾಳೆ.

ಆರಂಭದಲ್ಲಿ ಊರಿನ ಯುವಕನಾದ ಮಾದ ಹೊಸಬಿಯ ಶತ್ರುವಾಗಿ ನಿಂತರು, ಅವಳ ಕಾರ್ಯಕ್ಷಮತೆ, ದಿಟ್ಟತನ, ಇತ್ಯಾದಿಗಳನ್ನು ನೋಡಿ ಹೊಸಬಿಯನ್ನು ಮದುವೆಯಾಗುತ್ತಾನೆ. ಇದು ಗೊರೂರು ಹೆಣ್ಣಿಗೆ ಕೊಟ್ಟಿರುವ ಸ್ಥಾನಮಾನವನ್ನು ಕುರಿತು ಹೇಳುತ್ತದೆ.

ವೈಯ್ಯಾರಿ ಕತೆಯೂ ಕೂಡ 'ಬಾಲವಿಧವೆ'ಯನ್ನು ಕುರಿತ ಕಥೆಯಾಗಿದ್ದು, ಇಲ್ಲಿ ಕೂಡ ಗೊರೂರರು ಹೆಣ್ಣಿನ ಪರವಾಗಿಯೇ ನಿಲ್ಲುವುದನ್ನು ವ್ಯಕ್ತಪಡಿಸಿದ್ದಾರೆ. ಕತೆಯಲ್ಲಿ ಬರುವ ಲಲಿತ ಕಥೆಯ ನಾಯಕಿಯಾಗಿದ್ದು ಚಿಕ್ಕ ವಯಸ್ಸಿಗೆ ಮದುವೆಯಾಗಿ, ಸ್ವಲ್ಪ ದಿನಗಳಲ್ಲಿಯೇ ವಿಧವೆಯಾಗುತ್ತಾಳೆ. ಇಲ್ಲಿ ವಿಧವೆಯ ಮಾನಸಿಕ ತೊಳಲಾಟ ಮತ್ತು ಸಮಾಜದ ನೀತಿ ನಿಯಮಗಳು ಏನಾಗಿದ್ದವು ಎಂಬುದನ್ನು ಹೇಳುತ್ತಾರೆ. ಲಲಿತ ಮನೆಯ ಹಿರಿಯ ಮಗಳಾಗಿದ್ದು ತನ್ನ ಕುಟುಂಬವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತಿರುತ್ತಾಳೆ. ತನಗೆ ಮೂರು ಜನ ತಂಗಿಯರಿದ್ದು ಅವರನ್ನು ಮದುವೆಯಾಗಲು ಬರುವ ಹುಡುಗರೆಲ್ಲಾ ಹೊಸಬಿಯ ಸೌಂದರ್ಯಕ್ಕೆ ಮರುಳಾಗುತ್ತಾರೆ. ಇದನ್ನು ಗಮನಿಸಿದ ಹಳ್ಳಿಯ ಹೆಂಗಸರು ಲಲಿತಾಳನ್ನು ಕಂಡು ಅನೇಕ ಬಗೆಯಲ್ಲಿ ಮಾತಾಡಿಕೊಳ್ಳುತ್ತಾರೆ. "ಲಲಿತ ಇರೋವರ್ಗೆ ಯಾರೂ ತಂಗಿಯರನ್ನು ಮದ್ವೆ ಆಗೋಲ್ಲ. ಅವಳ ಬಿನ್ನಾಣ, ಅವಳ ಥಳಕು, ಯಾರು ಬಂದರೂ ಹುಬ್ಬು ಮಿಟಕಿಸುತ್ತಾಳೆ. ಆ ಅಪ್ಪ ರಂಗಾಚಾರಿಗೆ ಏನು ಕೇಡು, ತಕ್ಕೊಂಡು ಹೋಗಿ ಮೂಳೀನ ಬಾವಿಗೋ, ಹೊಳೆಗೋ ತಳ್ಳಿ ಬರೋಕ್ಕಾಗದೆ? ಆಗಲೇ ತಳ್ಳಿದ್ರೆ, ರುಕ್ಮಿಣಿ ಇಷ್ಟು ಹೊತ್ತಿಗೆ ಪುಟ್ಟದಾಗಿ ಗಂಡನ್ಮನೇಲಿ ಇರೋಳು. ಆಗ್ಲೆ ತಲೆಬೋಳ್ಸು ಅಂತ ಬಡಕೊಂಡ್ರೂ ರಂಗಾಚಾರಿ ಕೇಳ್ಳಿಲ್ಲ. ಅಬ್ಬಾ ಅವಳ ಸೀರೆ, ಅವಳ ನಾಜೂಕು ಮುತ್ತೈದೆ ಹಾಗೆ ಕಾಣ್ತಾಳೆ ಚಿನಾಲಿ ಚಿತ್ರಪುಟ್ಟಿ, ವೈಯ್ಯಾರಿ"[9] ಎಂದು ಲಲಿತಾಳಿಂದ ತನ್ನ ತಂಗಿಯರ ಮದುವೆ ನಿಲ್ಲಲು ಒಂದು ಕಾರಣವಾದರೆ, ಅವಳ ಸೌಂದರ್ಯವೂ ಒಂದು. ಹೀಗಾಗಿ ಅವಳನ್ನು ಊರಿನ ಹೆಣ್ಣು ಮಕ್ಕಳು ನಿಂದಿಸುತ್ತಾರೆ. ಆದರೆ ಲಲಿತಾ ಮಾತ್ರ ತಾನು ವಿಧವೆಯೆಂದು ಒಮ್ಮೆಯೂ ಯೋಚಿಸುವುದಿಲ್ಲ. ಇಲ್ಲಿ ಕತೆಗಾರ ಬದಲಾವಣೆಯನ್ನು ಬಯಸುತ್ತಿರುವುದು ಕಂಡುಬರುತ್ತದೆ. ಹಾಗಾಗಿ ವಿಧವೆಯ ಪಾತ್ರಕ್ಕೆ ಹೆಚ್ಚಿನ ಒತ್ತನ್ನು ಕೊಡದೇ, ಅದನ್ನು ಹೋಗಲಾಡಿಸುವ ಸಲುವಾಗಿ ಅದಕ್ಕೆ ಅನುಕೂಲವಾಗುವ ರೀತಿಯಲ್ಲಿ ಚಿತ್ರಿಸಿ ವಿಧವೆಗೆ ಮರುವಿವಾಹಕ್ಕೆ ಅವಕಾಶ ಮಾಡಿಕೊಡುವುದು ಕತೆಗಾರರ ಆಶಯವನ್ನು ಸೂಚಿಸುತ್ತದೆ.

ಮಾಸ್ತಿಯವರ ಪ್ರಭಾವದಲ್ಲಿಯೇ ಕತೆಗಳನ್ನು ಬರೆದ ಆನಂದರು ಹಿಡಿದ ದಾರಿಯೇ ಬೇರೆಯಾಗಿರುವುದರಿಂದ ಅವರ ಕತೆಗಳ ವಸ್ತುವೂ ಬೇರೆಯಾಗಿದೆ. ಸಾಮಾಜಿಕ ಸಮಸ್ಯೆಗಳಿಗೆ ಹೆಚ್ಚಿನ ಒತ್ತನ್ನು ಕೊಡದೇ ಕುಟುಂಬಕ್ಕೆ ಅದರಲ್ಲೂ ದಾಂಪತ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿರುವುದನ್ನು ಕತೆಗಳಲ್ಲಿ ಕಾಣಬಹುದು. ಭವತಿ ಭಿಕ್ಷಾಂದೇಹಿಯ ವಸ್ತು ಮಾಧು ಎಂಬ ವಾರಾನ್ನದ ಹುಡುಗನ ಕಷ್ಟ ಜೀವನ ಕುರಿತದ್ದು, ಇಲ್ಲಿ ಶಿಕ್ಷಣವನ್ನು ಪಡೆಯಲು ತಳಸಮುದಾಯಗಳು ಎದುರಿಸುವ ಸಮಸ್ಯೆಗಳನ್ನು ಕಾಣಬಹುದು. ಹಳ್ಳಿಗಳಲ್ಲಿ ಶಾಲೆಗಳು ಬರುವ ಮೊದಲು ನಗರಕ್ಕೆ ಅಷ್ಟೇ

ಸೀಮಿತವಾಗಿದ್ದವು. ಶಿಕ್ಷಣವನ್ನು ಪಡೆಯಬೇಕಾದರೆ ನಗರಕ್ಕೆ ಹೋಗುವುದು ಅನಿವಾರ್ಯವಾಗುತ್ತದೆ. ಅಂತಹ ಸಂದರ್ಭಗಳನ್ನು ಆನಂದರು ಕತೆಯ ವಸ್ತುವನ್ನಾಗಿಕೊಂಡಿದ್ದಾರೆ. ಬೇವು-ಬೆಲ್ಲ ಕತೆಯ ವಸ್ತು ಕೂಡ ಇದನ್ನೇ ಕೇಂದ್ರವಾಗಿಟ್ಟುಕೊಂಡು ರಚನೆಯಾಗಿದೆ.

ಆನಂದ ಹೆಸರು ಪಡೆದಿದ್ದು ಪ್ರಣಯಕತೆಗಳಿಂದ, ಅತಿ ಕಡಿಮೆ ಪಾತ್ರಗಳ ಮೂಲಕ ಕತೆಯನ್ನು ನಿರೂಪಿಸುತ್ತಾರೆ. ಅವರ ಕತೆಗಳಲ್ಲಿ ಬರುವ ಪಾತ್ರಗಳು ಗಂಡ ಹೆಂಡತಿ ಮತ್ತು ಒಂದು ಮಗು ಇಲ್ಲವೇ ಒಂದು ಕುಟುಂಬ ಅವರ ಕತೆಗಳಲ್ಲಿ ಗಂಡ ಹೆಂಡಿರ ಸಲ್ಲಾಪಗಳು, ಹುಸಿಕೋಪ, ವಿನೋದ ತುಂಬಿದ ಬೆಡಗು ಭಿನ್ನಾಣಗಳು ಕಥಾವಸ್ತುವಿನ ನಿರ್ವಹಣೆಗೆ ಪೂರಕವಾಗಿ, ಪ್ರೇರಕವಾಗಿ ಪ್ರಧಾನ ಅಂಶವಾಗಿ ಬರುತ್ತವೆ. ಮಾಸ್ತಿಯವರ ಪ್ರಭಾವ ಆನಂದರ ಮೇಲೆ ಇದೆ ಎಂದು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ರಂಗನ ಮದುವೆ, ರಂಗಪ್ಪನ ದೀಪಾವಳಿ ಕತೆಗಳ ಛಾಯೆ ಇಲ್ಲಿದೆ. 'ರಾಧೆಯ ಕ್ಷಮೆ' ಈ ಕತೆಯಲ್ಲಿ ಗಂಡ ಹೆಂಡತಿಯ ಹೊಂದಾಣಿಕೆ, ಕೋಪಗೊಳ್ಳುವ ಸಂದರ್ಭಗಳನ್ನು ಹೇಳುವ ಮೂಲಕ ರಾಜಿಗೆ ಬಂದು ಕತೆಯನ್ನು ಮುಗಿಸುವುದು ಆನಂದರ ಕತೆಗಳಲ್ಲಿನ ತಂತ್ರವಾಗಿದೆ. ನಿರೂಪಕನ ಚಿತ್ರವನ್ನು ಮಗನ ಆಕಸ್ಮಿಕ ಆಗಮದಿಂದ ಹಾಳಾಗುತ್ತದೆ. ಆದರೆ ತನ್ನ ಹೆಂಡತಿಯನ್ನು ಬಯ್ಯುತ್ತಾನೆ ನಂತರ ಹೆಂಡತಿಯನ್ನು ರಾಜಿ ಮಾಡುವ ಸಂದರ್ಭ ಕತೆಯ ಆಶಯಕ್ಕೆ ಕನ್ನಡಿ ಹಿಡಿದಂತಿದೆ.

'ಹೆಂಡತಿಯ ಕಾಗದ' ಕತೆಯ ಶೀರ್ಷಿಕೆಯೇ, ಅದರ ಒಳಗಿರುವ ಅರ್ಥವನ್ನು ಹೇಳುತ್ತದೆ. ಇಡೀ ಕತೆಯ ಆರಂಭ ಮತ್ತು ಅಂತ್ಯವನ್ನು ಕಾಗದದ ಮೂಲಕವೇ ಚಿತ್ರಿಸಲಾಗಿದೆ. ಕಾಗದಕ್ಕಾಗಿ ಕಾಣುವ ಗಂಡನ ಮನಸ್ಸಿನ ತೊಳಲಾಟ ಮತ್ತು ಅದನ್ನು ಹೆಚ್ಚಿಸಲು ಹೆಂಡತಿಯು ಉಪಯೋಗಿಸುವ ಪದಗಳ ಬಳಕೆ ಕತೆಯ ಮಹತ್ವವನ್ನು ಹೆಚ್ಚಿಸಿವೆ. ಜೊತೆಗೆ ಕಾಗದದಿಂದ ನಡೆಯುವ ಅನಾಹುತಗಳನ್ನು ಕತೆಗಾರರ ತಾಳ್ಮೆಯಿಂದ ಸರಳವಾಗಿ ರೂಪಿಸಿದಂತಿದೆ. ಬೇರೆ ಕತೆಗಳಲ್ಲಿರುವಂತೆ ದೀರ್ಘವಾದ ಸಂಭಾಷಣೆ ಇಲ್ಲಿಲ್ಲದೇ ಇರುವುದು ಕತೆಯ ಕಲೆಗಾರಿಕೆಗೆ ಸಹಾಯಕವಾಗಿವೆ. ಲೇಖಕನೇ ನಿರೂಪಕನಾಗಿ ಕಥೆ ಹೇಳಿಕೊಂಡು ಹೋಗುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

'ಜೋಯಿಸರ ಚೌಡಿ' ಕತೆಯ ವಸ್ತು ಜನರಲ್ಲಿ ಮನೆ ಮಾಡಿರುವ ಅನಕ್ಷರತೆ, ಮೂಢನಂಬಿಕೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತ ಅನೇಕ ರೀತಿಯಲ್ಲಿ ಹಣವನ್ನು ಸಂಪಾದಿಸುವ ಜೋಯಿಸರ ಸ್ವರೂಪವನ್ನು ಕತೆ ಹೇಳುತ್ತದೆ. 'ಪಿಶಾಚಿ ಜೋಯಿಸ' ಹಣದ ಆಸೆಗಾಗಿ ನಿಧಿಯನ್ನು ತೆಗೆಯುವ ವಿದ್ಯೆಯನ್ನು ಕಲಿಯುತ್ತಾನೆ. ಆದರೆ ಅದು ಫಲಿಸುವುದಿಲ್ಲ. ಕಾರರುಬ್ಬುವ ಕಲ್ಲನ್ನು ಚೌಡಂಬೆ ಎಂಬ ಹೆಸರಿನಲ್ಲಿ ದೇವಾಲಯ ಪ್ರತಿಷ್ಠಾಪನೆಯಾಗುತ್ತದೆ. ದೇವಸ್ಥಾನದಿಂದ ಆದಾಯ ಬರುವಂತೆ ಮಾಡುತ್ತಾನೆ. ಕಲ್ಲುಮಣ್ಣುಗಳನ್ನು, ಮರಗಿಡಗಳನ್ನು ದೇವರೆಂದು ನಂಬಿ ನಡೆದುಕೊಳ್ಳುವ, ಅದಕ್ಕಾಗಿ ಎಷ್ಟಾದರೂ ಖರ್ಚುಮಾಡಲು ಸಿದ್ಧರಿರುವ ಸಮಾಜದಲ್ಲಿ ಮೂಢನಂಬಿಕೆಗಳು ಜನರನ್ನು ಬಿಟ್ಟು ಹೋಗುವವರೆಗೂ ಕೃಷ್ಣಜೋಯಿಸರಂತ ಮೈಗಳ್ಳರು ಸಮಾಜದಲ್ಲಿ ನೆಲೆಸುತ್ತಾರೆ. ಸಮಾಜದಲ್ಲಿ

ಮುಗ್ಧಜನರನ್ನು ಸುಲಿಗೆ ಮಾಡುವುದು ನಡೆಯುತ್ತಲೇ ಇರುತ್ತದೆ ಎಂಬ ಅರ್ಥ ಕತೆಯಲ್ಲಿದೆ. ಇದು ಹಾಸ್ಯ ಭರಿತ ಎನಿಸಿದರೂ ವಾಸ್ತವವಾಗಿ ಸತ್ಯವನ್ನು ಹೇಳುತ್ತದೆ. ಸಮಾಜದಲ್ಲಿರುವ ಭಿನ್ನ ಆಯಾಮಗಳನ್ನು ಕತೆ ತೆರೆದಿಡುತ್ತದೆ.

ಆನಂದರು ಕತೆಗಳಲ್ಲಿ ಅನೇಕ ರೀತಿಯ ವಸ್ತುಗಳನ್ನು ಕಥಾವಸ್ತುವನ್ನಾಗಿ ಬಳಸಿಕೊಂಡಿದ್ದಾರೆ. ಮಾಸ್ತಿಯವರ ಪ್ರಭಾವದಲ್ಲಿಯೇ ಕತೆಗಳನ್ನು ರಚಿಸಿದ ಇವರು ಕೆಲವು ಅಪರೂಪದ ಕತೆಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಕೆಲವು ಸಾಮಾಜಿಕ ಸಮಸ್ಯೆಗಳನ್ನು ಕುರಿತ ಕತೆಗಳಿದ್ದರೆ, ಕೆಲವು ಕೌಟುಂಬಿಕ ವಿದ್ಯಮಾನಗಳನ್ನುಳ್ಳ ಕತೆಗಳಿವೆ. ಜೊತೆಗೆ ಸ್ನೇಹದ ಪ್ರತಿಯಾಗಿ ಬೇವು-ಬೆಲ್ಲದಂತಹ ಕತೆಗಳನ್ನು, ಸರಸಿಗೊಂಬೆ, ಚೊಚ್ಚಲ ಸಂಭ್ರಮದಂತ ಹೆಣ್ಣಿನ ಮನೋವೇದನೆಯನ್ನು ಹೇಳುವ ಕತೆಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲ ಪ್ರಯೋಗಶೀಲತೆಯ ಮೂಲಕ ಕನ್ನಡ ಕಥಾ ಸಾಹಿತ್ಯ ಸಂದರ್ಭದಲ್ಲಿ ಉಲ್ಲೇಖಿಸಬೇಕಾಗುತ್ತದೆ.

***. ಭಾಷಾ ಶೈಲಿ**

ಪ್ರತಿಯೊಂದು ಕತೆಗಾರರಿಗೆ ಅವರದೇ ಆದ ಭಾಷಾ ಶೈಲಿ ಇರುತ್ತದೆ. ಅವರ ಅಭಿವ್ಯಕ್ತಿ ಪ್ರಕಟವಾಗುವುದು ಕೂಡ ಅದರ ಮೂಲಕವೇ ಹಾಗಾಗಿ ಕತೆಗಾರರ ಭಾಷೆ ಓದುಗರ ಮೇಲೆಯೂ ಪ್ರಭಾವ ಬೀರಬಹುದು. ಮಾಸ್ತಿ, ಆನಂದ ಮತ್ತು ಗೊರೂರರ ಕತೆಗಳ ಭಾಷೆ ಶಿಷ್ಟ ಮತ್ತು ಗ್ರಾಮೀಣ ಭಾಷೆಯಿಂದ ಕೂಡಿದೆ. ಮಾಸ್ತಿಯವರು ಬ್ರಾಹ್ಮಣ ಮನೆತನಕ್ಕೆ ಸೇರಿದವರು. ಕತೆ ಗ್ರಾಮೀಣ ಪ್ರದೇಶದ ವಸ್ತುವಾದರೂ ಅದರ ಭಾಷೆ ಮಾತ್ರ ಶಿಷ್ಟತೆಯಿಂದ ಕೂಡಿದೆ. ಕಲ್ಮಾಡಿಯ ಕೋಣ ಕತೆಯಲ್ಲಿ ಬರುವ ಒಂದು ಸನ್ನಿವೇಶವನ್ನು ನೋಡಬಹುದು. ನಿರೂಪಕ ತನ್ನ ಊರು ಕಲ್ಮಾಡಿಗೆ ಹೋಗಬೇಕೆಂದರೆ, ಮೋಟರಾಗಲಿ, ಬಸ್ಸಾಗಲಿ ಇರಲಿಲ್ಲ. ಹಾಗಾಗಿ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದರು. ಸುಡು ಬಿಸಿಲಿನಲ್ಲಿ ಜನ ಗುಂಪು ಗುಂಪಾಗಿ ಬಯಲಿನಲ್ಲಿ ಓಡುತ್ತಿರುತ್ತಾರೆ. ಎಲ್ಲಾರ ಮುಖದಲ್ಲೂ ಭಯ ಮತ್ತು ಬೆವರು ಎದ್ದು ಕಾಣುತ್ತಿರುತ್ತದೆ. ಇದನ್ನು ನೋಡಿದ ನಿರೂಪಕ ಗಾಡಿಯವನಿಗೆ "ಗಾಡಿ ನಿಲ್ಲಿಸಿ ಕೋ ಎಂದೆ; ಓಡುತ್ತಿದ್ದವರಲ್ಲಿ ಹತ್ತಿರ ಇದ್ದವನನ್ನು ಕೂಗಿ ಏನೋ ಇದು? ಎಂದು ಕೇಳಿದೆ. ಅವನು ಕೋಣ, ಕೋಣ ಎಂದು ದೂರಕ್ಕೆ ಕೈ ತೋರಿಸಿದನು. ಅವನು ಕೈ ತೋರಿಸಿದ ಕಡೆ ದೃಷ್ಟಿಯನ್ನಿಟ್ಟುಕೊಂಡು ನೋಡಲು ನಮಗೆ ದೂರದಲ್ಲಿ ಒಂದು ಕಡೆ ಬಿಸಿಲಲ್ಲಿ ಒಂದು ಕೋಣ ಓಡುತ್ತಿದ್ದದು ಕಂಡಿತು. ಉಳಿದ ಏನೂ ಕಾಣಲಿಲ್ಲ."[9] ಈ ರೀತಿಯಲ್ಲಿ ಮಾಸ್ತಿಯವರ ಶಿಷ್ಟ ಶೈಲಿ ಕಂಡು ಬರುತ್ತದೆ. ಜನಪದ ಕಥೆಗಳ ನಿರೂಪಣ ತಂತ್ರವೇ ಇಲ್ಲಿ ದೂರವನ್ನು ಸೂಚಿಸುವ ಒಂದು ಕೆಲಸ ಮಾಡುವುದರಿಂದ ನಿರೂಪಕ ಪ್ರತ್ಯೇಕ ಅಗತ್ಯ ಬೀಳುವುದಿಲ್ಲ. ಮಾಸ್ತಿಯವರ ಹೆಚ್ಚಿನ ಕಥೆಗಳು ಆಯಾ ಸಮಾಜಕ್ಕೆ ಅನ್ವಯಿಸುವ ಭಾಷಾಶೈಲಿಯನ್ನು ಒಳಗೊಂಡಿದೆ. ಕಥೆಯ ಉದ್ದಕ್ಕೂ ಅಗತ್ಯವಿದ್ದಷ್ಟು ಪಾತ್ರಗಳ ಸಂಭಾಷಣೆಯಲ್ಲಿ ಭಾಷಾ ಶೈಲಿ ಮಾತ್ರ ಬಳಸಿ, ಹಲವಾರು ಚಿಕ್ಕ ಚಿಕ್ಕ ದೃಶ್ಯಗಳಲ್ಲಿ ಕಥೆಯನ್ನು ಆದಷ್ಟು ಸಂಗ್ರಹ

ರೂಪದಲ್ಲಿ ನಿರೂಪಿಸುತ್ತಾ ಅದರ ನಾಟಕೀಯ ತೀವ್ರತೆ ಇಳಿಯದಂತೆಯೂ ನೋಡಿಕೊಳ್ಳುತ್ತಾ ಒಂದು ಹದದಲ್ಲಿ ಕಥೆಯನ್ನು ನಡೆಸುವುದು ಮಾಸ್ತಿಯವರ ರೀತಿ. ಇದು ಮಾಸ್ತಿಯವರ ವೈಶಿಷ್ಟ್ಯವೂ ಹೌದು. ಗ್ರಾಮೀಣಾ ಭಾಷೆಗಿಂತ ಶಿಷ್ಟ ಭಾಷೆಯನ್ನು ಕತೆಗಳಲ್ಲಿ ಬಳಸಿರುವುದನ್ನು ಕಾಣಬಹುದು.

ಆನಂದರು ಕೂಡ ತಮ್ಮ ಕತೆಗಳಲ್ಲಿ ಗ್ರಾಮೀಣ ಭಾಷೆಯನ್ನು ಬಳಸಿದ್ದಾರೆ. ನಾನು ಕೊಂದ ಹುಡುಗಿ ಕತೆಯಲ್ಲಿ ಬರುವ ಚೆನ್ನಿಯ ಇಡೀ ಕುಟುಂಬದ ಭಾಷೆ ಗ್ರಾಮೀಣ ಭಾಷೆಯೇ ಆಗಿದೆ. ನಿರೂಪಕ ತನ್ನ ಸಂಚಾರದ ಸಮಯದಲ್ಲಿ ನಾಗವಳ್ಳಿಯ ಕರಿಯಪ್ಪನವರ ಮನೆಯಲ್ಲಿ ಉಳಿಯುತ್ತಾನೆ. ಆ ಹಳ್ಳಿಗೆ ಸರಿಯಾದ ರಸ್ತೆ ಮತ್ತು ವಾಹನಗಳ ಸಂಪರ್ಕ ಇರುವುದಿಲ್ಲ. ತನ್ನ ಹೆಂಡತಿಗೆ ಪ್ರತಿ ದಿನ ಕಾಗದ ಬರೆಯುವ ನಿರೂಪಕ ಕಾಗದವನ್ನು ಪೆಟ್ಟಿಗೆಗೆ ಹಾಕಲು ಕೇಳಿದಾಗ "ಅದ್ಯಾಕ್ಬುದ್ದೀ ಓಟೊಂದು ತೊಂದ್ರೆ ತಮ್ಗೆ: ಆ ಕಾದ್ಗಾನ ಇಲ್ಕೊಡಿ ನನ್ನೊಡ್ಯಾ ನಾನೋಗಿ ಹಾಕ್ತಿವ್ನಿ" ಎಂದು ಚೆನ್ನಿ ನಿರೂಪಕನನ್ನು ಕಾಗದ ಕೊಡುವಂತೆ ಕೇಳುತ್ತಾಳೆ. ಅದೇ ರೀತಿಯಾಗಿ ನಿರೂಪಕ ಮತ್ತು ಚೆನ್ನಿಯ ಸಂಭಾಷಣೆ ಹೀಗಿದೆ. "ಬುದ್ದಿ, ಈಗ ಎಂಟೊರ್ಸದಾಗೆ ನಂಗೆ ಬಲು ದಣುವಾಗಿತ್ತು. ಆಗ ನಮ್ಮ ಅಪ್ನೂ ಅಮ್ನೂ ಮರಡೀ ದೇವರ್ಗೆ ಹರಕೆ ಮಾಡ್ಕೊಂಡ್ರು ನನ್ನೊಡ್ಯಾ, ನನ್ಗೆ ಗುಣವಾದ್ರೆ ಆ ದೇವ್ರ ಹೆಸರ್ನಾಗೆ ನನ್ನ ಬಸ್ವಿ ಬಿಡ್ತೀವಿ ಅಂತ, ನನ್ಗೆ ಗುಣವಾಯ್ತು ಬುದ್ಧೀ"[೫] ಅಲ್ಲಿ ಹಳ್ಳಿಯ ಅನಕ್ಷರಸ್ಥೆಯಾದ ಚೆನ್ನಿಯ ಗ್ರಾಮೀಣ ಭಾಷೆಯನ್ನು ಕತೆಗಾರ ಯಥಾವತ್ತಾಗಿ ಬಳಸಿದ್ದಾರೆ. ಈ ಮೇಲಿನ ಸಾಲುಗಳಲ್ಲಿ ಚೆನ್ನಿಯನ್ನು ಬಸವಿಬಿಡಲು ಕಾರಣವಾದ ಸನ್ನಿವೇಶವನ್ನು ವಿವರಿಸಲು ಗ್ರಾಮೀಣ ಭಾಷೆ ಬಳಕೆಯಾಗಿದೆ. ನಾಗವಳ್ಳಿ ಹಳ್ಳಿಯ ಜೀವನದ ಹಲವು ಮುಖಗಳನ್ನು ನಿರೂಪಕನಿಗೆ ಪರಿಚಯಿಸುತ್ತದೆ.

ಕತೆಯಲ್ಲಿ ಬರುವ ಚೆನ್ನಿಯ ತಂದೆಯ ಭಾಷೆಯೂ ಕೂಡ ಗ್ರಾಮೀಣ ಭಾಷೆಯಾಗಿದೆ. ನಿರೂಪಕ ಮತ್ತು ಕರಿಯಪ್ಪನವರ ಭಾಷೆ ಈ ರೀತಿ ಇದೆ.

ನಿರೂಪಕ:- ಕರಿಯಪ್ಪನವರು ತಾವೇ ಕೈಯಲ್ಲಿ ಒಂದು ಬಟ್ಟಲು ಹಾಲನ್ನು ತೆಗೆದುಕೊಂಡು ಬಂದರು. ಅವರ ಮನೆಯಲ್ಲಿ ಕಾಫಿ ಅಭ್ಯಾಸವಿಲ್ಲ. ನನಗೆ ಹಾಲು ಅಭ್ಯಾಸವಿಲ್ಲ. ಹೇಗೊ ಅವರು ಅಷ್ಟು ಆದರದಿಂದ ತಂದದ್ದನ್ನು ಬೇಡವೆನ್ನಬಾರದೆಂದು ಕುಡಿದೆ.

ಕರಿಯಪ್ಪ:- ಸ್ವಾಮಿ, ತಾವು ಬರ್ಪೋದಾದ್ರೆ, ಇಲ್ಲೇ, ಇಲ್ಲಿಗೆ ಹರಿದಾರಿ ದೂರ್ದಾಗಿದೆ. ಅದೋ ನೋಡಿ ಕಾಣೋಕಿಲ್ವೆ ಆ ಮರಡಿ ಬೆಟ್ಟ, ಅದರ ಬುಡ್ದಾಗಿದೆ."[೬]

ಇಲ್ಲಿ ನಗರ ಮತ್ತು ಗ್ರಾಮೀಣ ಭಾಷೆಗಿರುವ ವ್ಯತ್ಯಾಸವನ್ನು ಗಮನಿಸಬಹುದು. ಕರಿಯಪ್ಪ ಇಷ್ಟದಿಂದ ತಂದ ಹಾಲನ್ನು ನಿರೂಪಕ ಕಷ್ಟದಿಂದ ಕುಡಿಯುತ್ತಾನೆ. ಕಾರಣ ಅವರಿಗೆ ಹಾಲಿನ ಅಭ್ಯಾಸವಿಲ್ಲ. ಅದೇ ರೀತಿ ಮನೆಯಿಂದ ಮರಡಿಬೆಟ್ಟ ದೂರದಲ್ಲಿದ್ದರೂ ಅದು ಇಲ್ಲಿಯೇ ಇದೆ ಎಂದು ಮನೆಯಿಂದನೇ ಕೈ ತೋರಿಸಿ ಹೇಳುವುದು. ಅಂದರೆ ಯಾವುದು ತಮ್ಮದೆಂದು

ಅನಿಸುತ್ತದೆಯೋ ಅದು ಹತ್ತಿರವಾಗುತ್ತದೆ. ಯಾವುದು ನಮ್ಮದಲ್ಲ ಎಂಬ ಭಾವನೆ ಬರುತ್ತದೆಯೋ ಅದು ದೂರವಾಗುತ್ತದೆ.

ಆನಂದರು ಹೆಚ್ಚು ಪ್ರಸಿದ್ಧಿ ಪಡೆದಿದ್ದು ದಾಂಪತ್ಯದ ಕತೆಗಳಿಂದ ಅವರ ಕಥೆಗಳಲ್ಲಿ ಬಹುತೇಕ ಕತೆಗಳು ದಾಂಪತ್ಯ ಜೀವನಕ್ಕೆ ಸಂಬಂಧಿಸಿವೆ. ಅವರ ಕಥೆಗಳಲ್ಲಿ ಬರುವ ಪಾತ್ರಗಳ ಸಂಖ್ಯೆಯೂ ಕಡಿಮೆ. ಜಾಸ್ತಿಯೆಂದರೆ ಗಂಡ-ಹೆಂಡತಿ ಒಂದು ಮಗು. ಹೀಗೆ ಮೂರು-ನಾಲ್ಕು ಪಾತ್ರಗಳನ್ನಷ್ಟೇ ಇಟ್ಟುಕೊಂಡು ಕತೆಗಳನ್ನು ರಚಿಸಿದ್ದಾರೆ. 'ರಾಧೆಯ ಕ್ಷಮೆ' ಅಂತಹ ಕತೆಗಳ ಸಾಲಿಗೆ ಸೇರಿದ ಕತೆಯಾಗಿದೆ. ಕಥೆಯ ನಾಯಕ ಒಂದು ದಿನ ತನ್ನ ಸ್ಟೂಡಿಯೋದಲ್ಲಿ ಬೆಳಿಗ್ಗೆ ಒಂಬತ್ತು ಗಂಟೆಗೆ ಚಿತ್ರ ಬಿಡಿಸಲು ಕುಳಿತನು. ಮಧ್ಯಾಹ್ನ ಮೂರು ಗಂಟೆಯಾದರೂ ಕುಳಿತಿದ್ದ ಜಾಗ ಬಿಟ್ಟು ಕದಲಿರಲಿಲ್ಲ. ಚಿತ್ರದ ಕೆಲಸ ಮುಕ್ಕಾಲು ಪಾಲು ಮುಗಿದ್ದಿತ್ತು. ಅಂತಹ ಸಮಯದಲ್ಲಿ ಅಲ್ಲಿಗೆ ಬಂದ ಅರುಣ ಮರಿ (ಮಗ) ತನ್ನ ಕಾಲಿನಿಂದ ಬಲ ಮೊಳಕೈಗೆ ಒದ್ದ; ಅನಾಹುತವಾಯಿತು. ಕೈಯಲ್ಲಿದ್ದ ಬಣ್ಣಬಳಿಯುತ್ತಿದ್ದ ಕುಂಚ ಮುಂದಕ್ಕೆ ಸಿಡಿದು, ಕುಂಚ ಚಿತ್ರಕ್ಕೆ ತಗುಲಿ ಅದರ ಮೇಲೆ ಅಡ್ಡವಾಗಿ ವಿಕಾರವಾಗಿ ಒಂದು ಬಣ್ಣದ ಪಟ್ಟೆ ಬಿತ್ತು. ಕಷ್ಟ ಪಟ್ಟು ಬಿಡಿಸಿದ ಚಿತ್ರವನ್ನು ಮತ್ತೊಂದು ಸಲ ಸರಿಪಡಿಸಿಲು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಕೆಟ್ಟುಹೋಯಿತು. ಇದರಿಂದ ಕೋಪ ಬಂದ ನಿರೂಪಕ ತನ್ನ ಹೆಂಡತಿ ರಾಧೆಯನ್ನು "ಯಾಕೆಂದ್ರೆ! ಯಾ ಕೇ ಅಂದ್ರೆ॥... ಕಣ್ಣಿಲ್ವೆ ನಿನಗೆ! ಕೇಳ್ತೀಯಲ್ಲ; ಯಾಕೇಂದ್ರೆ ಅಂತೆ ತೊಲಗಾಚೆ ಎಂದು ಬಯುತ್ತಾನೆ. ಹಾಗೇ ಮುಂದುವರಿದು ಹೂ! ಆಗ್ಹೋಯ್ತು, ನನ್ಹೆಣಾ ಆಗೇ ಹೊಯ್ತು-ತಿಥಿ ಮಾಡಿನ್ನು ಎಂದು ಬಾಯಿಗೆ ಬಂದಂತೆ ತನ್ನ ಮಗನ ತಪ್ಪಿನಿಂದ ತನ್ನ ಹೆಂಡತಿಯನ್ನು ಮನಸ್ಸಿಗೆ ಬಂದಂತೆ ಬಯ್ಯುತ್ತಾನೆ. ಬಯ್ಗುಳದಿಂದ ನೊಂದ ರಾಧೆ ತನ್ನ ಗಂಡನ ಮೇಲೆ ಕೋಪ ಮಾಡಿಕೊಳ್ಳುತ್ತಾಳೆ. ಗಂಡ ಮತ್ತು ಹೆಂಡತಿಯ ಸಂಭಾಷಣೆಯನ್ನು ಆನಂದರು ಗ್ರಾಮೀಣ ಭಾಷೆಯ ಮೂಲಕ ನಿರೂಪಿಸುತ್ತಾರೆ.

"ಇದ್ಯಾ-ಕಿಷ್ಟು-ಕೋಪಾ ಪದ್ಮಾ?
ಹೋಗೀಂದ್ರೆ! ನಾನಿರ್ಬಾರ್ದಿನ್ನು
ಇನ್ನೆನುಗತಿ!
ನನ್ಮಾತಾಡಿಸ್ಬೇಡಿ-ನಾನಿಲ್ವೇ-ಇಲ್ಲ॥
ಅದ್ಹ್ಯಾಂಗ್ನಂಬೋದು-ಮುಟ್ಟಿದ್ರೆ ಕೈಗೆ ಸಿಗ್ತೀಯ!
ನನ್ಮುಟ್ಟ್ಬೇ - ಬೇಡಿ
ಅದ್ಸಾಧ್ಯವೇ - ಇಲ್ಲ! ಓ-ಹೋ!
ಲೇ ಪದ್ಮಾ! ಸಾಕ್ಮಾಡೇ ನಿನ್ನಾಟ್ಕಾನ! ಇದೆಲ್ಲ ಬರೀ ಸುಳ್ಳು! ನಂಗೊತ್ತು
ಇನ್ನು ನನ್ನಾಟ್ಕಾ ಏಲ್ಲಿಂದ್ರೇ... ಒಂದೇ ಮಾತಿಗೆ ಮುಗಿಸಿದ್ರಿ
ನನ್ನಾಟ್ಕಾನಾ"

ಹೀಗೆ ಗಂಡ ಹೆಂಡತಿಯ ಸಂಭಾಷಣೆಯನ್ನು ನಿರೂಪಿಸುವಾಗ ಆನಂದ ಅವರ ಗ್ರಾಮೀಣ ಭಾಷೆಯಲ್ಲಿ ಅದನ್ನು ನಿರೂಪಿಸುವ ಪ್ರಯತ್ನ ಮಾಡಿದ್ದಾರೆ.

ಗೊರೂರರು ಹಳ್ಳಿಯನ್ನೇ ಕೇಂದ್ರವಸ್ತುವಾಗಿಟ್ಟುಕೊಂಡು ಅನೇಕ ಕತೆಗಳನ್ನು ರಚಿಸಿದ್ದಾರೆ. ಹಳ್ಳಿಯನ್ನು ಗುರುತಿಸುವುದೇ ಗೊರೂರರ ಮುಖ್ಯ ಆಶಯವಾಗಿದ್ದರಿಂದ ಹಳ್ಳಿಯ ಜನರು ಮಾತಾಡುವ ಗ್ರಾಮೀಣ ಭಾಷೆಯನ್ನು ಅನೇಕ ಕತೆಗಳಲ್ಲಿ ಬಳಸಿದ್ದಾರೆ. ಅವುಗಳಲ್ಲಿ ಹೇಗೆ ಭಾಷೆಯ ಬಳಕೆಯಾಗಿದೆ ಮತ್ತು ಯಾವ ಸಂದರ್ಭಗಳಲ್ಲಿ ಗ್ರಾಮೀಣ ಭಾಷೆಯನ್ನು ಬಳಸಿದ್ದಾರೆ ಎಂಬುದನ್ನು ಗುರುತಿಸುವುದು ಇಲ್ಲಿನ ಮುಖ್ಯ ಆಶಯವಾಗಿದೆ.

ಗಂಡು ಬೀರಿ ಹೊಸಬಿ ಕತೆಯಲ್ಲಿ ಮುಖ್ಯವಾಗಿ ಮೂರು ಸ್ತ್ರೀ ಪಾತ್ರಗಳು ಬರುತ್ತವೆ. ಅವುಗಳ ಹೆಸರು ಕಾಳಿ, ಬೋರಿ ಮತ್ತು ಹೊಸಬಿ. ಕಾಳಿ ಮತ್ತು ಬೋರಿ ಒಂದು ಪಕ್ಷವಾದರೆ, ಹೊಸಬಿಯದು ಒಂದು ಪಕ್ಷವಾಗಿದೆ. ಹೊಸಬಿ ತನ್ನ ಮನೆಯನ್ನು, ಸ್ವಚ್ಛವಾಗಿಟ್ಟುಕೊಳ್ಳುವುದರ ಜೊತೆಗೆ ಮನೆಯಲ್ಲಿರಂಯಿವವರೆಲ್ಲಾ ಶುಭ್ರವಾದ ಬಟ್ಟೆಗಳನ್ನು ಹಾಕಿಕೊಳ್ಳಲು ಒತ್ತಾಸೆಯಾಗಿ ನಿಲ್ಲುತ್ತಾಳೆ. ಇವಳ ತಾಯಿ ಸತ್ತನಂತರ ಊರಿನ ಜನರೆಲ್ಲಾ ಬೋರನ ಮಕ್ಕಳು ತಿರುಪಕ್ಕೆ ಹೋಗುತ್ತಾರೆ ಎಂದು ಕೊಂಡಿದ್ದರು. ಕಾರಣ ಬೋರನಿಗೆ ಕುಡಿಯುವ ಚಟವಿದ್ದು, ಅದು ದಿನದಿಂದ ದಿನಕ್ಕೆ ಅತಿಯಾಗಿತ್ತು. ಆದರೆ ಹೊಸಬಿ ಅದೆಲ್ಲಾವನ್ನು ಮೀರಿ ಬದುಕನ್ನು ಸಾಗಿಸುತ್ತಾಳೆ. ಹಳ್ಳಿಯ ಜನರೆಲ್ಲಾ ತಮ್ಮ ತಮ್ಮ ಮನೆಯಲ್ಲಿ ಬಟ್ಟೆಗಳನ್ನು ತೊಳೆಯದೇ ಅಗಸನಿಗೆ ಕೊಡುತ್ತಾರೆ. ಅದಕ್ಕಾಗಿ ಅವನಿಗೆ ವರ್ಷಕ್ಕೊಂದು ಸಲ ತಾವು ಬೆಳೆದ ಬೆಳೆಯಲ್ಲಿ ಇಂತಿಷ್ಟು ಪಾಲು ಕೊಡಬೇಕಾಗಿರುತ್ತದೆ. ಜೊತೆಗೆ ಅಗಸನು ಸಮಯಕ್ಕೆ ಸರಿಯಾಗಿ ಬಟ್ಟೆಗಳನ್ನು ತಂದುಕೊಡುವುದಿಲ್ಲ. ಇವೆಲ್ಲಾವನ್ನು ನೋಡಿದ್ದ ಹೊಸಬಿ, ತಮ್ಮ ಬಟ್ಟೆಗಳನ್ನು ತಾನೇ ಒಗೆಯುತ್ತಾಳೆ. ಗಂಡಸರು ಹೆಂಗಸರು ಎನ್ನದೇ ಎಲ್ಲಾವನ್ನು ತೊಳೆದು ಶುಭ್ರವಾಗಿ ಮಡಿ ಮಾಡುತ್ತಾಳೆ. ಇದನ್ನು ನೋಡುತ್ತಿದ್ದ ಹೊಸಜಿಯ ಪಕ್ಕದ ಮನೆಗಳಲ್ಲಿರುವ ಕಾಳಿ ಮತ್ತು ಬೋರಿ ಈ ರೀತಿಯಾಗಿ ಮಾತಾಡಿಕೊಳ್ಳುತ್ತಾರೆ.

"ಬೋರಿ–ಏನ್ಕಾಳಿ ನಿಂತ್ಕೊಂಬ್ಬಿಟ್ಟೆ, ಕೆಲ್ಸ ಎಲ್ಲ ಆಯ್ತಾ?

ಕಾಳಿ–ಏನು ಕೆಲ್ಸನೋಮ್ಮ, ಎಷ್ಟು ಮಾಡಿದ್ರು ಇದ್ದೆ ಆಯ್ತೆ

ಬೋರಿ–ಒಬ್ಬೊಬ್ಬರೊ ಕೆಲ್ಸ ಮಾಡೋಕೆ ಬೇಸರ್ಕೆನೆ ಇಲ್ಕಣೆ

ಅಗಸನ್ಗೆ ಕೂಡ ಕೊಡ್ದೆ ಗಂಡಸ್ರ ಅರ್ಬೆನೆಲ್ಲ ತಾವೇ

ಸೆಣಿತಾರೆ.

ಕಾಳಿ– ಅವರಿಗೇನವ್ವ ಹೊಲ ಆಯ್ತೆ? ಗದ್ದೆ ಆಯ್ತೆ? ಇರೋ

ಅರ್ಬೆ ಸೆಣಕೊಳ್ದೆ ಬಿಟ್ರೆ ಉಂಡಿಟ್ಟು ಅರಗಬೇಕಲ್ಲವ್ವಾ?"[೮]

ಈ ಮೇಲಿನ ಸಾಲುಗಳು ಪರಂಪರೆಯ ಭಾಗವಾಗಿ ಕಂಡುಬರುತ್ತವೆ. ಅಂದರೆ ಹೊಸಜಿ ಪರಂಪರೆಯನ್ನು ಮುರಿದು ಆಧುನಿಕತೆಗೆ ಒಳಗಾಗಿದ್ದು, ಹಳ್ಳಿಯಲ್ಲಿರುವ ಹುಡುಗಿಯರಿಗಿಂತ ಭಿನ್ನ

ಸ್ವಭಾವದವಳಾಗಿ ಕಂಡು ಬರುತ್ತಾಳೆ. ಅಷ್ಟೇ ಅಲ್ಲ ಜೋಡಿದಾರರ ಮನೆಯಲ್ಲಿ ಜೀತಕ್ಕೆ ಹೋಗಬೇಕಿದ್ದ ಹೊಸಬಿ, ಅವರಿಂದಲೇ ಒಂದು ಹಸು, ಅದನ್ನು ಮೇಯಿಸಲು ಸ್ವಲ್ಪ ಹೊಲವನ್ನು ಕೇಳಿ ಪಡೆಯುತ್ತಾಳೆ. ಹಸುವಿನ ಜೊತೆಗೆ ಕುರಿ, ಕೋಳಿಗಳನ್ನು ಸಾಕುವ ಜೊತೆಗೆ ಮೊಟ್ಟೆಯ ವ್ಯಾಪಾರವನ್ನು ಮಾಡುವುದರ ಮೂಲಕ ಕುಟುಂಬವನ್ನು ಆರ್ಥಿಕವಾಗಿ ಬಲಗೊಳಿಸುತ್ತಾಳೆ.

ವೈಯ್ಯಾರಿ ಕತೆಯಲ್ಲಿ ಕೂಡ ಹಳ್ಳಿಯ ಕುರಿತ ವಿಚಾರಗಳಿವೆ. ಕತೆಯ ನಾಯಕಿ ಲಲಿತಾಳ ಮತ್ತೊಂದು ಹೆಸರೇ ವೈಯ್ಯಾರಿ. ಲಲಿತಾಳಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆಯಾಗಿದ್ದು ಗಂಡ ಮರಣ ಹೊಂದಿದ್ದರಿಂದ ಬಾಲವಿಧವೆಯಾಗಿರುತ್ತಾಳೆ. ಆದರೆ ಎಂದೂ ಕೂಡ ಅವಳು ತಾನು ವಿಧವೆ ಎಂಬ ಚಿಂತೆಯನ್ನು ಮಾಡದೇ ತನಗೆ ಇಷ್ಟಬಂದಂತೆ ಬದುಕುತ್ತಾಳೆ. ಆದರೆ ಇದನ್ನು ನೋಡಿದ ಹಳ್ಳಿಯ ಮುತ್ತೈದೆಯರು ಅನೇಕ ರೀತಿಯಲ್ಲಿ ಲಲಿತಾಳನ್ನು ಬಯ್ದುಕೊಳ್ಳುತ್ತಾರೆ. ಒಮ್ಮೆ ರಂಗಾಚಾರ್ಯರ ಮನೆಗೆ ವಧುವನ್ನು ನೋಡಲು ಶ್ರೀನಿವಾಸ ಬರುತ್ತಾನೆ. ಅವನಿಗೆ ತಿಂಡಿಯನ್ನು ಕೊಡಲು ಲಲಿತ ಬಂದಾಗ "ಒನಕೆ ಒಳ್ಳೆದವ್ವ ಒಲಿದು ಕುಟ್ಟುವರಿಲ್ಲ

ಸೀರೆ ಒಳ್ಳೆದವ್ವ ಸೆರಗಿಲ್ಲ! ಹೆಣ್ಣಿನ

ಗುಣ ಒಳ್ಳೆದವ್ವ ರುಣವಿಲ್ಲ"

ಅಂದರೆ ಲಲಿತಾಳಂತ ಸುಂದರಿ ಹಳ್ಳಿಯಲ್ಲಿ ಯಾರು ಇಲ್ಲ. ಅಷ್ಟು ಸುಂದರವಾಗಿದ್ದಾಳೆ. ಗುಣದಲ್ಲೂ ಯಾರಿಗೂ ಕಡಿಮೆ ಇಲ್ಲ. ಆದರೆ ಅವಳಿಗೆ ಗಂಡನೇ ಇಲ್ಲ ಎಂದಾಗ ಅವೆಲ್ಲಾ ಇದ್ದರೂ ನಿಷ್ಪ್ರಯೋಜಕ ಎಂಬ ಮಾತು ಮೇಲಿನ ಸಾಲುಗಳಿಂದ ಕಂಡುಬರುತ್ತದೆ. ಇಲ್ಲಿ ಕೂಡ ಗ್ರಾಮೀಣ ಭಾಷೆಯನ್ನು ಜನಪದರ ದಾಟಿಯಲ್ಲಿ ಒಂದು ವಸ್ತು ಅಥವಾ ಸನ್ನಿವೇಷ ನಿರೂಪಣೆಗೊಂಡಿದೆ. ಗೊರೂರರ ಮೇಲೆ ಗಾಂಧೀಜಿಯ ಗಾಢವಾದ ಪ್ರಭಾವವಿದ್ದು ಅದನ್ನು ಗೊರೂರರು ಸಾಹಿತ್ಯದಲ್ಲಿ ವಸ್ತುವಾಗಿ ತರುವ ಪ್ರಯತ್ನ ಮಾಡಿದ್ದಾರೆ.

ಅದೇ ರೀತಿ ಸಫಲ ಜೀವನ ಕತೆಯಲ್ಲಿ ಬರುವ ಕಥಾ ನಾಯಕ ವೆಂಟರಾಯರು ತಾಲೂಕು ಕಛೇರಿಯಲ್ಲಿ ಮುವತ್ತೈದು ವರುಷಗಳು ಕೆಲಸ ಮಾಡಿ ನಿವೃತ್ತರಾದರು. ಪಟ್ಟಣದಲ್ಲಿ ವಾಸಮಾಡಲು ಅಲ್ಲಿ ಮನೆ ಇರಲಿಲ್ಲ. ಹಳ್ಳಿಯಲ್ಲಿಯೂ ಮನೆಯಾಗಲೀ ಜಮೀನಾಗಲಿ ಇರುವುದಿಲ್ಲ. ಬರುವ ಸಂಬಳ ಮೂವತ್ತೈದು ವರ್ಷಗಳ ಕೆಳಗೆ ಇಪ್ಪತ್ತೈದು ರೂಪಾಯಿ ಇದ್ದು ಅದರಲ್ಲೇ ಜೀವನ ಸಾಗಿಸಿದರು. ಕೊನೆಗೆ ಅವರಿಂದ ಉಳಿಸಲು ಸಾಧ್ಯವಾದದ್ದು ೧೮೦೦ರೂಪಾಯಿ ಮಾತ್ರ. ಹೀಗಿರುವಾಗ ತನ್ನ ಹುಟ್ಟೂರಿನ ನೆನಪಾಗಿ ಮಲ್ಲಿಗೆಹಳ್ಳಿಗೆ ಬಂದು ನೆಲೆನಿಂತರು. ಸಾವಿರದ ಇನ್ನೂರು ರೂಪಾಯಿಗಳನ್ನು ಕೊಟ್ಟು ಅವರು ಆರು ಎಕರೆ ಖುಷ್ಕಿ ನೆಲವನ್ನು ಕೊಂಡುಕೊಂಡರು. ಅವರ ಸುತ್ತಾಮುತ್ತಾ ಇದ್ದ ಪೆನ್ಷನರ್‌ಗಳೆಲ್ಲ ವೆಂಕಟರಾಯರಿಗೆ ಹುಚ್ಚ ಎಂದು ಕರೆಯುತ್ತಾರೆ. ಆದರೆ ತಾನು ಮಾಡುವ ಕೆಲಸದ ಮೇಲೆ ನಂಬಿಕೆ ಮತ್ತು ಛಲ ಇರುವುದರಿಂದ ಅದನ್ನು ಬಿಡದೇ ಅದರಲ್ಲೇ ಹೂಗಳನ್ನು, ತರಕಾರಿಗಳನ್ನು ಬೆಳೆಯುತ್ತಾನೆ. ಹಾಲಿಗಾಗಿ ಹಸುಗಳನ್ನು ಸಾಕುತ್ತಾನೆ.

ಈಚೆಗೆ ಪುಡಿಹಾಲಿನ ಬೆರಕೆಯನ್ನು ಕುರಿತು ವೆಂಕಟರಾಯರು ಈ ರೀತಿ ಹೇಳುತ್ತಾರೆ. "ಕತ್ತೆಯ ಮೃತಪಾನ

ಶುಂಠರಿಗೆ ಸವಿಭೋನ"[೧೦]

ಅಂದರೆ ಬೇರೆ ದೇಶದಿಂದ ಬರುವ ಹಾಲಿನ ಪುಡಿ ಆಡು, ಕುರಿ, ಹಂದಿ, ಹೆಸರಗತ್ತೆ, ನಾಯಿಗಳ ಹಾಲಿನ ಪುಡಿಯನ್ನೆಲ್ಲ ಇಲ್ಲಿಯ ಗೋವಳರು ನೀರಿಗೆ ಕದಡಿ ಕೊಡುತ್ತಾರಂತೆ ಹಾಗಾಗಿ ಹಾಲಿನ ಪುಡಿಯನ್ನು ಒಪ್ಪಿಕೊಳ್ಳುವಲ್ಲಿ ಗಂಡ-ಹೆಂಡತಿಯರ ನಡುವೆ ಭಿನ್ನಾಭಿಪ್ರಾಯಗಳಿವೆ.

*** ಅಭಿವ್ಯಕ್ತಿ ಸಂಬಂಧ**

ಯಾವುದೇ ಕೃತಿಯಲ್ಲಿ ಅಭಿವ್ಯಕ್ತಿ ಮುಖ್ಯ ಅಂಶ. ವಸ್ತು, ಪಾತ್ರ, ಘಟನೆ, ಸನ್ನಿವೇಶಗಳು ಮನಸ್ಸನ್ನು ತುಂಬುವುದು ಅಭಿವ್ಯಕ್ತಿಯ ಮೂಲಕ. ಲೇಖಕರ ಕ್ರೀಯಾಶೀಲತೆ ತಿಳಿದು ಬರುವುದೇ ಆತನ ಅಭಿವ್ಯಕ್ತಿಯ ಕ್ರಮದಿಂದ. ಸಹಜವಾಗಿ ಮಾಸ್ತಿ, ಆನಂದ ಮತ್ತು ಗೊರೂರು ಸಣ್ಣಕತೆಗಳು ಅಭಿವ್ಯಕ್ತಿಯ ಕ್ರಮದಲ್ಲಿ ಭಿನ್ನತೆಯಿದೆ. ಮಾಸ್ತಿಯವರದ್ದು ಸರಳ ಸುಂದರ ನಿರುದ್ವಿಗ್ನ ಶೈಲಿ ಕಥನ ಕಲೆ ಅವರಿಗೆ ಚೆನ್ನಾಗಿ ಸಿದ್ದಿಸಿದೆ. ಅವರ ಅದ್ಭುತ ಕಥನ ಕಲೆಯ ಹಿನ್ನೆಲೆಯಲ್ಲಿ ಸಣ್ಣಕತೆಗಳ ಜನಕ ಎಂದೇ ಕರೆಸಿಕೊಂಡಿದ್ದಾರೆ. ಬಹುಶಃ ಮಾಸ್ತಿಯವರಂತೆ ನಿರಾಡಂಬರವಾಗಿ ಕತೆ ಹೇಳುವುದು ಮತ್ತ್ಯಾರಿಗೂ ಸಾಧ್ಯವಿಲ್ಲವೆನೋ.

ಮಾಸ್ತಿಯವರ ಅಭಿವ್ಯಕ್ತಿಯ ರೀತಿ ವಿಭಿನ್ನ ರೀತಿಯಲ್ಲಿ ತೋರಿಬರುತ್ತದೆ. ಮುಖ್ಯವಾಗಿ ಅವರ ಕತೆ ನಡೆಯುವ ಕಾಲ ಮತ್ತು ಅದನ್ನು ಹೇಳುವ ಕಾಲ ಎರಡನ್ನು ದೂರವಿಡುತ್ತದೆ. ತಮ್ಮ ಯಾವುದೇ ಅಭಿಪ್ರಾಯ ಪೂರ್ವಗ್ರಹಗಳನ್ನು ಓದುಗ ಒಪ್ಪಿಕೊಳ್ಳುವಂತೆ ಬಲವಂತ ಪಡಿಸುವುದಿಲ್ಲ. ತಮ್ಮ ಅಭಿಪ್ರಾಯ ಭಾವನೆಗಳ ಮುಂದಿಟ್ಟು ಅವನ್ನುಅಂಗೀಕರಿಸುವಂತೆ ಅಥವಾ ನಿರಾಕರಿಸುವ ಆಯ್ಕೆಯನ್ನು ಓದುಗರಿಗೆ ಬಿಡುತ್ತಾರೆ.

ಮಾಸ್ತಿ ಆಧುನಿಕ ಲೇಖಕರಾಗಿರುವುದರಿಂದ ಅವರ ಉದ್ದೇಶಗಳಿಗೆ ಕೂಡ ಆಧುನಿಕತೆಯ ಬಣ್ಣ ಬಂದಿದೆ. ಆಧುನಿಕತೆಗೆ ಸಹಜವಾದ ಸಂಕೀರ್ಣತೆಯೂ ಬಂದಿದೆ. ಆದರೆ ಮಾಸ್ತಿಯವರು ಆಧುನಿಕರಾಗಿರುವುದರಿಂದ ಈ ಹೊಸ ಬಣ್ಣ ಸಂಕೀರ್ಣತೆಗಳು ತಾವಾಗಿ ಬಂದಿವೆಯೆಂದಲೂ ಅಲ್ಲ. ಪ್ರಾಚೀನ ಸಾಹಿತ್ಯದಲ್ಲಿ ಬರುಬರುತ್ತ ಕೇವಲ ಒಂದು ಯಾಂತ್ರಿಕ ರೂಢಿಯಾಗಿಬಿಟ್ಟಿದ್ದ ಈ ತಂತ್ರವನ್ನು ಅವರು ತಮ್ಮ ಹೊಸ ಅವಶ್ಯಕತೆಗಳಿಗೆ ಹೊಂದುವಂತೆ ಹೊಸ ಎಚ್ಚರದಲ್ಲಿ ಮತ್ತು ಬುದ್ಧಿಪೂರ್ವಕವಾಗಿ ಬಳಸಿದ್ಧಾರೆಂಬುದನ್ನು ಗಮನಿಸಬೇಕು.

ಮಾಸ್ತಿಯವರ ಕತೆಗಳಲ್ಲಿ ಕಥಾಮುಖ ಅಥವಾ ಪೀಠಿಕೆ ಇಲ್ಲದೇ ಕತೆ ತಟ್ಟನೆ ಆರಂಭವಾಗುವ ಪದ್ಧತಿ ಇಲ್ಲ. ಇಂದಿರೆಯೋ ಅಲ್ಲವೋ?. ವೇಲೂರಿನ ಲಕ್ಷ್ಮಮ್ಮನಂಥ ಒಂದೆರಡು ಉದಾಹರಣೆಗಳನ್ನು ಬಿಟ್ಟರೆ ಅವರ ಕತೆಗಳಲ್ಲಿ ಜನಪದ ಕತೆಗಳಂತೆ ಕತೆಯ ನಿಜವಾದ ಆರಂಭದಿಂದಲೇ ಆರಂಭವಾಗುತ್ತದೆ. ಕತೆಯು ಶಿಖರದ ಹತ್ತಿರವೇ ಆರಂಭಿಸಿ. ಆ ಶಿಖರಕ್ಕೆ ಹಿನ್ನೆಲೆಯಾದ ಸಂಗತಿಗಳನ್ನು ನಂತರ

ಒಂದೆಡೆ ಅಥವಾ ಅಲ್ಲಲ್ಲಿ ಚೆದುರಿದಂತೆ ಹೇಳುವ ವಿಧಾನ ಅವರ ಕತೆಗಳಲ್ಲಿ ಇಲ್ಲ. ಇದಕ್ಕೆ ಮುಖ್ಯವಾದುದೆಂದರೆ ಮಾಸ್ತಿಯವರ ಅನೇಕ ಕತೆಗಳಲ್ಲಿ ಶಿಖರ ಬಿಂದುವನ್ನು ಗುರುತಿಸುವುದೇ ಅಸಾಧ್ಯ. ಕತೆಯ ಅಂಶಗಳನ್ನೆಲ್ಲ ಒಂದು ಶಿಖರದತ್ತ ಬೆಳೆಸಿಕೊಂಡು ಹೋಗಿ ಹೆಚ್ಚಿನ ಲಕ್ಷ್ಯವನ್ನು ಅದರಲ್ಲಿಯೇ ಕೇಂದ್ರಿಕರಿಸುವಂತೆ ಮಾಡುವ ಪಾಶ್ಚಾತ್ಯ ಕತೆಗಳ ರೀತಿ ಅವರಲಿಲ್ಲ. ಹೀಗೆ ಶಿಖರವಿಲ್ಲದೇ ಕತೆಯನ್ನು ಆದಷ್ಟು ಸಂಗ್ರಹರೂಪದಲ್ಲಿಯೇ ನಿರೂಪಿಸುತ್ತಾ ಆದರೂ ಅದರ ನಾಟಕೀಯ ತೀವ್ರತೆ ತೀರ ಇಳಿಯದಂತೆಯೂ ನೋಡಿಕೊಳ್ಳುತ್ತಾ ಒಂದು ಹದದಲ್ಲಿ ಕತೆಯನ್ನು ನಡೆಸುವುದು ಮಾಸ್ತಿಯವರ ರೀತಿ. ಇದು ಜನಪದ ಕತೆಗಳದೇ ಇನ್ನೋಂದು ಲಕ್ಷಣ. ಆದರೆ ಶಿಷ್ಟ ಸಾಹಿತ್ಯಕ್ಕೆ ನಾಟ್ಯೀಕರಣ ಜೀವಾಳದ ಅಂಶ. ಸಂಗ್ರಹ ನಿರೂಪಣೆ ಕಲಾತ್ಮಕತೆಯ ಅಭಾವದ ನಿದರ್ಶನ ಅಂತೆಯೇ ಸಂಗ್ರಹ ನಿರೂಪಣೆಯನ್ನು ಬಳಸಿಯೂ ನಾಟ್ಯೀಕರಣದ ತೀವ್ರತೆಯನ್ನು ಉಳಿಸಿಕೊಳ್ಳುವುದು ಕಠಿಣವಾದ ಕೆಲಸ. ಇಂಗ್ಲೀಷ್ ಕಾದಂಬರಿಕಾರರಲ್ಲಿ ಜೇನ್ ಆಸ್ಟಿನ್ ಗೆ ಪ್ರಿಯವಾದ ತಂತ್ರ ಇದು. ಈ ಕೆಲಸದಲ್ಲಿ ಮಾಸ್ತಿಯವರು ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ.

ಕತೆಗಾರರು ಬಹಿರಂಗ ರೀತಿಯಲ್ಲಿ ಸಣ್ಣಕತೆಗಳನ್ನು ಪ್ರವೇಶಿಸಿ ಲೇಖಕರ ಮನೋಧರ್ಮವನ್ನು ಕುರಿತು ಹೇಳುವುದು ತಮ್ಮ ವರ್ಣನೇಯ ಇತಿ ಮಿತಿಗಳನ್ನು ಕುರಿತು ನೀಡುವ ಪ್ರಾಮಾಣಿಕ ಹೇಳಿಕೆಗಳು. ಲೋಕಚಾರ, ವಿಚಾರಗಳ ಬಗ್ಗೆ ತಮ್ಮ ಅನುಭವ ಅಭಿಪ್ರಾಯಗಳನ್ನು ಮುಂದಿಟ್ಟು ಆಯ್ಕೆ ನಿರ್ಧಾರಗಳನ್ನು ಓದುಗರಿಗೆ ಬಿಡುವ ರೀತಿ ಇವೆಲ್ಲವೂ ಅಸಾಧಾರಣ ಮಹತ್ವದಿಂದ ಬೆಳಗುತ್ತವೆ. ಇಲ್ಲಿ ಪಾತ್ರಗಳ ಸ್ವಭಾವ ದರ್ಶನದಲ್ಲಿ ಹೃದಯವಂತಿಕೆಯಿದೆ. ಘಟನೆಗಳನ್ನು ಅರ್ಥೈಸುವ ರೀತಿಯಲ್ಲಿ ಮೇಲ್ಪದರುಗಳು ಒಳಪದರುಗಳನ್ನು ಸುರುಳಿ-ಸುರುಳಿಯಾಗಿ ಬಿಚ್ಚುತ್ತಾ ಹೋಗುತ್ತದೆ.

"ರಾತ್ರಿ ರಾಶಿಗೆ ಬೆಂಕಿ ಹಚ್ಚಿದನ್ನೂ ರಾಶಿ ಉರಿದದ್ದನ್ನು ಹೀಗೆಂದು ನಾನು ವರ್ಣಿಸಬೇಕಾದದ್ದಿಲ್ಲ. ಅದರ ಅಂದವನ್ನು ಹೇಳುವುದಕ್ಕೆ ನನಗೆ ಮಾತು ತಿಳಿಯದು"[೧೧]

ಇಂತಹ ಮಾತುಗಳು ಲೇಖಕರ ಪ್ರಾಮಾಣಿಕತೆಗೆ ಕನ್ನಡಿ ಹಿಡಿಯುತ್ತವೆ. ಅವರು ಸಣ್ಣಕತೆಗಳನ್ನು ನಮ್ಮನ್ನು ಎದುರಿಗೆ ಕೂರಿಸಿಕೊಂಡು ಹೇಳುತ್ತಿರುವಂತೆ ಭಾಸವಾಗುತ್ತದೆ. "ಕೇಳುಗಂ 'ಹೂಂ' ಗುಟ್ಟದೇ, ಬೇರೆ ವಿಧಿಯೇ ಇಲ್ಲ. ಇದಕ್ಕೆ ಕಾರಣವೆಂದರೆ ಅವರು ಕತೆ ಹೇಳುವ ಜಾಣ್ಮೆಯನ್ನು ನೋಡಿ ಅವರ ತಾತ ಅವರನ್ನು ಸೂತ ಪುರಾಣಿಕನಿಗೆ ಹೋಲಿಸಿದ್ದರಂತೆ"[೧೨]

ಮಾಸ್ತಿಯವರ ಕತೆಗಳು ಸರಳ ಕತೆಗಳಾದರು ಅದರಲ್ಲಿ ಬರುವ ಉಪಮೆ ಔಚಿತ್ಯಗಳು ಅಷ್ಟೇನೂ ಸರಳವಾದವುಗಳಲ್ಲ. ಅದರಲ್ಲಿ ಆಳವಾದ ಜೀವನಾನುಭವ, ವಿಚಾರ ಬೋಧಕ ವಿಶಿಷ್ಟತೆಗಳಿವೆ.

"ಕಲ್ಲು ಬಂಡೆಗಳು ಅಡ್ಡ ಬಂದಾಗ ಘೋಷವನ್ನು ಹೆಚ್ಚಿಸುವ ಪ್ರವಾಹದಂತೆ ನಮ್ಮ ಲಬೋಲಬೋ ಶಬ್ಧವು ಉಬ್ಬಿ ಮೊರೆಯಿತು"[೧೩]

"ಹುಡುಗಿ ಗಡೆಯನ್ನು ಸುತ್ತಿ ಏರಬೇಕಾದರೆ ತೆಂಗಿನ ಮರವನ್ನೇರುವ ಆಳಿಲಂತೆ ಕಂಡಳು"[೧೪]

"ಒಳ್ಳೆ ಮಾಗಿದ ನಿಂಬೆಹಣ್ಣಿನ ಹಾಗೆ ಇದ್ದಳು"

ಇವು ಒಂದೊಂದು ಎಷ್ಟೋ ಮಹತ್ವದ ವಿಚಾರಗಳನ್ನು ಒಯ್ದು ಮನಕ್ಕೆ ಮುಟ್ಟಿಸುತ್ತದೆ. ಜೀವನದ ಅಸಂಗತೆ, ಏಕಾಂಗಿತನ ಅದರಿಂದ ಉಂಟಾಗುವ ಭಯಭೀತಿಗಳನ್ನು ಈ ಮಾತುಗಳು ಬಹಳ ಪರಿಣಾಮಕಾರಿಯಾಗಿ ಬಿಂಬಿಸಿವೆ.

ಕತೆಗಳಲ್ಲಿ ಬರುವ ಮುಖ್ಯ ಪಾತ್ರ ಉಳಿದ ಪಾತ್ರಗಳು ಜೀವಂತಿಕೆಯಿಂದ ಅಭಿವ್ಯಕ್ತಿಗೊಳ್ಳುತ್ತವೆ. ಸಾವಿತ್ರಮ್ಮನ ಸಹನೆ, ಗಯಟೆ ಕವಿಯ ನೀಚತನ, ಮುನಿಯನ ವೈಯಕ್ತಿಕ ಬಿಕ್ಕಟ್ಟು, ಜ್ಯೋಗ್ಯೋರ ಅಂಜಪ್ಪನ ಅನುಭವ ಇವೆಲ್ಲವನ್ನು ನಾವು ಕಣ್ಣಿನಿಂದ ಕಾಣಬಹುದೆನ್ನುವಷ್ಟು ಸ್ಪುಟವಾಗಿವೆ.

ಬದುಕಿನ ಬೆಳವಣಿಗೆಯ ಸಣ್ಣ ಸಣ್ಣ ಘಟನೆ ಸನ್ನಿವೇಶಗಳ ಮೂಲಕ ಹಂತ-ಹಂತವಾಗಿ ಬೆಳೆಯುತ್ತವೆ. ಕತೆಯಲ್ಲಿ ಬರುವ ಪಾತ್ರಗಳ ಜೀವನದ ಅರ್ಥೈಸುವಿಕೆಗೆ ವ್ಯಾಖ್ಯೆಗಳೇ ಬೇಡ ಎನ್ನುವಷ್ಟು ಸ್ಪಷ್ಟವಾಗಿ ಬಂದಿವೆ.

ಮಾಸ್ತಿಯವರ ಈ ಕತೆಗಳು ಬದಲಾಗಿತ್ತಿರುವ ಜನರ ಮನೋಧರ್ಮ ಅದರ ಸೂಕ್ಷ್ಮ-ಸ್ಥೂಲಗಳನ್ನು, ಸಮಾಜದಲ್ಲಿ ಅದು ಉಂಟುಮಾಡಿದ ಕಂಪನಗಳನ್ನು ಆ ಬದಲಾವಣೆಯ ಅನಿವಾರ್ಯತೆಯನ್ನು ಅಂದರೆ ಹೊಸ ರಚನೆಗಳನ್ನು ಸಹಾನುಭೂತಿಯಿಂದ ದಾಖಲಿಸುತ್ತಲೇ, ಪರಂಪರೆಯ ಸತ್ವ, ಬೆಲೆ, ಅರ್ಥಪೂರ್ಣತೆ ಮತ್ತು ಸಾತತ್ಯವನ್ನು ತೋರಿಸಿಕೊಡುವ ತನ್ನ ಪ್ರಯತ್ನದಲ್ಲಿ ಕತೆಗಳು ಯಶಸ್ವಿಯಾಗಿವೆ. ಮಾಸ್ತಿಯವರ ಈ ಕತೆಗಳ ಹಿಂದೆ ಯಾವ ಗ್ರಹಿಕೆ, ಹದ ಮತ್ತು ತಿಳುವಳಿಕೆಯಿದೆಯೋ ಅದೇ ಹದ ಅವರ ಮುಂದಿನ ಕತೆಗಳನ್ನು ರೂಪಿಸಿದೆ. ಭಾರತೀಯ ಕಥನ ರೀತಿ ಜಾನಪದ ಕಥನ ರೀತಿಯನ್ನು ಆಧುನಿಕ ಸಣ್ಣ ಕತೆಗಳ ಕಥನ ರೀತಿಯನ್ನು ಸಮರಸಗೊಂಡ ಅವರ ಕಥನ ರೀತಿಗೂ ಈ ತಿಳುವಳಿಕೆಯೇ ಕಾರಣ.

'ಗೊರೂರು'ರವರ ಸಣ್ಣಕತೆಗಳು ಲಲಿತ ಪ್ರಬಂಧದ ಮಾದರಿಯಲ್ಲಿಯೇ ಇವರ ಕಥೆಗಳು ವಿನೋದ ಚಿತ್ರಗಳು, ಇವರ ಕಥೆಗಳನ್ನು ಗೆರೆ ಎಳೆದು ತೋರಿಸುವಂತದ್ದು, ಬಹಳ ಕಷ್ಟದ ಕೆಲಸವಾಗಿದೆ. ಗೊರೂರರ ಕಥೆ ಮತ್ತು ಕಾದಂಬರಿಗಳಿಗೆ ಹೇಗೆ ಹಳ್ಳಿ ಸ್ಫೂರ್ತಿಯ ಸೆಲೆಯಾಗಿತ್ತೋ ಹಾಗೆಯೇ ಅವರ ಕಥೆಗಳಿಗೂ ಹಳ್ಳಿಯೇ ಸ್ಫೂರ್ತಿಯ ತಾಣವಾಗಿದೆ. ಅವರ ಕಥೆಗಳು ಇತರರಿಂದ ಕೇಳಿ ಕಂಡಂತಹ ಅನುಭವಗಳಿಗಿಂತ ಮಿಗಿಲಾಗಿ ತಾವೇ ಸ್ವತಃ ಅನುಭವಿಸಿದ ಅನುಭವಗಳ ನಿರೂಪಣೆಯೇ ಆಗಿವೆ. ಈ ವಿಚಾರವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ಗೊರೂರರೇ ಇದನ್ನು ಸ್ಪಷ್ಟಪಡಿಸಿದ್ದರ ಬಗೆಗೆ ಪ್ರಧಾನ ಗುರುದತ್ತರು ಗೊರೂರರ ಬಗೆಗೆ ಬರೆದ ಪುಸ್ತಕವೊಂದರಲ್ಲಿ ಗುರುತಿಸಿದ್ದಾರೆ. ಜೊತೆಗೆ ಈ ಬಗೆಯ ಚಿತ್ರಣಗಳನ್ನು ನೀಡಿರುವ ಕುವೆಂಪು ಅವರ ಮಲೆನಾಡಿನ ಚಿತ್ರಗಳೊಡನೆ ಹೋಲಿಸಿ ನೋಡಬಹುದಾದ ಹಾಗೂ ಹೋಲಿಕೆಯ ಅನಂತರದಲ್ಲೂ ವೈಶಿಷ್ಟ್ಯ ಮತ್ತು ಮೌಲಿಕತೆಯನ್ನು ಉಳಿಸಿಕೊಳ್ಳುವ ಕೃತಿಗಳಾಗಿ ಇವು ಉಳಿದುಕೊಳ್ಳುತ್ತವೆ ಎಂಬುದು ಮಹತ್ವದ ಸಂಗತಿ ಎಂಬುದಾಗಿಯೂ ತಿಳಿಸಿದ್ದಾರೆ.

ಹಾಗೆಯೇ ಗೊರೂರರ ಕಥೆಗಳನ್ನು ಕುರಿತು ಬರೆಯುತ್ತ ಪ್ರೊ॥ ಎಲ್. ಎಸ್. ಶೇಷಗಿರಿರಾವ್ ಅವರು ಹೀಗೆ ಹೇಳಿದ್ದಾರೆ. "ಗೊರೂರರ ಕಥೆಗಳಲ್ಲಿ ಉದ್ದೇಶಿತ ಕಲೆ ಇಲ್ಲ. ಆಧುನಿಕ ಸಂವೇದನೆಯ

ಪ್ರಿಯವಾದ, ಬಿಗಿಯಾದ ಬಂಧ, ಸೂಕ್ಷ್ಮತೆ, ಸಂಕೇತ, ಪ್ರತಿಮೆಗಳ ಬಳಕೆ ಇಲ್ಲ. ಎಷ್ಟೋ ಸಾರಿ ಕಥೆಗಾರರು ನೇರವಾಗಿ ಪ್ರವೇಶಮಾಡಿ ಅಭಿಪ್ರಾಯ ನೀಡುವುದು ಉಂಟು. ಹಲವು ಕಥೆಗಳು ಬರಿಯ ಪ್ರಬಂಧಗಳೇ ಆಗಿ ಉಳಿಯುತ್ತದೆ. ತಂತ್ರದ ಬಗೆಗೆ ಅವರು ಹೆಚ್ಚು ಆಲೋಚನೆ ಮಾಡಿದವರೇ ಅಲ್ಲ ಎಂದು ತೋರುತ್ತದೆ".

ಕತೆಗಳ ರಚನೆಯಲ್ಲಿ ಗೊರೂರರಿಗೆ ಮಹತ್ವದ ಸ್ಥಾನವು ದೊರೆತಿದೆ. ಅವರ ಕಥೆಗಳು ಜೀವಂತಿಕೆಯ ಲಕ್ಷಣಗಳಿಂದ ಕೂಡಿದವುಗಳಾಗಿವೆ. ಓದುಗರಲ್ಲಿ ಲವಲವಿಕೆಯನ್ನು ಉಂಟುಮಾಡುತ್ತವೆ. ತಮ್ಮ ಸುತ್ತಮುತ್ತಲಿನ ಜೀವನ ಚಿತ್ರಣವನ್ನು ಕಣ್ಣಿಗೆ ಕಟ್ಟುವ ಹಾಗೆ ಸರಳ ಸುಂದರವಾಗಿ ಚಿತ್ರಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ವೈಯ್ಯಾರಿ ಕಥೆಯಲ್ಲಿ ಬೇಟೆಗಾರ ಯುವಕ ಸೇತುವೆಯನ್ನು ಹತ್ತುವ ರೀತಿ, ಈಡಿಗರ ಹೆಣ್ಣು ಕಥೆಯಲ್ಲಿ ಬರುವ ಕಾಡಿನ ವರ್ಣನೆ, ಬೂತಯ್ಯನ ಮಗ ಅಯ್ಯು ಕಥೆಯಲ್ಲಿ ಪ್ರವಾಹದ ಸನ್ನಿವೇಶ, ಊರುಕೇರಿ, ಕೆರೆ, ಹೊಳೆ, ಬೆಟ್ಟಗುಡ್ಡ, ಕಾಡು ಕಣಿವೆ, ದೇವಸ್ಥಾನ, ಹಬ್ಬ ಹರಿದಿನಗಳ ಆಚರಣೆ, ತಮ್ಮ ಊರಿನ ಎಲ್ಲ ವರ್ಗದ ಜನ ಇವೆಲ್ಲವುಗಳ ಬಗೆಗೂ ವಿವರಣೆಯನ್ನು ನೀಡುತ್ತಾರೆ.

ಗೊರೂರರ ಕಥೆಗಳ ಬಗ್ಗೆ ವ್ಯಕ್ತವಾಗಿರುವ ಅಭಿಪ್ರಾಯವೊಂದು ಹೀಗಿದೆ. "ಗೊರೂರರು ತಮ್ಮ ಕಥೆಗಳಲ್ಲಿ ಗ್ರಾಮ ಜೀವನದ ಸ್ವಚ್ಛ ಶುಭ್ರ ಜೀವನವನ್ನು ಮಾತ್ರ ಪರಿಚಯಿಸಿದ್ದಾರೆಯೇ ಹೊರತು, ಆ ಜನರ ಬದುಕಿನ ಸಂಕೀರ್ಣಾವಸ್ಥೆಯ ಕೆಸರನ್ನಾಗಲಿ, ಘಾಟುಗಳನ್ನಾಗಲಿ ಇದುವರೆಗೆ ಚಿತ್ರಿಸಲು ಸಾಧ್ಯವಾಗಲಿಲ್ಲ ಎನಿಸುತ್ತದೆ. ಹಳ್ಳಿಯ ಬಾಳಿನ ಒಂದು ವಿಶಿಷ್ಟವಾದ ಕಂಪು ನೆಲದ ಕಮ್ಮೆನ್ನುವ ವಾಸನೆ ಇವರ ಕಥೆಗಳಲ್ಲಿ ಮೂಗಿಗೆ ಬಡಿಯುವುದಿಲ್ಲ. ಇದು ಅನಿವಾರ್ಯವು ಹೌದು. ಏಕೆಂದರೆ ಅವರು ಹುಟ್ಟಿ ಬೆಳದದ್ದು ಬ್ರಾಹ್ಮಣ ಸಮಾಜದಲ್ಲಿ ಆದ್ದರಿಂದ ಇವರು ಆ ಸಮಾಜದಲ್ಲಿದ್ದು ಅದರ ಒಳಹೊರಗನ್ನು ಅದರ ಮೇಲೇರಿ ಇತರ ಸಮಾಜಗಳನ್ನು ನೋಡಲು ಸಾಧ್ಯವಾಗಿದೆಯೇ ಹೊರತು ಇತರ ಸಮಾಜದವರ ಬದುಕಿನಲ್ಲಿ ಮುಳುಗಿ ಅವರಲ್ಲಿ ತಾವೂ ಒಬ್ಬರಾಗಿ ನೋಡಲು ಸಾಧ್ಯವಾಗಿಲ್ಲ."[೧೫] ಗೊರೂರರ ಕೃತಿಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಗೆ ಮುನ್ನುಡಿಯನ್ನು ಬರೆಯುತ್ತಾ ಈ ವಿಚಾರದ ಬಗೆಗೆ ಸಿ.ಪಿ. ಕೃಷ್ಣಕುಮಾರ್‌ರವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ. "ಕುವೆಂಪು, ಕಾರಂತ, ಗೊರೂರರಂಥವರಲ್ಲಿ ಮಣ್ಣಿನ ವಾಸನೆ ಇಲ್ಲವೆಂದರೆ ಅದು ಮತ್ತಾರಲ್ಲೂ ಇಲ್ಲವೆನ್ನಬೇಕಾಗುತ್ತದೆ".೫೬

ಹಾಗೆಯೇ ಎಸ್. ಪ್ರಹ್ಲಾದರಾಯರು ಗೊರೂರರ ಕಥೆಗಳ ವೈಶಿಷ್ಟ್ಯವನ್ನು ಈ ರೀತಿಯಾಗಿ ಗುರುತಿಸಿದ್ದಾರೆ. ಸಣ್ಣಕತೆಗಳ ಕ್ಷೇತ್ರದಲ್ಲೂ ಪ್ರಬಂಧಕಾರನ ನಡಿಗೆನೇ. ಅಮೂರ್ತವಾದ ಅಭಿಪ್ರಾಯ ಮಂಡನೆ ವಿಶ್ಲೇಷಣೆ–ಇವು ಅವರ ಕ್ರಮವೇ ಅಲ್ಲ. ಎಂಥ ಜಟಿಲ ಸಮಸ್ಯೆಯನ್ನಾದರೂ ಅವರು ಸ್ಪಷ್ಟ, ಮೂರ್ತ ಜೀವನ ಚಿತ್ರಣಗಳಿಂದ ಸುಲಭವಾಗಿ ಬಿಡಿಸುತ್ತಾರೆ.

ಗೊರೂರು ಕಥೆಗಳು ಎಂದಾಕ್ಷಣ ಒಂದು ವಿಷಯ ಮತ್ತು ವಸ್ತುವಿರುತ್ತದೆ. ಕತೆಗಾರನ ಕಲ್ಪನೆ, ವಿಚಾರಲಹರಿಗಳು ಅದರ ಸುತ್ತಲೂ ಹರಿಯುವುದು ಇತರೆ ವಿಚಾರಗಳನ್ನು ಅದರ

ಜೊತೆಯಲ್ಲಿ ಹೆಣೆಯುವ ಜಾಣ್ಮೆ, ಹಾಸ್ಯ, ವಿನೋದಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ತರುವುದು ಇವೆಲ್ಲವುಗಳನ್ನು ಒಳಗೊಂಡಿರುವಂತಹ ಕಥೆಗಳೆಂದು ನಾವು ಭಾವಿಸುತ್ತೇವೆ. ಆದರೆ ಗೊರೂರರ ಕತೆಗಳು ಈ ರೀತಿ ಯಾವುದೇ ತಂತ್ರ, ಸೂತ್ರಗಳಿಗೆ ಕಟ್ಟು ಬಿದ್ದವುಗಳಲ್ಲ ಇಂತಹ ಒಂದು ನಿರ್ದಿಷ್ಟ ಸೂತ್ರಕ್ಕೆ ಅಳವಡಿಸಿ ಅವುಗಳನ್ನು ನೋಡಲು ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಅವರ ಕಥೆ ವಿನೋದ ಚಿತ್ರಗಳನ್ನು ಬೇರೆ ಬೇರೆ ಮಾಡಿ ನೋಡಿದಾಗಲು ವ್ಯತ್ಯಾಸ ಕಂಡುಬರುವುದಿಲ್ಲ.

ಗೊರೂರುರವರ ಪಾತ್ರ ಸೃಷ್ಟಿ ಘಟನಾ ನಿರ್ಮಾಣ, ವಾತಾವರಣ ರಚನೆಗಿಂತಲೂ, ವಿಶೇಷ ಕೌಶಲವನ್ನು ಅವರ ಸಂವಾದ ಶೈಲಿಯಲ್ಲಿ ಕಾಣಬಹುದಾಗಿದೆ. ಅವರ ಕಥೆಗಳ ಜೀವಾಳವೇ ಈ ಶೈಲಿಯಲ್ಲಿ ಅಡಗಿದೆ. ಅವರ ಸರಳವಾದ ಭಾಷೆಯ ಬಳಕೆಯೇ ವಿಶಿಷ್ಟವೆನ್ನುವಂತೆ ಇಲ್ಲಿ ತೋರಿದೆ. ಇದರ ನಿಜವಾದ ಅಂತಃಸತ್ವ ಇರುವುದು ಸಂಭಾಷಣೆಗಳಲ್ಲಿ ಓದುಗನನ್ನು ಈ ಸಂವಾದದ ಮೂಲಕ ತೇಲಿಸಿಕೊಂಡು ಹೋಗುತ್ತಾರೆ. ಕತೆಗಳು ಇಲ್ಲಿ ಸಂವಾದದ ಹಾದಿಯನ್ನು ಹಿಡಿದೇ ಮುಂದುವರೆಯುತ್ತದೆ. ಅಂತೆಯೇ ಅವರ ಸಂವಾದ ಶೈಲಿಯ ರಮ್ಯ ಆಕರ್ಷಣೆಯು ಅಷ್ಟೇ ಫಲದಾಯಕವಾಗಿದೆ.

ಗೊರೂರುರವರ ಕಥೆಗಳ ಉತ್ತಮಿಕೆ ಇರುವುದು ಅದರ ಬಂಧದಲ್ಲಿ ಕತೆಯ ಎಲ್ಲಾ ಸೂತ್ರಗಳು ಏಕೀಭವಿಸಿ ಒಮ್ಮುಖವಾಗಿ ಸಾಗುತ್ತವೆ. ಇಲ್ಲಿ ಉಪಕತೆಗಳ ಗೊಂದಲವಿಲ್ಲ. ಆರಂಭದಿಂದ ಮುಕ್ತಾಯದವರೆಗೂ ಒಂದು ಗೀತೆಯಂತೆ ಮೂಡಿ ಬಂದಿದೆ. ಗೊರೂರುರವರ ಲಲಿತ ಶೈಲಿ ಕತೆಗಳ ಸೌಂದರ್ಯವನ್ನು ಹೆಚ್ಚಿಸಿದೆ. ಹಿತಮಿತವಾದ ವರ್ಣನೆಗಳು ಚತುರವಾದ ಸಂಭಾಷಣೆ, ಕತೆಯ ಓಟ ಇವೆಲ್ಲವೂ ಕತೆಯನ್ನು ಓದುಗರಿಗೆ ಆತ್ಮೀಯಗೊಳಿಸಿದೆ.

ಇವರು ಕತೆಗಳನ್ನು ಪ್ರಾರಂಭಿಸುವಾಗ ಕೋಟೆ, ನಮ್ಮ ಊರು, ಬೆಂಗಳೂರು ಮುಂತಾದ ಪದಗಳನ್ನು ಉಪಯೋಗಿಸುತ್ತಾರೆ. ಇಲ್ಲಿನ ಕಥೆಗಳು ಸುದೀರ್ಘವಾದ ಘಟನೆಯೊಂದು ನಮ್ಮ ಮುಂದೆ ನಡೆದಂತೆ ಅನಿಸುತ್ತದೆ. ಎಲ್ಲಿಯೂ ತುಂಡಾದಂತಾಗಲೀ, ಅದರ ಓಟಕ್ಕೆ ಧಕ್ಕೆ ಬಂದಂತಾಗಲಿ ಗೋಚರವಾಗುವುದಿಲ್ಲ. ಒಂದು ಸಮಯ ಸಂದರ್ಭದಿಂದ, ಇನ್ನೊಂದು ಸಮಯ-ಸಂದರ್ಭಕ್ಕೆ ಜಾರಿದಂತಹ ಅರಿವು ಓದುಗನಿಗೆ ಉಂಟಾಗುವುದಿಲ್ಲ. ಅದೇ ಇಲ್ಲಿನ ಕಥಾವೇಗದ ವಿಶಿಷ್ಟ ಗುಣ ಲೇಖಕರು ಇಲ್ಲಿ ಬಹಳ ಜಾಣ್ಮೆಯಿಂದ ಕತೆ ನಡೆಸಿದ್ದಾರೆ.

ಇಲ್ಲಿನ ಭಾಷಾ ಶೈಲಿ ಸರಳವಾದುದರಿಂದ ಓದುಗರಿಗೆ ಸುಲಭವಾಗಿ ನಿಲುಕುತ್ತದೆ. ಆದರೆ ಇದು ನೀರಸವಾಗಿಲ್ಲ. ಭಾವತೀವ್ರತೆ, ಚಿತ್ರಕ ಶಕ್ತಿ ಎಲ್ಲವೂ ಇದರಲ್ಲಿ ಕಂಡುಬರುತ್ತದೆ.

"ಅಯ್ಯಯ್ಯನಲ್ಲಿ ಮೊದಮೊದಲು ಒಳ್ಳೆಯತನ ತೋರಿದಾಗ ಜಾಲ ಹಳ್ಳಿಯ ರೈತರು ಅದನ್ನು ಗಮನಿಸಲೇ ಇಲ್ಲ. ಬೂತಯ್ಯನು ತನ್ನ ಕೆಲಸವಾಗಬೇಕಾದರೆ ಹೀಗೆ ಇರುತ್ತಿದ್ದ."[೧೬]

ಇಂತಹ ಸರಳ ಸುಂದರ ಮಾತುಗಳಲ್ಲಿ ಸನ್ನಿವೇಶದ ಭಾವುಕತೆಯನ್ನು ಉಜ್ವಲಗೊಳಿಸುತ್ತಾರೆ. ಕೆಲವೊಮ್ಮೆ ಈ ಭಾವುಕತೆ ಕೃತಕವಾಗಿಯೂ ತೋರಿ ಬರುವುದುಂಟು. ಇದನ್ನೂ ಪಾತ್ರಗಳು

ಹೊರಲಾರದಂತೆ ಕಂಡು ಬಂದು ಪಾತ್ರಗಳಿಂದ ಹೊರ ಸೂಸಲಾಗದ ಭಾಗವನ್ನು ಲೇಖಕರೇ ತಮ್ಮ ಮಾತುಗಳಲ್ಲಿ ಹೇಳಿ ಮುಗಿಸಿರುವಂತೆಯೂ ಕಂಡುಬರುತ್ತದೆ.

*** ಪಾತ್ರ ಸಂಬಂಧ**

ಮಾಸ್ತಿ ಮತ್ತು ಗೊರೂರರ ಸಣ್ಣ ಕತೆಗಳಲ್ಲಿ ವೈವಿಧ್ಯಮಯ ಪಾತ್ರಗಳು ಕಂಡು ಬರುತ್ತವೆ. ಬಹುಶಃ ವಸ್ತುವಿಗೆ ಅನುಗುಣವಾಗಿ ಭಾವನಾತ್ಮಕ ಪಾತ್ರಗಳು ಎರಡು ಕೃತಿಗಳಲ್ಲೂ ಹೆಚ್ಚಾಗಿ ಕಂಡುಬರುತ್ತದೆ. ಎರಡು ಕೃತಿಗಳಲ್ಲೂ ತಮ್ಮ ಉತ್ತಮ ನಡತೆ ಗುಣಗಳಿಂದ ನಮ್ಮನ್ನು ಆಕರ್ಷಿಸುವಂತಹ ಪಾತ್ರಗಳಿವೆ.

ಜೋಗ್ಯೋರ ಅಂಜಪ್ಪನ ಕೋಳಿಕತೆಯಲ್ಲಿ ಕೋಳಿಕೊಟ್ಟ ಹೆಂಗಸು ಪೆದ್ದಲ್ಲ, ತನ್ನನ್ನು ಸಿಕ್ಕಿಸಿ ಹಾಕಿ ತಾನು ನುಣಚಿಕೊಳ್ಳಲು ಆಕೆ ಹೂಡಿದ ಆಟವದು ಎಂಬುದು ಗೊತ್ತಾದ ಮೇಲೂ ಆ ಬಗ್ಗೆ ಅಂಜಪ್ಪನಾಗಲೀ, ಕತೆಯಾಗಲಿ ತಲೆ ಕೆಡಿಸಿಕೊಳ್ಳುವುದಿಲ್ಲ. ಗೊತ್ತಾದ ಮೇಲೆ ಅವಳನ್ನು ಹೋಗಿ ಅಂಜಪ್ಪ ವಿಚಾರಿಸಿದ ವಿಷಯವನ್ನು ಕತೆ ಹೇಳದೇ ಹೋಗಿರುವುದನ್ನು ಗಮನಿಸಿ, ಕಾಮ ಒಡಮೂಡುವ ಬಗೆಯನ್ನು ಯಾವುದೇ ಸಂಕೋಚಕ್ಕೂ ಒಳಗಾಗದೆ, ಸೂಕ್ಷ್ಮವಾಗಿ ಆರಾಮಾಗಿ ಮಂಡಿಸುತ್ತಿದ್ದಾರೆ.

ಗೊರೂರರ ಕಥೆಯಾದ ಗಂಡುಬೀರಿ ಹೊಸಬಿ ಕಥೆಯಲ್ಲಿ ಬರುವ ಮಾದನ ಪಾತ್ರ ಇದೇ ರೀತಿಯಲ್ಲಿದೆ. ಮಾಸ್ತಿಯವರ ಕಾಮನ ಹಬ್ಬದ ಕತೆಯಲ್ಲಿ **"ವಿಧವೆ"** ಪಾತ್ರ ಸಾವಿತ್ರಮ್ಮ ಗಂಡನ ಬರುವಿಕೆಗಾಗಿ ವರ್ಷಾನುಗಟ್ಟಲೆ ಕಾಯುವುದು, ಅದಕ್ಕಾಗಿ ಹಲವಾರು ವ್ರತಾಚಾರಣೆ ಮಾಡುವುದು.

ಗೊರೂರುರವರ ವೈಯ್ಯಾರಿ ಕಥೆಯಲ್ಲೂ ವಿಧವೆ ಪಾತ್ರ ಬರುತ್ತದೆ. ಆದರೆ ಇದು ಬಾಲವಿಧವೆ, ವಿಧವೆಯ ನೋವನ್ನು ಅನುಭವಿಸುವುದಿಲ್ಲ. ವೈಯ್ಯಾರಿ ಎನ್ನುವ ಶೀರ್ಷಿಕೆಯಂತೆ ತನ್ನ ಸೌಂದರ್ಯದಿಂದ ಹಲವಾರು ಜನರನ್ನು ಮರಳು ಮಾಡುವ ಹುಡುಗಿ.

ಗೊರೂರುರವರ ಸಣ್ಣಕತೆಗಳಲ್ಲಿ ಬರುವ ಪಾತ್ರಗಳು ವ್ಯಕ್ತಿಯ ಕೆಡಕು, ಅತಿರೇಕ ಅಸಹಜತೆಗಳನ್ನು ಬಿಂಬಿಸುವಂತಹ ಪಾತ್ರಗಳಿಲ್ಲ. ಆದರೆ ಹಾಗೆಂದು, ಇಲ್ಲಿ ಪಾತ್ರಗಳೆಲ್ಲಾ ಔನ್ನತ್ಯದ ಶಿಖರವನ್ನೇರಿ ಜೀವನದಿಂದ ದೂರ ನಿಲ್ಲುವ ಪಾತ್ರಗಳಾಗಿಲ್ಲ. ಮಾನವ ಸಹಜವಾದ ಮಿತಿ ದೌರ್ಬಲ್ಯಗಳು ವ್ಯಕ್ತಿತ್ವದ ಕೊರತೆಗಳು ಇಂತಹ ಸಣ್ಣ ಪುಟ್ಟ ವಿಚಾರಗಳನ್ನು ಒಳಗೊಂಡಂತಹ ಪಾತ್ರಗಳಾಗಿ ಹಿತ–ಮಿತವಾಗಿ ಮೂಡಿ ಬಂದಿವೆ. ಅವು ಎಲ್ಲಿಯೂ ಕೃತಕವೆನಿಸುವುದಿಲ್ಲ.

ಮಾಸ್ತಿಯವರ ಸಣ್ಣ ಕಥೆಗಳಲ್ಲಿ ಭಾವ ಪ್ರಧಾನವಾದ ಪಾತ್ರಗಳೇ ಹೆಚ್ಚಾಗಿ ಗೋಚರಿಸುತ್ತವೆ ಹಾಗೂ ಇಲ್ಲಿ ಇವುಗಳ ಸಂಖ್ಯೆಯೂ ಅಪಾರವಾಗಿವೆ. ಆದರೆ ಇವರು ತಮ್ಮ ಗುಣ ಸ್ವಭಾವಗಳಲ್ಲಿ ವ್ಯತ್ಯಾಸಗಳನ್ನು ಪಡೆದಿಲ್ಲ. ಈ ಪಾತ್ರಗಳ ವರ್ತನೆ–ಸ್ವಭಾವಗಳು ಒಂದೇ ಹಾದಿಯಲ್ಲಿವೆ. ಅದರಲ್ಲೂ ಒಂದೊಂದು ಪಾತ್ರಗಳು ಒಂದೊಂದು ಗುಣಗಳ ಪ್ರತೀಕವಾಗಿ ವರ್ತಿಸುವಂತೆ ತೋರಿಬರುತ್ತದೆ. ಒಳ್ಳೆಯ ಪಾತ್ರವಾಗಲೀ, ಕೆಟ್ಟ ಪಾತ್ರವಾಗಲೀ ಔಚಿತ್ಯದ ಹಂತವನ್ನು ಮೀರಿ ಬೆಳೆದಂತೆಯೇ ಕಾಣಿಸುತ್ತದೆ.

ಇದಕ್ಕೆ ನಿದರ್ಶನವಾಗಿ ವೆಂಕಟಶಾಮಿಯ ಪ್ರಣಯ ಕತೆಯಲ್ಲಿ ಭಾವನೆಗೆ ದಾಸನಾದ ವೆಂಕಟಶಾಮಿ ದೊಂಬರ ಹುಡುಗಿಯ ಮೋಹಕ ಶಕ್ತಿಗೆ ಮನಸೋತು, ಅವಳು ಎಲ್ಲಿಗೆ ಹೋಗುತ್ತಾಳೋ, ಅಲ್ಲಿಗೆ ವೆಂಕಟಶಾಮಿ ಹೋಗುತ್ತಿರುತ್ತಾನೆ. ಅಪ್ಪ-ಅಮ್ಮ ಊರಿನ ಮುಖಂಡರು ಯಾರು ಎಷ್ಟೇ ಹೇಳಿದರು ಕೇಳುವುದಿಲ್ಲ. ಈ ಕಥೆಯಲ್ಲಿ ಒಂದು ಸನ್ನಿವೇಶ ಬರುತ್ತದೆ ಅದೇನೆಂದರೆ ದೊಂಬರು ದೂರ ಹೋದರು ವೆಂಕಟಶಾಮಿ ಅವರ ಹಿಂದೆ ಹೋಗಿ ದೊಂಬರ ಹುಡುಗಿಗಾಗಿ ಏನೂ ಬೇಕಾದರೂ ಮಾಡುವುದಕ್ಕೆ ಸಿದ್ಧನಿರುತ್ತಾನೆ. ವೆಂಕಟಶಾಮಿ ದೊಂಬರ ಹುಡುಗಿಗಾಗಿ ಕಾಗೆಗಳನ್ನು ಹೊಡೆಯುವುದಕ್ಕೂ ಸಿದ್ಧನಿದ್ದನು. ಭಾವನೆಗೆ ದಾಸನಾಗಿದ್ದ ಎಂಬುದನ್ನು ಈ ಕತೆಯು ಸೂಚಿಸುತ್ತದೆ.

ಇದೇ ರೀತಿಯ ಸನ್ನಿವೇಶ ಗೊರೂರುರವರ ಗಂಡುಬೀರಿ ಹೊಸಬಿ ಕಥೆಯಲ್ಲಿ ಹೊಸಬಿಗಾಗಿ ಮಾದನು ಅವಳ ಹಸು, ನಾಯಿಯನ್ನು ತನ್ನ ಹಸು, ನಾಯಿಯ ಜೊತೆಯಲ್ಲಿ ಮೇಯಿಸುವುದಕ್ಕೆ ಬಿಟ್ಟುಕೊಂಡದ್ದು, ಭಾವನೆಗೆ ಪರವಶವಾಗಿರುವುದನ್ನು ಸೂಚಿಸುತ್ತದೆ.

*** ದೃಷ್ಟಿ ಸಂಬಂಧ**

ಪ್ರತಿಯೊಬ್ಬ ಲೇಖಕರ ದೃಷ್ಟಿಕೋನವೂ ಭಿನ್ನವಾಗಿರುತ್ತವೆ. ಒಂದು ನಿರ್ದಿಷ್ಟ ವಸ್ತುವಿಗೆ ಸಂಬಂಧಿಸಿದಂತೆ ಏಕೆ ಮತ್ತು ಭಿನ್ನ ಅಭಿಪ್ರಾಯಗಳು ಲೇಖಕರಲ್ಲಿ ಹುಟ್ಟುವುದು ಸಹಜವಾಗಿದೆ. ಹುಟ್ಟಿ ಬೆಳೆದು ಬಂದ ಪರಿಸರ, ಪ್ರಭಾವಗಳು, ಜೀವನಾನುಭವ, ಇಂತಹ ಹಲವು ಅಂಶಗಳು ಮನೋಧರ್ಮ, ದೃಷ್ಟಿ ಧೋರಣೆಗಳಲ್ಲಿ ಮೇಳೈಸಿರುತ್ತದೆ. ಅಂತೆಯೇ ಆಧುನಿಕ ವಿಚಾರಧಾರೆಗಳೂ ಲೇಖಕನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಬಲ್ಲದು. ಈ ಹಿನ್ನೆಲೆಯಲ್ಲಿ ಮಾಸ್ತಿ ಹಾಗೂ ಗೊರೂರರ ಕತೆಗಳಿಗೆ ಸಂಬಂಧಿಸಿದಂತೆ ಈ ಇಬ್ಬರು ಲೇಖಕರ ದೃಷ್ಟಿಧೋರಣೆಗಳನ್ನು ಅರಿಯುವ ಅಗತ್ಯವಿದೆ. ಇಲ್ಲಿ ಮುಖ್ಯವಾಗಿ ಪಾತ್ರ ವಹಿಸುವುದು ಜೀವನ.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಬೇರೆ ಬೇರೆ ಪಂಥಗಳಿಗೆ ಸೇರಿದವರು. ಎರಡೂ ಪಂಥಗಳಿಗೂ ಕೆಲವೊಂದು ಮೌಲ್ಯಗಳು ಒಪ್ಪಿತವಾಗಿದ್ದವು. ಮೌಲ್ಯಗಳು ತೀರಾ ಭಿನ್ನತೆಯನ್ನೇನು ಪಡೆದಿರಲಿಲ್ಲ. ತ್ಯಾಗ, ಪ್ರಾಮಾಣಿಕತೆ, ಅನುಕಂಪ, ಪ್ರೇಮ, ಸ್ನೇಹ, ದೇಶ ಪ್ರೇಮ ಇಂತಹ ಹಲವು ಮೌಲ್ಯಗಳನ್ನು ಎರಡು ಪಂಥಗಳು ಒಪ್ಪಿದ್ದವು. ಬಾಳು ಅರ್ಥಪೂರ್ಣ ಸ್ವೀಕಾರಾರ್ಹ ಎಂದು ಎರಡೂ ಪಂಥಗಳಿಗೂ ನಂಬಿಕೆಯಿತ್ತು. ಆದರೆ ಬದುಕನ್ನು ಇನ್ನೂ ಹೆಚ್ಚು ನಿರ್ಮಲಗೊಳಿಸಬೇಕು. ಹಸನುಗೊಳಿಸಬೇಕೆಂಬ ತೀವ್ರ ಕಾಳಜಿ ಪ್ರಗತಿಶೀಲರದ್ದು. ಭಾರತದ ಹಿಂದಿನ ಸಾಂಸ್ಕೃತಿಕ ಪರಂಪರೆಯಲ್ಲಿ ಎರಡು ಪಂಥದ ಬರಗಾರರಿಗೆ ಹೆಮ್ಮೆಯಿದೆ. ಮುಖ್ಯವಾಗಿ ಮನುಷ್ಯನ ಸ್ವಭಾವ ಉದಾತ್ತವಾದುದು ಎಂಬ ನಂಬಿಕೆಯ ಅಂಶ, ಇವರ ಪಾತ್ರ ಸೃಷ್ಟಿಯ ಮೂಲ ಆಶಯವಾಗಿ ಕಂಡುಬರುತ್ತದೆ.

ಈ ಮೇಲಿನ ಹಲವು ಕೆಲವು ಸಂಗತಿಗಳು ಮಾಸ್ತಿ ಮತ್ತು ಗೊರೂರು ಕತೆಗಳಲ್ಲಿಯೂ ಗೋಚರಿಸುತ್ತವೆ. ಮಾಸ್ತಿಯವರ ಕತೆಗಳಲ್ಲಿ ಕಂಡುಬರುವ ಪ್ರಮುಖ ದೃಷ್ಟಿ ಬಾಳು ಸ್ವಿಕಾರಾರ್ಹ ಎಂಬುದು, ಕಲ್ಮಾಡಿಯ ಕೋಣ ಕತೆಯಲ್ಲಿ ಬರುವ ಮುನಿಯನ ಪಾತ್ರದ ಮೂಲಕವೇ ಸಾಧಿತವಾಗುತ್ತದೆ. ಬಾಳಿನಲ್ಲಿ ಮುನಿಯನಿಗೆ ಒದಗುವಂತಹ ಶೋಕ ಪರಂಪರೆ ಅವನ ಆತ್ಮ ಸಂಸ್ಕಾರಕ್ಕೆ ಕಾರಣವಾಗುವಂತೆ ಅವನಲ್ಲಿ ಶೂನ್ಯತೆ, ವಿರಕ್ತಿಯನ್ನು ತುಂಬುತ್ತವೆ. ತನ್ನ ಅಹಂಕಾರ, ಸ್ವಾರ್ಥಗಳನ್ನು ಕಳಚಿಕೊಂಡು, ಆತ ಯೋಗಿಯಾಗುವುದರೆಡೆಗೆ ಹೆಜ್ಜೆ ಇಡುತ್ತಾನೆ. ಹಾಗೆಂದು ಮುನಿಯ ಸಂಪೂರ್ಣವಾಗಿ ಯೋಗಿಯಾದನೇ ? ಇಲ್ಲ. ಅವನ ಜೀವನದಲ್ಲಿ ಎದುರಾಗುವ ಪ್ರತಿಯೊಂದು ಸನ್ನಿವೇಶ ವ್ಯಕ್ತಿಗಳು ಅವನನ್ನು ಜೀವನದೆಡೆಗೆ ಸೆಳೆಯುತ್ತವೆ.

ಮೊಸರಿನ ಮಂಗಮ್ಮ ಕತೆಯಲ್ಲಿ ಮಂಗಮ್ಮನಿಗೆ "ಮಗಬೇಕು, ಸೊಸೆಬೇಕು, ಮೊಮ್ಮಗ ಬೇಕು, ಆದರೆ ತಾನು ಯಜಮಾನಿ ಅಂತ ತನಗೆ ಎಲ್ಲರೂ ಗೌರವ ತೋರಿಸಬೇಕು. ಮನುಷ್ಯನಾದವನಿಗೆ ಈ ಚಪಲ ತಪ್ಪಿದಲ್ಲ. ಜೀವನದಲ್ಲಿ ಏನೋ ಬೇಸರ, ಆದರೂ ಸಾಯುವುದಕ್ಕೆ ಇಷ್ಟವಿಲ್ಲ, ಆದರೆ ಆ ಇಷ್ಟ ಇಲ್ಲ ಅಂತ ತೋರಿಸಿಕೊಳ್ಳುವುದಕ್ಕೆ ಇಷ್ಟ ಇಲ್ಲ ಹಳ್ಳಿಯ ಜನ, ತಿಳಿಯದ ಜನ, ಮುಚ್ಚುಮರೆ ಅರಿಯದವರು ಎಂತ ನಾವು ಹೇಳುವ ಇಂಥವರ ಮನಸ್ಸಿನ ಸ್ಥಿತಿಯೇ ಹೀಗೆ ಪರದೆಯ ಹಿಂದೆ ಪರದೆ, ನೆರಿಗೆಯ ಹಿಂದೆ ನೆರಿಗೆ ಮಡಿಕೆಯ ಮರೆಯಲ್ಲಿ ಮಡಿಕೆ, ಇದು ಏನು ನಾಟಕದ ಸೂತ್ರ ಎಂತ ಎಂದುಕೊಂಡೆ".

ಮುಕ್ತಿಯೆನ್ನುವುದನ್ನು ಜೀವನದಿಂದಾಚೆಗೆ ಅರಸಿ ಪಡೆಯಬೇಕಾಗಿಲ್ಲ. ಪಡೆಯುವಂತದ್ದೂ ಅಲ್ಲ. ಅದು ಜೀವನದಲ್ಲೇ ಕಂಡುಕೊಳ್ಳಬೇಕಾದ ಸತ್ಯ. ಮರಣದಲ್ಲಿ ಅದು ಸಾಧಿಸುವಂತದಲ್ಲ. ಬದುಕುವ ರೀತಿಯ ಮೂಲಕ ಆ ನೆಲೆಯನ್ನು ಮುಟ್ಟಬಹುದೆಂದು ಮಾಸ್ತಿಯವರು ಮೇಲಿನ ಮಾತನ್ನು ಹೇಳಿದ್ದಾರೆ. ಬದುಕಿನ ವಿಶಿಷ್ಟ ಅರ್ಥದಲ್ಲಿ ತಂದುಕೊಡುವುದು, ಕತೆಗಳಲ್ಲಿ ಜೀವನಕ್ಕೆ ಮೊದಲ ಆದ್ಯತೆ ನೀಡುವುದು ಮಾಸ್ತಿಯವರ ವಿಶಿಷ್ಟ ಗುಣ.

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ದೃಷ್ಟಿ ವಿನೋದಕ್ಕಾಗಿಯೇ ಬರೆದಂಥವು ಹಗುರವಾದ ವಿನೋದವನ್ನು ಈ ಕತೆಗಳು ಬಹಳ ಮಟ್ಟಿಗೆ ನೆನಪಿಗೆ ತರುತ್ತದೆ. ಗೊರೂರರ ವಿನೋದಕ್ಕೆ ಸಣ್ಣಕತೆಯೇ ಆಗಬೇಕೆಂದೇನೂ ಇಲ್ಲ. ಅಂತೆಯೇ ಅವರ ಎಷ್ಟೋ ಕಥೆಗಳು ಹರಟೆಯ ಇಲ್ಲವೆ ಬರಿ ವ್ಯಕ್ತಿ ರೂಪದಲ್ಲಿ ಕರಗಿ ಹೋಗುತ್ತವೆ.

ಇವರ ಕತೆಗಳಲ್ಲಿ ಬರುವ ಪಾತ್ರಗಳಲ್ಲಿ ಮುಖ್ಯವಾದದ್ದು 'ಬೂತಯ್ಯನ ಮಗ ಅಯ್ಯು' ಕಥೆಯ ಅಯ್ಯು, ಜೀವನ ಕೊನೆಯ ಹಂತದವರೆಗೂ, ಅವನಲ್ಲಿ ಈ ಅಂಶವೇ ಸ್ಪಷ್ಟವಾಗಿ ಕಂಡುಬರುತ್ತವೆ. ವಿವಿಧ ಮಾನವ ಸಂಬಂಧಗಳು ಬೇಕು ಎನ್ನುವುದು ಹಾಗೂ ಮುಕ್ತಿಪಡೆಯುವ ಹಾದಿಯೇ ಲೇಖಕರ ಜೀವನ ದೃಷ್ಟಿಯನ್ನು ನಿಚ್ಚಳವಾಗಿ ತೆರೆದಿಡುತ್ತವೆ. ಅವನ ಮುಕ್ತಿಯ ಮಾರ್ಗ ಜೀವನವನ್ನು ಸ್ವೀಕರಿಸುವುದರಲ್ಲೇ ಇದೆ. ಜೀವನದ ಸಂಕಷ್ಟಗಳು ಅವನಿಗೆ ವಿರಕ್ತಿಯನ್ನು ಬೋಧಿಸಿದ್ದೇನೋ ನಿಜ. ಆದರೆ ಆ ವಿರಕ್ತಿ ಅವನ ಜೀವನದಲ್ಲಿ ಶೂನ್ಯವನ್ನು ತುಂಬಿದವು.

‘ಸಫಲಜೀವನ’ ಕಥೆಯಲ್ಲಿ ವೆಂಕಟರಾಯರು ಸರ್ಕಾರಿ ಉದ್ಯೋಗದಲ್ಲಿರುವಾಗ ನಿತ್ಯ ಈ ನೀಚ ಸೇವನೆಯು ಅಪೀಮು ಪಾನವು ಅಭಕ್ಷ್ಯ ಭೋಜನವು ಇನ್ನು ಸಾಕು. ನಿವೃತ್ತನಾದ ಕೂಡಲೇ ಇನ್ನು ಹೆಚ್ಚು ಆಚಾರಶೀಲನಾಗಿರೋಣ ಎಂದು ಹೇಳುತ್ತಿದ್ದರು. ಆದರೆ ಅವರು ಮಲ್ಲಿಗೆ ಹಳ್ಳಿಗೆ ಬಂದ ಮೇಲೆ ವ್ಯವಸಾಯವೆಂಬ ದೇವರು ಅವರನ್ನು ಆಕರ್ಷಿಸಿದ ಕೂಡಲೇ ಆ ಹಿಂದಲ ಹಳೆಯ ದೇವರನ್ನು ಅವರೇ ಕೈಬಿಟ್ಟರು. ಆದರೆ ಅವರು ದೇವರನ್ನು ಅವರೇ ಕೈಬಿಟ್ಟರು, ಆದರೆ ಅವರು ದೇವರನ್ನು, ಕಾಯಕವನ್ನು ಒಂದಾಗಿ ಮಾಡಿಕೊಂಡಿದ್ದುದರಿಂದ ತಾನು ಉದ್ದಕ್ಕೂ ಭಗವದ್ಧ್ಯಾವರಲ್ಲಿಯೇ ಭಗವತ್ ಕೈಂಕರ್ಯದಲ್ಲಿಯೇ ಇರುವುದು ಅವರಿಗೆ ಅನುಭವವಾಗುತಿತ್ತು. ನದಿಯ ಆಚೆಯ ದಡದ ದೇವಾಲಯದಲ್ಲಿ ಬೆಳಗಿನ ಜಾವದ ಘಂಟೆಯ ಸದ್ದು ಕೇಳಿದ ಕೂಡಲೇ ಅವರು ಹಾಸಿಗೆಯಿಂದ ಎದ್ದು ಇತರರು ನದಿಗೆ ಸ್ನಾನಕ್ಕೆ ಹೋಗುವಂತೆ ತಾವು ತಮ್ಮ ಜಮೀನಿಗೆ ಹೋಗುತ್ತಿದ್ದರು.

ವೆಂಕಟರಾಯರ ಕಾಯಕನಿಷ್ಟೆ ಯಾವ ರೀತಿಯಾಗಿತ್ತು ಎಂದರೆ “ಕೆಲವರಿಗೆ ಹಾಸಿಗೆಯಿಂದ ಎದ್ದ ಕೂಡಲೆ ದೇವರನ್ನು ಧ್ಯಾನಿಸುವಂತೆ ವೆಂಕಟರಾಯರು ಎದ್ದಕೂಡಲೇ ತೋಟದಲ್ಲಿ ಏನು ಕೆಲಸ ಎಂದು ಯೋಚಿಸುತ್ತಿದ್ದರು” ಇಂತಹ ಕಾಯಕ ನಿಷ್ಟೆಯ ಫಲವಾಗಿಯೇ ಮರದ ಮೇಲೆಯೇ ಹಣ್ಣಾಗಿ ಕೆಲವು ಹಣ್ಣುಗಳು ಬಿರಿದಿದ್ದ ರಸಬಾಳಗೊನೆಯಲ್ಲಿಯೇ ಭಗವಂತ ಪ್ರತ್ಯಕ್ಷನಾದಂತೆ ಅವರ ಮನಸ್ಸು ಧ್ಯಾನಪರವಾಗುತ್ತಿತ್ತು. ಆದ್ದರಿಂದಲೇ “ಜಮೀನಿಗೆ ಹೋಗಿ ನೇಗಿಲನ್ನು ಹೂಡಿದ ಕೂಡಲೇ ವೆಂಕಟರಾಯರು ನೀರಿಗೆ ಬಿದ್ದ ಮೀನಿನಂತೆ ಗೆಲುವಾಗುವರು. ಮಳೆಯಿಂದ ತೋಯ್ದ ನೆಲ ಶುಭ್ರವಾಗಿ, ಗೆಲುವಾಗಿ, ಸ್ವಚ್ಛವಾಗಿ ಸುಗಂಧಯುಕ್ತವಾಗಿ ಆಗತಾನೇ ಸ್ನಾನ ಮಾಡಿದ ಸುಂದರಿಯಂತೆ ಕಣ್ಣಿಗೆ ಸಂಪಾಗಿತ್ತು. ಬಿಸಿಲು ಏರುತ್ತಾ, ಭೂಮಿ ಗಳಿಗೆಗಳಿಗೂ ಹೊಸ ಹೊಸ ರೂಪದಿಂದ ರಮಣೀಯವಾಗುತ್ತಿದ್ದಿತ್ತು. ಉಳುವುದರಿಂದ ಶ್ರಮವಾಗುವುದರ ಬದಲು ವೆಂಕಟರಾಯರಿಗೆ ಅದೇ ಒಂದು ಕೇಳಿಯಾಯಿತು. ಅವರಿಗೆ ತಮ್ಮ ಭೂಮಿ ಭಗವಂತನ ಪ್ರತಿರೂಪವಾಗಿಯೇ ಕಂಡಿತು. ಅವರಿಗೆ ದೇವರ ಪೂಜೆ ಮಾಡಿದ ಭಾವ ಉಂಟಾಯಿತು.

ವೆಂಕಟರಾಯರ ಹೆಂಡತಿ ತಮ್ಮ ಕಾಯಕಕ್ಕೆ ಅಡ್ಡಿಪಡಿಸುತ್ತಿದ್ದುದರಿಂದ ಅವರ ಒತ್ತಾಯಕ್ಕೆ ಮಣಿದು ಅವರು ಕೃಷಿ ಕಾರ್ಯವನ್ನು ಬಿಟ್ಟಿದ್ದರಿಂದ ಇಡೀ ಹಳ್ಳಿಯೇ ಸೌಲಭ್ಯವಂಚಿತವಾಗುತ್ತದೆ. “ನೋಡಿ ಹೋದ ವರ್ಷ ನಿಮ್ಮ ಜಮೀನನ್ನು ನೀವು ಮಾಡಿದ್ದೀರಿ, ಈ ವರ್ಷ ಬರಿಯ ದೇವರೇ ಮಾಡಿದ್ದಾನೆ ನೋಡಿ, ಪಾಳುಬಿದ್ದು ಗೋಳುಸುರಿಯುತ್ತದೆ”[೧೭] ಎಂಬುದಾಗಿ ಅರ್ಚಕರು ಹೇಳಿದಾಗ ವೆಂಕಟರಾಯರು ಎಚ್ಚೆತ್ತು ಪಶ್ಚಾತ್ತಾಪ ಪಟ್ಟು ಮತ್ತೆ ಕರ್ತವ್ಯದ ಕಡೆಗೆ ತಿರುಗುತ್ತಾರೆ. ಹೀಗೆ ಜೀವನವನ್ನು ಸುಲಭಗೊಳಿಸಿಕೊಂಡ ಕಾಯಕ ಯೋಗಿಯಾಗಿ ವೆಂಕಟರಾಯರು ನೆನಪಿನ ಆಳದಲ್ಲಿ ಉಳಿದು ಬಿಡುತ್ತಾರೆ.

ಗ್ರಾಮ ಜೀವನದ ಸರಳ ಸೌಂದರ್ಯವನ್ನು ಅಂತರಂಗದಿಂದ ಸೂಕ್ಷ್ಮವಾಗಿ ಗಮನಿಸಿ ತದ್ರೂಪವಾಗಿ ಚಿತ್ರಿಸುತ್ತಾರೆ. ಅವರ ಈ ಚಿತ್ರಣದಲ್ಲಿ ಕಲ್ಪನೆಗಳಿಗೆ ಸ್ಥಳವೇ ಇರುವುದಿಲ್ಲ. ವೈಚಾರಿಕ ವಿಚಾರಗಳು ಮಹತ್ವವಾದ ಸ್ಥಾನವನ್ನು ಪಡೆದುಕೊಳ್ಳುವುದಿಲ್ಲ. ಗ್ರಾಮೀಣ ಬದುಕಿನ, ಮಧ್ಯಮ ವರ್ಗದ ಜೀವನ ವಿಧಾನವನ್ನು ತಮ್ಮ ಸಾಹಿತ್ಯಕ್ಕೆ ಆಯ್ಕೆ ಮಾಡಿಕೊಂಡಿರುವುದರಿಂದ ಇವರ ಕಥೆಗಳಲ್ಲಿ ಒಂದಕ್ಕೂ ಮತ್ತೊಂದಕ್ಕೂ ಹೆಚ್ಚಿನ ಅಂತರ ಕಂಡುಬರುವುದಿಲ್ಲ. ಅಪ್ರಯತ್ನ ಪೂರ್ವಕವಾದ ಕಲೆಗಾರಿಕೆಯಿಂದಾಗಿ ಸಹೃದಯರ ಮನಸ್ಸನ್ನು ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಅವರ ಕತೆಗಳ ಒಳಗೆ ಒಂದು ಉದಾರವಾದ ಮನಸ್ಸು ಮಾತನಾಡುವಂತೆ ತೋರುತ್ತದೆ.

ಗೊರೂರರ ಬರವಣಿಗೆಯ ಸೀಮಿತತೆಯನ್ನು ಗುರುದತ್ತರು ಈ ರೀತಿಯಾಗಿ ಗುರು ತಿಳಿಸಿದ್ದಾರೆ. "ಮೊದಲನೆಯದು ಅವರಲ್ಲಿ ಉದ್ದೇಶಿತ ಕಲೆ ಎಂಬುದಿಲ್ಲ. ಅವರು ಲೀಲಾಜಾಲವಾಗಿ ಸಹಜವಾಗಿ ಕಥೆಗಳನ್ನು ಹೇಳಿಕೊಂಡು ಹೋಗುತ್ತಾರೆ ಸ್ವಾನುಭಾವಾದರಿತವಾಗಿರುವ ಅನೇಕ ಕಥೆಗಳಲ್ಲಿ ಲೇಖಕರೇ ಒಂದು ಪಾತ್ರವಾಗಿ ಕಾಣಿಸಿಕೊಂಡು ನಿರೂಪಕರಾಗಿ ಕಥೆಯನ್ನು ಸಾಗಿಸುವುದನ್ನು, ತಿರ್ಮಾನಗಳನ್ನು ಕೊಡುವುದನ್ನು ಕಾಣುತ್ತೇವೆ. ಆಧುನಿಕರಲ್ಲಿ ಕಾಣಿಸಿಕೊಳ್ಳುವ ಪ್ರಜ್ಞಾಪೂರ್ವಕ ಕಲೆಯಾಗಲಿ, ಬಿಗಿಯಾದ ಬಂಧವಾಗಲಿ, ಸುನಿಶ್ಚಿತ ತಂತ್ರವಾಗಲಿ, ಸಂಕೇತ ಪ್ರತಿಮೆಗಳ ಬಳಕೆಯಾಗಲಿ, ಗೊರೂರಲ್ಲಿ ಕಾಣಿಸುವುದೇ ಇಲ್ಲ. ಎರಡನೆಯಾದಾಗಿ ರೈತ ಸಮುದಾಯದ ವಿಶಿಷ್ಟ ಸಮಸ್ಯೆಗಳು ಸುಖ-ದುಃಖಗಳು ಕೃಷಿಕಾರ್ಯದ ಇತರ ಚಟುವಟಿಕೆಗಳು ಇಲ್ಲಿ ಸಮಗ್ರ ರೂಪದಲ್ಲಿ ಕಾಣಿಸಿಕೊಳ್ಳುವುದೇ ಇಲ್ಲ. ಹಾಗೆಯೇ ಗೊರೂರರ ಗಮನ ಘಟನೆಗಳ ನಿರೂಪಣೆಯ ಕಡೆಗೆ ಹೆಚ್ಚಾಗಿ ಹರಿಯುತ್ತದೆಯೇ ಹೊರತು ಪಾತ್ರಗಳ ಒಳತೋಟಿಯನ್ನು ಚಿತ್ತಿಸುವತ್ತ ಅಲ್ಲ ಎಂಬ ಭಾವನೆಯೂ ಮೂಡುತ್ತದೆ."[೧೮]

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಗೊರೂರ ಅಭಿವ್ಯಕ್ತಿ ಶೈಲಿಗಳ ಬಗೆಗಿನ ಒಂದು ಸೂಕ್ಷ್ಮ ನೋಟ ದೊರೆತಂತಾಗುತ್ತದೆ. ವ್ಯಕ್ತಿ, ಸಂದರ್ಭ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಸಾಹಿತ್ಯದಲ್ಲಿ ಭಾಷೆಯನ್ನು ಬಳಸುವುದರಿಂದ ಸಾಹಿತ್ಯದ ಬೇರೆ-ಬೇರೆ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುವ ಭಾಷಾ ವೈವಿಧ್ಯಕ್ಕೆ ದೈನಂದಿನ ವ್ಯವಹಾರದಲ್ಲಿ ಬಳಕೆಯಾಗುವ ಭಾಷಾ ವೈವಿಧ್ಯಕ್ಕೂ ವ್ಯತ್ಯಾಸ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಸಾಹಿತಿ ಮತ್ತು ಭಾಷೆ, ಅನುಭವ ಮತ್ತು ಭಾಷೆ ಇವುಗಳ ಪರಸ್ಪರ ಹೊಂದಾಣಿಕೆಯಿಂದ ವಿಶಿಷ್ಟ ಪದಗಳ ಜೋಡಣೆಯಾಗಿರುವುದು ಗೊರೂರರ ಸಾಹಿತ್ಯದ ವೈಶಿಷ್ಟ. ಗ್ರಾಮ ಜೀವನದ ಹತ್ತು ಹಲವು ಮುಖಗಳಿಗೆ ಚಿರಸ್ಮರಣೀಯ ಅಭಿವ್ಯಕ್ತಿಯನ್ನು ತಮ್ಮದೇ ಆದ ವಿಶಿಷ್ಟ ರೀತಿಯನ್ನು ನೀಡಿ ಅಮರರಾಗಿದ್ದಾರೆ.

ಹಾಸ್ಯ ಹಾಗೂ ವಿನೋದಗಳು ಮಾನವನ ಬದುಕಿನ ಅವಿಭಾಜ್ಯವಾದ ಅಂಗಗಳ ಹಾಗೆ ಇವು ಜೀವನ ಲವಲವಿಕೆಯಿಂದ ಇರುವುದಕ್ಕೆ ಸಹಾಯಕವಾಗುತ್ತವೆ. ಶ್ರೀ ಅರವಿಂದರು ಹಾಸ್ಯವೆಂದರೆ **"ಕಂಬನಿಯನ್ನು ನಗೆಯನ್ನಾಗಿ ಪರಿವರ್ತಿಸುವ ಕರ್ಮಕೌಶಲ"** ಎಂದಿದ್ದಾರೆ. ಹಾಸ್ಯವೇ ಇಲ್ಲದ ಬಾಳು ಬಾಳಲ್ಲ. ಹಾಸ್ಯ ಜೀವನವನ್ನು ಉಲ್ಲಾಸಮಯವನ್ನಾಗಿಸುತ್ತದೆ. ಹಾಸ್ಯದಿಂದ ಕೂಡಿದ

ಬದುಕು ಸಂತೋಷವನ್ನು, ನೆಮ್ಮದಿಯನ್ನು ನೀಡುತ್ತದೆ. ಉತ್ತಮ ಹಾಸ್ಯವು ಆನಂದದ ಒಂದು ಸ್ವರೂಪ, ಜ್ಞಾನಕ್ಕೆ ಒಂದು ಬಾಗಿಲು ಇಂದು ನಗರೀಕರಣದಿಂದಾಗಿ ಬದುಕು ಯಾಂತ್ರಿಕವಾಗಿದೆ. ಇಂತಹ ಯಾಂತ್ರಿಕ ಬದುಕಿನ ನಡುವೆ ನರಳುತ್ತಿರುವ ಜನರಿಗೆ ಹಾಸ್ಯ ಕನಸಿನ ಮಾತಾಗಿದೆ. ಇಂತಹ ಬದುಕಿನ ಜಂಜಡದಿಂದಾಗಿ ಜನಗಳ ಮುಖದಲ್ಲಿ ನಗು ಮಾಯವಾಗುತ್ತಿದೆ.

ಸಾಹಿತ್ಯದಲ್ಲಿ ಹಾಸ್ಯದ ಜೀವಂತಿಕೆಯನ್ನು ತುಂಬಬೇಕಾದರೆ ಕವಿ ಸ್ವತಃ ಹಾಸ್ಯಗಾರರಾಗಿರಬೇಕು ತಾವು ನಕ್ಕು, ಓದುಗರನ್ನು ನಗಿಸುವ ಕಲೆಯನ್ನು ಬಲ್ಲವರಾಗಿರಬೇಕು. ಇದಕ್ಕೆ ಕವಿಯಲ್ಲಿ ಸಹಜ ಶಕ್ತಿ ಇರಬೇಕು ಕವಿಯಲ್ಲಿರುವ ಇಂತಹ ಶಕ್ತಿಯನ್ನು ಹಾಸ್ಯ ಪ್ರದರ್ಶನ ಶಕ್ತಿ ಎಂಬುದಾಗಿ ಕರೆಯುತ್ತಾರೆ. ಗೊರೂರರಲ್ಲಿ ಇಂತಹ ಕುಶಲತೆಯನ್ನು ಕಾಣಬಹುದಾಗಿದೆ. ದುಃಖದಲ್ಲೂ ಸಹಜವಾಗಿಯೇ ಹಾಸ್ಯ ಪ್ರಿಯರು ಆದ್ದರಿಂದಲೇ ಅವರ ಸಾಹಿತ್ಯದಲ್ಲಿ ನಿರಂತರವಾದ ಹಾಸ್ಯ, ಹಾಸ್ಯೋಕ್ತಿಗಳು, ವರ್ಣನೆಗಳು ಘಟನೆಗಳು ವಿಫುಲವಾಗಿವೆ. ತಾವು ಹೋದಲ್ಲೆಲ್ಲಾ ಹಾಸ್ಯದ ಹೊನಲನ್ನೇ ಹರಿಸಿದವರು ಗೊರೂರರು.

ಕಥೆಗಳಲ್ಲಿ ಹಾಸ್ಯವನ್ನು ಪ್ರಧಾನವಾಗಿ ತಂದವರಲ್ಲಿ ಗೊರೂರರು ಪ್ರಮುಖರಾಗಿದ್ದಾರೆ. ಅವರ ಹಾಸ್ಯ ಪ್ರಮುಖವಾದ ಬರಹಗಳಲ್ಲಿಯೂ ಜೀವನದ ಗಾಂಭೀರ್ಯವನ್ನು ಗುರುತಿಸಬಹುದಾಗಿದೆ. ಅವರ ಒಂದೊಂದು ಪಾತ್ರಗಳೂ ಹಾಸ್ಯದ ಹೊನಲನ್ನೇ ಹರಿಸುತ್ತವೆ. ಇಂತಹ ಪ್ರಸಂಗಗಳಲ್ಲಿ ಅತಿಶಯೋಕ್ತಿಯೇ ಹೆಚ್ಚಾಗಿ ಕಂಡುಬಂದರೂ ಅದು ಹಾಸ್ಯಕ್ಕೆ ಮೆರಗನ್ನು ತಂದುಕೊಡುತ್ತದೆ. ಅನಕೃ ತಮ್ಮ 'ಸಾಹಿತ್ಯ ಮತ್ತು ಜೀವನ' ಕೃತಿಯಲ್ಲಿ ಹಾಸ್ಯವಿಲ್ಲದ ಬಾಳು ದೇವರಿಲ್ಲದ ದೇಗುಲದಂತೆ ದೀಪ್ತಿಯಿಲ್ಲದ ದೀವಿಗೆಯಂತೆ, ಕಪ್ಪುಮೋಡ ತುಂಬಿದ ಜೀವನಾಕಾಶದಲ್ಲಿ ಹಾಸ್ಯವು ಒಳ್ಳೆಯ ಬೆಳಕು ಬೆಳಗಿದಂತೆ ಎಂದಿದ್ದಾರೆ.

ಗೊರೂರರ ಹಾಸ್ಯ ಪ್ರಜ್ಞೆಯ ಬಗೆಗೆ ಕುವೆಂಪುರವರು ಈ ರೀತಿಯಾಗಿ ಹೇಳಿದ್ದಾರೆ. "ಚಾರ್ಲ್ಸ್ ಡಿಕನ್ಸ್, ಅಲಿವರ್ ಗೋಲ್ಡ್ ಸ್ಥಿತ್, ಎ.ಜಿ. ಗಾರ್ಡಿನರ್ ಮುಂತಾದ ಇಂಗ್ಲೀಷ್ ಲೇಖಕರ ಬರವಣಿಗೆಯನ್ನು ಓದಿ ಅಲ್ಲಿನ ವಿವಿಧ ಹಾಸ್ಯವನ್ನು ಚಪ್ಪರಿಸಿದ್ದ ನಮಗೆ ಕನ್ನಡದಲ್ಲಿ ಅಂತಹ ಹಾಸ್ಯದ ಅರಕೆ ದೊಡ್ಡಕೊರಗನ್ನೆ ಉಂಟುಮಾಡಿತ್ತು. ಆ ಅರಕೆಯನ್ನು ಹೋಗಲಾಡಿಸಿದ ಕೆಲವೇ ಲೇಖಕರಲ್ಲಿ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರರು ನಿಶ್ಚಯವಾಗಿಯು ಅಗ್ರಸ್ಥಾನದಲ್ಲಿದ್ದಾರೆ. ಎಂತಹ ಸ್ಫಟಿಕ ಸ್ವಚ್ಛವಾದ ಹಾಸ್ಯ ಅವರದು ! ಅಲ್ಲಿ ಯಾವ ಬಗೆಯ ಕೊಂಕು ಇಲ್ಲ ಯಾವ ವಿಷದ ಬಾಲದ ಕುಟುಕು ಇಲ್ಲ. ಮೊನಚಾಗಿ ಒಳಹೊಕ್ಕು ಅಲ್ಲೇ ಮುರಿದುಕೊಳ್ಳುವ ಮುಳ್ಳೂ ಇಲ್ಲ. ಕೃತಕತೆ ಇಲ್ಲದ, ಬದುಕಿನ ಘಟನೆಗಳಿಂದ ತನಗೆ ತಾನೇ ಒಡೆದು ಮೂಡುವ, ಮೂಡಿ ಮನದುಂಬುವ ಮನದುಂಬಿ ನಕ್ಕು ನಲಿಸುವ ಶುದ್ಧವಾದ ಹಾಸ್ಯ ಅವರದು"[೯]

ಗೊರೂರರ ಸಾಹಿತ್ಯದಲ್ಲಿ ಹಾಸ್ಯ ಪ್ರಸಂಗಗಳಿಗೇನೂ ಕೊರತೆ ಇಲ್ಲ. ಆದರೆ ಅವರ ಈ ಹಾಸ್ಯ ಪ್ರಸಂಗಗಳು ಹೊಟ್ಟೆ ಹುಣ್ಣಾಗಿಸುವಂತೆ ನಗಿಸುವವುಗಳಲ್ಲ. ಒಂದು ನಗುವಿನ ರೇಖೆ ಮುಖದ ಮೇಲೆ, ಮನಸ್ಸಿನ ಆಳದಲ್ಲಿ ಹರಿದುಹೋಗುವಂತೆ ಮಾಡುವ ಮೃದು, ಗಂಭೀರ ಹಾಸ್ಯಗಳಾಗಿವೆ. ತಮ್ಮ ಹಾಸ್ಯಗುಣದಿಂದಾಗಿಯೇ ಪ್ರಾಮುಖ್ಯ ಪಡೆದು ಕೊಂಡಂತಹ ಕೆಲವು ಪಾತ್ರಗಳು ಇವೆ.

ಅಡಿಟಿಪ್ಪಣಿಗಳು

೧. ಮಾವಿನಕೆರೆ ರಂಗನಾಥ–ಮಾಸ್ತಿ ಸಮಗ್ರ ಸಾಹಿತ್ಯ ಅವಲೋಕನ ಪು.ಸಂ.೧೮೭
೨. ಮಾಸ್ತಿ–ಮಾಸ್ತಿ ಸಮಗ್ರ ಕತೆಗಳು ಭಾಗ–೩. ಪು.ಸಂ.೪೦
೩. ಗೊರೂರು–ವೈಯ್ಯಾರಿ ಪು.ಸಂ.೨೫೬
೪. ಮಾಸ್ತಿ–ಮಾಸ್ತಿ ಸಮಗ್ರ ಸಣ್ಣ ಕತೆಗಳು ಭಾಗ–೧.ಪು.ಸಂ.೩೫
೫. ಹಂಪ ನಾಗರಾಜಯ್ಯ–ಆನಂದರ ಆಯ್ದಕತೆಗಳು ಪು.ಸಂ.೧೯
೬. ಅದೇ ಪು.೦೪
೭. ಅದೇ ಪು.೧೪೩
೮. ಗೊರೂರು–ವೈಯ್ಯಾರಿ ಪು.೬೬
೯. ಅದೇ ಪು.೨೫೬
೧೦. ಅದೇ ಪು.೧೯೩
೧೧. ಮಾಸ್ತಿ–ಸಾಹಿತ್ಯ ಪ್ರೇರಣೆ–ಪ್ರಸಂಗ ೩– ಪು.ಸಂ. ೪೪೬
೧೨. ಡಾ. ಸಿ.ಜಿ. ವೆಂಕಟಯ್ಯ –ಡಾ.ಗೊರೂರು ಜೀವನ ಸಾಧನೆ– ಪು.ಸಂ. ೯
೧೩. ಗೊರೂರು ಜೀವನಸಾಧನೆ ಪು.ಸಂ.೩೨
೧೪. ಗೊರೂರು ಗೌರವ ಗ್ರಂಥ, ಪೂರ್ವೋಕ್ತಿ ಪು.ಸಂ. ೨೧೮
೧೫. ಗೊರೂರು–ಬೂತಯ್ಯನ ಮಗ ಅಯ್ಯು ಪು.ಸಂ. ೨೫
೧೬. ಮಾಸ್ತಿ–ಕಾಮನ ಹಬ್ಬದ ಒಂದು ಕತೆ, ಪು.ಸಂ. ೦೩
೧೭. ಮಾಸ್ತಿ–ಕಲ್ಮಾಡಿಯ ಕೋಣ, ಪು.ಸಂ. ೧೯೧
೧೮. ಗೊರೂರು ರಾಮಸ್ವಾಮಿ ಅಯ್ಯಂಗಾರ್ – ಸಫಲಜೀವನ, ಪು.ಸಂ. ೨೦೭
೧೯. ಡಾ॥ ಪ್ರಧಾನ ಗುರುಸತ್ತ– ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪು.ಸಂ. ೩೦

ಅಧ್ಯಾಯ – ಎಂಟು

ಸಮಾರೋಪ

ಅಧ್ಯಾಯ – ಎಂಟು

ಸಮಾರೋಪ

ಪೀಠಿಕೆ

ಸಾಹಿತ್ಯ ಪಠ್ಯಗಳಿಗೆ ಅನೇಕ ಮುಖಗಳು ಇದ್ದು, ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಸಮಾಜದ ಹಲವು ಸ್ವರೂಪಗಳು ಗಮನಕ್ಕೆ ಬರುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ನವೋದಯದ ಸಣ್ಣ ಕತೆಗಳನ್ನು ಪ್ರಮುಖವಾಗಿರಿಸಿಕೊಂಡು ಪರಂಪರೆ ಮತ್ತು ಆಧುನಿಕತೆಯೆನ್ನುವ ಪರಿಕಲ್ಪನೆಯನ್ನು ಮುಖಾಮುಖಿ ಮಾಡುವ ವಿಧಾನದಲ್ಲಿ, ಆಧುನಿಕತೆಯು ಸೃಷ್ಟಿಸುತ್ತಿರುವ ಭಯ ಮತ್ತು ಪರಂಪರೆಯ ಜೀವಪರ ನಿಲುವುಗಳು ಹಲವು ಕತೆಗಳಲ್ಲಿ ಕಂಡುಬಂದಿವೆ. ಸ್ಥಳೀಯವಾಗಿರುವ ಸಂಸ್ಕೃತಿಯು ಜಾಗತಿಕ ಸಂಸ್ಕೃತಿಯನ್ನು ಎದುರಿಸಿ, ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಕತೆಗಳಲ್ಲಿ ಬಂದಿದೆ. ಪ್ರತಿಭಟಿಸಬೇಕು ಇಲ್ಲವೇ ಒಪ್ಪಿಕೊಳ್ಳಬೇಕು ಎಂಬ ಅನಿವಾರ್ಯ ಸಾಂಸ್ಕೃತಿಕ ಇಕ್ಕಟ್ಟಿಗೆ ಸ್ಥಳೀಯ ಅಥವಾ ದೇಸೀ ಸಂಸ್ಕೃತಿಗಳು ಸಿಲುಕಿಕೊಂಡಿವೆ. ಅಂತಹದೇ ಬಿಕ್ಕಟ್ಟನ್ನು ಎದುರಿಸುತ್ತಿರುವ ನಮ್ಮ ಸಮಾಜದ ಸ್ವರೂಪದಲ್ಲಿ ಮೂಲಭೂತ ಬದಲಾವಣೆಗಳು ಜರುಗುತ್ತಿರುವುದನ್ನು ನವೋದಯ ಕಥೆಗಾರರು ದಾಖಲು ಮಾಡಿದ್ದಾರೆ. ಅವರ ಬರವಣಿಗೆಯಲ್ಲಿ ಜಾಗತಿಕ ಸಂಸ್ಕೃತಿಯನ್ನು ಎದುರಿಸಬೇಕಾದ ಸವಾಲು, ಪ್ರತಿಭಟನಾತ್ಮಕ ಧೋರಣೆಗಳು ಹಲವು ರೀತಿಯಲ್ಲಿ ವ್ಯಕ್ತಗೊಂಡಿವೆ.

ಒಂದಲ್ಲ ಒಂದು ರೀತಿಯಲ್ಲಿ ಸಾಗಿಕೊಂಡು ಬಂದ ಪರಂಪರೆಯ ಮೌಲ್ಯಗಳಿಗೆ, ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸವು, ಅದರ ಮೌಲ್ಯಗಳಿಗೆ ವಿರುದ್ಧವಾದ ಸಾಂಸ್ಕೃತಿಕ ಪರಿಸರದ ಬೆಳವಣಿಗೆಗೆ ಅಡೆತಡೆಯನ್ನುಂಟು ಮಾಡಿದೆ. ಈ ಪ್ರಕ್ರಿಯೆ ನವೋದಯ ಸಾಹಿತ್ಯದಲ್ಲಿ ತೀವ್ರವಾಗಿ, ಆಧುನಿಕತೆಯ ಕವಲುಗಳಾಗಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು ಅಸ್ತಿತ್ವಕ್ಕೆ ಬಂದಿವೆ. ಸಂಪ್ರದಾಯಿಕ ಸಮಾಜದ ಮಿತಿಗಳನ್ನು ದಾಟಲು, ಹೊಸ ದಾರಿಯಾಗಿ ಕಂಡ ಆಧುನಿಕತೆಯು, ಕಾಲಾಂತರದಲ್ಲಿ ಬಿಡುಗಡೆಯ ದಾರಿಗಳಿಗೂ ತೆರಿಗೆ ವಿಧಿಸುವಷ್ಟು ವಾಣಿಜ್ಯ ಪ್ರಭುತ್ವದ ಹಿತಾಸಕ್ತಿಯನ್ನು ತೋರ್ಪಡಿಸಿತು. ಪಶ್ಚಿಮದ ಆಗಂತುಕ ಪ್ರಣಾಳಿಕೆಗಳಿಗೆ ಮುಕ್ತವಾಗಿ

ಸ್ಪಂದಿಸುವ, ಸಮಾಜದ ಮೇಲ್ವರ್ಗದ ಆಡಂಬರಗಳು ಒಂದೆಡೆಯಿದ್ದರೆ, ಶೋಷಣೆ, ಕ್ರೌರ್ಯಕ್ಕೆ ಒಳಗಾದ ಸಮುದಾಯಗಳಿಗೆ ಆಗಂತುಕ ಸರಕುಗಳು ಆಕರ್ಷಣೆಯ ವಸ್ತುಗಳಾಗಿ ಕಂಡುಬಂದವು.

ಧರ್ಮ ಪ್ರಭುತ್ವ, ರಾಜಪ್ರಭುತ್ವಗಳಿಂದ ರೋಷಿಹೋದ ಸಮುದಾಯಗಳಿಗೆ ಆಧುನಿಕತೆಯು ಬಿಡುಗಡೆಯ ಬೆಳಕಾಗಿ ಕಂಡದ್ದರಲ್ಲಿ ಯಾವ ಆಶ್ಚರ್ಯವು ಇರಲಿಲ್ಲ. ಆದರೆ ಯಾವಾಗ ವಾಣಿಜ್ಯ ಮನೋಭಾವವು ಪ್ರಧಾನವಾಗಿ, ಜ್ಞಾನ ಮಾರ್ಗಗಳು ಹಿನ್ನೆಲೆಗೆ ಸರಿಯಿತೋ, ಆವಾಗ ಆಧುನಿಕತೆಯ ಮೊದಲಿನ ಸ್ವರೂಪ ಮರೀಚಿಕೆಯಾಗಿ, ಜಾಗತೀಕರಣ ಮನೋಭಾವ ಮುನ್ನೆಲೆಗೆ ಬರುವ ಮೂಲಕ, ಆರ್ಥಿಕ ಸಂಗತಿಗಳು ಮೊದಲುಗೊಂಡು ಸಂಸ್ಕೃತಿಯ ಸಂಗತಿಗಳು ನೈತಿಕತೆಯನ್ನು ಕಳಚಿ ವ್ಯಾಪಾರೀಕರಣವನ್ನು ಮೈಗೂಡಿಸಿಕೊಂಡವು. ಇಂತಹ ಸಂಕೀರ್ಣ ಸಂಗತಿಗಳಿಗೆ ಸಾಕ್ಷಿಯಾದ ಸಾಮಾಜಿಕ ಸಂದರ್ಭವು ಜಾತಿಗಳನ್ನು ವರ್ಗಗಳಾಗಿ ಪರಿವರ್ತಿಸುವಲ್ಲಿ ಕ್ರೀಯಾಶೀಲವಾಗಿದೆ. ಅಂತಹ ಸಂಗತಿ ಅರಿಯಲು ಬೇಕಾದ ವಿಚಾರಗಳನ್ನು ಕಥೆಗಾರರು ನಿರೂಪಿಸಿದ್ದಾರೆ.

ಸಾಂಸ್ಕೃತಿಕ ವಲಯದಲ್ಲಿ ಉಂಟಾಗುವ ಬದಲಾವಣೆಗಳೇ ಸಾಹಿತ್ಯ ವಲಯದಲ್ಲಿನ ಚರ್ಚೆ ಮತ್ತು ಸಂವಾದಗಳಿಗೆ ಕಾರಣವಾಗಿದೆ. ನವೋದಯ ಕತೆಗಾರರ ಕತೆಗಳ ಹಿಂದಿನ ಆಶಯವೂ ಅದೇ ಆಗಿದೆ. ಹಾಗಾಗಿ ಸೃಜನಶೀಲ ಬರಹಗಾರರಿಗೆ ಸಾಂಸ್ಕೃತಿಕ ಚಿಂತಕರಿಗೆ, ಸಾಮಾಜಿಕ ಬದ್ಧತೆಯ ಪ್ರಶ್ನೆ ಇತರರಿಗಿಂತ ಹೆಚ್ಚು ಕಾಡುತ್ತದೆ. ಸಾಂಸ್ಕೃತಿಕ ಕೊಡು-ಕೊಳ್ಳುವಿಕೆಯಲ್ಲಿ ಉಂಟಾಗುವ ಸಂಘರ್ಷ, ಏಕಮುಖಿಯಾಗುವ ಅಪಾಯ ಮತ್ತು ಸಮಾನವಾಗಿ ಮುನ್ನಡೆಯುವಲ್ಲಿನ ಅನುಕೂಲಗಳು ಕತೆಗಾರರಿಗೆ ಹೆಚ್ಚಾಗಿ ಪ್ರಭಾವಿಸಿವೆ. ಆಧುನಿಕತೆಯ ಅನಾನುಕೂಲಗಳನ್ನು ತೀವ್ರವಾಗಿ ವಿರೋಧಿಸುವ ಆಶಯವನ್ನು ಹೊಂದಿದ ಕತೆಗಾರರ ನಿರೂಪಣೆಯು, ಆಳದಲ್ಲಿ ದೇಸೀ ಸಂಗತಿಗಳನ್ನು ಪ್ರೀತಿಸುವಲ್ಲಿ ತಲ್ಲೀನವಾಗಿದೆ. ಈ ರೀತಿಯ ಬರಹಗಾರರು ಒಳಗೊಳಗೆ ಸ್ಪಷ್ಟವಾಗಿಯೇ ದೇಸೀಯತೆಯನ್ನು ಸಂಪ್ರದಾಯದ ಹೆಸರಿನಲ್ಲಿ ನಿರಾಕರಿಸಿ ಬಿಟ್ಟಿದ್ದಾರೆ. ಇವೆರಡು ಮಾದರಿಗಳಿಗಿಂತ ಭಿನ್ನವಾಗಿ ಜೀವನಪರವಾದುದನ್ನು, ಸಕಲಾತ್ಮರ ಲೇಸು ಬಯಸುವ ಯಾವ ವ್ಯವಸ್ಥೆಯೇ ಇರಲಿ, ಅದನ್ನು ಅಪ್ಪಿಕೊಳ್ಳುವ ಕತೆಗಾರರು ಇದ್ದಾರೆ. ಆದರೆ ಇಂತವರ ಪ್ರಮಾಣ ಕಡಿಮೆ.

ನವೋದಯದ ಕತೆಗಾರರು ಅಯ್ದುಕೊಂಡ ಕಥಾವಸ್ತು ಕಲಾತ್ಮಕತೆಯನ್ನು ಸಾಧಿಸುವಲ್ಲಿ ಅನೇಕ ಸವಾಲನ್ನು ಎದುರಿಸಿದ್ದಾರೆ. ಆದರೆ ಆ ಸವಾಲನ್ನು ಮೀರಿ ಕಲಾತ್ಮಕತೆಯನ್ನು ಪ್ರದರ್ಶಿಸುವ ಮುಖಾಂತರ ಕನ್ನಡ ಗದ್ಯ ವಿಕಾಸಕ್ಕೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಬರವಣಿಗೆ ತುರ್ತು ಅಥವಾ ಅನಿವಾರ್ಯತೆ ಲೇಖಕರಿಗೆ ಹೆಚ್ಚು ಕಾಡಿದಂತೆ ಭಾಸವಾಗುತ್ತದೆ. ಆ ಕಾಲದ ಬದುಕನ್ನು ಗ್ರಹಿಸುವಲ್ಲಿ ಹಲವು ಸಂವೇದನೆಗಳು ಒಟ್ಟಾಗಿ ನಿರೂಪಣೆಯಲ್ಲಿ ತರುವುದರಿಂದ, ಯಾವುದೋ ಒಂದು ಮುಖ್ಯ ಸಂವೇದನೆಯನ್ನು ನಿಭಾಯಿಸುವಲ್ಲಿ ಗೊಂದಲವು ಕಂಡುಬರುತ್ತದೆ. ಬದುಕಿನ ಹಲವು ಆಯಾಮಗಳನ್ನು ಪ್ರತಿನಿಧಿಸಬೇಕೆಂಬ ಧೋರಣೆ, ಕಥೆಯ ಆಶಯಕ್ಕೆ ನ್ಯಾಯ ಒದಗಿಸುವಲ್ಲಿ ತುಂಬಾ ಕಷ್ಟಪಟ್ಟಂತೆ ಮೇಲು ನೋಟಕ್ಕೆ ಕಂಡುಬಂದರೂ, ಆ ಮಿತಿಗಳನ್ನು ಮೀರಿ ಕಥೆಗಾರರು ಹೊಸ ವಸ್ತುವನ್ನು ನಿರೂಪಿಸಿರುವುದಕ್ಕೆ ನಿದರ್ಶನಗಳು ಸಿಗುತ್ತವೆ. ಈ ತರಹದ ಬರವಣಿಗೆ

ನವೋದಯ ಕಥೆಗಳಲ್ಲಿ ದೊರಕುವುದನ್ನು ನೋಡಿದರೆ, ಸಾಹಿತ್ಯದಲ್ಲಿ ಆ ಬಗೆಯ ಚರ್ಚೆಗಳು ನಡೆದಿವೆ ಎಂಬುದನ್ನು ಸೂಚಿಸುತ್ತವೆ.

ಅಧ್ಯಯನದ ಫಲಿತಗಳು

ಹಿಂದಿನ ಅಧ್ಯಾಯಗಳಲ್ಲಿ ವಿಶ್ಲೇಷಣೆ, ವಿವೇಚನೆ, ವಿಮರ್ಶೆ, ತಾತ್ವಿಕತೆಗೆ ಗುರಿ ಮಾಡಿದ ನವೋದಯದ ಕಥೆಗಳ ಅಧ್ಯಯನದಿಂದ ಮಹತ್ವದ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಕತೆಗಾರರು ಎದುರಿಸುವ ಸವಾಲು ಪ್ರತಿಭಟನಾತ್ಮಕ ಹಾಗೂ ರಾಜಿಮಾರ್ಗ ಎರಡೂ ರೀತಿಯಲ್ಲಿ ಪ್ರತಿಕ್ರಿಯೆಯನ್ನು ಕಾಣುತ್ತೇವೆ. ಎಲ್ಲ ಅಧ್ಯಾಯಗಳಲ್ಲಿ ಕಂಡುಕೊಳ್ಳಲಾದ ಮುಖ್ಯ ಸಂಶೋಧನಾ ಫಲಿತಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

* ಕೋರ್ಟ್ ಆಧುನಿಕತೆಯಿಂದ ಬಂದಿದ್ದು, ಅದನ್ನು ಸಂಪೂರ್ಣವಾಗಿ ವಿರೋಧಿಸುವ ಬದಲಾಗಿ ಅದರಿಂದಾಗುವ ಅನಾಹುತಗಳನ್ನು ಹೇಳುವ ಮೂಲಕ, ಪರಂಪರೆಯಿಂದ ಬಂದ ಹಳ್ಳಿಯ ನ್ಯಾಯ ತೀರ್ಮಾನವೇ ಶ್ರೇಷ್ಠ ಎಂಬ ನಿಲುವು ಕತೆಗಳಲ್ಲಿ ವ್ಯಕ್ತವಾಗಿದೆ.

* ಆಧುನಿಕತೆಯಿಂದ ಬಂದ ಶಿಕ್ಷಣ ಉದ್ಯೋಗಕ್ಕೆ ಹಲವು ಅವಕಾಶಗಳನ್ನು ಹೊಸತಲೆಮಾರಿನ ಯುವಕರಿಗೆ ಒದಗಿಸಿದರೆ, ಪರಂಪರೆಯಿಂದ ಬಂದ ಕುಲ ವೃತಿಗಳ ಬಗ್ಗೆ ಹಳೆ ತಲೆಮಾರು ಗೌರವದ ಭಾವನೆ ಹೊಂದಿದ್ದು, ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮುಖಾಮುಖಿಯಾಗಿಸುವ ಹಲವು ಸನ್ನಿವೇಶಗಳು ಸಣ್ಣಕತೆಗಳ ರಚನೆಗೆ ವಸ್ತುವಾಗಿದೆ.

* ಶಿಕ್ಷಣದಿಂದ ಆಧುನಿಕತೆಗೆ ಒಳಗಾದ ಪುರುಷ ಪಾತ್ರಗಳನ್ನು ಸೌಂದರ್ಯವೆಂಬ ಅಸ್ತ್ರದ ಮೂಲಕ ಪುನಃ ಪರಂಪರೆಯನ್ನು ಆ ಪಾತ್ರಗಳೇ ಒಪ್ಪಿಕೊಳ್ಳುವಂತೆ ಮಾಡುವುದು. ಇಂತಹ ಸ್ತ್ರೀಯರಲ್ಲಿ ಆತ್ಮಸ್ಥೈರ್ಯ, ಕುಟುಂಬದ ಜವಾಬ್ದಾರಿ, ಬದುಕುವ ರೀತಿ ಕೆಲಸ ಮಾಡಿರುವುದನ್ನು ಕಾಣಬಹುದು.

* ಉದ್ಯೋಗದ ಅನಿವಾರ್ಯತೆಗಾಗಿ ನಗರ ಸೇರಿದ ವ್ಯಕ್ತಿಗಳು, ನಿವೃತ್ತಿಯಾದ ನಂತರ ಹಳ್ಳಿಗೆ ಬಂದು, ಕೃಷಿಯಲ್ಲಿ ತೊಡಗಿಕೊಳ್ಳುವುದು ಕತೆಗಾರರ ಆಶಯಕ್ಕೆ ಕನ್ನಡಿ ಹಿಡಿದಂತ್ತಿದೆ.

* ಪ್ರಸ್ತುತ ಅಧ್ಯಯನದಲ್ಲಿ ಕತೆಗಾರರು ಪರಂಪರೆಯ ಭಾಗವಾದ ನಂಬಿಕೆ/ಆಚರಣೆಗೆ ಹೆಚ್ಚಿನ ಮಹತ್ವ ಕೊಟ್ಟರು, ಕೆಲವೊಂದು ಕಡೆ ಜನರಲ್ಲಿನ ಮೌಢ್ಯತೆಯನ್ನು, ಅನಕ್ಷರತೆಯನ್ನು ಗುರುತಿಸಲು ಆಧುನಿಕತೆಯ ಮೊರೆ ಹೋಗಿರುವುದನ್ನು ಕತೆಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

* ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕತೆಗಾರರು ಪರಂಪರೆಯ ಆರಾಧಕರಾಗಿರುವುದರಿಂದ ಬದುಕಿಗೆ ಅವಶ್ಯಕತೆ ಇಲ್ಲದ ಸುಳ್ಳುಗಳನ್ನು, ಪರಂಪರೆ ಅನಿವಾರ್ಯ ಸತ್ಯಗಳೆಂಬಂತೆ ನಿರೂಪಿಸಿರುವುದಕ್ಕೆ ಕತೆಗಳಲ್ಲಿ ಉಲ್ಲೇಖಗಳಿವೆ.

* ನವೋದಯದ ಕಥೆಗಾರರು ಪರಂಪರೆಯ ಎಲ್ಲ ಸಂಗತಿಗಳಿಗೆ ಎದುರಾಗಿ ಪ್ರತಿಕ್ರಿಯೆ ನೀಡಲಾಗದಿದ್ದರೂ, ಅನುಭಾವಿಕ ಮತ್ತು ಚರಿತ್ರೆಯ ಘಟನೆಗಳಿಗೆ ಮುಖಾಮುಖಿಯಾಗಿದ್ದಕ್ಕೆ ಸ್ಪಷ್ಟವಾದ ಆಕರಗಳು ಸಿಗುತ್ತವೆ.

* ಆಧುನಿಕತೆಗೆ ಒಳಗಾದ ಪುರುಷ/ಸ್ತ್ರೀ ಪಾತ್ರಗಳು ಪರ ಪುರುಷ/ ಸ್ತ್ರೀ ಯನ್ನು ಒಪ್ಪಿಕೊಳ್ಳುವಲ್ಲಿ/ ಒಪ್ಪಿಸುವಲ್ಲಿ ವಿಫಲವಾಗಿವೆ. ಅಂತಹ ಸನ್ನಿವೇಷಗಳನ್ನು ರೂಪಕಗಳ ಮೂಲಕ ಕತೆಗಾರರು ನಿರೂಪಿಸಿದ್ದಾರೆ.

* ನಗರ ಮತ್ತು ಹಳ್ಳಿಯನ್ನು ಮುಖಾಮುಖಿ ಮಾಡುವ ಅನೇಕ ಸಂದರ್ಭಗಳಿವೆ. ಆದರೆ ಎಲ್ಲಿಯೂ ನಗರದಿಂದಾಗುವ ಉಪಯೋಗಗಳ ಮೇಲೆ ಬೆಳಕು ಚೆಲ್ಲದೆ, ಹಳ್ಳಿಯೇ ಸ್ವರ್ಗ ಎಂಬ ಏಕಮುಖವಾದ ತೀರ್ಮಾನಕ್ಕೆ ಕತೆಗಾರರು ಕಟ್ಟುಬಿದ್ದಿರುವುದು ಕಂಡುಬರುತ್ತದೆ.

* ಆಧುನಿಕತೆಯಿಂದ ಬಂದ ಶಿಕ್ಷಣ ಜೀವನಕ್ಕೆ ಬೇಕೇ ಬೇಕು ಎಂದು ಹೇಳುವ ಕತೆಗಾರರು, ಶಿಕ್ಷಣದಿಂದಾಗುವ ಅನಾನುಕೂಲಗಳನ್ನು ಹೇಳುತ್ತಾರೆಯೇ ವಿನಃ ಶಿಕ್ಷಣದಿಂದಾಗುವ ಅನುಕೂಲಗಳನ್ನು ಹೇಳುವ ಧೈರ್ಯ ಮಾಡಿಲ್ಲ ಎಂಬುದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

* ಮೂರು ಜನ ಕತೆಗಾರರು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಕ್ಕೆ ಒಳಗಾಗಿದ್ದಾರೆ. ಇಂಗ್ಲೀಷ್‌ನ ಸ್ಟ್ರಾಂಡ್ ಪತ್ರಿಕೆಯಲ್ಲಿನ ಸಣ್ಣ ಕತೆಗಳನ್ನು ಓದಿ ಮಾಸ್ತಿಯವರು ಪ್ರಭಾವಿತರಾದರೆ, ಮಾಸ್ತಿಯವರ ಸಣ್ಣಕತೆಗಳನ್ನು ಓದಿ ಆನಂದರು ಪ್ರಭಾವಿತರಾಗಿದ್ದಾರೆ. ಇನ್ನೂ ಗೊರೂರರ ಸಣ್ಣ ಕತೆಗಳ ಮೇಲೆ ಗಾಂಧೀಜಿಯವರ ತತ್ವ ಸಿದ್ಧಾಂತಗಳು ಪ್ರಭಾವ ಬೀರಿವೆ.

* ಆಧುನಿಕತೆಯನ್ನು ಒಪ್ಪಿಕೊಂಡಾಗ ಮಾತ್ರ ಪ್ರೇಮ ವಿವಾಹ, ಅಂತರ್ಜಾತಿ ವಿವಾಹ ಮತ್ತು ವಿಧವಾ ವಿವಾಹಗಳು ಸಾಧ್ಯವಾಗುತ್ತವೆ ಎಂಬುದು ಅಧ್ಯಯನದ ಫಲಿತವಾಗಿದೆ.

* ಮಾಸ್ತಿಯವರ ಕತೆಗಳಲ್ಲಿ ಎಲ್ಲಿಯೂ ಕುಟುಂಬದ ಹೊರಗಡೆ / ವಿವಾಹ ಪೂರ್ವ ಲೈಂಗಿಕತೆಯನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಗೊರೂರರ ಕತೆಗಳಲ್ಲಿ ಬದುಕು ಅನಿವಾರ್ಯ ಆದಂತಹ ಸಂದರ್ಭಗಳಲ್ಲಿ ಅದನ್ನು ಮೀರುವ ಪ್ರಯತ್ನ ಮಾಡಿದ್ದಾರೆ.

* ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ ಮಾಡುವ ಹಲವು ಸನ್ನಿವೇಶಗಳಿದ್ದು, ಆಧುನಿಕತೆ ಎಷ್ಟೇ ಪ್ರಬಲವಾಗಿದ್ದರೂ ಅಲ್ಲಿ ಒಂದು ಪಾತ್ರವನ್ನ ಸಾಯಿಸುವ, ಇಲ್ಲವೇ ಆ ಪಾತ್ರವನ್ನು ಬದಲಾಯಿಸುವ ಮೂಲಕ ಪರಂಪರೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ಹೀಗೆ ಮೇಲೆ ಗಮನಿಸಲಾದ ಅಂಶಗಳು ಅಧ್ಯಯನದ ಫಲಿತಗಳಾಗಿವೆ. ಇಲ್ಲಿನ ಅನೇಕ ಫಲಿತಗಳು ಕನ್ನಡ ಕಥಾ ವಸ್ತುವಿನ ಸಂವೇದನೆಯಲ್ಲಾದ ಬದಲಾವಣೆಯನ್ನು ಗುರುತಿಸುತ್ತವೆ. ಹೊಸ ಜೀವನ ಕ್ರಮದ ಆರಂಭದ ಅನುಭವಗಳು ಎದುರಿಸುತ್ತಿರುವ ಸವಾಲು ಮತ್ತು ಉಪಭೋಗ ಸಂಸ್ಕೃತಿಯ ಆಕರ್ಷಣೆಯ ಮಾದರಿಗಳನ್ನು ಇಲ್ಲಿನ ಚರ್ಚೆಯ ಹಿಂದಿರುವ ಪ್ರಮುಖ ಗುರಿಯಾಗಿದೆ. ಆಧುನಿಕರಣವಾಗುವ ನಿಟ್ಟಿನಲ್ಲಿ ಬದುಕಿನ ಎಲ್ಲ ವಲಯಗಳು ತೊಡಗಿಸಿಕೊಂಡಾಗ, ನಮ್ಮತನದ ಪ್ರಶ್ನೆಗಳಿಗೆ ಉತ್ತರಗಳು ಇಲ್ಲವಾಗುವ ಆತಂಕವಿದೆ. ಈ ವಿಚಾರಗಳು ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿವೆ.

ಸಾಹಿತ್ಯ ಅಧ್ಯಯನಗಳಿಗಿರುವ ಹಲವು ಮಾದರಿಗಳಲ್ಲಿ ಹೆಚ್ಚು ಸ್ವಾಗತಾರ್ಹವಾಗಿ ಸಾಂಸ್ಕೃತಿಕ ಅಧ್ಯಯನವನ್ನು ಸ್ವೀಕರಿಸಲಾಗಿದೆ. ಬದಲಾವಣೆಯ ಸಹಜ ಲಹರಿಗೆ ಸ್ಪಂದಿಸುವ ಸಂಸ್ಕೃತಿಯ ಸಂಗತಿಗಳು, ಕಾಲಕಾಲಕ್ಕೆ ಹೊಸ ಮಾನದಂಡಗಳನ್ನು ಅಧ್ಯಯನದ ನೆಲೆಯಲ್ಲಿ ನಿರೀಕ್ಷಿಸುತ್ತವೆ.

ಅಗತ್ಯವಿರುವ ಬದಲಾವಣೆಗಳನ್ನು ಮಾಡಿಕೊಂಡು, ನವೋದಯ ಕಥೆಗಳನ್ನು ಪರಂಪರೆ ಆಧುನಿಕತೆ ಪರಿಕಲ್ಪನೆಗಳ ಮೂಲಕ ವಿವೇಚನೆ ಮಾಡುವ ಪ್ರಯತ್ನವನ್ನು ಮಾಡಿದ್ದೇನೆ. ಸಾಂಸ್ಕೃತಿಕ ಮೌಲ್ಯಗಳನ್ನು ಮರುವಿವೇಚನೆ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಪರಂಪರೆಯ ಒಳಗೆ ಆಧುನಿಕ ಎನ್ನಿಸುವ ಅನೇಕ ವಿಚಾರಗಳು ಇವೆ. ಇದೇ ಮಾತು ಆಧುನಿಕತೆಯ ವಿಚಾರದಲ್ಲಿ ಹೇಳಲು ಧೈರ್ಯ ಸಾಲದು. ಸಾಂಸ್ಕೃತಿಕ ಅಧ್ಯಯನವನ್ನು ಹಿನ್ನೆಲೆಯಾಗಿ ಇರಿಸಿಕೊಂಡು ಎರಡು ಭಿನ್ನ ಪರಿಕಲ್ಪನೆಗಳನ್ನು ಚರ್ಚಿಸುವಾಗ, ಅನೇಕ ಸವಾಲು ಎದುರಾಗಿವೆ. ಆ ಸವಾಲುಗಳನ್ನು ಮೀರಲು ಸಾಧ್ಯವಾದ ಸಂವಾದ ಬೆಳೆಸುವ ಪ್ರಯತ್ನವನ್ನು ಕತೆಗಳ ಹಿನ್ನೆಲೆಯಲ್ಲಿ ಮಾಡಲಾಗಿದೆ.

ಅನುಬಂಧಗಳು

* ಗ್ರಂಥಋಣ

ಗ್ರಂಥಋಣ

೯.೧. ಪ್ರಾಥಮಿಕ ಆಕರಗಳು

೧. ಶ್ರೀನಿವಾಸ–ಮಾಸ್ತಿ ಸಣ್ಣ ಕತೆಗಳು ಸಮಗ್ರ ಭಾಗ–೧, ೨, ೩.–೨೦೧೧–ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ ಬೆಂಗಳೂರು

೨. ಆನಂದ–ಭವತಿ ಭಿಕ್ಷಾಂದೇಹಿ ಮತ್ತು ಇತರ ಕತೆಗಳು–೧೯೩೦–ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೩. ಆನಂದ–ಮಾಟಗಾತಿ ಮತ್ತು ಇತರೆ ಕತೆಗಳು–೧೯೩೪–ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು.

೪. ಆನಂದ–ಚಂದ್ರಗ್ರಹಣ ಮತ್ತು ಇತರೆ ಕತೆಗಳು–೧೯೩೬–ರುಚಿರ ಪುಸ್ತಕ ನಿಲಯ ಮೈಸೂರು.

೫. ಆನಂದ–ಸ್ವಪ್ನಜೀವಿ ಮತ್ತು ಇತರೆ ಕತೆಗಳು–೧೯೬೫–ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು.

೬. ಆನಂದ–ಬೇವು ಬೆಲ್ಲ–೧೯೮೫–ಕಾವ್ಯಾಲಯ ಪ್ರಕಾಶನ, ಮೈಸೂರು.

೭. ಆನಂದ–ಜೋಯಿಸರ ಚೌಡಿ–೧೯೬೫–ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೮. ಗೊರೂರು ರಾಮಸ್ವಾಮಿ ಅಯ್ಯಂಗಾರ್–ವೈಯ್ಯಾರಿ–೨೦೧೬–ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

೯. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಬೆಸ್ತರ ಕರಿಯ–೧೯೭೦–ಕಾವ್ಯಾಲಯ, ಮೈಸೂರು

೧೦. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಉಸುಬು–೧೯೫೪–ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು.

೧೧. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಗೋಪುರದ ಬಾಗಿಲು–೧೯೬೪–ರಾವ್ ಅಂಡ್ ಸನ್ಸ್, ಬೆಂಗಳೂರು.

೧೨. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಕಮ್ಮಾರ ವೀರಭದ್ರಾಚಾರಿ–೨೦೦೪ ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

೧೩. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಮರೆಯಾದ ಮಾರಮ್ಮ–೨೦೦೪– ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

೧೪. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಶಿವರಾತ್ರಿ–೧೯೮೧–ಕಾವ್ಯಾಲಯ ಪ್ರಕಾಶಕರು, ಮೈಸೂರು.

೧೫. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಕನ್ಯಾಕುಮಾರಿ ಮತ್ತು ಇತರ ಕತೆಗಳು–೨೦೧೬–ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

೧೬. ಗೊರೂರು ರಾಮಸ್ವಾಮಿ ಅಯ್ಯಂಗಾರ್–ಕತೆಗಳು ಮತ್ತು ವಿನೋದ ಚಿತ್ರಗಳು–೧೯೭೨–ಜನಮಿತ್ರ ಪ್ರಕಾಶನ, ಹಾಸನ

೯.೨. ಪರಾಮರ್ಶನ ಗ್ರಂಥಗಳು

* ಅನಂತಮೂರ್ತಿ ಯು ಆರ್, ೨೦೦೯, ಸಮಕ್ಷಮ, ಅಭಿನವ ಪ್ರಕಾಶನ ಬೆಂಗಳೂರು
* ಅನಂತಮೂರ್ತಿ ಯು ಆರ್, ೨೦೦೬, ವಾಲ್ಮೀಕಿಯ ನೆವದಲ್ಲಿ, ಅಭಿನವ ಪ್ರಕಾಶನ ಬೆಂಗಳೂರು
* ಅಶೋಕ ಟಿ ಪಿ, ೨೦೧೪, ಕಥನ ಕಾರಣ, ಮನೋಹರ ಗ್ರಂಥಮಾಲಾ ಧಾರವಾಡ
* ಅಶೋಕ ಟಿ ಪಿ, ೨೦೧೨, ಸಾಹಿತ್ಯ ಸಂಚಾರ ಅಕ್ಷರ ಪ್ರಕಾಶನ ಹೆಗ್ಗೋಡು
* ಅಶೋಕ ಟಿ ಪಿ, ೨೦೧೩, ಕಥನ ಪ್ರೀತಿ ಅಕ್ಷರ ಪ್ರಕಾಶನ ಹೆಗ್ಗೋಡು
* ಅಶೋಕ ಟಿ ಪಿ,೨೦೧೩, ಮತ್ತೆ ಮತ್ತೆ ಮಾಸ್ತಿ ಅಹರ್ನಿಣಿ ಪ್ರಕಾಶನ ಬೆಂಗಳೂರು
* ಆಮೂರ ಜಿ ಎಸ್, ೨೦೧೩, ಯು ಆರ್ ಅನಂತ ಮೂರ್ತಿ ವೈಚಾರಿಕತೆ ಹಾಗೂ ಸಾಹಿತ್ಯ, ಮನೋಹರ ಗ್ರಂಥ ಮಾಲಾ ಧಾರವಾಡ
* ಆಮೂರ ಜಿ ಎಸ್, ೨೦೦೬, ಕನ್ನಡ ಕಥನ ಸಾಹಿತ್ಯ : ಕಾದಂಬರಿ, ಸ್ವಪ್ನಬುಕ್ ಹೌಸ್ ಬೆಂಗಳೂರು
* ಆಮೂರ ಜಿ ಎಸ್, ೨೦೧೨, ಕನ್ನಡ ಕಥನ ಸಾಹಿತ್ಯ : ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು
* ಆಮೂರ ಜಿ ಎಸ್, ೨೦೦೮, ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು
* ಆಮೂರ ಜಿ ಎಸ್, ೨೦೦೪, ಸ್ವತಂತ್ರೋತ್ತರ ಕನ್ನಡ ಕಥಾಲೋಕ, ಅಂಕಿತ ಪುಸ್ತಕ ಬೆಂಗಳೂರು
* ಆಮೂರ ಜಿ ಎಸ್, ೨೦೦೮, ಆಧುನಿಕ ಕನ್ನಡ ವಿಮರ್ಶೆ, ಸ್ವಪ್ನಬುಕ್ ಹೌಸ್ ಬೆಂಗಳೂರು
* ಆಮೂರ ಜಿ ಎಸ್, ೨೦೧೦, ನಿರಂತರ, ಸ್ವಪ್ನ ಬುಕ್ ಹೌಸ್ ಬೆಂಗಳೂರು
* ಆನಂದ, ೧೯೫೩, ಸ್ವಪ್ನ ಜೀವಿ ಮತ್ತು ಇತರ ಕಥೆಗಳು, ರುಚಿರ ಪುಸ್ತಕ ನಿಲಯ ಬೆಂಗಳೂರು
* ಆನಂದ, ೧೯೫೨, ಚಂದ್ರ ಗ್ರಹಣ ಮತ್ತು ಇತರ ಕಥೆಗಳು, ರುಚಿರ ಪುಸ್ತಕ ನಿಲಯ ಬೆಂಗಳೂರು
* ಕಮಲಾ ನರಸಿಂಹ, ೨೦೦೫, ಹೇಮಾವತಿಯ ಚೇತನ, ಸುಮುಖ ಪ್ರಕಾಶನ ಬೆಂಗಳೂರು
* ಕರೀಗೌಡ ಬೀಚನಹಳ್ಳಿ, ೨೦೧೦, ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು
* ಕರೀಗೌಡ ಬೀಚನಹಳ್ಳಿ, ೨೦೧೭, ಕನ್ನಡ ಸಾಹಿತ್ಯ ಸಂಸ್ಕೃತಿ ಕಥನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
* ಕರೀಗೌಡ ಬೀಚನಹಳ್ಳಿ, ೨೦೦೭, ವೃಷ್ಟಿ ಸಮಷ್ಟಿ, ಅಜಂತ ಪ್ರಕಾಶನ ಬೆಂಗಳೂರು
* ಕರೀಗೌಡ ಬೀಚನಹಳ್ಳಿ, ೨೦೦೭ ಸಾಹಿತ್ಯ ವಿಸ್ತಾರ, ಅಜಂತ ಪ್ರಕಾಶನ ಬೆಂಗಳೂರು
* ಕರೀಗೌಡ ಬೀಚನಹಳ್ಳಿ, ೨೦೧೧, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
* ಕಾಳೇಗೌಡ ನಾಗವಾರ, ೨೦೦೫, ಜೀವನ ಪ್ರೇಮ, ಮೈಸೂರು ವಿಶ್ವವಿದ್ಯಾಲಯ ಮೈಸೂರು

* ಕೀರ್ತಿನಾತ ಕುರ್ತಕೋಟಿ, ೨೦೦೨, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಮನೋಹರ ಗ್ರಂಥ ಮಾಲಾ ಧಾರವಾಡ
* ಕೀರ್ತಿನಾಥ ಕುರ್ತಕೋಟಿ, ೧೯೯೬, ವಿಮರ್ಶೆಯ ವಿನಯ ಕಾದಂಬರಿ, ಮನೋಹರ ಗ್ರಂಥಮಾಲಾ ಧಾರವಾಡ
* ಕೀರ್ತಿನಾಥ ಕುರ್ತಕೋಟಿ, ೨೦೧೫, ನೂರು ಮರ ನೂರು ಸ್ವರ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ
* ಕೃಷ್ಣಮೂರ್ತಿ ಡಿ ಎನ್, ೨೦೦೧೬, ಕನ್ನಡ ಸಾಹಿತ್ಯದ ಸೀಮಾಪುರುಷ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಚೇತನ ಬುಕ್ ಹೌಸ್ ಮೈಸೂರು
* ಕೇಶವ ಶರ್ಮ ಕೆ, ೨೦೦೦, ಸ್ವಾತಂತ್ರ ಪೂರ್ವ ಸಣ್ಣ ಕಥೆಗಳು, ಮಂಗಳ ಗಂಗೋತ್ರಿ ದಕ್ಷಿಣ ಕನ್ನಡ
* ಕೋದಂಡ ರಾಮ ಎನ್ ಕೆ, ೨೦೦೮, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ರೂಪ ಪ್ರಕಾಶನ ಮೈಸೂರು
* ಗಿರಡ್ಡಿ ಗೋವಿಂದರಾಜ, ೨೦೦೭, ಪ್ರಮಾಣು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
* ಗಿರಡ್ಡಿ ಗೋವಿಂದ ರಾಜ, ೨೦೦೯, ಕಲ್ಪಿತ ವಾಸ್ತವ : ಕನ್ನಡ ಸಣ್ಣಕತೆ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ
* ಗಿರಡ್ಡಿ ಗೋವಿಂದ ರಾಜ, ೧೯೮೨, ಸಣ್ಣ ಕಥೆಗಳ ಸಂಕಲನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
* ಗಿರಡ್ಡಿ ಗೋವಿಂದ ರಾಜ, ೨೦೧೧, ಸಾಹಿತ್ಯ ಮತ್ತು ಪರಂಪರೆ, ಹೇಮಂತ ಸಾಹಿತ್ಯ ಬೆಂಗಳೂರು
* ಗೀತಾ ನಾವಲ್, ೨೦೧೧, ನವೋದಯ ಸಾಹಿತ್ಯ, ಚೇತನ ಬುಕ್ ಹೌಸ್ ಮೈಸೂರು
* ಗುಂಡಣ್ಣ ಕಲಬುರ್ಗಿ, ೨೦೦೦, ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಸೌಜನ್ಯ ಪ್ರಕಾಶನ ಮೂಡಲಗಿ
* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೫, ಗರುಡಗಂಬದ ದಾಸಯ್ಯ, ಐ ಬಿ ಎಚ್ ಪ್ರಕಾಶನ ಬೆಂಗಳೂರು
* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೬, ವೈಯ್ಯಾರಿ, ಐ ಬಿ ಎಚ್ ಪ್ರಕಾಶನ ಬೆಂಗಳೂರು
* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೬, ಹೇಮಾವತಿ, ಐ ಬಿ ಎಚ್ ಪ್ರಕಾಶನ ಬೆಂಗಳೂರು
* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೧, ಹಳ್ಳಿಯ ಚಿತ್ರಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
* ಗೊರೂರು ಅನಂತ ರಾಜು, ೨೦೧೭, ಗ್ರಾಮೀಣ ಸೊಗಡಿನ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಚೇತನ ಬುಕ್ ಹೌಸ್ ಮೈಸೂರು
* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೦೪, ವತ್ಸಲೆ, ಐಬಿಎಚ್ ಪ್ರಕಾಶನ ಬೆಂಗಳೂರು

* ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೬, ಕನ್ಯಾಕುಮಾರಿ ಮತ್ತು ಇತರ ಕಥೆಗಳು, ಐಬಿಎಚ್ ಪ್ರಕಾಶನ, ಬೆಂಗಳೂರು
* ಜನಾರ್ಧನ್ ಭಟ್ ಜಿ, ೨೦೦೨, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ತಿಪ್ಪೇಸ್ವಾಮಿ ಜಿ ಆರ್, ೨೦೧೦, ಆಧುನಿಕ ಮತ್ತು ಬಂಡಾಯ ಕಾದಂಬರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
* ದಂಡಪ್ಪ ಎಚ್, ಸುಮಿತ್ರಾಬಾಯಿ ಬಿ ಎನ್, ೨೦೦೬, ಸುವರ್ಣ ಸಾಹಿತ್ಯ ವಿಮರ್ಶೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
* ದಿವಾಕರ್ ಎಸ್, ೧೯೯೭, ಶತಮಾನದ ಸಣ್ಣ ಕತೆಗಳು, ಪ್ರಿಸಂ ಬುಕ್ಸ್, ಬೆಂಗಳೂರು
* ನಾಗರತ್ನ ಕುಮಾರಿ ಬಿ ಎಸ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ನಾಗರಾಜ ಡಿ ಆರ್, ೧೯೮೭, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು
* ನಾಗಭೂಷಣ ಡಿ ಎಸ್, ೨೦೧೨, ಕುವೆಂಪು ಒಂದು ಪುನರನ್ವೇಷಣೆ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ
* ನಾಗರಾಜ ಡಿ ಆರ್, ೨೦೦೯, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು
* ನಾಗರಾಜ ಡಿ ಆರ್, ೧೯೯೬, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು
* ನಾಯಕ ಜಿ ಹೆಚ್, ೨೦೦೧ ಕನ್ನಡ ಸಣ್ಣಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ಹೊಸದೆಹಲಿ
* ಪಂಡಿತಾರಾಧ್ಯ, ೨೦೦೧, ಸಾಹಿತ್ಯ ವಿಮರ್ಶೆ–೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
* ಪ್ರಭುಶಂಕರ, ೧೯೭೯, ಸಾಹಿತ್ಯ ಮತ್ತು ಆಧುನಿಕತೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
* ಪ್ರಸನ್ನ, ೨೦೦೯, ಯಂತ್ರಗಳನ್ನು ಕಳಚೋಣ ಬನ್ನಿ, ಒಂಟಿದನಿ ಪ್ರಕಾಶನ ಹೆಗ್ಗೋಡು
* ಪ್ರಸಾದ ಸ್ವಾಮಿ ಎಸ್, ೨೦೧೧, ಸಣ್ಣ ಕತೆ–ಸ್ವರೂಪ–ವಿನ್ಯಾಸ, ಕಣ್ವ ಪಬ್ಲಿಕೇಷನ್ಸ್ ಪ್ರೈವೇಟ್ ಲಿ, ಬೆಂಗಳೂರು
* ಬರಗೂರು ರಾಮಚಂದ್ರಪ್ಪ, ೨೦೧೧, ಪರಂಪರೆಯೊಂದಿಗೆ ಪಿಸುಮಾತು, ಅಂಕಿತ ಪುಸ್ತಕ, ಬೆಂಗಳೂರು
* ಬುದ್ದಣ್ಣ ಹಿಂಗಮಿರೆ, ೧೯೮೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ಭಟ್ಟ ಜಿ ಎಸ್, ೨೦೦೭, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು
* ಮಮತ ಹೆಚ್ ಕೆ, ೨೦೧೬, ಮಾಸ್ತಿ ಕಥನ, ಮೇಘ ಪಬ್ಲಿಕೇಷನ್ಸ್, ಬೆಂಗಳೂರು
* ಮಾಪಿನಕೆರೆ ರಂಗನಾಥ, ೨೦೧೦, ಮಾಸ್ತಿ ಸಮಗ್ರ ಸಾಹಿತ್ಯಾವಲೋಕನ ಸಂ.೩, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೨೦೧೧, ಮಾಸ್ತಿ ಸಣ್ಣಕತೆಗಳೂ ಸಮಗ್ರ ಭಾಗ-೧,೨,೩, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್ ಮಾಸ್ತಿ ಮನೆ, ೪೯, ಬೆಂಗಳೂರು
* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೯೦, ವಿಚಾರ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು
* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೯೬, ಸಾಹಿತ್ಯ ಒಂದು ಉಪನ್ಯಾಸ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು
* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೯೦, ಸಾಹಿತ್ಯ ಪ್ರೇರಣೆ, ಮಾಸ್ತಿ ವೆಂಟೇಶ ಅಯ್ಯಂಗಾರ್ ಜೀವನ ಕಾರ್ಯಾಲು ಟ್ರಸ್ಟ್, ಬೆಂಗಳೂರು
* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೬೭, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮಾಸ್ತಿ ವೆಂಕಟೇಸ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು
* ಮಾಸ್ತಿ ವೆಂಕಟೇಶ ಅಯ್ಯಂಗಾರ್, ೨೦೦೮, ಭಾವ ೧ ೨ ೩, ಮಾಸ್ತಿ ಮನೆ, ಬೆಂಗಳೂರು
* ಮುನಿಶಾಮಪ್ಪ ಎ, ೨೦೦೯, ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಕಾಲ ಪ್ರಕಾಶನ, ಬೆಂಗಳೂರು
* ಮೂರ್ತಿರಾವ್ ಎ ನ್, ೧೯೯೯, ಶ್ರೀ ಮಾಸ್ತಿಯವರ ಕಥೆಗಳು, ಕಾವ್ಯಲಯ ಪ್ರಕಾಶಕರು ಜಯನಗರ, ಮೈಸೂರು
* ರಹಮತ್ ತರೀಕೆರೆ, ೧೯೯೩, ಸಾಹಿತ್ಯ ವಿಮರ್ಶೆ-೧೯೯೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ರಹಮತ್ ತರೀಕೆರೆ, ೨೦೧೩, ಪ್ರತಿಸಂಸ್ಕೃತಿ, ಅಭಿನವ ಪ್ರಕಾಶನ, ಬೆಂಗಳೂರು
* ರಾಮಚಂದ್ರನ್ ಸಿ ಎನ್, ೨೦೦೨, ವಸಾಹತ್ತೋತ್ತರ ಚಿಂತನೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ರಾಮಚಂದ್ರನ್ ಸಿ ಎನ್, ೨೦೦೨, ಪರಂಪರೆ-ಪ್ರತಿರೋಧ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ
* ರಾಘವೇಂದ್ರ ರಾವ್ ಎಚ್ ಎಸ್, ೧೯೮೫ ಸಾಹಿತ್ಯ ವಿಮರ್ಶೆ-೧೯೮೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ರಾಘವೇಂದ್ರ ರಾವ್ ಎಚ್ ಎಸ್, ೨೦೦೮, ನಮಸ್ಕಾರ, ಅಭಿನವ ಪ್ರಕಾಶನ, ಬೆಂಗಳೂರು
* ರಾಘವೇಂದ್ರ ರಾವ್ ಎಚ್ ಎಸ್, ೨೦೦೫, ಸಾಹಿತ್ಯ ಸಂವಾದ, ನವಕರ್ನಾಟಕ ಪ್ರಕಾಶನ, ಬೆಂಗಳೂರು
* ರಾಘವೇಂದ್ರ ರಾವ್ ಹೆಚ್ ಎಸ್, ೨೦೧೩, ರಂ. ಶ್ರೀ. ಮುಗಳಿ ಸಮಗ್ರ ಸಾಹಿತ್ಯ-ಸಂಪುಟ-೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
* ಲಕ್ಕಪ್ಪಗೌಡ ಎಚ್ ಜೆ, ೨೦೧೩, ಸಾಹಿತ್ಯ ಬಹುಮುಖಿ ಚಿಂತನೆ, ಸಿ ಪಿ ಜಿ ಪಬ್ಲಿಕೇಷನ್ಸ್, ಬೆಂಗಳೂರು
* ಲಕ್ಕಪ್ಪಗೌಡ ಹೆಚ್ ಜೆ, ೨೦೦೭, ಸಾಹಿತ್ಯ ಶೋಧನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

* ಲಕ್ಷ್ಮೀನಾರಾಯಣ, ೨೦೦೭, ಮಾಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ವಸಂತ ಕುಷ್ಟಗಿ, ೨೦೦೨, ಪರಂಪರೆ ಮತ್ತು ಪ್ರತಿಭೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
* ವಿದ್ಯಾಶಂಕರ ಎಸ್, ಹೆಗಡೆ ಜಿ ಎಂ, ೨೦೦೫, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
* ವಿಠಲರಾವ್ ಗಾಯಕ್ವಾಡ್, ೨೦೦೩, ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಚೇತನ ಬುಕ್ ಹೌಸ್, ಮೈಸೂರು
* ವೆಂಕಟಯ್ಯ ಸಿ ಜಿ, ೨೦೦೨, ಗೊರೂರರ ಜಾನಪದ ಸಾಧನೆ ಮತ್ತು ಸಿದ್ಧಿ, ಜ್ಞಾನೋದಯ ಪ್ರಕಾಶನ, ಬೆಂಗಳೂರು
* ವೆಂಕಟಾಚಲ ಶಾಸ್ತ್ರೀ ಟಿ ವಿ, ೧೯೯೨, ವಿಮರ್ಶೆಯ ಮಾರ್ಗ, ಕನ್ನಡ ಅಧ್ಯಯನ ಸಂಸ್ಥೆ- ಮೈಸೂರು ವಿಶ್ವವಿದ್ಯಾಲಯ, ಮೈಸೂರು
* ಶಿವರಾಮ ಪಡಿಕ್ಕಲ್, ೨೦೦೧, ನಾಡು-ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ಮಂಗಳೂರು
* ಶ್ರೀಕಂಠ ಕೂಡಿಗೆ, ೨೦೧೪, ಕುವೆಂಪು ಕಥಾ ಕಥನ, ಸಿವಿಜಿ ಇಂಡಿಯಾ, ಬೆಂಗಳೂರು
* ಶ್ರೀನಿವಾಸ, ೧೯೯೦, ಚಿಂತನ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, ಬೆಂಗಳೂರು
* ಶಂಕರನಾರಾಯಣ, ತೀ. ನಂ, ಶ್ರೀಕಂಠ ಕೂಡಿಗೆ, ಸಣ್ಣರಾಮ, ರಂಗರಾಜ ವನದುರ್ಗ, ೨೦೧೦, ಆಧುನಿಕತೆ ಮತ್ತು ಕನ್ನಡ ಸಾಹಿತ್ಯ ಪ್ರಕಾರಗಳು, ಪ್ರಸಾರಾಂಗ ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಖರಘಟ್ಟ
* ಶಾಂತವೀರಯ್ಯ ಹೀ ಚಿ, ೨೦೦೯, ಕನ್ನಡ ಸಾಹಿತ್ಯ ಪರಿಚಯ ಸಂಪುಟ-೫, ಚೇತನ ಬುಕ್ಸ್, ಬೆಂಗಳೂರು
* ಶೇಷಗಿರಿ ರಾವ್ ಎಲ್ ಎಸ್, ೨೦೧೦, ಸಮಗ್ರ ವಿಮರ್ಶಾ ಸಾಹಿತ್ಯ-ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
* ಸುಜನಾ,೨೦೧೧, ಪರಂಪರೆ ಮತ್ತು ಕುವೆಂಪು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
* ಸೋಮೇಶ್ವರ ನಾ, ೨೦೧೫, ಕನ್ನಡ ಆಸ್ತಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ ಲಿಮಿಟಿಡ್, ಬೆಂಗಳೂರು
* ಹಂಪನಹಳ್ಳಿ ತಿಮ್ಮೇಗೌಡ, ೨೦೧೭, ಗೊರೂರರ ಸಾಹಿತ್ಯ : ಮರು ಓದು, ಮೇಘ ಪಬ್ಲಕೇಷನ್ಸ್, ಬೆಂಗಳೂರು
* ಹಂಪ ನಾಗರಾಜಯ್ಯ, ೧೯೮೫, ಆನಂದರ ಆಯ್ದ ಕಥೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
* ಹೊನ್ನಯ್ಯ ಸಿ ಬಿ, ೨೦೦೪, ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ, ಕೆ ಎಸ್ ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾ ಮುರದೊಡ್ಡಿ, ಬೆಂಗಳೂರು

ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳು

* ಉಮೇಶ ಜಿ, ೨೦೦೨, ನವೋದಯ ಕಥಾ ಸಾಹಿತ್ಯದಲ್ಲಿ ಗ್ರಾಮ ಸಮಾಜ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಕವಿತಾರಾಣಿ ಎಂ.ಎಸ್, ಯು.ಆರ್. ಅನಂತಮೂರ್ತಿಯವರ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಗುರುಸ್ವಾಮಿ, ೨೦೧೬, ನವೋದಯ ವಿಮರ್ಶೆ:ಪರಂಪರೆಯ ವಿಭಿನ್ನ ಆಯಾಮಗಳು ಕನ್ನಡ ವಿಶ್ವವಿದ್ಯಾಲಯ ಹಂಪಿ
* ನಾಗರಾಜಪ್ಪ ಕೆ.ವಿ, ೨೦೦೬, ಗೂರೂರರ ಸಾಹಿತ್ಯದಲ್ಲಿ ಗ್ರಾಮ ಸಮಾಜ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ನಾಗವೇಣಿ ಬಿ.ವಿ, ೨೦೦೭, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮತಾಂತರ ಪ್ರಕ್ರಿಯೆ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಭೋಗರಾಜು ಪಿ, ೨೦೦೨, ಕುವೆಂಪು ಕೃತಿಗಳಲ್ಲಿ ಪರಂಪರೆ ಮತ್ತು ಆಧುನಿಕತೆ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಮ್ಯಾಗೇರಿ ಐ.ಜೆ, ೨೦೦೧, ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಮುಕ್ತಿಯಾರ್ ಬಿ, ೨೦೧೩, ಕನ್ನಡ ತೆಲುಗು ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆಯ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ರೇಖಾ ಈ.ಜಿ, ೨೦೦೮, ಶಾಂತಿನಾಥ ದೇಸಾಯಿಯವರ ಸಾಹಿತ್ಯದಲ್ಲಿ ಆಧುನಿಕ ಮಹಿಳಾ ಪ್ರಜ್ಞೆ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಶಿವಾರೆಡ್ಡಿ ಕೆ.ಸಿ, ೧೯೯೯ ವಸಾಹತುಶಾಹಿ ಸಂಸ್ಕೃತಿಗೆ ಆಧುನಿಕ ಕನ್ನಡ ಕಾವ್ಯ ತೋರಿದ ಪ್ರತಿಕ್ರಿಯೆ ಹಾಗೂ ಸಂಘರ್ಷದ ಸ್ವರೂಪ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಶ್ರೀಮತಿ ಸೀತಾಲಕ್ಷ್ಮೀ ಕೆ.ವಿ, ೨೦೦೪, ಸ್ವಾತಂತ್ರ್ಯೋತ್ತರ ಸಣ್ಣ ಕತೆಗಳಲ್ಲಿ ಗ್ರಾಮೀಣ ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಸಂತೋಷ ಕಾಳನ್ನವರ, ೨೦೧೪, ಮುಳಿಯಪ್ಪನ ಪರಂಪರೆ ಮತ್ತು ಸಂಪ್ರದಾಯ, ಕನ್ನಡ ವಿಶ್ವವಿದ್ಯಾಲಯ ಹಂಪಿ

ಅಪ್ರಕಟಿತ ಎಂ.ಫಿಲ್ ನಿಬಂಧಗಳು

* ಅರ್ಚನ ವೈ.ಕೆ, ೨೦೦೯, ಮಾಸ್ತಿಯವರ ಕತೆಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಅಶೋಕ ಕುಮಾರ ರಂಜೇರೆ, ೧೯೯೪, ಮಾಸ್ತಿಯವರ ಸಣ್ಣ ಕತೆಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಅಶೋಕ ಹೆಚ್.ಕೆ, ೨೦೦೫, ಶಂಕರಮೊಕಾಶಿ ಪುಣೇಕರ ಕಾದಂಬರಿಗಳಲ್ಲಿ ಸಂಪ್ರದಾಯ ಮತ್ತು ಆಧುನಿಕತೆ, ಕನ್ನಡ ವಿಶ್ವವಿದ್ಯಾಲಯ ಹಂಪಿ

* ಜ್ಯೋತಿ.ಕೆ.ಎಸ್, ೨೦೦೭, ಗೊರೂರ ಪ್ರಬಂಧಗಳ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಬಾಬುರೆಡ್ಡಿ ಸಿ, ೨೦೦೭, ಮಾಸ್ತಿಯವರ ಕತೆಗಳಲ್ಲಿ ಸ್ತ್ರೀ ಪಾತ್ರಗಳ ಅನಾವರಣ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಮಮತ ಎಲ್.ಆಲಮೇಲ, ೨೦೦೮, ಮಾಸ್ತಿಯವರ ಕತೆಗಳಲ್ಲಿ ಭಾಷೆ ಮತ್ತು ಸಾಮಾಜಿಕ ಚಿತ್ರಣ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಯೋಗಿಂದ್ರ ವಿ, ೨೦೦೮, ಮಾಸ್ತಿಯವರ ಕತೆಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ರಾಮ್ ಕುಮಾರ್ ಎನ್, ೨೦೦೭, ಕೈಲಾಸಂ ನಾಟಕಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ರಾಮ್ ಪ್ರಸಾದ್, ೨೦೧೦, ಕುವೆಂಪು ಕಾದಂಬರಿಗಳಲ್ಲಿ ಆಧುನಿಕತೆ, ಕನ್ನಡ ವಿಶ್ವವಿದ್ಯಾಲಯ ಹಂಪಿ
* ಶ್ರೀನಿವಾಸ ಮೂರ್ತಿ ವಿ, ೨೦೦೮, ಮಾಸ್ತಿ–ಗೊರೂರರ ಕತೆಗಳ ಒಂದು ತೌಲನಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ ಹಂಪಿ



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ